

ಗಾಂಧಿ

ಮುಗಿಯದ ಅಧ್ಯಾಯ

ಡಾ. ರಾಜಶೇಖರ ಮಠಪತಿ (ರಾಗಂ)





ಕಣ್ವ ಪ್ರಕಾಶನ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಗಾಂಧಿ: ಅಂತಿಮ ದಿನಗಳು ಕೃತಿಗೆ ಲೇಖಕರಾದ ಡಾ.ರಾಜಶೇಖರ ಮಠಪತಿ ಅವರಿಗೆ ಜಯಶ್ರೀ ಟ್ರಸ್ಟ್ ದತ್ತಿ ಪುರಸ್ಕಾರ ಪ್ರಶಸ್ತಿ ನೀಡುತ್ತಿರುವ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್ ರವರು





ಹೊ.ಶ್ರೀನಿವಾಸಯ್ಯ, ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ(ರಿ), ಬೆಂಗಳೂರು, ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಮತ್ತು ಡಾ.ರಾಜಶೇಖರ ಮಠಪತಿ, ಲೇಖಕರು


ಅಧ್ಯಕ್ಷರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಇವರಿಗೆ

ಡಾ.ರಾಜಶೇಖರ ಮಠಪತಿ (ರಾಗಂ)

ಗಾಂಧಿ : ಮುಗಿಯದ ಅಧ್ಯಾಯ

my Life is my message

M. K. Gandhi



ಕಣ್ವ ಪ್ರಕಾಶನ
ಬೆಂಗಳೂರು

GANDHI : MUGIYADA ADHYAYA

By
Dr. Rajashekhar Mathapati (Ragam)
Chatra Beedi
Behind Sringeri Matha
Post-Belur, Tq-Belur
Dist-Hassan-573 115
M: 9242121461
e-mail: dr.rajashekharayya@gmail.com
rgmathapati.blogspot.com

Published by
Kanva Prakashana
"Kaala Kanasu", No.894
1 st Main, Nisarga Badavane
Chandra Layout
Bengaluru - 560 072
Ph : 080 - 23426778
E-mail : giriraju@kanvaprakashana.com
web : www.kanvaprakashana.com

Publisher: M.R.Giriraju
M: 98450 52481

First Impression : 2013
Price : **₹ 185/-**
Pages : XXIV+264=288
ISBN : 978-93-81065-53-2

Paper Used : 80 GSM White Maplitho
Book Size : Demy 1/8

Printed At
Annapoorna Printers and Publishers
No. 132, III Main, 6th Cross
II Phase, Manjunatha Nagar
Bangalore - 560010

‘ಅಜಾದಿ’ ಖ್ಯಾತಿಯ
ಅಪರೂಪದ ಆತ್ಮೀಯ

ಚಮನ್ ನಹಲ್‌ರಿಗೆ

ಗಾಂಧಿ : ಸಾಕ್ಷಿ ಪ್ರಜ್ಞೆ

ಡಾ. ರಾಜಶೇಖರ ಮಠಪತಿಯವರು ಕನ್ನಡದ ಇತ್ತೀಚಿನ ಶಕ್ತಿಶಾಲಿ ಬರಹಗಾರರು. ಕೆ.ಎ.ಅಬ್ಬಾಸ್, ಓಶೋ, ಗಾಂಧಿ, ಭಾಷಾಂತರ, ಯಾವುದೇ ವ್ಯಕ್ತಿ ಮತ್ತು ವಿಚಾರವನ್ನೇ ಎತ್ತಿಕೊಳ್ಳಲಿ; ಅವರ ಬರಹದ ರೀತಿಯೇ ಭಿನ್ನವಾಗಿರುತ್ತದೆ. ಅವರು ಮಂಡಿಸುವ ವಾದಗಳು, ಎತ್ತುವ ಪ್ರಶ್ನೆಗಳು, ಹೆಕ್ಕಿ ತೆಗೆಯುವ ಸಂಗತಿಗಳು ಹೀಗೂ ಉಂಟೆ? ಎಂದು ಅಚ್ಚರಿಪಡುವಂತೆ ಮಾಡುತ್ತವೆ.

ಮಠಪತಿಯವರ ವಿಚಾರ ಸ್ಪಷ್ಟತೆ ಮತ್ತು ನೇರ ಭಾಷೆಯಲ್ಲಿ ಒಂದು ಸೊಗಸುಗಾರಿಕೆ, ದಿಟ್ಟತನ ಮತ್ತು ಕಾವ್ಯಮಯತೆ ಇದೆ. ರಾಗಂ ಅವರ 'ಗಾಂಧಿ: ಅಂತಿಮ ದಿನಗಳು' ಹಾಗೂ ಪ್ರಸ್ತುತ 'ಗಾಂಧಿ: ಮುಗಿಯದ ಅಧ್ಯಾಯ' ಕೃತಿಗಳು 1947ರ ಆಸುಪಾಸಿನ ದಿನಗಳ ಭಾರತದ ಸಾಮಾಜಿಕ ಮತ್ತು ರಾಜಕೀಯ ದುರ್ದೆಸೆಯನ್ನು ಕಟ್ಟಿಕೊಡುತ್ತವೆ. ದೇಶ ವಿಭಜನೆಯಿಂದಾದ ಅನಾಹುತ, ಕೋಮುಗಲಭೆ, ಪರಿಣಾಮ ಗಾಂಧೀಜಿಯಲ್ಲಾಗುವ ತಳಮಳ– ಹೀಗೆ ಹಲವು ನಮಗೆ ಗೊತ್ತಿರದ ಸಂಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತವೆ. ಯಾವುದೇ ಹೋರಾಟ ಯಶಸ್ವಿಗೊಳ್ಳುವ ಕಾಲ ಬಂದಾಗ ಆ ಕನಸು ಕಂಡವರಿಗೆ ನಿಜವಾಗಿಯೂ ಸಂತೋಷವಾಗುತ್ತದೆ, ಸಾರ್ಥಕ ಭಾವ ಮೂಡುತ್ತದೆ. ಆದರೆ ಇಂತಹ ಭಾಗ್ಯ ಇಲ್ಲಿ ಗಾಂಧಿಗಿಲ್ಲ. ಕಾರಣ ವಿಭಜನೆಯ ಆ ದಿನಗಳು ನೆನೆಸಿಕೊಳ್ಳಬಾರದ ಘೋರ ದಿನಗಳಾಗಿ, ಯಾತನೆಯ ದಿನಗಳಾಗಿ ಮಾರ್ಪಟ್ಟಿದ್ದವು. ಭಾರತದ ಸಾಕ್ಷಿಪ್ರಜ್ಞೆಯಂತಿದ್ದ ಗಾಂಧೀಜಿಯ ಮನಕಲಕುವ, ಅವರ ವ್ಯಕ್ತಿತ್ವ, ಚಿಂತನೆ ಮತ್ತು ನಂಬಿಕೆಗಳನ್ನು ಅಲುಗಾಡಿಸಿದ ದುರಂತದ ದಿನಗಳಾಗಿದ್ದವು.

ಡಾ.ಮಠಪತಿಯವರು ನಿರ್ಭಾವುಕರಾಗಿ ಗಾಂಧಿಯನ್ನು ಕಟು ವಿಮರ್ಶೆಗೆ ಒಳಪಡಿಸುತ್ತಲೇ ಮನುಷ್ಯನಾಗಿ ಆತನ ಮಹತ್ವವನ್ನು ಇಲ್ಲಿ ಎತ್ತಿ ತೋರಿಸಿದ್ದಾರೆ. ಇಡೀ ಪುಸ್ತಕ ಓದಿ ಮುಗಿಸಿದಾಗ ಗಾಂಧಿಯ ಬಗ್ಗೆ ಸಿಟ್ಟು ಬರುತ್ತದೆ, ಸಹಾನುಭೂತಿಯೂ ಉಂಟಾಗುತ್ತದೆ. ನಿಜವಾಗಿಯೂ ಇದು ಒಂದು ಅದ್ಭುತ ಪ್ರಯೋಗ.

ಆ ದಿನಗಳಲ್ಲಿ ಕೋಮು ಸೌಹಾರ್ದದ ವಾತಾವರಣವನ್ನು ದೇಶದಲ್ಲಿ ಸ್ಥಾಪಿಸುವುದೇ ಸರ್ಕಾರಕ್ಕೆ ದೊಡ್ಡ ಸವಾಲಿನ ವಿಷಯವಾಗಿತ್ತು. ಜೀವನ

ಪರ್ಯಂತ ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದಿಸಿದ ಗಾಂಧಿ ಸ್ವಾತಂತ್ರ್ಯ ಸಿಕ್ಕ ಮರುಕ್ಷಣ ಜನರಲ್ಲಿ ಆಗಬಹುದಾದ ನೈತಿಕ ಬದಲಾವಣೆಯನ್ನು ಊಹಿಸಿರಲಿಲ್ಲ. ಹೀಗಾಗಿ ಆ ಸಂದರ್ಭಗಳಲ್ಲಿ ಗಾಂಧಿ ಸವಾಲನ್ನು ಎದುರಿಸಿದ ರೀತಿ, ತಾಳಿದ ನಿಲುವು, ಹಮ್ಮಿಕೊಂಡ ಕಾರ್ಯಕ್ರಮದ ಕುರಿತು ರಾಗಂ ಅತ್ಯಂತ ಹೃದಯಸ್ಪರ್ಶಿಯಾಗಿ ಬರೆಯುತ್ತಲೇ ಗಾಂಧಿಯ ತಪ್ಪು ನಿರ್ಧಾರಗಳನ್ನು ಆಧಾರ ಸಮೇತ ಚರ್ಚಿಸಿದ್ದಾರೆ. ಕೋಮು ಗಲಭೆಯ ಶಮನಕ್ಕೆ ಗಾಂಧಿ ಬಳಸುವ ಉಪವಾಸ ಸತ್ಯಾಗ್ರಹ ಎಂಬ ಅಸ್ತ್ರ ನಿಸ್ಸಂದೇಹವಾಗಿಯೂ ಪರಿಣಾಮಕಾರಿಯಾಗಿತ್ತು. ಇದು ಎಲ್ಲ ಕಾಲಕ್ಕೂ, ಎಲ್ಲ ಕಡೆಯೂ ಬಳಸಲೇಬೇಕಾದ ಅಸ್ತ್ರವಾಗಿದ್ದರೂ ಆ ಸಂದರ್ಭದ ಭಾರತದ ಸಮಸ್ಯೆಗಳಿಗೆ ಅದೇಕೊ ಸರಿಹೊಂದಲಿಲ್ಲ ಎನ್ನುವುದು ಗಾಂಧೀಜಿಗೆ ತಿಳಿಯದೇ ಹೋಯಿತೆ? ಅವರ ಆಧ್ಯಾತ್ಮಿಕ ಆಲೋಚನೆಗಳು, ರಾಜಕೀಯ ಕ್ರಿಯಾಶೀಲತೆಯನ್ನು ಮಂದಗೊಳಿಸಿದವೇ? ಒಂದು ವೇಳೆ ಸತ್ಯಾಗ್ರಹವನ್ನೇ ಅವರು ಅಂತಿಮವೆಂದು ತಿಳಿದಿದ್ದರೆ ಸ್ವಾತಂತ್ರ್ಯದ ಸಂದರ್ಭಗಳಲ್ಲಿಯ ಹಾಗೆ ಕೋಮು ಸೌಹಾರ್ದಕ್ಕಾಗಿ, ಸಾಮೂಹಿಕ ಸತ್ಯಾಗ್ರಹಕ್ಕಾಗಿ ಜನತೆಗೆ ಹಾಗೂ ಕಾಂಗ್ರೆಸ್ಸ್ ಕಾರ್ಯಕರ್ತರಿಗೆ ಏಕೆ ಕರೆಕೊಡಲಿಲ್ಲ? ದೇಶದ ಆಡಳಿತ ಯಂತ್ರವನ್ನು ವ್ಯಾವಹಾರಿಕವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವಲ್ಲಿ ಸಂಬಂಧಪಟ್ಟವರ ಮೇಲೆ ಏಕೆ ಒತ್ತಡ ಹಾಕಲಿಲ್ಲ? ವಿಶ್ವಮಾನವನಾಗಿ ಜನಿಸುವ ಪ್ರತಿಯೊಂದು ಮಗು ಅಲ್ಪ ಮಾನವನಾಗುವುದು ಜಾತಿ, ಮತ, ಧರ್ಮಗಳಿಂದಲೇ. ಆದರೆ ಈ ಬಂಧನಗಳಿಂದ ಬಿಡುಗಡೆಯಾಗಿ, ಮತ್ತೆ ವಿಶ್ವಮಾನವನಾಗುವ, ಮರಳಿ ಮಗುವಿನ ಮುಗ್ಧತೆಯತ್ತ ಸಾಗುವ ಮಾರ್ಗ ಯಾವುದು? ಅಧ್ಯಾತ್ಮವೇ? ಗಾಂಧಿ ಸೂಚಿಸುವ ಧ್ಯಾನವೇ? ಅಂತರಂಗ ಹದಗೊಳಿಸಿಕೊಳ್ಳುವ ಸತ್ಯಾಗ್ರಹವೇ? ಎನ್ನುವ ಪ್ರಶ್ನೆಗಳು ಹಾಗೆಯೇ ಉಳಿದುಬಿಡುತ್ತವೆ.

ಪುಸ್ತಕದುದ್ದಕ್ಕೂ ಮಠಪತಿಯವರ ಭಾಷೆಯ ಸೊಗಸುಗಾರಿಕೆಯನ್ನು ಪರಿಚಯಿಸುವ ಅನೇಕ ಅದ್ಭುತ ಸಾಲುಗಳು, ಸಮಕಾಲೀನ ಬರಹಗಾರರಲ್ಲಿಯೇ ಸರ್ವಕಾಲಕ್ಕೂ ಸಲ್ಲುವ ಪ್ರಶ್ನೆಗಳನ್ನು ಎತ್ತುತ್ತಾ, ನಿದರ್ಶನಗಳನ್ನು ಇಡುತ್ತಾ ನಮ್ಮ ಸಾಮಾಜಿಕ ಸಂದರ್ಭ, ಹೋರಾಟ ಮತ್ತು ಬದ್ಧತೆಗಳನ್ನು ಈ ಮೂಲಕ ಪ್ರಶ್ನಿಸುತ್ತಿರುವ ಮಠಪತಿಯವರ ಬರಹ ಸಾಗಿರುವ ರೀತಿಯೇ ಭಿನ್ನ. ಅದು ಅವರನ್ನು ಖಂಡಿತವಾಗಿಯೂ ಅನನ್ಯತೆಯೆಡೆಗೆ ಕೊಂಡೊಯ್ಯುತ್ತದೆ, ಅವರ ಬರಹದ ಒಂದೊಂದು ಪಾತ್ರವೂ ನಮ್ಮನ್ನು ನಿರಂತರವಾಗಿ ಕಾಡುತ್ತವೆ. ಹೀಗೆ ಕಾಡುತ್ತಲೇ ನಮ್ಮನ್ನು ಸುಂದರ ಮನುಷ್ಯರನ್ನಾಗಿ ಮಾರ್ಪಡಿಸುತ್ತವೆ.

ಕ್ರಿಸ್‌ಮಸ್ **–ಆರ್.ಪಿ ವೆಂಕಟೇಶಮೂರ್ತಿ**

ಗಾಂಧಿ : ಏನೆಲ್ಲ ಬರೆದೂ ಏನೂ ಬರೆಯಲಾಗಲಿಲ್ಲ...

ಇದನ್ನು ನಾನೊಬ್ಬನೇ ಹೇಳುತ್ತಿಲ್ಲ. ನನ್ನೊಂದಿಗೆ ಈ ಗಾಂಧಿಯೂ ಹೇಳಿದ್ದಾನೆ. ಆತನ ಕೊನೆಯ ದಿನಗಳಿಗೆ ಸ್ವಲ್ಪ ಮುನ್ನ ಮಾರ್ಟಿನ್ ಕಿಂಗ್ಸ್‌ಲೀ ಹಾಗೂ ವಿನ್ಸೆಂಟ್ ಶೀನ್‌ರೊಂದಿಗೆ ಮೆಹರಾಲಿಯ ಖ್ವಾಜಾ ಸೈಯ್ಯದ್ ಕುತುಬುದ್ದಿನ್ ಭಕ್ತಿಯಾರರ ಉರಸ್‌ನಲ್ಲಿ ಪಾಲ್ಗೊಂಡಿದ್ದ ಗಾಂಧಿ ನನ್ನಂತೆಯೇ ರಾಗವೆಳೆದಿದ್ದ. 'ಏನೆಲ್ಲ ಬರೆದೂ ಏನೂ ಬರೆಯಲಾಗಲಿಲ್ಲ...'. ಇದು ನಮ್ಮ ಮಿತಿ ಎನ್ನುವುದು ಎಷ್ಟು ಸತ್ಯವೋ, ಅಷ್ಟೇ ಸತ್ಯ ಕಾಲಧರ್ಮ. ಕೇವಲ ಒಂದು ಬತ್ತಳಿಕೆಯಂತೆ ಬಳಕೆಯಾಗುವ ಮನುಷ್ಯ ಪ್ರಪಂಚದ ಅಗಾಧ ಉದ್ದೇಶ ಮತ್ತು ಗುರಿಗೆ ಸಾಧನವಷ್ಟೆ. ಎಲ್ಲ ನಡೆದು, ನುಡಿದು ಕಾಲದ ಆಣತಿಯಂತೆ ಹೊರಡಬೇಕಾದ ನಾವು, ನೀವು ಮತ್ತು ಈ ಗಾಂಧಿ ಇನ್ನೆಷ್ಟು ಹೇಳಬಹುದು? ನಮ್ಮ ಗರ್ವಕ್ಕೆ ಧಕ್ಕೆಯಾಗದಿರಲೆನ್ನುವ ಕಾರಣಕ್ಕೆ ಬೆಂಜಮಿನ್ ಡಿಸ್ರೆಲಿಯಂತೆ ನುಡಿಯಬಹುದಷ್ಟೇ, ಎಲ್ಲ ಬರೆದು ಆತ ಕೊನೆಗೆ ಹೇಳಿದ, "The time will come, when you will hear me."

ಆ ಕಾಲ ಈಗ ಬಂದಿದೆಯೇ? ಬಂದಿದೆ ಎನ್ನುವ ಭ್ರಮೆಯಲ್ಲಿ ನಾನು ಗಾಂಧಿಯನ್ನು ಮತ್ತೆ ನಿಮ್ಮ ಮುಂದೆ ನಿಲ್ಲಿಸಿದ್ದೇನೆ. ಬಂದಿದೆಯೋ ಇಲ್ಲವೋ ಆದರೆ ಕೆಲವು ಭ್ರಮೆಗಳೊಂದಿಗೆ ಬದುಕಿದಾಗ ಸಿಗುವ ಆತ್ಮಸ್ಥೈರ್ಯ ಬದುಕಿನಿಂದಲೂ ಸಿಗುವುದಿಲ್ಲ. ಅಂತಹ ಮಾಯಾವಿ ಈ ಗಾಂಧಿ ನನ್ನ ಪಾಲಿಗೆ; ನನ್ನಂತಹ ಅನೇಕರ ಪಾಲಿಗೆ. ಈ ಗಾಂಧಿ ಯಾರು? ಏನು? ಹೇಗೆ? ಎಂದು ಎಷ್ಟೆಲ್ಲಾ ಜನ ಬರೆದಿದ್ದಾರೆ ಆದರೆ ನನಗೆ ಮಾತ್ರ ಸ್ಟೆಫೊರ್ಡ್ ಕ್ರಿಪ್ಸ್‌ನ ಮಾತುಗಳಲ್ಲಿಯೇ ಗಾಂಧಿ, ಗಾಂಧಿಯಾಗಿ ಕಾಣಿಸುತ್ತಾನೆ, "I know of no other man in our time or indeed in recent history, who so convincingly demonstrated the power of the spirit over material things." ಹೆಸರಾಂತ ಇತಿಹಾಸಕಾರ ವಿಲ್ ಡ್ಯೂರಾಂಟ್‌ನು ಇದನ್ನೇ ಹೇಳಿದ, 'ಗಾಂಧಿ ತಾವು ಸಾಧಿಸಬೇಕಾದುದನ್ನು ತಮ್ಮ ಸಾವಿನಲ್ಲಿ ಸಾಧಿಸಿದ್ದಾರೆ. ಉಳಿದವರು ಮಾಡಬೇಕಾದುದು ಸಾಕಷ್ಟಿದೆ.'

ಈ ಉಳಿದವರ ಸಾಲಿನಲ್ಲಿ ಬರುತ್ತೇವೆ ನಾವು, ನೀವು ಹಾಗೂ ಇಡೀ ಪ್ರಪಂಚ. ನೆಹರೂ, ಚರ್ಚಿಲ್ ಹಾಗೂ ಮನಮೋಹನ್ ಸಿಂಗ್. ನಾವೆಲ್ಲಾ

ಗಾಂಧಿಯ ಹೆಸರನ್ನು ನೆಪವಾಗಿಸಿಕೊಳ್ಳಲು ಸೋತವರು ಎಂದು ಕೆಲವೊಮ್ಮೆ ನನಗನಿಸಿದೆ. ಚರ್ಚಿಲ್‌ನ ಇಡೀ ಬದುಕಂತೂ ಗಾಂಧಿಯ ಟೀಕೆಯಲ್ಲಿಯೇ ಕರಗಿಹೋಯಿತು. ಆತ ಎಸೆದ ಒಂದೊಂದು ಟೀಕೆಯ ಕಲ್ಲನ್ನು ಮೆಟ್ಟಿಲಾಗಿಸಿಕೊಂಡು ಮೇಲೆರಿದವನು ಈ ಮುದುಕ. ಈತ ಮಹಾತ್ಮನಾಗಿ ಪ್ರಪಂಚದಲ್ಲಿ ಉಳಿದ, ಚರ್ಚಿಲ್ ಮನುಷ್ಯನಾಗಿ ಪ್ರಪಂಚದಿಂದ ಅಳಿದ. ವಿಚಿತ್ರ ನೋಡಿ, ಮಹಾತ್ಮನನ್ನು ಬೈಯ್ದು ಇತಿಹಾಸದ ಅವಿಭಾಜ್ಯ ಅಂಗವಾಗಿ ಉಳಿಯುವ ಸುದೈವಿ(?) ಚರ್ಚಿಲ್. ಇವನಷ್ಟೇ ಭಾಗ್ಯಶಾಲಿ(?) ಆ ಗೋಡ್ಸೆ. ಈ ಭಾಗ್ಯ ನಿಮಗಿದೆಯೋ? ನನಗಂತೂ ದಕ್ಕಿದೆ. ಈತನ ಕುರಿತು 'ಗಾಂಧಿ ಮತ್ತು ಗೂಂಡಾ', 'ಗಾಂಧಿ : ಅಂತಿಮ ದಿನಗಳು' ಮತ್ತು 'ಗಾಂಧಿ : ಮುಗಿಯದ ಅಧ್ಯಾಯ' ಹೀಗೆ ಏನೆಲ್ಲಾ ಬರೆದಿದ್ದೇನೆ. ಮುದುಕನನ್ನು ಕುರಿತು ಬರೆದು ಮುಪ್ಪನ್ನು ಆಹ್ವಾನಿಸಿಕೊಂಡ ಮೂರ್ಖ ಎನ್ನುವ ಟೀಕೆಗೂ ಒಳಗಾಗಿರಬಹುದು. ಈ ಟೀಕೆಯಲ್ಲಿಯೇ ನನ್ನ ಪುನರುತ್ಥಾನವಿದೆ. ಕಬೀರ, ಅಕ್ಕಮಹಾದೇವಿ, ಗಾಂಧಿ, ಓಶೋ, ಅಬ್ಬಾಸ್, ಅಂಬೇಡ್ಕರರನ್ನು ಕುರಿತು ಬರೆದು ನಾನು ಮುಪ್ಪಿನವರ ಸಾಲಿನಲ್ಲಿ ಸೇರುವುದಾದರೆ ಈ ದೇಶಕ್ಕೆ ಇವರ ಆಲೋಚನೆಗಳು, ಪ್ರಯೋಗಗಳು ಅರ್ಥವಾಗಲಿಲ್ಲ ಎಂದು ದುಃಖ ಪಡುತ್ತೇನೆಯೇ ವಿನಾ ನನಗೆ ಮುದುಕರ ಪಟ್ಟ ಬಂದಿತೆಂದಲ್ಲ. ಅಷ್ಟಾಗಿಯೂ ಅದು ಬರುವುದಾದರೆ ಅವಿವೇಕದ ಯೌವನಕ್ಕಿಂತ ವಿವೇಕದ ಈ ಮುದುಕರ ಸಂಘವೇ ಒಳಿತೆಂದು ಸಂಭ್ರಮಿಸುತ್ತೇನೆ. ಗಾಂಧಿಯ ಕುರಿತು ಈ ನನ್ನ ಬರಹ ಏನು ಎನ್ನುವುದನ್ನು ಚರ್ಚಿಲ್‌ನ ಮಾತುಗಳಲ್ಲಿಯೇ ಹೇಳುತ್ತೇನೆ, "This is not the end. It is not even the beginning of the end. But it is, perhaps, the end of the beginning"

ಎರಡು ದಶಕಗಳ ಬಾಳಿನಲ್ಲಿ ಗಾಂಧಿಯನ್ನು ಕುರಿತು ಸಾಕಷ್ಟು ತಲೆಕೆಡಿಸಿಕೊಂಡಿದ್ದೇನೆ ಎನ್ನುವುದು ಸುಖದ ಮಾತಾಗಿದೆಯೇ? ಗೊತ್ತಿಲ್ಲ. ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿ ಈತನ ಜಯಂತಿಯ ಸಿಹಿಯನ್ನು, ಈತನ ಪುಣ್ಯತಿಥಿಯ ಮಧ್ಯಾಹ್ನದ ಊಟವನ್ನು ಅನುಭವಿಸಿದ ನನಗೆ ಕಾಡಿದ್ದು ಒಂದೇ ಪ್ರಶ್ನೆ, ನಮ್ಮ ಮಧ್ಯದ ಈ ಗಾಂಧಿ ಯಾಕೆ ಒಗಟಿನಂತಾದ? ಕೇತಲದೇವಿ, ನೀವು ಈ ಹೆಸರನ್ನು ಕೇಳಿರಬಹುದು. ಆಕೆಯ ಒಂದು ವಚನದ ಆರಂಭಿಕ ಎರಡು ಸಾಲುಗಳು–

'ಹದ ಮಣ್ಣಲ್ಲದ ಮಡಿಕೆಯಾಗಲಾರದು
ವ್ರತಹೀನನ ಬೆರೆಯಲಾಗದು'

ಎಷ್ಟೊಂದು ಸರಳ ಈ ಸಾಲುಗಳು. ಆದರೆ ವಾಸ್ತವದಲ್ಲಿ ಎಷ್ಟೊಂದು ಕಠಿಣ ಇದರ ಸಾಧನೆ. ಒಬ್ಬ ಗಾಂಧಿಯ ಸೋಲು–ಗೆಲುವು ಎಲ್ಲ ನಿರ್ಭರವಾಗುವುದು ಈ ಸಾಲುಗಳನ್ನಾಧರಿಸಿಯೇ. ಕೇತಲದೇವಿಯ ಈ ಸಾಲುಗಳು ಗಾಂಧಿಯ ಅಂತಿಮ ದಿನಗಳಿಗೆ ಹೊಂದಿಸುವಷ್ಟು ಇನ್ಯಾರ ಸಾಲುಗಳನ್ನೂ

ಹೊಂದಿಸಲಾಗದು. ಕನಿಷ್ಠ ಆತನ ಎರಡು ವರ್ಷದ ಅಂತಿಮ ಬದುಕು ಪಶ್ಚಾತ್ತಾಪದ ಕಣ್ಣೀರಿನಲ್ಲಿ ಮಿಂದೆದ್ದಿದೆ. ಅಹಿಂಸೆ, ಸತ್ಯಾಗ್ರಹ, ಖಾದಿ, ಚರಕ, ಗ್ರಾಮ ಸ್ವರಾಜ್ಯ, ರಾಮರಾಜ್ಯ ಎಲ್ಲವೂ ತನ್ನೊಂದಿಗೆ ಅಳಿಯುತ್ತಿವೆ ಎನ್ನುವ ವಾಸ್ತವ ಅವನ ಅರಿವಿಗೆ ಬಂದಿದೆ. ಹದವಲ್ಲದ ಮಣ್ಣು ಮಡಿಕೆಗೆ ಬಾರದಂತೆ, ವ್ರತಹೀನರ ಸಂಗ ಸಾತ್ವಿಕ ಶಕ್ತಿಯಾಗದಂತೆ ಗಾಂಧಿಯ ಪಾಡಾಗಿದೆ. ಹೀಗೆ ಹೇಳುವಾಗ ಗಾಂಧಿಯನ್ನು ಮಹಾತ್ಮನನ್ನಾಗಿ ನೋಡಬೇಕಿಲ್ಲ. ಮನುಷ್ಯನಾಗಿಯೂ ಅವನ ಹೂಡಿಕೆ ತಪ್ಪಾಗಿದೆ. ಯಾಕೆಂದರೆ, "Among people generally corrupt, liberty cannot long exist." ಗಾಂಧಿ– ಸತ್ಯಸಂಧರಾಗಿರಬೇಕು, ಆತ್ಮಸಾಕ್ಷಿಯಿಂದ ಬದುಕಬೇಕು ಎನ್ನುವುದರ ಅರ್ಥ ನಮ್ಮನ್ನೆಲ್ಲಾ ಹಿಮಾಲಯಕ್ಕೆ ಕರೆದುಕೊಂಡು ಹೋಗಿ ಬೈರಾಗಿಗಳನ್ನು ಮಾಡುವುದು ಎಂದಲ್ಲ. ಬದಲಿಗೆ ನಾವು ನಂಬಿದ ಲೌಕಿಕ ವ್ಯವಸ್ಥೆಗಳಿಗೂ ಒಂದು ಸಿದ್ಧಾಂತ ಬೇಕಾಗುತ್ತದೆ ಎನ್ನುವ ಸರಳ ಸತ್ಯ ಹೇಳುವುದರಲ್ಲಿಯೇ ಅವನ ಇಡೀ ಜೀವನ ಕಳೆದುಹೋಯಿತು ಎನ್ನುವುದು ಅತ್ಯಂತ ಖೇದದ ಸಂಗತಿ. ವ್ಯಕ್ತಿಗತವಾಗಿ ಕಳೆದುಕೊಂಡ ಮೌಲ್ಯಗಳನ್ನು, ತತ್ವಗಳನ್ನು ಯಾವುದೋ ಸರಕಾರ, ಇನ್ನಾವುದೋ ಮಹಾತ್ಮ ತನಗೆ ತಂದುಕೊಡಲಿ ಎಂದು ಬಯಸುವ ಸ್ಥಿತಿ ಇದೆಯಲ್ಲಾ, ಅದು ಅಧಃಪತನದ ಕೊನೆಯ ಹಂತ. ಕೋಮು–ಗಲಭೆ, ಧಾರ್ಮಿಕ ಅಸಹಿಷ್ಣುತೆ, ಭ್ರಷ್ಟಾಚಾರದ ಭಾರತದಲ್ಲಿ ಎಚ್ಚರವಾಗಿ, ಸಾಮಾನ್ಯ ಪ್ರಜೆಯಾಗಿ ಗಾಂಧಿ ಇಂಥ ಸಂದೇಶವನ್ನು ಕೊಡುತ್ತಿದ್ದನಲ್ಲ, ಅದು ಆತನ ದುರಂತ.

ಗಾಂಧಿಯನ್ನು ಯಾರೂ ಮೋಸ ಮಾಡಬಹುದಾಗಿತ್ತು. ಇದರಿಂದ ಗಾಂಧಿಗೆ ಯಾವ ಹಾನಿಯೂ ಇಲ್ಲ. ಅದೇ ಆತನ ಸೌಂದರ್ಯ, ಶಕ್ತಿ ಮತ್ತು ಸಾಧನೆ. ಆದರೆ ಮೋಸದ ನಮ್ಮ–ನಿಮ್ಮ ಗತಿಯೇನು? ಈ ಸಮಾಜದ ಭವಿಷ್ಯವೇನು? ನಾನು ಗಮನಿಸಿದಂತೆ ಈ ದೇಶ, ಜನಗಳ ಬಗೆಗಿದ್ದ ಮೋಹನದಾಸನೆಂಬ ಸಾಮಾನ್ಯ ವ್ಯಕ್ತಿಯ ಮೋಹಗಳನ್ನೇ ಬಳಸಿಕೊಂಡು ಆತನನ್ನು ಹೇಗೆಲ್ಲಾ ಎಳೆಯಲಾಯಿತು, ಆತನ ಎಲ್ಲ ಆಲೋಚನೆಗಳಿಗೆ, ಕನಸುಗಳಿಗೆ ವಿರುದ್ಧವಾದ ಘಟನೆಗಳಿಗೆ ಆತನನ್ನೇ ಸಾಕ್ಷಿಯಾಗಿಸಲಾಯಿತು, ಸಾಲದ್ದಕ್ಕೆ ನಮ್ಮ ರಾಜಕೀಯ ಅಪರಾಧಕ್ಕೆ ಆತನನ್ನು ಕೊಲೆ ಮಾಡಿ ಆತ ಜೀವಮಾನದುದ್ದಕ್ಕೂ ವಿರೋಧಿಸಿದ್ದ ವ್ಯಕ್ತಿಪೂಜೆಯನ್ನು ಸ್ಥಾಪಿಸಲಾಯಿತು. ಅಂತಿಮವಾಗಿ 'ಗಾಂಧಿ' ಎಂಬ ಈ ಮನುಷ್ಯನಿಂದ ಒಟ್ಟು ಇತಿಹಾಸದಲ್ಲಿ ಏನಾಯಿತು ಎಂದು ನೀವು ಕೇಳಿದರೆ ನನಗೆ ಫ್ರಾನ್ಸಿಸ್ ಬೇಕನ್ ನೆನೆಪಾಗುತ್ತಾನೆ. ಆತ ಬರೆಯುತ್ತಾನೆ, "It is as hard and severe a thing to be a true politician as to be truly moral." ಗಾಂಧಿ ಒಬ್ಬ ಸತ್ಯಸಂಧನಾಗಿದ್ದಕ್ಕಾಗಿ ಮತ್ತು ತತ್ತ್ವಾಧಾರಿತ ರಾಜಕಾರಣಿಯಾಗಿ ಮಾಡಿದ ಪ್ರಯತ್ನಕ್ಕಾಗಿ ಆಗಬೇಕಾದುದೇ ಆಗಿದೆ ಎಂದು ನೀವು ಆತ್ಮಸಾಕ್ಷಿಯಾಗಿ ಒಪ್ಪುವುದಾದರೆ

ನಾನೂ ನಿಮ್ಮೊಂದಿಗಿರುತ್ತೇನೆ ಮತ್ತು ವರ್ತಮಾನದ ಎಲ್ಲ ದುರಂತಗಳಿಗೂ ಬೆಲೆ ತೆರುತ್ತೇನೆ.

ಕೊನೆಯದಾಗಿ, ನನಗೀಗ ಆ ಅಜ್ಜಿ ನೆನಪಾಗುತ್ತಾಳೆ, ಆಕೆಯ ನೆರಳಿನಲ್ಲಿ ನನ್ನ ಎರಡು ದಶಕಗಳ ಬಾಲ್ಯ ಕಳೆಯಿತು. ಮಹಾ ಬಿಗುಮಾನದ ಮುದುಕಿ. ಆಕೆಗೆ ಗಾಂಧಿಯ ಹುಟ್ಟುಹಬ್ಬ ಮತ್ತು ಹುತಾತ್ಮರ ದಿನ ಗೊತ್ತಿರಲಿಲ್ಲ. ಆದರೆ ಗಾಂಧಿ ಗೊತ್ತಿದ್ದ. ಹೀಗಾಗಿಯೇ ಜೀವನದ ಕೊನೆಯವರೆಗೂ ಆಕೆ ಗಾಂಧಿಯ ಚರಕ ಬಿಡಲಿಲ್ಲ. ಆಕೆಯ ನೆನಪು ಬಂದಾಗಲೆಲ್ಲಾ ನನಗೆ ಕದಿರ ರೆಮ್ಮವ್ವೆ ಎಂಬ ಶರಣೆಯ ಸಾಲುಗಳು ನೆನಪಾಗುತ್ತವೆ. ಆಕೆಯ ಹೆಸರೇ ಕದಿರ ರೆಮ್ಮವ್ವೆ. ಆಕೆಗೂ ಚರಕಕ್ಕೂ ಅವಿನಾಭಾವ ಸಂಬಂಧ ಎಂದು ಬಿಡಿಸೇನೂ ಹೇಳಬೇಕಾಗಿಲ್ಲ. ಆದರೆ ಚರಕದೊಂದಿಗಿನ ಆಕೆಯ ಸಂಬಂಧ ಎಂತಹದ್ದು ಎನ್ನುವುದನ್ನು ನಿಮಗೆ ನಾನು ತಿಳಿಸಲೇಬೇಕು. ಯಾಕೆಂದರೆ ಈ ಕದಿರ ರೆಮ್ಮವ್ವೆಯ ಸಾಲುಗಳೆಂದರೆ ಗಾಂಧಿಯ ಚರಕದ ಸುತ್ತಲಿನ ಒಟ್ಟು ಆಲೋಚನೆ ಅಥವಾ ನಾನು ಮೇಲೆ ಸೂಚಿಸಿದ ಮಹಿಳೆಯ ಒಟ್ಟು ಬದುಕು. ಆಕೆ ಬರೆಯುತ್ತಾಳೆ–

> **"ನಾ ತಿರುಹುವ ರಾಟೆಯ ಕುಲ ಜಾತಿಯ ಕೇಳಿರಕ್ಕ**
> **ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು**
> **ನಿಂದ ಬೊಂಬೆ ಮಹಾರುದ್ರ... ... ... ಹೀಗೆ ಏನೆಲ್ಲಾ.**

ಒಟ್ಟಾರೆ ಚರಕ ಅಲ್ಲಿ ವ್ಯಾಪಾರವಲ್ಲ. ಗಾಂಧಿಯೂ ಇದನ್ನೇ ಹೇಳುತ್ತಿದ್ದ. ನಮ್ಮೊಳಗಿನ ಶಾಂತಿಗೆ ಆ ಮೂಲಕ ನಾಡಿನ ನೆಮ್ಮದಿಗೆ ದೇಶದ ಪ್ರಗತಿಗೆ ಸಂಕೇತವಾಗಿದ್ದ ಚರಕ ರಾಷ್ಟ್ರಧ್ವಜದ ಭಾಗವಾಗಬೇಕು ಎಂದು ಬಯಸಿದ್ದ. ಗಾಂಧಿಗೆ ಗೊತ್ತಾಗದಂತೆ ಇನ್ನಿಲ್ಲದಂತಾಗಿ ಹಿಂಸೆಯ ಸಂಕೇತವಾದ ಅಶೋಕ ಚಕ್ರ ಅಲ್ಲಿ ಸೇರಿಕೊಂಡಿರುವುದು ಆತನ ಕನಿಷ್ಠ ಅಪೇಕ್ಷೆಯನ್ನು ತಿರಸ್ಕರಿಸಿದ್ದಕ್ಕೆ ಸಾಕ್ಷಿ. ಈಗ ಗಾಂಧಿ ಕುರಿತು ಗೋಡ್ಸೆ ಹೇಳಿದ್ದು ಸರಿ ಎನಿಸುತ್ತದೆ. ಆತ ಹೇಳುತ್ತಾನೆ, "೩೩ ವರ್ಷಗಳ ಗಾಂಧೀಜಿಯ ರಾಜಕೀಯ ಜೀವನದಲ್ಲಿ ಅವರಿಗೆ ಒಂದೇ ಒಂದು ಸಣ್ಣ ವಿಜಯವೂ ಸಿಕ್ಕಿರಲಿಲ್ಲ." ಆದರೆ ಇದೆಲ್ಲವೂ ಒಂದು ಹಂತಕ್ಕೆ ನಡೆದುಹೋಗುತ್ತದೆ. ಗಾಂಧಿ ಒಂದು ವಿಚಿತ್ರ ಪ್ರಜ್ಞೆಯಾಗಿ ನಮ್ಮನ್ನು ಬೇಟೆಯಾಡುತ್ತಾನೆ. ಈ ಕಾರಣಕ್ಕಾಗಿ ನಾನು ಬರೆಯುತ್ತೇನೆ, ನೀವು ತಲೆಕೆಡಿಸಿಕೊಳ್ಳುತ್ತೀರಿ. ಆತ ಮುಗಿಯದ ಅಧ್ಯಾಯವಾಗಿ ಮುಂದುವರೆಯುತ್ತಾನೆ.

ಸಂಕ್ರಮಣ

ವಿಕಾಸ

ಋಣ

೨೦೧೦ರಲ್ಲಿ ಬೇಲೂರಿನಲ್ಲಿ ಬರೆಯಲು ಪ್ರಾರಂಭಿಸಿದ 'ಗಾಂಧಿ : ಅಂತಿಮ ದಿನಗಳು' ೧೨/೧೨/೨೦೧೧ರಂದು ಮಾರುಕಟ್ಟೆಗೆ ಬಂತು. ನನ್ನ ಯೋಜನೆಯ ಮೊದಲ ಭಾಗ, ಪ್ರಾಯೋಗಿಕವೂ ಕೂಡ. ಓದುಗರಾದ ನಿಮ್ಮನ್ನು ಗೆದ್ದರೆ ಮಾತ್ರ ಎರಡನೆಯ ಭಾಗ ಎಂದಿದ್ದೆ. 'ಗಾಂಧಿ : ಅಂತಿಮ ದಿನಗಳು' ಗೆದ್ದಿದೆ, ಗೆಲ್ಲಿಸಿದ್ದೀರಿ, 'ಗಾಂಧಿ : ಮುಗಿಯದ ಅಧ್ಯಾಯ' ಈ ಹೊತ್ತಿಗೆಯನ್ನು ಬರೆಯಿಸುವುದರ ಮೂಲಕ ಮತ್ತೆ ಆತನ ಮುಂದೆ ನಿಲ್ಲಿಸಿದ್ದೀರಿ. ಹತ್ತಾರು ವರ್ಷಗಳ ಗಾಂಧಿ ಕುರಿತಾದ ನನ್ನ ಓದು ಈಗ ಸಾರ್ಥಕವೆನ್ನಿಸಿದೆ. ಬರಹಗಾರನೊಬ್ಬ ನೂರಾರು ಕೃತಿಗಳನ್ನು ಬರೆದರೂ ಇಂತಹ ಸಾರ್ಥಕತೆಯನ್ನು ಅನುಭವಿಸುವುದು ಕೆಲವು ಕೃತಿಗಳ ಸಾಂಗತ್ಯದಲ್ಲಿ ಮಾತ್ರ, ಗಾಂಧಿಯೊಂದಿಗಿನ ದೀರ್ಘ ದಾರಿಯಲ್ಲಿ ಈ ನೆಮ್ಮದಿಗೆ ಕಾರಣರಾದವರು ಹಲವರು, ದಾಖಲೆಗೆ ಸಿಕ್ಕವರು ಮಾತ್ರ ಕೆಲವರು.

* ಪುಸ್ತಕ ಕೇವಲ ಲೇಖಕನ ಕನಸಾದರೆ ಸಾಲದು, ಪ್ರಕಾಶಕರ ಮುದ್ರಣ ವಿನ್ಯಾಸ, ಶ್ರದ್ಧೆ ಮತ್ತು ಓದುಗರಿಗೆ ತಲುಪಿಸುವ ಒಂದು ಸಶಕ್ತ ವ್ಯವಸ್ಥೆ ಸೇರಿದಾಗ ಮಾತ್ರ ಒಟ್ಟು ಯಶಸ್ಸು ಎನ್ನುವುದು ಸಾಧ್ಯವಾಗುತ್ತದೆ. ಕಣ್ವ ಪ್ರಕಾಶನದ ನನ್ನ ಗೆಳೆಯ ಗಿರಿರಾಜು ಹಾಗೂ ಅವರ ಸಮಗ್ರ ಸಿಬ್ಬಂದಿ ನನ್ನ ಗಾಂಧಿಯೊಂದಿಗೆ ಇರುವುದೇ ಈ ಯಶಸ್ಸಿಗೆ ಕಾರಣ. ಅವರಿಗೆ ಋಣಿಯಾಗಿದ್ದೇನೆ ಎನ್ನುವುದು ಒಂದು ನಿಮಿತ್ತ ಮಾತ್ರದ ಹೇಳಿಕೆ.

* ಎರಡನೆಯ ಭಾಗಕ್ಕೆ ಏನೆಂದು ಹೆಸರಿಸಬೇಕು? ಎಂದೆಲ್ಲಾ ಯೋಚಿಸಿ 'ಗಾಂಧಿ : ಮುಗಿದ ಅಧ್ಯಾಯ' ಎಂದಿಟ್ಟುಕೊಂಡೆ. ಆದರೆ ಕೊನೆಯ ಪದಕ್ಕೆ ಸಣ್ಣ ಬದಲಾವಣೆ ಮಾಡಿ ಬರಹ ಬೇರೆ ತಿರುವನ್ನೇ ಪಡೆಯುವಂತೆ 'ಗಾಂಧಿ : ಮುಗಿಯದ ಅಧ್ಯಾಯ' ಎಂದು ಸೂಚಿಸಿದವ ಮಿತ್ರ ಮಲ್ಲಿಕಾರ್ಜುನ ಮಠದ. ನನ್ನ 'ಗಾಂಧಿ : ಅಂತಿಮ ದಿನಗಳು' ಕೃತಿಯನ್ನು ರಂಗಕ್ಕಳವಡಿಸಿ ನಿತ್ಯ ಇಪ್ಪತ್ತು ಕಲಾವಿದರನ್ನು ಕಟ್ಟಿಕೊಂಡು ಗುದ್ದಾಡುತ್ತಿರುವವರು ಅವರು. ಅವರೊಂದಿಗೆ ನಿರ್ದೇಶಕ ಬಾಬಾಸಾಹೇಬ ಕಾಂಬ್ಳೆ ಹಾಗೂ ಪ್ರೇಕ್ಷಕರು. ಈ ಎಲ್ಲ ಕನಸುಗಾರರಿಗೆ,

* ಮೊದಲ ಭಾಗವನ್ನು ಬಿಡುಗಡೆ ಮಾಡಿ ಸಂಭ್ರಮಿಸಿದ ಹಾಸನದ ಅಭಿಮಾನಿಗಳು ಅಪಾರ, ಮುಖ್ಯವಾಗಿ ಮೈಸೂರು, ಮಂಗಳೂರು ವಿಭಾಗಗಳ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಟಿ.ಎನ್. ಪ್ರಭಾಕರ್, ಪ್ರಾಂಶುಪಾಲರಾದ ಡಾ. ಐ.ಎಮ್.ಮೋಹನ್, ಕಲಾವಿದ ಬಂಧು ಶ್ರೀ ಬಿ.ಎಸ್.ದೇಸಾಯಿ, ಚಲಂ, ಶ್ರೀ ಜ.ಹೋ.ನಾರಾಯಣಸ್ವಾಮಿ, ಪ್ರೊ. ಜಯಣ್ಣಗೌಡ, ಪ್ರೊ ಸತೀಶ್, ಬಾಣಾವರದ ಪ್ರಾಂಶುಪಾಲ ಮಿತ್ರ ಹರೀಶ್, ಕವಯಿತ್ರಿಯರಾದ ರೂಪ ಹಾಸನ, ಸುಶೀಲಾ ಸೋಮಶೇಖರ್, ಡಾ. ನಾಗೇಶ್, ಪ್ರೊ. ನಾರಾಯಣ್ ಪ್ರಸಾದ್, ಪ್ರೊ. ಮಲ್ಲೇಶಗೌಡ ಹಾಗೂ ಜನಪದ ತಜ್ಞ ಡಾ. ಹಂಪನಹಳ್ಳಿ ತಿಮ್ಮೇಗೌಡರಿಗೆ,

* ನನ್ನ ಓಶೋ ಮತ್ತು ಕೆ.ಎ.ಅಬ್ಬಾಸ್ ಕುರಿತಾದ ಬರಹಗಳಂತೆಯೇ ಗಾಂಧಿಯನ್ನೂ ವ್ಯಾಪಕವಾಗಿ ಚರ್ಚಿಸಿದವರು ಪತ್ರಿಕಾ ಬಂಧುಗಳು. ಈ ನಿಟ್ಟಿನಲ್ಲಿ ವಿಜಯ ಕರ್ನಾಟಕ, ಉದಯವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ಕರವೇ ನಲ್ನುಡಿ, ಹೊಸತು, ಅರುಹು-ಕುರುಹು, ಚಿಂತನ ಬಯಲು ಪತ್ರಿಕಾ ಬಂಧುಗಳಿಗೆ,

* ಬರಹದ ದಾರಿಯಲ್ಲಿ ವಿಶೇಷವಾದ ಪ್ರೋತ್ಸಾಹ ನೀಡಿದ 'ಭಾನುವಾರ'ದ ಸಂಪಾದಕರಾದ ಮಹಾದೇವ ಪ್ರಕಾಶ್, 'ಸಂಕ್ರಮಣ'ದ ಪ್ರೊ. ಚಂಪಾ, 'ಸಿಹಿಗಾಳಿ'ಯ ಮಳವಳ್ಳಿ ರಾಜು ಹಾಗೂ 'ಜನತಾ ಮಾಧ್ಯಮ'ದ ಶ್ರೀ ಆರ್.ಪಿ.ವೆಂಕಟೇಶಮೂರ್ತಿ ಇವರಿಗೆಲ್ಲಾ,

* ಸ್ಥಳೀಯ ವಿಷಯದಲ್ಲೂ ಅಷ್ಟೆ. ಬೇಲೂರಿನ ಪತ್ರಕರ್ತ ಬಂಧುಗಳು ಇಲ್ಲಿಯ ನನ್ನ ಮೂರು ವರ್ಷಗಳ ಬರಹಕ್ಕೆ ಬಹಳಷ್ಟು ಅರ್ಥಗಳನ್ನು ತುಂಬಿದ್ದಾರೆ. ಹೀಗಾಗಿ ಅವರಿಗೂ ಹಾಗೂ ಶ್ರೀ ಮಾ.ಶಿವಮೂರ್ತಿ, ಬೇಲೂರು ಕೃಷ್ಣಮೂರ್ತಿ, ತೊ.ಚ.ಅನಂತ ಸುಬ್ಬರಾಯ, ಶ್ರೀ ದಯಾನಂದ್,

* ರಾಜಕಾರಣಕ್ಕೂ ನನಗೂ ಅಷ್ಟಕ್ಕಷ್ಟೆ. ಅದು ನನಗೆ ಬೇಡದ ಭಾಷೆ. ಆದಾಗ್ಯೂ 'ಗಾಂಧಿ ಸ್ಮಾರಕ ನಿಧಿ ಪ್ರಶಸ್ತಿ'ಯನ್ನು ಕೊಡುವ ಮೂಲಕ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್, ಅನೇಕ ಕಾಳಜಿಗಳನ್ನು ತೆಗೆದುಕೊಳ್ಳುವ ಮೂಲಕ ಸ್ಥಳೀಯ ಶಾಸಕ ವೈ.ಎನ್.ರುದ್ರೇಶಗೌಡರು, ಶಾಸಕ ಹೆಚ್.ಎಸ್. ಪ್ರಕಾಶ, ಎಂ.ಎಲ್.ಸಿ.ಗಳಾದ ಮರಿತಿಬ್ಬೆಗೌಡರು ಇಲ್ಲಿ ಸ್ಮರಣೀಯರು. ಕಾರಣ ಇಷ್ಟೆ, ನನಗಿವರು ರಾಜಕಾರಣಿಗಳಲ್ಲ.

* ಪುಸ್ತಕಗಳು ಹೀಗೆಯೇ ಇರಬೇಕೆಂದುಕೊಂಡವ ನಾನು. ಅದು ಓದುಗರಿಂದ ಗೆಲ್ಲಬೇಕು. ಅಂತಹ ಅಪರೂಪದ ಓದುಗರು ಈ ರಾಜ್ಯ ಕಂಡ ಭಾವ ಶ್ರೀಮಂತಿಕೆಯ ರಾಜಕಾರಣಿ ಜೆ.ಎಚ್. ಪಟೇಲರ ಸಹೋದರ ದಾವಣಗೆರೆಯ ಶ್ರೀ ಎಸ್.ಎಚ್. ಪಟೇಲ್, ಅವರೊಂದಿಗಿರುವ ಶ್ರೀ ಅರುಣ್ ಕುಮಾರ್, ಶ್ರೀ ಹನುಮಂತಪ್ಪ, ಶ್ರೀ ಬಸವಲಿಂಗಪ್ಪ ಹಾಗೂ ಅಲ್ಲಿಯ ಎಲ್ಲ ಅಭಿಮಾನಿ ಬಂಧುಗಳಿಗೆ,

* ಪ್ರಶಸ್ತಿಗಳ ಆಸೆ ಮನುಷ್ಯ ಸಹಜ; ಆದರೆ ಈ ಆಸೆಯನ್ನು ತುಳಿಯುವ ದಾರಿ ಆತ್ಮರತಿ ಮತ್ತು ಆತ್ಮಾಭಿಮಾನದ ಮಧ್ಯ ಸಾಗುತ್ತದೆ ಎನ್ನುವ ಎಚ್ಚರಿಕೆಯಿಂದ ಲೇಖಕ ಬಾಳಬೇಕು ಎಂದುಕೊಂಡವ ನಾನು. ನನ್ನ ಈ ಆಸೆಗೆ ಅರ್ಥವಿದೆ ಎನ್ನುವುದನ್ನು ಸಾಬೀತುಪಡಿಸಿದವರು 'ಕರ್ನಾಟಕ ಗಾಂಧಿ ಸ್ಮಾರಕ ನಿಧಿ'ಯ ಬಂಧುಗಳು. 'ಗಾಂಧಿ: ಅಂತಿಮ ದಿನಗಳು' ಮೊದಲ ಭಾಗವನ್ನು ಪತ್ರಿಕೆಗಳ ಮೂಲಕ ಗಮನಿಸಿ, ಪ್ರಕಾಶಕರನ್ನು ಸಂಪರ್ಕಿಸಿ, ಪ್ರತಿಗಳನ್ನು ತರಿಸಿಕೊಂಡು ೨೦೧೨ನೇ ಸಾಲಿನ 'ಜಯಶ್ರೀ ದತ್ತಿ ನಿಧಿ' ಪುರಸ್ಕಾರವನ್ನು ನನಗೆ ನೀಡಿ ಗೌರವಿಸಿದ್ದಾರೆ. ಮನವಿ ಮಾಡಿಕೊಂಡು, ಮೈ-ಮನಸ್ಸುಗಳಿಗೆ ಒಗ್ಗದ ಪ್ರಶಸ್ತಿಗಳನ್ನು ಪಡೆಯುವುದರ ಬದಲು ಇದೆಷ್ಟೋ ಮೇಲು ಎನ್ನುವುದಕ್ಕೆ ಸಾಕ್ಷಿಯಾಗಿದ್ದಾರೆ. ಈ ಕಾರಣ ಶ್ರೀ ಹೋ. ಶ್ರೀನಿವಾಸಯ್ಯ, ಕೋದಂಡರಾಮಯ್ಯ ಹಾಗೂ ಶ್ರೀ ಪಾಟೀಲ್ ಪುಟ್ಟಪ್ಪ ಹಾಗೂ ಡಾ. ಸಿದ್ಧನಗೌಡ ಪಾಟೀಲರಿಗೆ,

* ಒಂದು ಮೋಹದ ಬರಹ ಮುಗಿದ ಮೇಲೆ ಮತ್ತೆ ಮತ್ತೆ ಅದನ್ನು ಓದುವುದು, ಒಪ್ಪಗೊಳಿಸುವುದು ಬೇಸರದ ಕೆಲಸ. ಬ್ಲರ್ಬ್‌ಗಾಗಿ ಕೇಳಿಕೊಂಡು ಕೃತಿಯನ್ನು ಕೊಟ್ಟಾಗ ಭಾಷಿಕ ಕಾಳಜಿಯನ್ನು ತೆಗೆದುಕೊಂಡವರು ಗುರುಗಳಾದ ಪ್ರೊ.ಗಿರಡ್ಡಿ ಗೋವಿಂದರಾಜ ಮತ್ತು ಹಾಸನದ ಪ್ರೊ.ಶಿವಪ್ರಸಾದ ಅವರು. ಕೃತಿಯನ್ನು ದೋಷಮುಕ್ತಗೊಳಿಸಿ ಅದರ ರಸಸ್ವಾದಕ್ಕೆ ಅನುವು ಮಾಡಿಕೊಟ್ಟ ಇಬ್ಬರೂ ಹಿರಿಯರಿಗೆ,

* ಗಾಂಧಿ ಕುರಿತಾದ ಈ ನನ್ನ ಕನಸಿಗೆ ಕೈಯಾಗಿ, ಅಕ್ಷರ ರೂಪಕ್ಕಿಳಿಸಲು ಸಹಕಾರಿಯಾದವರು ಪದ್ಮಶ್ರೀ, ರಾಜಶ್ರೀ ಮತ್ತು ಮುದ್ರಣ ಘಟಕದ ಸೌಮ್ಯ, ಕ್ಷಮಾ ಮತ್ತು ಇತರರು. ಹೀಗಾಗಿ ಅವರೆಲ್ಲರಿಗೆ,

* ಈ ಸಾಲುಗಳಲ್ಲಿ ತಮ್ಮನ್ನೂ ಹುಡುಕಿಕೊಳ್ಳುವ, ಅಪಾರ ಪ್ರೀತಿ–ಸೇಡು–ಸೆಡವಿನ ಅನೇಕ ನನ್ನ ಬಂಧುಗಳಿದ್ದೀರಿ, ನೀವು ನನ್ನ ಹೃದಯದಲ್ಲಿದ್ದೀರಿ. ಗಾಂಧಿ ಬದುಕಿದ್ದೇ ಹಾಗೆ, ಪ್ರೀತಿಯನ್ನು ಬೈಚಿಟ್ಟುಕೊಂಡ ಮನುಷ್ಯ ಆತ. ನಿಮ್ಮ ಪ್ರೀತಿ–ಧಿಕ್ಕಾರಗಳನ್ನೂ ನಾನು ಹಾಗೆಯೇ ಕಾಪಿಟ್ಟುಕೊಂಡಿದ್ದೇನೆ, ನಿಮಗೂ

ಋಣಿಯಾಗಿದ್ದೇನೆ

ಬೇಲೂರು

ಸಂಕ್ರಮಣ

ಈ ಹಿಂದೆ ಹೇಳಿದ್ದೆ

ಗಾಂಧಿವಾದವನ್ನಲ್ಲ, ಗಾಂಧಿಯನ್ನು ಓದಿ...

ಇದು ಕಥೆಯಲ್ಲ. ಗಾಂಧಿಯ ಹತ್ಯೆಯನ್ನು ಗುರಿಯಾಗಿಸಿಕೊಂಡು, ನಿಮ್ಮ ರೋಚಕತೆಯನ್ನು ಕೆದಕಲು ಹೊಸೆದ ಸಾಲುಗಳಲ್ಲ. ಇದೊಂದು ನಿತಾಂತ ಓದು. ೧೯೯೭ರಲ್ಲಿ ನಾನು ಸಂಶೋಧನಾ ವಿದ್ಯಾರ್ಥಿಯಾಗಿ ಭಾರತದ ಹೆಸರಾಂತ ಸಾಹಿತಿ, ಚಿತ್ರ ನಿರ್ದೇಶಕ ಖ್ವಾಜಾ ಅಹಮ್ಮದ್ ಅಬ್ಬಾಸರ ಸಾಹಿತ್ಯವನ್ನು ಓದಿಗಾಗಿ ಎತ್ತಿಕೊಂಡಂದಿನಿಂದ ಗಾಂಧಿ ಕುರಿತಾದ ಓದು ನನಗೆ ಅನಿವಾರ್ಯವಾಯಿತು. ಕಾರಣವಿಷ್ಟೇ, ದೇಶದ ಸ್ವಾತಂತ್ರ್ಯದ ಆಚೆ ಈಚೆ ಇದ್ದ ಒಟ್ಟು ಭಾರತೀಯ ಆಂಗ್ಲ ಸಾಹಿತ್ಯದ, ಸಾಹಿತಿಗಳ ಆಶಯಗಳು, ಬರಹದ ಉದ್ದೇಶಗಳು ರೂಪುಗೊಂಡಿದ್ದೇ ಈ ಗಾಂಧಿಯುಗದಲ್ಲಿ. ಆತನ ಪ್ರಭಾವವಿಲ್ಲದ ಯಾವುದೇ ಬರಹಗಾರನನ್ನು, ಕೃತಿಯನ್ನು ಆ ಸಂದರ್ಭದಲ್ಲಿ ನಾವು ನೋಡುವುದೇ ಕಷ್ಟ. ಸೃಜನಶೀಲನಾಗಿ ಬದುಕಿದ್ದ ಗಾಂಧಿ, ಸೃಜನಶೀಲ ಸಾಹಿತ್ಯವನ್ನೇನೂ ಬರೆಯಲಿಲ್ಲ. ಆದರೆ ಆ ಕಾಲದ ಇಡೀ ಸೃಜನಶೀಲ ಸಾಹಿತ್ಯವನ್ನೆಲ್ಲಾ ಆತ ವ್ಯಾಪಿಸಿಬಿಟ್ಟ. ಹಾಗೆಯೇ ಕೆ.ಎ. ಅಬ್ಬಾಸರನ್ನು.

ಸಂಸಾರದೊಳಗೊಂದು ಸನ್ಯಾಸ, ಸನ್ಯಾಸಿಯಾಗಿ ರಾಷ್ಟ್ರ ರಾಜಕಾರಣದ ಒಂದು ಅಮಿತ ಸಂಸಾರ. ಇವುಗಳನ್ನು ನಿಭಾಯಿಸಲು ಪ್ರಾರ್ಥನೆ, ಯೋಗ, ಯಾತ್ರೆ, ಇವನದೆಲ್ಲವೂ ಸದ್ದಿಲ್ಲದ ದಾರಿ, ಸಾವಿಲ್ಲದ ಯೋಜನೆ, ಯೋಚನೆ. ಈತ ಸರಳ ಮನಸ್ಸಿನ ಸಾಮಾನ್ಯರಿಗೆ ಸುಲಿದ ಬಾಳೆಹಣ್ಣಿನಷ್ಟೇ ಸರಳ, ಕೂದಲು ಸೀಳುವವರಿಗೆ ಇವನೊಂದು ಬಿಡಿಸಲಾಗದ ಕಗ್ಗ. ಒಂದು ಹಂತಕ್ಕೆ ನನಗನ್ನಿಸಿದೆ, ಮನಸ್ಸು ಮಾಗದವನಿಗೆ ಒಗ್ಗುವ ಮಾತಲ್ಲ ಗಾಂಧಿ. ಹ್ಞಾಂ, ಅಂದ ಹಾಗೆ ಗಾಂಧಿ ಮಾತೂ ಅಲ್ಲ ಬಿಡಿ. ಪ್ರಪಂಚದಲ್ಲಿ ಯಾವುದೇ ರೆಫರೆನ್ಸ್‌ಗಳನ್ನಿಟ್ಟುಕೊಳ್ಳದೇ ಓದಬಹುದಾದ ಒಬ್ಬ ಸರಳ ಮನುಷ್ಯ ಗಾಂಧಿ. ಆದರೆ ಗಾಂಧಿ ವಾದವನ್ನೋದುವವರಿಗೆ ಗಾಂಧಿ ಅರ್ಥವಾಗುವುದಿಲ್ಲ.

ನಟಲ್‌ನಿಂದ ನೌಖಾಲಿಯವರೆಗೆ ಸಾಗಿದ ಗಾಂಧಿಯನ್ನೊಬ್ಬ ಮಹಾತ್ಮನನ್ನಾಗಿಯೋ, ರಾಜಕಾರಣಿಯನ್ನಾಗಿಯೋ ಓದಿದ ನಾವು, ಈ ದೇಶದ ಸಾಮಾನ್ಯರು ಅರ್ಥೈಸಿಕೊಂಡ ಗಾಂಧಿಯನ್ನು ಅರಿಯಲಿಲ್ಲವೇನೊ. ಒಂದು ಸಂಗತಿ ಕೇಳಿ– ಅಬ್ಬಾಸರ ಅಜ್ಜಿಯ ಹೆಸರು ಹಕ್ಕೂ. ಬರೀ ಗಾಂಧಿ ಎಂಬ ಪದ ಮಾತ್ರದಿಂದ ಈಕೆ ವೈರಾಗ್ಯ ಮೂರ್ತಿಯಾದವಳು. ತನ್ನ ಅಮೂಲ್ಯ

ಆಭರಣಗಳನ್ನೆಲ್ಲಾ ದೇಶೋದ್ಧಾರಕ್ಕಾಗಿ ಈ ಗಾಂಧಿಯ ಜೋಳಿಗೆಗೆ ಸುರಿದು ಚರಕದ ದೀಕ್ಷೆ ಪಡೆದವಳು. ನಡು ಯೌವನದಲ್ಲಿ ನೂಲುತ್ತಾ ಮೀರಾಳಂತೆ ಗಾಂಧಿ ಒಬ್ಬ 'ಫರಿಸ್ತಾ' ಎಂದು ಪೂಜಿಸುತ್ತಾ, ಖಾದಿಯ ಖಫನ್‌ದಲ್ಲಿಯೇ ಇಹವನ್ನು ತ್ಯಜಿಸಿದವಳು. ಇದೆಲ್ಲಾ ಓದಿದಾಗ ತಟ್ಟನೆ ನನಗೆ ನೆನಪಾದದ್ದು ಟಾಲ್‌ಸ್ಟಾಯ್‌ನ ಮಾತು–"ಶ್ರದ್ಧೆಯಿಂದಲೇ ಜೀವನ, ಶ್ರದ್ಧೆಯೇ ಜೀವನ."

ಗಾಂಧಿ ಕುರಿತಾದ ನನ್ನ ಓದಿನ ಮಿತಿಯೊಳಗೇ ಹೇಳಬೇಕೆಂದರೆ ಗಾಂಧಿ ಓದಿದ್ದು ಕಡಿಮೆ. ಆದರೆ ಅರ್ಥೈಸಿಕೊಂಡದ್ದು ಹೆಚ್ಚು. ಮತ್ತೊಂದಷ್ಟು ಓದಿದ್ದರೂ ಅದು ಆತನ ಆಗಾಗಿನ ಅವಶ್ಯಕತೆಗಳ ಹಿನ್ನಲೆಯಲ್ಲಿ. ಹಾಗೆಯೇ ಓದಿದ್ದೆಲ್ಲವನ್ನು ಆತ ಹಂಚಿಯೂ ಬಿಟ್ಟ. ಬರಹದ ವಿಚಾರದಲ್ಲಿಯೂ ಅಷ್ಟೇ, ಕಾಲಾತೀತವಾಗಿ ಹಲವು ತಲೆಮಾರುಗಳಿಂದ ಬರಹದ ಒರೆಗೆ ತುತ್ತಾದ ಗಾಂಧಿ ಸಾಹಿತ್ಯ ಬರೆಯಲಿಲ್ಲ. ಆದರೆ ಆತ ಬರೆದದ್ದೆಲ್ಲವೂ ಶತಮಾನಗಳು ಮೆಲಕು ಹಾಕಬೇಕಾದ ಸಾಹಿತ್ಯವಾಯಿತು. ಬಹುತೇಕ ಗಾಂಧಿಯಷ್ಟು ಕಡಿಮೆ ಓದಿದ ರಾಜಕೀಯ ನೇತಾರರು ವಿರಳ. ಹಾಗೆಯೇ ಗಾಂಧಿಯಂಥ ಮನುಷ್ಯನೂ ವಿರಳ.

ಈ ಗಾಂಧಿ ನಮಗೆ ಏನು ಹೇಳುತ್ತಾನೆ? ಎಂಬ ಒಂದು ಸಣ್ಣ ಕುತೂಹಲ ನನ್ನನ್ನು ಹದಿನಾಲ್ಕು ವರುಷ ಆತನ ಬೆನ್ನು ಬೀಳುವಂತೆ ಮಾಡಿತು. ಇದೊಂದು ರೀತಿ ಗಾಂಧಿಯೊಂದಿಗಿನ ನನ್ನ ವನವಾಸ ಅಥವಾ ಗಾಂಧೀವಾಸ. ಅಂತಿಮವಾಗಿ ತಿಳಿದಿದ್ದಿಷ್ಟೇ, ಜನಮುಖಿಯಾಗಬೇಕಾದ ಬಾಳಿಗೆ ಪಾಂಡಿತ್ಯದ ಅವಶ್ಯಕತೆಯಿಲ್ಲ. ಮನುಷ್ಯನ ಕ್ರಿಯಾಸರಳತೆ ಮಾತನಾಡಿದಷ್ಟು ಸ್ಫುಟವಾಗಿ ಪಾಂಡಿತ್ಯ ಮಾತನಾಡುವುದಿಲ್ಲ. ಸಂತಸದ ಸಂಗತಿಯೇ ಇದು. ಈ ಗಾಂಧಿ ಪಂಡಿತನಾಗಿರಲಿಲ್ಲ, ಹಟಮಾರಿ ಮನುಷ್ಯನಾಗಿದ್ದ. ಕಸ ಗುಡಿಸುತ್ತಾ, ಜಗಳಾಡುತ್ತಾ, ಉಪವಾಸ ಬೀಳುತ್ತಾ ಆತ ತನ್ನೊಳಗಿನದನ್ನು ಸ್ವಚ್ಛಗೊಳಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಹೊರಗಣವರಿಗೆ ಮಹಾತ್ಮನಾದ. ಸೃಷ್ಟಿಯ ವೈಚಿತ್ರ್ಯ ಇದಲ್ಲವೇ? ಮರದ ಬೇರು ನೆಲದೊಳಗಿಳಿದಷ್ಟೂ ಅದರ ಹೊರಗಣ ಸೊಬಗು ಹೆಚ್ಚಾಗುತ್ತದೆ. ಹೀಗೆ ಹೆಮ್ಮರದ ಬೇರುಗಳಂತೆ ಇಳಿದ ಈ ಗಾಂಧಿ ಪ್ರಪಂಚದ ಸಂವೇದನೆಗಳೊಂದಿಗೆ.

ಗಾಂಧಿ ಕುರಿತಾದ ನನ್ನ ಓದನ್ನು ಅವನ ಬದುಕಿನ ಒಂದು ಘಟ್ಟಕ್ಕೆ ಸೀಮಿತಗೊಳಿಸಿಕೊಂಡಿರುವುದರಿಂದ ಈ ಕೃತಿಗೆ, "ಗಾಂಧಿ : ಅಂತಿಮ ದಿನಗಳು" ಎಂದು ಕರೆದಿದ್ದೇನೆ. ಈ ದೇಶದ ರಾಜಕೀಯ ಪರ್ವ, ಗಾಂಧಿಯ ಬದುಕಿನ ಪರ್ವವಾಗಿರುವುದು ಒಂದು ಆಕಸ್ಮಿಕ ಮತ್ತು ಆಶ್ಚರ್ಯಕರ ಬೆಳವಣಿಗೆ. ಗಾಂಧಿ ಕೊಲೆಗೆ ಕೆಲವೇ ಅವಧಿ ಮುನ್ನ ರಾಜಕೀಯವಾಗಿ ಸ್ವತಂತ್ರವಾಗುವ ಈ ದೇಶ ಗಾಂಧಿಯ ಕೊಲೆಯೊಂದಿಗೆ ಇನ್ನೊಂದು ರೀತಿಯ ಪರಾಧೀನತೆಗೆ ಒಳಗಾಗುತ್ತದೆ. ಸರಿ, ಇದೆಲ್ಲವೂ ಸಾಕಷ್ಟು ಚರ್ಚಿಸಿಯಾಗಿದೆ. ನಿಮ್ಮೊಂದಿಗೆ ಹಂಚಿಕೊಳ್ಳಬೇಕಾದುದಿಷ್ಟೇ– ಬಾಳಿನ ಮುಸ್ಸಂಜೆಯಲ್ಲಿ, ಮಾಗಿದ ಮನಸ್ಸೊಂದು

ಕ್ರಿಯಾಶೀಲವಾಗಿದ್ದ ರೀತಿಯನ್ನು ತಿಳಿಯುವದಷ್ಟೇ ನನ್ನ ಬರಹದ ಕುತೂಹಲ ಮತ್ತು ಗುರಿ. ಈ ಕುತೂಹಲದ ಮೊದಲ ಭಾಗ ಈಗ ನಿಮ್ಮ ಕೈಯಲ್ಲಿದೆ.

ಇನ್ನೊಂದು ಮಾತು ನಿಮ್ಮೊಂದಿಗೆ, ಇಷ್ಟೆಲ್ಲ ಬರೆದೂ ಈ ಗಾಂಧಿಯ ಕುರಿತು ನನಗೆ ಏನನ್ನೂ ಹೇಳಲಾಗಿಲ್ಲ. ತಾನೇನೂ ಹೊಸದನ್ನು ಹೇಳಲಿಲ್ಲ ಎಂದು ಪ್ರಾಮಾಣಿಕವಾಗಿ ಹೇಳಿದ ಈ ದೊಡ್ಡ ಮನುಷ್ಯನ ಬಗ್ಗೆ ನಾನೇನೊ ಬರೆದು ತೀರಿಸಿದೆ ಎನ್ನುವುದೊಂದು ಸಲುಗೆಯ ಮಾತಷ್ಟೆ. ಹತ್ತಾರು ವರ್ಷಗಳ ಹಿಂದಿನ ಓದು ವಿ.ರಾಮಮೂರ್ತಿಯವರ 'ಮಹಾತ್ಮ ಗಾಂಧಿ' ನನ್ನನ್ನು ಬಹಳ ಕಾಡಿತ್ತು. ಅದು ನನ್ನ ಈ ಬರಹಕ್ಕೆ ಕಾರಣವಾಯಿತು. ಇದು ನಿಮಗೆ ಇಷ್ಟವಾದರೆ ಇದರ ಮುಂದಿನ ಎರಡನೆಯ ಭಾಗ ಮತ್ತೆ ನಿಮ್ಮ ಕೈಯಲ್ಲಿ.

೨೧-೧೧-೨೦೧೧

ಡಾ॥ ರಾಜಶೇಖರ ಮಠಪತಿ (ರಾಗಂ) ಕನ್ನಡ ಸೃಜನಶೀಲ ಲೋಕಕ್ಕೆ ಪರಿಚಿತ ಹೆಸರು. ಬೆಳಗಾವಿ ಜಿಲ್ಲೆಯ ತೆಲಸಂಗದಲ್ಲಿ ೧೯೭೧ರಲ್ಲಿ ಜನನ, ಗಡಿಯ ಊರಾದ ಚಡಚಣದಲ್ಲಿ ಪ್ರಾಥಮಿಕದಿಂದ ಪದವಿಪೂರ್ವ, ನಂತರ ಬಿಜಾಪುರ ಮತ್ತು ಸೊಲ್ಲಾಪುರಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣ. ಕ.ವಿ.ವಿ. ಧಾರವಾಡದಿಂದ ಶ್ರೇಷ್ಠ ಸಾಹಿತಿ, ಸಿನಿಮಾ ನಿರ್ದೇಶಕ, ಪತ್ರಕರ್ತ ಕೆ.ಎ.ಅಬ್ಬಾಸರನ್ನು ಕುರಿತು ಪಿಹೆಚ್.ಡಿ.- ಇವು ರಾಗಂ ಬದುಕಿನ ಕೆಲವು ಹಂತಗಳು.

ಉಪನ್ಯಾಸಕ ವೃತ್ತಿ ಮಾಡುತ್ತ ರಾಗಂ ಲಿಂಗರಾಜ ಕಾಲೇಜು ಬೆಳಗಾಂ, ಜೆ.ಜೆ.ಕಾಲೇಜ್ ಆಫ್ ಕಾಮರ್ಸ್ ಹುಬ್ಬಳ್ಳಿ, ರಾಠಿ ಕಾಲೇಜ್ ಗುಳೇದಗುಡ್ಡ, ಗುರುಸುಧೀಂದ್ರ ಕಾಲೇಜ್ ಭಟ್ಕಳ, ಈ ಮಧ್ಯೆ ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್(CIIL)ದಲ್ಲಿ ಸಹಾಯಕ ಸಂಶೋಧಕರಾಗಿ, ಆನಂತರ ಬಾಗಲಕೋಟೆಯ ಬ.ವಿ.ವ. ಸಂಘದ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಆರು ವರ್ಷ ಅಧ್ಯಾಪನದ ಅವಧಿಯನ್ನು ಕಳೆದಿದ್ದಾರೆ. ಸದ್ಯ ಹಾಸನ ಜಿಲ್ಲೆಯ ಇತಿಹಾಸ ಪ್ರಸಿದ್ಧ ಬೇಲೂರಿನ ವೈ.ಡಿ.ಡಿ.ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ಸೇವೆಯಲ್ಲಿದ್ದಾರೆ.

ಕನ್ನಡ, ಇಂಗ್ಲಿಷ್ ಹೀಗೆ ಎರಡೂ ಭಾಷೆಗಳಲ್ಲಿ ರಾಗಂ ಬರೆದ ಕೃತಿಗಳ ಸಂಖ್ಯೆ ನಲವತ್ತೇಳನ್ನು ಮೀರುತ್ತದೆ. ಕಾವ್ಯ, ಕತೆ, ನಾಟಕ, ಪ್ರಬಂಧ, ಅಂಕಣ, ಸಂಶೋಧನೆ, ಭಾಷಾ ಅಧ್ಯಯನ, ಭಾಷಾಂತರ, ಸಿನಿಮಾ ಹೀಗೆ ಹಂಗಿಲ್ಲದ, ಎಗ್ಗಿಲ್ಲದ ದಾರಿ ಕ್ರಮಿಸಿದ ಈ ಬರಹಗಾರ ನಡೆದಷ್ಟು ದಾರಿ, ಪಡೆದಷ್ಟು ವರ ಎಂದುಕೊಂಡವರು. ಅವರ ಕೃತಿಗಳಲ್ಲಿ ಗಾಂಧೀ ಮತ್ತು ಗೂಂಡಾ, ಎರಡು ದಡಗಳ ನಡುವೆ, ಒಂದಿಷ್ಟು ಕರುಣೆ ಮತ್ತಷ್ಟು ನೀರು, ಫಕೀರನ ಫಿಲ್ಮೀ ದುನಿಯಾ, ನನ್ನೊಳಗಿನ ನಾನು, ಓಶೋ ಎಂಬ ವಿದ್ರೋಹಿಯ ಕಥೆ, ಶಬ್ದಸೂತಕದಿಂದ, ನಿಶಾಗಾನ, ವಿಬಂಧ, ಜಗತ್ಪ್ರಸಿದ್ಧ ಭಾಷಣಗಳು, ಗಾಂಧಿ: ಅಂತಿಮ ದಿನಗಳು, ಗಾಂಧಿ : ಮುಗಿಯದ ಅಧ್ಯಾಯ ಅತ್ಯಂತ ಮಹತ್ವದ ಕೃತಿಗಳು.

ರಾಗಂ ಅವರ ಗಾಂಧಿ : ಅಂತಿಮ ದಿನಗಳು ಕೃತಿಯು ೨೦೧೧ ಮತ್ತು ೧೨ನೇ ಸಾಲಿನ ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಪ್ರಶಸ್ತಿಗೆ ಭಾಜನವಾಗಿದೆ.

ಪ್ರಕಾಶಕರ ಮಾತು

'ಕಣ್ವ' ಎನ್ನುವ ಅತ್ಯಂತ ಪವಿತ್ರ ನದಿಯ ಹೆಸರನ್ನಿಟ್ಟುಕೊಂಡು ಪ್ರಕಾಶನ ಕ್ಷೇತ್ರಕ್ಕೆ ಇಳಿದಿದ್ದೇವೆ. ಆ ನದಿ ಲಕ್ಷಾಂತರ ಸಂಸಾರಗಳಿಗೆ, ಗದ್ದೆ–ಊರುಗಳಿಗೆ ಬದುಕನ್ನು ನೀಡಿದಂತೆ, ನಮ್ಮ ಪ್ರಕಾಶನವು ಸಾವಿರಾರು ಅಪರಿಚಿತ ಲೇಖಕರನ್ನು ಪರಿಚಯಿಸಬೇಕು, ಹಿರಿಯರನ್ನು ಗೌರವಿಸಬೇಕು ಎಂದುಕೊಂಡಿದೆ. ನಮ್ಮೊಂದಿಗೆ ಅನೇಕ ಗೆಳೆಯರಿದ್ದಾರೆ. ಹಿತೈಷಿಗಳು, ಗುರುಗಳು, ಮಾರ್ಗದರ್ಶಕರಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಪುಸ್ತಕಗಳನ್ನು ಗೌರವಿಸುವ ನೀವಿದ್ದೀರಿ.

ನೂರು ವರ್ಷದ ವಯಸ್ಸಿನ ಲೇಖಕರಿಂದ ಹತ್ತೊಂಬತ್ತು ವರ್ಷದ ಲೇಖಕರಿಗೂ ಇಲ್ಲಿ ಸಮಾನ ಗೌರವವಿದೆ. ಜಾತಿ–ಪ್ರದೇಶಗಳ ಯಾವುದೇ ತಾರತಮ್ಯ ಮಾಡದೇ, ಲೇಖಕರುಗಳನ್ನು ಆದರಿಸುತ್ತಿದ್ದೇವೆ. ಕನ್ನಡದ ಅಪರೂಪದ ಮತ್ತು ಮರೆತುಹೋದ ಮಹನೀಯರನ್ನು ಕುರಿತು ಪುಸ್ತಕಗಳನ್ನು ತರುವ ಆಲೋಚನೆಯಲ್ಲಿದ್ದೇವೆ. ನಾವು ಸಾಗಬೇಕಾದ ದಾರಿ ತುಂಬಾ ದೀರ್ಘವಾಗಿದೆ. ಈಗಷ್ಟೇ ಅಂಬೆಗಾಲಿಡುತ್ತಿದ್ದೇವೆ.

ಇದೀಗ ಕನ್ನಡದ ಅಪರೂಪದ ಮತ್ತು ಹೆಸರಾಂತ ಲೇಖಕರಾದ ಡಾ. ರಾಜಶೇಖರ ಮಠಪತಿ (ರಾಗಂ) ಅವರು ತಮ್ಮ **"ಗಾಂಧಿ : ಮುಗಿಯದ ಅಧ್ಯಾಯ"** ಎಂಬ ಅಮೂಲ್ಯ ಕೃತಿಯನ್ನು ವಿಶ್ವಾಸದಿಂದ ನಮ್ಮ ಪ್ರಕಾಶನ ಸಂಸ್ಥೆಯಿಂದ ಮುದ್ರಿಸಲು ಅನುಮತಿಸಿದ್ದಾರೆ. ಅವರು ತೋರಿಸಿದ ಈ ಔದಾರ್ಯಕ್ಕೆ ಋಣಿಯಾಗಿದ್ದೇವೆ.

ಎಂ.ಆರ್. ಗಿರಿರಾಜು
ಪ್ರಕಾಶಕರು

ಪರಿವಿಡಿ

* ಮುನ್ನುಡಿ
* ಋಣ
* ಪ್ರಕಾಶಕರ ಮಾತು


೧. ನನ್ನ ನಾಡೆಂಬುದೇನು? / ೧
೨. ನಾನು ಜ್ಯೋತಿಷಿಯಲ್ಲ / ೬
೩. ಕತ್ತು ಕೊಯ್ಯುವವರ ಕೈಗೆ ಹೂ / ೧೧
೪. ಸೀಮಿತರಿಗೆ ಸೀಮಾತೀತ / ೧೫
೫. ನನ್ನನ್ನು ಕೊಂದುಬಿಡು / ೨೧
೬. ಸಾಮರಸ್ಯದ ಚಿಂತೆಯೆ ನನ್ನ ಚಿತೆ / ೨೬
೭. ನನ್ನನ್ನು ದೇವರಾಗಿಸಬೇಡಿ / ೩೨
೮. ನನ್ನದು ಅರಣ್ಯರೋದನ / ೩೭
೯. ಸೇಡು ಮನುಷ್ಯನಿಗೊಪ್ಪುವ ಭಾಷೆಯೆ? / ೪೨
೧೦. ದೇವರೂ ಪರೀಕ್ಷಿಸುತ್ತಿರುವನೇ? / ೪೮
೧೧. ಒಂದಕ್ಕೆ ಸೋತು ಇನ್ನೊಂದನ್ನು ಗೆಲ್ಲಲಾರೆವು / ೫೪
೧೨. ಮಾತುಗಳೆಲ್ಲಾ ಮಾರ್ಗವಾಗಿದ್ದರೆ. . . . / ೬೦
೧೩. ಇಷ್ಟರಲ್ಲೇ ದೇವರು ಕರೆಯಿಸಿಕೊಳ್ಳುತ್ತಾನೆ / ೬೫
೧೪. ಲಾಹೋರಿಗೆ ಹೋಗಲು ಬಿಡು / ೭೦
೧೫. ರೂಪ ರೂಪಗಳನು ದಾಟಿ / ೭೬
೧೬. ಸೈತಾನನ್ನು ತಬ್ಬಿ, ದೇವರನ್ನು ಹೊರದಬ್ಬಿ / ೮೨
೧೭. ನಾನು ರಾಷ್ಟ್ರಪಿತನೇ? / ೮೬

೧೮. ಗಾಂಧಿ ಗೆದ್ದ!!! / ೯೪
೧೯. ಗಾಂಧಿ ಎಂಬ ಜೂಜುಕೋರ / ೯೮
೨೦. ಹಿಂದೂಯಿಸಂ ಎಂದರೇನು? / ೧೦೪
೨೧. ಸಬ್‌ಕೊ ಸನ್ಮತಿ ದೇ ಭಗವಾನ್ / ೧೧೦
೨೨. 'ಬಾ' ಈಗ ನನ್ನೊಂದಿಗಿರಬೇಕಿತ್ತು / ೧೧೬
೨೩. ಸಹನೆಯೋ, ಷಂಡತನವೋ? / ೧೨೧
೨೪. ಈ ಸೀತೆಯರಿಗೆ ಸಾವೆ? / ೧೨೯
೨೫. ರಾಮ, ರಹೀಮ, ರೆಹಮಾನ / ೧೩೫
೨೬. ನಾನೀಗ ಅನುಪಯುಕ್ತ / ೧೪೨
೨೭. ಮರುಳ ಮಹಾತ್ಮ: ಮುಗಿಯದ ಮಾತು / ೧೫೦
೨೮. ಸಂಭಾಲಕ್ಕೆ ಹೋಗಿಬರುವೆ / ೧೫೯
೨೯. ಮರಣ ಮಾಸದ ಮೊದಲ ದಿನ / ೧೬೭
೩೦. ಇನ್ನೆಷ್ಟು ದಿನ ಈ ಬದುಕು? / ೧೭೫
೩೧. ನಾನೇ ರಾಷ್ಟ್ರವಲ್ಲ / ೧೮೩
೩೨. ಬಾಂಬು ಇಟ್ಟವನೂ ಭಗವಂತನೇ? / ೧೯೩
೩೩. ಉರಿಗೆ ತೆರೆಯಿಲ್ಲ / ೨೦೨
೩೪. ಆsssssಹ್ or ಹೇ ರಾಮ್? / ೨೧೧

*** ಗಾಂಧಿ : ಅಂತಿಮ ದಿನಗಳ ಕುರಿತು / ೨೨೫**

*** ಗ್ರಂಥಸೂಚಿ / ೨೬೧**

*** ರಾಗಂ ಸಾಹಿತ್ಯ / ೨೬೩**



ನನ್ನ ನಾಡೆಂಬುದೇನು?

ನಿಟ್ಟುಸಿರು, ನರಳಿಕೆಗಳಿಲ್ಲದ ನನ್ನ ನಾಡ ಕುರಿತು
ಕೇಳು ಪ್ರಿಯ ಸಾಧು,
ರಾಜನೋ-ರಂಕನೋ, ಒಡೆಯನೋ-ಫಕೀರನೊ
ಮೇಲಿನವನೊ- ಕೆಳಗಿನವನೊ, ಎಲ್ಲ ಬರಬೇಕಿಲ್ಲಿ
ನನ್ನ ಈ ನಾಡಲ್ಲಿ
ಭಾರವನು ಬದಿಗಿಟ್ಟು ಇರಲಿ ಇಲ್ಲಿ
ಹಗುರಾಗಿ ಹೋಗಲಿ
ಮತ್ತೆ ಆ ದಡಕಲ್ಲಿ
ನನ್ನ ನಾಡೆಂಬುದೇನು? ನೆಲವಿಲ್ಲ ಅದಕೆ
ಮೇಲಾಗಸವೂ ಇಲ್ಲ,
ಮತ್ತೆ ನಕ್ಷತ್ರಗಳ ಹಂಗಿಲ್ಲ
ನನ್ನೊಡೆಯನ ನಾಡೆಂಬ ದರ್ಬಾರಿನಲಿ
ಸತ್ಯ ಬಿಟ್ಟು ಮತ್ತಿನ್ನೇನೂ ಇಲ್ಲ
ಇಲ್ಲಿ, ಸತ್ಯದ ಉಳಿವಿಗೆ ಹೋರಾಡಬೇಕಿಲ್ಲ

ಕಬೀರನ ಈ ದೋಹೆ ಒಂದು ನೆಮ್ಮದಿಯನ್ನು ನೀಡಿ ನನ್ನ ಇನ್ನೊಂದು ನೆಮ್ಮದಿಯನ್ನು ಹಾಳು ಮಾಡಿತು. ಈ ಸಾಲುಗಳನ್ನು ನೀವು ಹೇಗೆ ಗ್ರಹಿಸಿದಿರೋ ನನಗೆ ಗೊತ್ತಿಲ್ಲ. ನನಗೆ ಮಾತ್ರ ಇದರೊಳಗೆ ಇಡೀ ಭಾರತದ ಸಂಸ್ಕೃತಿ, ಸಾಹಿತ್ಯ, ಆದರ್ಶ ರಾಜಕಾರಣ, ಜೀವನಸಖ್ಯ, ಕಣ್ಣೀರು, ಹುಚ್ಚುತನ ಎಲ್ಲ ಕಾಣಿಸುತ್ತದೆ. ವಿವೇಕಾನಂದ, ನಾಡನ್ನೇ ಉಸುರಿದ ರವೀಂದ್ರನಾಥ ಟ್ಯಾಗೋರ್, ಈ ನಾಡ ಧಿಕ್ಕರಿಸಿಯೂ ನಮ್ಮವನಾದ ಬಂಕಿಮಚಂದ್ರ, ಕವಿ ಮೊಹಮ್ಮದ ಇಕ್ಬಾಲ ಗಾಂಧಿಯನ್ನು ಇಟ್ಟುಕೊಂಡು ಈ ಮೇಲಿನ ಸಾಲುಗಳಿಗೆ ಸಮರ್ಥನೆಯನ್ನು ನೀಡಬೇಕೆಂದು ನನಗನ್ನಿಸುವುದಿಲ್ಲ. ಯಾಕೆಂದರೆ ಮನುಷ್ಯ ತನ್ನೊಳಗೆ ತಾನು ಸ್ವತಂತ್ರನಾದರೆ ಸಾಕು ರಾಷ್ಟ್ರಸ್ವಾತಂತ್ರ್ಯ ಎನ್ನುವುದು ಅದರೊಳಗೆ, ತನ್ನಷ್ಟಕ್ಕೆ ತಾನೆ ಸಿದ್ಧಿಸುತ್ತದೆ ಎನ್ನುವ ಗಾಂಧಿಯ ಚಿಂತನೆ, ಸ್ವಾಭಿಮಾನದ ಅನಂತ ಲೋಕದಲ್ಲಿ ನನ್ನ ದೇಶ ತಲೆ ಎತ್ತಿ ನಿಲ್ಲಲಿ ಎನ್ನುವ ಟ್ಯಾಗೋರರ ಕಲ್ಪನೆಗಳು, ಸ್ಫೂರ್ತಿ ಪಡೆದಿದ್ದು ಕಬೀರನ ಪದ್ಯದ ಈ ಮೇಲಿನ ಸಾಲುಗಳಿಂದಲೇ.

"ಜಗತ್ತಿನಲ್ಲಿ ಯಾವ ಬದಲಾವಣೆಯನ್ನು ನಾವು ನೋಡಬಯಸುತ್ತೇವೆಯೊ, ನಾವು ಪ್ರತಿಯೊಬ್ಬರೂ ಅದೇ ಆಗಬೇಕು" ಎಂದು ವಯಸ್ಸಿನ ೩೫ಕ್ಕೆ ಸತ್ಯಶೋಧಕನಾಗಿ, ೫೨ಕ್ಕೆ 'ಅರೆಬೆತ್ತಲೆ ಫಕೀರನಾಗಿ' ಹೊರಟ ಈ ಗಾಂಧಿಯ ಜಾತ್ಯತೀತ, ಸೀಮಾತೀತ, ಧರ್ಮಾತೀತ ರಾಷ್ಟ್ರದ ಕಲ್ಪನೆಯನ್ನು ನೀವು ಖಂಡಿಸುವುದಾದರೆ ಮೊದಲು ಈ ಕಬೀರನನ್ನು ಧಿಕ್ಕರಿಸಬೇಕು, ಟ್ಯಾಗೋರರ ಕವಿತೆಗಳನ್ನು ಮರೆಯಬೇಕು, ಇಕ್ಬಾಲನನ್ನು ಸ್ಮರಿಸಿಕೊಳ್ಳುವ ಪ್ರಮೇಯ ಇಲ್ಲದಂತಾಗಬೇಕು, ಅಲ್ಲವೆ? ಆದರೆ ಕಾವ್ಯ ವ್ಯವಹಾರದಿಂದ ಹೊರತಾದುದಲ್ಲ, ಈ ದೇಶದ ಮಹಾನ್ ಸಾಧು-ಸಂತ ಪರಂಪರೆ, ಕಬೀರ, ವಿವೇಕಾನಂದ, ಟ್ಯಾಗೋರರು ಹೇಳಿದ್ದನ್ನೇ ನಮ್ಮ ಗಾಂಧಿ ಪುನರುಚ್ಚರಿಸಿದ್ದಾನೆ ಎನ್ನುವುದಾದರೆ ಆತನನ್ನು ಗುಂಡಿಕ್ಕಿ ಕೊಲ್ಲುವ ಕುಸಂಸ್ಕೃತಿಗೆ ನಾವು ಸಾಕ್ಷಿಯಾಗಬಾರದಿತ್ತು. ಭಾರತ ಆ ಮೂಲಕ ಧಾರ್ಮಿಕ ಅಸಹಿಷ್ಣುತೆಗೆ ಉದಾಹರಣೆ ಆಗಬಾರದಿತ್ತು.

ಭಾರತ ಎನ್ನುವುದು ಒಂದು ಧರ್ಮವಲ್ಲ, ಹಿಂದೂ ಎನ್ನುವುದು ಧರ್ಮವಲ್ಲ, ಸಂಸ್ಕೃತಿ. ಗಾಂಧಿಯನ್ನು ಹತ್ಯೆ ಮಾಡುವುದರೊಂದಿಗೆ ಭಾರತ ತನ್ನ ಈ ಸಂಸ್ಕೃತಿಯನ್ನೇ ಹತ್ಯೆ ಮಾಡಿದೆ. ಯಾವ ಮತಾಂಧ ರಾಷ್ಟ್ರಕ್ಕೂ ತಾನೇನು ಕಡಿಮೆಯಲ್ಲ ಎಂದು ಸಾರಿದೆ, ಅಲ್ಲವೆ?

ಇಂದಿಗೆ ತನ್ನ ಬದುಕಿನ ಕೊನೆಯ ಹುಟ್ಟುಹಬ್ಬವನ್ನಾಚರಿಸಿಕೊಂಡು ಗಾಂಧಿ ಉರುಳಿಸಿದ್ದು ಕೇವಲ ಹನ್ನೆರಡು ದಿನಗಳನ್ನು. ಈ ೧೨ ಅಕ್ಟೋಬರ್ ೧೯೪೭ರ,

ಮಂಗಳವಾರ ಆತನ ಆಲೋಚನೆ ಏನಾಗಿದೆ ನೋಡಿ, ಆತನ ಮೈ-ಮನಸ್ಸಿಗೆ ಎಂಥ ಅಸುಖವಿದೆ!

ಅನಾರೋಗ್ಯದಿಂದ ಮೆಲ್ಲಗೆ ಈಗಷ್ಟೇ ಸುಧಾರಿಸಿಕೊಳ್ಳುತ್ತಿದ್ದಾನೆ, ಗುಜರಾತಿನಿಂದ ಪ್ರೀತಿಯ ಗೆಳೆಯ ಸೋಮಲ್‌ದಾಸ್ ನೋಡಲು ಬಂದಿದ್ದಾನೆ. ಆತನ ಉಡಿಯೊಳಗೆ ಜುನಾಘಡ್ ಹೊತ್ತಿ ಉರಿಯುತ್ತಿದೆ. ಪ್ರಾದೇಶಿಕವಾಗಿ ಜುನಾಘಡ್ ಪಾಕಿಸ್ತಾನಕ್ಕೆ ತುಂಬ ಸಮೀಪ, ಆದರೆ ಮಾನಸಿಕವಾಗಿ ಹಿಂದೂಸ್ತಾನಕ್ಕೆ ಸಮೀಪ. ಎಲ್ಲಕ್ಕೂ ಮಿಗಿಲಾಗಿ ಇದು 'ವಿಶ್ವವೇ ಒಂದು ರಾಷ್ಟ್ರ' ಎನ್ನುವ ಪರಿಕಲ್ಪನೆಯನ್ನು ಕೊಟ್ಟ ಗಾಂಧಿ ಎನ್ನುವ ಮನುಷ್ಯನ ಪ್ರಾಂತ್ಯದ ಪ್ರಶ್ನೆ. ಭಾರತದ ಎಲ್ಲ ಪ್ರಾಂತ್ಯಗಳು ಭಾರತ ದೇಶ ಎನ್ನುವ ಪರಿಕಲ್ಪನೆಯನ್ನು ಒಪ್ಪಿಯೂ ತನ್ನದೇ ಜುನಾಘಡ್ ಅದನ್ನು ವಿರೋಧಿಸುವುದೆಂದರೇನು? ಪಟೇಲರಿಗೆ ಈ ಗಾಂಧಿ ಕೊಡಬಹುದಾದ ಉತ್ತರವೇನು? ಮನೆ ಗೆಲ್ಲದವನು ಮಾರು ಗೆಲ್ಲುವ ಮಾತಿದು.

ಇಲ್ಲಿ ಒಂದು ಸಣ್ಣ ರಾಜಕೀಯ ತೊಡಕಿದೆ. ಜುನಾಘಡ್ ಬಹುಸಂಖ್ಯಾತ ಹಿಂದೂಗಳನ್ನು ಹೊಂದಿದ್ದರೂ ನವಾಬನ ಆಳ್ವಿಕೆಗೆ ಒಳಪಟ್ಟ ಒಂದು ಪ್ರಾಂತ್ಯ. ಇಲ್ಲಿಯ ಪ್ರಜೆಗಳು ಭಾರತವನ್ನು ಒಪ್ಪಿಕೊಂಡಿದ್ದಾರೆ. ಆದರೆ ನವಾಬ ಮಾತ್ರ ಪಾಕಿಸ್ತಾನವನ್ನು ಸೇರಿಕೊಳ್ಳಬೇಕೆಂದು ಬಯಸುತ್ತಾನೆ. ಇದೂ ದೊಡ್ಡ ಪ್ರಶ್ನೆಯಲ್ಲ. ಪಾಕಿಸ್ತಾನ ಮತ್ತು ಹಿಂದೂಸ್ತಾನ ಎನ್ನುವ ಆಲೋಚನೆಗಳನ್ನೇ ಒಪ್ಪಿಕೊಳ್ಳದ, ಕಬೀರನ ದಾರಿಯಲ್ಲಿರುವ ಗಾಂಧಿ ಎನ್ನುವ ಫಕೀರ ಮುಂದೆ ಏನು ಮಾಡಬೇಕು? ಜಟಿಲ ಪ್ರಶ್ನೆಯನ್ನು ಗೆಳೆಯ ಸೋಮಲ್‌ದಾಸ್ ಈ ಮುಂಜಾನೆ ತಂದಿಟ್ಟಿದ್ದಾನೆ.

ರಾಜಕಾರಣಿಯೊಬ್ಬ ಇಂತಹ ಪ್ರಶ್ನೆಗಳನ್ನು ಭಯಾನಕವಾಗಿ ನಿಭಾಯಿಸಬಲ್ಲ. ಆತನಿಗೆ ಸೈನ್ಯ, ಯುದ್ಧ, ಅಧಿಕಾರ ಏನೆಲ್ಲ ಶಕ್ತಿ ಇದೆ. ಆದರೆ ಸಹಾಯವಿಲ್ಲದ ಸತ್ಯದಲ್ಲಿ ನರಳುವ ಗಾಂಧಿ ಅದೇನು ಮಾಡುವನೋ ಆತನಿಗೇ ಗೊತ್ತು. "ಯಾಕೆಂದರೆ ಕಡುಬಡವನೂ ಸಹ ಭಾರತ ನನ್ನ ದೇಶ, ಅದನ್ನು ಕಟ್ಟುವುದರಲ್ಲಿ ಮಾತಿಗೂ ಬೆಲೆಯಿದೆ ಎನ್ನುವಂಥ ದೇಶವನ್ನು ಕಟ್ಟಲು ನಾನು ಶ್ರಮಿಸುತ್ತೇನೆ" ಎಂದುಕೊಂಡು ಹೊರಟವ ಈ ಗಾಂಧಿ.

ಈಗ ಆತನ ಮುಂದಿರುವ ಪ್ರಶ್ನೆ ನೆಲಕ್ಕಿಂತಲೂ ಮುಖ್ಯ ನಿರಾಶ್ರಿತರದ್ದು. ಈ ದಿನದ ಬಿರ್ಲಾ ಹೌಸಿನ ತನ್ನ ಪ್ರಾರ್ಥನೆಯ ನಂತರ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ವಿಚಾರವೊಂದಕ್ಕೆ ಆತ ಪ್ರಾಶಸ್ತ್ಯ ನೀಡಿದ್ದಾನೆ. ಬುಟ್ಟಿ, ಬಿದಿರ ಹೆಣಿಕೆ, ಗೊಂಬೆ, ಮಡಿಕೆಗಳಿಂದಲೇ ಬದುಕು ಕಟ್ಟಿಕೊಂಡ ಮುಸ್ಲಿಂ ಸಮುದಾಯವೊಂದು ಗಾಂಧಿಯ ಮುಂದೆ ಹಾಸಿಗೆ ಹೊದಿಕೆಗಳ ಒಂದು ದೊಡ್ಡ ರಾಶಿಯನ್ನೇ ಚೆಲ್ಲಿದೆ. 'ಪಶ್ಚಿಮ ಪಾಕಿಸ್ತಾನದಿಂದ ನಿರಾಶ್ರಿತರಾಗಿ ಬಂದ ಪಂಜಾಬಿ

ಹಿಂದೂಗಳಿಗೆ ಇದು ತಮ್ಮ ಸಣ್ಣ ಸೇವೆ ಎಂದು ಅವರು ಇವುಗಳನ್ನು ತಂದು ಗಾಂಧಿಗೆ ಅರ್ಪಿಸಿದ್ದಾರೆ.'

ಈಗ ಈ ಕ್ಷಣ ಗಾಂಧಿ ನೆಲದ ಮೇಲಿಲ್ಲ ಬಿಡಿ. ನೂರಾಇಪ್ಪತ್ತೈದು ವರ್ಷ ಈ ದೇಶದಲ್ಲಿ ನಾನು ಯಾವ ಪುರುಷಾರ್ಥಕ್ಕಾಗಿ ಬದುಕಬೇಕು? ಎಂದು ಆಗಾಗ ನೊಂದ ಗಾಂಧಿಯ ವಯಸ್ಸು ಈಗ ನೂರಾಎಪ್ಪತ್ತೈದನ್ನೂ ಕ್ರಮಿಸುವ ಆಲೋಚನೆ ಮಾಡಿರಬಹುದು. ಅವನೇ ಬರೆದುಕೊಂಡಿದ್ದಾನೆ, "At one time they had considered me to be an enemy of Muslims. But now, they were convinced that I was a friend of all." ಹಾಗೆಯೆ ಇಂದು ಹಿಂದುಗಳಿಗಾಗಿ ಇಷ್ಟೆಲ್ಲ ತಂದಿರುವ ಮುಸ್ಲಿಂ ಬಂಧುಗಳು ತನ್ನನ್ನು ಗೆಲ್ಲಿಸಿದರೆಂದು ಖುಷಿಯಾಗುತ್ತಾನೆ ಗಾಂಧಿ.

ಗಾಂಧಿಯ ಈ ಆನಂದದ ಸಾಲುಗಳಲ್ಲಿ ಕಬೀರ ಮಾತಾಡುತ್ತಿದ್ದಾನೆ, ಈ ದೇಶದ ಸಂಸ್ಕೃತಿ, ಸನಾತನತೆ ಮಾತನಾಡುತ್ತಿದೆ. ತಾನೊಬ್ಬ ಸನಾತನ ಹಿಂದೂ ಎಂದು ಗಾಂಧಿ ಹೇಳಿದ್ದು ಈ ಅರ್ಥದಲ್ಲಿ. ಈ ವಿಶಾಲತೆಯ ಕನಸಿನ(?) ಸಾಗರದಲ್ಲಿ. ಇಂದಿನ ತನ್ನ ಪ್ರಾರ್ಥನೆ ಮುಗಿದ ನಂತರ ಗಾಂಧಿ, ಹಿಂದೂ-ಸಿಖ್-ಮುಸ್ಲಿಂರ ಐಕ್ಯತೆಯನ್ನು ಕುರಿತು ಮತ್ತೆ ಪತ್ರಕರ್ತರ ಮುಂದೆ ಮಾತನಾಡಿದ, "The Newspapers should give proper publicity to such healthy heart-warming incidents. Publishing details of ghastly crimes only excites the dangerous spirit of retaliation and revenge."

ಪದ ನಿಮಿತ್ತದ ನಮ್ಮ ಮಾಧ್ಯಮಗಳು, ಜಯಂತಿ ಮತ್ತು ತಿಥಿಯನ್ನು ಕುರಿತು ಪುಂಖಾನುಪುಂಖ ಪುಟಗಳನ್ನು ಪ್ರಕಟಿಸುವ ಪತ್ರಿಕೆಗಳು, ಗಾಂಧಿಯ ಈ ಮೇಲಿನ ಮಾತುಗಳನ್ನು ಅಂದಿನಿಂದಲೇ ಪಾಲಿಸಿದ್ದರೆ ಪ್ರಪಂಚದ ಚಿತ್ರಣವೇ ಭಿನ್ನವಾಗಿರುತ್ತಿತ್ತು. ಯೂರೋಪಿನ ಪ್ರಚಾರ ಮತ್ತು ಉದ್ದಿಮೆಯ ಮಿತಿಗೆ ಒಳಪಟ್ಟ ಭಾರತದ ಮಾಧ್ಯಮಗಳಲ್ಲಿ ಗಾಂಧಿಯ ಈ ಕನಸು ಅದೆಷ್ಟು ಇಂದು ಅನುರಣಿಸುತ್ತಿದೆ ಎನ್ನುವುದನ್ನು ನೀವೇ ಹೇಳಬೇಕು.

ಈ ದಿನ ಗಾಂಧಿಗೆ ಇನ್ನೊಂದು ಚಿಂತೆ. ಉರ್ದು ಜನಜನಿತವಾಗಿರುವ ರಾಜ್ಯಗಳಲ್ಲಿ ಹಿಂದಿ ಸರ್ಕಾರಿ ಭಾಷೆಯಾಗಿ ಹೇರಿಕೆಯಾಗುವುದು ಆತನಿಗೆ ಇಷ್ಟವಿಲ್ಲ. ಉರ್ದು ಬಳಸುವ ಬಹುಸಂಖ್ಯಾತರು ಗಾಂಧಿಯ ಮುಂದೆ ಪ್ರಶ್ನೆಯನ್ನಿಟ್ಟಿದ್ದಾರೆ. ಅವರಿಗೆಲ್ಲಾ ನಿಸ್ಸಹಾಯಕನಾದ ಗಾಂಧಿಯ ಉತ್ತರವಿಷ್ಟೆ, "Even though I have no control over the government to withdraw the circular, I will try

my best.” ಇದು ಅಕ್ಷರ ಸಹ ಸತ್ಯ. ಅಂತಿಮ ದಿನಗಳಲ್ಲಿ ಆತ ಒಂಟಿಯಾಗಿದ್ದ ಎನ್ನುವುದಕ್ಕೆ ಆತನ ನಿರಂತರ ಪತ್ರವ್ಯವಹಾರಗಳು, ಸಾರ್ವಜನಿಕ ಚರ್ಚೆಗಳು ಸಾಕಷ್ಟು ಪುರಾವೆಗಳನ್ನು ಒದಗಿಸುತ್ತವೆ. ಭಾರತದ ಭಾಷಾ ನೀತಿಯ ವಿಷಯದಲ್ಲೂ ಅಷ್ಟೆ. ಭಾಷೆಯ ಬಿಕ್ಕಟ್ಟು ಭಯಾನಕವಾಗಿತ್ತು. ಬರೀ ಧಾರ್ಮಿಕ ಕಾರಣಗಳಿಗಾಗಿ ಮಾತ್ರವಲ್ಲ, ಭಾಷೆಗಾಗಿಯೂ ಜನರು ತಾವು ಶತಮಾನಗಳಿಂದ ಸಂಸಾರ ಮಾಡಿದ್ದ ನೆಲಗಳನ್ನು ಬಿಡಬೇಕಾಗುತ್ತದೆ ಎಂಬ ಭೀಕರ ಸತ್ಯ ಗಾಂಧಿಗೆ ಗೊತ್ತಿತ್ತು.

ಆದರೆ ಆತನನ್ನೂ ಮೀರಿಯೂ ಇಂಥ ಬದಲಾವಣೆಗಳಿಗೆ ಕಾರಣಗಳೇನು? ಉತ್ತರವಿದೆ, ವರ್ತಮಾನದ ಅವಶ್ಯಕತೆಗಳು ರಾಜಕೀಯದ ದಾಳವಾಗಿ ಮಾರ್ಪಟ್ಟಾಗ ಹೃದಯದ ಕೂಗು ಸಾಯುತ್ತದೆ. ಈ ಎಲ್ಲ ಮೇಲಿನ ಪ್ರಶ್ನೆಗಳಿಗೆ ಗಾಂಧಿಯಲ್ಲ, ನಮ್ಮ ರಾಜಕೀಯ ಮಾತ್ರ ಉತ್ತರವಾಗುತ್ತದೆ.

ತನ್ನ ಸಾವಿನ ಮೂರು ತಿಂಗಳ ಮುಂಚಿನ ಗಾಂಧಿಯ ಉಲ್ಲೇಖವೊಂದು ನನ್ನನ್ನು ಬಹಳ ಕಾಡಿದೆ. ಮನುಷ್ಯರಾದವರೆಲ್ಲರನ್ನೂ ಕಾಡುವ ಮಾತೇ ಅದು. ಆತ ಹೇಳುತ್ತಾನೆ, ಮನುಷ್ಯ ತನ್ನ ಆಲೋಚನೆಗಳನ್ನು ತನಗೇ ಘೋಷಿಸಿಕೊಳ್ಳಬಾರದ ಒಂದು ಘಟ್ಟ ಜೀವನದಲ್ಲಿ ಬರುತ್ತದೆಯಂತೆ. ಆ ಆಲೋಚನೆಗಳು ಕ್ರಿಯೆಗಳಾಗಿಯೂ ಮಾರ್ಪಡುವ ಅವಶ್ಯಕತೆಗಳಿಲ್ಲ ಎನ್ನುತ್ತಾನೆ ಗಾಂಧಿ. ಅವುಗಳ ಪಾಲಿಗೆ ಅವು ವಿಚಾರಗಳಷ್ಟೇ ಆಗಿರಲಿ ಸಾಕು, ಅವು ಸುವಿಚಾರಗಳಾಗಿದ್ದರೆ, ಸುಸಂಕಲ್ಪಗಳಾಗಿದ್ದರೆ ತಮ್ಮಷ್ಟಕ್ಕೇ ಶಕ್ತಿಶಾಲಿಗಳಾಗಿರುತ್ತವೆ. ಆದರೆ ಅಂತಹ ಒಂದು ಶಕ್ತಿ, ಮಾರ್ಪಾಡು, ತನ್ನಲ್ಲಿ ಇನ್ನೂ ಸಾಧ್ಯವಾಗಿಲ್ಲ ಎಂದು ಗಾಂಧಿ ನಮ್ರವಾಗಿ ಹೇಳಿಕೊಂಡಿದ್ದಾನೆ. ಸ್ವದೌರ್ಬಲ್ಯಗಳಿಂದ ಹೊರಬಾರದ ಹೊರತು ಆಲೋಚನೆಗಳೇ ಶಕ್ತಿಯಾಗಿ ಮಾರ್ಪಡುವುದು ಸಾಧ್ಯವಿಲ್ಲ. ಆತ್ಮಾಭಿಮಾನವನ್ನೇ ಮಾರಿಕೊಂಡ ಈ ವರ್ತಮಾನಕ್ಕೆ ಇವೆಲ್ಲ ಆಲೋಚನೆಗಳೇ ಅಲ್ಲ ಬಿಡಿ. ಇದು ನಾವೇ ಆಹ್ವಾನಿಸಿಕೊಂಡ ದುರಂತ.

❑



ನಾನು ಜ್ಯೋತಿಷಿಯಲ್ಲ

ಜನನಾಯಕನೊಬ್ಬ ತನ್ನ ದೌರ್ಬಲ್ಯಗಳ ಎಚ್ಚರಿಕೆಯಲ್ಲಿ ಬದುಕಬೇಕು. ಆತ ಕಾಯಾ, ವಾಚಾ, ಮನಸಾ ಶುದ್ಧನಾಗಿರಬೇಕು ಎಂದು ಬಲವಾಗಿ ನಂಬಿದ್ದ. ಗಾಂಧಿ ಸಾವನ್ನೇ ಮೈಮೇಲೆಳೆದುಕೊಂಡ. ಖುರಾನ್‌ನ ಒಂದು ಹೇಳಿಕೆ– “ನಂಬಿಗಸ್ತರೆ, ಯಾವಾಗಲೂ ನ್ಯಾಯಪರವಾಗಿರಿ, ದೈವಸಾಕ್ಷಿಗಳಾಗಿ ಅದು ನಿಮಗೆ ನಿಮ್ಮ ತಂದೆತಾಯಿಯರಿಗೆ ಮತ್ತು ಬಂಧುಗಳಿಗೆ ವಿರುದ್ಧವಾದರೂ ಸರಿಯೆ.” ಇಂಥ ಗಾಂಧಿಯ ಬದುಕಿನಲ್ಲಿ ೧೯೩೧ರ ಯೂರೋಪಿನ ಭೇಟಿಯ ಸಂದರ್ಭದಲ್ಲಿ ಒಂದು ವಿಚಿತ್ರ, ವಿನೋದದ ಘಟನೆ ಘಟಿಸಿ ಹೋಗಿದೆ.

ಈತ ವಾಚಾಳಿ ಚರ್ಚಿಲ್‌ನ ಟೀಕೆ (Half Naked Fakir)ಯನ್ನೇ ಪೂರಕವಾಕ್ಯವಾಗಿ ತೆಗೆದುಕೊಂಡು ಗಾಂಧಿ ಅರೆನಗ್ನ ಫಕೀರನಾಗಿ ಯೂರೋಪಿಗೆ ಹೋದ.

ನಿತ್ಯ ಧ್ಯಾನ, ನಿಸರ್ಗ ಚಿಕಿತ್ಸೆ, ಪ್ರಾರ್ಥನೆಯಲ್ಲಿ ಯಥಾಪ್ರಕಾರ ಮುಳುಗಿಕೊಂಡ. ಹೀಗೆ ಆಧ್ಯಾತ್ಮಿಕವಾಗಿ ತನ್ನಷ್ಟಕ್ಕೇ ತೊಡಗಿಸಿಕೊಂಡಿದ್ದ ಗಾಂಧಿ ಯೂರೋಪಿನ ಕೆಲವು ಶ್ರೀಮಂತರಿಗೆ ಭವಿಷ್ಯ ನುಡಿಯುವ, ಮಾಟ ಮಾಡುವ, ಜಾತಕ ಹೇಳುವ, ಜೂಜಾಟದಲ್ಲಿ ಗೆಲುವಿನ ದಾರಿ ತೋರಿಸುವ ಒಬ್ಬ ಜ್ಯೋತಿಷಿಯಂತೆ ಕಾಣಿಸಿದ! ಒಬ್ಬ ಯೂರೊಪಿಯನ್ನನಂತೂ ಗಾಂಧಿಯ ಬೆನ್ನು ಬಿದ್ದ. ರೇಸಿನಲ್ಲಿ ವಿಪರೀತ ದುಡ್ಡು ಹಾಕಿದ್ದ, ಹಲವು ಬಾರಿ ಸೋತು ಕಂಗಾಲಾಗಿದ್ದ ಆತ ತನಗೆ ಗಾಂಧಿಯ ಭೇಟಿ ಮಾಡಿಸಬೇಕೆಂದು ಗಾಂಧಿಯ ಅನುಯಾಯಿಗಳಿಗೆ ದುಂಬಾಲು ಬಿದ್ದ. 'ಅಯ್ಯಾ ಸ್ವಾಮಿ, ಗಾಂಧೀಜಿ ಒಬ್ಬ ಸಮಾಜ ಸೇವಕ; ಅವರು ಭವಿಷ್ಯ, ಕುಂಡಲಿ, ಜಾತಕಗಳ ಪಟಗಳನ್ನು ನೇತು ಹಾಕಿಕೊಂಡು ಕುಳಿತ ವ್ಯಕ್ತಿಯಲ್ಲ' ಎಂದು ಎಷ್ಟು, ಎಷ್ಟು ಆಶ್ರಮವಾಸಿಗಳು ಜೋರಾಗಿ ಹೇಳಿದರೋ ಅಷ್ಟಷ್ಟು ಆತ ತಾನು ಕೊಡುತ್ತೇನೆ ಎನ್ನುವ ಹಣವನ್ನು ದ್ವಿಗುಣಗೊಳಿಸುತ್ತಾ ಹೋದ. ಈ ಗಾಂಧಿ ಒಬ್ಬ ಗುಜರಾತಿ, ವ್ಯಾಪಾರಿ, ಧನಮೋಹಿ ಬನಿಯಾ ಅಲ್ಲದೆ ಮತ್ತೇನೂ ಅಲ್ಲ, ಚಿಕ್ಕಮಕ್ಕಳು, ಹೆಣ್ಣು ಮಕ್ಕಳು ಹೀಗೆ ಗಾಂಧಿ ಎಲ್ಲರಿಂದ ಹಣ, ಚಿನ್ನ ಕೇಳುತ್ತಿದ್ದ ಹಣದಾಹಿಯಾಗಿದ್ದ ಎನ್ನುವ ಭಾರತೀಯರು ಈ ಘಟನೆಯಿಂದ ತಿಳಿಯಬೇಕಾದುದು ಬಹಳಷ್ಟಿದೆ. ಅಂದು ಗಾಂಧಿ ಒಂದು ಸುಳ್ಳು ಹೇಳಿದ್ದರೆ ಆತ ಅದೆಷ್ಟು ನೀಡಿ ಹೋಗುತ್ತಿದ್ದನೊ, ಹೀಗೆ ಹಣ ಗಳಿಸುವ ಅವಕಾಶ ಗಾಂಧಿಗೆ ನಟಲ್‌ದ ದಿನಗಳಿಂದಲೂ ಇತ್ತು.

ತನ್ನ ಸುತ್ತಲೂ ನಿತ್ಯ ಜನರು ಸೇರುತ್ತಾರೆ ಎಂದು ಗಾಂಧಿಗೆ ಚೆನ್ನಾಗಿ ಗೊತ್ತಿತ್ತು. ಇದೆಲ್ಲವೂ ಯಾವುದೋ ದೈವೀ ಕೃಪೆಯಿಂದ ಪ್ರಾಪ್ತವಾದುದಲ್ಲ ಎನ್ನುವುದೂ ಆತನಿಗೆ ಗೊತ್ತಿತ್ತು. ಬುದ್ಧನ ಮಾತಿನಲ್ಲಿ ಹೇಳುವುದಾದರೆ ಇದೆಲ್ಲವೂ ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಕ್ರಿಯೆಯಿಂದ ಆತನಿಗೆ ಪ್ರಾಪ್ತವಾಗಿತ್ತು. ಜಾತ್ರೆ, ಮಾತಿನ ಜಾತ್ರೆಯಿಂದ ಕ್ರಮೇಣ ದೂರವಾಗುತ್ತಿದ್ದ ಗಾಂಧಿ ಜನರನ್ನು ಇದೇ ಸಮ್ಯಕ್ ಕಡೆಗೆ ಕರೆದುಕೊಂಡು ಹೊರಟಿದ್ದ.

ಇಂದು ಅಕ್ಟೋಬರ್ ೧೬, ನೌಖಾಲಿಯಿಂದ ಅಮ್ತುಸ್‌ಸಲಾಂಳ ಪತ್ರ ಬಂದಿದೆ. ನಿನ್ನೆಯಷ್ಟೇ ಆಕೆಯ ಸಹೋದರರು ಪೂರ್ವ ಪಾಕಿಸ್ತಾನವನ್ನು ಸುರಕ್ಷಿತವಾಗಿ ತಲುಪಿದ್ದಾರೆ. ನೀನು ನೆಮ್ಮದಿಯಾಗಿರು ಎಂದು ಗಾಂಧಿ ಇಂದು ಉತ್ತರಿಸುತ್ತಿದ್ದಾನೆ. ಒಂದೆಡೆ ಪೂರ್ವ ಬೆಂಗಾಲಿನಿಂದ ಕಲ್ಕತ್ತೆಗೆ ನುಸುಳುವ ನಿರಾಶ್ರಿತರ ಸಂಖ್ಯೆ ನಿರಂತರ ಹೆಚ್ಚಾಗುತ್ತಲೇ ಇದೆ. ಪಂಡಿತ್ ಸುಂದರಲಾಲ್ ವಲಸಿಗರ ಈ ಪ್ರಶ್ನೆಯನ್ನೊಡ್ಡಿ ಗಾಂಧಿಯ ಮುಂದೆ ಕೈಚೆಲ್ಲಿ ಕುಳಿತಿದ್ದಾನೆ. ಹಿಂದೂಗಳನ್ನು ಒಕ್ಕಲೆಬ್ಬಿಸಿ ಪಾಕಿಸ್ತಾನದ ಭೂ ಪ್ರದೇಶವನ್ನು ಅಕ್ರಮವಾಗಿ ಹಿಡಿತಕ್ಕೆಳೆದುಕೊಳ್ಳಬೇಕೆನ್ನುವ ಜಿನ್ನಾರ ದುರಾಸೆ ಇದರ ಹಿಂದಿದೆ ಎಂದು ಗೊತ್ತಿದ್ದೂ ಗಾಂಧಿ ಉತ್ತರವಿಲ್ಲದಂತಾಗಿದ್ದಾನೆ. ಪಂಡಿತ್ ಸುಂದರಲಾಲ್‌ನನ್ನು

ಕೂಡ್ರಿಸಿಕೊಂಡು, ನಾವು ಕರೆಯುವ ಈ ರಾಷ್ಟ್ರಪಿತ ಗಾಂಧಿ ತೋಡಿಕೊಳ್ಳುವ ಅಸಹಾಯಕತೆಯ ಈ ಸಾಲುಗಳನ್ನು ಓದಿ–

"What can I do? You must realize that I have very little power. The governments are not in my hands and I do not want to interfere in these affairs. I understand my limitations." ಗಮನಿಸಿ, ಎಲ್ಲಿ ಅನೈತಿಕ ರಾಜಕಾರಣವಿದೆಯೋ ಅಲ್ಲಿ ಗಾಂಧಿಯಿಲ್ಲ. ತತ್ವಾಧಾರಿತ ರಾಜಕಾರಣವನ್ನು ಗಾಂಧಿಯನ್ನು ಹೊರತುಪಡಿಸಿ ಊಹಿಸಲು ಸಾಧ್ಯವಿಲ್ಲ. ಇಷ್ಟನ್ನು ಹೇಳಿ, ಇಲ್ಲಿಂದ ತಟ್ಟನೆ ಎದ್ದು ಹೋಗುವ ಗಾಂಧಿ ಇದೇ ದಿನದ ಸಾಯಂಕಾಲದ ಪ್ರಾರ್ಥನೆಯಲ್ಲಿ ತುಂಬಾ ಖುಷಿಯಾಗಿದ್ದಾನೆ. ಕರ್ನಾಟಕದ ದಿವಾನ್ ಸರ್.ಎ.ರಾಮಸ್ವಾಮಿ ಮುದಲಿಯಾರ್ ಪತ್ರ ಬರೆದು ಮೈಸೂರು ರಾಜ್ಯ ಭಾರತದ ಒಕ್ಕೂಟವನ್ನು ಸೇರುವ ವಿಚಾರವನ್ನು ತಿಳಿಸಿದ್ದಾರೆ. ಗಾಂಧಿಗೆ ಇದಕ್ಕಿಂತಲೂ ಸಂತಸದ ವಿಷಯ ಮತ್ತೊಂದಿಲ್ಲ. ಒಕ್ಕೂಟ, ಒಕ್ಕಟ್ಟು ಇದು ಆತನ ಒಟ್ಟು ಹೋರಾಟದ ಮುಖ್ಯ ಮಂತ್ರ. ಬ್ರಿಟಿಷ್ ಸಾಮ್ರಾಜ್ಯದ ನಿರ್ಗಮನದ ಮರುಕ್ಷಣ ಆತ ಪ್ರಪಂಚಕ್ಕೆ ತೋರಿಸಬೇಕಾದುದು ಅದನ್ನೇ. ಭಾರತೀಯರು ಆಳಿಸಿಕೊಳ್ಳಲು ಯೋಗ್ಯರು, ಆಳಲು ಅಲ್ಲ ಎನ್ನುವ ಮಾತನ್ನು ಸುಳ್ಳಾಗಿಸಬೇಕಿದೆ ಆತನಿಗೆ. ಆದರೆ, ದುರ್ದೈವ ಈ ಗಾಂಧಿ ಸೋಲುವುದು ಮತ್ತು ಗೆಲ್ಲುವುದು ಕೂಡ ಅದರಲ್ಲಿಯೇ.

ಐಕ್ಯತೆಯ ಈ ವಿಚಾರಕ್ಕಾಗಿ ಮುದಲಿಯಾರರನ್ನು, ಮೈಸೂರು ಅರಸರನ್ನು ಅಭಿನಂದಿಸಿದ ಗಾಂಧಿ ಮರುಕ್ಷಣವೇ ಇಂದು ಆಲೋಚಿಸುವುದು ಬೇರೆ ವಿಚಾರವನ್ನು. ಕಳೆದ ಅನೇಕ ದಿನಗಳಿಂದ ಆತ ಪ್ರಾರ್ಥನೆ ನಡೆಸುವ ಸ್ಥಳವಾದ ಬಿರ್ಲಾಹೌಸ್‌ನ ತೋಟದಿಂದ ಯಾರೋ ನಿರಂತರ ಹಣ್ಣುಗಳನ್ನು ಕದಿಯುತ್ತಿದ್ದಾರೆ. ಗಾಂಧಿಯೊಂದಿಗೆ ಪ್ರಾರ್ಥನೆಗೆ ಬಂದವರು ಕಳ್ಳರು, ಖದೀಮರಾಗಬಾರದೆನ್ನುವುದು ಆತನ ಕಾಳಜಿ. ಹಾಗೆಯೇ, ಸಾರ್ವಜನಿಕ ಸೇವೆಯಲ್ಲಿರುವ ಅಧಿಕಾರಿಗಳು ಸರಕಾರದ ಕಣ್ಣಿಗೆ ಮಣ್ಣೆರಚಿ ತಮ್ಮ ಸಂಸಾರದ ಪಾಕೀಟುಗಳನ್ನು ತುಂಬಿಸಿಕೊಳ್ಳಬಾರದೆನ್ನುವುದೂ ಆತ ಹೇಳಬೇಕಾದ ವಿಚಾರ. ಪಾಪಿಯ ಧನ ಪ್ರಾಯಶ್ಚಿತಕ್ಕೇ ಸಲ್ಲುವುದು ಇದು ಗಾಂಧಿಯ ಬಲವಾದ ನಂಬಿಕೆ. ಜನರ ಪಾರದರ್ಶಕತೆಯನ್ನು ಪರೀಕ್ಷಿಸಲು ತಾನೊಬ್ಬನೇ ಸಾಕಾಗುವುದಿಲ್ಲ ಮತ್ತು ಇಂತಹ Inspection ಒಳ್ಳೆಯದೂ ಅಲ್ಲ ಎಂದೇ ಆತನ ವಿಚಾರ. "God has not given me the power to be everywhere at once. I am a human being and a helpless one at that. But I can certainly make my voice reach them and that is what I am doing" – ಎಂದು ಸುಮ್ಮನಾಗುತ್ತಾನೆ.

೧೭ ಅಕ್ಟೋಬರ್, ಶುಕ್ರವಾರ ಅರ್ಧ ದಿನದವರೆಗೆ ಗಾಂಧಿಯೊಬ್ಬನೇ ಇದ್ದಾನೆ. ಆತನ ಆರೋಗ್ಯ ಅಷ್ಟಕ್ಕಷ್ಟೇ. ಚಳಿಗಾಲ, ಮೈ ಮರಗಟ್ಟಿಸುವ ಶೀತಲ ಗಾಳಿ, ಚಳಿ

ಹೆಚ್ಚಾದಷ್ಟೂ ವಿಷಣ್ಣವಾಗುತ್ತಿರುವ ನಿರಾಶ್ರಿತರ ಸ್ಥಿತಿ. ಭವ್ಯ ಭಾರತದ ರಾಜಧಾನಿ ದೆಹಲಿ ಈಗ ಒಂದು ದೊಡ್ಡ ಸಾವಿನ ಕೂಪ. ಇಂಥ ಕಡು ಚಳಿಯಲ್ಲಿಯೂ ರಾಷ್ಟ್ರಪಿತ ಬೆಂಕಿಯೊಳಗೆ ಬಿದ್ದಂತೆ ಒದ್ದಾಡುತ್ತಿದ್ದಾನೆ. ಆತನ ಈ ಉರಿಗೆ ಒಂದು ಬಕೀಟು ನೀರು ಹುಯ್ಯುವ ಒಬ್ಬ ನರನೂ ಇಲ್ಲವೇ? ಇದು ಯಕ್ಷ ಪ್ರಶ್ನೆ. ಈ ಹಿಂದಿನ ಆತನ ಮೊಗದ ಮೇಲಿನ ಮಂದ ನಗೆ, ಹಾಸ್ಯಪ್ರಜ್ಞೆ ಮತ್ತಿನ್ನೆಂದೂ ಸಾಧ್ಯವೇ ಇಲ್ಲ ಎನ್ನುವಷ್ಟು ಆತ ಈ ದಿನ ಕಳಾಹೀನನಾಗಿದ್ದಾನೆ.

ವಿದೇಶದಲ್ಲಿರುವ ಕವಿ ಗೆಳೆಯ ಚಮನ್ ಗಾಂಧಿಗೆ ಪತ್ರ ಬರೆದಿದ್ದಾನೆ. ಭಾರತದ ರಾಜಕೀಯ ವಿದ್ಯಮಾನಗಳ ಕುರಿತು ಗಾಂಧಿಗೆ ಕುತೂಹಲದಿಂದ ಅನೇಕ ಪ್ರಶ್ನೆಗಳನ್ನು ಕೇಳಿದ್ದಾನೆ. ವಿಚಿತ್ರವೆಂದರೆ, ಈ ಅಲೆಮಾರಿ ಮುದುಕ ಕಲ್ಕತ್ತೆಯಿಂದ ನೌಖಾಲಿ, ನೌಖಾಲಿಯಿಂದ ದೆಹಲಿ, ದೆಹಲಿಯ ಕೊಳಗೇರಿಯಿಂದ ಬಿರ್ಲಾಹೌಸ್ ಹೀಗೆ ಅಲೆಯುವುದರಲ್ಲಿ ದಿನಗಳು ಉರುಳಿ, ಗೆಳೆಯನ ಪತ್ರ ಕೈಸೇರಬೇಕಾದರೆ ತಿಂಗಳುಗಳೇ ಉರುಳಿ ಹೋಗಿವೆ. ಅದು ಅಂತಿಮವಾಗಿ ಗಾಂಧಿ ಕೈ ಸೇರಿದಾಗ ಲಕೋಟಿಯ ಮೇಲ್ಮುಖವೆಲ್ಲಾ ಬರೀ ವಿಳಾಸಗಳೇ. ಕೈ ಸೇರಿದ ಲಕೋಟಿಯನ್ನು ಬಿಚ್ಚುವಾಗ ಗಾಂಧಿ ನಗುತ್ತಿದ್ದ. ಆದರೆ ಗೆಳೆಯ ಕೇಳಿದ ಯಾವ ಪ್ರಶ್ನೆಗೂ ಒಂದು ಸಮರ್ಥ ಉತ್ತರ ಈತನ ಬಳಿ ಇರಲಿಲ್ಲ.

"ನೀನು ಬಹಳ ದೂರ ಇದ್ದೀಯಾ. ಇಲ್ಲಿಯ ವರ್ತಮಾನ ನೀನು ಊಹಿಸಲೂ ಸಾಧ್ಯವಿಲ್ಲ. ನನ್ನ ಆರೋಗ್ಯವೂ ಅಷ್ಟಕಷ್ಟೆ. ಕುಳಿತಲ್ಲಿ ನಿಂತಲ್ಲಿ ಕಾಡುವ ಕೆಮ್ಮು. ಸಕಾಲಕ್ಕೆ ನಿನ್ನ ಪತ್ರಗಳಿಗೆ ಉತ್ತರಿಸದೇ ಇರುವುದಕ್ಕೆ ಇವೆಲ್ಲ ಕಾರಣಗಳು. ಸಂದರ್ಭಗಳನ್ನು ಮಾತ್ರ ದೂಷಿಸಬೇಕು. ಅದೇಕೊ ಗೊತ್ತಿಲ್ಲ ನೀನೊಬ್ಬ ಮುಸ್ಲಿಂ ಎಂದು ಈಗಷ್ಟೇ ನನಗೆ ತಿಳಿಯಿತು. ಈ ತಿಳುವಳಿಕೆ ತಾತ್ಕಾಲಿಕವೂ ಕೂಡ. ಇದಕ್ಕೂ ಹೆಚ್ಚಿಗೆ ಇನ್ನೇನು ಬರೆಯಲಿ? ಹಂಚಿಕೊಳ್ಳಲು ಯೋಗ್ಯವಾದದ್ದು ಇಲ್ಲೇನೂ ಇಲ್ಲ. ಉಸಿರಾಡುವ ಗಾಳಿಯೂ ವಿಷವಾಗುತ್ತಿರುವ ಈ ನಾಡನ್ನು ಕುರಿತು, ಕಾಲವನ್ನು ಕುರಿತು ನಾನೇನು ಬರೆಯಲಿ? ಸಾಮಾಜಿಕ ಐಕ್ಯತೆಯನ್ನು ಮರುಸ್ಥಾಪಿಸಲು ನಾನೇನೇನು ಮಾಡಲು ಸಾಧ್ಯವೋ ಅದೆಲ್ಲವನ್ನು ಮಾಡುತ್ತಿದ್ದೇನೆ. ದೇವರೊಬ್ಬನೇ ಅದಕ್ಕೆ ಸಾಕ್ಷಿ. ಆತನ ಇಚ್ಛೆಯನ್ನು ನಾವು ಬದಲಿಸಲು ಸಾಧ್ಯವೆ?"

ಇಂತಿ ನಿನ್ನ ಬಾಪು

ಇಷ್ಟೇ ಬರೆದ ಗಾಂಧಿಗೆ ಯಾಕೋ ತೀವ್ರ ಬಳಲಿಕೆ ಎನಿಸಿತು. ಬ್ರಿಟನ್ನಿನ ಜೀವಶಾಸ್ತ್ರಜ್ಞ ಜೂಲಿಯನ್ ಹಕ್ಸಲೆ ವರ್ತಮಾನದ ಮನುಷ್ಯನ ಮುಂದೆ ಇರುವ ಪ್ರಶ್ನೆಗಳಾದ, 'ಹಕ್ಕು ಮತ್ತು ಕರ್ತವ್ಯ'ಗಳ ಕುರಿತು ಪ್ರಪಂಚದ ಅರವತ್ತು ಜನ ಆಯ್ದ ತತ್ವಜ್ಞಾನಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಯುನೆಸ್ಕೊಗೆ ಅರ್ಪಿಸುತ್ತಿದ್ದಾನೆ. ಇದರಲ್ಲಿ ಒಬ್ಬನಾಗಿ ಭಾರತದಿಂದ ಗಾಂಧಿಯೂ ಇದ್ದಾನೆ. ಇಡೀ ವಿಶ್ವವನ್ನು ಒಂದು ಪುಟ್ಟ ಮನೆಯಂತೆ


ಗ್ರಹಿಸುವ ಗಾಂಧಿ ಹಕ್ಸಲೆ ಮುಂದೆ ತನ್ನ ವಾದವನ್ನು ಅದೇ ನೆಲೆಯ ಮೇಲೆ ಪ್ರಾರಂಭಿಸುತ್ತಾನೆ. "ನನ್ನ ತಾಯಿ ಅಶಿಕ್ಷಿತಳಾಗಿದ್ದಳು, ಆದರೆ ಕರ್ತವ್ಯಪರಳಾಗಿದ್ದಳು. ಪ್ರಪಂಚದ ನಾಗರಿಕನಾಗಿ ನಮ್ಮ ಕರ್ತವ್ಯಗಳನ್ನು ನಾವು ಮಾಡಿದರೆ ಸಾಕು. ಪ್ರತಿಯೊಬ್ಬ ಮನುಷ್ಯ ಕರ್ತವ್ಯದಿಂದ ಮಾತ್ರ ತನ್ನ ಹಕ್ಕಿನ ದಾರಿಯನ್ನು ಕಂಡುಕೊಳ್ಳುತ್ತಾನೆ. ಇದುವೆ ಆತನಿಗೆ ತನ್ನ ಮುಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ರೀತಿಯನ್ನೂ ತಿಳಿಸುತ್ತದೆ". ವಿಶ್ವಪ್ರಜೆಯಾಗಿ ಈ ಸಂದರ್ಭದಲ್ಲಿ ಉತ್ತರಿಸುವಾಗ ಅದೇಕೋ ಗಾಂಧಿಗೆ ಭಾರತದ ವರ್ತಮಾನವನ್ನು ಬಚ್ಚಿಡಬೇಕೆಂದು ಅನ್ನಿಸಲಿಲ್ಲ. ಅದೊಂದು ರೀತಿಯ ಪಲಾಯನವೆಂದೂ ಆತ್ಮವಂಚನೆಯೆಂದೂ ಆತನಿಗೆ ಅನಿಸಿರಬೇಕು. ಈ ಚರ್ಚೆಯಲ್ಲಿ ಭಾರತದ ವಿಭಜನೆಯ ಪ್ರಸ್ತಾಪ ಒಂದು ವಿಷಯವಾಗಿ, ಅಪ್ರಸ್ತುತವಾಗಿದ್ದ ಐಕ್ಯತೆಯ ದಾರಿಯಲ್ಲಿ ಒಂದು ವಿಚಾರವಾಗಿ ಆತನಿಗೆ ಅವಶ್ಯಕವೆನಿಸಿದೆ. ಹೀಗಾಗಿ ಹೇಳುತ್ತಾನೆ, "It was our misfortune that India was divided into two parts. ಈ ವಿಭಜನೆಗೆ ಧಾರ್ಮಿಕ ಆರ್ಥಿಕ ಕಾರಣಗಳಿರಬಹುದೇನೋ. ಸದ್ಯ ಹುಟ್ಟಿರುವ ಈ ವಿಷದ ಗಾಳಿಯಂತೂ ಮತೀಯ ಕಾರಣದಿಂದಲೇ. ಎಲ್ಲ ಕಾಲಕ್ಕೂ ಅಧಾರ್ಮಿಕತೆ ಧರ್ಮವನ್ನು ಲಜ್ಜೆಗೆಡಿಸುತ್ತದೆ, ಕುಲಗೆಡಿಸುತ್ತದೆ. ಮತೀಯ ಪ್ರಶ್ನೆಗಳೇ ಇಲ್ಲದೆ ಹೋಗಿದ್ದರೆ ನಮ್ಮ ಸಮಾಜ ಎಷ್ಟೊಂದು ಸುಂದರವಾಗಿರುತ್ತಿತ್ತಲ್ಲ ಎಂದು ಕೂಡ ಅನಿಸುತ್ತದೆ. ಆದರೆ ಘಟಿಸಿ ಹೋಗಿರುವುದನ್ನ ಸರಿಪಡಿಸುವ ಶಕ್ತಿಯಾವುದೋ ಅದೊಂದೇ ಈಗ ನಮ್ಮ ಮುಂದಿನ ಹುಡುಕಾಟ. Let us hope that even in a holocaust, there will be at least some persons who will stand firm in their faith that Truth should Trumph."

ರಾತ್ರಿಯಾಯಿತು, ಮಲಗುವ ಹೊತ್ತು. ಮೊಮ್ಮಗಳಾದ ಮನುಳನ್ನು ಕರೆದು ಗಾಂಧಿ ಕಬೀರನ ಒಂದು ಪದ್ಯ ಹೇಳಿದ. ಅಂದಹಾಗೆ ಇದು ಆಕೆಗಲ್ಲ, ತನ್ನ ನೆಮ್ಮದಿಗೆ, ನೋವಿಲ್ಲದ ನಾಳೆಗೆ. ಪದ್ಯ ಇಷ್ಟೇ –

"ಆತನೇ ಮರ, ಬೀಜ, ಮತ್ತೆ ಕೊರೆಯುವ ಹುಳು
ಆತನೇ ಹೂ, ಹಣ್ಣು, ಹಸಿರು ನೆರಳು
ಆತನೇ ಸೂರ್ಯ, ಬೆಳಕು ಮತ್ತೆ ಬೆಳಗಿಸುವವ
ಬ್ರಹ್ಮ ಅವನೆ, ಅವನೇ ಮಾಯೆಯೂ
ಅವನೇ ಅನಂತರೂಪಿ ಅಗೋಚರ
ಅವನೆ ಉಸಿರು, ಶಬ್ದ ಮತ್ತು ಅರ್ಥ
ಆತನೇ ಮಿತ, ಅಮಿತ, ಅದರಾಚೆ ಅತ್ತತ್ತ"

ಹೀಗೆ ಹೊರಟಿತ್ತು ಗಾಂಧಿಯ ಗಾಡಿ, ಮನುಳಿಗೆ ಆಕಳಿಕೆ, ಆಯಾಸ, ನಿದ್ರೆ.

❑





ಕತ್ತು ಕೊಯ್ಯುವವರ ಕೈಗೆ ಹೂ

"ನನಗೆ ರಕ್ತ ಕೊಡಿ, ನಿಮಗೆ ಸ್ವಾತಂತ್ರ್ಯ ಕೊಡುವ ವಚನ ಕೊಡುತ್ತೇನೆ" ಇದು ಬೋಸ್‌ರ ಘೋಷವಾಕ್ಯ. ೧೯೧೯ರ ಅಮೃತಸರ ಕಾಂಗ್ರೆಸ್‌ನಲ್ಲಿ ಗಾಂಧಿಗೆ ತಿಲಕರು 'ಗೆಳೆಯ ರಾಜಕೀಯದಲ್ಲಿ ಸತ್ಯ, ಅಹಿಂಸೆಗೆ ಸ್ಥಾನ ಇಲ್ಲ' ಎಂದರು. ಆದರೆ ಗಾಂಧಿ ತನ್ನ ದಾರಿಯನ್ನೇ ತುಳಿದು ಹಿಂಸೆಗೇ ಬಲಿಯಾದ. ಆದರೆ 'ಮೃಗಗಳ ನಿಯಮ ಹಿಂಸೆ' ಮನುಷ್ಯರ ನಿಯಮ ಅಹಿಂಸೆ. ಮೃಗಳಲ್ಲಿ ಆತ್ಮ ಸುಪ್ತ ಸ್ಥಿತಿಯಲ್ಲಿರುತ್ತದೆ. ಅದಕ್ಕೆ ದೇಹಬಲ ಮಾತ್ರ ಗೊತ್ತು. ಮನುಕುಲವನ್ನು ಆಳಬೇಕಾದುದು ಅಹಿಂಸೆ ಮತ್ತು ಪ್ರೀತಿ" ಎಂದು ವಾದಿಸಿ ತಿಲಕರನ್ನು ಸುಮ್ಮನಾಗಿಸಿದ್ದ.

ಆದರೆ ಅಕ್ಟೋಬರ ಹದಿನೆಂಟರ ಶನಿವಾರದ ಈ ಮುಂಜಾವು ಕಲ್ಕತ್ತೆಯಿಂದ ಬಂದ ಸುದ್ದಿ ಗಾಂಧಿಯ ನೆಮ್ಮದಿಯನ್ನು ಮತ್ತಷ್ಟು ಕೆಡಸಿದೆ. ಅವರು ಸಾವು–

ಬದುಕಿನ ಮಧ್ಯೆ ಹೊಯ್ದಾಡುತ್ತಿದ್ದಾರೆ. ಪ್ರತಿಕ್ಷಣದ ಬದುಕೆನ್ನುವುದು ಅಪಾರ ಹಿಂಸೆ. ಹೀಗೆ ನೆಲೆಯಿಲ್ಲದ ನಿರಾಶ್ರಿತರು ಕಡು ಚಳಿಗಾಲದಲ್ಲಿ ನಡುಗುವ ಈ ಗಾಂಧಿಗೆ ದೀನರಾಗಿ ಆಸರೆಗಾಗಿ ಕೈಯೊಡ್ಡಿದ್ದಾರೆ. ತನ್ನ ಕೈಯಿಂದ ಎಲ್ಲವು ನಿಧಾನವಾಗಿ, ನಿರಂತರವಾಗಿ ಕೊಸರುತ್ತಲೇ ಹೋಗುತ್ತಿದೆ ಎನ್ನುವುದನ್ನು ಬಲವಾಗಿ ಅನುಭವಿಸುತ್ತಿರುವ ಗಾಂಧಿ, ಮಾನವತೆಯ ದಿವ್ಯ ಕಿರಣಗಳನ್ನುಳ್ಳ ಮನುಷ್ಯನನ್ನೇ ನಂಬಿದ್ದಾನೆ. ಅವನೇ ಆತನ ಏಕೈಕ ಭರವಸೆ, Though He slay me, yet I will trust Him ಎಂದು ಗಾಂಧಿ ಉತ್ತರಿಸುವಾಗ ನನಗೆ ಬಹಳ ಹಿಂದೆ ನಾನೇ ಬರೆದ ಪದ್ಯ ನೆನಪಾಗುತ್ತದೆ–

ನಮ್ಮ ಕತ್ತು ಹಿಸುಕಬೇಕೆನ್ನುವವರ
ಕೈಗೆ ಒಂದು ಹಿಡಿ ಹೂ ನೀಡಬೇಕು
ನಮ್ಮ ಶೋಕಗೀತೆಯ ಅವರ ಕನಸಿಗೆ
ನಾವು ಒಂದಿಷ್ಟು ಧ್ವನಿ ನೀಡಬೇಕು.

ಸ್ವಾಗತದ ಸವಿದಾರಿ ಎಂದೂ ತುಳಿಯದ
ಬಡವರಿಗೆ ಏನೆನ್ನಬೇಕು?
ಹಿಸುಕುವಾ ನಿಮ್ಮ ಕೈಗಳೇ ಸಂಜೀವಿನಿ ಎಂದು
ನಗುನಗುತ ಬದುಕ ಕೊಟ್ಟು ಬಿಡಬೇಕು

ನಿರಾಶ್ರಿತರಿಗೆ ಅಂತಿಮವಾಗಿ ಗಾಂಧಿ ಕೊಟ್ಟ ಉತ್ತರವೂ ಇಷ್ಟೆ. ಆದರೆ ಆತನಿಗೆ ಇದರಿಂದ ಸಮಾಧಾನವಿಲ್ಲ. ತಾನು ಎಲ್ಲರಂತೆ ಬದುಕಿ ಬಾಳಬೇಕೆನ್ನುವ ಸಾಮಾನ್ಯ ನಿರೀಕ್ಷೆಯ ಜೀವಗಳಿಗೆ ತನ್ನ ಉತ್ತರ ಸಮಾಧಾನ ನೀಡದು ಎನ್ನುವ ನೋವು ಆತನಿಗಿದೆ. ಈ ಎಲ್ಲ ಕಾರಣ ನಿನ್ನೆ ರಾತ್ರಿಯಿಂದ ಆತನಿಗೆ ಸರಿಯಾಗಿ ನಿದ್ರೆಯೇ ಇಲ್ಲ.

ಇಂದೋರ್ ವಯಸ್ಕರ ಶಿಕ್ಷಣ ಸಂಘಟನೆಯವರು ಚರಕ ಜಯಂತಿಗಾಗಿ ಬರಲು ಕೋರಿಕೊಂಡು ಗಾಂಧಿಗೆ ಪತ್ರ ಬರೆದಿದ್ದಾರೆ. ಅದರಲ್ಲೂ ಆತನಿಗೆ ಆಸಕ್ತಿ ಇಲ್ಲ. ನಿದ್ರಾಹೀನತೆಯಿಂದಾಗಿ ಹೆಚ್ಚಾಗಿರುವ ಕೆಮ್ಮು, ಕಫ ಆತನನ್ನು ಬೇಚೈನ್ ಆಗಿಸಿದೆ. ಅನುಯಾಯಿ ಗೋಮತಿ ಮಶ್ರುವಾಲಾ, 'ಬಾಪು, ನೀವು ನಿಮ್ಮ ಆರೋಗ್ಯವನ್ನು ಕಡೆಗಣಿಸುತ್ತಿದ್ದೀರಿ' ಎಂದು ಜಗಳವಾಡುತ್ತಿದ್ದ. ಈ ಗಾಂಧಿ ಪೆನ್ಸಿಲಿನ್ ಇಂಜಕ್ಷನ್ ತೆಗೆದುಕೊಳ್ಳದೇ ಹೋದರೆ ತಾನು ಆಶ್ರಮ ಬಿಟ್ಟು ಹೋಗುತ್ತೇನೆ ಎಂದು ಆಗಲೆ ಒಂದು ಕಾಲು ಹೊರಗೆ ಇಟ್ಟಿದ್ದಾರೆ. ಆದರೆ ಗಾಂಧಿ ಆತನನ್ನು ಸಮಾಧಾನಿಸುವ ರೀತಿಯೇ ಬೇರೆಯಾಗಿದೆ. "ನನಗೆ ನಿನ್ನ ಕಾಳಜಿ

ಅರ್ಥವಾಗುತ್ತದೆ, ಆದರೆ ಈ ನಿನ್ನ ಕಾಳಜಿ ಅಜ್ಞಾನದಿಂದ ಹುಟ್ಟಿಕೊಂಡಿದೆ. ನನ್ನನ್ನು ಬಾಧಿಸುತ್ತಿರುವ ಕೆಮ್ಮಿನ ಬಗೆಗೆ ನಾನು ನಿರ್ಲಕ್ಷಿತನಾಗಿಲ್ಲ. ಆದರೆ ನಾನು ಶ್ರೀರಾಮನ ಮೇಲೆ ಅವಲಂಬಿತನಾಗಿದ್ದೇನೆ. ಆತನನ್ನು ಅವಲಂಬಿಸಿ ನಾಶವಾದವರನ್ನು ನಾನು ಇದುವರೆಗೂ ನೋಡಿಲ್ಲ. ಯಾರು ತಮ್ಮೊಳಗೇ ಆತನನ್ನು ನಂಬಿದ್ದಾರೋ ಅವರು ಬಾಹ್ಯಕ್ಕೆ ಭಿನ್ನವಾಗುತ್ತಲೇ ಹೋಗುತ್ತಾರೆ. ಇನ್ನೂ ಮೂರು ವಾರಗಳವರೆಗೆ ನನ್ನ ಆರೋಗ್ಯದ ಸ್ಥಿತಿ ಹೀಗೆಯೇ ಇರುತ್ತದೆ ಎಂದು ವೈದ್ಯರು ಹೇಳಿದ್ದಾರೆ. ಆದರೆ ಈ ಮಾತುಗಳನ್ನು ನಾನು ನಂಬಿಲ್ಲ. ಆ ಶ್ರೀರಾಮ ಮನಸ್ಸು ಮಾಡಿದರೆ ಮೂರೇ ದಿನದಲ್ಲಿ ನಾನು ಸರಿ ಹೊಗಬಹುದು. ವಿಫಲವಾಗದ ನನ್ನ ಪಾಲಿನ ದೊಡ್ಡ ಔಷಧಿಯೇ 'ಶ್ರೀರಾಮ'. ಆದರೆ ಅದನ್ನು ಕಾದು ನೋಡುವ ಸಹನೆ ನಮಗೆ ಬೇಕಷ್ಟೆ. ಸದ್ಯದ ಸ್ಥಿತಿಯಲ್ಲಿ ನಾನು ಆತನ ನಾಮ ಒಂದನ್ನು ಬಿಟ್ಟು ಬೇರೇನನ್ನೂ ಯೋಚಿಸುವ ಸ್ಥಿತಿಯಲ್ಲಿಲ್ಲ.

ಇದೆಲ್ಲ ಒಂದೆಡೆ ಇರಲಿ. ನನ್ನ ಪ್ರಶ್ನೆ ಇರುವುದು ನನ್ನ ಸ್ಥಿತಿ ಹೀಗೇಕಾಯಿತು? ಎನ್ನುವ ಕುರಿತು. ಮನುಷ್ಯನಾಗಿ ನಾನು ಏನೇನನ್ನು ಸಾಧಿಸಲು ಯತ್ನಿಸುತ್ತಿರುವೆನೋ ಅದೆಲ್ಲವೂ ಯಾಕೆ ವಿಫಲವಾಗುತ್ತಿದೆ? ಒಂದು ಕಾಲವಿತ್ತು, ನನ್ನ ಮಾತುಗಳಿಗೆ ಈ ದೇಶದಲ್ಲಿ ಅದೆಷ್ಟು ದೊಡ್ಡ ಅರ್ಥ, ಔಚಿತ್ಯ ಮತ್ತು ಶಕ್ತಿ ಇತ್ತು. ಇಂದು ನನ್ನ ಮಾತುಗಳಲ್ಲಿ ಆ ಮಾಂತ್ರಿಕತೆಯೇ ಇಲ್ಲ, ಚುಂಬಕ ಶಕ್ತಿ ಇಲ್ಲ. ನಾನೇನಾದರೂ ತಪ್ಪೆಸಗಿದೆನೇ ಅಥವಾ ಮೊದಲಿನಷ್ಟು ಆತ್ಮಸಾಕ್ಷಿಯಾಗಿ ಮಾತನಾಡುವುದನ್ನು ನಾನು ಮರೆತಿರುವೆನೇ?

ಇಲ್ಲ, ಏನಾಗಿದ್ದರೂ ಸರಿ, ನಾನು ಮತ್ತೆ ಹೃದಯಸಾಕ್ಷಿಯಾಗಿಯೇ ಮಾತಾಡುತ್ತೇನೆ, ಕೇಳುತ್ತೇನೆ ಮತ್ತು ಎಂದೆಂದಿಗೂ ನಡೆಯುತ್ತೇನೆ. ಕಾಲ ಬದಲಾಗಿದೆ. ಪ್ರತಿ ಕಾಲಕ್ಕೂ ತನ್ನದೇ ಆದ ಓಘವಿದೆ. ಅದು ಹಾಗಿರಬೇಕಾದುದೆ. ಹಾಗೆಯೇ ಇತ್ತು. ಹಾಗೆಯೇ ಇರುತ್ತದೆ. ಆದರೆ ಕಾಲದ ಈ ಬದಲಾವಣೆ ನನ್ನನ್ನು ಬಾಧಿಸಬಾರದಿತ್ತಲ್ಲ? ನಾನೇನಾಗಿದ್ದೆನೋ ಅದೇ ಆಗಿ ಉಳಿಯಬೇಕಾಗಿತ್ತಲ್ಲ? ಇಂದು ಏನನ್ನು ಹೇಳುತ್ತಿರುವೆನೋ ಹಿಂದೆಯೂ ಅದನ್ನೇ ಹೇಳಿದ್ದೇನಲ್ಲ? ಅಂದು ಇದನ್ನು ಒಪ್ಪಿಕೊಂಡ ಜನ ಇಂದು ಆ ಮೌಲ್ಯಗಳಿಂದ ದೂರ ಸರಿಯುವ ಕಾರಣ? ಇದೇ ಸತ್ಯ ಮತ್ತು ಅಹಿಂಸೆಯನ್ನೇ ಅಂದಿಗೂ ಇಂದಿಗೂ ನಾನು ಹುಡುಕಾಡುತ್ತಿರುವೆನಲ್ಲ? ಯಾಕೆ ಹೀಗಾಯಿತು?

ಇಂದು ನಾನು ಮಾಡುತ್ತಿರುವುದೆಲ್ಲ ಆತನ ಹೆಸರಿನಲ್ಲಿಯೇ. ನಾನು ಪೂರ್ಣ, ಸಂಪೂರ್ಣ ಆತನನ್ನು ನಂಬಿದ್ದೇನೆ. ಸಣ್ಣ–ಪುಟ್ಟ ವೈಫಲ್ಯ, ರೋಗ, ರುಜಿನಗಳಿಗೆ ಹೆದರಿ ನಾನು ಶ್ರೀರಾಮನ ಕೈ ಬಿಡಬೇಕೆ? ಈ ಪ್ರಪಂಚಕ್ಕೆ ನನ್ನಿಂದ

ಸಾರ್ಥಕವಾದುದೇನಾದರೂ ಆಗಬೇಕಾಗಿದೆ ಎನ್ನುವುದಾದರೆ ಆ ಶ್ರೀರಾಮನೇ ನನ್ನನ್ನು ರಕ್ಷಿಸಲಿ. ಇಲ್ಲದೆ ಹೋದಲ್ಲಿ ಈ ಕೆಮ್ಮಿನಿಂದ ಪೀಡಿಸಿ ನನ್ನನ್ನು ಕೊಂದುಹಾಕಲಿ. ಸಾಯಂಕಾಲದ ಪ್ರಾರ್ಥನೆಯಲ್ಲಿ ನಾನು ಹಾಡುವುದಾದರೂ ಏನು? ಆಸೆ, ಸಿಟ್ಟು, ಮೋಹ, ಸಂಬಂಧಗಳ ಹಂಗು ಹರಿದು ಶ್ರೀರಾಮನ ಸ್ಮರಣೆ ಮಾಡಬೇಕು ಎನ್ನುವುದೇ ಅಲ್ಲವೇ. ಎಲ್ಲಕ್ಕೂ ಮಿಗಿಲಾಗಿ ನೆಲೆಯಿಲ್ಲದೆ ನಿರಾಶ್ರಿತರಾದ ಜನರ ಸ್ಥಿತಿ ನನ್ನನ್ನು ಕಂಗಾಲಾಗಿಸಿದೆ. ಶ್ರೀರಾಮನ ಕೈ ಹಿಡಿದು ಯಕಶ್ಚಿತ ಕೆಮ್ಮು ಸರಿಪಡಿಸಿಕೊಳ್ಳದ ನಾನು ನಿರಾಶ್ರಿತರ ಪ್ರಪಂಚಕ್ಕ್ಯಾವ ದಾರಿ ತೋರಿಸಬಲ್ಲೆ? "The times have changed, but I have not. I belive that Prayer has a deep effect on those who listen to it in good faith." ಇದೆಲ್ಲ ಗಾಂಧಿಯೊಳಗಿನ ಕನವರಿಕೆ. ಇದನ್ನು ನೀವು ವ್ಯರ್ಥಾಲಾಪ ಕೂಡಾ ಅನ್ನಬಹುದು ಅಥವಾ ರಾಜಕೀಯ ಪರಿಜ್ಞಾನವಿಲ್ಲದ ಮುದುಕನ ಹಲುಬುವಿಕೆ ಎಂದೂ ಅನ್ನಬಹುದು. ಆದರೆ ನಾಟಕವೆನ್ನಲಾಗದು.

ಇಷ್ಟು ಮಾತಾಡಿಕೊಂಡು ತಣ್ಣಗಿರಬೇಕೆಂದ ಗಾಂಧಿಗೆ ಈ ಶನಿವಾರ ಕಾಲಾವಕಾಶವೇ ಆಗಲಿಲ್ಲ. ಬಿರ್ಲಾಹೌಸ್‌ನೆದುರು ಅಸಾಮಾನ್ಯರು, ನಿರಾಶ್ರಿತರು ಆತನ ದರ್ಶನ, ಆಶೀರ್ವಾದ ಸಲಹೆಗಾಗಿ ಸಾಲು-ಸಾಲಾಗಿ ನಿಂತಿದ್ದರು. ಇವರೊಂದಿಗೆ ಭಾರತದ ಪ್ರಧಾನಿ ನೆಹರು, ಉಪಪ್ರಧಾನಿ ಪಟೇಲ್, ಪಾಕಿಸ್ತಾನದಿಂದ ನಿನ್ನೆಯಷ್ಟೇ ಬಂದ ಸುಹ್ರಾವರ್ದಿ, ಕಾಶ್ಮೀರದ ನಾಯಕ ಶೇಕ್ ಅಬ್ದುಲ್ಲ ಎಲ್ಲರೂ ನಿಂತಿದ್ದಾರೆ. ಹಿಂದಿ ಮತ್ತು ಉರ್ದು ಭಾಷೆಯ ಜಗಳ ಇನ್ನೂ ಬಗೆಹರಿದಿಲ್ಲ. ಉತ್ತರ ಪ್ರದೇಶದ ಮಿನಿಸ್ಟರ್ ಶ್ರೀಕೃಷ್ಣದತ್ತ ಪಾಲಿವಾಲ್ ಈ ಜಟಿಲ ಪ್ರಶ್ನೆಗೆ ವಿವರಣೆ ನೀಡುವುದಕ್ಕಾಗಿ ಗಾಂಧಿಯಿಂದ ಸಮಯಾವಕಾಶ ಕೋರಿ ಕಾಯುತ್ತಿದ್ದಾನೆ. ಆದರೆ ಕೆಮ್ಮು ಮಾತ್ರ ಗಾಂಧಿಯನ್ನು ಇವರ್‍ಯಾರೊಂದಿಗೂ ಮಾತನಾಡದಷ್ಟು ಹಿಂಡಿ ಹಿಪ್ಪೆಯಾಗಿಸಿದೆ. ಆ ಶ್ರೀರಾಮನೆ ಬಂದು ಕುಳಿತರೆ ಈ ಗಾಂಧಿ ಮಾತನಾಡಬಹುದೇನೋ. ತನ್ನೆದುರು ನಿಂತ ರೋಗಗ್ರಸ್ತ ಸಮಾಜಕ್ಕೆ ಗಾಂಧಿ ಮತ್ತೆ ಸಂಜೀವಿನಿ ಆಗಬಹುದೇನೊ!

❑



ಸೀಮಿತರಿಗೆ ಸೀಮಾತೀತ

ಈ ಗಾಂಧಿ ರಾಷ್ಟ್ರಕ್ಕೆ ನಾಯಕನೊ, ಮಹಾತ್ಮನೊ, ದೇಶವನ್ನು ಮುಸ್ಲಿಂರ ಓಲೈಕೆಗಾಗಿ ಒತ್ತೆಯಿಟ್ಟ ಮನೆಹಾಳನೊ ಅದನ್ನು ನಿರ್ಧರಿಸುವ ಸಾಲು-ಸಾಲು ವಿಮರ್ಶಕರು ಇದ್ದಾರೆ. ಆದರೆ 'ವಿಶ್ವಾಸವನ್ನು ಪ್ರೇರೇಪಿಸುವ ಚಾರಿತ್ರ್ಯವೇ ನಾಯಕತ್ವ' ಎಂದ ಆತನ ಮಾತು ಎಲ್ಲ ಕಾಲಕ್ಕೂ ಚಿಂತನಯೋಗ್ಯ ಎನಿಸಿದೆ. ಗಾಂಧಿಯ ಈ ವಿಶ್ವಾಸಪ್ರೇರಣೆಯ ಕಾರ್ಯ ಆತನ ಕೊಲೆಯ ಕ್ಷಣದವರೆಗೂ ಇತ್ತು. ಪಟೇಲರೊಂದಿಗೆ ಕುಳಿತು ಆತ ಕೊನೆಯ ದಿನ ಮಾಡಿದ್ದು ಅದನ್ನೇ. ಆತನ ಈ ಸೇವೆ ಎಲ್ಲರಿಗೂ ಸಮಾನವಾಗಿತ್ತು ಎನ್ನಲು ಇಲ್ಲೊಂದು ಉದಾಹರಣೆ.

ಅಕ್ಟೋಬರ್ ೧೯ರ ರವಿವಾರ ಗಾಂಧಿ ಮುಗಿಸಬೇಕಾದ ಅತ್ಯಂತ ಮಹತ್ವದ ಕೆಲಸಕ್ಕೆ ಸಿದ್ಧನಾಗಿ

ಕುಳಿತಿದ್ದಾನೆ. ಗೆಳೆಯ ವಿಜಯ ದೇಸಾಯಿಯ ಮಗ ವಿಕ್ರಮಾದಿತ್ಯ ಗಾಂಧಿಗೊಂದು ಪತ್ರ ಬರೆದಿದ್ದಾನೆ. ಆತ ಇನ್ನೂ ಬಾಲಕ. ಗಾಂಧಿಯ ಅತ್ಯಂತ ಎಳೆಯ ಗೆಳೆಯ. ವರ್ತಮಾನ ಹೊತ್ತಿ ಉರಿಯುವಾಗಲೂ ದೇಶದ ಭವಿಷ್ಯದ ಸಸಿಗಳನ್ನು ಸಲಹುವ ಗಾಂಧಿಯ ಈ ಪ್ರಾಮಾಣಿಕತೆಯನ್ನು ನಾವು ನೋಡಬೇಕು. ಶಿಸ್ತನ್ನು ಬೆಳೆಸಿಕೊಳ್ಳದೆ ಬೆಳೆಯುವ ಇಂದಿನ ಬಾಲಕರು ನಾಳಿನ ಭಾರತಕ್ಕೆ ಹೊರೆಯಾಗಬಾರದು ಎಂದು ಆತನ ನಿರಂತರ ಆಲೋಚನೆ. ಅದಕ್ಕಾಗಿ ಉತ್ತರಿಸುತ್ತಾನೆ–

ನಿನ್ನ ಪೋಸ್ಟ್ ಕಾರ್ಡ್ ಬಂದು ತಲುಪಿದೆ. ಅಕ್ಷರಗಳು ಇನ್ನಷ್ಟು ದೊಡ್ಡವಾಗಿದ್ದರೆ ಓದಲು ಅನುಕೂಲ ಮತ್ತು ನೋಡಲು ಸುಂದರ. ಅಕ್ಷರಗಳ ಕೆಳಗೆ ಗೆರೆ ಇರಬೇಕಾಗಿತ್ತು. ಒಂದು ಸಾಲಿನಿಂದ ಇನ್ನೊಂದು ಸಾಲಿನ ಮಧ್ಯದ ಅಂತರ ಸಮಾನವಾಗಿರಬೇಕಿತ್ತು ಅಲ್ಲವೆ? ಪತ್ರ ಯಾವಾಗಲೂ ಸ್ಫುಟವಾಗಿ, ಸ್ವಚ್ಛವಾಗಿ ಇರಬೇಕು. ಮುತ್ತಿನಂಥ ಅಕ್ಷರಗಳು, ಪ್ರಾಮಾಣಿಕ ವಿಚಾರಗಳು ಇದ್ದರೆ ನಮ್ಮ ಬರಹವನ್ನು ಯಾರಾದರು ಮರೆಯಲು ಸಾಧ್ಯವೆ? ಸುಧಾರಿಸಿಕೊ.

ಆಶಿರ್ವಾದಗಳೊಂದಿಗೆ

ಇಂತೀ ನಿನ್ನ

ಬಾಪು

ಈ ಪತ್ರ ಮುಗಿಸುತ್ತಿರುವಂತೆಯೇ ಜಯಪ್ರಕಾಶ ನಾರಾಯಣ ಹಾಗೂ ಸ್ವತಂತ್ರ ಭಾರತದ ಆರೋಗ್ಯ ಸಚಿವೆಯಾದ ರಾಜಕುಮಾರಿ ಅಮೃತಾ ಕೌರ್ ಗಾಂಧಿಯ ಭೆಟ್ಟಿಗೆ ಬಂದರು. ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆ ಭಾರತವನ್ನು ಸಶಕ್ತಗೊಳಿಸಬೇಕಾದರೆ ಏನು ಮಾಡಬೇಕು? ಕೆಲವೇ ಕೆಲವು ಪುಂಡರು ಕಾನೂನನ್ನು ಕೈಗೆತ್ತಿಕೊಂಡು ಸಮಾಜದಲ್ಲಿ ಅರಾಜಕತೆಯನ್ನು ಸೃಷ್ಟಿಮಾಡುತ್ತಿದ್ದಾರೆ. ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು? ಈ ಕುರಿತು ಗಾಂಧಿಯ ಸಂದೇಶವೇನು? ಎನ್ನುವುದನ್ನು ತಿಳಿಯುವುದು ಇವರ ಭೆಟ್ಟಿಯ ಉದ್ದೇಶ. ಆರೋಗ್ಯ ಹದಗೆಟ್ಟು ಮಾತನಾಡುವಷ್ಟೂ ಶಕ್ತಿ ಇಲ್ಲದೆ ಇರುವಾಗಲೂ ಗಾಂಧಿ ತನ್ನ ಕರ್ತವ್ಯಗಳಿಂದ ವಿಮುಖನಾಗಲಿಲ್ಲ. ಇವರೆಲ್ಲ ಇಂದು ಗಾಂಧಿ ಹೇಳುವ ಮಾತುಗಳನ್ನೇ ಎಲ್ಲ ಕಾಲಕ್ಕೂ ತಮ್ಮ ಸೋಷಿಯಾಲಿಸ್ಟ್ ಪಾರ್ಟಿಯ ಸಂದೇಶವಾಗಿಟ್ಟುಕೊಳ್ಳಲು ನಿರ್ಧರಿಸಿದ್ದಾರೆ. ಇಂತಹ ನಿರ್ಧಾರಕ್ಕೆ ಮುಖ್ಯ ಕಾರಣವ್ಯಕ್ತಿ ಜಯಪ್ರಕಾಶ ನಾರಾಯಣ. ಗಾಂಧಿ ಈ ದೇಶ ಹೇಗಿರಬೇಕು, ಇದಕ್ಕೆ ಯಾವ ಮಾನಸಿಕ ಮತ್ತು ಆಧ್ಯಾತ್ಮಿಕ ಕ್ಷಮತೆ ಬೇಕು ಎನ್ನುವುದನ್ನು ಪ್ರೀತಿಯಿಂದ ಬಂದು ಕೇಳುತ್ತಿರುವ ಗೆಳೆಯರ ಮುಂದೆ ಹೀಗೆ ಸ್ಪಷ್ಟಪಡಿಸುತ್ತಾನೆ–

ಭಾರತ ಎಂದಿಗೂ ಕೇವಲ ಹಿಂದೂ ಮತ್ತು ಸಿಖ್ಖರದ್ದಲ್ಲ. ಇದು ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಇತರರಿಗೂ ಸಮಾನವಾಗಿ ಸೇರಿದೆ. ಸಮಾನ ನಾಗರಿಕ ಹಕ್ಕುಗಳನ್ನು ಅನುಭವಿಸುವ ಪ್ರತಿಯೊಬ್ಬ ಭಾರತಿಯನೂ ದೇಶರಕ್ಷಣೆಯಲ್ಲಿ ಸಮಾನವಾಗಿ ಜವಾಬ್ದಾರನಾಗಿದ್ದಾನೆ. ಭಾರತಕ್ಕೆ ತಮ್ಮ ನಿಷ್ಠೆಯನ್ನು ತೋರಿಸಿದ, ದೇಶವಿಭಜನೆಯನ್ನು ವಿರೋಧಿಸಿದ ಮುಸ್ಲಿಂರನ್ನು ಯಾವುದೇ ತಾರತಮ್ಯವಿಲ್ಲದೆ ನೋಡಿಕೊಳ್ಳಬೇಕು. ಸರ್ಕಾರ ಅಲ್ಪಸಂಖ್ಯಾತರನ್ನು ಹಾಗೂ ದೇಶವಿಭಜನೆಯ ಸಂದರ್ಭದಲ್ಲಿ ಅವರಿಗಾದ ನಷ್ಟವನ್ನು ಭರಿಸುವತ್ತ ವಿಚಾರಿಸಬೇಕು. ಭಾರತ ಪಾಕಿಸ್ತಾನಗಳೆರಡೂ ಸಮಾನ ಪ್ರೀತಿ ಮತ್ತು ಗೌರವಗಳೊಂದಿಗೆ ರಾಷ್ಟ್ರಗಳಾಗಿ ಬೆಳೆಯಬೇಕು. "ಸದ್ಯ ಪಾಕಿಸ್ತಾನದ ಸರಕಾರ ಹಿಂದೂ ಅಲ್ಪಸಂಖ್ಯಾತರೊಂದಿಗೆ ವರ್ತಿಸಿದ, ವರ್ತಿಸುತ್ತಿರುವ ರೀತಿ ತುಂಬಾ ಕೆಟ್ಟದಾಗಿದೆ. ಇದು ಭವಿಷ್ಯದ ಎಲ್ಲ ಸಂಬಂಧಗಳನ್ನು ಬಾಧಿಸಬಾರದು. ಸಮಾಜದಲ್ಲಿ ಈಗ ಹುಟ್ಟಿರುವ ಹುಚ್ಚುತನ ಅಳಿಸಿ ಹೋಗಬೇಕು. ಭಾರತೀಯರು ದ್ವೇಷ ಮತ್ತು ಸಂಕುಚಿತತೆಯ ಎಲ್ಲೆಗಳನ್ನು ಕೊಡವಿ ಸೀಮಾತೀತರಾಗಿ ಬೆಳೆಯಬೇಕು. ಈ ಸನಾತನ ನೆಲ ನಾಚಿಕೆ ಪಟ್ಟುಕೊಳ್ಳುವ ಯಾವ ಕಾರ್ಯವೂ ಎಂದಿಗೂ ಭಾರತೀಯರಿಂದ ಆಗಬಾರದು. ಸಿಟ್ಟು ಮತ್ತು ದ್ವೇಷ ಮನುಷ್ಯನ ಅತಿ ಕೆಟ್ಟ ವೈರಿಗಳು. ಪ್ರಪಂಚ ಇವುಗಳೊಂದಿಗೆ ನೆಮ್ಮದಿಯಾಗಿ ಬಾಳಲು ಸಾಧ್ಯವಿಲ್ಲ. ಜಾತಿ, ಮತ ಅಂತಸ್ತುಗಳ ಮಿತಿಗಳಿಂದ ಹೊರ ಬಂದು ಬದುಕಿದರೆ ದೇವರ ಈ ಸೃಷ್ಟಿ ಎಷ್ಟೊಂದು ಅದ್ಭುತವಾಗಲು ಸಾಧ್ಯವಲ್ಲವೆ?"

ಗಾಂಧಿ ತಣ್ಣಗೆ ಕುಳಿತು ಭರವಸೆಯಿಂದ ಇಲ್ಲಿ ಈ ಸಂದೇಶವನ್ನು ನೀಡುತ್ತಿರಬೇಕಾದರೆ ಅಲ್ಲಿ ಲಖನೌನಲ್ಲಿ ಭಾರತದ ಪ್ರಥಮ ಪ್ರಧಾನಿ, ಗಾಂಧಿಯ ಮಾನಸ ಪುತ್ರ ನೆಹರು ಕಣ್ಣೀರು ಹಾಕುತ್ತ ಹೇಳುತ್ತಿದ್ದಾನೆ: "I had hoped for the dawn of great new age for India from August 15, but a series of unfortunate happenings has put us in a dense forest and, if we do not make a determined effort and cross it, our plight will be very difficult. Peace cannot be maintained by police and military alone."

ಭಾರತ ವಿಶ್ವಕ್ಕೆ ಹೇಗೆ ಮಾದರಿಯಾಗಬೇಕು, ಶಾಂತಿಯ ದಾರಿಯಾಗಬೇಕು ಎನ್ನುವುದನ್ನು ಕುರಿತು ಒಂದೆಡೆ ಗಾಂಧಿ ಸಂದೇಶ ನೀಡುತ್ತಿದ್ದರೆ ಪೂರ್ವ ಪಂಜಾಬ ಮತ್ತು ದೆಹಲಿಗಳಲ್ಲಿಯ ದಂಗೆಗಳು ನಿಯಂತ್ರಣಕ್ಕೆ ಬಾರದ್ದಕ್ಕೆ ಪ್ರಧಾನಿ ಕಣ್ಣೀರಿಡುತ್ತಿದ್ದಾರೆ. ಇದಕ್ಕೇ ಅನ್ನಬಹುದು ದೀಪದ ಬುಡದಲ್ಲಿಯೇ ಕತ್ತಲೆ ಎಂದು.

೨೦ ಅಕ್ಟೋಬರ್, ಸೋಮವಾರ. ಈ ದಿನವಂತು ಗಾಂಧಿ ಮೌನ. ವಾರದುದ್ದಕ್ಕೂ ತನಗೆ ಬೇಕಾದ, ಬೇಡವಾದ ಪ್ರೀತಿಯ, ಒತ್ತಾಯದ ಕ್ರಿಯೆಗಳಲ್ಲಿ ಮುಳುಗಿಹೋಗುವ ಗಾಂಧಿ ಈ ಒಂದು ದಿನವನ್ನು ಮಾತ್ರ ತನಗಾಗಿ, ತನ್ನ ತನು-ಮನಗಳ ಶುದ್ಧಿಗಾಗಿ ಕಾಯ್ದಿರಿಸಿಕೊಂಡಿದ್ದಾನೆ.

ನನ್ನ ಇತಿಹಾಸದ ತಿಳುವಳಿಕೆಗೆ ಒಂದು ಸೀಮೆ ಇರುವುದರಿಂದ ಈತನಿಗೂ ಮುಂಚೆ ಯಾರಾದರೂ ರಾಜಕೀಯದಲ್ಲಿದ್ದುಕೊಂಡು ಮೌನಕ್ಕೆ ಮೊರೆ ಹೋಗಿದ್ದರೆ? ಇದು ನನ್ನ ಪ್ರಶ್ನೆ. ನನಗೆ ಗೊತ್ತಿಲ್ಲ. ಗಾಂಧಿಯ ಸಮಕಾಲೀನ ಪ್ರಪಂಚದಲ್ಲಿ, ಆತನ ನಿರ್ಗಮನದ ನಂತರದಿಂದ ಇದುವರೆಗಿನ ದಿನಗಳಲ್ಲಿಯೂ ಇಂತಹ ಒಬ್ಬ ರಾಜಕೀಯ ನಾಯಕನನ್ನು ಕುರಿತು ನಾನು ಓದಿಲ್ಲ. ಇಂದಿಗೂ ನನಗೆ ಇದು ದೊಡ್ಡ ಕುತೂಹಲ. ಈ ಕುತೂಹಲ ಆತನ ಸಮಕಾಲೀನರಲ್ಲಿಯೂ ಇತ್ತು ಎನ್ನುವುದಕ್ಕೆ ಇಲ್ಲಿ ಒಂದು ನಿದರ್ಶನವಿದೆ:

ಸೋಮವಾರ ಬ್ರಿಟನ್ನಿನಿಂದ ಲೇಡಿ ಹ್ಯಾಂಡ್ಸ್ ಬಂದಿದ್ದಾಳೆ. ಅವಳಿಗೂ ನನ್ನ ನಿಮ್ಮ ಹಾಗೆಯೇ ಮೌನವ್ರತದ ಸೋಮವಾರ ದಿನ ಗಾಂಧಿ ಏನು ಮಾಡುತ್ತಾನೆ, ಆತನ ತಲೆಯಲ್ಲಿ ಯಾವ ಆಲೋಚನೆಗಳು ಇರುತ್ತವೆ ಎನ್ನುವುದನ್ನು ತಿಳಿಯುವ ಸಾಮಾನ್ಯ ಕುತೂಹಲ. ಈ ದಿನ ಬಂದು ಆಕೆ ತನ್ನ ಪ್ರಶ್ನೆಯನ್ನು ಗಾಂಧಿಗೆ ಬರೆದು ಕೊಟ್ಟಳು–"What are the thoughts uppermost in your mind when you observe silence? What do you think of while staying silent?"

ತಿಂಗಳೊ, ಹದಿನೈದು ದಿನಗಳೋ ಅನುಷ್ಠಾನಕ್ಕೆ ನಮ್ಮ ಮುಲ್ಲಾಗಳು ಮಠಾಧೀಶರು ಕುಳಿತೇಳುವುದರೊಳಗಾಗಿ ಅವರು, ಅವರ ಸುತ್ತಲಿನ ಸ್ವಘೋಷಿತ ಲೋಕ ಎಷ್ಟೆಲ್ಲ ಬದಲಾಗಿಬಿಡುತ್ತಾರೆ. ಜೀವಮಾನದ ಒಂದೇ ಒಂದು ಮೌನವನ್ನೂ ಬಡ್ಡಿ ಸಮೇತ ಭಕ್ತರ ಮೇಲೆ ಹೇರಿ, ನಮ್ಮ ಪೂಜ್ಯರು ಸಮಾಜವನ್ನು ಸಾಯುವವರೆಗೆ ಸುಲಿಯುತ್ತಲೇ ಹೋಗುತ್ತಾರೆ. ಈ ಸುಲಿಗೆಯನ್ನು ಅವರವರ ಸದ್ಭಕ್ತರು ಸಂಭ್ರಮಿಸುತ್ತಾರೆ. ಆದರೆ ಈ ಅರೆನಗ್ನ ಗಾಂಧಿಗೆ ಈ ಯೋಚನೆ ಯಾಕೆ ಹೊಳೆಯಲಿಲ್ಲ? ಅವನು ಮೂರ್ಖನಾಗಿದ್ದನೇ? ಆತನ ಮೌನವೋ, ಮಾತೋ ಇವೆರಡರ ಮಧ್ಯದ ವ್ಯತ್ಯಾಸವನ್ನು ತಿಳಿಯುವಷ್ಟಾದರೂ ನಮ್ಮ ಜನರು ಪ್ರಜ್ಞಾವಂತರಾಗಿದ್ದರೆ? ತನ್ನ ಮೂರು ಮಂಗಗಳ ಹಾಗೆ ತಾನೂ ಈ ಜನಗಳ ಮುಂದೆ ಒಂದು ನಾಲ್ಕನೆಯ ಮಂಗ ಎಂದಾತನಿಗೆ ಒಮ್ಮೆಯೂ ಅನ್ನಿಸಲಿಲ್ಲವೆ? ಇವು ಗಾಂಧಿಯೇ ಉತ್ತರಿಸಬೇಕಾದ ಪ್ರಶ್ನೆಗಳು.

ಗಾಂಧಿ ಮಾತ್ರ ತನ್ನ ಪ್ರತಿ ಸೋಮವಾರದ ಮೌನದ ಉದ್ದೇಶವನ್ನು ಲೇಡಿ ಹ್ಯಾಂಡ್ಸಳಿಗೆ ಈ ರೀತಿ ವಿವರಿಸಿದ –"ನಾನು ಈ ಇಡೀ ದಿನ ನನ್ನ ಜನರಿಗೆ

ಸದ್ಬುದ್ಧಿಯನ್ನು ಕೊಡು ಎಂದು ದೇವರಲ್ಲಿ ಮೊರೆ ಹೋಗುತ್ತೇನೆ. ನನ್ನ ಮೊಮ್ಮಗಳಾದ ಮನು –

ಈಶ್ವರ ಅಲ್ಲಾ ತೇರೆ ನಾಮ್
ಸಬ್‌ಕೊ ಸನ್ಮತಿ ದೇ ಭಗವಾನ್

ಎನ್ನುವ ಪ್ರಾರ್ಥನೆಯನ್ನು ನನಗೆ ಪರಿಚಯ ಮಾಡಿಸಿದಳು. ಇಡೀ ಸೋಮವಾರ ಇದೇ ನನ್ನ ಉಸಿರಾಟವಾಗಿರುತ್ತದೆ. ನೌಖಾಲಿಯ ದಂಗೆಗಳಿಂದ ಇದುವರೆಗೆ ನನ್ನೊಂದಿಗಿರುವ ಎರಡು ಸಂಗಾತಿಗಳು– ಒಂದು ಈ ಪ್ರಾರ್ಥನೆ, ಮತ್ತೊಂದು ಈ ಮನು. ನಾನು ದೇವರಲ್ಲಿ ಭಿಕ್ಷೆ ಬೇಡುವುದಿಲ್ಲ. ಸರ್ವಾಂತರ್ಯಾಮಿಯಾದ ಭಗವಂತನಿಗೆ ಯಾವ ಆಮಿಷವನ್ನೂ ಒಡ್ಡುವುದಿಲ್ಲ. ನಾವು ಬೇಡಿಕೊಂಡಾಗ ಮಾತ್ರ ಆತ ನಮ್ಮ ಇಚ್ಛೆಗಳನ್ನು ಪೂರೈಸುತ್ತಾನೆ ಎಂದು ಕೂಡ ನಾನು ಅಂದುಕೊಂಡಿಲ್ಲ. ನನಗೇನು ಬೇಕು? ಯಾವುದು ಉಪಕಾರಿ ಎನ್ನುವುದನ್ನು ನಾನು ಕೇಳುವ ಮುಂಚೆಯೇ ಆತ ನೀಡಿದ್ದಾನೆ. ಆತ ಕರುಣಾಮಯಿ. ಸಂಕಷ್ಟದಲ್ಲಿರುವವನಿಗಾಗಿ ಆತ ಸದಾ ತೊಡಗಿಕೊಂಡಿದ್ದಾನೆ. ಹೀಗಿರುವಾಗ ಆತನ ಮುಂದೆ ಬೇಡಿಕೊಳ್ಳುವ ಪ್ರಶ್ನೆ ಎಲ್ಲಿ ಬಂತು?

ಸೋಮವಾರದ ನನ್ನ ಈ ಪ್ರಾರ್ಥನೆಗೆ ಆಧ್ಯಾತ್ಮಿಕ ಅರ್ಥವೂ ಇದೆ. ಇದೊಂದು ರೀತಿ ಆತ್ಮಾವಲೋಕನದ ದಿನ. ಹೀಗೆ ಮೌನವಾಗಿರೋದು ಹೆಚ್ಚು ಕಡಿಮೆ ನನ್ನ ಜೀವನದ ಭಾಗವೇ ಆಗಿಹೋಗಿದೆ. ಇದಕ್ಕಾಗಿ ನಾನು ವಿಶೇಷವಾಗಿ ಹೆಣಗಾಡುವುದಿಲ್ಲ.

ರೂಪಾತೀತ ಭಗವಂತನಿಗೆ ನಾವು ನಮ್ಮ ಅವಶ್ಯಕತೆಗೆ ತಕ್ಕಂತೆ ಅನೇಕ ರೂಪಗಳನ್ನು ಕೊಟ್ಟಿದ್ದೇವೆ. ಆದರೆ ನಮ್ಮ ಎಲ್ಲ ಕ್ರಿಯೆಗಳಲ್ಲಿ ಆತನನ್ನು ನೋಡಬೇಕಿದೆ. ನಾವು ಮಾಡುವ ಪ್ರತಿ ಕಾರ್ಯವೂ ಯಜ್ಞವಾಗಬೇಕು ಎಂದು ನಾವು ಬಯಸುವುದಾದರೆ ಅದಕ್ಕೆಲ್ಲ ಆತನನ್ನು ಸಾಕ್ಷಿಯಾಗಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ, ನೂಲು ಸುತ್ತುವವ ಚರಕದಲ್ಲಿ ಭಗವಂತನನ್ನು ಕಾಣುತ್ತಾನೆ. ನನಗೆ ಇಡೀ ಪ್ರಪಂಚದುದ್ದಕ್ಕೂ ಭಗವಂತ ಕಾಣುತ್ತಾನೆ. ನನ್ನ ಈ ಭಗವಂತ ಭಾರತವಾಗಿದ್ದಾನೆ, ಪಾಕಿಸ್ತಾನವಾಗಿದ್ದಾನೆ, ಪ್ರಪಂಚದ ಪ್ರತಿಯೊಂದು ಆಲೋಚನೆ, ಶಕ್ತಿ, ಸಮೃದ್ಧಿಯಾಗಿದ್ದಾನೆ."

ಇದು ಲೇಡಿ ಹ್ಯಾಂಡ್ಸಳ ಪ್ರಶ್ನೆಗೆ ಗಾಂಧಿಯ ಉತ್ತರ. ಈ ಉತ್ತರವನ್ನು ಬರೆಯುತ್ತಾ ತನ್ನ ಸೀಮಾತೀತವಾದ ಪ್ರಪಂಚದಲ್ಲಿ ಗಾಂಧಿ ಇತ್ತ ನಿಶ್ಚಿಂತನಾಗಿದ್ದರೆ ಆ ಕಡೆಯಿಂದ ಬಂದು ಅಪ್ಪಳಿಸುತ್ತವೆ ಆತನ ಸಂಪೂರ್ಣ ಆಲೋಚನೆಗೆ, ಅಧ್ಯಾತ್ಮಕ್ಕೆ, ನಂಬಿಕೆಗೆ ವಿರುದ್ಧವಾದ ಕ್ರಿಯೆಗಳು.

ಈ ದಿನ ಮಸೂರಿಯಲ್ಲಿ ಹಾಡು ಹಗಲೇ ಪ್ರೊ. ರಫಿ ಅಹಮದ್ ಕಿದ್ವಾಯಿ ಅವರ ಸಹೋದರನ ಕೊಲೆಯಾಗಿದೆ. ದೆಹಲಿಯಲ್ಲಿಯೂ ಕೂಡ ಕೆಲವು ಹಿಂದೂ ಯುವಕರು ಸಾರ್ವಜನಿಕ ಸೇವೆಯಲ್ಲಿ ನಿರತರಾಗಿದ್ದ ಮುಸ್ಲಿಂ ವೈದ್ಯನ ಕೊಲೆ ಮಾಡಿದ್ದಾರೆ. ಇದನ್ನೆಲ್ಲ ಕೇಳಿ ಗಾಂಧಿಗೆ ಏನು ಮಾಡಬೇಕೆಂಬುದೇ ಹೊಳೆಯುತ್ತಿಲ್ಲ. ಹಿಂದೂಗಳು ಮುಸ್ಲಿಮರು ಪರಸ್ಪರ ಶಾಂತಿಗಾಗಿ ಸೇರಿಕೊಳ್ಳದೆ ಈ ಸಮಾಜಕ್ಕೆ ಭವಿಷ್ಯವಿಲ್ಲ. ಆದರೆ ಇಬ್ಬರೂ ಅದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿಲ್ಲ. ಆಗ ಗಾಂಧಿ ಅಂದುಕೊಳ್ಳುತ್ತಾನೆ, "My wings are clipped. If I could grow them again, I would fly away to see Pakistan. I tell everyone that if we wish to see God and establish true Swaraj, we must all unite and declare that India is not a fallen country. Then our prestige will rise? and we will have the time we need to banish hunger and thirst."

ಗಾಂಧಿಯ ಕಾರ್ಯಕ್ಷೇತ್ರ ಆಫ್ರಿಕಾವೋ, ಭಾರತವೋ ಇಲ್ಲಾ ಪಾಕಿಸ್ತಾನವೋ? ಆತ ಶ್ರಮಿಸುತ್ತಿರುವುದು ಹಿಂದುಗಳಿಗಾಗಿಯೋ, ಮುಸ್ಲಿಂರಿಗಾಗಿಯೋ, ಒಟ್ಟಾರೆ ಆತ ಹಿಂಸೆಯ ಪಕ್ಷದವನಲ್ಲ. ಎಳೆಯಾದ ಬಾಳು ಹಿಂಸೆಯ ದಾಳಿಗೆ ಒಳಗಾಗುವುದೆಂದರೇನರ್ಥ ಎಂದ ಗಾಂಧಿ ಹಿಂದೆ ಭಗತ್‌ಸಿಂಗರ ವಿಷಯದಲ್ಲಿಯೂ ಇದನ್ನೇ ಸ್ಪಷ್ಟಪಡಿಸಿದ್ದ– "ರಾಜಕೀಯ ಹಿಂಸೆ ಯಾವುದೇ ರೂಪ, ವಿಧಾನಗಳಲ್ಲಿರಲಿ ನಾನದನ್ನು ಖಂಡಿಸುತ್ತೇನೆ. ಇವರ ಆದರ್ಶವನ್ನು, ಹಿಂಸೆಯ ಈ ದಾರಿಯನ್ನು ಅನುಸರಿಸಬಾರದೆಂದು ನಾನು ಈ ದೇಶದ ತರುಣರಿಗೆ ಎಚ್ಚರಿಕೆಯನ್ನು ನೀಡುತ್ತೇನೆ. ಅವರ ಧೈರ್ಯ ಮತ್ತು ತ್ಯಾಗಗಳನ್ನು ಮೆಚ್ಚಿರುವ ನಾನು ಅವರ ಸಾವಿಗೆ ಅಪಾರವಾಗಿ ನೊಂದಿದ್ದೇನೆ" ಎಂದಿದ್ದಾನೆ.

ಅಂದಹಾಗೆ ಗಾಂಧಿ ಈ ತನ್ನ ಹೇಡಿತನದ ಸಮರ್ಥನೆಗೆ ರಾಮಭಜನೆಯನ್ನೂ ಬಳಸಿಕೊಂಡ, ಮೂಲ 'ರಘುಪತಿ ರಾಘವ' ಪದ್ಯದಲ್ಲಿ ಈಶ್ವರ–ಅಲ್ಲಾ ತೇರೆನಾಮ್, ಸಬಕೋ ಸನ್ಮತಿ ದೇ ಭಗವಾನ್' ಎಂದು ಸೇರಿಸಿಕೊಂಡ ಎಂಬ ಆಪಾದನೆಯೂ ಈತನ ಮೇಲಿದೆ.

❑



ನನ್ನನ್ನು ಕೊಂದುಬಿಡು

ಎರಡೂ ರಾಷ್ಟ್ರಗಳಲ್ಲಿ ಶಾಂತಿ ಸಮೃದ್ಧಿಯ ಕನಸು ಹೊತ್ತು ಜಿನ್ನಾರ ಬಳಿ ಗಾಂಧಿ ಸುಹ್ರಾವರ್ದಿಯನ್ನ ಅದೆಷ್ಟು ಬಾರಿ ಕಳುಹಿಸಿದನೋ; ಅಷ್ಟೂ ಬಾರಿ ಬರಿಗೈಯಿಂದಲೇ ಬಂದ ಸುಹ್ರಾವರ್ದಿ. ಆದರೂ ಆತನ ಈ ಆಸೆ ಸೋತಿಲ್ಲ. ದುರಭಿಮಾನದ ಉತ್ತುಂಗದಲ್ಲಿರುವ ಜಿನ್ನಾರ ಬಳಿ ಹೋಗಲು ಈಗ ಭಾರತೀಯ ನಾಯಕರಾರೂ ಸಿದ್ಧರಿಲ್ಲ. ಮುಸ್ಲಿಂ ಲೀಗ್‌ನ ಆಲೋಚನೆಯಲ್ಲಿ ಆರಂಭದಿಂದಲೂ ಜಿನ್ನಾರೊಂದಿಗೆ ಇದ್ದವರು ಸುಹ್ರಾವರ್ದಿ. ಕೇಳಿದರೆ ಈತನ ಮಾತು ಕೇಳಬೇಕು ಜಿನ್ನಾ. ಬೇರೆ ಇನ್ನಾರದೂ ಸಾಧ್ಯವಿಲ್ಲ. ಆದರೆ ಪ್ರತಿ ಬಾರಿಯೂ ಹೋಗಿ ಖಾಲಿ ಕೈಯಿಂದ ಬರುವ ಸುಹ್ರಾವರ್ದಿಯೂ ಈಗ ಸೋತುಹೋಗಿದ್ದಾನೆ. ಪಾಕಿಸ್ತಾನ ಏನನ್ನು ಮಾಡಲು ಇಚ್ಚಿಸುತ್ತದೆ ಎನ್ನುವುದೇ ಆತನಿಗೆ ಹೊಳೆಯುತ್ತಿಲ್ಲ. ಅಲ್ಪ ಸಂಖ್ಯಾತರಾದ ಹಿಂದೂಗಳನ್ನು ಅದು ತನ್ನಲ್ಲಿ ಇಟ್ಟುಕೊಳ್ಳುತ್ತದೆಯೋ

ಅಥವಾ ಶಾಶ್ವತವಾಗಿ ಅವರನ್ನು ಒಕ್ಕಲೆಬ್ಬಿಸಲು ಬಯಸುತ್ತದೆಯೋ? ಅದೂ ತಿಳಿಯುತ್ತಿಲ್ಲ. ಗಾಂಧಿ ಮಾತ್ರ ಇಲ್ಲಿನ ಭಾರತದ ಮುಸ್ಲಿಂರ ರಕ್ಷಣೆಗಾಗಿ ಸರ್ದಾರ ಪಟೇಲರಿಗೇ ಆಜ್ಞಾಪಿಸಿದ್ದಾನೆ. ಅನಾರೋಗ್ಯದಿಂದ ಪಟೇಲರು ನರಳುತ್ತಿದ್ದರೂ ಇದು ಗಾಂಧಿಯ ಆಜ್ಞೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಭೂಮಿ ಆಕಾಶಗಳನ್ನು ಒಂದು ಮಾಡಿ ಮುಸ್ಲಿಂರ ಪ್ರಾಣ-ಮಾನ ರಕ್ಷಣೆಗಾಗಿ ನಿಂತಿದ್ದಾರೆ. ಆದರೆ ಇದೆಲ್ಲವೂ ಸತ್ಯವೇ? ಇದು ಸತ್ಯ ಎನ್ನುವುದಾದರೆ ಈ ಮುಂದಿನ ಘಟನೆ ಏನು?

ನಿನ್ನೆ ದೆಹಲಿಯ ಬೀದಿಯಲ್ಲಿ ಕೊಲೆಯಾದ ಮುಸ್ಲಿಂ ವೈದ್ಯನ ವಿಧವೆ ಹೆಂಡತಿ ಈಗ ತನ್ನ ಮಕ್ಕಳೊಂದಿಗೆ ಗಾಂಧಿಯ ಮುಂದೆ ಒಂದು ಅಹವಾಲನ್ನು ಇಟ್ಟುಕೊಂಡು ನಿಂತಿದ್ದಾಳೆ. ಆಕೆ ಈ ಗಾಂಧಿಗೆ ಮತ್ತೇನೂ ಕೇಳುತ್ತಿಲ್ಲ. ಬಿರ್ಲಾಹೌಸ್ ಎಂಬ ಬಾಡಿಗೆ ಮನೆಯಲ್ಲಿ ಇರುವ ಈತ ಕೇಳಿದರೆ ಏನು ಕೊಟ್ಟಾನು? ಹೀಗಾಗಿ, ರೋಸಿ ಹೋಗಿರುವ ಆಕೆ ತನ್ನ ಗಂಡನಂತೆಯೇ ಈ ಕ್ಷಣ ತನ್ನ ಹಾಗೂ ತನ್ನ ಮಕ್ಕಳ ಕೊಲೆಯಾಗಬೇಕು. ಈ ಒಂದು ಸಣ್ಣ ಆಸೆ ಈಡೇರಿದರೆ ಸಾಕು. ಈ ಆಸೆಯನ್ನು ಗಾಂಧಿ ಈಡೇರಿಸಲು ಸಾಧ್ಯವೆ?

ಇದನ್ನು ಕೇಳಿ ಕಂಬನಿ ಮಿಡಿದ ಗಾಂಧಿ ಈ ಸಾಯಂಕಾಲದ ಪ್ರಾರ್ಥನೆಯಲ್ಲಿ ಇದರೊಂದಿಗೆ ಇನ್ನೂ ಗಂಭೀರವಾದ ಚರ್ಚೆಯೊಂದನ್ನು ಎತ್ತಿಕೊಂಡಿದ್ದಾನೆ. ದೆಹಲಿಯ ತುಂಬ ಅನಾಮಧೇಯ ಸಂದೇಶವೊಂದು ರವಾನೆಯಾಗುತ್ತಿದೆ. 'ಈ ಕ್ಷಣದಲ್ಲಿ ಭಾರತದಲ್ಲಿ ಬಾಕಿ ಉಳಿದಿರುವ ಬ್ರಿಟಿಷ್ ಅಧಿಕಾರಿಗಳನ್ನು, ಅವರ ಹೆಣ್ಣು ಮಕ್ಕಳು, ಮಕ್ಕಳನ್ನು ಕೊಲೆ ಮಾಡಬೇಕು. ಆ ಮೂಲಕ ಇದುವರೆಗೆ ಕೊಲೆಯಾದ ಲಕ್ಷಾಂತರ ದೇಶಭಕ್ತ ಭಾರತೀಯರ ಆತ್ಮಕ್ಕೆ ಶಾಂತಿ ಸಿಗುತ್ತದೆ,' ಎಂದು. ಈ ಸಾಲುಗಳನ್ನು ಓದಿದ ಗಾಂಧಿಗೆ ತನ್ನ ಕಣ್ಣು ಮುಂದೆ ಕುರೂಪಗೊಳ್ಳುತ್ತಿರುವ ಭಾರತದ ಸಂಸ್ಕೃತಿ ಹಾಗೂ ಭಾರತೀಯರನ್ನು ಕುರಿತು ಏನು ಮಾತನಾಡಬೇಕೆನ್ನುವುದು ಹೊಳೆಯಲಿಲ್ಲ. ಕೇವಲ ಭಾರತೀಯ ಮಿಲಿಟರಿ ಮತ್ತು ಪೋಲಿಸ್ ವ್ಯವಸ್ಥೆಯನ್ನು ಬಳಸಿ ಸುರಕ್ಷಿತವಾಗಿ ತಮ್ಮ ದೇಶವನ್ನು ತಲುಪಬೇಕೆಂದಿರುವ ಬ್ರಿಟಿಷರನ್ನು ಸಾವಿನಿಂದ ರಕ್ಷಿಸುವುದು ಸಾಧ್ಯವಿಲ್ಲ ಎನ್ನುವುದೂ ಗಾಂಧಿಗೆ ಗೊತ್ತು. ಯಾಕೆಂದರೆ ಇದು ನೂರಾರು ವರ್ಷಗಳ ಪ್ರತೀಕಾರದ ಧ್ವನಿ. ಆತ್ಮಸಾಕ್ಷಾತ್ಕಾರದ ಹೊರತು ಇಂಥವುಗಳನ್ನು ತಡೆಯುವುದೂ ಸಾಧ್ಯವಿಲ್ಲ ಎಂದೂ ಆತನಿಗೆ ಗೊತ್ತು. ಈಗ ಗಾಂಧಿಗೆ ಮತ್ತೆ ಬೇಕಾಗಿರುವುದು ಜನರ ವಿಶ್ವಾಸ, ಸಹಕಾರ ಮತ್ತು ಪ್ರಾರ್ಥನೆ. ಕಣ್ಣುಮುಚ್ಚಿ ಈಗ ಪ್ರಾರ್ಥನೆಗೆ ಕುಳಿತುಕೊಂಡ

ಗಾಂಧಿ ಸಮಸ್ಯೆಗೆ ಪರಿಹಾರ ಹುಡುಕುವುದರಲ್ಲಿ ನಿರತನಾದ. ಹೀಗಾಗಿ ಹದಗೆಡುತ್ತಿರುವ ತನ್ನ ಆರೋಗ್ಯದ ಕಡೆಗೆ ಆತನಿಗೆ ಮತ್ತೂ ಗಮನ ಹರಿಸುವುದಾಗಲಿಲ್ಲ. ಕೆಮ್ಮು ಉಲ್ಬಣಿಸುತ್ತಲೇ ಹೋಯಿತು. ವ್ಯಕ್ತಿ ಆರೋಗ್ಯವನ್ನು ಸರಿಯಾಗಿ ಗಮನಹರಿಸದೇ ಹೋದರೆ ಮಾತ್ರ ರೋಗಗಳು ಮನೆ ಮಾಡುತ್ತವೆ ಎಂದು ಹೇಳುತ್ತಿದ್ದ ಗಾಂಧಿ ಈಗ ಸ್ವತಃ ಆ ಮಾತನ್ನು ಒಪ್ಪಿಕೊಂಡಂತಾಗಿದೆ. ಆದರೆ ಆತನ ಇನ್ನೊಂದು ವಾದವೇನೆಂದರೆ 'Physical suffering can be and should be, transmuted into spiritual joy.'

ಇಂದು ಮಂಗಳವಾರ, ಅಕ್ಟೋಬರ್ ೨೧. ಗಾಂಧಿಯ ಉಳಿದ ದಿನಗಳಿಗೆ ಹೋಲಿಸಿದಾಗ ಒಂದಿಷ್ಟು ಮಂಗಳಕಾರಿಯಾಗಿದೆ ಅಷ್ಟೆ. ಗೆಳೆಯ ಓಂಪ್ರಕಾಶರಿಗೆ ಅಹಿಂಸೆಯನ್ನು ಕುರಿತು ಪತ್ರ ಬರೆಯುತ್ತಿದ್ದಾನೆ. ಆತ ಹೇಳುತ್ತಾನೆ, ಅಹಿಂಸೆಯೆನ್ನುವುದು ಸಾವಿನ ಎದುರೂ ಕೂಡ ಒಂದು ಪಲಾಯನವಲ್ಲ ಅಥವಾ ಹಿಂಸಿಸಿದವನ ಮೇಲೆ ಆಕ್ರಮಣವೂ ಅಲ್ಲ.

ಇಷ್ಟರೊಳಗೆ ಅನುಯಾಯಿ ಒಬ್ಬರು ಇಂದಿನ ದಿನಪತ್ರಿಕೆಯನ್ನು ತಂದು ಗಾಂಧಿಯ ಮುಂದಿಟ್ಟರು. ಚಕ್ರವರ್ತಿ ಸಿ. ರಾಜಗೋಪಾಲಾಚಾರಿಯವರು ಗಾಂಧಿಯನ್ನು ಕುರಿತು ದಾರ್ಜಿಲಿಂಗ್‌ನಲ್ಲಿ ಕೆಲವು ಮಹತ್ವದ ಮಾತುಗಳನ್ನಾಡಿದ್ದಾರೆ. ಭಾರತ ಅನೇಕ ಅನಿರೀಕ್ಷಿತ ಅನಾಹುತಗಳ ಮಧ್ಯದಿಂದ ಸಾಗಿಹೋಗಿದೆ. ಆಗೆಲ್ಲ ನಮ್ಮನ್ನು ಬೆಳಕಾಗಿ ರಕ್ಷಿಸಿದವರು, ಗುರು-ಬಂಧುವಾಗಿ ದಾರಿ ತೋರಿಸಿದವರು ಮಹಾತ್ಮಾ ಗಾಂಧಿ. ಗಾಂಧಿ ಯಾವಾಗಲೂ ಸತ್ಯಪಕ್ಷಪಾತಿ. ಆ ದಾರಿಯಲ್ಲಿ ಸಾಗುವಾಗ ಯಾರು ಏನೆನ್ನುತ್ತಾರೆ ಎನ್ನುವುದರ ಬಗ್ಗೆ ಗಾಂಧಿ ತಲೆ ಕೆಡಸಿಕೊಳ್ಳುವುದಿಲ್ಲ. ಶಾಂತಿ, ಸನ್ಮಾರ್ಗ ಮತ್ತು ಏಕತೆಯ ಬಗೆಗೆ ಗೌರವವಿಟ್ಟುಕೊಂಡವರು ಗಾಂಧಿ. ಮುಖಸ್ತುತಿ ಅವರಿಗೆ ಇಷ್ಟವಾಗುವುದಿಲ್ಲ. ಹಿಂದೊಮ್ಮೆ ಗಾಂಧಿಯನ್ನು ಅವರ ವಿಚಾರಗಳನ್ನು ಬಲವಾಗಿ ಖಂಡಿಸುತ್ತಿದ್ದವರು ಈಗ ಗಾಂಧಿಯ ನಿಜವಾದ ಅನುಯಾಯಿಗಳಾಗಿದ್ದಾರೆ. ಹೀಗಾಗಿ ನನಗೆ ನಂಬಿಕೆ ಇದೆ. ಮುಂದೊಂದು ದಿನ ಈ ಪ್ರಪಂಚ ಭಾರತದ ಈ ಗಾಂಧಿಯ ಮೌಲ್ಯಗಳನ್ನು ಪ್ರಪಂಚದ ಮೌಲ್ಯಗಳಾಗಿ ಸ್ವೀಕರಿಸುತ್ತದೆ.

ಪತ್ರಿಕೆಯ ಮುಖಪುಟದಲ್ಲಿಯೇ ಪ್ರಕಟವಾಗಿದ್ದ ರಾಜಗೋಪಾಲಾ-ಚಾರಿಯವರ ಸ್ತುತಿಯ ಈ ಮಾತುಗಳು ಗಾಂಧಿಗೆ ಖುಷಿ ಕೊಡಲಿಲ್ಲ. ಯಾಕೆಂದರೆ ವರ್ತಮಾನದಲ್ಲಿ ಆತ ನಿರಂತರವಾಗಿ ಹಿಂಸೆ, ಮೋಸ ಮತ್ತು ಜನಾಂಗೀಯ

ಕಲಹಕ್ಕೆ ನಿತ್ಯ ಸಾಕ್ಷಿಯಾಗಿದ್ದ. ಇಡೀ ಭಾರತ ಒಂದೆಡೆ ಇರಲಿ, ಸದ್ಯ ತಾನು ವಾಸಿಸಿದ್ದ ದೆಹಲಿಯ ವಾತಾವರಣವೂ, ರಾಜಕೀಯವೂ ಆತನ ಕೈ ಬಿಟ್ಟು ಹೋಗಿದ್ದವು. ಇಷ್ಟೇ ಹೊಗಳಿಕೆ ಸಾಕಾಗಿರುವಾಗ ಇಂಗ್ಲೆಂಡಿನಿಂದ ಮಿಸ್ಟರ್ ಸ್ಟಿಫನ್ ಹಾಬ್‌ಹೌಸ್ ಕೂಡ ಪತ್ರ ಬರೆದು ರಾಜಗೋಪಾಲಾಚಾರಿಯಂತೆ ಗಾಂಧಿಯ ಸಾಧನೆಯನ್ನು ಶ್ಲಾಘಿಸಿದ್ದಾರೆ. ಆದರೆ ಇದೆಲ್ಲವನ್ನು ಧಿಕ್ಕರಿಸಿದ ಗಾಂಧಿ ತಣ್ಣಗೆ ಉತ್ತರಿಸಿದ, 'ನಿಮ್ಮ ಪ್ರೋತ್ಸಾಹಕ್ಕೆ ಧನ್ಯವಾದಗಳು ಗೆಳೆಯ. ಆದರೆ ಗೊತ್ತಿರಲಿ ನಾನು ಭಾರತದಲ್ಲಿ ಸದ್ಯ ನಡೆದಿರುವ ದುರಂತ ನಾಟಕಕ್ಕೆ ಸಾಕ್ಷಿಯಾಗುವುದನ್ನು ಹೊರತುಪಡಿಸಿದರೆ ಮತ್ತೇನೂ ಆಗಲು ಸಾಧ್ಯವಾಗಿಲ್ಲ.'

ಈ ಪರಸ್ಪರ ಹೊಗಳಿಕೆ, ರಾಜಕೀಯ ನಿರಂತರವಾಗಿರುವಾಗ ಅಖಿಲ ಭಾರತೀಯ ವಿದ್ಯಾರ್ಥಿ ಗುಂಪಿನ ನಾಯಕರೊಬ್ಬರು ಬಂದು ಇದೇ ದಿನ ಗಾಂಧಿಯನ್ನು ಕಂಡರು. ತಾವು ಕನಿಷ್ಟ ಹತ್ತು ಸಾವಿರ ಸಂಖ್ಯೆಯಲ್ಲಿದ್ದು, ಗಾಂಧಿ ಇಷ್ಟಪಡುವ ಯಾವುದೇ ಸಂದರ್ಭದಲ್ಲಿ ಬಂದು ಸಹಕಾರ ನೀಡುವುದಾಗಿ ಭರವಸೆ ಕೊಟ್ಟರು. ಗಾಂಧಿಗೆ ಖುಷಿಯಾಯಿತು. ಆನೆಯ ಬಲ ಬಂದಂತಾಯಿತು. ಲಖನೌನಿಂದ ದೆಹಲಿಗೆ ಹೊರಟಿದ್ದ ಪ್ರಧಾನಿ ನೆಹರು ಆನಂತರ ಗಾಂಧಿಯನ್ನು ಕಂಡು ಕಾಶ್ಮೀರದ ಜನತೆಯ ಗೋಳನ್ನು ಬಿಡಿಬಿಡಿಯಾಗಿ ಬಿಚ್ಚಿಟ್ಟ. ಈ ದಿನವೇ ಬಾಂಬೆಯಿಂದ ಮಿಸ್ಟರ್ ಡಿ.ಜಿ.ತೆಂಡೂಲ್ಕರ್ ಗಾಂಧಿಯ ಜೀವನಚರಿತ್ರೆಯನ್ನು ಬರೆಯಲು ಅವಕಾಶ ಕೋರಿ ಗಾಂಧಿಗೆ ಪತ್ರ ಬರೆದಿದ್ದಾರೆ. ಈ ಕಾರಣ ತನ್ನ ನಿಧನದವರೆಗೂ ಮಹಾದೇವ ದೇಸಾಯಿ ಬರೆದಿಟ್ಟ ಡೈರಿಗಳು ಈಗ ಗಾಂಧಿಗೆ ಬೇಕಾಗಿವೆ. ತೆಂಡೂಲ್ಕರ್ ಕಳೆದ ಅನೇಕ ತಿಂಗಳುಗಳಿಂದ ಈ ಡೈರಿಗಳನ್ನು ಕೇಳಿ ಪತ್ರ ಬರೆಯುತ್ತಲೇ ಇದ್ದಾನೆ. ಆದರೆ ನೌಖಾಲಿ ದೆಹಲಿಯ ಹಿಂಸೆಗಳಲ್ಲಿ ತತ್ತರಿಸಿ ಹೋಗಿದ್ದ ಗಾಂಧಿಗೆ ಅತ್ತ ಗಮನ ಹರಿಸುವುದೇ ಆಗಿಲ್ಲ. ಹೀಗಾಗಿ ಗಾಂಧಿ ಮಿಸ್ಟರ್ ನರಹರಿ ಫಾರಿಖನಿಗೆ, ಮರೆಯದೆ ತೆಂಡೂಲ್ಕರರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕಾಗಿ ತಿಳಿಸಿದ.

ಇಷ್ಟು ಕೆಲಸ ಮುಗಿಸುತ್ತಲೇ ಮನುಳ ಹೆಗಲಾಸರೆ ಹಿಡಿದು ಅವಸರವಾಗಿ ಬಂದು ಗಾಂಧಿ ಮಂಗಳವಾರ ಸಾಯಂಕಾಲದ ಪ್ರಾರ್ಥನೆಗೆ ಕುಳಿತುಕೊಂಡ. ನಿತ್ಯವೂ ಆತನ ಪ್ರಾರ್ಥನೆಯನ್ನು ಅಮಾನವೀಯವಾದ ಒಂದಿಲ್ಲಾ ಒಂದು ಘಟನೆ ಬಾಧಿಸುತ್ತಿದೆ. ಆತನ ಒಳಗೆ ಸಮಾಧಾನವಿಲ್ಲ. ಈ ದಿನವಂತೂ ದೆಹಲಿಯಲ್ಲಿ ಹಾಡುಹಗಲೆ ಒಬ್ಬ ಸರಕಾರಿ ಹಿಂದೂ ನೌಕರನ ಕೊಲೆಯಾಗಿದೆ. ಕೊಲೆಯಾದ ವ್ಯಕ್ತಿ

ನಿರುಪದ್ರವಿ. ತನ್ನ ಪಾಲಿಗೆ ತಾನು ಸರಕಾರಿ ಕೆಲಸವನ್ನು ಮಾಡಿಕೊಂಡಿದ್ದ ಸಾಮಾನ್ಯ ಕೆಲಸಗಾರ. ಕೊಲೆ ಮಾಡಿದವರಿಗೆ ಜಾತಿ ಬಿಟ್ಟು ಬೇರೆ ಕಾರಣಗಳಿಲ್ಲ. ತಾವು ಕೇಳಿದ ಯಾವುದೋ ಒಂದು ಕೆಲಸವನ್ನು ಮಾಡಿಕೊಟ್ಟಿಲ್ಲ ಎಂಬ ನೆಪ ಒಡ್ಡಿ ನಾಲ್ಕು ಜನ ಪುಂಡರು ಆ ಅಮಾಯಕನ್ನು ಕೊಂದುಹಾಕಿದ್ದಾರೆ. ತಮ್ಮ ಬಳಿ ಬಂದೂಕು ಇದೆ ಎನ್ನುವುದು ಕೊಲೆಗೆ ಮತ್ತೊಂದು ಕಾರಣವಾಗಿರಬಹುದೇನೊ. ಹೀಗೆ ಆಯುಧವೂ ಒಂದು ಸಮರ್ಥನೆಯ ಕಾರಣವಾಗಿ ಮನುಷ್ಯನನ್ನ ನಿಯಂತ್ರಿಸುವುದಾದರೆ ಮನುಷ್ಯತ್ವದ ಗತಿಯೇನು? ಇದು ಗಾಂಧಿಯನ್ನು ಮತ್ತೆ ಮತ್ತೆ ಕಾಡುವ ಪ್ರಶ್ನೆ. ಪ್ರಾರ್ಥನೆಯಲ್ಲಿ ಆತ ಕೇಳುತ್ತಾನೆ, 'If we continue to be behave like this, what a terrible situation it will be into which we will land! No one of us can then live in peace.'

ಶಬ್ದಶಃ ೧೯೪೭ ಈ ದಿನಗಳಲ್ಲಿ ಭಾರತ-ಪಾಕಿಸ್ತಾನಗಳಲ್ಲಿ ನಡೆದದ್ದೇನು? ಗಾಂಧಿಯನ್ನು ಅವಿವೇಕಿ, ವಿವೇಚನಾಹೀನ ಎಂದು ಟೀಕಿಸುತ್ತಿದ್ದವರು ಅದ್ಯಾವ ವಿವೇಕಯುಕ್ತ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು? ಭಾರತದಂತಹ ಗುಲಾಮರಾಷ್ಟ್ರಕ್ಕೆ ಸೈನ್ಯವೇ ಇಲ್ಲದ ದಿನಗಳಲ್ಲಿ ಮನುಷ್ಯನೇ ಮಹಾಶಕ್ತಿ ಎಂದು ಹೇಳಲು ಹೊರಟ ಈ ಗಾಂಧಿ ಎಲ್ಲಿ ತಪ್ಪಿದ? ಗೊತ್ತಿರಬೇಕಾದ ವಿಚಾರ ಇಡೀ ಬದುಕನ್ನೇ ಮಹಾಯುದ್ಧಗಳಲ್ಲಿ ಪ್ರಪಂಚದ ಏಕಮೇವಾದ್ವಿತೀಯ ಎನಿಸಿಕೊಳ್ಳ ಹೊರಟಿದ್ದ ನೆಪೋಲಿಯನ್ ಕೊನೆಗೆ ಈ ಗಾಂಧಿಯ ಧಾಟಿಯಲ್ಲಿಯೇ ಆಲೋಚಿಸಿದ್ದ. ಸೆಂಟ್‌ಹೆಲೀನಾದ ಸೆರೆಮನೆಯಲ್ಲಿ ಒಂದು ಸತ್ಯ ಹೇಳಿದ್ದ- "ಜಗತ್ತಿನಲ್ಲಿ ಇರುವುದು ಎರಡೇ ಶಕ್ತಿಗಳು, ಒಂದು ಆತ್ಮ, ಮತ್ತೊಂದು ಖಡ್ಗ. ಕೊನೆಯಲ್ಲಿ ಆತ್ಮವೇ ಖಡ್ಗವನ್ನೂ ಗೆಲ್ಲುವುದು." ಇದು ನೆಪೋಲಿಯನ್‌ನ ಅನುಭವದ ಮಾತು, ರಾಜಕೀಯ ಭಾಷಣವಲ್ಲ. ಇದನ್ನು ನಾವು ಒಪ್ಪುವುದಾದರೆ ಗಾಂಧಿಯನ್ನು ನಿರಾಕರಿಸುವ ಪ್ರಮೇಯ ಎಲ್ಲಿ ಬರುತ್ತದೆ? ತಿಳಿಯುತ್ತಿಲ್ಲ.

❑



ಸಾಮರಸ್ಯದ ಚಿಂತೆಯೆ ನನ್ನ ಚಿತೆ

೧೯೪೭, ಬುಧವಾರ, ಅಕ್ಟೋಬರ್ ೨೨. ಗಾಂಧಿ ಸತ್ಯಾಗ್ರಹಿಯ ಸ್ಥಿತಿಯನ್ನು ಕುರಿತು ಚಿಂತಿಸುತ್ತಿದ್ದಾನೆ. ಸತ್ಯಕ್ಕಾಗಿ ಹೋರಾಡುವ ಓರ್ವ ಸತ್ಯಾಗ್ರಹಿಯ ಅಂತ್ಯ ಏನಾಗಬಹುದು, ಹೇಗಾಗಬಹುದು– ಇವು ಅವನ ಪ್ರಶ್ನೆಗಳು. ಸತ್ಯಾಗ್ರಹಿ ಬೆಟ್ಟದಂತೆ ಗಟ್ಟಿಯಾಗಿ ನಿಂತಾಗ ಮಾತ್ರ ತನ್ನ ದಾರಿ ಸರಿಯಾದುದು ಎಂದು ಸಾಧಿಸಲು ಸಾಧ್ಯ – ಹೀಗೆಲ್ಲ ಆತ ಬರೆದಿದ್ದಾನೆ. ಆದರೆ ಈಗ ತನ್ನ ಗತಿ ಏನಾಗಿದೆ? ತನ್ನ ವಿಶ್ವಾಸದಲ್ಲಿಯೇ ಬಿರುಕಿನ ಗೆರೆಗಳು ಕಾಣುತ್ತಿಲ್ಲವೆ? ತಾನು ಸತ್ಯದ ಪ್ರತಿಪಾದಕ ಎನ್ನುವುದಾದರೆ ನಿರೀಕ್ಷಿತ ಫಲಿತಾಂಶ ತನ್ನಿಂದೇಕೆ ಸಾಧ್ಯವಾಗುತ್ತಿಲ್ಲ? ಪ್ರತಿ ಬೆಳಗಿನ ಮತ್ತು ಸಾಯಂಕಾಲದ ತನ್ನ ಪ್ರಾರ್ಥನೆಗಳ ಫಲಿತಾಂಶವೇನು? ತನ್ನ ಯಾವ ಮಾತು ಜನರ ಮನಸ್ಸನ್ನು ಬದಲಾಯಿಸಿದೆ? ತಾನೇಕೆ ಮರುಭೂಮಿಯಲ್ಲಿಯ ಗಾಳಿಯಂತಾಗಿದ್ದೇನೆ? ಕನಿಷ್ಠ

ಒಂದು ಸಣ್ಣ ಆಶಾದಾಯಕ ಪ್ರತಿಕ್ರಿಯೆ ಏಕೆ ಬರುತ್ತಿಲ್ಲ? ಸಹನೆ ಮತ್ತು ದಯೆಯ ತಳಹದಿಯ ಮೇಲೆ ಸತ್ಯಾಗ್ರಹದ ಯಶಸ್ಸು ನಿಂತಿದೆ ಎನ್ನುವುದಾದರೆ ತನ್ನ ದಯೆ ಮತ್ತು ಸಹನೆಗಳಿಗೆಲ್ಲ ಯಾವ ಫಲಿತಾಂಶ ಬಂದಿದೆ? ಹೀಗೆಲ್ಲ ಒಂದರ ಮೇಲೊಂದು ಪ್ರಶ್ನೆಗಳು ಗಾಂಧಿಯನ್ನು ಕದಡುತ್ತಿರುವಾಗ ಈ ಮಧ್ಯಾಹ್ನ ಇಡೀ ಭಾರತದ ವರ್ತಮಾನವನ್ನು ಗಾಂಧಿಯ ಮುಂದಿಟ್ಟು, ಬ್ರಿಟಿಷ್ ಪತ್ರಕರ್ತನೊಬ್ಬ 'ಮಿ. ಗಾಂಧಿ, ನಿಮ್ಮ ಅಹಿಂಸಾತತ್ವ ಭಾರತದಲ್ಲಿಯೇ ಗೆದ್ದಿಲ್ಲ' ಎಂದು ವಾದಿಸಿದ. ಆತನ ವಾದಕ್ಕೆ ಭಾರತದ ಉದ್ದಗಲಕ್ಕೂ ನಡೆಯುತ್ತಿರುವ ಹತ್ಯೆಗಳು ಪುಷ್ಟಿಯೊದಗಿಸಿದ್ದವು. ಸತ್ಯಮೇವ ಜಯತೆ, ಅಹಿಂಸಾ ಪರಮೋಧರ್ಮಗಳಂಥ ಹೇಳಿಕೆಗಳು ಇಲ್ಲಿ ನಿತ್ಯ ನೆಲಕಚ್ಚುತ್ತಿದ್ದವು. ಇದೆಲ್ಲವನ್ನೂ ನೋಡುತ್ತಲೂ ಈಗ ಗಾಂಧಿ ಹೇಳಿದ್ದು ಅಷ್ಟೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನ ಜನರಿಂದಲೇ ಅನುಸರಿಸಲ್ಪಟ್ಟ ಅಹಿಂಸಾ ಸಿದ್ಧಾಂತ ಅರೆ ಬೆಂದಿತ್ತು. ಈಗಲೂ ಅಷ್ಟೇ, ಅದು ಪೂರ್ತಿ ಬೆಂದೇ ಇಲ್ಲ. ಆದರೆ ಒಂದಂತು ಸತ್ಯ, ಅಹಿಂಸೆಯನ್ನು ಹೊರತುಪಡಿಸಿ ಪ್ರಪಂಚಕ್ಕೆ ಭವಿಷ್ಯವಿಲ್ಲ. ಹಿಂಸೆಯನ್ನು ಆಲೋಚಿಸುವ ಮನುಷ್ಯನಿಗೆ ಒಂದು ಹೊಸ ಯುಗ, ಬದುಕು ಅಥವಾ ಆತನ ಬಾಳಿನಲ್ಲಿ ಬದಲಾವಣೆ ಎಲ್ಲಿಂದ ಸಾಧ್ಯವಿದೆ ಎನ್ನುವುದನ್ನು ಕೇಳುತ್ತ ಬಹಳ ಸುಂದರವಾಗಿ ದಾಖಲಿಸಿದ್ದಾನೆ.

"ಯಾವಾಗ ವ್ಯಕ್ತಿಗೆ ತಾನು ತಪ್ಪು ಮಾಡಿದ್ದೇನೆ ಎನ್ನುವುದರ ಅರಿವಾಗುತ್ತದೆಯೋ, ಇನ್ನು ತಾನು ಖಂಡಿತ ಬದಲಾಗಬೇಕು ಎನ್ನುವ ಆಸೆ ಹುಟ್ಟಿಕೊಳ್ಳುತ್ತದೆಯೋ ಅಲ್ಲಿಯೇ ಆತನಿಗೆ ಮಹಾಶಕ್ತಿ ಪ್ರಾಪ್ತವಾಗುತ್ತದೆ. ಆದರೆ ಎಲ್ಲಿಯವರೆಗೆ ತನ್ನ ತಪ್ಪನ್ನು ಆತನಲ್ಲಿ ಬಚ್ಚಿಡುವ ಪ್ರಯತ್ನವಿರುತ್ತದೆಯೋ ಅಲ್ಲಿಯವರೆಗೂ ಆತ ತನ್ನನ್ನು ತಾನು ಧಿಕ್ಕರಿಸಿಕೊಳ್ಳುತ್ತಲೇ ಇರುತ್ತಾನೆ. ವ್ಯಕ್ತಿಧರ್ಮವನ್ನೇ ಕೊಲ್ಲುತ್ತಿರುತ್ತಾನೆ. ಅದಕ್ಕಿಂತಲೂ ದೊಡ್ಡ ಅಪರಾಧವಿಲ್ಲ ಈ ಜಗತ್ತಿನಲ್ಲಿ.

ಯುದ್ಧವಿರೋಧಿಗಳು, ಶಾಂತಿಪ್ರಿಯರು, ಸಾಮರಸ್ಯ ಐಕ್ಯತೆಯನ್ನು ನಂಬಿದವರು ಇಂತಹವರಿಂದ ಯಾವಾಗಲೂ ದೂರವಿರಬೇಕಾದ ಅವಶ್ಯಕತೆ ಇದೆ. ಆ ಮೂಲಕ ಅವರು ತಮ್ಮ ಹೊಸ ಜೀವನವನ್ನು ರೂಪಿಸಿಕೊಳ್ಳಬಹುದು. ಇಂತಹವರು ಕ್ರಿಯಾಶೀಲರಾಗುವ ಅವಶ್ಯಕತೆಯೂ ಇದೆ. ನನ್ನ ಉದಾಹರಣೆಯನ್ನೇ ತೆಗೆದುಕೊಳ್ಳಿ. ನಾನು ಯುದ್ಧವಿರೋಧಿ. ಈ ಕಾರಣಕ್ಕಾಗಿಯೇ ಜೀವನದ ಕೊನೆಯವರೆಗೂ ಅಹಿಂಸಾ ಪರವಾದ ನನ್ನ ವಿಚಾರಗಳನ್ನು ಪ್ರತಿಪಾದಿಸುತ್ತ ನಾನು ಕ್ರಿಯಾಶೀಲನಾಗಿಯೇ ಇರಬೇಕು. ಈ ದಾರಿಯಲ್ಲಿ ನಾನು ಒಂಟಿ ಎನಿಸಿದರೂ ಚಿಂತೆಯಿಲ್ಲ. ಈ ನನ್ನ ಮೌಲ್ಯಗಳಿಗಾಗಿ ನಾನು ಹೋರಾಡಲೇ

ಬೇಕು. ಈ ದಾರಿಯಲ್ಲಿ ನಾವು ಹೋರಾಡಬೇಕಾದುದು ಏನೂ ಇಲ್ಲ ಅಂದುಕೊಳ್ಳಲೇಬಾರದು. ಎಷ್ಟೊಂದು ಕ್ಲೇಶ, ಕತ್ತಲೆ ಇದೆ ನಮ್ಮೊಳಗೆ. ನನ್ನ ದೇಶಬಾಂಧವರು ನನ್ನ ಮಾತುಗಳನ್ನು ಈಗ ಒಪ್ಪಲಿಕ್ಕಿಲ್ಲ. ಅವರು ಒಪ್ಪಿಕೊಳ್ಳದೇ ಇರುವುದೇ ಅಹಿಂಸೆಯ ಸೋಲಲ್ಲ. ಬಹುತೇಕ ಹಿಂಸೆಯನ್ನು ಗೆಲ್ಲುವಲ್ಲಿ ನಾನಿನ್ನೂ ಶುದ್ಧನಾಗಬೇಕಾದುದಿದೆ. ನನ್ನೊಳಗಿನ ಶೋಧ ಇನ್ನೂ ಆಳವಾಗಬೇಕಿದೆ.

ಎಲ್ಲದಕ್ಕೂ ಸಮಯ ಬೇಕು. ಆ ಸಮಯ ಬಂದಾಗ ಎಲ್ಲವೂ ಆಶೀರ್ವಾದವಾಗಿ ಮಾರ್ಪಡುತ್ತದೆ. ನಾನು ಈಗಲೂ ಹೇಳುತ್ತೇನೆ : ಹಿಂದೂ-ಮುಸ್ಲಿಂರ ಮಧ್ಯದ ಏಕತೆಯೇ ನನ್ನ ಜೀವನದ ಪರಮ ಗುರಿ. ಮುಸ್ಲಿಮರು ಯಾವಾಗಲೂ ನನ್ನನ್ನು ತಮ್ಮ ಗೆಳೆಯ ಮತ್ತು ಮಾರ್ಗದರ್ಶಕನೆಂದು ಪರಿಗಣಿಸಿದ್ದಾರೆ. ಕೇವಲ ಒಬ್ಬ ಮುಸ್ಲಿಂ ಬಂಧುವಿನ ಆಜ್ಞೆಯನ್ನು ಪಾಲಿಸುವುದಕ್ಕಾಗಿಯೇ ಅಲ್ಲವೆ ನಾನು ಅಂದು ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದು? ಇದು ಸತ್ಯ ಎನ್ನುವುದಾದರೆ ಈಗ ನಾನು ಮುಸ್ಲಿಮರ ವೈರಿಯಾಗಲು ಹೇಗೆ ಸಾಧ್ಯ? ನಿಮಗೆಲ್ಲ ಗೊತ್ತಿದೆ ಬಂಧುಗಳೆ, ನಾನು ಮುಸ್ಲಿಂ ಪರ ಎನ್ನುವ ಕಾರಣಕ್ಕಾಗಿಯೇ ಸದ್ಯ ಹಿಂದೂಗಳ ಆಕ್ರೋಶಕ್ಕೆ ತುತ್ತಾಗಿದ್ದೇನೆ. ಈ ಆಕ್ರೋಶವೇ ಒಂದು ದಿನ ನನ್ನನ್ನು ಆಹುತಿ ತೆಗೆದುಕೊಳ್ಳಬಹುದು. ನನ್ನ ಮೇಲೆ ಈಗಾಗಲೇ ನಡೆದಿರುವ ಮಾರಣಾಂತಿಕ ದಾಳಿಗಳೇ ಅದಕ್ಕೆ ಸಾಕ್ಷಿ. ನನ್ನ ಕೊಲೆಯಾದರೂ ಚಿಂತೆಯಿಲ್ಲ, ನಾನು ಈ ಧಾರ್ಮಿಕ ಅಸಹಿಷ್ಣುತೆಯನ್ನು ಬಲವಾಗಿ ಖಂಡಿಸುತ್ತೇನೆ. ಯಾವುದು ಧರ್ಮವೋ ಅದು ಅಖಂಡ, ಅದು ಹಿಂದುಗಳಿಗೆ ಒಂದು ರೀತಿ, ಮುಸ್ಲಿಮರಿಗೆ ಮತ್ತೊಂದು ರೀತಿ ಇರಲು ಸಾಧ್ಯವೇ ಇಲ್ಲ.

ನಾನಷ್ಟೇ ಅಲ್ಲ, ನನ್ನ ಆಜ್ಞಾಧಾರಕರಾಗಿರುವ ಅಭಾ ಮತ್ತು ಮನು ಕೂಡ ಈ ಕಾರಣಕ್ಕಾಗಿಯೇ ಒಂದು ದಿನ ಕೊಲೆಯಾಗಬಹುದು. ಕೆಲ ದಿನಗಳ ಹಿಂದಷ್ಟೇ ದೆಹಲಿಯ ಗಲ್ಲಿಯೊಂದರಿಂದ ಮನುಳಿಗೆ ಕೊಲೆ ಬೆದರಿಕೆಯ ಫೋನ್ ಬರಲಿಲ್ಲವೆ? ಭಂಗಿ ಕಾಲೋನಿಯಲ್ಲಿ ಹಿಂದೂಗಳು ಅದೆಷ್ಟು ಬಾರಿ ಆಕೆಗೆ ಕೊಲೆ ಬೆದರಿಕೆಯ ಫೋನ್‌ಗಳನ್ನು ಮಾಡಿಲ್ಲ! ಅವಳು ಸಾವಿಗೆ ಸಿದ್ಧಳಾಗಿರುವುದರಿಂದಲೇ ಸಾವಿನ ಬೆದರಿಕೆಯ ಫೋನ್‌ಗಳಿಂದ ಭಯಭೀತಳಾಗಲಿಲ್ಲ. ನನಗೆ ಗೊತ್ತಿದೆ : ಹಿಂದೂ-ಮುಸ್ಲಿಮರನ್ನು ಹೊರತುಪಡಿಸಿ ಯಾವುದೋ ಮೂರನೇ ಶಕ್ತಿ ಈ ಕ್ರಿಯೆಗಳಲ್ಲಿ ತೊಡಗಿಕೊಂಡಿದೆ, ಸಾಮಾಜಿಕ ನೆಮ್ಮದಿಯನ್ನು ಹಾಳು ಮಾಡುತ್ತಿದೆ.

ಯಾರೋ ಮೂರನೆಯವರಿಗೆ ನಾವು ಹಿಂದೂ-ಮುಸ್ಲಿಮರು ಒಟ್ಟಾಗಿ ಸಹಬಾಳ್ವೆ ಮಾಡುವುದು ಇಷ್ಟವಿಲ್ಲ ಎಂದು ತೋರುತ್ತದೆ. ಸರಿ, ಹಾಗಾದರೆ ಮಾಡುವುದಾದರೂ ಏನು? ಹಿಂಸೆಯ ಅನರ್ಥವನ್ನು ನೀವೇ ಈಗ ಎರಡು

ಮಹಾಯುದ್ಧಗಳಲ್ಲಿ ಕಣ್ಣಾರೆ ಕಂಡಿಲ್ಲವೆ? ಈ ಅಮಾನುಷತೆ ಹೀಗೇ ಮುಂದುವರಿದರೆ ಮನುಷ್ಯನ ಬಳಿ ಉಳಿಯುವುದಾದರೂ ಏನು? ಇಂತಹ ಘೋರ ವಾಸ್ತವದ ಎದುರು ನಾನು ಆಶಾವಾದಿಯಾಗಿದ್ದೇನೆ. ಹೀಗಾಗಿ ನಾನು ನನ್ನ ಅಹಿಂಸಾ ಸಾಧನೆಯ ಅಭಿಯಾನವನ್ನು ಹೀಗೆಯೇ ಮುಂದುವರೆಸಿಕೊಂಡು ಹೋಗುತ್ತೇನೆ, ನನ್ನ ಕೊನೆಯ ಉಸಿರಿರುವವರೆಗೂ."

ಈ ಮುಂಜಾವಿನಲ್ಲಿ ಚಳಿಯಲ್ಲಿ ಮೈಕಾಯಿಸಿಕೊಳ್ಳುತ್ತ ಪತ್ರಿಕೆಗಳನ್ನು ಗಮನಿಸುತ್ತ ಕುಳಿತಿದ್ದ ಗಾಂಧಿಗೆ ಉರ್ದು ನಿಯತಕಾಲಿಕದ ಸಂಪಾದಕನೊಬ್ಬನ ಮೇಲೆ ಬೇಸರವಾಗಿತ್ತು. ಮುಂದೊಂದು ಕಾಲಕ್ಕೆ ಭಾರತದಿಂದ ಸಂಪೂರ್ಣವಾಗಿ ಮುಸ್ಲಿಮರನ್ನು ಹೊರಹಾಕಲಾಗುವುದು ಎನ್ನುವುದನ್ನು ಆತ ಭವಿಷ್ಯವಾಣಿಯಂತೆ ತನ್ನ ಪತ್ರಿಕೆಯಲ್ಲಿ ಬರೆದುಕೊಂಡಿದ್ದ. ಈ ವಾಕ್ಯ ಓದುತ್ತಲೇ ಗಾಂಧಿ ನೆಹರುವಿನಂತೆ ಕೆಂಡಾಮಂಡಲವಾಗಿದ್ದ. ಇಂತಹ ಪತ್ರಿಕೆಗಳನ್ನೇ ಮುದ್ರಣವಾಗದಂತೆ ನೋಡಿಕೊಳ್ಳಬೇಕು ಎಂದಿದ್ದ. ಹೆಡ್ಡರು, ಮತಾಂಧರು, ಕೋಮುವಾದಿಗಳು ಪತ್ರಿಕೆಗಳ ಸಂಪಾದಕರುಗಳಾದರೆ ಇದಕ್ಕಿಂತಲೂ ಹೆಚ್ಚಿಗೆ ಇನ್ನೇನು ನಿರೀಕ್ಷಿಸಲು ಸಾಧ್ಯ? ನಮ್ಮ ಜನರಿಗೂ ಅಷ್ಟೆ, ಅವರಿಗೆ ಗೀತಾ, ಬೈಬಲ್ ಮತ್ತು ಖುರಾನ್‌ಗಳಿಗಿಂತಲೂ ಮುಖ್ಯವಾಗುತ್ತವೆ ನಮ್ಮ ದಿನಪತ್ರಿಕೆಗಳು. ಇಂತಹ ಕುಲಗೆಟ್ಟ ಪತ್ರಿಕೆಗಳು ಸಮಾಜಕ್ಕೆ ಮಾರ್ಗದರ್ಶಿಗಳಾಗುತ್ತವೆ. ಅಲ್ಲಿಯ ಹೇಳಿಕೆಗಳು ವೇದವಾಕ್ಯ, ದೇವವಾಣಿ ಎಲ್ಲವೂ ಆಗುತ್ತವೆ ನಮ್ಮ ಜನರಿಗೆ ಎಂದು ಗಾಂಧಿ ಕೂಗಾಡುತ್ತಿದ್ದ. ಅಪರೂಪಕ್ಕೊಮ್ಮೊಮ್ಮೆ ಹೀಗೆ ಸಿಟ್ಟಿಗೆ ಬರುವ ಗಾಂಧಿಯನ್ನು ಮನು ಮತ್ತು ಅಭಾ ಗಮನಿಸುತ್ತಲೇ ಇದ್ದರು.

ಈ ಶೈಲಿಯಲ್ಲಿ ಗಾಂಧಿ ಆಲೋಚಿಸುವಾಗ ಕ್ರುದ್ಧನಾಗುವ ನೆಹರೂವಿಗೂ ಆತ ಭಿನ್ನವಾಗುವುದಿಲ್ಲ. ಅಂತಲೇ, ಗಾಂಧಿಯ ಈ ವರ್ತನೆಯ ಕಾರಣ ಅನೇಕ ಬಾರಿ ಜನರು ನೆಹರುವಿನ ಅನೇಕ ಸ್ವತಂತ್ರ ನಿರ್ಧಾರ, ಮಾತು ಮತ್ತು ವಿಚಾರಗಳನ್ನು ನೆಹರುವಿನದೆಂದು ಒಪ್ಪಿಕೊಳ್ಳುವುದಿಲ್ಲ. ನೆಹರು ಗಾಂಧಿಯ ಮಾನಸ ಪುತ್ರ ಎಂದು ಬೀಗುತ್ತಲೇ, ಆತ ಗಾಂಧಿಯ ಬೌದ್ಧಿಕ ಗುಲಾಮ ಎನ್ನುವ ಕರಿನೆರಳಿನಲ್ಲಿ ಒದ್ದಾಡಿದ ರೀತಿ ನಾನೇನು ನಿಮಗೆ ಬಿಡಿಸಿ ಹೇಳಬೇಕಿಲ್ಲ. ಒಮ್ಮೊಮ್ಮೆ ಹೀಗೆ ಬಿಡಿಸಿಕೊಳ್ಳಬೇಕೆನ್ನುವ ಆತುರದಲ್ಲಿಯೇ ನೆಹರು ಸಂಪೂರ್ಣ ಗಾಂಧಿಗೆ ವಿರುದ್ಧವಾಗಿಯೇ ಹೋಗಿರುವುದುಂಟು. ಇದು ತೀವ್ರವಾದ ಮತ್ತು ತೀವ್ರ ಬಿಡಿಸಿಕೊಳ್ಳಬೇಕು ಎನ್ನುವುದರ ನಡುವೆ ನಡೆಯುವ ಪೈಪೋಟಿ.

ಇದೇ ದಿನದ ಇನ್ನೊಂದು ಸಂದರ್ಭ ನೋಡಿ : ಇಲ್ಲಿ ಗಾಂಧಿಯ ನಿರಂಕುಶ ಭಾಷೆಯನ್ನೂ ಗಮನಿಸಿ, ಆತ ಹೇಳುತ್ತಾನೆ, 'ಈ ದೇಶದ ರಾಜಕುಮಾರರು ಇದನ್ನು

ತಿಳಿದುಕೊಳ್ಳಬೇಕು. ಜನರನ್ನು ಹಿಂಸಿಸಿ ನಾವು ಬದುಕಬಹುದು ಎನ್ನುವ ವಿಚಾರವನ್ನು ಮರೆತುಬಿಡಬೇಕು. ಎಲ್ಲಿಯವರೆಗೆ ಈ ರಾಜಕುಮಾರರು ಜನರ ಹಿತಾಸಕ್ತಿಯನ್ನು ಗೌರವಿಸುತ್ತಾರೋ ಅಲ್ಲಿಯವರೆಗೆ ಮಾತ್ರ ಅವರಿಗೊಂದು ಅಸ್ತಿತ್ವ ಇದೆ. ಅದನ್ನು ಬಿಟ್ಟು ಅವರು ಜನರ ಶೋಷಣೆಗಿಳಿದರೆ ತಮ್ಮ ದುರಂತವನ್ನು ತಾವೇ ಆಹ್ವಾನಿಸಿಕೊಳ್ಳುತ್ತಾರೆ. ರಾಜಕುಮಾರರು ಭಾರತಕ್ಕೆ ನಿಷ್ಠರಾಗಿದ್ದು, ಜನರ ಸೇವೆ ಮಾಡಿಕೊಂಡಿದ್ದರೆ ಒಳಿತು. ಬುದ್ಧಿ ಕಳೆದುಕೊಂಡರೆ ಬಿದ್ದವರನ್ಯಾರೂ ಎಬ್ಬಿಸಲಾಗದು'.

ಬಹುತೇಕ ಸಂಸ್ಥಾನಿಕರು ಗಾಂಧಿಯಿಂದ ಇಂತಹ ಭಾಷೆಯನ್ನು ಎಂದೂ ನಿರೀಕ್ಷಿಸಿರಲಿಲ್ಲ. ರಾಜಕಾರಣಿಯಲ್ಲದ, ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆಯನ್ನು ಕೊಟ್ಟಿದ್ದ ಗಾಂಧಿ ಮತ್ತು ಆತನ ಭಾಷೆಗೆ ಒಂದು ನಿರೀಕ್ಷಿತ ಚೌಕಟ್ಟನ್ನು ಈ ಸಂಸ್ಥಾನಿಕರು ಹಾಕಿದ್ದರೆಂದು ತೋರುತ್ತದೆ. ಈತನ ಆಜ್ಞೆಗಳನ್ನು ಗಮನಿಸಿದ ಅವರು ಮೆಲ್ಲಗೆ ಗಾಂಧಿಯ ಕೈಬಿಟ್ಟು, ಉಗ್ರ ಹಿಂದೂಗಳೊಂದಿಗೆ ಗಾಂಧಿ ವಿಚಾರಗಳ ಔಚಿತ್ಯವನ್ನು ಪ್ರಶ್ನಿಸುವ ಲಕ್ಷಾಂತರ ಭಾರತೀಯ ಯುವಕರೊಂದಿಗೆ, ರಾಜಕಾರಣಿಗಳಾಗಬೇಕೆನ್ನುವ ಹೊಸ ಹುಮ್ಮಸ್ಸಿನಲ್ಲಿದ್ದ ಸ್ವಾತಂತ್ರ್ಯೋತ್ತರ ನೇತಾರರೊಂದಿಗೆ, ಗಲಭೆಪೀಡಿತ ಹಾಗೂ ಸತ್ಯಾಗ್ರಹವನ್ನು ಸಾರಾಸಗಟಾಗಿ ಧಿಕ್ಕರಿಸಿದ ಸಿಖ್ಖ್ ಹಾಗೂ ಮುಸ್ಲಿಮರೊಂದಿಗೆ ಈ ಸಂಸ್ಥಾನಿಕರು ಸೇರಿಕೊಂಡರು ಎನ್ನುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಶತ್ರುವಿನ ಶತ್ರು ಮಿತ್ರರಾಗುವ ಪ್ರತಿ ತಂತ್ರಗಳು ಈಗ ಕಾರ್ಯೋನ್ಮುಖವಾಗಿವೆ. ಗಾಂಧಿ ಹತ್ಯೆಯ ಸಂಚು ಈಗ ಸವಿಸ್ತಾರವಾಗುತ್ತದೆ. ಕೊಲೆಗೆ ವೇದಿಕೆಯ ಸಿದ್ಧತೆ ನಡೆಯುತ್ತದೆ.

ಇದು ಒಂದೆಡೆಯಾದರೆ, ಮತ್ತೊಂದೆಡೆ, ಗಾಂಧಿ ಸಾಗುತ್ತಿದ್ದ ದಾರಿಗೆ ಸಮರ್ಥನೆಯನ್ನು ಒದಗಿಸುವವರ ಕೊರತೆಯೇನೂ ಇರಲಿಲ್ಲ. ರವೀಂದ್ರನಾಥ ಟ್ಯಾಗೋರ್ ಅಂತವರಲ್ಲಿ ಒಬ್ಬರು. ಅಕ್ಟೋಬರ್ ೨೩ರಂದು ಟ್ಯಾಗೋರ್ ಗಾಂಧಿಗೊಂದು ಪತ್ರ ಬರೆದು ಉಭಯ ಕುಶಲೋಪರಿಯನ್ನು ಕೇಳಿ, ಅವರ ಅಹಿಂಸಾವಾದಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದ್ದರು. ೧೯೨೦ರಿಂದ ಸುಮಾರು ಮೂರು ದಶಕಗಳ ಕಾಲ ಗಾಂಧಿ ತನ್ನ ರಾಷ್ಟ್ರೀಯವಾದ, ಟ್ಯಾಗೋರ್ ತಮ್ಮ ಅಂತಾರಾಷ್ಟ್ರೀಯವಾದ ಎಂದು ಭಿನ್ನವಾಗಿ ಸಾಗಿದ್ದರೂ ಸ್ನೇಹ ಮತ್ತು ಪ್ರೀತಿಗೇನೂ ಅವರಿಬ್ಬರ ನಡುವೆ ಕೊರತೆಯಿರಲಿಲ್ಲ. ಇಂದು ಟ್ಯಾಗೋರ್ ತನ್ನ ತಮ್ಮ ಪದ್ಯದ ಕೆಲವು ಸಾಲುಗಳನ್ನು ಬೆಂಗಾಲಿಯೊಬ್ಬನ ಕೈಯಲ್ಲಿ ಗಾಂಧಿಗೆ ಕಳುಹಿಸಿದ್ದರು.

* ಸಹೋದರನ ವಿರುದ್ಧ ಸಹೋದರನೊಬ್ಬನ ಕಾದಾಟ
ದೇವರೊಂದಿಗಿನ ಕಾದಾಟವೇ.
* ಯಾರು ಧರ್ಮದ ಹೆಸರಿನಲ್ಲಿ ದ್ವೇಷವನ್ನು ಪೋಷಿಸುವರೋ
ಅವರು ದೇವರಿಂದಲೂ ದೂರವಾಗುತ್ತಾರೆ.
* ಕತ್ತಲಲ್ಲಿ ತನ್ನ ಬಂಧುವನ್ನೇ ಕಾಣದವ
ತನ್ನನ್ನೂ ತಾನು ನೋಡಿಕೊಳ್ಳಲಾರ.
* ಎಲ್ಲಿ ಸಹೋದರನನ್ನು ಕಾಣುವ ಬೆಳಕಿದೆಯೋ
ಅಲ್ಲಿಯೇ ಭಗವಂತನ ದರ್ಶನವಾಗುತ್ತದೆ.
* ಸಹೋದರನ ಪ್ರೀತಿಯಲ್ಲಿ ತೊಯ್ದುಹೋದವ
ದೇವರೊಂದಿಗೆ ಹೋಳಿಯಾಡುತ್ತಿರುತ್ತಾನೆ.

ಟ್ಯಾಗೋರ್ ಗಾಂಧಿ ನಡೆಸುವ ಅಹಿಂಸೆಯ ಅಭಿಯಾನವನ್ನು ಹರಸಿ ಕಳುಹಿಸಿದ ಈ ಸಾಲುಗಳನ್ನು ತನ್ನ ಹರಿಜನ್ ಬಂಧುವಿನಲ್ಲಿ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ ಗಾಂಧಿ ಜನರ ಬುದ್ಧಿಯನ್ನು ಸರಿ ಮಾಡಲು ಯತ್ನಿಸಿದ. 'ಗುರುದೇವ' ಎಂದು ಸದಾ ಆದರಿಸಿದ್ದ ತನ್ನ ಗುರು ಟ್ಯಾಗೋರರ ಈ ಸಾಲುಗಳು ಕೋಮು ದಳ್ಳುರಿಯ ಮೇಲೆ ನೀರೆರಚಲಿ, ಹಿಂದೂ ಮುಸ್ಲಿಮರು ಮೊದಲು ಮನುಷ್ಯರಾಗಲಿ, ಸ್ವರಾಜ್ಯದ ಅರ್ಥ ತಿಳಿಯಲಿ ಎಂದು ಬಯಸಿದ್ದ ಗಾಂಧಿ. ಅದು ಸರಿಯಾಗುವುದುಂಟೆ? ಮುಂಜಾನೆ ಈ ಸಾಲುಗಳನ್ನು ಪತ್ರಿಕೆಯಲ್ಲಿ ಮುದ್ರಿಸಿ ಹೆಮ್ಮೆಪಟ್ಟಿದ್ದ ಗಾಂಧಿಗೆ ಸಾಯಂಕಾಲದ ಪ್ರಾರ್ಥನೆಯಲ್ಲಿ ಕಣ್ಣೀರಿನಲ್ಲಿ ಕೈ ತೊಳೆಯಬೇಕಾದ ಸಂದರ್ಭ ತಂದಿಟ್ಟವರು ಇದೇ ಜನರು.

ಇಂದು ಮುಂಜಾನೆ ದೆಹಲಿಯ ಬಜಾರಿನಲ್ಲಿ ಕನ್ನಡಕಗಳನ್ನು ಮಾರುವ ಬಡ ಮುಸ್ಲಿಮನೊಬ್ಬನ ಕೊಲೆಯಾಗಿತ್ತು. ಆತ ಎಲ್ಲರಂತೆಯೇ ಮುಂಜಾನೆ ಅಂಗಡಿಗೆ ಹೋದ. ಅಕ್ಕ-ಪಕ್ಕದ ಅಂಗಡಿಗಳು ತೆರೆದುಕೊಂಡಿವೆ ಎಂದು ತನ್ನ ಅಂಗಡಿಯನ್ನೂ ತೆರೆಯಲು ಕುಳಿತ. ಇದೇ ಸಂದರ್ಭದಲ್ಲಿ ದಂಗೆಕೋರರ ಗುಂಪೊಂದು ಆತನನ್ನು ಕೊಚ್ಚಿಹಾಕಿತ್ತು. ಇದು ಯಾವುದೋ ನಿರ್ಜನ ಪ್ರದೇಶದಲ್ಲಿ, ಕತ್ತಲೆಯಲ್ಲಿ ನಡೆದ ಕೊಲೆಯಲ್ಲ. ಹಾಡು ಹಗಲೇ, ಎಲ್ಲರ ಸಮ್ಮುಖದಲ್ಲಿ ಮನುಷ್ಯತ್ವ ಬೆತ್ತಲೆಯಾಗಿ ನಿಂತ ಪರಿ. ಈ ಅಮಾನಷ ಕೃತ್ಯ ಮನುಷ್ಯರ ಬಗೆಗೆ ಗಾಂಧಿಗೆ ಎಲ್ಲಿಲ್ಲದ ಹೇಸಿಗೆ ಹುಟ್ಟಿಸಿತು. ಆದರೆ ಹೇಸಿಕೊಂಡು ಆತ ಎಲ್ಲಿಗೆ ಹೋಗಬೇಕು? ಮತ್ತೆ ಬರಬೇಕು ಇಲ್ಲಿಗೇ, ಮೋಕ್ಷಕ್ಕೆ, ಮರಣಕ್ಕೆ, ಶ್ರೀ ಸಾಮಾನ್ಯನೆಂಬ, ದರಿದ್ರನಾರಾಯಣನೆಂಬ ಮಾನವನ ಚರಣಕ್ಕೆ.

❑



ನನ್ನನ್ನು ದೇವರಾಗಿಸಬೇಡಿ

ತನ್ನ ಶಾರೀರಿಕ ಸ್ವರೂಪವನ್ನು ನೋಡಿ ತನ್ನ ಕ್ಷಮತೆಯನ್ನು ಅಳೆಯಬಾರದು ಎಂದು ಗಾಂಧಿ ಜನತೆಗೆ ಅನೇಕ ಬಾರಿ ಹೇಳಿದ್ದ. ಆತ್ಮಶಕ್ತಿಯ ಮುಂದೆ ಎಲ್ಲ ಶಕ್ತಿಗಳು ಸಾಮಾನ್ಯ ಎನ್ನುವುದು ಆತನ ವಾದ. ರಾಮಾಯಣವನ್ನು ತನ್ನ ಬದುಕಿನ ಉಸಿರಾಗಿಸಿಕೊಂಡಿದ್ದ ಗಾಂಧಿಗೆ ಶಬರಿ ರಾಮನಷ್ಟೇ ಮಹತ್ವದ ಪಾತ್ರ. ಬರೀ ಇಚ್ಛಾಶಕ್ತಿಯಿಂದ ಶ್ರೀರಾಮನಂತಹ ರಾಜನನ್ನೇ ತನ್ನ ಮಮತೆಯ ಮೋಡಿಯಲ್ಲಿ ಮುಚ್ಚಿಟ್ಟುಕೊಂಡ ಶಬರಿ ಗಾಂಧಿಯ ಮಹಾನ್ ಆದರ್ಶಗಳಲ್ಲಿ ಒಬ್ಬಳು. ಗಾಂಧಿ ಆಗಾಗ ಘೋಷಿಸುತ್ತಿದ್ದ ಉಪವಾಸಗಳು ಆತನನ್ನು ಶಾರೀರಿಕವಾಗಿ ಸೊರಗಿಸುತ್ತಿದ್ದವೇ ವಿನಾಃ ಆತನ ಇಚ್ಛಾಶಕ್ತಿಯನ್ನು ದುರ್ಬಲಗೊಳಿಸುತ್ತಿರಲಿಲ್ಲ. ಸತ್ಯಾಗ್ರಹ, ಅಹಿಂಸೆಯ ಆತನ ಸತ್ವವನ್ನು ಶಿಥಿಲಗೊಳಿಸುತ್ತಿರಲಿಲ್ಲ.

ಮನುಷ್ಯತ್ವದಲ್ಲಿಯ ಆತನ ಅಚಲ ನಂಬಿಕೆಯನ್ನು ಕದಲಿಸಲಿಲ್ಲ. ಮತ್ತೆ ಮತ್ತೆ ಗಾಂಧಿ ಹೇಳುತ್ತಿದ್ದ : ತನ್ನ ಈ ಐಕ್ಯತೆಯ ಕನಸಿಗಾಗಿ ತಾನೇ ಕೊಚ್ಚಿ ಹೋದರೂ ಚಿಂತೆಯಿಲ್ಲ, ತನ್ನ ಪ್ರಯತ್ನವನ್ನ ಬಿಡುವುದಿಲ್ಲ, ಕಿಂಚಿತ್ತೂ ಕದಲುವುದಿಲ್ಲ, ಮನುಷ್ಯತ್ವ ಮಣ್ಣುಪಾಲಾಗುವುದು ತನ್ನ ಕಣ್ಣೆದಿರು ಸಾಧ್ಯವಿಲ್ಲ. ಇದನ್ನು ಸಾಧ್ಯವಾಗಿಸುವವನು ಸತ್ಯಾಗ್ರಹಿಯೂ ಅಲ್ಲ.

ದೇಶವಿಭಜನೆಯಂಥ ದುರಂತ, ಹಿಂದೂ–ಮುಸ್ಲಿಮರ ಕಿತ್ತಾಟ, ಕೋಮು ಬಲಾಬಲಗಳ ಪ್ರದರ್ಶನ, ನಿರಾಶ್ರಿತರ ನಿಟ್ಟುಸಿರುಗಳ ಉರಿಯಲ್ಲಿ ಪುರಲೆಯಂತೆ ಉರಿದುಹೋಗುತ್ತಿದ್ದ ಈ ಮುದುಕ ಮನುಷ್ಯತ್ವ ಮಣ್ಣುಪಾಲಾಗುವುದು ನನ್ನ ಕಣ್ಣೆದಿರು ಸಾಧ್ಯವಿಲ್ಲ ಎಂದು ಹೇಳುವ ಮಾತು ನಗೆ ತರಿಸುವುದಿಲ್ಲವೆ? ದೇಶ ವಿಭಜನೆಯೆನ್ನುವುದು ನನ್ನ ಹೆಣದ ಮೇಲೆ ಮಾತ್ರ ಎಂದು ಹೇಳಿದ್ದ ಗಾಂಧಿಯ ಈ ಹಿಂದಿನ ಮಾತು ಇಂಥದೇ ಒಂದು ಮಾತಾಗಿರಲಿಲ್ಲವೆ? ಇತ್ತ ಗಾಂಧಿ ಈ ಭಾಷಣ ಮಾಡುವಾಗ ಅತ್ತ ಪಾಕಿಸ್ತಾನ ಮಾಡುತ್ತಿದ್ದುದೇನು? ಗಾಂಧಿಯ ಅಚಲ ಅನುಯಾಯಿಗಳಾಗಿದ್ದ, ಗಡಿನಾಡ ವಾಸಿಗಳಾಗಿದ್ದ, ಅಲ್ಪಸಂಖ್ಯಾತ ಪಠಾಣರಾಗಿದ್ದ ಖಾನ್ ಅಬ್ದುಲ್ ಗಫಾರಖಾನ್ ಮತ್ತು ಆತನ ಸೋದರ ಡಾ.ಖಾನ್ ಸಾಹೇಬರನ್ನು ಪಾಕಿಸ್ತಾನ ಹಿಂಸಿಸುತ್ತಿರಲಿಲ್ಲವೆ? ಮುಸ್ಲಿಮರನ್ನು ಶೈಕ್ಷಣಿಕವಾಗಿ ಪ್ರಜ್ಞಾವಂತರನ್ನಾಗಿಸಬೇಕು ಎನ್ನುವ ಆ ಇಬ್ಬರೂ ಸಹೋದರರ ಆಸೆಗೆ ತಣ್ಣೀರೆರಚಿ, ಪ್ರತಿಯಾಗಿ ಕೈಯಲ್ಲಿ ಗನ್ನು, ಬಾಂಬು, ಖಡ್ಗಗಳನ್ನು ಹಿಡಿದುಕೊಂಡು ಕಾಶ್ಮೀರದಲ್ಲಿ ದೊಂಬಿಯನ್ನು ಎಬ್ಬಿಸಬೇಕೆಂದು ಕರಾಚಿ ಸರಕಾರ ಕುಮ್ಮಕ್ಕು ನೀಡುತ್ತಿತ್ತು. ಪಾಕಿಸ್ತಾನದ ಗಡಿ ಪ್ರದೇಶದಲ್ಲಿದ್ದ ಹಿಂದೂಗಳು, ಸಿಖ್ಖರು ಅಲ್ಲಿಂದ ವಲಸೆ ಬರುವುದೇ ದಾರಿಯೆಂದುಕೊಂಡು ಬಂದು ಗಾಂಧಿಯ ಮುಂದೆ ದಯನೀಯವಾಗಿ ನಿಂತರೆ ಆತ ಇನ್ನೇನು ಮಾಡಬೇಕು? ಎಲ್ಲದಕ್ಕೂ ತಾನೇ ಅಥವಾ ತನ್ನಿಂದಲೇ ಪರಿಹಾರ ನಿರೀಕ್ಷಿಸುವ ಜನಸಮೂಹವನ್ನು ಗಾಂಧಿ ಕೆಲವೊಮ್ಮೆ ತರಾಟೆಗೆ ತೆಗೆದುಕೊಂಡುಬಿಡುತ್ತಿದ್ದ. ೨೪ ಅಕ್ಟೋಬರ್, ಶುಕ್ರವಾರದ ದಿನ ಹೀಗೆಯೇ ಒಮ್ಮೆ ಬೇಸರಿಸಿ ಕೂಗಾಡಿಬಿಟ್ಟ ಗಾಂಧಿ – "ಈಗಲೂ ನನ್ನ ಸಲಹೆ ಇಷ್ಟೆ. ಅದರಲ್ಲಿ ಯಾವ ಬದಲಾವಣೆಯೂ ಇಲ್ಲ. ಈ ಕ್ಷಣದಲ್ಲಿ ನೀವೆಲ್ಲ ನಿಮ್ಮ ನಿಮ್ಮ ಪ್ರದೇಶಗಳಿಗೆ ಮರಳಿ ಹೋಗಬೇಕು. ಅಲ್ಲಿಯೇ ವಾಸಿಸಬೇಕು. ಅಲ್ಲಿಯೇ ಬದುಕುವ ಧೈರ್ಯವನ್ನು ತೋರಿಸಬೇಕು. ಸಾವಿಗೂ ಎದೆಗುಂದಬಾರದು. ವೈರಿಯ ಕೈಯಲ್ಲಿ ಆ ರೀತಿಯಿಂದ ಸಾಯುವುದರಲ್ಲಿ ನೀವು ಆತನನ್ನು ಕ್ಷಮಿಸಬಹುದು."

ಗಾಂಧಿಯ ಈ ಮಾತುಗಳಿಂದ ಜನ ಕಕ್ಕಾಬಿಕ್ಕಿಯಾದರು. ಒಂದು ಕ್ಷಣ ತಮ್ಮ ಕಿವಿಗಳನ್ನೇ ನಂಬದ ಸ್ಥಿತಿ. ಬದುಕಿತು ಜೀವ ಎಂದು ಇದ್ದದ್ದೆಲ್ಲವನ್ನು ಬಿಟ್ಟು ದಡಬಡಿಸಿ ಓಡಿ ಈತನ ಬಳಿ ಬಂದರೆ ಈತ ತಲೆಕೆಟ್ಟವನಂತೆ ಉತ್ತರಿಸುವುದೆ?

ಹೋರಾಡಿ ಸಾಯುವುದು ತಮಗೇನು ತಿಳಿಯದೆ? ತಟ್ಟನೆ ಹೀಗೆ ವಲಸೆ ಬಂದವರಿಂದ, ಗಾಂಧಿಗೆ ಜನರ ಮಧ್ಯದಿಂದ ಅನಿರೀಕ್ಷಿತ ಪ್ರಶ್ನೆಯೊಂದು ಅಪ್ಪಳಿಸಿತು. ನಾವು ಸಾವಿನ ಮೆಥಡ್ಡನ್ನು ಕೇಳಲು ನಿಮ್ಮ ಬಳಿ ಬಂದಿಲ್ಲ. ಸಂತರಾಗಿರುವ ನಿಮಗೆ, ಸಾಕಷ್ಟು ಜೀವನವನ್ನು ಸುಖಿಸಿರುವ ನಿಮಗೆ, ಬಹುತೇಕ ಸಾವಿನ ಅವಶ್ಯಕತೆ ಇರಬಹುದು. ಬಂಡವಾಳಶಾಹಿಯೊಬ್ಬನ ಮನೆಯಲ್ಲಿ ಬೆಚ್ಚಗೆ ಕುಳಿತು ಮಾಡುವ ಅಹಿಂಸೆಯ ವಿಚಾರ ಸರಿ ಕಾಣಬಹುದು. ಆದರೆ ನಾವು ಬಂದಿರುವುದು ಬದುಕುವ ದಾರಿಯನ್ನು ಕೇಳಿ. ರಾಜಕಾರಣ ಎನ್ನುವುದು ಶಕ್ತಿವಂತರ, ಸೋಗಲಾಡಿಗಳಾದ ನಿಮ್ಮಂಥವರ ಪಗಡೆಯಾಟ. ಅದರಲ್ಲಿ ಅಹಿಂಸೆಗೆ ಅವಕಾಶ ಎಲ್ಲಿದೆ? ಗಾಂಧಿ, ಯಾಕಿಂಥ ಅರುಳು-ಮರುಳಿನ ಮಾತನ್ನು ಆಡುತ್ತೀರಿ? ಎಂದು ರೋಷದಿಂದ ಕೇಳಿದ. ಕ್ರಮೇಣ ಈತನಿಂದ ಬೇಸರಗೊಂಡು ಗುಂಪು ಕರಗಿ ಹೋಯಿತು. ಗಾಂಧಿಯ ಅಹಿಂಸೆ ಮತ್ತು ಸಾಂತ್ವನದ ಮಾತುಗಳು ನಿರಾಶ್ರಿತರಿಗೆ ತಮ್ಮ ಬದುಕಿನ ದುರ್ವಿಧಿಯ ಮೇಲೆ ಮಾಡಿದ ಅಪಹಾಸ್ಯ ಎನಿಸುತ್ತಿತ್ತು. ಈ ಸಾಯಂಕಾಲದ ಪ್ರಾರ್ಥನೆಗೂ ಜನ ಅನ್ಯಮನಸ್ಕರಾಗಿಯೇ ಸೇರಿಕೊಂಡಿದ್ದರು. ಈ ಗಾಂಧಿಯ ಬಳಿ ಹೋಗಿ ಸಾವಿನ ಸಂದೇಶವನ್ನು ಪಡೆಯುವ ಬದಲು ಸಂದರ್ಭದೊಂದಿಗೆ ಸೆಣಸಾಡಿ ಸತ್ತಿದ್ದರೆ ಅಲ್ಲಿಂದ ಇಲ್ಲಿಗೆ ಬರುವ ಹಿಂಸೆಯಾದರೂ ತಪ್ಪುತ್ತಿತ್ತಲ್ಲ ಎನ್ನುವುದು ಕೆಲವರ ವಿಚಾರ. ಜನ ತನ್ನಿಂದ ಬೇಸರಗೊಂಡು ಹೋದರೆಂದು, ಅವರು ತನ್ನ ಅಹಿಂಸಾಸಿದ್ಧಾಂತವನ್ನು ಪೂರ್ಣವಾಗಿ ನಂಬುತ್ತಿಲ್ಲವೆಂದು ನೊಂದು ಗಾಂಧಿ ಅಂದು ಬರೆಯುತ್ತಾನೆ - "ಅಹಿಂಸೆಯನ್ನು ಅಪ್ಪಿಕೊಳ್ಳುವುದರಲ್ಲಿ ನನ್ನ ಜನರಲ್ಲಿ ನಾನು ಕೆಲವು ಮುಖ್ಯ ದೋಷಗಳನ್ನು ಕಂಡುಕೊಂಡಿದ್ದೇನೆ. ಅಹಿಂಸೆಯ ಬಾಹ್ಯವನ್ನು ನೋಡಿರುವ ಅನೇಕರು ಇದನ್ನು ಹೇಡಿತನದ ಮುಖವಾಡ ಎಂದುಕೊಂಡಿದ್ದಾರೆ. ಇವರು ನೋಡಲು ನನ್ನ ಅನುಯಾಯಿಗಳೆಂದು, ಶಾಂತಚಿತ್ತರೆಂದು ಕಂಡರೂ ಹೃದಯಗಳಿಂದ ಹಿಂಸೆಯನ್ನು ಸಂಪೂರ್ಣ ಕಿತ್ತುಹಾಕುವುದು ಅವರಿಗೆ ಸಾಧ್ಯವಾಗಿಲ್ಲ. ಸ್ವಾತಂತ್ರ್ಯ ಸಿಕ್ಕ ಮರುಕ್ಷಣದಲ್ಲಿಯೇ ಜನರಿಗೆ ನನ್ನ ತತ್ವ ಬೇಡವಾಗಿರುವುದು ಕೂಡ ಇದೇ ಕಾರಣಕ್ಕಾಗಿ. ರಾಜಕೀಯದಲ್ಲಿ ಅಹಿಂಸೆಗೆ ಯಾವ ಸ್ಥಾನ? ಎನ್ನುವ ಪ್ರಶ್ನೆ ಹುಟ್ಟುವುದು ಕೂಡ ಅಹಿಂಸಾ ತತ್ವದ ಬಗೆಗೆ ಇರುವ ಅಜ್ಞಾನದಿಂದಾಗಿಯೆ. ವಿದೇಶಿಯರೊಂದಿಗೆ ಹೋರಾಡುವಾಗ ಈ ಅಹಿಂಸಾ ಮಂತ್ರವೆ ರಾಜಕೀಯವಾಗಿ ಬಳಸಲ್ಪಡಲಿಲ್ಲವೆ? ಈಗ ಹಿಂದೂ-ಮುಸ್ಲಿಮರು ಕಾದಾಡುತ್ತಿದ್ದಾರೆ; ಪರಸ್ಪರ ಕೊಲ್ಲುತ್ತಿದ್ದಾರೆ. ಇಲ್ಲಿ ಏಕೆ ಅದೇ ಅಹಿಂಸೆ ರಾಜಕೀಯವಾಗಿ ಬಳಕೆಯಾಗುತ್ತಿಲ್ಲ ಎನ್ನುವುದು ಕೆಲವರ ವಾದ. ಆದರೆ ನೆನಪಿರಲಿ, ಸಹೋದರರಿಬ್ಬರ ಮಧ್ಯದ ಕಾದಾಟ ರಾಜಕೀಯ ಕದನವಲ್ಲ. ಅದು ಅಧರ್ಮ. ಈಗ ದೇಶ ಕ್ರಮೇಣ ಅಧರ್ಮದೆಡೆಗೆ ವಾಲುತ್ತಿದೆ. ವಿಭಜನೆಯೆಡೆಗೆ ವಾಲುತ್ತಿದೆ. ಕಾಂಗ್ರೆಸ್ಸಿಗರು ಮತ್ತು

ಗಾಂಧಿವಾದಿಗಳೆಂಬ ಗುಂಪುಗಳು ಸೃಷ್ಟಿಯಾಗುತ್ತಿವೆ. ಈ ವಿಭಜನೆ ಅರ್ಥಹೀನ. ಈ ಭೂಮಿಯ ಮೇಲೆ ಗಾಂಧಿವಾದಿಗಳ್ಯಾರಾದರೂ ಇದ್ದರೆ ಅದು ನಾನೊಬ್ಬನೆ. ಕೆಲವು ಉದ್ಧಟರು ತಾವು ಗಾಂಧಿವಾದಿಗಳು ಎಂದು ಹೇಳಿಕೊಳ್ಳುತ್ತಾರೆ. ಆ ಮೂಲಕ ಗಾಂಧಿಯ ಪೂಜಕರು ಎಂದು ಸ್ಥಾಪಿಸಿಕೊಳ್ಳುತ್ತಾರೆ. ಆದರೆ ಗೊತ್ತಿರಲಿ ಪೂಜೆ, ಆರಾಧನೆ ಬೇಕಾಗುವುದು ದೇವರಿಗೆ. ಈ ನಿಮ್ಮ ಗಾಂಧಿ ದೇವರಲ್ಲ. ಆತ ಮನುಷ್ಯ, ಅಲ್ಪ ಮನುಷ್ಯ."

ಈ ಮುಪ್ಪಿನ ದಿನಗಳಲ್ಲಿ ತನ್ನ ಕೈಯಲ್ಲಿಲ್ಲದ, ತಾನು ಬಗೆಹರಿಸಲಾಗದ, ಉತ್ತರಗಳೇ ಇಲ್ಲದ ಇಂತಹ ಹಲವಾರು ಪ್ರಶ್ನೆಗಳನ್ನು ಮೆಲುಕುತ್ತ, ನಿನ್ನೆಯಂತಹ ಘಟನೆಗಳನ್ನು ನೆನಪಿಸಿಕೊಳ್ಳುತ್ತ ಅಕ್ಟೋಬರ್ ೨೫, ಗಾಂಧಿ ಯಥಾ ಪ್ರಕಾರ ನಿತ್ಯದ ಕ್ರಿಯಾವಿಧಿಗಳನ್ನು ಮುಗಿಸಿ ಚರಕದಲ್ಲಿ ಮಗ್ನನಾದ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ಮತ್ತು ಸಿಖ್ಖರೊಂದಿಗೆ ನಡೆದ ದೌರ್ಜನ್ಯ, ಕೊಲೆ, ಸುಲಿಗೆಗಳನ್ನು ಕುರಿತು ಚರ್ಚಿಸಲು ಪ್ರಧಾನಿ ಜವಾಹರಲಾಲ್ ನೆಹರು, ಉಪಪ್ರಧಾನಿ ಸರ್ದಾರ್ ಪಟೇಲ್, ಕಾಂಗ್ರೆಸ್ಸಿನ ಅಧ್ಯಕ್ಷ ಆಚಾರ್ಯ ಕೃಪಲಾನಿ ಮತ್ತು ಇತರರು ಬಂದರು. ಮತ್ತೊಂದೆಡೆ ಇದೇ ದಿನ ಗವರ್ನರ್ ಮಂಗಲ್‌ದಾಸ್ ಪಕ್ವಾಸಾ ಅಮರಾವತಿಯಲ್ಲಿ ಭಾಷಣ ಮಾಡುತ್ತಾ ಕೂಗಿ-ಕೂಗಿ ಹೇಳುತ್ತಿದ್ದ : ಭವಿಷ್ಯದಲ್ಲಿ ಭಾರತದ ಅಸ್ತಿತ್ವಕ್ಕೆ, ಪ್ರಪಂಚದ ಉಳಿವಿಗೆ, ಗಾಂಧಿಯ ವಿಚಾರಗಳೇ ದಾರಿ. ಕೋಮುವಾದದ ಬೆಂಕಿಯಿಂದ ತಮ್ಮನ್ನು ತಾವು ಉಳಿಸಿಕೊಳ್ಳಲು ಭಾರತೀಯರಿಗೆ ಇದರ ಹೊರತು ಅನ್ಯ ದಾರಿಗಳಿಲ್ಲ. ಜಾತಿ-ಮತ-ಪಂಥದ ಗೋಡೆ ಕಟ್ಟಿಕೊಂಡವರು ಕೊನೆಗೊಮ್ಮೆ ಉಸಿರುಗಟ್ಟಿ ಸಾಯುತ್ತಾರೆ. ನಮ್ಮ ಕಣ್ಣ ಮುಂದೆಯೇ ಪ್ರವಾದಿಯಂತೆ ನಿಂತು ಮಾತನಾಡುವ ಈ ಗಾಂಧಿಯನ್ನು ಕಡೆಗಣಿಸಿದರೆ ನಮ್ಮ ನಮ್ಮ ಗೋರಿಗಳನ್ನು ನಾವೇ ತೋಡಿಕೊಂಡಂತೆ. ಗಾಂಧಿಯ ಅಹಿಂಸಾ ತತ್ವವೇ ನಾವು ಭವಿಷ್ಯದಲ್ಲಿ ಉಳಿದುಕೊಳ್ಳುವ ದಾರಿ. 'If we listen to Gandhi, we shall be saved. If not, we shall perish'.

ಅಮರಾವತಿಯಲ್ಲಿ ಜನರನ್ನುದ್ದೇಶಿಸಿ ಗವರ್ನರ್ ಮಂಗಲ್‌ದಾಸ್ ಮಾತನಾಡಿದ್ದು, ಆತನ ಆ ಮಾತುಗಳಲ್ಲಿ ತಾನು ಒಬ್ಬ ಪ್ರವಾದಿಯ ಅವತಾರವಾಗಿದ್ದು, ನಿನ್ನೆಯೇ ತಾನು ದೇವರಲ್ಲ ಎಂದು ಜನರೆದುರು ಹೇಳಿದ್ದ ಗಾಂಧಿಗೆ ಮುಜುಗರ ಉಂಟುಮಾಡಿತ್ತೇನೋ. ಆದರೆ ಹೀಗೆಂದು ಹೇಳುವುದು ಕೂಡ ತಪ್ಪಾದೀತು. ಮಾನವಸಹಜ ರಾಗ-ದ್ವೇಷಗಳ ಗಡಿಗಳನ್ನು ದಾಟಿ ಶೂನ್ಯದೆಡೆಗೆ ಸಾಗುತ್ತಿದ್ದ ಗಾಂಧಿಗೆ ಶ್ರೀರಾಮನ ಕುರಿತ ಭಜನ್ ಒಂದರ ಸಾಲು ನೆನಪಾಗುತ್ತಿತ್ತು, 'ಹೊಗಳುವವರು ಹೊಗಳಲಿ, ಹೊಗಳದವರು ಬೆಂಕಿಯನ್ನೇ ಉಗುಳಲಿ, ಎಲ್ಲವೂ ಮಲ್ಲಿಗೆಯೆ ನನ್ನ ಮಡಿಲಿಗೆ'. ಗಾಂಧಿಗೆ ಶ್ರೀರಾಮನ ಹೊರತು

ಈ ವೇಳೆಯಲ್ಲಿ ಮತ್ತೇನೂ ಕಾಣುತ್ತಿಲ್ಲ. ಕೊನೆಗಾಲದಲ್ಲಿ ರಾಮನಾಮವನ್ನು ಜಪಿಸುತ್ತಾ, ರಾಷ್ಟ್ರ ಕಟ್ಟುತ್ತೇನೆಂದು ಹೊರಟಿದ್ದ ಗಾಂಧಿ ಬರೀ ಶೂನ್ಯದೊಂದಿಗೆ ಹೊರಟಿದ್ದ ಎನ್ನುವುದೂ ತಪ್ಪಾಗುತ್ತದೆ. ಯಾಕೆಂದರೆ ಇದೇ ದಿನ ಒಂದು ವಿಚಾರವನ್ನು ಆತ ಸ್ಪಷ್ಟಪಡಿಸಿದ್ದಾನೆ. ಚಿಕ್ಕಂದಿನಿಂದಲೂ ತನ್ನ ರಾಷ್ಟ್ರ ಸ್ವತಂತ್ರವಾಗಬೇಕು, ಬೇಡಿ ಕಳಚಿದ ಭಾರತವನ್ನು ನೋಡಬೇಕು, ವಿಶ್ವಕ್ಕೇ ಮಾದರಿಯಾಗುವ ನಾಡು ಕಟ್ಟಬೇಕು ಎಂದು ಹಂಬಲಿಸಿದ್ದ ತನ್ನಂಥವನಿಗೆ ಮಾತ್ರ ಈ ಹಿಂದೂ-ಮುಸ್ಲಿಮರು ಹೀಗೆ ಕಿತ್ತಾಡುವುದನ್ನು ಕಂಡು ಆಘಾತವಾಗುತ್ತದೆ; ಕರುಳು ಹಿಸುಕಿದಂತಾಗುತ್ತದೆ. ಈ ಮತೀಯ ಕಿತ್ತಾಟದ ದಾರಿಯಲ್ಲಿ ಸ್ವಾತಂತ್ರ್ಯದ ಕನಸು ಎಷ್ಟೊಂದು ಕಷ್ಟದಿಂದ ಸಾಗಿ ಬಂದಿದೆ ಎನ್ನುವುದು ತನಗೆ ಮಾತ್ರ ಗೊತ್ತು. ಈಗ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ತನ್ನವರಿಂದಲೇ ಸಾವಿನ ಜಾತ್ರೆ ನಡೆದಿದೆ ಎಂದು ಹಲುಬುವ ಗಾಂಧಿಗೆ ದೊಡ್ಡ ಮನೆತನದ ಹಿರಿಯ ಯಜಮಾನನಿಗೊಬ್ಬನಿಗೆ ಇರುವ ತಲ್ಲಣಗಳೇ ಎದುರಾಗಿವೆ. ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿ-ಮಕ್ಕಳು, ನೋಡಿದಷ್ಟೂ ಭೂಮಿ, ಭೂಮಿ ತುಂಬ ಬಂದ ನಳನಳಿಸುವ ಫಸಲು, ಆಳು-ಕಾಳುಗಳನ್ನು ಹೊಂದಿದ ಎಂಬತ್ತರ ವೃದ್ಧ ಜೀವ ತನ್ನೆದುರೇ ಅಚಾತುರ್ಯವೊಂದು ನಡೆಯುವಾಗ ಹೇಗೆ ಕ್ರುದ್ಧವಾಗಲು ಸಾಧ್ಯವೋ ಅಷ್ಟೇ ಮೋಹದ ಮನುಷ್ಯನಾಗಿದ್ದ ಈ ಕ್ಷಣಕ್ಕೆ ಗಾಂಧಿ. ಇಂಥವನನ್ನು ಸಂತನೆಂದು ಸರಿಸಿಬಿಡುವುದು ಉಪೇಕ್ಷೆಯಲ್ಲದೆ ಮತ್ತೇನೂ ಅಲ್ಲ. ಈಗ ಗಾಂಧಿ ಹೇಗಿದ್ದ ಎಂದು ಕೇಳಿದರೆ ನಾನು ನಿಮಗೆ ಮಧುರಚೆನ್ನರ ಪದ್ಯದ ಈ ಸಾಲುಗಳನ್ನು ಹೇಳಬೇಕಷ್ಟೆ-

> **"ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ**
> **ನಿಶ್ಶಬ್ದವಿದ್ದರೂ ಮೌನವಲ್ಲ**
> **ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ**
> **ನಿಸ್ಸೀಮನೆಂದರೂ ಶೂನ್ಯವಲ್ಲ"**

ಮಾನವ ಕುಟುಂಬಕ್ಕೆ ರಕ್ತರಹಿತ, ವಿನಾಶವಿಲ್ಲದ ಭವಿಷ್ಯವನ್ನು ಹುಡುಕುವುದರಲ್ಲಿ ಗಾಂಧಿ ಖಂಡಿತ ಹುಚ್ಚನಂತಾಗಿದ್ದ. ದೀಪ ಆರುವ ದಿನಗಳು ಉರಿದಷ್ಟು ಕಾಲ, ಇರುವಷ್ಟೇ ಕಾಲ ಏನಾದರೂ ಮಾಡಬೇಕೆಂದು ಧಾವಂತದಲ್ಲಿದ್ದ. ಜನರು ತಿಳಿದಂತೆ ಆತ ಅಧ್ಯಾತ್ಮದಲ್ಲಿ ಮುಳುಗಿರಲಿಲ್ಲ. ನಿರಂತರ ಕಸಗುಡಿಸುವುದರಲ್ಲಿಯೇ ನಿರತನಾಗಿದ್ದ. ಇದನ್ನು ಗಮನಿಸಿದ್ದ ಆರ್ನಲ್ಡ್ ಟಾಯ್ನ್‌ಬಿ ಬರೆಯುತ್ತಾರೆ, "ಗಾಂಧಿ ಕೆಸರಿನಲ್ಲಿ ಕಾಲಿಟ್ಟರೂ ಹೇಗೆ ಶುಚಿಗೊಳಿಸಬಹುದೆಂದು ತೋರಿಸಿದರು. ಸ್ವತಃ ಅದರಲ್ಲಿ ಕಾಲಿಟ್ಟರೂ, ತಾವು ಕೆಸರು ಸೋಂಕದೆಯೆ ಉಳಿದರು."



ನನ್ನದು ಅರಣ್ಯರೋದನ

ಈ ಗಾಂಧಿ ಬರೀ ಒಂದು ದೇಹವಲ್ಲ ಎಂದು ನೀವು ಒಪ್ಪುವುದಾದರೆ ಈತನ ಪ್ರವಾಸ ಸಾವಿರಾರು ವರ್ಷಗಳ ಹಿಂದೆಯೆ ಶುರುವಾಗಿದೆ. ಇದು ಆತ್ಮವನ್ನು, ಅದರ ಅವಿನಾಶಿ ಜಂಗಮತ್ವವನ್ನು ಒಪ್ಪಿಕೊಳ್ಳುವ ಎಲ್ಲರಿಗೂ ಅನ್ವಯವಾಗುವ ಮಾತೂ ಕೂಡ. ನೆಪ ಮಾತ್ರಕ್ಕೆ ಈಗ ಹೀಗೆ ಹೊರಟಿದ್ದ ಗಾಂಧಿ ತನ್ನೆದುರೇ ಭಗ್ನಗೊಂಡ ಕನಸುಗಳ ತುಂಡುಗಳನ್ನು ಸೇರಿಸುತ್ತಾ ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದ. ಸ್ವಾತಂತ್ರ್ಯ ಸಿಕ್ಕ ಮರುಕ್ಷಣದಲ್ಲಿ ರಾಜಕೀಯಗೊಂಡ ದೇಶ ಹಾಗೂ ಮಾನವ ಸಂಬಂಧಗಳಲ್ಲಿ ತನ್ನದು ಅರಣ್ಯರೋದನವಾಗಿದೆಯೆಂದು ತಿಳಿಸುತ್ತಿದ್ದ. ಅಧಿಕಾರ ಸಿಕ್ಕ ಮರುಕ್ಷಣವೇ ಕಾಂಗ್ರೆಸ್ ತನ್ನ ಅಹಿಂಸಾತತ್ವಕ್ಕೆ ವಿದಾಂಯ ಹೇಳಿದೆ, ಜನಗಳೂ ಅಷ್ಟೆ, ಹೋರಾಟದಲ್ಲಿ ನನ್ನೊಂದಿಗೆ ಭಾರತೀಯರಾಗಿದ್ದವರೆಲ್ಲಾ

ಈಗ ಹಿಂದೂ, ಮುಸ್ಲಿಂ, ಸಿಖ್ ಹಾಗೂ ಪಾರಸಿಗಳಾಗಿದ್ದಾರೆ. ವರ್ತಮಾನದ ನಾಟಕದಲ್ಲಿ ತನಗ್ಯಾವ ಪಾತ್ರವೂ ಇಲ್ಲ, ಪ್ರೇಕ್ಷಕನಾಗಿ ಮಾತಾಡುವ ತನ್ನ ಮಾತುಗಳಿಗೆ ಮೈಕೇ ಇಲ್ಲ. ತನ್ನ ಖಾದಿ ಯಾವ ಅಭಿಮಾನದ ಸಂಕೇತವಾಗಿತ್ತೋ ಈಗ ಅದು ರಾಜಕಾರಣದ ಸಂಕೇತವಾಗಿದೆ, ಬಟ್ಟೆಯಾಗಿದೆ, ಯಂತ್ರಗಳಿಂದ ಮಿಲ್ಲಿನಿಂದ ಬರುವ ಖಾದಿ ಬಟ್ಟೆಗೂ, ಗಾಂಧಿ ಕೊಟ್ಟ ಖಾದಿಗೂ ಬಹಳ ವ್ಯತ್ಯಾಸವಿದೆಯೆಂದು ಆತ ಈ ಜನರಿಗೆ ಹೇಗೆ ತಿಳಿಹೇಳಬೇಕು? ಮಿಲ್ಲುಗಳು ನಿಂತು ಹೋದರೆ ಜನರೆಲ್ಲಾ ಬೆತ್ತಲಾಗಿಬಿಡುತ್ತಾರೆ ಎಂದು ಕೈಗಾರಿಕೀಕರಣದ ಮಂತ್ರವನ್ನು ಜಪಿಸುತ್ತಿದ್ದ ನೆಹರುವಿಗೆ, ಲಾಭಕೋರರಿಗೆ ಮಿಲ್ಲುಗಳು ಸೃಷ್ಟಿಸುವ ನಗರೀಕರಣ, ಮಾನವ ಸಂಬಂಧಗಳಲ್ಲಿಯ ಶಿಥಿಲತೆ, ಅನಾರೋಗ್ಯ ಅಪರಾಧವನ್ನು ಕುರಿತು ಗಾಂಧಿ ಇನ್ನೆಷ್ಟು ತಿಳಿಸಿಹೇಳಬೇಕು? ಖಾಲಿ ಕೈಗಳಿಗೆ ಖಾದಿ ನೇಯುವ ಚರಕವಿದ್ದರೆ ಕೋವಿ ಹಿಡಿದು, ಹಿಂದೂ-ಮುಸ್ಲಿಮರೆಂದು ಕಾದಾಡುವಷ್ಟು ಕಾಲಾವಕಾಶವಿರುವುದಿಲ್ಲವೆಂದು ಗಾಂಧಿಯ ವಾದ. ನಾವು ಬೆತ್ತಲಾಗಿದ್ದರೂ ಚಿಂತೆಯಿಲ್ಲ ಮರ್ಯಾದೆಯಿಂದ ಬದುಕಿರಬಹುದಲ್ಲ ಎನ್ನುವುದು ಆತನ ಪ್ರಶ್ನೆ. ಸ್ವಕಲ್ಪಿತ ಭಯಗಳಿಂದ ನರಳುವ ಮನುಷ್ಯರಿಗೆ ಗಾಂಧಿ ಹೇಳಿದ್ದಿಷ್ಟೇ: 'Mine is a voice in the wilderness.'

ಸ್ವತಂತ್ರ ಭಾರತದ ಶಿಕ್ಷಣ, ಶಿಕ್ಷಕರು, ರಾಜಕೀಯ ಅರಾಜಕತೆ ಇಂಥವುಗಳಲ್ಲಿ ನೆಪ ಮಾತ್ರದ ಪದವಿಗಳನ್ನು ತೆಗೆದುಕೊಳ್ಳಲು ಹೊರಟ ಜೂಜಿನ ಕುದುರೆಯಂತಹ ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯಗಳನ್ನು ಕುರಿತೂ ಗಾಂಧಿ ಈಗ ಚಿಂತಿತನಾಗಿದ್ದ. ೧೯೪೭ ಅಕ್ಟೋಬರ್ ೨೬ರಂದು 'ಹರಿಜನ್' ಪತ್ರಿಕೆಗೆ ಬರೆದ ಸಂಪಾದಕೀಯದಲ್ಲಿ ವಿಶ್ವವಿದ್ಯಾಲಯಗಳನ್ನು ಕುರಿತ ಆತನ ಕಳವಳ ಹೀಗೆ ದಾಖಲಾಗಿದೆ-

"ಭಾರತದ ಪ್ರತಿ ಪ್ರಾಂತಗಳಲ್ಲೂ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಬರೀ ವ್ಯಸನವಾಗಿದೆ. ಸುಮ್ಮನೆ ಪ್ರತಿಷ್ಠೆಗಾಗಿ ಹುಟ್ಟುಹಾಕುವ ವಿಶ್ವವಿದ್ಯಾಲಯಗಳಿಗೆ ಒಂದು ಸರಿಯಾದ ಹಿನ್ನೆಲೆ, ದೃಷ್ಟಿಕೋನ ಕಾಣುತ್ತಿಲ್ಲ. ಅವುಗಳ ಪ್ರೋತ್ಸಾಹಕ್ಕೆ ಬೇಕಾದ ಯೋಗ್ಯ ಶಾಲೆ-ಕಾಲೇಜುಗಳ ಅವಶ್ಯಕತೆಯ ಚಿಂತೆಯೂ ಯಾರಿಗೂ ಇದ್ದಂತಿಲ್ಲ. ತಳಹದಿ ಸರಿಯಾಗಿದ್ದರೆ ಮಾತ್ರ ವಿಶ್ವವಿದ್ಯಾಲಯ ಎಂಬ ನಮ್ಮ ಅಭಿಮಾನದ ಸೌಧ ಸಾಧನೆಯಾಗಲು ಸಾಧ್ಯವಿದೆ. ರಾಜಕೀಯವಾಗಿ ಸ್ವತಂತ್ರರಾದ ನಾವು ಪಾಶ್ಚಾತ್ಯ ಚಿಂತನೆಗಳಿಂದ ಇಂದಿಗೂ ಸ್ವತಂತ್ರರಾಗಿಲ್ಲ. ಅವರನ್ನು ಅನುಕರಿಸಿದ ಮಾತ್ರಕ್ಕೆ ನಮ್ಮ ಸಮಸ್ಯೆಗಳು ಇಲ್ಲದಿರುವುದಿಲ್ಲ. ಪಶ್ಚಿಮದಿಂದ ಒಳ್ಳೆಯದೇನೂ ಬರಲಿಲ್ಲ ಎಂದು ನನ್ನ ವಾದವಲ್ಲ. ಆದರೆ ಪಶ್ಚಿಮದ ಆಲೋಚನೆಗಳಿಗೇ ಸಂಪೂರ್ಣ ನಮ್ಮನ್ನು ನಾವು ಕೊಟ್ಟುಬಿಡುವುದನ್ನು ತಪ್ಪಿಸುವುದು ನಮ್ಮ ಕರ್ತವ್ಯವಲ್ಲವೇ? ವಿಶ್ವವಿದ್ಯಾಲಯಗಳಿಗೆ

ಯಾವ ಕಾಲಕ್ಕೂ ದೊಡ್ಡ-ದೊಡ್ಡ ಕಟ್ಟಡಗಳ ಅವಶ್ಯಕತೆಯಿಲ್ಲ. ಬೆಳ್ಳಿ-ಬಂಗಾರದಿಂದ ಮಾಡಿದ ಲಾಂಛನಗಳು ಬೇಕಿಲ್ಲ. ಅದಕ್ಕೆ ಬೇಕಿರುವುದು ಸಾರ್ವಜನಿಕ ಸಹಮತಿ, ಸಮ್ಮತಿ ಹಾಗೂ ಶಿಕ್ಷಣದ ರಥವನ್ನು ಎಳೆಯಬಲ್ಲ ಆರೋಗ್ಯವಂತ ಸಮರ್ಥ ಶಿಕ್ಷಕರು. ಇಲ್ಲಿರುವವರಿಗೆ ತಲೆ ಬೇಕು, ಕನಸುಗಳು ಬೇಕು. ವಿಶ್ವವಿದ್ಯಾಲಯಗಳಿಗೆ ಯಾವ ಕಾಲಕ್ಕೂ ಸರ್ಕಾರದ ಧನಸಹಾಯವಿರಕೂಡದು, ಜನತೆ ತಮಗೆ ವಿಶ್ವವಿದ್ಯಾಲಯಗಳು ಬೇಕು ಎನ್ನುವುದಾದರೆ ಅವುಗಳನ್ನು ತಮ್ಮ ಸ್ವಸಂಗ್ರಹದಿಂದ ಪೋಷಿಸಿ ಬೆಳೆಸಬೇಕು. ಹೀಗಾದಾಗ ಮಾತ್ರ ಒಂದು ವಿಶ್ವವಿದ್ಯಾಲಯ ಯಾವ ಕಾರಣಕ್ಕೆ ಹುಟ್ಟಿತು ಎನ್ನುವ ಅರಿವಿನ ದೀವಿಗೆ ಅಲ್ಲಿ ಸದಾ ಉರಿಯುತ್ತದೆ. ವಿಶ್ವವಿದ್ಯಾಲಯ ತಳದಿಂದ ತುದಿಯವರೆಗೂ ಗಟ್ಟಿಯಾಗಿರುತ್ತದೆ. ಇಂಥವುಗಳಿಂದ ಬರುವ ವಿದ್ಯಾರ್ಥಿಗಳು ಸಮಾಜವನ್ನು ಸಶಕ್ತಗೊಳಿಸುತ್ತಾರೆ. ಒಳ್ಳೆಯ ಹೊಲದಲ್ಲಿ ಬಿತ್ತಿದ ಫಸಲು ಒಳ್ಳೆಯ ರೀತಿಯಿಂದಲೇ ಬರುವಂತೆ ಜನರು ಒಳ್ಳೆಯ ಮನಸ್ಸಿನಿಂದ ತೊಡಗಿಸಿದ ಹಣ ನೂರ್ಮಡಿಯಾಗಿ ಫಲ ನೀಡುತ್ತದೆ. ಆದರೆ ಪಾಶ್ಚಾತ್ಯ ಅನುಕರಣೆಯಲ್ಲಿ ಸರ್ಕಾರದ ಧನಸಹಾಯದಿಂದ ಹುಟ್ಟುವ ವಿಶ್ವವಿದ್ಯಾಲಯಗಳು ಸಂಪೂರ್ಣ ವಿರುದ್ಧಮುಖಿಯಾಗಿರುತ್ತವೆ. ಭಾರತ ತನಗೆ ಸಿಕ್ಕ ಸ್ವಾತಂತ್ರ್ಯವನ್ನು ಸರಿಯಾಗಿ, ಸಮರ್ಥವಾಗಿ ಜೀರ್ಣಿಸಿಕೊಳ್ಳುವವರೆಗೂ ಹೊಸ ವಿಶ್ವವಿದ್ಯಾಲಯಗಳ ಅವಶ್ಯಕತೆಯಿಲ್ಲ."

ಅಕ್ಟೋಬರ್ ೨೬ರ ರವಿವಾರ ಗಾಂಧಿಗೆ ಅತ್ಯಂತ ಸಂತಸದ ಸುದ್ದಿಯೊಂದನ್ನು ತಂದಿತ್ತು. ಸ್ವಾತಂತ್ರ್ಯ ಸಿಕ್ಕು, ಸಾವಿರ ವರ್ಷಗಳೇ ಗತಿಸಿ; ಸಕ್ರಿಯ, ಯಶಸ್ವಿ ರಾಜಕಾರಣದಲ್ಲಿ ತಾವೆಲ್ಲ ತೊಡಗಿರುವಂತೆ, ರಾಷ್ಟ್ರದಲ್ಲೆಲ್ಲೂ ಇನ್ನೂ ಗಾಂಧಿಯ ಮಾರ್ಗದರ್ಶನ ಅವಶ್ಯಕತೆಯಿಲ್ಲ ಎನ್ನುವುದು ಕಾಂಗ್ರೆಸ್ಸಿಗರ ಅಭಿಪ್ರಾಯವಾಗಿತ್ತು. ಆದರೆ ಗಾಂಧಿ ಮಾತ್ರ ತಾನು ಹೇಳಬೇಕಾದುದು ಇನ್ನೂ ಏನೋ ಇದೆ, ಈ ಸಮಾಜದೊಂದಿಗೆ ಹುರಿ ಹೊಡೆದುಕೊಳ್ಳಬೇಕಾದ ಸಂಘಟನೆಗಳು ಇನ್ನೂ ಅವೆಷ್ಟೋ ಇವೆ ಅಂದುಕೊಂಡಿದ್ದರಿಂದ ಆತ ತನ್ನ ಪ್ರಾರ್ಥನಾ ಸ್ಥಳವನ್ನು ನಿರಂತರವಾಗಿ ಬದಲಾಯಿಸುತ್ತ ಹೊರಟಿದ್ದ. ಅಂದುಕೊಂಡಂತೆ ಇಂದು ಸಾಯಂಕಾಲದ ಪ್ರಾರ್ಥನೆಗೆ ದೆಹಲಿಯ ಜೈಲೊಂದರಿಂದ ಗಾಂಧಿಗೆ ಕರೆ ಬಂತು. ನಾಳೆ ಸೋಮವಾರ, ಆತನ ಮೌನ ವ್ರತ. ಮಾತು ಸಾಧ್ಯವಿಲ್ಲ. ಇಂದು ತಾನು ಹೇಳಬಹುದಾದುದನ್ನು ಹೇಳಬಹುದೆಂದು ಜೈಲಿಗೆ ಸಂಭ್ರಮದಿಂದಲೇ ಹೊರಟ ಗಾಂಧಿ.

ಆತನಿಗೂ ಜೈಲಿಗೂ ಅದೆಂಥ ಅಮೋಘ ಅವಿನಾಭಾವ ಸಂಬಂಧವಲ್ಲವೆ? ಆತ ಜೈಲಿನಲ್ಲಿರುವಾಗಲೇ ತನ್ನ ಪ್ರೀತಿಯ ಮಡದಿ 'ಬಾಳ'ನ್ನು ಕಳೆದುಕೊಂಡ, ಮಾನಸ ಪುತ್ರ ಮಹಾದೇವ ದೇಸಾಯಿಯನ್ನು ಕಳೆದುಕೊಂಡ, ನಿಧನರಾದ ಅನೇಕ

ಗೆಳೆಯರ, ಎಳೆಯರ ಅಂತ್ಯ ಸಂಸ್ಕಾರಕ್ಕೆ ಹೋಗಲಾಗದೆ ಈ ಜೈಲುಗಳಲ್ಲೇ ಉಳಿದುಕೊಂಡ, ಇಂದು ಅದೇ ಜೈಲುಗಳ ನಿವಾಸಿಗಳನ್ನು ಕುರಿತು ಮಾತನಾಡಲು ಈತನಿಗೆ ಕರೆದಾಗ ಹರ್ಷವಾಗದೆ ಇರಲು ಉಂಟೆ? ಅಪರಾಧಿಗಳಲ್ಲೂ ಶ್ರೀರಾಮನನ್ನು ಹುಡುಕುವ ಗಾಂಧಿಗೆ ಜೈಲುಗಳು ಹೇಸಿಗೆ ತರಲುಂಟೆ?

ಯಥಾ ಪ್ರಕಾರ ಗಾಂಧಿಯ ಈ ಸಾಯಂಕಾಲದ ಪ್ರಾರ್ಥನೆ ದೆಹಲಿಯ ಜೈಲಿನಲ್ಲಿ ಪ್ರಾರಂಭವಾಯಿತು. ಕಾಯಾ, ವಾಚಾ, ಮನಸಾ ತಾನು ಪರಿಶುದ್ಧನಾಗಿದ್ದೂ ಸೌಥ್ ಆಫ್ರಿಕಾದಲ್ಲಿ ತಾನು ಬಂಧಿಯಾಗಿದ್ದು, ಎಲ್ಲ ಪ್ರಕಾರದ ಜೈಲುಗಳಲ್ಲಿ ತಾನು ದೀರ್ಘ ಕಾಲಗಳವರೆಗೆ ಹಿಂಸೆ ಅನುಭವಿಸಿದ್ದು, ಸೌಥ್ ಆಫ್ರಿಕಾದ ಜೈಲುಗಳಲ್ಲಿ ಭಾರತೀಯರನ್ನು ಕೂಲಿಗಿಂತಲೂ ಕನಿಷ್ಟವಾಗಿ ಕಾಣುತ್ತಿದ್ದುದು, ಒಂದೊಂದು ಕೋಣೆಯಲ್ಲಿ ಕನಿಷ್ಟ ೧೫೦ ಸತ್ಯಾಗ್ರಹಿಗಳನ್ನು ಅಲ್ಲಿ ಕೂಡಿಡುತ್ತಿದ್ದುದು, ಅವರನ್ನು ಅಪರಾಧಿಗಳಂತೆ ಕಾಣುತ್ತಿದ್ದುದು ಎಲ್ಲವನ್ನೂ ಒಂದು ಕ್ಷಣ ನೆನಪಿಸಿಕೊಂಡ ಗಾಂಧಿ. ಸ್ವತಂತ್ರ ಭಾರತದಲ್ಲೂ ಬಂಧಿತ ತನ್ನ ಈ ಬಂಧುಗಳನ್ನು ಉದ್ದೇಶಿಸಿ ಗಾಂಧಿ ಅತ್ಯಂತ ಸಂಯಮದ ಮಾತುಗಳನ್ನು ಆಡಲಾರಂಭಿಸಿದ – "ಖಂಡಿತವಾಗಿ ಜೈಲಿಗೆ ಹೋದವನು ಅಪರಾಧಿಯೆ. ಆದರೆ ಜೈಲುವಾಸಿಯೊಬ್ಬನೇ ಅಪರಾಧ ಮಾಡಿರುತ್ತಾನೆ ಎಂದು ನಾನು ನಂಬುವುದಿಲ್ಲ, ಜೈಲಿನ ಹೊರಗಿರುವವರು ಅಪರಾಧವನ್ನು ಮಾಡಿಯೇ ಇಲ್ಲ ಎಂದೇನೂ ಇಲ್ಲ. ಜೈಲು ವಾಸದ ನನ್ನ ದೀರ್ಘ ಅನುಭವದಲ್ಲಿ ಅನೇಕ ಅಪರಾಧಿಗಳು, ಜೈಲು ಅಧಿಕಾರಿಗಳು ನನ್ನ ಸ್ನೇಹಿತರಾಗಿದ್ದಾರೆ. ನನಗೊಬ್ಬ ಜೈಲು ಅಧಿಕಾರಿ ಮಿತ್ರ ಹೇಳುತ್ತಿದ್ದ, ತನ್ನ ವ್ಯಾಪ್ತಿಗೆ ಅನೇಕ ಅಪರಾಧಿಗಳನ್ನು ಜೈಲು ನೀಡುತ್ತದೆ. ಆದರೆ ಸ್ವತಃ ತಾನೇ ಒಬ್ಬ ಎಂಥ ಅಪರಾಧಿಯಾಗಿದ್ದೇನೆ ಎನ್ನುವುದನ್ನು ಈ ವ್ಯವಸ್ಥೆ ನಂಬುವುದೇ ಇಲ್ಲ. ತಾನು ಎಂಥ ಅಪರಾಧಿಯೆಂದು ದೇವರಿಗೆ ಮಾತ್ರ ಗೊತ್ತು. ಗೆಳೆಯರೆ, ಆತನ ಈ ಮಾತುಗಳನ್ನು ನಾನು ಖಂಡಿತವಾಗಿಯೂ ನಂಬುತ್ತೇನೆ. ನಮ್ಮ ಅಪರಾಧಗಳ ಸರಿಯಾದ ಲೆಕ್ಕ ದೇವರಿಗೆ ಮಾತ್ರ ಗೊತ್ತು. ಈ ಕಾರಣಕ್ಕಾಗಿಯೇ ಇಂದು ನಾನಿಲ್ಲಿ ನಿಮ್ಮೊಡನೆ ಆ ದೇವರ ಪ್ರಾರ್ಥನೆಗೆ ಕುಳಿತಿರುವುದು.

ಈಗ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಿದ್ದಾರೆ. ನಮ್ಮದೇ ಸರಕಾರ ರಚನೆಯಾಗಿದೆ. ಹೀಗಿರುವಾಗ ನಮ್ಮ ಜೈಲುಗಳು ಆಸ್ಪತ್ರೆಗಳಾಗಿ ಮಾರ್ಪಡಬೇಕೆನ್ನುವುದು ನನ್ನ ಆಶಯ. ಇಲ್ಲಿ ಯಾರೋ ಕೊಲೆ ಮಾಡಿದ್ದೀರಿ, ಕಳ್ಳತನ, ಮೋಸ ಮಾಡಿ ಅಪರಾಧಿಗಳಾಗಿದ್ದೀರಿ. ಇವೆಲ್ಲವೂ ಮನುಷ್ಯನ ರೋಗಗಳೇ, ಆದರೆ ಗುಣಪಡಿಸಬಹುದಾದ ರೋಗಗಳು. ನಿಮ್ಮ ಬದುಕುಗಳೂ ಉಪಯುಕ್ತವಾಗಲು ಖಂಡಿತ ಸಾಧ್ಯವಿದೆ. ಜೈಲ ಅಧಿಕಾರಿಗಳು, ಕಮಿಷನರ್‌ಗಳು ವೈದ್ಯರಾಗಬೇಕಿದೆ. ವ್ಯಸನದಿಂದ ವ್ಯಕ್ತಿಯನ್ನು ಮುಕ್ತಗೊಳಿಸುವಂತೆ ಅವರು,

ಅಪರಾಧಗಳಿಂದ ನಿಮ್ಮನ್ನು ಮುಕ್ತಗೊಳಿಸುವ ವೈದ್ಯರಾಗಬೇಕಿದೆ. ಅಧಿಕಾರಿಗಳು ಜೈಲುವಾಸಿಗಳೊಂದಿಗೆ ಹೇಗೆ ವರ್ತಿಸಬೇಕು ಎನ್ನುವುದನ್ನು ಸರಕಾರಗಳು ಚೆನ್ನಾಗಿ ಕಲಿಸಬೇಕಿದೆ. ಜೈಲಿನಲ್ಲಿಯೇ ಶ್ರೀಕೃಷ್ಣ ಜನಿಸಿದ, ಅಧರ್ಮದ ವಿರುದ್ಧ ಹೋರಾಡಲು ಶತಮಾನಗಳಿಂದ ನಮ್ಮನ್ನು ಪ್ರೇರೇಪಿಸಿದ, ಅಲ್ಲವೆ?"

ಗಾಂಧಿಯ ಈ ಕನಸನ್ನು ಕೇಳಿ ಜೈಲುವಾಸಿಗಳಿಗೆ, ಅಧಿಕಾರಿಗಳಿಗೆ ಸಂತಸವಾಯಿತೇ ವಿನಾಃ ಸಂಕಟ ನೀಗಲಿಲ್ಲ. ಇನ್ನು ಮೂರು ತಿಂಗಳಲ್ಲಿ ಕೊಲೆಯಾಗಿ ಹೋಗುವ ಈ ಮುದುಕ ಅಪರಾಧಿಗಳ ಪಟ್ಟಿಗೆ ತಾನೂ ಒಬ್ಬನನ್ನು ಸೇರಿಸಿಯೇ ಹೋಗುತ್ತಾನೆ. ತಾನು ತೀರಿದ ಕೆಲವೇ ತಿಂಗಳಲ್ಲಿ ಇಬ್ಬರನ್ನು ಗಲ್ಲುಗಂಬಕ್ಕೆ ಬಲಿ ನೀಡುತ್ತಾನೆ, ಅಹಿಂಸೆಯ ಆರಾಧಕನಾಗಿ ತಾನು ಸತ್ತು ಹಿಂಸೆಯ ಹೊಸ ಅಧ್ಯಾಯ ಪ್ರಾರಂಭಿಸುತ್ತಾನೆ ಎನ್ನುವುದು ಆತನಿಗೇ ಗೊತ್ತಿರಲಿಲ್ಲ. ಕೆಲವು ಅಪರಾಧಿಗಳಿಗೆ ಜೈಲಿನಿಂದ ಮುಕ್ತಿ ಬೇಕಿತ್ತು; ಆದರೆ ಅದು ಆತನ ಕೈಯಲ್ಲಿರಲಿಲ್ಲ.

ಮರುದಿನ ಸೋಮವಾರ, ಮೊಮ್ಮಗಳು ಮನುಳಿಗೆ ಸ್ವಲ್ಪ ಜ್ವರ. ಗಾಂಧಿ ಮೌನ. ನಿರಾಶ್ರಿತರಿಗಾಗಿ ಒಂದಿಷ್ಟು ಜನ ರಜಾಯಿಗಳನ್ನು ನೀಡಲು ಬಂದಿದ್ದಾರೆ. ತುಂಡು ತುಂಡು ಬಟ್ಟೆಗಳಿಂದ ಸಿದ್ಧವಾದ ಅವರು ತಂದ ಈ ಹೊದಿಕೆಗಳಲ್ಲೂ ಅಖಂಡ ಭಾರತ ಕಾಣುತ್ತಿದೆ ಗಾಂಧಿಗೆ. ಎಷ್ಟೊಂದು ಸಂಸ್ಕೃತಿಗಳು, ಭಾವಗಳು ಆದರೂ ಭಾರತ ಅಖಂಡ ಗಾಂಧಿಯ ಪಾಲಿಗೆ. ಇಂತಹ ನೆಲ ಬರೀ ಮುಸ್ಲಿಮರಿಗಾಗಿ ಅಥವಾ ಹಿಂದೂಗಳಿಗಾಗಿ ಎಂದು ಘೋಷಿಸಲ್ಪಟ್ಟರೆ ನಮ್ಮ ಒಟ್ಟು ಶಿಕ್ಷಣ ಮತ್ತು ಸಂಸ್ಕೃತಿಗೆ ಸಂಕುಚಿತತೆ ಬರುತ್ತದೆ. ಇಲ್ಲಿಯ ಗಾಳಿ ವಿಷಕಾರಿಯಾಗುತ್ತದೆ. ಬದಲಾಗಿ ಭಾರತ ಪಾಕಿಸ್ತಾನಗಳೆರಡರಲ್ಲೂ ಪರಸ್ಪರ ಹಿಂದೂ-ಮುಸ್ಲಿಮರು ಸೇರಿ ಬದುಕಿದರೆ ಎರಡು ರಾಷ್ಟ್ರಗಳಿಗೆ ಸುರಕ್ಷತೆ ಇರುತ್ತದೆ. ನಮ್ಮವರು ಅಲ್ಲಿ, ಅಲ್ಲಿಯವರು ನಮ್ಮಲ್ಲಿ ಹೀಗಾದಾಗ ಇರುವ ಎಚ್ಚರಿಕೆ, ಜೀವನ ಕಾಳಜಿಗಳು ಸಂಪೂರ್ಣ ಜಾತಿ ಆಧಾರಿತವಾಗಿ ರಾಷ್ಟ್ರಗಳು ನಿರ್ಮಾಣವಾದಾಗ ಇರುವುದಿಲ್ಲ ಎನ್ನುವುದು ಗಾಂಧಿಯ ತಿಳುವಳಿಕೆ. ಗಾಂಧಿಯ ಇಂಥ ಸಾಮಾನ್ಯ ಜ್ಞಾನ ನಮಗೆ ಇಂದಿಗೂ ಅರ್ಥವಾಗದೇ ಇರುವುದು ನಮ್ಮ ಮೂರ್ಖತನ, ಅಲ್ಲವೆ?

ಭಿನ್ನ ಸಂಸ್ಕೃತಿಗಳ ಸಮಾಗಮದ ದಾರಿಯಲ್ಲಿ ಸಾವಿರಾರು ವರ್ಷಗಳನ್ನು ಸಾಗಿಸಿದ ಭಾರತದಲ್ಲಿ ಹಿಂದೂ-ಮುಸ್ಲಿಮರ ಸೌಂದರ್ಯ ಪ್ರಜ್ಞೆಯನ್ನು ಸಂಕೇತಿಸುವ ಆಗ್ರಾದ ತಾಜಮಹಲ್, ದೆಹಲಿ ಜಾಮಾ ಮಸೀದಿ ಮತ್ತು ಅಲಿಘಡ್ ವಿಶ್ವವಿದ್ಯಾಲಯ ಬರೀ ಮತಿಯ ಕಾರಣಕ್ಕಾಗಿ ಮಣ್ಣಾಗಿ ಹೋಗುವುದಾದರೆ ಭಾರತಕ್ಕೆ ಉಳಿಗಾಲ ಇಲ್ಲವೆನ್ನುವುದು ಗಾಂಧಿಯ ವಾದ.



ಸೇಡು ಮನುಷ್ಯನಿಗೆ ಒಪ್ಪುವ ಭಾಷೆಯೆ?

'ಗಾಂಧಿ' ಎಂದರೆ ನಾವೆಲ್ಲರೂ, ಯಾವಾಗ ಬೇಕಾದರೂ, ಏನು ಬೇಕಾದರೂ ಪ್ರಶ್ನೆ ಕೇಳಿದರೆ ಉತ್ತರಿಸಲೇಬೇಕಾದ ಒಂದು ಓರ್ಯಾಕಲ್. ಸೋಮವಾರದ ಮೌನದಲ್ಲಿದ್ದ ಗಾಂಧಿಗೆ ಇಂದೂ ಕೂಡ ವ್ಯಕ್ತಿಯೊಬ್ಬ ಪ್ರಶ್ನೆಯನ್ನು ಬರೆದು ಕಳುಹಿಸಿದ. ಸೇಡಿನ ಭಾವನೆಯನ್ನೇ ಇಟ್ಟುಕೊಳ್ಳಬಾರದು ಎಂದು ಬೋಧಿಸುವ ಗಾಂಧಿಯ ಅನುಯಾಯಿಗಳು ಅಥವಾ ಶ್ರೀರಾಮನ ಭಕ್ತರು ರಾವಣನ ಮೂರ್ತಿಯನ್ನು ಸುಡುವುದರ ಮೂಲಕ ಸೇಡಿನ ಭಾವನೆಯನ್ನು ತೋರಿಸಿಕೊಳ್ಳುವುದಿಲ್ಲವೆ? ಅದು ಹಾಗಲ್ಲ ಎನ್ನುವುದಾದರೆ ಈ ಆಚರಣೆ ಯಾವುದರ ಸಂಕೇತ? ಎನ್ನುವುದು ಆತನ ಘನ ಪ್ರಶ್ನೆ. ಜೊತೆಗೆ ಗಾಂಧಿಯಂಥ ಗಾಂಧಿಗೇ ಪ್ರಶ್ನಿಸಿದೆ ಎಂಬ ಹಮ್ಮು ಬೇರೆ.

ಸಾಮಾನ್ಯನೊಬ್ಬನ ಈ ಪ್ರಶ್ನೆಗೆ ಗಾಂಧಿಯ ಉತ್ತರ ಅಷ್ಟೊಂದು ಸಮರ್ಥವಾಗಿರಲಿಲ್ಲ. ಆದರೂ

ತುಂಡು ತುಂಡಾಗಿ ಹೇಳಿದ. ನಿಜಕ್ಕೂ ತನಗ್ಯಾರೂ ಅನುಯಾಯಿಗಳಿಲ್ಲ, ತನ್ನೊಳಗೇ ಇರುವ ದುಷ್ಟತನ ಯಾವ ಪ್ರಮಾಣದ್ದು ಎಂದೂ ತನಗೆ ತಿಳಿದಿಲ್ಲ, ತಾನೊಬ್ಬ ಮಹಾತ್ಮನೇ? ಅದು ತನಗೂ ಗೊತ್ತಿಲ್ಲ. ಆದರೆ ಈ ಯಾವ ಮಾತುಗಳೂ ಪ್ರಶ್ನಿಸಿದ ವ್ಯಕ್ತಿಯ ಪ್ರಶ್ನೆಗೆ ನೇರವಾದ ಉತ್ತರಗಳಾಗಿರಲಿಲ್ಲ. ಆದರೆ ಸೇಡಿನ ವಿಷಯದಲ್ಲಿ ರಾಮ-ರಾವಣರನ್ನು ಬದಿಗಿಟ್ಟು ತನ್ನ ವಿಚಾರವನ್ನು ಮಾತ್ರ ಗಾಂಧಿ ಖಂಡ ತುಂಡವಾಗಿ ಮಂಡಿಸಿದ. "ಸೇಡು, ಮನುಷ್ಯನಿಗೆ ಒಪ್ಪುವ ಭಾಷೆಯೇ ಅಲ್ಲ. ಕೇಳು, ಅದು ಯಾರಿಗೂ ಸಲ್ಲದು ಬಂಧು, ಯಾರೋ ನಿನಗೆ ಕೆಡಕನ್ನುಂಟುಮಾಡಿದ್ದಾರೆ, ಹಾಗಂತ ನೀನು ಅದನ್ನೇ ಪುನರಾವರ್ತಿಸಬೇಕಿಲ್ಲ. ಅದಕ್ಕೆ ಅರ್ಥವೂ ಇಲ್ಲ. ನಾನು ನಂಬಿದಂತೆ ಶ್ರೀರಾಮ ಪರಿಪೂರ್ಣನಾಗಿದ್ದ. ಆತ ದೇವನಾಗಿದ್ದ. ಅನ್ಯಾಯ ಅನೀತಿಯ ಸ್ವರೂಪಿಯಾಗಿದ್ದ, ಅಪರಾವತಾರವಾಗಿದ್ದ ರಾವಣನನ್ನು ನಾಶಮಾಡಲೆಂದೇ ಆತ ಅವತರಿಸಿದ್ದ. ದೇವರೊಬ್ಬನೇ ದುಷ್ಟತನವನ್ನು ನಾಶಮಾಡಲು ಅರ್ಹ ಎನ್ನುವ ಮಹಾ ಸಂದೇಶವನ್ನು ರವಾನಿಸುವದಕ್ಕಾಗಿಯೇ ರಾಮಾಯಣ ಕಾವ್ಯದ ರಚನೆಯಾಯಿತು. ತಲೆತಲಾಂತರಗಳಿಂದ ನಮ್ಮ ಹಿರಿಯರು ನಮಗೆ ರಾಮಾಯಣವನ್ನು ಬೋಧಿಸುತ್ತಿರುವುದು ನಾವು ದುಷ್ಟತನವನ್ನು ಅನುಕರಿಸಬೇಕೆಂದು ಅಲ್ಲ, ಬದಲಾಗಿ ಮೌಲ್ಯಗಳ ಪರಿಪಾಲನೆ ಮಾಡಬೇಕೆಂದು."

ಗಾಂಧಿಯ ಈ ಉತ್ತರ ಪ್ರಶ್ನೆ ಕೇಳಿದವನಿಗೆ ಒಂದರ್ಥದಲ್ಲಿ ಪಲಾಯನವಾದ, ಬರೀ ಬೊಗಳೆ ಎನ್ನಿಸದೆ ಮತ್ತೇನೂ ಅನ್ನಿಸಿರಲು ಸಾಧ್ಯವಿಲ್ಲ. ಅಲ್ಲವೆ? ಯಾಕೆಂದರೆ ಗಾಂಧಿ ಆರಾಧಿಸುವ ಶ್ರೀರಾಮನನ್ನು ಲೇವಡಿ ಮಾಡುವ ಉದ್ದೇಶ ಬಿಟ್ಟರೆ ಮತ್ತ್ಯಾವ ಘನ ಉದ್ದೇಶವೂ ಪ್ರಶ್ನೆ ಕೇಳಿದವನ ಸಾಲುಗಳ ಹಿಂದೆ ಕಾಣುತ್ತಿಲ್ಲ. ಲೇವಡಿ, ಗಾಂಧಿಯ ಅನುಭವಕ್ಕೆ ಹೊಳೆಯದ ಭಾಷೆಯೇನೂ ಅಲ್ಲ. ಆದರೆ ಅದು ತನಗೆ ಒಂದಿಷ್ಟೂ ತಿಳಿಯುವುದಿಲ್ಲ ಎನ್ನುವಂತೆ ಮುಗ್ಧನಾಗಿ ಬದುಕುವುದೇ ಈತನ ಮಹಾನ್ ಜೀವನ ಸಂದೇಶವಾಗಿರಬಹುದು.

ಇದೇ ದಿನ ಕಾಶ್ಮೀರದಲ್ಲಿ ಪಾಕಿಸ್ತಾನದ ಸೈನ್ಯ ಪೈಶಾಚಿಕವಾಗಿ ವರ್ತಿಸುತ್ತಿರುವ ರೀತಿಯನ್ನು ಕುರಿತು ಗಾಂಧಿ ಇನ್ನೊಂದು ಪ್ರಶ್ನೆಗೆ ಉತ್ತರಿಸಬೇಕಿದೆ. ಬಲ ಪ್ರದರ್ಶನದಿಂದ ಯಾರನ್ನೂ ಹಿಡಿದಿಟ್ಟುಕೊಳ್ಳುವ ವಿಚಾರವನ್ನು ಗಾಂಧಿ ಯಾವ ಕಾಲಕ್ಕೂ ಒಪ್ಪುತ್ತಿರಲಿಲ್ಲ. ಅಹಿಂಸೆಯ ಮಹಾನ್ ಆರಾಧಕನಾಗಿದ್ದ ಗಾಂಧಿ ಹಿಂಸೆಯನ್ನು ಅಷ್ಟೇ ಶಕ್ತಿಶಾಲಿಯಾಗಿ, ಸಮರ್ಥವಾಗಿ ವಿರೋಧಿಸುತ್ತಿದ್ದ ಎನ್ನುವ ಅಂಶ ಕಾಶ್ಮೀರ ಕುರಿತ ಈ ಉತ್ತರದಲ್ಲಿ ಸ್ಪಷ್ಟವಾಗಿದೆ. ಭಾರತದ ಇಂಚು ಇಂಚು ನೆಲಕ್ಕೂ ಗಾಂಧಿ ಯಾವ ಮರ್ಯಾದೆ ಕೊಟ್ಟಿದ್ದ ಎನ್ನುವುದೂ ಇಲ್ಲಿ ರುಜುವಾತಾಗಿದೆ. ಆದರೆ ಇಂಥದೇ ಒಂದು ನಿಲುವನ್ನು ಚೈನಾ ಭಾರತವನ್ನು ಆಕ್ರಮಿಸಿದಾಗ ನಮ್ಮ ಪ್ರಥಮ ಪ್ರಧಾನಿ, ಗಾಂಧಿಯ ಮಾನಸ ಪುತ್ರ, ನೆಹರುವಿಗೆ

ತೆಗೆದುಕೊಳ್ಳಲಾಗಲಿಲ್ಲವೆನ್ನುವುದು ಖೇದದ ಸಂಗತಿ. ಇದುವೇ ಗಾಂಧಿಗೂ ಆತನ ಸಮಕಾಲೀನ ರಾಜಕಾರಣಿಗಳಿಗೂ ಇರುವ ದೊಡ್ಡ ಅಂತರ.

ಆತ ಬರೆಯುತ್ತಾನೆ, "ನಿಮ್ಮಲ್ಲಿ ಕೆಲವರು ಗಾಂಧಿಗೆ ಕಾಶ್ಮೀರದಲ್ಲಿ ಏನು ನಡೆಯುತ್ತಿದೆ ಎನ್ನುವ ಪ್ರಜ್ಞೆಯಾದರೂ ಇದೆಯೇ ಎಂದುಕೊಂಡಿರಬಹುದಲ್ಲವೇ? ಖಂಡಿತವಾಗಿಯೂ, ನನಗೆ ಎಲ್ಲವೂ ಗೊತ್ತಿದೆ. ನನಗೆ ದೊರಕುತ್ತಿರುವ ಮಾಹಿತಿಗಳು ಸರಿಯಾಗಿವೆ ಎನ್ನುವುದಾದರೆ ಕಾಶ್ಮೀರದಲ್ಲಿ ನಡೆಯುತ್ತಿರುವುದನ್ನು ನಾನು ನಿಸ್ಸಂಶಯವಾಗಿ ಬಲವಾಗಿ ಖಂಡಿಸುತ್ತೇನೆ. ಗೊತ್ತಿರಲಿ, ಹಿಂಸೆಯ ಮಾರ್ಗವನ್ನು ಅನುಸರಿಸುವುದರ ಮೂಲಕ ನಾವು ನಮ್ಮ ದೇಶವನ್ನಾಗಲಿ, ಧರ್ಮವನ್ನಾಗಲಿ, ಜೀವನವನ್ನಾಗಲಿ, ಆಸ್ತಿಗಳನ್ನಾಗಲಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಕಾಶ್ಮೀರ ಪಾಕಿಸ್ತಾನವನ್ನು ಸೇರುವಂತೆ ಪಾಕಿಸ್ತಾನದ ಸರ್ಕಾರ ಮತ್ತು ಸೈನ್ಯ ನಿರಂತರ ಅಲ್ಲಿಯ ಜನತೆಯ ಮೇಲೆ ಒತ್ತಡವನ್ನು ತರುತ್ತಿದೆ. ಇಂದು ಕಾಶ್ಮೀರಿಗಳನ್ನು ಒತ್ತಾಯಿಸುತ್ತಿರುವ ಸೈನ್ಯ ನಾಳೆ ಹೈದ್ರಾಬಾದ್, ಮತ್ತೊಂದು ದಿನ ಜುನಾಗಢ, ಮಗದೊಮ್ಮೆ ಮತ್ತೊಂದು ರಾಜ್ಯ, ಪ್ರಾಂತ್ಯ ಹೀಗೆ ಮುಂದುವರೆಯಬಹುದು. ನಾನು ನ್ಯಾಯಾಧೀಶನ ಸ್ಥಾನದಲ್ಲಿ ಕುಳಿತು ಈ ಮಾತುಗಳನ್ನು ಹೇಳುತ್ತಿಲ್ಲ. ಯಾರು ಯಾರನ್ನೂ ಎಂದೂ ಒತ್ತಾಯಿಸಬಾರದು ಎನ್ನುವುದನ್ನು ಬಲವಾಗಿ ನಂಬಿದವನು ನಾನು. ಹಾಗೊಂದು ವೇಳೆ ಕಾಶ್ಮೀರಿಗಳು ಪಾಕಿಸ್ತಾನವನ್ನು ಸೇರುವುದೇ ಆದರೆ ಅದನ್ನಾರೂ ನಿಯಂತ್ರಿಸಲು ಸಾಧ್ಯವಿಲ್ಲ, ನಿಯಂತ್ರಿಸಲೂ ಬೇಕಿಲ್ಲ. ಆದರೆ ಅದು ಜನರ ಹಂಬಲವಾಗಿರಬೇಕು. ಅವರ ಆಯ್ಕೆ ಯಾವಾಗಲೂ ಅವರ ಮುಂದಿರಬೇಕು. ಜನತೆಯ ಹಳ್ಳಿಗಳಿಗೆ, ಮನೆಗಳಿಗೆ, ಸಂಸಾರಗಳಿಗೆ ಬೆಂಕಿ ಇಟ್ಟು ನಿಮ್ಮ ದಾರಿಯನ್ನು ನಿರ್ಧರಿಸಿಕೊಳ್ಳಿ ಎನ್ನಲಾಗದು. ಕಾಶ್ಮೀರದ ಬಹುಸಂಖ್ಯಾತರು ಮುಸ್ಲಿಮರಾಗಿದ್ದು, ಭಾರತದಲ್ಲಿಯೇ ಅವರು ಉಳಿಯುವುದಾದರೆ ಅದನ್ನು ಕೂಡ ಯಾರೂ ಎಂದಿಗೂ ತಡೆಯಲಾಗದು".

ಈ ಮಾತುಗಳನ್ನು ಗಾಂಧಿ ಸಂತನಾಗಿ ರಾಜಕೀಯ ತಿಳುವಳಿಕೆ ಇಲ್ಲದೆ ಬರೆದಿದ್ದಾನೆಂದು ನನಗನ್ನಿಸುವುದಿಲ್ಲ. ಒಂದೆಡೆ ಪಾಕಿಸ್ತಾನದ ಸರ್ಕಾರದೊಂದಿಗೆ ನಿರಂತರವಾಗಿ ಚರ್ಚೆಯಲ್ಲಿದ್ದು; ಮತ್ತೊಂದೆಡೆ ದೆಹಲಿ, ಕರಾಚಿ, ಲಾಹೋರಿನ ಮಧ್ಯ ಸುಹ್ರಾವರ್ದಿಯನ್ನು ಸಂಧಾನಕ್ಕಾಗಿ ಬಿಟ್ಟು, ಗಾಂಧಿ ಅಪ್ಪಟ ರಾಜಕಾರಣಿಯಾಗಿ ಇದನ್ನು ಸಾಧಿಸಲು ಯತ್ನಿಸಿದ. ಆದರೆ ಬಂಗಾಲದ ಈ ಭಂಡ ಸುಹ್ರಾವರ್ದಿಯನ್ನು ರಾಜದೂತನಾಗಿ ಗಾಂಧಿ ಬಳಸಿದ್ದು ಯಾರಿಗೂ ಎಳ್ಳಷ್ಟೂ ಇಷ್ಟವಿರಲಿಲ್ಲ. ಆತನೊಬ್ಬ ಮಹಾನ್ ನಾಟಕೀಯ ಮನುಷ್ಯ, ಆತ ಎರಡು ಸರ್ಕಾರಗಳ ಮಧ್ಯ ಸೌಹಾರ್ದವನ್ನು ಸಾಧಿಸುವ ಸುಹ್ರಾವರ್ದಿ ಅಲ್ಲ, ಆತ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲ ಎನ್ನುವುದನ್ನು ಗಾಂಧಿ

ಜನರಿಂದ ತಿಳಿದಿದ್ದ. ದಿನ ಗಾಂಧಿ ಬರೆದ ಟಿಪ್ಪಣಿಯೊಂದರಲ್ಲಿ ಹೀಗೆ ವಿವರಿಸಿದ್ದಾನೆ, "ನಮ್ಮಲ್ಲಿ ಕಿಂಚಿತ್ ಅಪ್ರಾಮಾಣಿಕತೆ ಸ್ವಾರ್ಥ ಇದ್ದರೂ ಬಚ್ಚಿಟ್ಟುಕೊಳ್ಳುವ ಪ್ರಮೇಯ ಹುಟ್ಟಿಕೊಳ್ಳುತ್ತದೆ. ನನ್ನ ಬಳಿ ಅಂತಹುದೇನೂ ಇಲ್ಲ. ಎಲ್ಲರ ಸೇವೆಯನ್ನೂ ನಿಸ್ವಾರ್ಥದಿಂದ ಮಾಡಬೇಕೆನ್ನುವ ಸತ್ಯಾಗ್ರಹಿ ತನ್ನಲ್ಲೇನೂ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಹೀಗಿದ್ದಾಗ ಬಚ್ಚಿಟ್ಟುಕೊಳ್ಳುವುದೇನು? ನನಗೆ ಗೊತ್ತಿದೆ, ಈ ಸುಹ್ರಾವರ್ದಿ ಏನನ್ನೂ ಮಾಡದ ಸ್ಥಿತಿಯಲ್ಲಿದ್ದಾರೆ. ಆದರೆ ಕನಿಷ್ಠ ನನ್ನ ಸಂದೇಶವನ್ನಾದರೂ ಜಿನ್ನಾರಿಗೆ ಮುಟ್ಟಿಸುತ್ತಾರಲ್ಲ? ನನಗೆ ಮೋಸ ಮಾಡುವುದರಿಂದ ಸಾಧಿಸುವುದಾದರೂ ಏನು? ಕಾಯಾ–ವಾಚಾ–ಮನಸಾ ನಾನು ಮುಸ್ಲಿಮರನ್ನು, ಪಾರಸಿಗಳನ್ನು, ಜ್ಯೂಗಳನ್ನು ಮತ್ತು ಇಡೀ ಮಾನವ ಸಮಾಜವನ್ನು, ಹಿಂದೂಗಳನ್ನು ಪ್ರೀತಿಸಿದಷ್ಟೇ ಪ್ರಾಮಾಣಿಕವಾಗಿ ಪ್ರೀತಿಸುತ್ತೇನೆ. ನಾನು ಸುಹ್ರಾವರ್ದಿಗೆ ಈಗಲೂ ಅದನ್ನೇ ಹೇಳುತ್ತೇನೆ, ಹೇಳುತ್ತಲೇ ಇರುತ್ತೇನೆ. ನನ್ನ ಬಂಧು, ನಾನು ಮುಕ್ತ. ಹಿಂದೂ–ಮುಸ್ಲಿಮರ ಸಂಬಂಧಗಳ ವಿಷಯದಲ್ಲಿ ನೀನೂ ಪ್ರಾಮಾಣಿಕನಾಗಿರುವುದಾದರೆ ನನ್ನಷ್ಟೇ ನೀನು ಮುಕ್ತ. ನೀನು ಅನ್ಯ ಎಂದುಕೊಳ್ಳುವುದಾದರೆ ನಾನು ನನ್ನ ಮಾತುಗಳನ್ನು ಹಿಂದೆಗೆದುಕೊಳ್ಳುತ್ತೇನೆ. "Hindus and Muslims are not two nations. Hence, you and I have to die in the attempt to make them live together as friends and brothers, which indeed they are. Whatever others may say you and I have to regard Sikhs and others as part of India. This I say more to make myself clear to you than to correct you." ಇದು ಗಾಂಧಿಯ ಸ್ಪಷ್ಟತೆ.

ಗಾಂಧಿ ವಾಸ್ತವಿಕ ಪ್ರಜ್ಞೆ ಇಲ್ಲದ ರಾಜಕಾರಣಿಯಾಗಿದ್ದ, ಗಾಂಧಿಗೆ ವ್ಯಾವಹಾರಿಕತೆ ಗೊತ್ತಿರಲಿಲ್ಲ, ಎರಡು ರಾಷ್ಟ್ರಗಳ ವಿಷಯದಲ್ಲಿ ಆತನ ನಿಲುವು ದ್ವಂದ್ವದಿಂದ ಕೂಡಿತ್ತು ಎಂದೆಲ್ಲಾ ವಾದಿಸುವವರು ಗಾಂಧಿಯ ಬದುಕಿನ ಈ ಒಂದೇ ಒಂದು ದಿನದ ಚಟುವಟಿಕೆಗಳನ್ನು ಗಮನಿಸಿದರೂ ಸಾಕು.

ಮಂಗಳವಾರ, ಅಕ್ಟೋಬರ್ ೨೮. ಈ ಮುಂಜಾವು ಎರಡು ಸಾವಿನ ಸುದ್ದಿಗಳಿವೆ. ಬೊಂಬಾಯಿಯಲ್ಲಿ ಡಾ. ಜಲ್‌ಪಾವರಿಯ ತಂದೆ ತೀರಿದ್ದಾರೆ. ಹಾಗೆಯೇ ಲಂಡನ್‌ನಿಲ್ಲಿ ಡಾ. ಎಡಿತ್ ಹಂಟರ್‌ರ ಗಂಡ ತೀರಿದ್ದಾರೆ. ಈ ಇಬ್ಬರೂ ಗಾಂಧಿಗೆ ಅತ್ಯಂತ ಪ್ರೀತಿಯವರು. ಈಗ ಸಾವಿನ ದಾರಿಯಲ್ಲಿರುವ ಗಾಂಧಿಗೆ ಸಾವು ಈಗ ತೀರ ಆತ್ಮೀಯ. ಇಂದು ಗಾಂಧಿಯ ಸಾಯಂಕಾಲದ ಬಿರ್ಲಾ ಮಂದಿರದ ಪ್ರಾರ್ಥನೆಯಲ್ಲಿ, ದೆಹಲಿಯ ಕೆಲವು ಪ್ರದೇಶಗಳಲ್ಲಿ ಮುಸ್ಲಿಮರನ್ನು ಬಲಾತ್ಕಾರವಾಗಿ ಮನೆಗಳಿಂದ ಹೊರಗಟ್ಟಿ, ಅವರನ್ನು ಕೊಂದು ತೆರವಾದ ಮನೆಗಳಲ್ಲಿ ಹಿಂದೂಗಳು ಸೇರುತ್ತಿರುವುದು, ಇಂಥ ವೇಳೆಯಲ್ಲಿ ರಕ್ಷಕರಾಗಿ ನಿಲ್ಲಬೇಕಿದ್ದ ಪೋಲಿಸ್ ಮತ್ತು

ಸೈನಿಕರೇ ಹಿಂದೂ–ಮುಸ್ಲಿಮರಾಗಿ ವಿಭಜನೆಯಾಗಿರುವುದು ಗಾಂಧಿಗೆ ಗೊತ್ತಾಗಿದೆ. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಸರಿಯಾಗಿ ವರ್ತಿಸುತ್ತಿದ್ದ ಭಾರತದ ಸೈನ್ಯ ಮತ್ತು ಪೋಲಿಸ್ ಈಗ ಕೆಲಸ ಮಾಡುತ್ತಿಲ್ಲ ಎಂದು ವ್ಯಕ್ತಿಯೊಬ್ಬ ಬಂದು ಗಾಂಧಿಯ ಕಿವಿಯಲ್ಲಿ ಉಸುರಿದ್ದಾನೆ. ಇದೆಲ್ಲವನ್ನು ಕೇಳಿ ಗಾಂಧಿ ಸಿಡಿಮಿಡಿಗೊಂಡಿದ್ದಾನೆ. ಮುಷ್ಟಿಯಷ್ಟು ಬ್ರಿಟಿಷರು ಭಾರತವನ್ನು ನಿಯಂತ್ರಿಸಲು ಸಾಧ್ಯವಿತ್ತು ಎನ್ನುವುದಾದರೆ ಇಂದು ಬಹುಸಂಖ್ಯಾತ ಸ್ವತಂತ್ರ ಭಾರತೀಯರಿಗೆ ಏಕೆ ಸಾಧ್ಯವಾಗುತ್ತಿಲ್ಲ ಎನ್ನುವುದಕ್ಕೆ ಆತ ನಮ್ಮ ಭಾವನೆಗಳ ಪ್ರಾಮಾಣಿಕತೆಯನ್ನೇ ಪ್ರಶ್ನಿಸುತ್ತಾನೆ. ಅದಿಲ್ಲದ ಯಾವ ಸರ್ಕಾರಗಳೂ ಗೆಲ್ಲಲು ಸಾಧ್ಯವಿಲ್ಲ ಎನ್ನುವುದು ಆತನ ಅಭಿಮತ.

ಗಾಂಧಿ ಹೇಳುತ್ತಾನೆ, "ಸರಕಾರದ ಅಧಿಕಾರವನ್ನೇ ಸಂಶಯಿಸುವ ಸ್ಥಿತಿ ಬಂದಿದೆ ಈಗ. ಕೇಂದ್ರ ಸರಕಾರ ಇಷ್ಟೊಂದು ದುರ್ಬಲವಾಗಬಾರದು. ಅದಕ್ಕೆ ಅದರ ಸರ್ವಶಕ್ತಿಯ ಸ್ಪಷ್ಟ ಅರಿವಿರಬೇಕು. ಅಪ್ರಾಮಾಣಿಕತೆಗೆ, ಸ್ವಜನಪಕ್ಷಪಾತಕ್ಕೆ ಕೇಂದ್ರ ಎಂದೂ ಆಸ್ಪದವೀಯಬಾರದು. ಕೇಂದ್ರ ತಾಯಿಯಂತೆ. ಹಾಗೊಂದು ವೇಳೆ ಯಾರಾದರೂ ಕಂಡು ಬಂದರೆ ಅಂಥವರನ್ನು ತಕ್ಷಣ ಅಮಾನತುಗೊಳಿಸಬೇಕು. ನಾಗರಿಕರೂ ಅಷ್ಟೇ, ಅಕ್ರಮದಲ್ಲಿ ತೊಡಗಿರುವ ಎಂಥ ಸರಕಾರವನ್ನೂ ಯಾವ ಕ್ಷಣದಲ್ಲೂ ಅಲುಗಾಡಿಸಿಬಿಡುವ ಶಕ್ತಿ ಹೊಂದಿರಬೇಕು. ಯಾವುದೇ ನಾಗರಿಕನನ್ನು ಅಮಾನವೀಯವಾಗಿ ಆತನ ವಾಸಸ್ಥಳದಿಂದ ಹೊರದಬ್ಬುವ ಅಧಿಕಾರ ಯಾರಿಗೂ ಇಲ್ಲ. ಆದರೆ ಯಾರೋ ನಾಲ್ಕು ಜನ ಕಿಡಿಗೇಡಿಗಳು ಹಾಕುವ ಬೆದರಿಕೆಗಳಿಗೆ ಹೆದರುವವರನ್ನು ಯಾವ ಸರಕಾರವೂ ರಕ್ಷಿಸುವುದಿಲ್ಲ. ನಿಮ್ಮನ್ನು, ನಿಮ್ಮ ಮನೆಗಳಿಂದ ತೆರವು ಮಾಡಲು ಬಂದವರ ಬಳಿ ಕೋರ್ಟ್ ಆದೇಶವಿದೆಯೇ ಎಂದು ಪ್ರಶ್ನೆ ಮಾಡಿ. ಯಾವುದೇ ಕಾರಣಕ್ಕೂ ಕಾನೂನನ್ನು ಕೈಗೆ ತೆಗೆದುಕೊಳ್ಳಬೇಡಿ. ಅಪರಾಧಿಗಳಾಗಬೇಡಿ. ಕಾಲ ಮಿಂಚಿಲ್ಲ, ದಯವಿಟ್ಟು ಎಚ್ಚರಾಗಿ. ದೇಶ ನಿಮ್ಮದು. ನಿಮ್ಮನ್ನು ಕಾಯ್ದುಕೊಳ್ಳುವ ಮೂಲಕವೇ ದೇಶವನ್ನು ಕಾಯಬಹುದು" ಎಂದ ಗಾಂಧಿ.


ಈ ದಿನದ ಕೊನೆಯಲ್ಲಿ ಮಾತ್ರ ಗಾಂಧಿಗೆ ಒಂದು ಸಂತಸದ ಸಂಗತಿ. ಮೈಸೂರು ರಾಜ್ಯದಲ್ಲಿ ಜನಪ್ರಿಯ ಸರಕಾರವೊಂದು ಅಸ್ತಿತ್ವಕ್ಕೆ ಬರುತ್ತಿದೆ. ಪದಗ್ರಹಣ ಮಾಡುವ ಮಂತ್ರಿಗಳಲ್ಲಿ ಒಬ್ಬರಾದ ಎಚ್.ಸಿ.ದಾಸಪ್ಪ ಗಾಂಧಿಗೆ ಪತ್ರ ಬರೆದು 'ಆಶೀರ್ವಾದ' ಮಾಡಬೇಕೆಂದು ಕೋರಿಕೊಂಡಿದ್ದಾರೆ. ಈ ಒಂದೇ ದಿನದಲ್ಲಿ ಶಹೀದ್ ಸುಹ್ರಾವರ್ದಿ ಗಾಂಧಿಯ ಬಳಿ ಅದೆಷ್ಟೋ ಬಾರಿ ಬಂದು ಹೋಗಿದ್ದಾರೆ. ಅವರ ಜೊತೆ ಮೀರತ್ತಿನಿಂದ ರಶೀದ್ ಅಹಮದ್, ಮೌಲಾನಾ ಅಬುಲ್ ಕಲಾಂ ಆಜಾದ್, ಸುಧೀರ್ ಘೋಷ್ ಎಲ್ಲರೂ ಗಾಂಧಿಯೊಂದಿಗೆ ಕುಳಿತು ತಮ್ಮ ತಮ್ಮ ವ್ಯಾಪ್ತಿಯ ಸಮಸ್ಯೆಯನ್ನು ತೋಡಿಕೊಂಡು ಹೋಗಿದ್ದಾರೆ. ಅವರೆಲ್ಲ ಹಂಚಿಕೊಂಡು

ಹಗುರಾಗಿದ್ದಾರೆ. ಆದರೆ ಗಾಂಧಿಯ ಮನಸ್ಸು ಭಾರವಾಗಿದೆ. ಗಾಂಧಿಗೆ ವಯಸ್ಸೂ ಭಾರವಾಗಿದೆ.

೨೯ ಬುಧವಾರ ಅಕ್ಟೋಬರ್ ೧೯೪೭. ಈ ದಿನವೆಲ್ಲ ಆತನಿಗೆ ಕಾಶ್ಮೀರದ್ದೇ ಸಮಸ್ಯೆ. ಪ್ರಧಾನಿ ನೆಹರು, ಕಾನೂನು ಸಚಿವ ಮತ್ತು ಉಪಪ್ರಧಾನಿ ಸರ್ದಾರ ಪಟೇಲ ಗಾಂಧಿಯೊಂದಿಗೆ ಗಂಟೆಗಳವರೆಗೆ ಕಾಶ್ಮೀರ ಕುರಿತು ಚರ್ಚಿಸುತ್ತಿದ್ದಾರೆ. ದಾರಿ ಸಿಗುತ್ತಿಲ್ಲ. ನೆಹರು ಅವರ ಆರೋಗ್ಯ ಸ್ಥಿತಿ ಅಷ್ಟೊಂದು ಸರಿಯಾಗಿಲ್ಲ. ಪಟೇಲರ ಆರೋಗ್ಯವೂ ಅಷ್ಟಕ್ಕಷ್ಟೆ. ಅತ್ತ ಪಾಕಿಸ್ತಾನದ ಗವರ್ನರ್ ಜನರಲ್ ಜಿನ್ನಾ ವಿಭಜನೆಯ ದಿನದಿಂದಲೇ ಯುದ್ಧಕ್ಕಾಗಿ ಕಾಲು ಕೆದರಿ ನಿಂತಿದ್ದಾರೆ. ಗಾಂಧಿ ಹೇಳುವುದೊಂದೇ. ಕಾಶ್ಮೀರದ ವಿಷಯದಲ್ಲಿ ಜನರ ನಿರ್ಧಾರವೇ ಅಂತಿಮ. ಜನ ಮನಸ್ಸು ಮಾಡಿದರೆ ಒಳಿತು ಮತ್ತು ಹಾನಿ ಎರಡನ್ನೂ ಮಾಡಬಲ್ಲರು ಎನ್ನುವುದನ್ನು ಮುಂಬೈ ಮತ್ತು ಚೌರಿ ಚೌರಾ ಪ್ರಾಂತ್ಯಗಳಲ್ಲಿ ಗಾಂಧಿ ನೋಡಿಬಿಟ್ಟಿದ್ದಾನೆ. ಮತ್ತೆ ಅಂತಹವುಗಳ ಪುನರಾರ್ತನೆ ಆತನಿಗೆ ಇಷ್ಟವಿಲ್ಲ. ಕಾಶ್ಮೀರದ ಸಮಸ್ಯೆಯೂ ಅಹಿಂಸಾತ್ಮಕವಾಗಿ, ಪ್ರೇಮದಿಂದ ಬಗೆಹರಿಯಬೇಕೆನ್ನುವುದು ಗಾಂಧಿಯ ಒತ್ತಾಸೆ. ಅದರಲ್ಲಿಯೇ ಎರಡೂ ರಾಷ್ಟ್ರಗಳ ಸರ್ವಹಿತ ಇದೆ ಎಂದು ಆತನ ಮತ.

ಇಷ್ಟರಲ್ಲಿ ನಿರಾಶ್ರಿತರಿಗಾಗಿ ಹೊದಿಕೆಗಳನ್ನು ಸಂಗ್ರಹಿಸುತ್ತಿರುವ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಗುಂಪೊಂದು ಗಾಂಧಿಯನ್ನು ಭೆಟ್ಟಿಯಾಯಿತು. ಪಾಕಿಸ್ತಾನದಿಂದ ಮನೆ, ಮಠಗಳನ್ನು ಕಳೆದುಕೊಂಡು ಬರುತ್ತಿರುವ ಹಿಂದೂ ಮತ್ತು ಸಿಖ್ ನಿರಾಶ್ರಿತರ ಸೇವೆಯನ್ನು ಮಾಡುವುದೇ ಅವರ ಉದ್ದೇಶ. ಆದರೆ ಗಾಂಧಿ ಅವರನ್ನು ಬಿಹಾರಕ್ಕೆ ಕಳುಹಿಸುತ್ತಿದ್ದಾನೆ. ಸ್ವಾತಂತ್ರ್ಯ ಸಿಕ್ಕ ಮರುಕ್ಷಣವೇ ಬಿಹಾರಿಗಳು ರೈಲುಗಳಲ್ಲಿ ಟಿಕೇಟ್ ಇಲ್ಲದೆ ಪ್ರಯಾಣ ಶುರುಮಾಡಿದ್ದಾರೆ. ಯಾರು ಕೇಳಿದರೂ ಅವರ ಉತ್ತರ ಒಂದೆ. 'ದೇಶ ನಮ್ಮದು, ಸರಕಾರ ನಮ್ಮದು ಅಂದಮೇಲೆ ರೈಲೂ ನಮ್ಮದೆ. ನಮ್ಮ ರೈಲಿಗೆ ನಾವೇ ದುಡ್ಡು ಕೊಡುವುದೇ?' ಹೀಗೆ ಬೇಕಾಬಿಟ್ಟಿಯಾಗಿ ತಿರುಗಾಡಿದ್ದರಿಂದ ಭಾರತೀಯ ರೈಲ್ವೆ ಇಲಾಖೆಗೆ ಎಪ್ಪತ್ತು ದಿನಗಳಲ್ಲಿ ಎಂಟು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಈ ನಷ್ಟ ಪ್ರತಿಯೊಬ್ಬ ಪ್ರಜೆಗೂ ಸೇರಿದ್ದು. ಇದನ್ನು ಸರಿದೂಗಿಸುವ ಸಲುವಾಗಿ ಗಾಂಧಿ ಈ ವಿದ್ಯಾರ್ಥಿಗಳಲ್ಲಿ ಕೋರಿಕೊಳ್ಳುತ್ತಾನೆ. ರೈಲ್ವೆ ಸಿಬ್ಬಂದಿಯನ್ನು, ಕಾರ್ಮಿಕರನ್ನು, ಜೀವಸಹಿತ ರಕ್ಷಿಸುವುದರೊಂದಿಗೆ ಇಲಾಖೆಯನ್ನೂ ರಕ್ಷಿಸಿಕೊಡಬೇಕಿದೆ. ಇದೂ ಒಂದು ರೀತಿಯ ಹಿಂಸೆಯೆ. ಒಂದರ್ಥದಲ್ಲಿ ಹಗಲು ದರೋಡೆ. ನಾಗರಿಕರಿಂದ ಅವರದೇ ರಾಷ್ಟ್ರದ ದರೋಡೆ.

❑



ದೇವರೂ ಪರೀಕ್ಷಿಸುತ್ತಿರುವನೇ?

ಸುಹ್ರಾವರ್ದಿ ಅದೆಷ್ಟು ದಿನ ಕಾಯ್ದಿದ್ದನೊ. ಅವನದು ಸಮುದ್ರದೊಳಗಿದ್ದೂ ಬಾಯಾರಿಕೆಯಿಂದ ಬಳಲಿದವನ ಗತಿಯಾಗಿತ್ತು. ಮಹಾತ್ಮನೊಂದಿಗಿದ್ದೂ ಮಾತನಾಡಬೇಕಾದುದನ್ನು ಮಾತಾಡಲಾಗಲೇ ಇಲ್ಲ ಎಂದು ನಿರಂತರವಾಗಿ ನರಳುತ್ತಿದ್ದರು ಶಹೀದ್ ಸುಹ್ರಾವರ್ದಿ. ನವದೆಹಲಿಯಿಂದ ಕರಾಚಿಗೆ, ಕರಾಚಿಯಿಂದ ಲಾಹೋರ್‌ಗೆ ಶಾಂತಿದೂತನಾಗಿ ನಿರಂತರ ಓಡಾಡಿಯೂ ಕಾಶ್ಮೀರದ ಕುಂಡವನ್ನು ತಣ್ಣಗಾಗಿಸುವುದು ಆಗಿರಲಿಲ್ಲ ಆತನಿಂದ. ೩೦ ಅಕ್ಟೋಬರ್, ಗುರುವಾರದ ಮುಂಜಾವು ಗಾಂಧಿ ಒಬ್ಬನೇ ಇರುವುದನ್ನು ಗಮನಿಸಿ, ತನ್ನ ಅಳಲನ್ನು ತೋಡಿಕೊಂಡ. ಗಾಂಧಿ ನಿರೀಕ್ಷಿಸುತ್ತಿರುವಂತೆ ಕಾಶ್ಮೀರದ ವಿಷಯದಲ್ಲಿ ಕೈದ್ ಎ ಅಜಂ ಜಿನ್ನಾ, ತನ್ನ ಯಾವ ಮಾತನ್ನೂ ಗೌರವಿಸುತ್ತಿಲ್ಲ ಎನ್ನುವುದು ಆತನ ಅತಿ ದೊಡ್ಡ ನೋವು. ಈತ ಈಗ ಅತ್ತ

ಜಿನ್ನಾಗೂ ಇಲ್ಲ, ಇತ್ತ ಗಾಂಧಿಗೂ ಇಲ್ಲ ಎನ್ನುವಂತಾಗಿದೆ. ಭಾರತ ಮತ್ತು ಪಾಕಿಸ್ತಾನಗಳ ಮಧ್ಯ ಯುದ್ಧವೇ ಅನಿವಾರ್ಯ ಎನ್ನುವಷ್ಟು ಸ್ಥಿತಿ ಹದಗೆಟ್ಟು ಹೋಗಿದೆ. ಭವಿಷ್ಯವನ್ನು ಗ್ರಹಿಸುವ ವರವಿದ್ದೂ ಆಗಬಹುದಾದ ಅನಾಹುತಗಳನ್ನು ತಡೆಯಲಾಗದ ವಿಚಿತ್ರ ಶಾಪದಿಂದ ನರಳುವ ಕಸಾಂಡ್ರಾಳಂತೆ ಶಹೀದ್‌ನ ಸ್ಥಿತಿ. ಇತ್ತ ಭಾರತದಲ್ಲಿಯೂ ಅಷ್ಟೆ, ಆತನನ್ನು ಯಾರೂ ನಂಬುತ್ತಿಲ್ಲ. ಪಂಡಿತ್ ನೆಹರು, ಪಟೇಲ, ಮೌಲಾನಾ, ಕ್ಯಾಬಿನೆಟಿನ ಯಾರೊಬ್ಬರೂ ಆತನಿಗೆ ಕನಿಷ್ಟ ಗೌರವಗಳನ್ನು ಕೊಡುತ್ತಿಲ್ಲ. ಇತ್ತ ಮುಸ್ಲಿಮರಿಗೂ ಅತ್ತ ಹಿಂದೂಗಳಿಗೂ ಬೇಡವಾದ ತನ್ನ ರಾಜಕೀಯ ಸಕ್ರಿಯತೆಗೆ ಏನು ಅರ್ಥವಿದೆ ಮಹಾತ್ಮಾ? ಎಂದು ಗಾಂಧಿಯ ಮುಂದೆ ಕುಳಿತು ಕಣ್ಣೀರು ಹಾಕುತ್ತಿದ್ದಾನೆ. ಈಗ ಗಾಂಧಿಯೊಬ್ಬನೇ ಈತನನ್ನು ಸಮಾಧಾನಿಸಬೇಕು, ಸಹಾಯಕ್ಕೆ ಬರಬೇಕು. ಗಾಂಧಿ ಹೇಳುವುದಿಷ್ಟೆ: "ಪಾಕಿಸ್ತಾನ ಸರಕಾರದ ಅಮಾನುಷ, ಅನೈತಿಕ ಚಟುವಟಿಕೆಗಳೆಲ್ಲವನ್ನೂ ನೇರವಾಗಿ, ಸ್ಫುಟವಾಗಿ ಖಂಡಿಸು. ಉದಾಹರಣೆಗೆ, ಪಾಕಿಸ್ತಾನದ ಬುಡಕಟ್ಟು ಜನರಿಂದ ಸದ್ಯ ಆಗಿರುವ ಕಾಶ್ಮೀರದ ಮೇಲಿನ ಆಕ್ರಮಣವನ್ನು ನೀವು ಖಂಡಿಸಲೇ ಬೇಕು. ಈ ಚಟುವಟಿಕೆಗಳ ಹಿಂದೆ ಯಾರಿದ್ದಾರೆ, ಯಾಕಿದ್ದಾರೆ ಎನ್ನುವುದನ್ನು ತಿಳಿಯುವುದು ನಿಮ್ಮ ಹಕ್ಕಾಗಬೇಕು. ನೀವು ಕಂಡ ಸತ್ಯ ಎಲ್ಲರಿಗೂ ಗೊತ್ತಾಗಬೇಕು. ಅಂತಿಮವಾಗಿ ಗೆಳೆಯನೇ, ಈ ದೇಶದಲ್ಲಿ ನಾನು ಸುಳ್ಳುಗಾರನಾದರೂ ಚಿಂತೆಯಿಲ್ಲ, ನೀವು ಸತ್ಯದ ಪ್ರತಿರೂಪವೇ ಆಗಬೇಕು." ಗಾಂಧಿಯ ಈ ಮಾತುಗಳಿಂದ ಸುಹ್ರಾವರ್ದಿಯ ಸಮಸ್ಯೆ ಸರಳವೇನೂ ಆಗಲಿಲ್ಲ. ಇನ್ನೂ ಗಂಭೀರವಾಗಿರಬೇಕು, ಯಾಕೆಂದರೆ ಇದು ಆತ ನಿಭಾಯಿಸಲಾಗದ ನಿಷ್ಕಲ್ಮಶ ದಾಳಿ. ರಾಜಕೀಯ ದಾರಿ ಅಲ್ಲ.

ಅಂದಹಾಗೆ ಕಾಶ್ಮೀರದ ಸಮಸ್ಯೆ ಸಾಮಾನ್ಯವಾದುದೇನಾಗಿರಲಿಲ್ಲ. ಇದನ್ನು ಚರ್ಚಿಸಲು ಸ್ವತಃ ಗವರ್ನರ್ ಜನರಲ್ ಲಾರ್ಡ ಮೌಂಟ್‌ಬ್ಯಾಟನ್ ಗಾಂಧಿಯನ್ನು ಕಾಣಲು ಬಿರ್ಲಾ ಹೌಸ್‌ಗೆ ಬಂದರು. ಕಾಶ್ಮೀರದ ಸಮಸ್ಯೆ ಕುರಿತಂತೆ ಇಂಡಿಯಾ ಪಾಕಿಸ್ತಾನಗಳೆರಡರ ಮೇಲೂ ಒಬ್ಬ ಸುಪ್ರೀಂ ಬ್ರಿಟಿಷ್ ಕಮಾಂಡರನನ್ನು ನೇಮಿಸುವುದು ಅವರ ಮುಂದಿರುವ ಪರಿಹಾರ. ಈ ಪ್ರಸ್ತಾಪಕ್ಕೆ ಅತ್ತ ಜಿನ್ನಾರಿಗಂತೂ ಪ್ರಶ್ನೆಗಳೇ ಇಲ್ಲ. ಇಡೀ ಪಾಕಿಸ್ತಾನದ ಸರಕಾರ, ಸೈನ್ಯವನ್ನು ಬೇಕಾದರೂ ಬ್ರಿಟಿಷ್ ಲೆಫ್ಟಿನಂಟ್ ಜನರಲ್‌ಗೆ ಒಪ್ಪಿಸಲು ಅವರು ಸಿದ್ಧರಿದ್ದಾರೆ. ಒಟ್ಟಾರೆ ಕಾಶ್ಮೀರವನ್ನ ಭಾರತದಿಂದ ಕಬಳಿಸಿದರೆ, ಇಲ್ಲ ಹೊರಗಿಟ್ಟರೂ ಸಾಕು. ಆದರೆ ಗಾಂಧಿಯ ಆಲೋಚನೆಯೇ ಬೇರೆ. ಸ್ವಾತಂತ್ರ್ಯ ಸಿಕ್ಕು ಕೆಲವೇ ತಿಂಗಳಲ್ಲಿ ಈ ಎರಡು ರಾಷ್ಟ್ರಗಳನ್ನು ಬ್ರಿಟಿಷ್ ಸೇನಾಧಿಕಾರಿಗಳು ನಡೆಸಿಕೊಂಡು ಹೋಗುವುದೆಂದರೆ ಸ್ವಾತಂತ್ರ್ಯಕ್ಕೇನು ಅರ್ಥ? ಈ ಸಂಗ್ರಾಮ, ಹೋರಾಟ, ಬಲಿದಾನಗಳಿಗೇನು ವ್ಯಾಪ್ತಿ? ಭಾರತದ ಅತ್ಯಂತ ಸುಂದರ ಒಂದು ನಿರ್ದಿಷ್ಟ ಭೂಪ್ರದೇಶವನ್ನು ಮತ್ತೆ ಬ್ರಿಟಿಷ್ ಅಧಿಕಾರವ್ಯಾಪ್ತಿಗೆ ಒಳಪಡಿಸಿ ಯುರೋಪಿಯನ್ನರನ್ನು ಮಗ್ಗುಲು

ಮುಳ್ಳಾಗಿಸಿಕೊಳ್ಳುವುದೆಂದರೇನು? ಪುಣ್ಯಕ್ಕೆ ಭಾರತ ಪಾಕಿಸ್ತಾನಗಳಿಗೆ ಅರ್ಥವಾಗದ ಗಾಂಧಿಯ ಕಾಳಜಿ ಮೌಂಟ್‌ಬ್ಯಾಟನರಿಗೆ ಮಾತ್ರ ಅರ್ಥವಾಗಿದೆ. ಗಾಂಧಿಯನ್ನು ಯಾವ ಕಾಲಕ್ಕೂ ನೋಯಿಸಲು ಇಷ್ಟಪಡದ ಒಬ್ಬ ಪ್ರೀತಿಯ ಪರಕೀಯ ಈ ಮೌಂಟ್‌ಬ್ಯಾಟನ್. ಗಾಂಧಿಯನ್ನು ಕೊನೆಯವರೆಗೂ ಕಾಯ್ದ ಏಕೈಕ ನಾಗರಿಕ. ಈ ಸಂಬಂಧಕ್ಕೂ ಕಾರಣ ಕಂಡುಕೊಂಡವರಿದ್ದಾರೆ. ಆ ವಿಶ್ಲೇಷಕರ ಪ್ರಕಾರ ಗಾಂಧಿ ಬ್ರಿಟೀಷರ ಭಾರತೀಯ ಏಜೆಂಟ್‌ನಾಗಿದ್ದ. ಬ್ರಿಟೀಷರು ಈ ಗಾಂಧಿಯನ್ನು ಮುಂದಿಟ್ಟುಕೊಂಡು ಸಾಧ್ಯವಿರುವಷ್ಟು ಕಾಲ ದೇಶವನ್ನು ಆಳಿದರು.

ಇಷ್ಟರಲ್ಲಿ ಇಂದು ಕಾಶ್ಮೀರದ ಹುಲಿಯೆಂದೇ ಖ್ಯಾತರಾದ ಶೇಖ್ ಅಬ್ದುಲ್ಲಾರ ಹೆಂಡತಿ ಬೇಗಂ ಅಬ್ದುಲ್ಲಾ ಗಾಂಧಿಯನ್ನು ಕಾಣಲು ಬಂದರು. ಅವಳು ಈಗ ಕಾಶ್ಮೀರದ ಕತ್ತಲಲ್ಲಿ ಗಾಂಧಿಗೆ ದಾರಿ ತೋರಿಸುವ ಒಂದು ಆಶಾಕಿರಣವಾಗಿ ಕಂಡಳು. ಅವಳನ್ನು ಮುಂದೆ ಕೂಡ್ರಿಸಿಕೊಂಡು ಗಾಂಧಿ ಹೇಳುತ್ತಾನೆ, 'ನಿಮ್ಮ ಪತಿ ಶೇಖ್ ಅಬ್ದುಲ್ಲಾರ ನೇತೃತ್ವದಲ್ಲಿ ಕಾಶ್ಮೀರದ ಜನತೆ ದಾಳಿಕೋರರ ವಿರುದ್ಧ ಸಿಡಿದೇಳಬೇಕು. ಶಕ್ತಿ ಇದ್ದರೆ ತಮ್ಮ ಶರೀರಗಳನ್ನು ದಾಟಿ ಹೋಗಿ ಎಂದು ಅವರು ಸಾಯಲೂ ಸಿದ್ಧರಾಗಬೇಕು. ಕಾಶ್ಮೀರದ ಜನತೆಯನ್ನು ತುಳಿದುಹೋಗುವ ಶಕ್ತಿ ಯಾರಿಗೂ ಇಲ್ಲ. ಹಾಗೊಂದು ವೇಳೆ ಕಾಶ್ಮೀರಕ್ಕಾಗಿ ಸಾವೇ ಅಂತಿಮವಾಗುವುದಾದರೆ ತಪ್ಪೇನೂ ಇಲ್ಲ.' ಹೀಗೆ ಸೇನೆ, ಸರಕಾರಗಳ ಸಹಾಯವಿಲ್ಲದ ಈ ದಾರಿ ಇದೆ ಗಾಂಧಿಯ ಬಳಿ. ಆದರೆ ಗಾಂಧಿ ಕಾಶ್ಮೀರದ ಗೋಳಿಗೆ ಈ ರೀತಿ ಕಿವಿಗೊಡಬೇಕು, ಏನಾದರೂ ಮಾಡಬೇಕು, ಬಗೆಹರಿಸಬೇಕು ಎನ್ನುವುದರಲ್ಲಿ ಅಕ್ಟೋಬರ್ ೩೧ರ ಮುಂಜಾವು ಪಾಕಿಸ್ತಾನದ ಸಿಂಧ್ ಪ್ರಾಂತ್ಯದಿಂದ ಅಪಾರ ಸಂಖ್ಯೆಯಲ್ಲಿ ಹಿಂದೂ ಮತ್ತು ಸಿಖ್ ನಿರಾಶ್ರಿತರು ಬದುಕಿನ ಭಿಕ್ಷೆಗಾಗಿ ಕೈಯೊಡ್ಡಿ ಗಾಂಧಿಯ ಮುಂದೆ ನಿಂತರು. ಅವರನ್ನು ಅಸಹ್ಯವಾಗಿ ಬಲಾತ್ಕರಿಸಿ ಹಿಂಸಿಸಿ ಅಲ್ಲಿಂದ ಹೊರಹಾಕಲಾಗಿತ್ತು. ಒಂದನ್ನ ಮುಗಿಸಿ ಕೈ ತೊಳೆದುಕೊಳ್ಳಬೇಕು ಎನ್ನುವುದರಲ್ಲಿ ಎದ್ದು ನಿಲ್ಲುತ್ತಿದ್ದ ಇನ್ನೊಂದನ್ನು ಹ್ಯಾಗೆ ಸರಿದೂಗಿಸಬೇಕು? ತನ್ನ ಸಂಕಷ್ಟಗಳಿಗೆ ದೇವರೂ ದಾರಿ ತೋರಿಸದಷ್ಟು ಕಠೋರವಾದನೇ ಎಂದ ಗಾಂಧಿಗೆ ಇದು ಮುಗಿಯದ ಪ್ರಶ್ನೆ. ಮಾಯದ ಗಾಯ, ನಿರಂತರ ನಿಟ್ಟುಸಿರು, ನರಳುವಿಕೆ. ಒಂದರ್ಥದಲ್ಲಿ ಇದು ಮುಗಿದರೆ ಗಾಂಧಿಯ ಅಸ್ತಿತ್ವವೇ ಮುಗಿದಂತೆ ಎಂದು ಆ ದೇವರಿಗೆ ಅನ್ನಿಸಿರಬಹುದು.

ಬದುಕನ್ನು ಅರಸಿ, ಗೋಗರೆಯುತ್ತ ಹತಾಶರಾಗಿ ಬಂದ ಜನರಿಗಾಗಿ ಸಾಂತ್ವನದ ನಾಲ್ಕು ಮಾತುಗಳನ್ನು ಹೊರತುಪಡಿಸಿದರೆ ಗಾಂಧಿಯ ಬಳಿ ಏನೂ ಇಲ್ಲ. ಆತ ಏನನ್ನೂ ನಿಯಂತ್ರಿಸಲಾರ. ಯಾಕೆಂದರೆ ನಿಯಂತ್ರಣದ ಯಾವ ರಾಜದಂಡವೂ ಆತನ ಕೈಯಲ್ಲಿಲ್ಲ. ಆತ ರಾಜಕಾರಣಿಯಲ್ಲ, ಸೈನ್ಯಾಧಿಕಾರಿಯಲ್ಲ. ಹೀಗಾಗಿ ಆತ ಚಿಂತಾಕ್ರಾಂತನಾಗಿ ಹೇಳಿದ, "ನೀವು ನನ್ನನ್ನೇ ಪರಿಹಾರವೆಂದುಕೊಂಡು ನಂಬಿ ಬಂದಿರುವುದು ತಪ್ಪಲ್ಲ, ಆದರೆ ಸದ್ಯದ ಸ್ಥಿತಿಯಲ್ಲಿ

ನಾನೂ ನಿರಾಶ್ರಿತನಾಗಿದ್ದೇನೆ. ಈ ಹೊಸ ದೇಶದಲ್ಲಿ ವಾಸಿಸಲು ಯಾವ ಊರು ಉತ್ತಮ? ಯಾವ ನಗರದಲ್ಲಿ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಬಹುದು, ಮದುವೆ ಮಾಡಬಹುದು? ಹೀಗೆ ನೂರೆಂಟು ಸಂಸಾರಿಕ ತಾಪತ್ರಯಗಳು ನಿಮ್ಮವು, ಆದರೆ ನನ್ನ ಸ್ಥಿತಿಯನ್ನೂ ಅರ್ಥೈಸಿಕೊಳ್ಳಿ. I cannot convince even the top leders of the Congress party, who have been my co-workers for the last 30 years. So, now I ask myself where do I stand? ಕುಟುಂಬಗಳನ್ನು ಕರೆದುಕೊಂಡು ಬಂದಿದ್ದೀರಿ. ಸಾವಿರಾರು ಸಹೋದರ, ಸಹೋದರಿಯರನ್ನು ಅಲ್ಲಿಯೇ ಬಿಟ್ಟು ನೀವು ಇಲ್ಲಿಗೆ ಬಂದಿದ್ದೀರಿ. ಓಡಿ ಹೋಗಲು ಒಂದು ಅವಕಾಶ ಸಿಕ್ಕ ತಕ್ಷಣ ಈ ದೇಶವನ್ನು ಪರಿಹಾರವಾಗಿ ಕಂಡುಕೊಂಡಿದ್ದೀರಿ. ಬಂಧುಗಳೇ, ನಾನು ಆಶಾವಾದಿ, ಈ ಮುಂಜಾವು ಮನುಷ್ಯನ ವಿಶ್ವಾಸ ಮತ್ತು ಆಶಾದಾಯಕತೆಯನ್ನು ಕುರಿತು ನಾನು ನನ್ನ ಪ್ರೀತಿಯ ಮೊಮ್ಮಗಳಾದ ಮನುಳೊಂದಿಗೆ ಮಾತನಾಡುತ್ತಿದ್ದೆ. ದೇವರು ನಿಜಕ್ಕೂ ನನ್ನ ಸತ್ವಪರೀಕ್ಷೆ ಮಾಡುತ್ತಿದ್ದಾನೆ. ನಾನು ಸತ್ಯಸಂಧನಾಗಿರುವುದಾದರೆ, ರಾಮನಾಮದಲ್ಲಿ ನನ್ನ ವಿಶ್ವಾಸ ನಿಜಕ್ಕೂ ಅಚಲವಾಗಿದ್ದರೆ, ನನ್ನ ನಿರ್ಧಾರ ದೃಢ ಎನ್ನುವುದಾದರೆ, ರಾಮನ ಹೆಸರನ್ನೇ ಉಚ್ಚರಿಸುತ್ತಾ ಹಿಂದೂ-ಮುಸ್ಲಿಂ ಐಕ್ಯತೆಯೆಂಬ ಯಜ್ಞಕುಂಡಕ್ಕೆ ನನ್ನನ್ನೇ ನಾನು ಆಹುತಿಯಾಗಿಸಿಕೊಳ್ಳುತ್ತೇನೆ. ನೀವೆಲ್ಲರೂ ನನ್ನ ಮಕ್ಕಳಿದ್ದಂತೆ. ನನ್ನ ಸಲಹೆಯನ್ನ ಕೇಳಿ. ಭಾರತದ ಯಾವುದೋ ಅಪರಿಚಿತ ನಗರದಲ್ಲಿ ಈ ರೀತಿ ಬದುಕಿಗಾಗಿ ಅರಸುವುದನ್ನು ನಿಲ್ಲಿಸಿ. ಸಿಂಧ್‌ಗೆ ಮರಳಿ ಹೋಗಿ. ಇಲ್ಲವೆ ಭಾರತದ ಲಕ್ಷಾಂತರ ಹಳ್ಳಿಗಳಿಗೆ ಹೋಗಿ. ರಚನಾತ್ಮಕ, ಸೃಜನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಿ. ನಗರಗಳ ಮೋಹ ಬಿಟ್ಟುಬಿಡಿ. ಹಳ್ಳಿಗಳಲ್ಲಿ ವಾಸಿಸುವುದರಿಂದ, ಅಲ್ಲಿ ಸೇವೆ ಮಾಡುವುದರಿಂದ ದೇಶ ಅದೆಷ್ಟು ಮುಂದೆ ಬರಬಹುದು ಎಂದು ಮುಂದೊಮ್ಮೆ ನಿಮಗೇ ಖಂಡಿತವಾಗಿ ತಿಳಿಯುತ್ತದೆ. ಇಂತಹ ವಿಚಾರವನ್ನ ನಾನು ನಿಮಗೆ ಮಾತ್ರ ಹೇಳಲು ಸಾಧ್ಯ." ಬಿಟ್ಟಿದ್ದರೆ ಇನ್ನೂ ಹೀಗೆ ಮಾತನಾಡುತ್ತ ಹೋಗುತ್ತಿದ್ದನೇನೋ ಗಾಂಧಿ. ಅಷ್ಟರಲ್ಲಿ ವಿನೋಬಾ ಭಾವೆಯವರ ತಂದೆ ತೀರಿಹೋದ ಸುದ್ದಿ ಬಂತು. ಗಾಂಧಿ ಮೌನದೊಳಗೆ ಮುದುರಿಕೊಂಡ. ತೀರಿದವರ ನೆನಪು ಧಾರೆಯಾದವು.

ಯಾವುದೂ ಸುರಳೀತವಾಗಿರಲಿಲ್ಲ. ಇದ್ದೊಂದು ಕಾಶ್ಮೀರದ ಸಮಸ್ಯೆಯೇ ತಲೆತಿನ್ನುತ್ತಿರುವಾಗ ಜುನಾಗಢದ ನವಾಬ, ಇತ್ತ ಭಾರತವನ್ನು ಸೇರಬೇಕೊ ಅತ್ತ ಪಾಕಿಸ್ತಾನವನ್ನು ಸೇರಬೇಕೊ, ಏನು ಮಾಡುವುದು? ಎಂದು ತಲೆ ಕೆಡಸಿಕೊಂಡು ಕರಾಚಿಗೆ ಓಡಿಹೋಗಿದ್ದಾನೆ. ಒಡಹುಟ್ಟಿದ ಮಗನೇ ಗಾಂಧಿಯನ್ನು ಕಾಡಿದಂತೆ ಜುನಾಗಢದ ಸಮಸ್ಯೆ ನಿರಂತರವಾಗಿ ಗಾಂಧಿಯನ್ನು ಕಾಡುತ್ತಿದೆ. ಅಲ್ಲಿ ನೋಡಿದರೆ ಗಾಂಧಿಯ ನಿಷ್ಠಾವಂತ ಯುರೋಪಿಯನ್ ಅಭಿಮಾನಿ ಮತ್ತು ಪ್ರೀತಿಯ ಗೆಳೆಯ ಮಿ.ಹೊರೆಸ್ ಅಲೆಗ್ಸಾಂಡರನಿಗೆ ೧೯೪೭ನೇ ಸಾಲಿನ ನೋಬೆಲ್ 'ಶಾಂತಿ

ಪುರಸ್ಕಾರ' ಬಂದಿದೆ. ಮದ್ರಾಸಿನಲ್ಲಿ ಮತ್ತೊಬ್ಬ ಅಭಿಮಾನಿ ಮಿ. ಡೇನಿಯಲ್ ಥಾಮಸ್, 'ಅಹಿಂಸಾತ್ಮಕವಾಗಿ ಹೋರಾಡಿ ಭಾರತದ ಒಕ್ಕೂಟವನ್ನು ಕಟ್ಟಿಕೊಟ್ಟ, ನವಭಾರತದ ನಿರ್ಮಾತೃ ಗಾಂಧಿ, ಇತಿಹಾಸದ ಮರೆಯಲಾಗದ ಪುಟ,' ಎಂದು ಹಾಡಿ ಹೊಗಳುತ್ತಿದ್ದಾನೆ. ಆದರೆ ಈ ಎಲ್ಲದರಿಂದ ನಿರ್ಲಿಪ್ತನಾಗಿದ್ದ ಗಾಂಧಿ ನವೆಂಬರ್ ೧ನೇ ತಾರೀಖಿನಂದು ಸಾಯಂಕಾಲದ ಪ್ರಾರ್ಥನೆಯಲ್ಲಿ, ದಿಲೀಪಕುಮಾರ ರಾಯ್ ಹಾಡುತ್ತಿರುವ ಪ್ರಾರ್ಥನೆಯಲ್ಲಿ ಪೂರ್ಣ ತಲ್ಲೀನನಾಗಿದ್ದಾನೆ. ಪ್ರಾರ್ಥನೆ ತುಂಬಾ ಸುಂದರವಾಗಿದೆ. ಅದು, 'ನಿಮ್ಮ ಹೃದಯ ದೇಗುಲದಲ್ಲೊಂದು ಪ್ರೀತಿಯ ಹಣತೆ ಹಚ್ಚಿಡಬೇಕೆ'ಂದು ಸಾರುತ್ತಿದೆ. ಎಲ್ಲಿ ದೀಪವೋ ಅಲ್ಲಿ ಕತ್ತಲೆ ಇಲ್ಲ. ಇಡೀ ಪ್ರಪಂಚವೇ ಬೆಳಕು. ಎಲ್ಲಿ ಸತ್ಯ ಮತ್ತು ಅಹಿಂಸೆಯೊ ಅಲ್ಲಿ ಅದರದೇ ಹೊಳಪು. ಇಷ್ಟು ತಿಳಿದರೆ ಸಾಕು, ಈ ಬದುಕೇ ಚೈತನ್ಯಪೂರ್ಣ. ಪ್ರಾರ್ಥನೆಯ ಈ ಸಾಲುಗಳ ಸುಖದಲ್ಲಿ, ನೆಮ್ಮದಿಯಲ್ಲಿ ಮೈಮರೆತ ಗಾಂಧಿ ಅದರ ಅನುಭೂತಿಯಲ್ಲಿ ತೊಡಗಿದ್ದಾನೆ. ಈ ರಾತ್ರಿ ಆತ ಸೌಥ್‌ಆಫ್ರಿಕಾದಲ್ಲಿ ತನ್ನ ಸೆಕ್ರೆಟರಿಯಾಗಿದ್ದ ಸೊಂಜಾ ಸ್ಲೆಸಿನ್ನರಿಗೆ ಪತ್ರ ಬರೆಯಬೇಕಿದೆ. ಯಾಕೆಂದರೆ, ಅವಳು ಗಾಂಧಿಗೊಂದು ಪತ್ರ ಬರೆದು, 'ನಿಮ್ಮ ಸುತ್ತಲೂ ಗಂಭೀರವಾಗುತ್ತಿರುವ, ಜಟಿಲವಾಗುತ್ತಿರುವ ಸಮಸ್ಯೆಗಳನ್ನು ನೋಡಿದಾಗ ನಿಮಗೆ ೧೨೫ ವರ್ಷಗಳಿಗೂ ಹೆಚ್ಚಿನ ಕಾಲ ಬದುಕಬೇಕು, ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಅನ್ನಿಸುತ್ತಿಲ್ಲವೆ? ಈ ಸಮಯ ಸಾಕಾಗದು ಅನ್ನಿಸಿಲ್ಲವೆ? ಪ್ರತಿಯೊಬ್ಬ ಮನುಷ್ಯನೂ ೧೨೫ ವರ್ಷಗಳಷ್ಟು ಬದುಕುವ ಆಸೆಯನ್ನು ಹೊಂದಿರಬೇಕು ಎಂದು ಹೇಳುತ್ತಿದ್ದ ನೀವೆ ಇಂದು ಆ ನಿರ್ಧಾರದಿಂದ ಹಿಂದೆ ಹೆಜ್ಜೆ ಹಾಕಬಹುದೇ? ಎಂದು ಪ್ರಶ್ನಿಸಿದ್ದಾಳೆ.

ಖಂಡಿತವಾಗಿಯೂ ಗಾಂಧಿಗೆ ಈಗ ಉತ್ತರಿಸುವುದು ಸರಳವಾಗಿಲ್ಲ. ಯಾಕೆಂದರೆ ಇದುವರೆಗೂ ಸೊಂಜಾ ಬರೆದ ಯಾವ ಪತ್ರವೂ ಬೇಜವಾಬ್ದಾರಿಯ ಒಂದು ಪದವನ್ನೂ ಒಳಗೊಂಡಿಲ್ಲ. ಹೀಗೆಂದು ಸ್ವಯಂ ಗಾಂಧಿಯೇ ದಾಖಲಿಸಿದ್ದಾನೆ. ಇಲ್ಲಿ ನೋಡಿ, "ಸೊಂಜಾ, ನಿಮ್ಮ ಪತ್ರಗಳೆಂದರೆ ಪೂರ್ಣ ಚಿಂತನೆಯ ಪುಟಗಳು. ಆದರೆ ನನ್ನ ಕೈಯಲ್ಲಿರುವ ನಿಮ್ಮ ಈ ಪತ್ರ ಆ ವರ್ಗಕ್ಕೆ ಸೇರುವುದಿಲ್ಲ. ನೀವು ೧೨೫ ವರ್ಷಗಳ ಕಾಲ ಬದುಕುವ ನನ್ನ ಬದುಕಿನ ನಿರ್ಧಾರದ ಕುರಿತು ಚರ್ಚಿಸಿದ್ದೀರಿ. ಸಾಮಾನ್ಯವಾಗಿ ಅಸಾಧ್ಯವಾದ ನಿರ್ಧಾರಗಳನ್ನು, ಮೂರ್ಖ ಹೇಳಿಕೆಗಳನ್ನು ನಾನು ಎಂದೂ ಮಾಡುವುದಿಲ್ಲ. ಆಯುಷ್ಯ ಮನುಷ್ಯನ ವ್ಯಾಪ್ತಿಗೂ ಮೀರಿದ ವಿಚಾರ. ಮನುಷ್ಯ ಹಾಗೆ ನಿರೀಕ್ಷಿಸಬಹುದೇನೊ. ಹಾಗೆಯೇ ನನ್ನದೂ ಒಂದು ನಿರೀಕ್ಷೆ. ಆದರೆ ನಾನು ಅಂದುಕೊಂಡಿರುವುದನ್ನು ಈ ದೇಶದಲ್ಲಿ ಸಾಧಿಸುವುದಾದರೆ ಇಂಥ ಆಸೆಗೆ

ಅರ್ಥವಿದೆ, ಆಯುಷ್ಯಕ್ಕೂ ಅರ್ಥವಿದೆ. ಸೋಲುವುದೇ ಆದರೆ ಯಾವ ಪುರುಷಾರ್ಥಕ್ಕೆ ಬದುಕಬೇಕು? ಈ ಜೀವನಕ್ಕೆ ಯಾವ ಅರ್ಥ ಕೊಡಬೇಕು?


ಇಂತೀ ನಿಮ್ಮ

ಬಾಪು

ಅರುವತ್ತಕ್ಕೆ ಅರಳು-ಮರಳು ಎನ್ನುತ್ತಾರೆ. ಅದು ಗಾಂಧಿ ಎಂಬ ಈ ಮನುಷ್ಯನಿಗೆ ಎಪ್ಪತ್ತಕ್ಕೆ ಬಂದಿರುವುದು ಅಪರಾಧವೇನಲ್ಲ ಬಿಡಿ. ಆದರೆ ಆತನ ಅನೇಕ ಪತ್ರ, ಸಾರ್ವಜನಿಕ ಭಾಷಣ, ಸಾಯಂಕಾಲದ ಪ್ರಾರ್ಥನೆಗಳಲ್ಲಿ ತಾನು ೧೨೫ ವರ್ಷ ಬದುಕುತ್ತೇನೆ ಎಂದು ಆತ ಈ ಹಿಂದೆ ಹೇಳಿರುವುದನ್ನು ನಾನು ಈಗಾಗಲೇ ಸಾಕಷ್ಟು ಸಾರಿ ದಾಖಲಿಸಿದ್ದೇನೆ. ಅದೊಂದು ವೇಳೆ ಸುಳ್ಳು ಎನ್ನುವುದಾದರೆ ಸೊಂಜಾ ಅದನ್ನು ಪ್ರಶ್ನಿಸುವ ಪ್ರಮಯವೇ ಇರಲಿಲ್ಲ. ಈಗ ಗಾಂಧಿಗೆ ಅರಳು-ಮರಳು ಶುರುವಾಗಿದೆ ಎನ್ನಲು ಇದೇ ದಿನದ ಇನ್ನೊಂದು ಉದಾಹರಣೆಯನ್ನೂ ನೋಡಬಹುದು.

ಗಾಂಧಿಯ ಅನುಚರ, ಭಾರತದ ಉಪಪ್ರಧಾನಿ ಸರ್ದಾರ ಪಟೇಲ್ ಅಕ್ಟೋಬರ್ ೩೧ನ್ನು ಈತನೊಂದಿಗೇ ಕಳೆದಿದ್ದಾರೆ. ಇಡೀ ದಿನ ಇವನೊಂದಿಗೇ ಇದ್ದಾರೆ. ಇದು ಪಟೇಲರ ಹುಟ್ಟುಹಬ್ಬದ ದಿನ. ಅವರಿಗೆ ೭೩ ವರ್ಷಗಳಾದವು. ಆದರೆ ಗಾಂಧಿ ಪಟೇಲರನ್ನು ಅಭಿನಂದಿಸುವುದನ್ನೇ ಮರೆತ. ಮರೆವು ಸ್ವಾಭಾವಿಕ. ಆದರೆ ಈ ಮರೆವಲ್ಲ. ಮತ್ತೆ ಮರುದಿನ ಪಟೇಲರು ಬಂದಾಗ ಹೇಳುತ್ತಾನೆ, 'When you came to see me yesterday, I simply forgot that it was your Birthday.' ಇದಕ್ಕೆ ಆತ ಕೊಡುವ ಕಾರಣವೇ ಬೇರೆ. ಕಳೆದ ಅನೇಕ ದಿನಗಳಿಂದ ಭಾರತದಲ್ಲಿ ಮುಸ್ಲಿಮರ ಮೇಲೆ ಆಗುತ್ತಿರುವ ಮಾನಸಿಕ ಒತ್ತಡವನ್ನು ಆತನಿಗೇ ನೋಡಲಾಗುತ್ತಿಲ್ಲವಂತೆ, ತಾನು ವಾಸಿಸುತ್ತಿರುವ ಬಿರ್ಲಾಹೌಸ್‌ನ ಸುತ್ತಲೂ ನಿರಾಶ್ರಿತರು ಜಮಾಯಿಸಿರುವುದು ಆತನಿಗೆ ಖೇದವನ್ನುಂಟುಮಾಡಿದೆಯಂತೆ, ಬಲಾತ್ಕಾರದಿಂದ ಹಿಂದೂ ಮತ್ತು ಸಿಖ್ ಧರ್ಮಕ್ಕೆ ಮತಾಂತರಗೊಂಡ ಮುಸ್ಲಿಮರು ಮತ್ತೆ ಮರಳಿ ತಮ್ಮ ಧರ್ಮವನ್ನೇ ಅಪ್ಪಿಕೊಳ್ಳಬೇಕಂತೆ, ಭಾರತದ ಯಾವೊಬ್ಬ ಮುಸ್ಲಿಮನನ್ನೂ ರಾಷ್ಟ್ರ ಬಿಟ್ಟು ಹೋಗುವಂತೆ ಯಾರೂ ಒತ್ತಾಯಿಸಬಾರದಂತೆ. ಹೀಗೆ, ಗಾಂಧಿ ಅಂತೆಗಳ ಕಂತೆಗಳನ್ನು ಇಟ್ಟುಕೊಂಡು ಕುಳಿತಿರುವಾಗ, ಅತ್ತ ದೆಹಲಿಯ ವಿಮಾನ ನಿಲ್ದಾಣಗಳಿಂದ ಸೈನಿಕರನ್ನು ತುಂಬಿಕೊಂಡು ವಿಮಾನಗಳು ಕಾಶ್ಮೀರ ರಕ್ಷಣೆಗೆ ಯುದ್ಧಕ್ಕೂ ಸಿದ್ಧಗೊಳ್ಳುತ್ತಿದ್ದವು. ಯುದ್ಧ ವಿರೋಧಿಯಾಗಿದ್ದ ಗಾಂಧಿಯ ಬಿರ್ಲಾಹೌಸ್‌ನ್ನು ಬಳಸಿಕೊಂಡೇ ಹಾರಿ ಹೊರಟಿದ್ದ ಅವು ಆಗಸದ ತುಂಬ ಕರ್ಕಶ ಧ್ವನಿ ಹೊರಡಿಸುತ್ತಿದ್ದವು.

❑



ಒಂದಕ್ಕೆ ಸೋತು ಇನ್ನೊಂದನ್ನು ಗೆಲ್ಲಲಾರೆವು

ಶ್ರೀರಾಮನಿಗೆ ಅವಲತ್ತುಕೊಂಡು ಮುಪ್ಪಿಗೆ ಜಾರುತ್ತಿರುವ ಈ ಗಾಂಧಿಯನ್ನು ನಿರಂತರವಾಗಿ ಪೀಡಿಸುವುದೇ ತಮ್ಮ ಜೀವನದ ಉದ್ದೇಶ ಎನ್ನುವ ಭಂಡರ ಗುಂಪೊಂದಿತ್ತು ಎನ್ನುವುದು ಆತನ ಕೊನೆಯ ದಿನಗಳ ಕಥೆಯಲ್ಲಿ ಸ್ಪಷ್ಟ. ಆತ ಅಚಲವಾದ ನಂಬಿಕೆಯಿಂದ ಮುಂದೆ ಹೋದಷ್ಟೂ ಆತನನ್ನು ಕಾಡುವುದು, ಸಾಲದ್ದಕ್ಕೆ ಹಿಂದೆಳೆಯುವುದು, ಸಿಡಿಮಿಡಿಗೊಳಿಸುವುದು, ಜಗಳಾಡುವಂತೆ ಮಾಡುವುದೇ ಅವರ ಗುರಿ. ನವೆಂಬರ್ ೨ರಂದು ಏನಾಯಿತು ನೋಡಿ? ಯಥಾ ಪ್ರಕಾರ ಪ್ರಾರ್ಥನೆಗಾಗಿ ಜನ ಸೇರಿದ್ದಾರೆ. ಗಾಂಧಿ ಖುರಾನ್‌ನ ಸಾಲುಗಳನ್ನು ಹೇಳಿಸುತ್ತಿದ್ದಾನೆ. ದೇವರಿಂದಲೇ ಸೂರ್ಯನಲ್ಲಿ ಶಾಖ ಚಂದ್ರನಲ್ಲಿ ತಂಪು ಲೋಕದೊಳು ಸೌಂದರ್ಯ ಇದುವೇ ಧರ್ಮದ

ಆಂತರ್ಯ, ಹೀಗೆ ಹೇಳುತ್ತ ಕಣ್ಣು ಮುಚ್ಚಿ ಕುಳಿತ ಗಾಂಧಿ ತನ್ನೊಳಗೇ ತಣ್ಣಗಾಗಲು ಪ್ರಯತ್ನಿಸುತ್ತಿದ್ದಾನೆ. ಇಷ್ಟರಲ್ಲಿ ಯಾವನೋ ಒಬ್ಬ ಕಿಡಿಗೇಡಿ 'ಖುರಾನಿಗೆ ಧಿಕ್ಕಾರ' ಎಂದು ಕೂಗಿಬಿಟ್ಟ. ನಮ್ಮ ನಿಮ್ಮಂತೆ ಸಿಟ್ಟಿಗೇಳಬಾರದಾದ ಗಾಂಧಿ ಸಿಟ್ಟಿಗೇಳದೆಯೇ ಇರಲಿಕ್ಕಾಗಲಿಲ್ಲ. ಆದರೆ ತನ್ನದೇ ಶೈಲಿಯಲ್ಲಿ ಸಿಟ್ಟಾಗಿದ್ದಂತೂ ಸತ್ಯ. ತಣ್ಣಗೆ ಅವನು ಕೇಳಿದ್ದು ಹೀಗೆ, "ಪುಣ್ಯಾತ್ಮನೆ, ನಾನು ಕೇಳುವುದಿಷ್ಟೆ, ಪ್ರಾರ್ಥನೆಯನ್ನು ನಾನು ನಿಲ್ಲಿಸಬೇಕೊ, ಮುಂದುವರೆಸಬೇಕೊ? ಒಮ್ಮೆ ಹೇಳಿಬಿಡು. ಇಷ್ಟು ದಿನ ನಮ್ಮೊಂದಿಗಿರುವ ನಿನಗೆ ನಾನು ಏನು ಹೇಳಿದೆನು ಎನ್ನುವುದು ಸ್ವಲ್ಪವಾದರೂ ಅರ್ಥವಾಗಿದೆಯೇ? ಇಂದು ಖುರಾನ್ ಬೇಡ ಎನ್ನುವ ನೀವು ನಾಳೆ ಪ್ರಾರ್ಥನೆಯೇ ಬೇಡ ಎನ್ನುತ್ತೀರಿ. ನಾನು ಈ ಸೋಲನ್ನ ಒಪ್ಪಿಕೊಳ್ಳಬೇಕೆ? ಖಂಡಿತವಾಗಿಯೂ ಇಲ್ಲ. ನಾನು ಸದ್ಭಾವನಾ ಪ್ರಾರ್ಥನೆಯನ್ನು ಯಾವ ಕಾಲಕ್ಕೂ ಬಿಡುವುದಿಲ್ಲ. ಹಾಗೆಯೇ ಈ ಖುರಾನನ್ನು. ಅದಕ್ಕಾಗಿ ನನ್ನ ಪ್ರಾಣವೇ ಹೋದರೂ ಚಿಂತೆಯಿಲ್ಲ, ಇನ್ನು ಮುಂದೆ ಎಲ್ಲರೂ ಎಲ್ಲ ಪ್ರಾರ್ಥನೆಗಳನ್ನು ಒಪ್ಪಿಕೊಳ್ಳುವುದಾದರೆ ಮಾತ್ರ ನಾನು ಈ ಸಾರ್ವಜನಿಕ ಪ್ರಾರ್ಥನೆಯಲ್ಲಿ ಭಾಗವಹಿಸುತ್ತೇನೆ. ಇಲ್ಲದೇ ಹೋದಲ್ಲಿ ನಾನೊಬ್ಬನೇ ಕುಳಿತುಕೊಂಡು ಒಳಗಡೆ ಪ್ರಾರ್ಥಿಸುತ್ತೇನೆ. ಅದ್ಯಾರಿಗೆ ಇಂಥ ದುರ್ಬುದ್ಧಿ ಬಂದಿದೆಯೋ ನನಗೆ ಗೊತ್ತಿಲ್ಲ, ಅರ್ಥಹೀನವಾಗಿ ನೀವು ನಿಮ್ಮ ಸಹೋದರರೊಂದಿಗೆ ದ್ವೇಷ ಕಾರುತ್ತಿದ್ದೀರಿ. ನಿನ್ನೆ ನಿಮ್ಮಂತೆಯೆ ಮೂರ್ಖ ವಿಚಾರ ಮಾಡಿದ ಅಮ್ತುಸ್ ಸಲಾಂಳಿಗೆ ನಾನು ಇದೇ ಭಾಷೆಯಲ್ಲಿ ಉತ್ತರಿಸಿದ್ದೇನೆ. ನೌಖಾಲಿಯಲ್ಲಿ ಶಾಂತಿಯಿಲ್ಲವೆಂದು ಆಕೆ ಹೋಗಬೇಕಂತೆ, ಅದಕ್ಕೆ ನನ್ನ 'ಆಶೀರ್ವಾದ' ಬೇಕಂತೆ. ಇವರದು ಎಂತಹ ಮೂರ್ಖ ನಿರ್ಧಾರ, ಎಂತಹ ಆಶಯ! ಬುದ್ಧಿ ದೃಢವಾಗಿಲ್ಲದಿದ್ದಾಗ ಇಂತಹ ಆಲೋಚನೆಗಳೇ ಬರುತ್ತವೆ. ನೌಖಾಲಿಯೂ ಅಷ್ಟೆ, ಪಟಿಯಾಲಾವೂ ಅಷ್ಟೆ. ಭಗವದ್ಗಿತೆಯೂ ಅಷ್ಟೆ, ಖುರಾನೂ ಅಷ್ಟೆ. ಮನಸ್ಸು ಮುಖ್ಯ. ಮನಸ್ಸಿಲ್ಲದವರಿಗೆ ಎಂದಿಗೂ ನನ್ನ ಆಶೀರ್ವಾದವಿಲ್ಲ, ಮಾರ್ಗದರ್ಶನವಿಲ್ಲ. ನಿಮ್ಮೊಳಗೇ ನೋಡಿಕೊಳ್ಳಿ, ವಿಶ್ವಾಸ ಬೆಳೆಸಿಕೊಳ್ಳಿ, ಅವಿಶ್ವಾಸದಿಂದ ಏನನ್ನೂ ಸಾಧಿಸಲಾರಿರಿ," ಎಂದು ಹೇಳಿ ಸಿಡಿಮಿಡಿಗೊಂಡಿದ್ದ ಗಾಂಧಿ ಹೊರಟೆದ್ದು ಹೋದ. ಪರಿಸ್ಥಿತಿ ಗಂಭೀರವಾಯಿತು. ಕೂಗಿದವರ್ಯಾರೆಂದು ಎಲ್ಲರಿಗೂ ಗೊತ್ತು. ಆದರೆ ಗಾಂಧಿಯನ್ನು ಕೆಣಕುವ ಆಶೆ ಬಹುತೇಕ ಆತನ ಬದುಕಿನ ಘಟ್ಟದಲ್ಲಿ ಎಲ್ಲರಿಗೂ ಇತ್ತು.

ಆತನಿಗೆ ಮಾತೆಂದರೆ ಈಗ ಹೇಸಿಗೆ ಎನ್ನಿಸುವಷ್ಟು ಬೇಸರವಾಗಿದೆ. ಈ ಜನರನ್ನು ಕಟ್ಟಿಕೊಂಡು ಅದ್ಯಾವ ದಡವನ್ನು ಸೇರುವುದೊ ನಿಜಕ್ಕೂ ತಿಳಿಯದಾಗಿದೆ. ಈ ರಾತ್ರಿಯ ಊಟ ಮಾಡಿ ತಣ್ಣಗೆ ಇದೆಲ್ಲ ಮರೆತು ಮಲಗಬೇಕೆಂದರೆ

ಬೋಸ್ಟನ್ನಿನಿಂದ ರೋನಾಲ್ಡ್ ಸ್ಟೆಡ್ ಬಂದಿದ್ದಾರೆ. ಗಾಂಧಿಯ ಒಂದು ವಿಶೇಷ ಸಂದರ್ಭಕ್ಕಾಗಿ, ಸಂದರ್ಶನಕ್ಕಾಗಿ ಬಹಳ ವರ್ಷಗಳಿಂದ ಕಾಯ್ದು ಪತ್ರಕರ್ತ ಈತ. ಅದರಲ್ಲೂ ವಿಶೇಷವಾಗಿ ಗಾಂಧಿಯ ಹಿಂದೂ–ಮುಸ್ಲಿಂ ಬಾಂಧವ್ಯದ ವಿಚಾರಗಳನ್ನೇ ಈತ ವಿಶೇಷವಾಗಿ ಗಮನದಲ್ಲಿರಿಸಿಕೊಂಡವ. ಗಾಂಧಿ ಇದನ್ನು ಹೇಗೆ ಸಾಧಿಸುತ್ತಾನೆ ಎಂದು ಕೇಳಿ, ಇಂದು ಮೈಕು ಹಿಡಿದು ಕುಳಿತುಕೊಂಡ. ಒಂದು ಗಂಟೆಯ ಹಿಂದಿನ ಅಸಹ್ಯದಿಂದ ಮನಸ್ಸಿಗೆ ಬೇಸರವಾದರೂ ಗಾಂಧಿ, ಮತ್ತೆ ಅದನ್ನೇ ಹೇಳಬೇಕಾಯಿತು. "ಮೊದಲು ನನ್ನನ್ನು ಮುಸ್ಲಿಮರು ತಮ್ಮ ವೈರಿಯೆಂದು ಬಿಂಬಿಸಿದರು. ಈಗ ಹಿಂದೂಗಳು ನನ್ನನ್ನೇ ತಮ್ಮ ವೈರಿಯೆಂದು ಬಿಂಬಿಸಿದ್ದಾರೆ. ಆದರೆ ಸತ್ಯವಿಷ್ಟೆ, ನಾನು ತಪ್ಪಿನ ವೈರಿ. ಗೊತ್ತಿರಲಿ, ತಪ್ಪಿತಸ್ತರ ವೈರಿಯಲ್ಲ. ಈ ದೇಶ, ಜನ, ನನ್ನ ಈ ಒಂದು ಕಾಳಜಿಯನ್ನು ಅರ್ಥೈಸಿಕೊಂಡರೂ ಸಾಕು, ಭಾರತದ ಭವಿಷ್ಯವೇ ಬೇರೆಯಾಗುತ್ತದೆ" ಎಂದು, ಒಲ್ಲದ ನಗೆಯನ್ನು ನಕ್ಕು ಭಾರವಾದ ಹೆಜ್ಜೆಗಳನ್ನು ಹಾಕುತ್ತ ಗಾಂಧಿ ವಿಶ್ರಾಂತಿಗಾಗಿ ಒಳಗೆ ಹೋದ. ಸುತ್ತಲೂ ಕತ್ತಲೆ, ನೀರವ ಮೌನ. ಆ ಬೋಳು ತಲೆಗೆ ಭಾರವಾದ ಭಾರತದ ಭವಿಷ್ಯ. ನಾಳೆ ಸೋಮವಾರ ಮೌನ ವ್ರತ, ಮಾತನಾಡುವ ಪ್ರಮೇಯವೇ ಇಲ್ಲ. ಅಷ್ಟೇ ಸಾಕಾಗಿತ್ತು ಗಾಂಧಿಗೆ. ಮಾತು, ಮಾತು, ಮಾತು ಸಾಕಾಗಿತ್ತು ಆತನಿಗೆ.

ನವೆಂಬರ್ ೩, ಸೋಮವಾರ. ಸಾಮಾನ್ಯವಾಗಿ ಗಾಂಧಿ ನಸುಕಿನ ೩.೩೦ಕ್ಕೆ ಏಳುತ್ತಿದ್ದ. ಆದರೆ ಇಂದು ಅವಧಿಗೂ ಮುಂಚೆಯೇ ಎದ್ದಿದ್ದಾನೆ. ನಿನ್ನೆಯಿಂದ ಕದಡಿದ ಕೊಳದಂತಾಗಿರುವ ಆತನ ಮನಸ್ಸು ಯಾಕೋ ಇನ್ನೂ ಸ್ತಿಮಿತಕ್ಕೆ ಬರುತ್ತಿಲ್ಲ. ನಸುಕಿನ ಕತ್ತಲೆಯಲ್ಲಿ ಒಂದಷ್ಟು ಬೆಳಕು ಮಾಡಿಕೊಂಡು ಚರಕ ಸುತ್ತುತ್ತಾ ಕುಳಿತ. ಚರಕದ ಸದ್ದಾಯಿತು, ಮನು ಕೂಡಾ ಎದ್ದು ಬಂದು ಗಾಂಧಿಯ ಮುಂದೆ ಕುಳಿತುಕೊಂಡಳು. ನಿನ್ನೆ ಬಂದ ಎರಡು ಪತ್ರಗಳನ್ನು ಆಕೆ ಈಗ ಗಾಂಧಿಗೆ ಓದಿ ಹೇಳಬೇಕಿದೆ, ಈ ಎರಡು ಪತ್ರಗಳಲ್ಲಿ ಒಂದು ಪತ್ರ, ಗಾಂಧಿಯನ್ನು 'ಕಲಿಯುಗದಲ್ಲಿ ಅವತರಿಸಿದ ಭಗವಾನ್ ಶ್ರೀ ಕೃಷ್ಣ, ಮುಕ್ತಿದಾತ, ಮಹಾತ್ಮ' ಎಂದು ಹೊಗಳಿದರೆ, ಇನ್ನೊಂದು ಪತ್ರ, ನೀನು ಮಹಾತ್ಮ ಗಾಂಧಿ ಅಲ್ಲ, ಮುಸ್ಲಮಾನೋಂ ಕಾ ಚಮಚಾ, 'ಮಿ. ಮೊಹಮ್ಮದ್ ಗಾಂಧಿ'. ನಿನ್ನ ಖುರಾನಿನೊಂದಿಗೆ ನೀನೂ ಪಾಕಿಸ್ತಾನಕ್ಕೆ ಹೋಗಿ ಅಲ್ಲಿಯೇ ಏಕೆ ಸಾಯಬಾರದು? ನಿನ್ನ ಮುಸ್ಲಿಂ ಬಂಧುಗಳಿಗೇಕೆ ಪ್ರವಚನ ಹೇಳಬಾರದು? ಎಂದು ಪ್ರಶ್ನಿಸಿದೆ. ಈ ಎರಡನೆಯ ಪತ್ರದ ಒಕ್ಕಣಿಕೆಯನ್ನು ನೋಡಿ ಆಕ್ರೋಶಗೊಂಡ ಮನು ಅದನ್ನು ದೂರ ಬೀಸೊಗೆದಳು. ಗಾಂಧಿ ಗಮನಿಸಿ ಮುಗುಳ್ನಕ್ಕ. ಬೀಸೊಗೆದ ಪತ್ರವನ್ನು ಮತ್ತೆ ಎದ್ದು ತರಲು ಮನುಳಿಗೆ ಆದೇಶಿಸಿದ. ಅದೇ ಪತ್ರದಿಂದ ತನ್ನ ಕನ್ನಡಕ ಶುಚಿಗೊಳಿಸಿ, 'ಇದು ಬದುಕು, ಇಲ್ಲಿ ಬೇಸರಕ್ಕೆ ಆಸ್ಪದವಿಲ್ಲ ಮನು' ಎಂದು ತಿಳಿಸಿ, ಸೇವಾಗ್ರಾಮದ ಆಶ್ರಮದಲ್ಲಿರುವ

ಮಹಿಳೆಯೊಬ್ಬಳಿಗೆ ಪತ್ರ ಬರೆಯಿಸಲು ಪ್ರಾರಂಭಿಸಿದ. "ಪ್ರಿಯ ಸಹೋದರಿ, ನಮ್ಮ ರಾಜಕೀಯ ಕಾರ್ಯಕರ್ತರಲ್ಲಿ ಭಿನ್ನಾಭಿಪ್ರಾಯಗಳ ಪರ್ವ ಹದ್ದು ಮೀರಿ ಹೋಗುತ್ತಿದೆ ಎನಿಸುತ್ತಿದೆ. ಅವರಿಂದ ಸಾಕಷ್ಟು ಒಳ್ಳೆಯ ನಿರೀಕ್ಷೆಗಳಿದ್ದವು. ಆದರೆ ಅವುಗಳನ್ನು ಕೈಗೂಡಿಸುವ ನಿಟ್ಟಿನಲ್ಲಿ ಯಾರ ಆಲೋಚನೆಗಳೂ ಇದ್ದಂತಿಲ್ಲ. ನನಗೆ ಗೊತ್ತಿದೆ, ಪಾವಿತ್ರ್ಯ, ಶುದ್ಧಿ ಈಗ ನನ್ನ ಆಶ್ರಮಕ್ಕೂ ಹಳತಾದ, ಪ್ರಸ್ತುತವಲ್ಲದ ವಿಚಾರವೆನಿಸುತ್ತಿರಬಹುದು. ಕಳೆದ ಒಂದು ವರ್ಷದಿಂದ ನಾನೂ ಅಲ್ಲಿ ಇಲ್ಲ. ಈಗ ಅಲ್ಲಿ ಏನು ನಡೆಯುತ್ತಿದೆ ಎನ್ನುವುದೂ ನನಗೆ ಗೊತ್ತಿಲ್ಲ. ಆದರೂ ಎಲ್ಲ ತಿಳಿದವನಂತೆಯೇ, ಸರಿಯಾಗಿರುವಂತೆಯೆ ನಾನು ಬದುಕಬೇಕಿದೆ, ಯಾಕೆಂದರೆ ಈ ಬದುಕು ಒಂದು ನಿಶ್ಚಿತ ಸತ್ಯ. ಅದು ಭಗವಂತನ ಕೊಡುಗೆ. ಆತನ ಕೊಡುಗೆಯನ್ನು ನಾನು ಜವಾಬ್ದಾರಿಯಿಂದ ಕಾಯ್ದುಕೊಳ್ಳಬೇಕಿದೆ ಗೌರವಿಸಬೇಕಿದೆ.

ಇಂತೀ ನಿನ್ನ ಬಾಪು"

ಮತ್ತೆ ಗಾಂಧಿ ಆ ಪತ್ರಗಳ ಬಗೆಗೆ ಪ್ರಸ್ತಾಪಿಸಲೇ ಇಲ್ಲ. ಮನುಗೆ ಬೇಸರವಿದ್ದರೂ ಆತ ಆ ಕುರಿತು ಮತ್ತೆ ಮಾತಾಡಲಿಲ್ಲ. ಇಷ್ಟರಲ್ಲಿ ಬೆಳಕಾಯಿತು. ಸಂದರ್ಶಿಸುವವರ ಸಂದಣಿ ಶುರುವಾಯಿತು. ಆದರೆ ಸೋಮವಾರದ ಮೌನದಲ್ಲಿರುವ ಗಾಂಧಿಗೆ, ಈ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಭಾರತ ಸರ್ಕಾರದ ಆಹಾರ ನಿಯಂತ್ರಣದ ಆದೇಶವನ್ನು ಧಿಕ್ಕರಿಸಿ ಕೆಲವು ವಿಚಾರಗಳನ್ನು ಹೇಳಬೇಕಿತ್ತು. ಬರೆಯಲು ಕುಳಿತುಕೊಂಡ, "ನಿಯಂತ್ರಣ, ಯಾವುದೇ ನಿಯಂತ್ರಣ ಸತ್ಯವನ್ನು ತುಳಿದು ಹಾಕುತ್ತದೆ. ಅದು ಕಾಳಸಂತೆಯನ್ನು ಬೆಳೆಸುತ್ತದೆ. ಅನವಶ್ಯಕ ಅಭದ್ರತೆಯನ್ನು ಜನರಲ್ಲಿ ಹುಟ್ಟುಹಾಕುತ್ತದೆ. ಜನರಿಗೆ ಗೊತ್ತಿಲ್ಲದ ಮೋಸದ ಭಾಷೆಯನ್ನು ಕಲಿಸುತ್ತದೆ. ನಾಗರಿಕರನ್ನೂ ಅನಾಗರಿಕರನ್ನಾಗಿ ಮಾಡುತ್ತದೆ. ಪರಸ್ಪರ ಸಹಾಯದ ಭಾಷೆಯೇ ಆಗ ಸತ್ತುಹೋಗುತ್ತದೆ. ಇದುವೇ ಮುಂದೆ ದೇಶದಲ್ಲಿ ನಿರಂತರ ದುರಂತಗಳಿಗೆಡೆ ಮಾಡುತ್ತದೆ. ನಮ್ಮ ಜನಪ್ರತಿನಿಧಿಗಳು, ತಾವು ಜನರಿಂದ ಆಯ್ಕೆಯಾದವರು, ಜನರಿಗಾಗಿಯೇ ಇರುವವರು ಎನ್ನುವ ಎಚ್ಚರಿಕೆಯಿಂದ ಇರಬೇಕು. ಆಹಾರ ನಿಯಂತ್ರಣ ಕಾಯ್ದೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು. ಅನ್ನಕ್ಕಾಗಿ ಜನಗಳು ಸರಕಾರದ ಮುಂದೆ ದಯನೀಯವಾಗಿ ನಿಲ್ಲುವ ಸಂದರ್ಭ ಬರಬಾರದು. Democracy will break down under the strain of apron-strings. It can exist only on trust. If our people are to die because they will not labour, or because they will defraud one another, that will be a welcome deliverance. The rest of us will then learn not repeat the sin of being lazy, idle or cruelly selfish."

ಸೋಮವಾರದ ಸಾಯಂಕಾಲದ ಪ್ರಾರ್ಥನೆಯಲ್ಲಿ ಗಾಂಧಿ ಓದಿಸಿದ ಈ ಮಾತುಗಳು ಅನೇಕರಿಗೆ ಬೇಸರವನ್ನುಂಟುಮಾಡಿದವು. ಈ ಗಾಂಧಿ ವಿರೋಧ ಪಕ್ಷದ ನಾಯಕನಂತೆ ಮಾತಾಡುತ್ತಾನೆಂದು ಕಾಂಗ್ರೆಸ್ಸಿಗರ್‍ಯಾರೂ ಅಂದುಕೊಂಡಿರಲಿಲ್ಲ. ಶಾಂತ, ಸಭ್ಯಸ್ತ, ಸನ್ಯಾಸಿ ಎಂದು ಈತನನ್ನು ರಾಜಕೀಯದಿಂದ ಶಾಶ್ವತವಾಗಿ ನಿವೃತ್ತಗೊಳಿಸಿದ್ದ ರಾಜಕಾರಣಿಗಳಿಗೆ ಈತನ ನೇರಾ-ನೇರ ಮಾತುಗಳು ಬೇಸರವನ್ನುಂಟುಮಾಡುವುದು ಸ್ವಾಭಾವಿಕವೇ ಆಗಿತ್ತು. ಗಾಂಧಿಗೆ ಇಂತಹ ಭಾಷೆಯ ಬಳಕೆ ಇಂದು ಅನಿವಾರ್ಯವಾಗಿತ್ತು. ಒಂದು ಕ್ಷಣ ತಾನು ಸಾಗಿ ಬಂದ ದಾರಿಯನ್ನು ನೆನಪಿಸಿಕೊಂಡ ೧೯೧೩ರಲ್ಲಿ ಸೌಥ್‌ಆಫ್ರಿಕಾದಲ್ಲಿ ಜನವಿರೋಧಿಯಾದುದೆಲ್ಲವನ್ನೂ ಧಿಕ್ಕರಿಸುತ್ತಾ ಪ್ರಾರಂಭವಾದ ತನ್ನ ಹೋರಾಟ ಇಂದಿಗೂ ಅದೇ ಹಂತದಲ್ಲಿದೆಯೇ ಎಂದೆನಿಸಿಕೊಳ್ಳದೇ ಇರಲಿಲ್ಲ. ತನ್ನ ಕನಸಿನ ಭಾರತ, ಇಲ್ಲಿಯ ಸರ್ಕಾರ, ದುರ್ಬಲರನ್ನು, ದಮನಿತರನ್ನು ರಕ್ಷಿಸುವ ಕಾರ್ಯ ಮಾಡುತ್ತಿದೆಯೇ ಎನ್ನುವ ಸಂಶಯ ತನ್ನ ಸಾವಿಗಿಂತಲೂ ಗಾಢವಾಗಿ ಗಾಂಧಿಯನ್ನು ಕಾಡಿತ್ತು. ಬ್ರಿಟಿಷ್ ದುರಾಡಳಿತ, ಸ್ವಾತಂತ್ರ್ಯ ಹೋರಾಟ, ದೇಶ ವಿಭಜನೆ, ಬರ, ಆಹಾರ ನಿಯಂತ್ರಣದ ಕಾಯ್ದೆ ಈ ಎಲ್ಲ ಸಂದರ್ಭಗಳಲ್ಲಿ ಅತೀ ಹೆಚ್ಚು ನೊಂದವರು ಈ ದೇಶದ ಮಹಿಳೆಯರು. ಹೀಗಾಗಿ ಅವರಿಗಾಗಿ ಏನಾದರೂ ಮಾಡಬೇಕೆನ್ನುವುದು, ಅದೂ ತನ್ನ ಜೀವಿತಾವಧಿಯಲ್ಲಿಯೇ ಪೂರ್ಣವಾಗಬೇಕೆನ್ನುವುದು ಗಾಂಧಿಯ ಮಹದಾಸೆ. ಆ ಮೂಲಕ ಕಸ್ತೂರಬಾಳ ನೆನಪಿಗೆ ಅಪೂರ್ವ ಗೌರವ ಸಲ್ಲಿಸಬೇಕು. ಯಾಕೆಂದರೆ ಅಸಹಕಾರ ಮತ್ತು ಸತ್ಯಾಗ್ರಹಗಳನ್ನು ಗಾಂಧಿ ಕಲಿತಿದ್ದು ಬಾ ಳಿಂದ. ಅಂತೆಯೇ ನವೆಂಬರ್ ೪ರ ತನ್ನ ಚರ್ಚೆಯನ್ನು ಮಹಿಳೆಯರಿಗಾಗಿಯೇ ಗಾಂಧಿ ಮೀಸಲಿಟ್ಟ. ಹಿಂದೂ-ಮುಸ್ಲಿಮರಿಬ್ಬರೂ 'ಪರ್ದಾ' ಪದ್ಧತಿಯನ್ನು ತಿರಸ್ಕರಿಸಬೇಕು, 'ಪರ್ದಾ' ಎನ್ನುವ ನಿಯಂತ್ರಣದ ಮೂಲಕ ಮಹಿಳೆಯರ ಚಾರಿತ್ರ್ಯ ರಕ್ಷಿಸುವ ಕಾರ್ಯವಾಗಬಾರದು. ಚಾರಿತ್ರ್ಯ ಭಾವಶುದ್ಧಿಯೊಂದಿಗೆ ಬೆಳೆಯುವ ವಿಚಾರ ಎಂದ ಗಾಂಧಿ 'Men, to be real men, must be able to trust their women, even as the latter are compelled to trust them'. ಆದರೆ ದುರಂತ. ಇಂದು ಭಾರತದಲ್ಲಿ 'ಪರ್ದಾ' ಮತ್ತೆ ಮುಸ್ಲಿಮರಲ್ಲಿ ಹಿಂದಿಗಿಂತಲೂ ಹೆಚ್ಚು ಪ್ರಸ್ತುತವಾಗುತ್ತಿದೆ. ತಾಲೀಬಾನೀಕರಣ ಗಾಢವಾಗುತ್ತಿದೆ.

ಆಶ್ಚರ್ಯವೆನ್ನುವಂತೆ ಮಹಿಳೆಯರನ್ನು ಕುರಿತು ಗಾಂಧಿ ಆಲೋಚಿಸುವಾಗ ಗಾಂಧಿಗೆ ಇದೇ ದಿನ ಗುಜರಾತಿನಿಂದ ಮಹಿಳೆಯೊಬ್ಬಳು ಪತ್ರ ಬರೆದು ತನಗೆ ಹೆಣ್ಣು ಮಗುವಾಯಿತೆಂದು ಅತ್ಯಂತ ದುಃಖದಿಂದ ಹೇಳಿದ್ದಾಳೆ. ಮಹಿಳೆಯೊಬ್ಬಳು ತನ್ನನ್ನೇ ತಾನು ಜರಿದುಕೊಳ್ಳುವ, ಇದಕ್ಕಿಂತಲೂ ವಿಕೃತವಾದ, ವಿಷಾದದ ದಾರಿ ಮತ್ತೊಂದು

ಇರಲಿಕ್ಕಿಲ್ಲ ಎಂದುಕೊಂಡ ಗಾಂಧಿ. ತಡೆಯಲಾಗದ್ದಕ್ಕೆ ಆಕೆಗೆ ಪತ್ರ ಬರೆದು ಕೇಳಿದ, "ನಿನ್ನಂತಹ ಸುಶಿಕ್ಷಿತ ಮಹಿಳೆಯರೇ ಇಂತಹ ವಿಭಜನೆಗಳನ್ನು ಮಾಡುವುದುಂಟೇ? ನೆನಪಿರಲಿ, ಗಂಡುಮಕ್ಕಳು ತಂದೆ-ತಾಯಿಗಳನ್ನು, ಅವರ ಮುಪ್ಪನ್ನು ಒಪ್ಪಿಕೊಳ್ಳುವುದು ಅಪ್ಪಿಕೊಳ್ಳುವುದು ಅಪರೂಪ. ಆದರೆ ಹೆಣ್ಣುಮಕ್ಕಳು ಹಾಗಲ್ಲ, ಅವರು ಕರುಣಾಮಯಿಗಳು. ಓರ್ವ ಮಹಿಳೆಯಾಗಿ ನೀನು ಈ ತೆರನಾಗಿ ಆಲೋಚಿಸುವುದು ತಪ್ಪು. ನಿನ್ನ ನಾಲ್ಕೂ ಮಕ್ಕಳಿಗೆ ನನ್ನ ಆಶೀರ್ವಾದವಿದೆ. ಅವರು ಈ ದೇಶಕ್ಕೆ ಏನಾದರೂ ಮಾಡಬಹುದೆನ್ನುವ ನಿರೀಕ್ಷೆಯೂ ಇದೆ."

ಹೀಗೆ ಪತ್ರ ಬರೆದು, ಊಟ ಮುಗಿಸಿ ಮಧ್ಯಾಹ್ನದ ವಿಶ್ರಾಂತಿಯಲ್ಲಿದ್ದ ಗಾಂಧಿಯ ಕೊಠಡಿಯ ಹೊರಗೆ ಜೋರಾಗಿ ಏನೋ ಸದ್ದಾಯಿತು. ಆ ಸದ್ದು ಏನು ಎನ್ನುವುದು ಅಸ್ಪಷ್ಟ. ಆದರೆ ಅದರ ಉದ್ದೇಶ ಮತ್ತೆ ಗಾಂಧಿಯಲ್ಲಿ ಸಾವಿನ ಭೀತಿಯನ್ನು ಹುಟ್ಟಿಸುವುದೇ ಆಗಿತ್ತು. ಇದು ಗಾಂಧಿಗೆ ಹೊಸದಲ್ಲ. ಸಾವೇ ರೂಢಿಯಾಗಿದೆ. ಈಗಾಗಲೇ ಆತನ ಮೇಲೆ ಅನೇಕ ನೇರ ಹಲ್ಲೆಗಳಾಗಿವೆ. ನಿರಂತರ ಆತನ ಕೊಲೆಯ ಪ್ರಯತ್ನಗಳು ವಿಫಲವಾಗಿವೆ. ಖಿರಾನಂತೂ ಆತನಿಗೆ ಎಲ್ಲಿಲ್ಲದ ಸಂಕಷ್ಟವನ್ನು ತಂದಿದೆ. ಈ ಕಾರಣಕ್ಕಾಗಿಯೇ ಆತನಿಗೆ ತನ್ನ ಸಾವು ಖಚಿತವಾಗಿದೆ. ಹೀಗಾಗಿ ಇಂದಿನ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಸಾವಿನ ಒತ್ತಡದಲ್ಲಿಯೇ ಮಾತನಾಡಿದ ಗಾಂಧಿ, "ನನ್ನ ಇತ್ತೀಚಿನ ದಿನಗಳು ನನಗೆ ಎಷ್ಟೊಂದು ಭಾರವಾಗಿವೆ. ನಿರಾಶ್ರಿತರ ನೋವು, ಆಕ್ರಂದನಗಳನ್ನು ಕೇಳುವುದರಲ್ಲಿಯೇ ನನ್ನೆಲ್ಲ ದಿನಗಳೂ ಉರುಳಿಹೋಗಿವೆ. ನಾನು ಬಹಳ ನೊಂದಿದ್ದೇನೆ. ನಾನು ನಿಜವಾಗಿಯೂ ಅಹಿಂಸೆಯ ಆರಾಧಕನೇ ಎನ್ನುವ ಸಂಶಯ ನನ್ನೊಳಗೇ ಪ್ರಾರಂಭವಾಗಿದೆ. ಈಗ ಪ್ರಾರ್ಥನೆ, ಊಟ, ನಿದ್ರೆ ಯಾವುದರಲ್ಲಿಯೂ ಸೊಗಸಿಲ್ಲ, ಯಾವುದಕ್ಕೂ ಸಮಯವಿಲ್ಲದಂತಾಗಿದೆ. ಅಹಿಂಸೆಯ ಆರಾಧಕನಾಗಿ ಕಣ್ಣೀರು ಹಾಕದೆ ಹೃದಯವನ್ನು ಗಟ್ಟಿಗೊಳಿಸಿಕೊಳ್ಳುವುದೇ ರೂಢಿಯಾಗಿಬಿಟ್ಟಿದೆ. ಯಾಕೆಂದರೆ, ಒಂದಿಲ್ಲಾ ಒಂದು ದಿನ ನಾನು ದುರಂತವನ್ನೆದುರಿಸಬೇಕಿದೆ. ಮತ್ತೊಂದು ದುರಂತಕ್ಕೆ ಎಡೆ ಮಾಡದಂತೆ ದುರಂತವನ್ನೆದುರಿಸಬೇಕಿದೆ. ಅಹಿಂಸೆಯ ಆರಾಧಕ ಇರಬೇಕಾದುದೇ ಹಾಗೆ. ಆತ ಹೂವಿಗಿಂತಲೂ ಮೃದು ಮತ್ತು ವಜ್ರಕ್ಕಿಂತಲೂ ಕಠಿಣ. ಈ ಮಧ್ಯಾಹ್ನದ ಭಯಾನಕ ಸದ್ದು ನನ್ನನ್ನು ಧೃತಿಗೆಡಿಸಿಲ್ಲ. ೧೯೪೩ ರ ಆಘಾಖಾನ್ ಅರಮನೆಯಲ್ಲಿ ಕಸ್ತೂರಬಾಳ ಸಾವಿನೊಂದಿಗೇ ನಾನು ಭಯಮುಕ್ತನಾಗಿದ್ದೇನೆ. ಈಗ ನನ್ನನ್ನು ಸಾವೂ ಬಾಧಿಸುವುದಿಲ್ಲ" ಎಂದು ಹೇಳಿದ ಗಾಂಧಿ ಸಾವಿನಿಂದಲೂ ಮುಕ್ತನಾದಂತೆ ಎದ್ದುಹೋದ. ಮುಂದೊಮ್ಮೆ ಈ ಜನರ ಮಧ್ಯದಿಂದ ಶಾಶ್ವತವಾಗಿ ಎದ್ದು ಹೋಗಲು ಸಿದ್ಧನಾದ.

❑



ಮಾತುಗಳೆಲ್ಲಾ ಮಾರ್ಗವಾಗಿದ್ದರೆ. . . .

ಈ ಗಾಂಧಿ 'ಮುಸ್ಲಿಮರಿಗಿಂತ ಹೆಚ್ಚು ಮುಸ್ಲಿಂ', ದೆಹಲಿಯ ಭಂಗಿ ಕಾಲನಿಯ ದೇವಾಲಯದಲ್ಲಿ ತನ್ನ ಪ್ರಾರ್ಥನಾ ಸಭೆ ನಡೆಸಿ, ದೇವಾಲಯದಲ್ಲಿ ಖುರಾನ್ ಓದಿಸಿ ಅಪವಿತ್ರಗೊಳಿಸಿದ, ಮುಲ್ಲಾಗಳು ಮಲಬಾರ್ ಹಿಂದುಗಳನ್ನು ಕೊಚ್ಚಿಹಾಕಿದರೂ, ಸ್ವಾಮಿ ಶ್ರದ್ಧಾನಂದರನ್ನು ಕೊಲೆಮಾಡಿದರೂ, ಹಂತಕರಾದ ರಷೀದ ಮತ್ತು ಸುಹ್ರಾವರ್ದಿಗಳನ್ನು ಸಹೋದರರು, ಶಹೀದರು ಎಂದು ತಬ್ಬಿಕೊಂಡ, ೯೭% ಮುಸ್ಲಿಮರು ಪಾಕಿಸ್ತಾನವನ್ನು ಬೆಂಬಲಿಸುತ್ತಿದ್ದರೂ ಭಾರತದಲ್ಲಿ ಈ ಗಾಂಧಿ ಅವರ ರಕ್ಷಣೆಗೆ ನಿಂತ. ಹೀಗೆ ಕೊನೆಗಾಲದಲ್ಲಿ ಈತನ ಮೇಲಿದ್ದ ಆಪಾದನೆಗಳೇನೂ ಕಡಿಮೆಯಲ್ಲ. ನವೆಂಬರ್ ೫ರ ಸಂಜೆ ಗಾಂಧಿ ಪಾಕಿಸ್ತಾನದಿಂದ ಜೀವನವನ್ನು ಅರಸುತ್ತಾ ಓಡಿ ಬಂದ ಪಂಜಾಬಿ ಹಿಂದೂವೊಬ್ಬನ ಪ್ರಸ್ತಾಪವನ್ನೆತ್ತಿಕೊಂಡ. ಆತ

ಗಾಂಧಿಗೊಂದು ಪತ್ರ ಬರೆದು, ಪ್ರಾರ್ಥನಾ ಸಮಯದಲ್ಲಿ ಖುರಾನ್ ಹೇಳುವುದು ತಪ್ಪೆಂದೇ ವಾದಿಸಿದ್ದ. ಅತ್ಯಂತ ತಾರ್ಕಿಕವಾಗಿದ್ದ ಆತನ ವಾದ ಗಾಂಧಿಯೂ ಒಂದು ಕ್ಷಣ ತಲೆದೂಗುವಂತಿತ್ತು. ಆದರೆ ಆತನ ಆ ಎಲ್ಲ ಸಿಟ್ಟು-ವಾದ ಅಜ್ಞಾನದಿಂದ ಹುಟ್ಟಿಕೊಂಡದ್ದು ಎಂಬುದು ಗಾಂಧಿಯ ನಿರ್ಧಾರ. ಆತ ಗಾಂಧಿಯ ಮೇಲೆ ನಾಲ್ಕು ಮುಖ್ಯವಾದ ಆಪಾದನೆಗಳನ್ನು ಮಾಡಿದ್ದ.

೧. ಪ್ರಾರ್ಥನೆಯ ವೇಳೆಯಲ್ಲಿ ಇನ್ನು ಮುಂದೆ ಯಾರೊಬ್ಬರೇ ವಿರೋಧಿಸಿದರೂ ಖುರಾನ್‌ನ ಪಠಣವನ್ನು ನಿಲ್ಲಿಸುತ್ತೇನೆ ಎಂದು ಈ ಹಿಂದೆ ಹೇಳಿದ್ದ ನೀವು ಅದನ್ನು ಇನ್ನೂ ಏಕೆ ನಿಲ್ಲಿಸಿಲ್ಲ? ಇದುವರೆಗೂ ಅದೆಷ್ಟು ವಿರೋಧಗಳಾಗಿಲ್ಲ?

೨. ಖುರಾನ್ ಆದಿಯಾಗಿ ಎಲ್ಲ ಧರ್ಮಗ್ರಂಥಗಳೂ ಸಮಾನ ಎಂದು ಹೇಳುವ ನೀವು, ಸಿಖ್ ಧರ್ಮ ಗ್ರಂಥವಾದ 'ಗ್ರಂಥ ಸಾಹೇಬ'ದ ಆರಂಭದ ಭಾಗವಾದ ಜಪ್ಜಿಯನ್ನು ಎಂದಾದರೂ ಹೇಳಿಸಿರುವಿರೇ? ಈ ತಾರತಮ್ಯ ಯಾಕೆ?

೩. ಪಶ್ಚಿಮ ಪಾಕಿಸ್ತಾನ ಮತ್ತು ಪಶ್ಚಿಮ ಪಂಜಾಬಿನಿಂದ ಭಾರತಕ್ಕೆ ಓಡಿಬಂದ ನಿರಾಶ್ರಿತ, ಆದರೆ ನಿಮ್ಮ ಕೃಪಾಪೋಷಿತ ಕಾಂಗ್ರೆಸ್ ನಾಯಕರು ದುಃಖತಪ್ತರಾಗಿಲ್ಲ. ಏಕೆಂದರೆ ಅವರೆಲ್ಲರಿಗೂ ತಾವು ಕಳೆದುಕೊಂಡ ಆಸ್ತಿಗಿಂತಲೂ ಹೆಚ್ಚಿನ ಆಸ್ತಿ ಭಾರತದಲ್ಲಿ ಈಗ ಸಿಕ್ಕಿದೆ. ಇದನ್ನೇಕೆ ನೀವು ಪ್ರಶ್ನಿಸುತ್ತಿಲ್ಲ?

೪. ಕೈಯಲ್ಲೊಂದು 'ರಾಮಾಯಣ'ವನ್ನು ಹಿಡಿದುಕೊಂಡು ತೆಪ್ಪಗೆ ಬಿರ್ಲಾ ಹೌಸ್‌ದಲ್ಲಿ ಊಟ ಮಾಡಿ ಕುಳಿತುಕೊಂಡು ಮುಸ್ಲಿಮರ ಮಾನ-ಪ್ರಾಣಗಳ ರಕ್ಷಣೆಗೆ ಮುಂದಾಗಿರುವ ನೀವು ಇನ್ನೂ ಏಕೆ ಪಾಕಿಸ್ತಾನಕ್ಕೆ ಹೋಗಿಲ್ಲ? ನಮ್ಮ ಸಂಸಾರಗಳಿಗೆ ನೀವು ಮಾಡಿದ ಹಾನಿಯಿಂದ ನಿಮಗಿನ್ನೂ ತೃಪ್ತಿಯಾಗಿಲ್ಲವೆ?

ಎಷ್ಟೊಂದು ನೇರಾ-ನೇರ ಪ್ರಶ್ನೆಗಳು. ಹೀಗೆ, ಈ ದುರಂತ ಬೆಳವಣಿಗೆಗಳಿಗೆ ಕಾರಣರಾದ ಅಪ್ರಬುದ್ಧ ರಾಜಕಾರಣಿಗಳನ್ನು, ಇಡೀ ಭಾರತ ಸರ್ಕಾರ, ಸೇನೆ ಹಾಗೂ ಸ್ವಜವಾಬ್ದಾರಿಗಳನ್ನು ದೂರವಿಟ್ಟ ಸಾವಿರ-ಸಾವಿರ ಭಾರತೀಯರು ಗಾಂಧಿಗೆ ಈ ತೆರನಾಗಿ ಪ್ರಶ್ನೆಗಳನ್ನು ಕೇಳಬಹುದಿತ್ತು. ಸಣ್ಣ ಮಗುವಿನ ಒಂದು ಸಣ್ಣ ಪ್ರಶ್ನೆಗೂ ಮಿಡುಕಾಡುತ್ತಿದ್ದ, ಸಂಕಟ ಪಡುತ್ತಿದ್ದ ಗಾಂಧಿಯನ್ನು ಯಾವನೂ, ಯಾವುದೋ ತಪ್ಪಿಗೂ ಹೊಣೆಗಾರನನ್ನಾಗಿ ಮಾಡಬಹುದಿತ್ತು. ಆತ ಈ ದೇಶವನ್ನು ದಾಸ್ಯದಿಂದ ಮುಕ್ತಗೊಳಿಸುವ ಹೋರಾಟಕ್ಕೆ ಇವರೆಲ್ಲರನ್ನೂ ಕರೆದುಕೊಂಡು ಹೊರಟಿದ್ದೇ ತಪ್ಪಾಯಿತು ಎನ್ನುವಷ್ಟು ಎಲ್ಲ ವ್ಯಕ್ತಿಗತ ಸಮಸ್ಯೆಗಳಿಗೂ ಈಗ ಗಾಂಧಿ

ಜವಾಬ್ದಾರನಾಗಿದ್ದ. ಸತ್ಯದೊಂದಿಗಿನ ತನ್ನ ಸಂಶೋಧನೆ ತನಗೇ ಉರುಳಾಗಿತ್ತೇನೋ? ತಾ ಹಿಡಿದ ಹಾದಿಯೇ ಹೆಬ್ಬಾವಾಗಿ ಆತನನ್ನು ಮಾರಣಾಂತಿಕವಾಗಿ ಸುತ್ತಿಕೊಂಡಿತ್ತೇನೋ. ಅದೇನೇ ಆಗಿದ್ದರೂ ಅದರಿಂದ ಪಲಾಯನವಂತೂ ಇರಲಿಲ್ಲ. ಮೇಲೆ ಕೇಳಿದ ಎಲ್ಲ ಪ್ರಶ್ನೆಗಳಿಗೂ ಬಹಿರಂಗವಾಗಿಯೇ ಉತ್ತರಿಸಲು ಸಿದ್ಧನಾದ ಗಾಂಧಿ.

ಪ್ರಶ್ನೆ ೧: ಪ್ರಾರ್ಥನೆಯ ವೇಳೆಯಲ್ಲಿ ಯಾರೊಬ್ಬರು ವಿರೋಧಿಸಿದರೂ ಖುರಾನ್‌ನ ಪಠಣವನ್ನು ನಿಲ್ಲಿಸುತ್ತೇನೆ ಎಂದು ಹೇಳಿದ್ದ ನೀವು ಅದನ್ನು ಇನ್ನೂ ಏಕೆ ನಿಲ್ಲಿಸಿಲ್ಲ? ಇದುವರೆಗೂ ಅದೆಷ್ಟು ವಿರೋಧಗಳಾಗಿಲ್ಲ?

ಗಾಂಧಿ: ನಾನು ಇದುವರೆಗೂ ಖುರಾನ್ ಪಠಣವನ್ನು ನಿಲ್ಲಿಸಿಲ್ಲ. ಕಾರಣವಿಷ್ಟೆ. ಇಲ್ಲಿ ಬರುವ ಬಹುಪಾಲು ಜನರು ಅದರ ಪಠಣವನ್ನು ಎಂದೂ ವಿರೋಧಿಸಿಲ್ಲ. ಧಾರ್ಮಿಕ ಅಸಹಿಷ್ಣುತೆಯ ರೋಗದಿಂದ ನರಳುವ ವ್ಯಕ್ತಿಯೊಬ್ಬ ವಿರೋಧಿಸಿದ ಎಂದು ನಾನು ನಿಲ್ಲಿಸಿದರೆ ಇಲ್ಲಿ ಸೇರಿದವರೆಲ್ಲರೂ ಆತನನ್ನು ಹಿಡಿದು ಹೊಡೆಯಬಹುದು, ಶಿಕ್ಷಿಸಬಹುದು ಎನ್ನುವ ಭಯ ನನಗಿದೆ. ನನ್ನ ಅನುಯಾಯಿಗಳಲ್ಲಿ ಕೆಲವರಾದರೂ ಈಗ ಸಿಟ್ಟು, ದ್ವೇಷದ ಭಾವನೆಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಇಂತಹ ವಿರೋಧಿಗಳಿಗೆ ನಾನು ಕ್ರಿಯೆಯ ಮೂಲಕವೇ ಉತ್ತರಿಸಬೇಕಿದೆ. ನನ್ನ ವಿರೋಧಿಯ ಜೀವ, ಮಾನವನ್ನೂ ನಾನು ರಕ್ಷಿಸಬೇಕಿದೆ.

ಪ್ರಶ್ನೆ ೨: ಖುರಾನ್ ಆದಿಯಾಗಿ ಎಲ್ಲ ಧರ್ಮಗ್ರಂಥಗಳು ಸಮಾನ ಎಂದು ಹೇಳುವ ಗಾಂಧಿ, ಸಿಖ್ ಧರ್ಮಗ್ರಂಥವಾದ 'ಗ್ರಂಥ ಸಾಹೇಬ'ದ ಆರಂಭದ ಭಾಗವಾದ ಜಪ್ಜಿಯನ್ನು ಎಂದಾದರೂ ಹೇಳಿಸಿರುವಿರೇ? ಈ ತಾರತಮ್ಯ ಯಾಕೆ?

ಗಾಂಧಿ: ಎರಡನೆಯ ಪ್ರಶ್ನೆಗೆ ನಾನು ಉತ್ತರಿಸಬೇಕಿಲ್ಲ. ಯಾಕೆಂದರೆ ನಿತ್ಯವೂ ನನ್ನೊಂದಿಗೆ ಪ್ರಾರ್ಥನೆಗೆ ಕುಳಿತುಕೊಳ್ಳುವವರಿಗೆ ನಾನು ಏನನ್ನು ಹೇಳಿಸಿದ್ದೇನೆ ಎನ್ನುವುದು ಚೆನ್ನಾಗಿ ಗೊತ್ತು. ಜಪ್ಜಿ ಅಷ್ಟೇ ಅಲ್ಲ ಯಹೂದಿ ಧರ್ಮಗ್ರಂಥ, ಝರಾತುಷ್ಟ್ರ, ಬುದ್ಧ, ಉಪನಿಷತ್ ದೋಹೆ, ನೀತಿವಾಕ್ಯಗಳಿಂದಲೂ ವಿಚಾರಗಳನ್ನು ಎತ್ತಿ ನಾನು ಚರ್ಚಿಸಿದ್ದೇನೆ. ಹೀಗಾಗಿ ಮೇಲಿನ ವಾದ ನಿರಾಧಾರವಾದುದು.

ಪ್ರಶ್ನೆ ೩: ಪಶ್ಚಿಮ ಪಾಕಿಸ್ತಾನ ಮತ್ತು ಪಶ್ಚಿಮ ಪಂಜಾಬಿನಿಂದ ಭಾರತಕ್ಕೆ ಓಡಿಬಂದ ನಿರಾಶ್ರಿತ ಕಾಂಗ್ರೆಸ್ ನಾಯಕರು ದುಃಖತಪ್ತರಾಗಿಲ್ಲ. ಏಕೆಂದರೆ ಅವರೆಲ್ಲರಿಗೂ ತಾವು ಕಳೆದುಕೊಂಡ ಆಸ್ತಿಗಿಂತಲೂ ಹೆಚ್ಚಿನ ಆಸ್ತಿ ಭಾರತದಲ್ಲಿ ಸಿಕ್ಕಿದೆ. ಇದನ್ನೇಕೆ ನೀವು ಪ್ರಶ್ನಿಸುತ್ತಿಲ್ಲ?

ಗಾಂಧಿ: ಒಂದು ವೇಳೆ ಮೇಲಿನ ಈ ಆಪಾದನೆಯ ವಿಷಯ ಸತ್ಯವಾಗಿದ್ದರೆ ಈ ದೇಶದಲ್ಲಿ ಇದಕ್ಕಿಂತಲೂ ನಾಚಿಗ್ಗೇಡು ಮತ್ತೊಂದಿಲ್ಲ. ಅನ್ಯರು ಅನ್ನಕ್ಕಾಗಿ ಕಿತ್ತಾಡುವಾಗ ಕಾಂಗ್ರೆಸಿಗರ ವೈಭವಯುತ ಜೀವನ ಮಾನವ ವಿರೋಧಿ. The rich, I repeat must share the sorrows of their poor brotheren.

ಪ್ರಶ್ನೆ ೪: ಕೈಯಲ್ಲೊಂದು ರಾಮಾಯಣವನ್ನು ಹಿಡಿದುಕೊಂಡು ತೆಪ್ಪಗೆ ಬಿರ್ಲಾ ಹೌಸ್‌ದಲ್ಲಿ ಊಟ ಮಾಡಿ ಕುಳಿತುಕೊಂಡು ಮುಸ್ಲಿಮರ ಮಾನ-ಪ್ರಾಣಗಳ ರಕ್ಷಣೆಗೆ ಮುಂದಾಗಿರುವ ನೀವು ಇನ್ನೂ ಏಕೆ ಪಾಕಿಸ್ತಾನಕ್ಕೆ ಹೋಗಿಲ್ಲ?

ಗಾಂಧಿ: ಬಂಧು, ಹೋಗದೇ ಇರುವುದಕ್ಕೆ ಕಾರಣವಿಷ್ಟೆ. ದೆಹಲಿಯಲ್ಲಿಯ ನನ್ನ ಜವಾಬ್ದಾರಿಯನ್ನೇ ನನಗೆ ಸಮರ್ಥವಾಗಿ ನಿಭಾಯಿಸಲಾಗಿಲ್ಲ. ನೀನೇ ಹೇಳಿರುವಂತೆ ನಾನು ಮುಸ್ಲಿಮರ ಸ್ನೇಹಿತ. ಏಕೆಂದರೆ ನಾನು ಹಿಂದೂಗಳ ಸ್ನೇಹಿತನೂ ಕೂಡ. ಸಿಖ್‌ರ ಬಂಧುವೂ ಕೂಡ. ಗೊತ್ತಿರಲಿ, ನಾನು ಇಡೀ ಮಾನವ ಸಮಾಜದ ಬಂಧು. ನಾನು ದೆಹಲಿಯಲ್ಲಿಯೇ ಉಳಿದುಕೊಳ್ಳಲು ಮುಖ್ಯ ಕಾರಣಗಳೇ ಸಿಖ್ ಮತ್ತು ಹಿಂದೂಗಳ ಪ್ರೇಮ, ಸ್ನೇಹ. ಪಾಕಿಸ್ತಾನದ ನನ್ನ ಸಂದರ್ಶನ ವ್ಯರ್ಥಹೋಗುವುದಿಲ್ಲ ಎಂದು ಅನ್ನಿಸಿದ ಮರುಕ್ಷಣವೇ ನಾನು ಪಾಕಿಸ್ತಾನಕ್ಕೆ ಹೋಗುತ್ತೇನೆ. ಅದಕ್ಕಾಗಿ ಒಳಗಿನಿಂದ ಸಿದ್ಧವಾಗಬೇಕಿದೆ, ಆಗುತ್ತಿದ್ದೇನೆ.

ಈ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸುವಷ್ಟರಲ್ಲಿ ಗೋ ಹತ್ಯೆಗೆ ಖುರಾನ್‌ನಲ್ಲಿಯೂ ಸಮರ್ಥನೆಯಿಲ್ಲ. ಆದಾಗ್ಯೂ ಹಿಂದೂಗಳನ್ನು ಅವಮಾನಿಸಲೆಂದೇ ಮುಸ್ಲಿಮರು ಗೋ ಹತ್ಯೆ ಮಾಡುತ್ತಿದ್ದಾರೆ ಎಂಬ ನಿಲುವಿನ ವ್ಯಕ್ತಿಯೊಬ್ಬ ಎದ್ದುನಿಂತು,

ಗೋ ರಕ್ಷಣೆಯ ಕುರಿತು ನಿಮ್ಮ ನಿರ್ಧಾರವೇನು? ಎಂದು ಪ್ರಶ್ನಿಸಿದ.

ಗಾಂಧಿ: ನಾನು ಗೋಮಾತೆಯನ್ನು ಆರಾಧಿಸುತ್ತೇನೆ. ಅದು ನಿಸ್ಸಂಶಯ. ಆದರೆ ಈ ನನ್ನ ಪವಿತ್ರ ಭಾವನೆ ಯಾರಿಗೂ ಹೇರಿಕೆಯಲ್ಲ. ಪ್ರತಿಯೊಬ್ಬ ಹಿಂದೂ ಕೂಡ ಹೀಗೆಯೇ ಆಲೋಚಿಸಬೇಕು. ಮುಸ್ಲಿಮರೊಂದಿಗಿನ ಸೋದರ ಬಾಂಧವ್ಯದಿಂದ ಗೋವುಗಳನ್ನು ರಕ್ಷಿಸಬೇಕು. ವಿಶೇಷತಃ ಹಿಂದುಗಳಲ್ಲಿ ಗುಜರಾತಿಗಳು ಮತ್ತು ಮಾರ್ವಾಡಿಗಳು ಗೋ-ರಕ್ಷಣೆಯ ಅಭಿಯಾನಗಳನ್ನು ಎತ್ತಿಕೊಳ್ಳುತ್ತಾರೆ. ಅದನ್ನೊಂದು ಆಜ್ಞೆಯಂತೆ ಅನ್ಯರ ಮೇಲೆ ಹೇರುತ್ತಾರೆ. ಆದರೆ ಇದು ಹಿಂದೂ ಧರ್ಮಕ್ಕೆ ಸಮ್ಮತವಲ್ಲ. ಸ್ವಯಂ ಹಿಂದೂಗಳೇ ಗೋವುಗಳನ್ನು ಅತ್ಯಂತ ಕರುಣೆಯಿಂದ ನೋಡಿಕೊಳ್ಳುವುದನ್ನು ಇನ್ನೂ ಸರಿಯಾಗಿ ಕಲಿತುಕೊಳ್ಳಬೇಕಿದೆ.

ಈ ಪ್ರಶ್ನೆಗೆ ಗಾಂಧಿಯ ಉತ್ತರ ಇನ್ನೂ ಸಂಪೂರ್ಣವಾಗಿರಲಿಲ್ಲ, ಅಷ್ಟರಲ್ಲಿ ಅಳುತ್ತಾ ಗಾಂಧಿಯ ಸಮೀಪ ಬಂದ ವ್ಯಕ್ತಿಯೊಬ್ಬ ತನಗಿನ್ನು ಈ ಸಂಸಾರ ಸಾಕು,


ತಾನು ಸನ್ಯಾಸಿಯಾಗಬೇಕಿದೆ. ಕೊಲೆ, ಮೋಸದ ಈ ಸಮಾಜವನ್ನು ತೊರೆದು ದೂರ ಹೋಗಬೇಕಿದೆ. ದಾರಿ ತೋರಿಸಿ ಎಂದ.

ಗಾಂಧಿ: ಸ್ವಯಂ ನಿಯಂತ್ರಣವೆನ್ನುವುದು ಹೃದಯದಲ್ಲಿ ಆಸೀನವಾದರೆ ಸಾಕು ಬಂಧು, ಕ್ಯಾವಿ ತೊಡಬೇಕಿಲ್ಲ, ಗಡ್ಡ ಬಿಡಬೇಕಿಲ್ಲ, ಬೆಟ್ಟ-ಗುಡ್ಡ ಅಲೆದಾಡುವ ಪ್ರಮೇಯವಿಲ್ಲ. ಮನಸ್ಸು ದೃಢವಾಗಿಲ್ಲದಿದ್ದಾಗ ಈ ಮೇಲಿನ ಮೂರನ್ನು ಅನುಸರಿಸಿಯೂ ಸನ್ಯಾಸಿಯಾಗಲು ಎಂದಿಗೂ ಸಾಧ್ಯವಿಲ್ಲ. ಈ ಪ್ರಪಂಚ, ಸಂಸಾರಗಳ ಮಧ್ಯ ಇದ್ದುಕೊಂಡೇ ಸನ್ಯಾಸ ಸಾಧನೆಯಾಗಬೇಕು. ವಸ್ತುಗಳ ಆಕರ್ಷಣೆ ನಮ್ಮನ್ನು ಬಾಧಿಸಬಾರದು. ಎಲ್ಲಿಗೂ ಹೋಗದೆ, ಇಲ್ಲದ್ದೂ ಇಲ್ಲದಂತಿರುವುದೇ ನನ್ನ ದೃಷ್ಟಿಯಲ್ಲಿ ಮಹಾನ್ ಸನ್ಯಾಸ.

ಹೀಗೆ ಈ ದಿನದ ಪ್ರಾರ್ಥನಾ ಸಭೆ ಎನ್ನುವುದು ಗಾಂಧಿಯ ಪಾಲಿಗೆ ಒಂದು ದೊಡ್ಡ ಪ್ರಶ್ನೋತ್ತರ ಸಂದರ್ಭವಾಗಿ ಮಾರ್ಪಟ್ಟಿತು. ಆತನಿಗೆ ಇದೊಂದು ರೀತಿಯ ಸತ್ವಪರೀಕ್ಷೆಯೂ ಕೂಡ. ಪ್ರಯೋಗಶೀಲತೆಯ ಈ ದಾರಿಯಲ್ಲಿ ಸತ್ಯಾಗ್ರಹಿಯೊಬ್ಬನ ಸತ್ವಪರೀಕ್ಷೆಗಳು ಬರುತ್ತಲೇ ಇರಬೇಕು ಎನ್ನುವುದು ಸ್ವತಃ ಗಾಂಧಿ ಒಪ್ಪಿಕೊಂಡ ವಿಚಾರ. ಕೇಳುವ ಪ್ರಶ್ನೆ, ಆತ ಕೊಡುವ ಉತ್ತರ ಬಾಹ್ಯಕ್ಕೆ ಒಂದು ಗೋಷ್ಠಿಯಂತೆ. ಆದರೆ ತನ್ನ ಪದಗಳು, ವಾದ-ಸಂವಾದಗಳು, ಎಲ್ಲವುಗಳ ಮೂಲಕ ಗಾಂಧಿ ತನ್ನೊಳಗೇ ಮಾಡಿಕೊಳ್ಳುತ್ತಿರುವ ಪರೀಕ್ಷೆಯೇ ಬೇರೆ. ಆತನ ಚಿಂತನೆಯೇ ಬೇರೆ. ಆತ ಬರೆಯುತ್ತಾನೆ, "If you listen to my words and act accordingly, if my words have greater power and my heart greater strength, if my penance grows still greater and if every word of mine becomes so potent that it grips the whole of India, then my task will be accomplished. If God takes me further than where He has taken me so far then India may have a great impact on the world."

ತಾನು ಅಂದುಕೊಂಡಿದ್ದನ್ನು ಒಂದು ವೇಳೆ ಸಾಧಿಸಿದರೆ ಗಾಂಧಿಗೆ ತನ್ನ ಶಾಂತಿದೂತರ ಪಡೆಯೊಂದನ್ನು ತೆಗೆದುಕೊಂಡು ಕಾಶ್ಮೀರ, ಪಾಕಿಸ್ತಾನಗಳಿಗೆ ಹೋಗಿ ಅಲ್ಲಿಯ ಸಮಸ್ಯೆಗಳನ್ನು ಬಗೆಹರಿಸುವ ಒಂದು ದೊಡ್ಡ ಕನಸಿದೆ. 'ಹಿಂದೂ-ಮುಸ್ಲಿಂ ಏಕ್ ಹೋ' ಎನ್ನುವ ಸಂದೇಶ ಸಾರುವ ಆಶೆಯಿದೆ ಅವನಿಗೆ. ಕೇವಲ ನಾಲ್ಕು ದಿನಗಳಲ್ಲಿ ಹತ್ತು ಸಾವಿರ ಹಿಂದೂಗಳ ಕೊಲೆಮಾಡಿದ, ಜಿ ಪಾರ್ ಗಥಾ ಎಂದು ತನ್ನ ಹಠವನ್ನೇ ಸಾಧಿಸುತ್ತ ಬಂದ ಮಿತ್ರರೊಂದಿಗೆ ಪ್ರಾರ್ಥನೆಗೆ ಕೂಡ್ರುವ ಬಯಕೆ ಈ ಗಾಂಧಿಗೆ. ಆದರೆ ನಾವು ಬಿಡಬೇಕಲ್ಲ. ನಮ್ಮ ಬುದ್ಧಿಗೆ ಈತನ ಆತ್ಮದ ಭಾಷೆಯೇ ಅರ್ಥವಾಗುವುದಿಲ್ಲ.

❑



ಇಷ್ಟರಲ್ಲೇ ದೇವರು ಕರೆಯಿಸಿಕೊಳ್ಳುತ್ತಾನೆ

ಮೃತ್ಯುವಿನ ಆಳ ಕಣಿವೆಯುಲ್ಲಿಯೂ ಸೌಹಾರ್ದದ ಹೂಗಳನ್ನು ಹುಡುಕಲು ಹೊರಟ ಗಾಂಧಿಯ ಈ ಹಠಕ್ಕೆ ಬಲವಾದ ಕಾರಣವಿದೆ. ಆತ ಈ ದೇಶ, ಸಂಸ್ಕೃತಿ, ಆಚರಣೆಗಳನ್ನು ಗ್ರಹಿಸಿದ ರೀತಿಯೇ ಆತನಿಗೆ ಬಳುವಳಿಯಾದದ್ದು ತನ್ನ ತಾಯಿಯಿಂದ. ಭಾರತ ಒಂದು ದೇಶ ಒಂದು ಧರ್ಮವಲ್ಲ. ಇದು ಪಾಕಿಸ್ತಾನವಾಗಲು ಸಾಧ್ಯವಿಲ್ಲ. ಇದು ಹಲವು ರಾಜ್ಯ, ಹಲವು ಧರ್ಮ, ಹಲವು ಸಂಸ್ಕೃತಿ, ಹಲವಾರು ಆಚಾರ–ವಿಚಾರ, ಭಾಷೆ, ಭಿನ್ನ ಆಹಾರ ಪದ್ಧತಿಗಳನ್ನೊಳಗೊಂಡ ಒಂದು ಶಕ್ತಿಕೇಂದ್ರ. ಹಾಗೆಯೇ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ಈ ಘಟ್ಟದಲ್ಲಿ ಅದಕ್ಕಂಟಿಕೊಂಡಿದ್ದ ಸಾಮಾಜಿಕ ಪಿಡುಗುಗಳೂ ಅಸಂಖ್ಯಾತ. ಗಾಂಧಿಯ ತಾಯಿ ಪುತಳಿಬಾಯಿ ವೈಷ್ಣವ ಪಂಥದ ದೊಡ್ಡ ಅನುಯಾಯಿ. ಆಕೆ ಜಾತಿ ಪದ್ಧತಿಯನ್ನು ಆಚರಿಸಿಕೊಂಡೇ

ಬಂದವಳು. ಗಾಂಧಿ ಬಾಲಕನಾಗಿದ್ದಾಗ ದಲಿತ ಗೆಳೆಯನೊಂದಿಗೆ ಆಟವಾಡಿದ್ದಕ್ಕಾಗಿ ಮನೆಯೊಳಗೆ ಬಿಡಲು ನೀರು ಸುರಿದು ಆತನನ್ನು ಶುದ್ಧೀಕರಿಸಿದವಳು. ಸಮುದ್ರೋಲ್ಲಂಘನವನ್ನು 'ಕಾಲಾಪಾನಿ ದೋಶ' ಎಂದು ನಂಬಿದವಳು. ಆದರೆ ತನ್ನ ತಿಳುವಳಿಕೆಯಿಂದ ಇವುಗಳನ್ನೆಲ್ಲ ವಿರೋಧಿಸುತ್ತ ಬಂದ ಗಾಂಧಿ ಲಿಯೋ ಟಾಲಸ್ಟಾಯ್‌ನಂತೆ, ಜಾನ್ ರಸ್ಕಿನ್‌ನಂತೆ ಮನುಷ್ಯ ಶ್ರಮದಲ್ಲಿ ಅಪಾರ ನಂಬಿಕೆಯನ್ನಿಟ್ಟು ಅವರಂತೆ ಬೆಳೆಯಲು ಹೊರಟವ. ತನಗೂ ಗೊತ್ತಿಲ್ಲದೆಯೇ ಅವರನ್ನೂ ಮೀರಿ ಬೆಳೆದವ.

ಇಂದು ನಿರಾಶ್ರಿತರ ಸಮಸ್ಯೆ ಆತನನ್ನು ಹೇಗೆ ಅಟ್ಟಾಡಿಸಿ ಕಾಡುತ್ತಿದೆಯೊ, ಹಾಗೆಯೇ ಒಂದು ಕಾಲಕ್ಕೆ ಗಾಂಧಿಯನ್ನು ಅಸ್ಪೃಶ್ಯತೆಯ ಸಮಸ್ಯೆಯೂ ಕಾಡಿತ್ತು. ಇಂದಿಗೆ ೧೪ ವರ್ಷಗಳ ಹಿಂದೆ ಅಂದರೆ ೭ ನವೆಂಬರ್, ೧೯೩೩ರಲ್ಲಿ ಗಾಂಧಿ ವಾರ್ಧಾದಿಂದ ಒಂದು ಚಳುವಳಿಯನ್ನೇ ಅದಕ್ಕಾಗಿ ಪ್ರಾರಂಭಿಸಿದ. ಅಲ್ಲಿಂದ ಅಸ್ಪೃಶ್ಯತೆಯ ವಿರುದ್ಧ ನಿರಂತರ ಒಂದು ವರ್ಷದವರೆಗೆ ನಾಗಪುರ್, ರಾಯಪುರ, ಬೇತುಲ್, ಇಟಾರ್ಸಿ, ಜಬ್ಬಲಪುರ, ಡೆಲ್ಲಿ, ಬೇಜವಾಡಾ, ಮುಸ್ಲಿ ಪಟ್ಟಣಂ, ಮದ್ರಾಸ, ಗುಂಟೂರ, ನಿಡುಬ್ರೊಲು, ತಿರುಪತಿ, ನಂಜನಗೂಡು, ಬೆಂಗಳೂರು, ಕ್ಯಾಲಿಕಟ್, ಕೊಟ್ಟಾಯಂ, ತ್ರಿಚೂರ್, ತ್ರಿವೇಂದ್ರಂ, ಕೇಪ್ ಕೊಮಾರಿನ್, ಮಧುರೈ, ಪೇರಿಯಾಕುಲ್ಂ, ತ್ರಿಚಿ, ಶ್ರೀರಂಗಂ, ವೆಲ್ಲೂರ್, ಮೈಸೂರು, ಕಾರವಾರ, ಬೆಳಗಾಂ, ಹೈದ್ರಾಬಾದ್, ಅಲಹಬಾದ್, ಪಾಟ್ನಾ, ಸೋನಾಪೂರ, ಮಧುಬನಿ, ಭಾಗಲ್‌ಪೂರ, ಬರ್‌ಪೇಟಾ, ಗೌಹಾಟಿ, ಡಿಬ್ರುಗರ್, ಪುರುಲಿಯಾ, ರಾಂಚಿ, ಸಂಬಲಪೂರ, ಪೂರಿ, ಪೀಪ್ಲಿ, ಸಿಸುವಾ, ಬಾಂಬೆ, ಪುಣಾ, ಅಹಮದಾಬಾದ್, ಭಾವನಗರ, ಅಜಮೀರ, ಕರಾಚಿ, ಲಾಹೋರ, ಕಲ್ಕತ್ತಾ, ಕಾನಪೂರ ಹಾಗೂ ಬನಾರಸಗಳನ್ನು ಅಡ್ಡಾಡಿ ಹರಿಜನೋದ್ಧಾರದ ತನ್ನ ಕನಸನ್ನು ೧೯೩೪ರಲ್ಲಿ ಸಾಕಾರಗೊಳಿಸಿಕೊಂಡಿದ್ದ.

ದುರ್ದೈವದ ವಿಚಾರವೆಂದರೆ, ಇಂದು ಹಿಂದೂ-ಮುಸ್ಲಿಮರ ಐಕ್ಯತೆಗಾಗಿ ಹೋರಾಡಿ ಗಳಿಸಿಕೊಂಡ ಅಪನಂಬಿಕೆಯನ್ನೇ ಅಂದು ಗಾಂಧಿ ಹರಿಜನರ ವಿಷಯದಲ್ಲಿ ಗಳಿಸಿಕೊಂಡಿದ್ದ. ಈ ಹರಿನೋದ್ಧಾರದ ಕನಸು ಕಂಡು ಆಗ ಸಾಂಪ್ರದಾಯಿಕ ಹಿಂದೂಗಳಿಗೆ ಬೇಡವಾದ, ಈಗ ಹಿಂದೂಗಳ ಶ್ರೀರಾಮನನ್ನು ಹಿಡಿದು ಹರಿಜನರಿಗೆ ಬೇಡವಾಗಿದ್ದ. ಈ ಅವತಾರ ದೇವರುಗಳ ಕಾರಣಕ್ಕಾಗಿಯೇ ಅಲ್ಲವೆ ಡಾ॥ ಬಾಬಾ ಸಾಹೇಬ ಅಂಬೇಡ್ಕರ ಗಾಂಧಿಗೆ ಸಂಪೂರ್ಣ ವಿರುದ್ಧ ನೆಲೆಯಲ್ಲಿ ನಿಲ್ಲುವುದು? ಮೇಲಿನ ಆತನ ಪ್ರವಾಸದಲ್ಲಿ ಅನೇಕ ಕಡೆಗಳಲ್ಲಿ ಆತನನ್ನು ವಿರೋಧಿಸಿ ಕಪ್ಪು ಬಾವುಟಗಳನ್ನು ಹಾರಿಸಲಾಗಿತ್ತು. ತಪ್ಪಿತಸ್ಥರಿಗಾಗಿ ದೇವಸ್ಥಾನಗಳೆನ್ನುವುದಾದರೆ ಉಚ್ಚ ಕುಲದ ಹಿಂದೂಗಳ ಕಣ್ಣಲ್ಲಿ, ಶತಮಾನಗಳಿಂದ ಅಪರಾಧಿಗಳಂತೆ ಬದುಕಿರುವ ಈ ಹರಿಜನರಿಗಾಗಿ ದೇವಾಲಯಗಳು

ರ್ಷವಾಗಲೂ ತೆರೆದಿರಬೇಕು ಎಂಬ ಹೇಳಿಕೆಯನ್ನು ನೀಡಿ ಸಂಪ್ರದಾಯವಾದಿಗಳಿಂದ ಖಂಡಿಸಲ್ಪಟ್ಟಿದ್ದ. ಆತ ನಡೆದುಬಂದ ದಾರಿ ಬರೀ ಇಂತಹ ಪ್ರತಿರೋಧ, ಧಿಕ್ಕಾರ ಮತ್ತು ಅವಮಾನಗಳದ್ದು. ಗಾಂಧಿಗೆ ಅದು ಬೇಕಾಗಿತ್ತೊ, ಇಲ್ಲವೊ. ಆದರೆ ಪ್ರಾಮಾಣಿಕವಾದ ಉಪಕೃತಿಯ ಒಂದು ಸಣ್ಣ ಉಸಿರೂ ಆತನ ಕೊನೆಯ ದಿನಗಳಲ್ಲಿ ಸುಳಿಯಲಿಲ್ಲ. ಈಗ ಹಾಯ್ದು ಬಂದ ಹಾದಿಯೂ ಆತನಿಗೆ ಸ್ಪಷ್ಟವಾಗಿ ನೆನಪಿಲ್ಲ. ಆಗಾಗ ಬೇಸರಗೊಂಡು ಕುಸಿಯುತ್ತಿದ್ದಾನೆ. ಕೇಳುವವರು ಸಿಕ್ಕಾಗಲೊಮ್ಮೆ ಮತ್ತೆ ಮತ್ತೆ ಇನ್ನು ತಾನು ಬದುಕಿ ಅರ್ಥವಿಲ್ಲವೆಂದು ಹೇಳುತ್ತಾನೆ. ನವೆಂಬರ್ ೬ರಂದು ಇಂತಹುದೇ ಮಾತನ್ನು ಆತ ಡಾ.ರಾಜೇಂದ್ರ ಪ್ರಸಾದರ ಮುಂದೆ ಹೇಳಿದ್ದಾನೆ. “These days nobady listens to me. I feel God will take me away soon. There is no question now of my wishing to live for 125 years. All the while, I feel that God will give me eternal rest in the near future.” ಹೀಗೆ ಸಾವನ್ನು ನಿತ್ಯ ಕನವರಿಸುತ್ತಲೇ ಇದ್ದ ಗಾಂಧಿ.

ಗಾಂಧಿಗೆ ವೈಯಕ್ತಿಕವಾಗಿ ತಾನು ಸಾಗಿಬಂದ ದಾರಿಯ ಬಗೆಗೆ ಏನಾದರೂ ಮೋಹವಿದೆಯೇ? ಅದನ್ನು ಆತನೇ ಉತ್ತರಿಸಬೇಕು. ಆದರೆ ಇಡೀ ವಿಶ್ವದ ಜನತೆ ಆತನನ್ನು ಗಮನಿಸುತ್ತಲೇ ಇದ್ದಾರೆ. ಪರಿಚಿತರು-ಅಪರಿಚಿತರು, ದೂರದವರು-ಹತ್ತಿರದವರು, ಬೇಕಾದವರು-ಬೇಡವಾದವರು. ಅವರಲ್ಲಿ ಇಬ್ಬರು, ಅಮೇರಿಕನ್ ಪ್ರೇಮಿಗಳು. ೧೯೪೭ರ ನವೆಂಬರ್ ೭ರಂದು ಅವರು ಈ ಸಾಲುಗಳನ್ನು ಬರೆದು ಗಾಂಧಿಗೆ ಕಳುಹಿಸುತ್ತಾರೆ, “ಬಾಪು, ನಿಮಗೆ ಅಭಿನಂದನೆಗಳು. ಈ ಪತ್ರದ ಉದ್ದೇಶವಿಷ್ಟೆ, ನಿಮ್ಮ ಸುಂದರಾತಿಸುಂದರ ವಿಚಾರಗಳು, ಸಂದೇಶಗಳು, ಈಗ ಇಡೀ ಪ್ರಪಂಚವನ್ನೇ ವ್ಯಾಪಿಸಿವೆ. ಭಾರತದಲ್ಲಿಯ ಸದ್ಯದ ಬೆಳವಣಿಗೆಗಳ ಬಗೆಗೆ ನಿಮಗೆ ತುಂಬಾ ಬೇಸರವಿದೆ ಎನ್ನುವುದೂ ನಮಗೆ ಗೊತ್ತು. ಸಾಧನೆಯ ದಾರಿಯಲ್ಲಿ ಇವೆಲ್ಲವೂ ಸ್ವಾಭಾವಿಕ. ಇಂದೇ ಊರಿದ ಬೀಜ ಈ ಕ್ಷಣದಲ್ಲಿಯೇ ಮರವಾಗಿ, ಹೂ ಬಿಟ್ಟು, ಪರಿಮಳ ಹಬ್ಬಿಸುವುದಿಲ್ಲ. ಬೆಳವಣಿಗೆಯ ಅನೇಕ ಘಟ್ಟಗಳಿವೆ, ಪ್ರತಿ ಘಟ್ಟದಲ್ಲಿಯೂ ಅನೇಕ ಕುತ್ತುಗಳಿವೆ. ಒಂದು ಉದ್ಯಾನವನವನ್ನು ನೋಡಿಕೊಳ್ಳುವ ಒಬ್ಬ ಜಾಡಮಾಲಿ ಕೆಲವು ಸಸಿಗಳ ಬಗೆಗೆ ಬಹಳ ನಿಗಾ ವಹಿಸಿರುತ್ತಾನೆ. ಕಣ್ಣುರೆಪ್ಪೆಗಿಂತ ಜೋಪಾನವಾಗಿ ನೋಡಿಕೊಳ್ಳುತ್ತಾನೆ. ಅವನದು ಅವುಗಳದ್ದು ವಿಚಿತ್ರ ಸಂಬಂಧ. ಆದರೆ ಅವು ಬೆಳೆಯಲೊಲ್ಲವು, ಆತ ಬೆಳಸದೇ ಬಿಡಲೊಲ್ಲ. ಆದರೆ ಪಕ್ಕದ ಅನೇಕ ಸಸಿಗಳು ಆ ಜಾಡಮಾಲಿಯ ಪ್ರೀತಿಯ ಸ್ಫೂರ್ತಿಯಿಂದ ಸಹಜವಾಗಿ ಸೊಗಸಾಗಿ ಬೆಳೆದು ನಿಲ್ಲುತ್ತವೆ. ಹಾಗೆಯೇ ಹೊರದೇಶಿಗರಾದ ನಾವೂ ನಿಮ್ಮೊಂದಿಗಿದ್ದೇವೆ. ವರ್ಗ, ಜನಾಂಗ, ಜಾತಿ, ದೇಶಗಳಿಂದ ಮುಕ್ತರಾಗಿ ಪ್ರಪಂಚದ ಅನೇಕ ರಾಷ್ಟ್ರಗಳಿಂದ ಬರುವ ನಮ್ಮನ್ನೂ ನಿಮ್ಮೊಂದಿಗೆ ದಯವಿಟ್ಟು ಸೇರಿಸಿಕೊಳ್ಳಿ.

ನಿಮ್ಮ ಸಾಮೀಪ್ಯದಿಂದ ನಮಗೆ ಧೈರ್ಯ, ಸ್ಫೂರ್ತಿ ಸಿಗುತ್ತದೆ. ನಮ್ಮ ಗುರಿಗಳು ನಮಗೆ ಸ್ಪಷ್ಟವಾಗುತ್ತವೆ. ದೇವರು ಸದಾ ನಿಮ್ಮನ್ನು ಹೀಗೆಯೇ ಸ್ಫೂರ್ತಿಯ ಚಿಲುಮೆಯಾಗಿರಿಸಲಿ."

ಅಗಾಧ ಕತ್ತಲೆಯಲ್ಲಿ ಮಿಣುಕು ದೀಪದಂತೆ ತಲುಪುವ ಇಂತಹ ಸಾಲುಗಳು ಗಾಂಧಿಯ ಕಣ್ಣನ್ನು ಒದ್ದೆಗೊಳಿಸಿರಬಹುದು. ಒಂದೆಡೆ ವಿಶ್ವವೇ ಆತನನ್ನು ಕೈ ಬೀಸಿ ಕರೆಯುತ್ತಿದೆ. ಇನ್ನೊಂದೆಡೆ ಆತನಿಗೆ ತನ್ನ ನೆಲದಲ್ಲಿಯೇ ಅನೇಕ ವಿಭಜನೆ, ವಿತಂಡವಾದ, ಅಮಾನುಷತೆ, ಅಧ್ಯಾತ್ಮದ ಬೆಳಕಿಲ್ಲದ ಮೃಗಗಳಿಗಿಂತಲೂ ಕನಿಷ್ಠವಾದ ಬದುಕು ಆತ ತನ್ನ ಇಡೀ ಪಥವನ್ನೇ ಸಂಶಯಿಸುವಂತೆ ಮಾಡಿವೆ. ಅತ್ತ ಅಮೇರಿಕನ್ ಪ್ರೇಮಿಗಳಿಬ್ಬರು ನೀವು ನಮ್ಮ ಆಶಾಕಿರಣ, ಸ್ಫೂರ್ತಿಯ ಚಿಲುಮೆ ಎಂದು ಹೇಳುತ್ತಿದ್ದರೆ, ಇತ್ತ ಭಾರತೀಯ ಸೇನೆಯ ಮೇಜರ್ ಜನರಲ್ ಕೆ.ಎಂ.ಕಾರ್ಯಪ್ಪ ಭಾರತದ ಸದ್ಯದ ಸ್ಥಿತಿಯಲ್ಲಿ ಗಾಂಧಿಯ ಅಹಿಂಸಾವಾದ ಅಪ್ರಸ್ತುತ ಎಂದು ಬಹಿರಂಗ ಹೇಳಿಕೆ ಕೊಡುತ್ತಾರೆ. ಎಂಥ ವಿಪರ್ಯಾಸವಲ್ಲವೆ? ಅಮೇರಿಕಾದ ಪ್ರೇಮಿಗಳಿಬ್ಬರ ಪತ್ರಕ್ಕೆ ಗಾಂಧಿ ಉತ್ತರಿಸುವುದಿಲ್ಲ. ಅವರು ದೂರವಿದ್ದೂ ಹತ್ತಿರದವರು; ಯುದ್ಧದ ಮುಖ ಬಲ್ಲವರು. ಕಾರ್ಯಪ್ಪನವಗೆ ಗಾಂಧಿ ಉತ್ತರಿಸಲೇಬೇಕಿದೆ. ಉತ್ತರಿಸುತ್ತಾನೆ. ಯಾಕೆಂದರೆ ಅದು ಸರ್ವಾಧಿಕಾರಿಯ ಗುಡುಗು, ಹಿಂಸೆಯ ಮುನ್ಸೂಚನೆ, ಭಾರತ ಪೂರ್ವದ ಎಲ್ಲ ರಾಷ್ಟ್ರಗಳಂತಾಗುವ ಸಂಕೇತ. ಗಾಂಧಿ ಬರೆಯುತ್ತಾನೆ "ಈ ದೇಶದ ಅನೇಕ ಅತೀ ಬುದ್ಧಿವಂತರಂತೆ ಕಾರ್ಯಪ್ಪ ಮಾತನಾಡಿದ್ದಾರೆ. ನಾನಿನ್ನೂ ಈ ನಿಟ್ಟಿನಲ್ಲಿ ಅಪೂರ್ಣ, ಆದರೆ ಅಹಿಂಸೆಯನ್ನು ನಂಬಿಕೊಂಡು ಸಾಕಷ್ಟು ದಾರಿಯನ್ನು ಕ್ರಮಿಸಿದ್ದೇನೆ. ಪರಸ್ಪರ ಹಿಂಸೆಗಾಗಿ, ಗೆಲುವಿಗಾಗಿ ಆಟಂಬಾಂಬ್, ಯುದ್ಧ ಪರಿಕರಗಳನ್ನು ಬಳಸುವ ಈ ಕಾಲದಲ್ಲಿ ಅಹಿಂಸೆಯೊಂದೇ ಬದುಕಿನ ಆಶಾಕಿರಣ. ಸೇನಾಧಿಕಾರಿಯಾಗಿ ಮಾತನಾಡುವವರಿಗೆ ಎಂದಿಗೂ ಅಹಿಂಸೆಯ ಮಹತ್ವ ಗೊತ್ತಾಗುವುದಿಲ್ಲ. ಮಿಲ್ಟ್ರಿ ವಿಜ್ಞಾನ ಯಾವ ರಾಷ್ಟ್ರಗಳಲ್ಲಿ ಹುಟ್ಟಿತೋ ಅದು ಅಲ್ಲಿಯೇ ನೆಲಕಚ್ಚಿದೆ. ಜೂಜಾಡಿ ಮನೆ-ಮಠ ಕಳೆದುಕೊಂಡವನು ಯಾವುದೇ ಕಾರಣಕ್ಕೂ ಜೂಜಿನ ಮಹತ್ವ ಕುರಿತು ಹಾಡು ಹಾಡಬಾರದು." ಗಾಂಧಿ ಈ ದಿನ, ಭಾರತ ಶಾಂತಿಯ ಪಥದಲ್ಲಿಯೆ ಸಾಗಬೇಕಾದುದು, ಅಹಿಂಸೆಯ ದಾರಿಯಲ್ಲೇ ಹೋಗಬೇಕಾದುದು ಅತ್ಯಂತ ಮಹತ್ವದ್ದು ಎಂದು ಹೇಳಿದಷ್ಟೇ ಮುಖ್ಯವಾಗಿ ಇಡೀ ಏಷಿಯಾದಲ್ಲಿ ಭಾರತ ಮತ್ತು ಚೈನಾ ಹೇಗಿರಬೇಕೆನ್ನುವುದನ್ನು ತನ್ನ ಸಂದರ್ಶಕನೊಬ್ಬನಿಗೆ ಸ್ಪಷ್ಟಪಡಿಸಿದ್ದಾನೆ. ಆತ ಹೇಳುತ್ತಾನೆ "Peace in Asia depends on India and Chaina. And if they together build their edifices on ahimsa, they will become known among the great countries in the world."

ಸಾವಿನ ತೊಡೆಯ ಮೇಲೂ ಬದುಕಿನ ಶಿಸ್ತು ಮತ್ತು ಸಂಯಮದ ಗತಿ ವಿಚಲವಾಗಬಾರದು ಎಂದುಕೊಂಡವ ಗಾಂಧಿ. ಇಂತಹ ಒಂದು ಜೀವನಶೈಲಿಯೇ

ಪ್ರಪಂಚದ ಬಹುತೇಕ ಗಮನವನ್ನು ಸೆಳೆದಿರಬಹುದು. ವರ್ತಮಾನದ ನಮ್ಮ ಯಾವ ಸರ್ವಾಧಿಕಾರಿಗಳಿಗೂ, ಮಠಾಧೀಶರಿಗೂ, ಸಾಧು-ಸಂತರಿಗೂ, ರಾಜಕಾರಣಿ, ಸಿನಿಮಾ ತಾರೆಯರಿಗೂ ಇಲ್ಲದ ಒಂದು ವಿಶಿಷ್ಟ ಆಕರ್ಷಣೆ, ಸರಳತೆ ಗಾಂಧಿಯ ವ್ಯಕ್ತಿತ್ವಕ್ಕೆ ಅದು ಸೇರಿಸಿತ್ತು.

ಇದೇ ನವೆಂಬರ್ ೭ರಂದು ಇಂಡೊನೇಷಿಯಾದಿಂದ ಬಂದ ಯುವಕನೊಬ್ಬ ಗಾಂಧಿಗೆ ಈ ಮಾತನ್ನ ಕೇಳಿದ್ದಾನೆ, 'ನಿಮ್ಮ ಸುತ್ತಲೂ ಅಗಾಧ ಕತ್ತಲೆ ಇದೆ ಎಂದಿದ್ದೀರಿ, ಅನೇಕ ರೀತಿಯ ಭಯಾನಕ ಸಮಸ್ಯೆಗಳು ನಿಮ್ಮ ನೆಮ್ಮದಿಯನ್ನು ಕೆಡಿಸಿವೆ ಎಂದು ನಮಗೂ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಆದಾಗ್ಯೂ ಈ ಎಲ್ಲ ತಲ್ಲಣಗಳ ಮಧ್ಯ ನೀವು ಇಷ್ಟೊಂದು ನೆಮ್ಮದಿಯಿಂದ ಇರುವುದಾದರೂ ಹೇಗೆ ಬಾಪು? ನಿಮ್ಮ ಈ ಯಶಸ್ಸಿನ ಗುಟ್ಟೇನು?' ಹೀಗೆ ಏನಾದರು ನಮ್ಮ ಜಗಭಾರ ಜಗದ್ಗುರುಗಳಿಗೆ, ಅರೆಬೆಂದ ನಾಯಕರಿಗೆ ಕೇಳಿದ್ದರೆ ಅದು ಯಾವ ಯಾವ ಬೆಟ್ಟ-ಗುಡ್ಡ-ಪುಸ್ತಕಗಳನ್ನು ಸುತ್ತಿ ಬರುತ್ತಿದ್ದರೊ! ಆದರೆ ಗಾಂಧಿ ಕೊಡುವ ಉತ್ತರ ಅವನಷ್ಟೇ ಸರಳ. 'ಆರೋಗ್ಯವನ್ನ ಸರಿಯಾಗಿ ನೋಡಿಕೊಳ್ಳುತ್ತೇನೆ, ಅಮಾನವೀಯತೆ ಮತ್ತು ಕತ್ತಲೆಯ ಮಧ್ಯವೂ ನಗುತ್ತ ಬಾಳೋಣ ಎಂದುಕೊಂಡಿದ್ದೇನೆ. ಪ್ರಪಂಚದಲ್ಲಿ ನನಗೆ ಯಾರೂ ವೈರಿಗಳಿಲ್ಲ ಎಂದುಕೊಳ್ಳುತ್ತೇನೆ, ಎಲ್ಲರೂ ದೇವಸ್ವರೂಪ ಅವರ ಸೇವೆಯೇ ದೇವರ ಸೇವೆ. ಈ ಭಾವನೆಯೇ ನನ್ನ ನೆಮ್ಮದಿಯ ಸೂತ್ರ' ಎಂದು ಹೇಳುತ್ತಾನೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಬೇಡಿಕೊಳ್ಳಿರೊ ಎನ್ನುವಂತೆ ಗಾಂಧಿ ನಿಮ್ಮಿಂದಲೇ ಎಲ್ಲವೂ ಎಂದು ಮುಗುಳ್ನಗುತ್ತಾನೆ. ಆದರೆ ಸಾವು ಎಲ್ಲೋ ಹೊಂಚು ಹಾಕುತ್ತಿದೆ. ಅದು ಯಾವ ಕ್ಷಣದಲ್ಲಿಯೂ ವಕ್ಕರಿಸಬಹುದು ಎನ್ನುವ ಎಚ್ಚರಿಕೆ ಆತನಿಗೆ ಇದ್ದೇ ಇದೆ. ಹೀಗಾಗಿಯೆ, ಸೇರಿದ ಜನರೆಲ್ಲ ನಿರ್ಗಮಿಸಿದ ಮೇಲೆ ಆ ಇಂಡೊನೇಷಿಯನ್ ಅಭಿಮಾನಿಗಳನ್ನು ಸಮೀಪ ಕರೆದು ಅವರಿಗೆ ಮತ್ತೆ ತನ್ನ ಸಾವಿನ ಸುಳಿವನ್ನು ಕೊಟ್ಟಿದ್ದಾನೆ ಗಾಂಧಿ. ಜೊತೆಗೆ, ಇಡೀ ಪ್ರಪಂಚದಲ್ಲಿ ತಾನೆಷ್ಟು ಸಣ್ಣವ ಎನ್ನುವ ಚಿತ್ರವನ್ನು ಅವರ ಮನದಲ್ಲಿ ಬಿಡಿಸಿದ್ದಾನೆ. ಅವರಿಗೆ ಆತನ ಕೊನೆಯ ಮಾತು, "If you have occasion to come this way again, and I am still alive, do come and see me. I am neither a great saint, nor a Mahatma. I am only a humble servent of man and as human as you are."

ಅದೇಕೋ ಗೊತ್ತಿಲ್ಲ, ಈ ಮಾತುಗಳನ್ನಾಡುವಾಗ ಗಾಂಧಿಗೆ ತನಗೆ ಗೊತ್ತಿಲ್ಲದಂತೆಯೆ ಆತನ ಕಣ್ಣು ಒದ್ದೆಯಾದವು. ಕತ್ತಲಾಯಿತು, ಬಂದವರಿಗೆಲ್ಲರಿಗೂ ಹೋಗಲೇ ಬೇಕಾದ ಒತ್ತಡ, ಆದರೆ ಈ ಗಾಂಧಿ ಮಾತ್ರ ಇಲ್ಲಿಯೇ ಇರುತ್ತಾನೆ- ಎಲ್ಲ ಒತ್ತಡಗಳನ್ನು ಸಹಿಸಿಕೊಳ್ಳುವ ಹೆಬ್ಬಂಡೆಯಂತೆ.

❑



ಲಾಹೋರಿಗೆ ಹೋಗಲು ಬಿಡು ಬಾಪು

ದೇಶ ಸ್ವಾತಂತ್ರ್ಯದ ವೇಳೆಯಲ್ಲಿ ಎಲ್ಲ ಒಗ್ಗಟ್ಟಾಗಿತ್ತು ಎಂಬುದು ಒಂದು ರೋಮಾಂಚನದ ವಾಕ್ಯ. ಆದರೆ ಸತ್ಯವಲ್ಲ. ಐಕ್ಯತೆ, ಸಾಮರಸ್ಯ, ವಿಶ್ವಬಾಂಧವ್ಯ ಎಲ್ಲ ಅದ್ಭುತ ಆದರ್ಶಗಳು. ಇದನ್ನು ಸಾಧಿಸುವತ್ತ ಸಾಗುವ ದಾರಿಯಲ್ಲಿಯೇ ಜೀವನ ವ್ಯವಹಾರ ನಡೆದುಹೋಗುತ್ತದೆ. ಪ್ರಯೋಗಶೀಲರಿಗೆ ಪದವಿಗಳು ದಕ್ಕುತ್ತವೆ. ನೀರಸವಲ್ಲದ ಇತಿಹಾಸ ರಚನೆಯಾಗುತ್ತದೆ. ಅಷ್ಟೇ. ಈ ಗಾಂಧಿಯ ಸುತ್ತಲೂ ನಡೆದಿರುವುದೂ ಇಂತಹುದೇ ಕ್ರಿಯೆ ಮತ್ತು ಪ್ರತಿಕ್ರಿಯೆ.

ಶನಿವಾರ ನವೆಂಬರ್ ೮, ಜಿ.ಡಿ.ಬಿರ್ಲಾ ಮತ್ತು ಲಾಲಾ ಶ್ರೀರಾಮ, ಗಾಂಧಿಯ ಭೇಟಿಗೆ ಬಂದಿದ್ದಾರೆ. ಇವರಿಬ್ಬರೂ ಭಾರತ ಸರಕಾರದ ಪ್ರತಿನಿಧಿಗಳಾಗಿ, ಆಹಾರ ನಿಯಂತ್ರಣ ಮತ್ತು ಭಾರತದಲ್ಲಿ ಬಟ್ಟೆ ಸಮಸ್ಯೆ

ನಿರ್ಮೂಲನೆ ಕುರಿತು ಇಂದು ಗಾಂಧಿಗೆ ತಿಳಿಹೇಳುವವರಿದ್ದಾರೆ. ಗಾಂಧಿ ಈ ವಿಚಾರಗಳನ್ನು ಕುರಿತು ಈಗಾಗಲೆ ತನ್ನ ನಿಲುವನ್ನು ಅನೇಕ ಬಾರಿ ಸ್ಪಷ್ಟಪಡಿಸಿದ್ದಾನೆ. ಸರಿಯಾದ ಆಹಾರ ಪೂರೈಕೆಗೆ ಆಹಾರ ನಿಯಂತ್ರಣ ಕಾಯ್ದೆ ಬರಬೇಕು, ಬಟ್ಟೆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕಾರ್ಖಾನೆಗಳನ್ನು ಹುಟ್ಟುಹಾಕಬೇಕು ಕೈಗಾರೀಕರಣಕ್ಕೆ ಉತ್ತೇಜನ ನೀಡಬೇಕು ಎನ್ನುವ ಇವರ ನಿಲುವನ್ನು ಗಾಂಧಿ ಸುತಾರಾಂ ಒಪ್ಪುತ್ತಿಲ್ಲ. ಈ ದೇಶದಲ್ಲಿ ೪೦ ಕೋಟಿಯಷ್ಟು ಜನರಿದ್ದಾರೆ. ಅವರಿಗೆ ಆಹಾರ ಹಂಚುವುದು, ಇನ್ನೊಂದೆಡೆ ಅವರ ಕೈಗಳಿಂದ ಇರುವ ಉದ್ಯೋಗಗಳನ್ನು ಕಸಿದು ಕಾರ್ಖಾನೆಗಳನ್ನು ಹುಟ್ಟುಹಾಕುವುದು ಗಾಂಧಿಗೆ ನಿಸ್ಸಂಶಯವಾಗಿಯೂ ಮೂರ್ಖತನ ಎನ್ನಿಸಿದೆ. ಇದರಲ್ಲಿ ರಾಜಕೀಯದ ಮತ್ತು ಸ್ವಾರ್ಥದ ವಾಸನೆ ಬಡಿದಿದೆ ಗಾಂಧಿಗೆ. ಈ ದೇಶವನ್ನು ಸ್ವಾತಂತ್ರ್ಯದ ನಂತರ ಸ್ವರ್ಗವಾಗಿಸಿಬಿಡುತ್ತೇವೆ ಎಂದು ಶ್ರೀಸಾಮಾನ್ಯನಿಗೆ ಭರವಸೆ ನೀಡಿದ ನಾವುಗಳು ಈಗ ಅದನ್ನೊಂದು ನರಕವಾಗಿಸಬಾರದು ಎನ್ನುವುದು ಆತನ ನಿಜವಾದ ಹಂಬಲ. ಅವನಿಗೆ ಗೊತ್ತು, ಹೊರಗೆ ಶಾಂತಿಯ ನಾಡು ಎನ್ನಿಸಿಕೊಳ್ಳುವ ಈ ರಾಷ್ಟ್ರದಲ್ಲಿ ಎಷ್ಟೊಂದು ಅಶಾಂತಿ, ಹಾಹಾಕಾರ ಹುಟ್ಟುತ್ತಿದೆ? ನಮ್ಮ ಬಳಿ ಆಹಾರವಿಲ್ಲದಿದ್ದರೆ ಇನ್ನೊಂದು ಕಡೆಯಿಂದ ತರೋಣ. ಒಂದು ರಾಜ್ಯದಲ್ಲಿ ಬಟ್ಟೆಯ ಕೊರತೆ ಬಂದರೆ ಮತ್ತೊಂದು ರಾಜ್ಯದ ಕಡೆಯಿಂದ ಅದನ್ನು ನೀಗಿಸಿಕೊಳ್ಳೋಣ. ಖಾದಿಯನ್ನೇ ಬದುಕಿನ ಕಾಯಕವಾಗಿಸಿಕೊಳ್ಳೋಣ. ನಿಶಾಂತ ದುಡಿಮೆ ಇರುವವರೆಗೆ ಸಾಮಾಜಿಕ ಅಪರಾಧವೂ ಕಡಿಮೆ, ಈ ಕ್ಷಣದ ನಮ್ಮ ಸಮಸ್ಯೆಯನ್ನು ನೀಗಿಸಿಕೊಳ್ಳಲು ಹೋಗಿ ಶತಮಾನಗಳವರೆಗೂ ನಿಭಾಯಿಸಿಕೊಳ್ಳಲಾಗದ ಸಮಸ್ಯೆಗಳನ್ನು ಹುಟ್ಟು ಹಾಕುವುದು ಬೇಡ ಎನ್ನುವುದು ಆತನ ಸ್ಪಷ್ಟ ಮಾತು.

ಬಿರ್ಲಾ ಮತ್ತು ಲಾಲಾ ಶ್ರೀರಾಮರಿಗೆ ಇನ್ನೂ ಚರ್ಚೆಯನ್ನು ಮುಂದುವರಿಸುವ ಆಸೆ ಇತ್ತು, ಆದರೆ ಗಾಂಧಿಯ ಬಳಿ ಸಮಯವಿರಲಿಲ್ಲ. ಯಾಕೆಂದರೆ ಪಡಬಾರದ ಕಷ್ಟಗಳನ್ನು ಪಟ್ಟು ತಿಹಾರಕ್ಕೆ ಕೆಲವು ಮುಸ್ಲಿಂ ಕುಟುಂಬಗಳು ಕಾಲ್ನಡಿಗೆಯಿಂದಲೇ ಬಂದು ಸೇರಿದ ಸುದ್ದಿ ಗಾಂಧಿಗೆ ಗೊತ್ತಾಗಿದೆ. ಈಗ ಆತನಿಗೆ ಅವರ ಬಳಿ ಹೋಗಿ ಸಾಂತ್ವನ ಹೇಳುವ ಅವಸರವಿದೆ. ಅಲ್ಲಿಗೆ ಬಂದವುಗಳೆಲ್ಲ ಮರ್ಯಾದಸ್ತ ಕುಟುಂಬಗಳೇ. ಬಂಧು, ಬಳಗ, ಭೂಮಿ, ದನ-ಕರುಗಳನ್ನು ಅವರು ಇದ್ದಕ್ಕಿದ್ದಂತೆ ಬಿಟ್ಟು ಬಂದಿದ್ದಾರೆ. ಈಗ ಅವುಗಳನ್ನೆಲ್ಲ ಭಾರತೀಯ ಸೈನ್ಯ ನೋಡಿಕೊಳ್ಳಿತ್ತಿದೆ. ಬಂದವರು ಕನಿಷ್ಟ ಒಂದು ಸಾವಿರ ಜನ. ಭಾರತಿಯ ಸೈನ್ಯವನ್ನು ಕುರಿತು, ಸರಕಾರವನ್ನು ಕುರಿತು, ಅವರು ತೆಗೆದುಕೊಳ್ಳುತ್ತಿರುವ ಕಾಳಜಿ ಕುರಿತು ಅವರ ಆಪಾದನೆಗಳೇನೂ ಇಲ್ಲ. ಅವರಿಗೆ ಪಾಕಿಸ್ತಾನದ ಲಾಹೋರಕ್ಕೆ ಹೋಗಬೇಕಿದೆ ಅಷ್ಟೆ. ಈ ಕೋರಿಕೆ ಅವರ ಬದುಕು ಕರುಣಾಜನಕವಾಗಿದೆ ಎನ್ನುವುದನ್ನು ಗಾಂಧಿಗೆ ತಿಳಿಸುತ್ತದೆ. ಮತ್ತೆ ಮತ್ತೆ ಅವರು ಗಾಂಧಿಗೆ ಹೇಳುತ್ತಾರೆ, ತಮ್ಮನ್ನು ಲಾಹೋರಿಗೆ ಕಳುಹಿಸುವ ಮೂಲಕ ಗಾಂಧಿಗೆ

ದೊಡ್ಡ ಪುಣ್ಯ ಬರುತ್ತದೆಯಂತೆ. ಆದರೆ ಈ ಬರಿಗೈದಾಸ ಗಾಂಧಿ ಹೇಳುತ್ತಾನೆ, 'I have no power in my hands.'

ನಿರಾಶ್ರಿತರ ಮುಖಗಳೆಲ್ಲ ನಿಜವಾಗಿದ್ದವೆ? ಅಥವಾ ಅವುಗಳಿಗೆ ಹಲವು ಮುಖವಾಡಗಳಿದ್ದವೆ? ಇಷ್ಟಕ್ಕೂ ಇದು ಯಾವುದರ ಫಲಶ್ರುತಿ? ಯಾರು ಹೊಣೆಗಾರರು ಇದಕ್ಕೆ? ನಮ್ಮನ್ನು ಲಾಹೋರಕ್ಕೆ ಕಳುಹಿಸಿಕೊಡಿ ಎಂದು ಗೋಗರೆಯುವ ಮೂಲಕ ಯಾವ ಉಪಕಾರವನ್ನು ಇವರು ಈ ಗಾಂಧಿಗೆ ಮಾಡುತ್ತಿದ್ದಾರೆ? ಲೋಕಕ್ಕೆ ಉಪಕರಿಸಿದವರಂತೆ ತಿಹಾರಿನ ಮುಸ್ಲಿಮರು ಗಾಂಧಿಯೊಂದಿಗೆ ಮಾತನಾಡಿದರೆ ಅತ್ತ ಪಾಕಿಸ್ತಾನದಿಂದ ನಿರಾಶ್ರಿತರೆಂದು ಬಂದವರು ದೆಹಲಿಯನ್ನ ಲೂಟಿ ಮಾಡುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದುಕೊಂಡಿದ್ದಾರೆ. ಪಾಕಿಸ್ತಾನಿಯರ ಕೈಯಲ್ಲಿ ಹಿಂಸೆ ಅನುಭವಿಸಿದ್ದೇ ಹೆಗ್ಗಳಿಕೆ ಎಂದುಕೊಂಡು ಭಾರತದಲ್ಲಿ ವಿಶೇಷ ಸವಲತ್ತುಗಳಿಗಾಗಿ ಗಾಂಧಿಯ ಮುಂದೆ ಧರಣಿ ಕೂಡ್ರುತ್ತಾರೆ. ಬಿಟ್ಟು ಬಂದ ಆಸ್ತಿಗೆ ಸಮಾನವಾಗಿ ಇಲ್ಲಿ ಆಸ್ತಿ ಬೇಕು, ಅಂಗಡಿ ಮುಂಗಟ್ಟುಗಳಲ್ಲಿ ಪುಕ್ಕಟೆ ಧಾನ್ಯಬೇಕು, ಅತ್ಯಂತ ಕಡಿಮೆ ಹಣದಲ್ಲಿ ಪಾತ್ರೆ-ಪಗಡೆ ಬೇಕು, ಸುತ್ತಾಡಲು ಕುದುರೆಗಾಡಿ ಬೇಕು, ಇದೆಲ್ಲವನ್ನು ಮುಂದೆ ನಿಂತು ಈ ಗಾಂಧಿಯೇ ಕೊಡಿಸಬೇಕು. ಯಾಕೆಂದರೆ ಇವರೆಲ್ಲ ಭಾರತಕ್ಕೆ ಬರುವ ಮೂಲಕ ಗಾಂಧಿಗೆ ಬಹಳ ದೊಡ್ಡ ಉಪಕಾರ ಮಾಡಿದ್ದಾರೆ. ಗಾಂಧಿಯ ಯಾವುದೋ ಪೂರ್ವದ ಋಣವನ್ನು ತೀರಿಸಲೆಂದೇ ದೇಶವಿಭಜನೆ ಮಾಡಿಕೊಂಡಿದ್ದಾರೆ, ಕಡಿದಾಡಿದ್ದಾರೆ, ಕೊಂದಿದ್ದಾರೆ, ರಕ್ತ ಹರಿಸಿದ್ದಾರೆ ಅಲ್ಲವೆ?

ಮತೀಯ ಎರಡು ಪದಗಳನ್ನು ಮುಂದಿಟ್ಟುಕೊಂಡು ಮತ್ತೆ ದಾಸ್ಯದ, ಗುಲಾಮಗಿರಿಯ, ಹೇವರಿಕೆಯ, ಅನಾಗರಿಕ ದಿನಗಳನ್ನೇ ಪ್ರಾರಂಭಿಸುವ ಸತ್ ಸಂಪ್ರದಾಯದ ಹಿಂದಣ ಅನಂತವನ್ನು ಮರೆಯುವ ಇವರನ್ನು ಅದೆಷ್ಟು ಗಾಂಧಿಗಳು ಬಂದರೂ ಸುಧಾರಿಸಲು ಸಾಧ್ಯವಿಲ್ಲ. ಇವರ ವರ್ತನೆಗಳು, ನಿರೀಕ್ಷೆಗಳು, ಸಂಕುಚಿತತೆಗಳು ಇವರನ್ನಷ್ಟೇಯಲ್ಲ; ಇಡೀ ದೇಶವನ್ನೇ ದಾರಿ ತಪ್ಪಿಸುತ್ತಿವೆ ಎನ್ನುವುದು ಗಾಂಧಿಗೂ ತಿಳಿದಿತ್ತು. ಅಂತೆಯೇ ಆತ ನಿರಾಶ್ರಿತರಿಗೆ ಅತ್ಯಂತ ವ್ಯಾವಹಾರಿಕವಾಗಿ ಹೇಳುತ್ತಾನೆ, "If they continue to behave like this, they are sure to loose all sympathy. I hope refugee men and women will mix with the local people like suger with milk, and make a firm resolve not to be a burden on the land."

ಈ ಮೇಲಿನ ಸಾಲುಗಳಲ್ಲಿ ಗಾಂಧಿ ನಿರಾಶ್ರಿತರಿಂದ ನಿರೀಕ್ಷಿಸುತ್ತಿರುವುದು ಮತ್ತೇನೂ ಅಲ್ಲ ಮನುಷ್ಯತ್ವವನ್ನ, ಸಾಂದರ್ಭಿಕ ತಿಳುವಳಿಕೆಯನ್ನ ಮತ್ತು ಸಹಬಾಳ್ವೆಯನ್ನ. ಯಾರಿಗಾಗಿ? ಯಾತಕ್ಕಾಗಿ? ಇನ್ನು ಅವನ ಬದುಕಿನಾವಧಿ ಎಷ್ಟು? ಬರೀ ಪ್ರತೀಕಾರದ ಹತ್ತಾರು ಪ್ರಶ್ನೆಗಳನ್ನೆತ್ತಿಕೊಂಡು ಬಂದ ಹಿಂದೂ-ಮುಸ್ಲಿಮರನ್ನು

ಹತ್ತಿರ ಕೂಡ್ರಿಸಿಕೊಂಡು ಗಾಂಧಿ ಹೇಳುತ್ತಾನೆ, "ನನ್ನ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳದೆ ಇನ್ನೊಬ್ಬರ ಮನೆ ಸ್ವಚ್ಛವಾಗಿರಲಿ, ಶಿಸ್ತಾಗಿರಲಿ ಎಂದು ಆದೇಶಿಸುವದು ತಪ್ಪು ಗೆಳೆಯರೇ. ಹುಟ್ಟು ಮತ್ತು ಅನುಸರಣೆಯಲ್ಲಿ ನಾನೊಬ್ಬ ಪರಿಶುದ್ಧ ಹಿಂದೂ. ನನ್ನ ಧರ್ಮಕ್ಕೆ ವಿಸ್ತೃತತೆಯನ್ನು ತರುವುದೇ ನನ್ನ ಕರ್ತವ್ಯ. ನಾನೀಗ ಸ್ಥಿತಪ್ರಜ್ಞ, ಶ್ರೀರಾಮನ ಕೈಹಿಡಿದುಕೊಂಡು ಈಗಾಗಲೇ ಸಾಕಷ್ಟು ಮುಂದೆ ಬಂದಿದ್ದೇನೆ. ನಾನು ಸಾಯುವಾಗ ಶ್ರೀರಾಮ ನಾಮ ಉಚ್ಚರಿಸುತ್ತಲೇ ಸಾಯಬೇಕೆಂದು ನನ್ನ ಮಹದಾಸೆ. ದಿನದಿಂದ ದಿನಕ್ಕೆ ನನ್ನ ಈ ಆಸೆ ತೀವ್ರಗೊಳ್ಳುತ್ತಿದೆ. ಒಂದು ಕಾಲವಿತ್ತು, ನನ್ನ ವೈರಿಗಳೂ ನನ್ನ ಮಾರ್ಗದರ್ಶನ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ? ನನ್ನ ಸಹಚರರೇ, ಸ್ನೇಹಿತರೇ ನನ್ನ ಕಣ್ಣೊಳಗೆ ಕಣ್ಣಿಟ್ಟು ನೋಡುತ್ತಿಲ್ಲ. ಅದೇನು ಕಾರಣವೊ; ನನ್ನ ಬಳಿಯೂ ಸುಳಿಯುತ್ತಿಲ್ಲ. ಆದಾಗ್ಯೂ ನನ್ನ ಮಾನಸಿಕ ಆರೋಗ್ಯ ಸ್ತಿಮಿತತೆಯನ್ನು ಕಳೆದುಕೊಂಡಿಲ್ಲ. ಈ ಬದುಕಿಗೆ ಶ್ರೀರಾಮ ನಾಮ ಒಂದು ಸಾಕು. ನಿದ್ದೆಯಿಂದ ಏಳುವ ಪ್ರತಿ ಮನುಷ್ಯನೂ ಹೊಸ ಬದುಕಿನ ಖುಷಿಯನ್ನು ಅನುಭವಿಸುವಂತೆ ನಾನು ರಾಮನಾಮ ಉಚ್ಚರಣೆಯಿಂದ ಪುಳಕಿತನಾಗುತ್ತೇನೆ. ಕಳೆದುಹೋದ ಹಳೆಯದನ್ನ ಮರೆತು ಬಿಡಿ. ಬೆಳಕಿನೆಡೆಗೆ, ಕರ್ತವ್ಯದೆಡೆಗೆ ಮುಖ ಮಾಡಿ."

ಗಾಂಧಿಯ ಈ ಮೇಲಿನ ಮಾತುಗಳಿಗೆ ಇನ್ನೂ ಒಂದು ಬಲವಾದ ಕಾರಣವಿದೆ. ಭಾರತದ ಆರೋಗ್ಯ ಸಚಿವೆ ರಾಜಕುಮಾರಿ ಅಮೃತಾ ಕೌರ್, ಗಾಂಧಿಗೆ ಇಷ್ಟವಾಗುವ ಡಾ. ಆಲ್ಬರ್ಟ್ ಸ್ಕ್ಯಾವಿಟ್ಜರ್‌ನ ಆತ್ಮಕಥೆಯನ್ನು ಕೆಲದಿನಗಳ ಹಿಂದೆ ಕಳುಹಿಸಿದ್ದಾಳೆ. ಆಲ್ಬರ್ಟ್‌ನ ಅನೇಕ ಆಲೋಚನೆಗಳು ಗಾಂಧಿಯ ಆಲೋಚನೆಗಳನ್ನೇ ಪ್ರತಿಫಲಿಸುತ್ತವೆ. ನಿತ್ಯ ನರಳುವ ನಾಡಿನಲ್ಲಿ ಹೊರಟ ಈ ಮುದಿ ನಾಯಕನಿಗೆ ಆಲ್ಬರ್ಟನ ಬದುಕು ಮತ್ತು ಪ್ರಯೋಗಗಳು ದೊಡ್ಡ ಸಾಂತ್ವನ ಹೇಳಿವೆ. ಆ ಸಾಂತ್ವನವನ್ನೇ ಈ ಗಾಂಧಿ ಲಕ್ಷ ಲಕ್ಷ ನಿರಾಶ್ರಿತರೊಂದಿಗೆ ಹಂಚಿಕೊಂಡಿದ್ದಾನೆ.

ಜನಪ್ರಿಯ ಇತಿಹಾಸ ಓದುವವರಿಗೆ ವರ್ಣರಂಜಿತ ವ್ಯಕ್ತಿತ್ವಗಳು ಆಕರ್ಷಿಸುವಂತೆ ಅನುಭವಜನ್ಯ ವ್ಯಕ್ತಿತ್ವಗಳು ಆಕರ್ಷಣೀಯವೆನ್ನಿಸುವುದಿಲ್ಲ. ಖಂಡಿತವಾಗಿಯೂ ಈ ಗಾಂಧಿಯದು ಭಾರತದ ವರ್ಣರಂಜಿತ ವ್ಯಕ್ತಿತ್ವಗಳಲ್ಲಿ ಒಂದಲ್ಲ. ಆತ ಈ ನೆಲದ ನುಡಿ. ನೇರವಾದುದನ್ನು ನುಡಿದು, ಅದಕ್ಕಾಗಿ ಮಡಿಯಲು ಆತ ಸಿದ್ಧನಾಗುತ್ತಾನೆ. ಆದರೆ ಅಪ್ರಿಯವಾದುದನ್ನು, ಅಪ್ರಸ್ತುತವಾದುದನ್ನು ನುಡಿಯಲಾರ, ನಡೆಯಲಾರ. ಈತನ ಈ ಧೈರ್ಯವೇ ಡಾ. ಆಲ್ಬರ್ಟ್ ಸ್ಕ್ಯಾವಿಟ್ಜರ್‌ನ ಆತ್ಮಕಥೆಯಲ್ಲಿ ಲೀನವಾಗುವಂತೆ ಮಾಡುತ್ತದೆ. ವಿಚಿತ್ರವೆಂದರೆ ಸೈನಿಕ ಶಕ್ತಿಯನ್ನು ನಂಬಿದ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಕ್ತಿತ್ವಗಳ ಮುಂದೆ ಈತ ನಿಲ್ಲುವಂತೆ ಮಾಡುತ್ತದೆ. ಈ ಹೋರಾಟವನ್ನು ಆತ ಸೌಥ್‌ಆಫ್ರಿಕಾದಿಂದ ಪ್ರಾರಂಭಿಸಿದ್ದಾನೆ. ಜಾನ್ ಸ್ಮಟ್, ಅಲಿ

ಬ್ರದರ್ಸ್, ಸುಭಾಷ್‌ಚಂದ್ರ ಬೋಸ್, ಮೊಹಮ್ಮದ್ ಅಲಿ ಜಿನ್ನಾ, ಸರ್ದಾರ್ ಪಟೇಲ್ ಹಾಗೂ ಜನರಲ್ ಕಾರ್ಯಪ್ಪರ ಮುಂದೆಯೂ ನಿಲ್ಲುವಂತೆ ಮಾಡಿದೆ. ನೆನಪಿರಲಿ, ಎಂದಿಗೂ ಗಾಂಧಿ ಇವರ ವಿರುದ್ಧವೂ ಗೆಲುವಿನ ಭಾಷೆಯನ್ನು ಮಾತಾಡುವುದಿಲ್ಲ. ಓಶೋ ಹೇಳಿದ್ದು ಸತ್ಯ, ಅದು the language of conquer. ಏನಿದ್ದರೂ ಯೋರೋಪಿನ ಭಾಷೆ. ಗಾಂಧಿ ಈ ಸತ್ಯವನ್ನು ಓಶೋನಿಗೂ ಮುಂಚೆಯೇ ತಿಳಿದವನು. ಅಂತೆಯೇ ಅಂಥದೊಂದು ಹುಚ್ಚು ಯತ್ನವನ್ನು ಆತ ಎಂದೂ ಮಾಡಲಿಲ್ಲ. ಹಾಗಂತ ತನ್ನದೇ ನಿಲುವು ಸಂಪೂರ್ಣ ಸರಿ ಎನ್ನುವ ಉದ್ಧಟತನವನ್ನು ಗಾಂಧಿ ಮೆರೆಯಲಿಲ್ಲ. ತಾನು ಸರಿಯಾದ ದಾರಿಯಲ್ಲಿ ಇರುವೆನೆ ಎನ್ನುವುದನ್ನು ಪದೇಪದೇ ತನ್ನಷ್ಟಕ್ಕೇ ಕೇಳಿಕೊಂಡ ಭಾರತದ ನೇತಾರರು ಯಾರಾದರೂ ಇದ್ದರೆ ಅದು ಗಾಂಧಿಯೆಂದೇ ಹೇಳಬೇಕು. ಈ ಮೂಲಕ ಈತ ದೊಡ್ಡವನಾಗಿಬಿಡುತ್ತಾನೆಂದು ನೀವು ಬಚ್ಚಿಟ್ಟರೂ ನಿಮ್ಮ ಕೈಯಲ್ಲಿಲ್ಲದ ಇತಿಹಾಸ ಅದನ್ನು ಬಿಚ್ಚಿಡುತ್ತದೆ. ಇದು ಕಾಲದ ಅನಿವಾರ್ಯ. ತನ್ನನ್ನು ತಾನು ಸತ್ಯಕ್ಕಾಗಿ ಹಿಂಡಿಕೊಂಡ ಹಿರಿಯ ಮನುಷ್ಯ ಈತ. ಒಂದು ದೇಶ, ಸಮಾಜಕ್ಕಾಗಿ ಒಬ್ಬ ವ್ಯಕ್ತಿ ಎಷ್ಟು ದುಡಿಯಲು ಸಾಧ್ಯವಿದೆಯೋ ಅದಕ್ಕೂ ಮೀರಿ ಜೀವ ಸವೆಸಿದ ಈತ ಬರೆಯುತ್ತಾನೆ: "These days I get so exhausted at night that I am totally lost to the world. My work goes on increasing and there is great deal of mental exhaustion."

ಅಂದಹಾಗೆ ಈಗ ಕುರುಕ್ಷೇತ್ರದ ಜನರೂ ಗಾಂಧಿಯನ್ನು ನಿರೀಕ್ಷಿಸುತ್ತಿದ್ದಾರೆ. ಜನರ ಈ ಬೇಡಿಕೆಯನ್ನು ಗಾಂಧಿಯ ಮುಂದೆ ಇಟ್ಟವಳು ಲೇಡಿ ಎಡ್ವಿನಾ. ಅತ್ತ ಗಾಂಧಿಯಂತೆಯೇ ಕೆಲಸ ಮಾಡುತ್ತಿರುವ ಲೇಡಿ ಮೌಂಟಬ್ಯಾಟನ್‌ಳೂ ಗಾಂಧಿ ಪಾಕಿಸ್ತಾನಕ್ಕೆ ಬರಬೇಕೆಂದು ನಿರೀಕ್ಷಿಸುತ್ತಾಳೆ. ಆದರೆ ಒಬ್ಬ ಗಾಂಧಿ ಹಲವು ಅವತಾರಗಳನ್ನು ತಾಳಲು ಸಾಧ್ಯವೆ? ಇಂಥ ವೇಳೆಯಲ್ಲಿ ಆತನ ಬಳಿ ಇರುವ ದಾರಿ ಮಾಧ್ಯಮಗಳು. ಅದು ವಿಶೇಷತಃ 'ಹರಿಜನ'. ತನ್ನ ಪತ್ರಿಕೆಯಲ್ಲಿ ಈ ದಿನ ಮಹಾಭಾರತದ ಪ್ರಸಂಗವನ್ನು ಎತ್ತಿಕೊಂಡು ಗಾಂಧಿ ಚರ್ಚಿಸುತ್ತಾನೆ.

ಮಹಾಭಾರತ ಯುದ್ಧ ಮುಗಿದಿದೆ. ಧರ್ಮರಾಯ ದಾರಿ ತಪ್ಪಿ ಕುಳಿತಿದ್ದಾನೆ. ಯುದ್ಧ ಆತನಿಗೆ ಗೆಲುವಿನ ಖುಷಿ ನೀಡಿಲ್ಲ. ಖುಷಿ ಆಚರಿಸಲು ಎದುರಾಳಿಗಳು ಬೇಕಲ್ಲ? ಗೆಲುವು ಯಾರಿಗೆ ಎಂದೂ ತಿಳಿಯುತ್ತಿಲ್ಲ. ತಮ್ಮ ಕೈಯಿಂದ ತಾವೇ ವಿನಾಶದ ವಿಷವನ್ನ ಕುಡಿದಂತೆ ಭಾಸವಾಗುತ್ತಿದೆ. ಅದು ಸ್ವಾಭಾವಿಕವೇ ಅಲ್ಲವೆ? ಶಕ್ತಿ, ಸೈನ್ಯ, ಸಂಸಾರ ಮತ್ತು ಸಾಮಾಜಿಕತೆಗಳಲ್ಲಿ ವೈರದ ವಿಷವನ್ನು ಹಬ್ಬಿಸಿ ನೆಮ್ಮದಿಯನ್ನು ನಿರೀಕ್ಷಿಸುವುದಾದರೂ ಹೇಗೆ? ಮಹಾಭಾರತ ಯುದ್ಧದ ನಂತರ ಕೌರವ ಪಾಂಡವರಿಬ್ಬರಿಗೂ ಶಾಂತಿಯೆನ್ನುವುದು ಹೇಗೆ ಮರೀಚಿಕೆಯಾಗಿತ್ತೊ, ಅದೇ ಈಗ ಭಾರತ ಮತ್ತು ಪಾಕಿಸ್ತಾನಗಳ ಸ್ಥಿತಿಯೂ ಕೂಡ. ಗಾಂಧಿ ಗೀತೆಯಿಂದ

ಇದನ್ನು ತಿಳಿದಿದ್ದ, ಕಲಿತಿದ್ದ. ತಪ್ಪು ದಾರಿ, ನಿರೀಕ್ಷಿತ ಫಲಿತಾಂಶ ಎಂದೂ ಸಾಧ್ಯವಿಲ್ಲ ಎನ್ನುವುದನ್ನು ಗೀತೆಯ ಮೂಲಕ ಬಾಲ್ಯದಿಂದಲೇ ಗಾಂಧಿ ಅರಿತಿದ್ದ. ಅಂತೆಯೇ ಗೀತೆಯನ್ನ 'ತಾಯಿ' ಎಂದು ಒಪ್ಪಿಕೊಂಡಿದ್ದ. ಇಂದು 'ಹರಿಜನ'ದಲ್ಲಿ ಇದೇ ಗೀತೆಯನ್ನು ಮುಂದಿಟ್ಟುಕೊಂಡು ಮನುಷ್ಯತ್ವದ ಸಾಧ್ಯತೆಗಳನ್ನು ವಿಶ್ಲೇಷಿಸಿದ್ದ.

ಗಾಂಧಿ ಎಂದರೆ ಇದು, ಯುದ್ಧಭೂಮಿಯಲ್ಲಿಯೂ ಜೀವಕ್ಕಾಗಿ ಬಡಿದಾಡುವ ಒಂದು ಹೂವನ್ನು ಗಮನಿಸುವ ಸಹನೆ, ಶಾಂತಿ ಅವನಲ್ಲಿತ್ತು. ಮಹಾಭಾರತ ಓದುತ್ತಲೇ ತನ್ನ ದೇಶದ ಗಡಿಗಳನ್ನು ದಾಟಿ ಒಬ್ಬ ವ್ಯಕ್ತಿಯಾಗಿ ತಾನು ಈ ಕ್ಷಣ ಮಾಡಬೇಕಾದ ಕರ್ತವ್ಯಗಳ ಬಗೆಗೆ ಎಚ್ಚರದಿಂದಿರುತ್ತಿದ್ದ ಗಾಂಧಿ. ಅಂದಹಾಗೆ ಅಂತಹುದೇ ಒಂದು ಘಟನೆ, ಇಂಗ್ಲಂಡಿನಲ್ಲಿ ಆರನೆಯ ಕಿಂಗ್ ಜಾರ್ಜನ ಮಗಳಾದ ಎಲಿಜೆಬೆತ್‌ಳ ಮದುವೆ ಭಾರತದ ಗವರ್ನರ್ ಜನರಲ್ ಲಾರ್ಡ್ ಮೌಂಟ್‌ಬ್ಯಾಟನ್‌ನ ಸಂಬಂಧಿ ಫಿಲಿಫ್‌ನೊಂದಿಗೆ ನಿಶ್ಚಯವಾಗಿದೆ. ಗಾಂಧಿಯ ನಿಷ್ಠಾವಂತ ಅನುಚರರಾದ ಮೌಂಟ್‌ಬ್ಯಾಟನ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ಮದುವೆಯ ನಿಮಿತ್ತ ಅಲ್ಪಾವಧಿಗೆ ಲಂಡನ್ನಿಗೆ ಹೊರಟಿದ್ದಾರೆ. ಗಾಂಧಿಗೆ ಆ ವಧುವರರಿಬ್ಬರನ್ನೂ ಆಶೀರ್ವದಿಸಿ ಏನಾದರೊಂದು ಕೊಡುಗೆಯನ್ನು ಕೊಡಲೇಬೇಕಿದೆ. ಅದಕ್ಕಾಗಿ ತಾನೇ ತಯಾರಿಸಿದ ನೂಲನ್ನು ತನ್ನ ಮೊಮ್ಮಗನಾದ ಕನು ಗಾಂಧಿಗೆ ಕಳುಹಿಸಿದ್ದಾನೆ. ಕನು ಅದನ್ನು, ಕಲಾತ್ಮಕ ಕಸೂತಿಯಲ್ಲಿ ಪರಿಣಿತಳಾದ ಪಂಜಾಬಿ ಹುಡುಗಿಯೊಬ್ಬಳಿಗೆ ಕಳುಹಿಸಿ ಟೇಬಲ್ ಕ್ಲಾತನ್ನು ಉಡುಗೊರೆಯಾಗಿ ಸಿದ್ಧಪಡಿಸಿದ್ದಾನೆ. ಮಾನವ ಜನಾಂಗದ ಸೇವೆಗಾಗಿ ಆ ಇಬ್ಬರ ಬಾಳೂ ಮುಡಿಪಾಗಿರಲಿ ಎಂದು ಹಾರೈಸಿ ಗಾಂಧಿ ಅದನ್ನು ಮೌಂಟ್‌ಬ್ಯಾಟನ್ ದಂಪತಿಗಳ ಮೂಲಕ ಲಂಡನ್ನಿಗೆ ನವವಿವಾಹಿತರಿಗೆ ಕಳುಹಿಸುತ್ತಾನೆ.

ಇದು ವಿವೇಕ. ಸಮಯಪ್ರಜ್ಞೆಗೊಂದು ಅಸಾಮಾನ್ಯ ಸಾಕ್ಷಿ. ಇತಿಹಾಸ ಮರೆಯಲಾಗದ ಉಡುಗೊರೆ. ಬಹುತೇಕ ರಾಣಿ ಎಲಿಜೆಬೆತ್ ಮತ್ತು ಫಿಲಿಫ್‌ರ ಮದುವೆಯ ಉಡುಗೊರೆಗಳಲ್ಲಿ ಇದಕ್ಕಿಂತಲೂ ಪವಿತ್ರ ಮತ್ತು ಶ್ರೇಷ್ಠ ಉಡುಗೊರೆ ಮತ್ತೊಂದಿರಲಿಕ್ಕಿಲ್ಲ. ಶತಮಾನಗಳವರೆಗೆ ಒಂದು ದೇಶದ, ಜನಾಂಗದ, ಮರ್ಯಾದೆಯ ಅನ್ನವನ್ನು ಕಸಿದುಕೊಂಡವರ ಊಟದ ತಟ್ಟೆಗೆ ಗಾಂಧಿ ಬಟ್ಟೆ ಹಾಕಬೇಕಾದರೆ ಅವನೊಳಗಿರುವ ಭಗವಂತನೇ ಬಾಗಬೇಕು. ಅದು ಈ ಕ್ಷಣದಿಂದ ಗಾಂಧಿಯಿಂದ ನಡೆಯುತ್ತಿದೆ.

ಆದರೆ ನಮ್ಮೊಳಗಿಂದೊಬ್ಬ ನಾಳೆ ಬರೆಯುತ್ತಾನೆ: ಇಡೀ ದೇಶ ಸಮಸ್ಯೆಗಳ ಸುಳಿಯಲ್ಲಿರುವಾಗ ಗಾಂಧಿ ಬ್ರಿಟಿಷ್ ದಂಪತಿಗಳಿಗೆ ಬಟ್ಟೆ ಹಾಸುವಲ್ಲಿ ನಿರತನಾಗಿದ್ದ. ದೃಷ್ಟಿಯಂತೆ ಸೃಷ್ಟಿ. ಅಷ್ಟೇ.

❑



ರೂಪ ರೂಪಗಳನು ದಾಟಿ

ಒಂದು ಮೋಜಿನ ಸಂಗತಿ. ಗಾಂಧಿಯ ಬಳಿ ಒಂದು ಟೋಪಿ ಇತ್ತು. ಅದನ್ನು ಆತ ಅತೀ ಹೆಚ್ಚು ಬಳಸಿದ್ದು ನೌಖಾಲಿಯ ಸದ್ಭಾವನಾ ಯಾತ್ರೆಯಲ್ಲಿ. ಈ ದೃಷ್ಟಿಯಲ್ಲಿ ಇದೂ ಆತನ ಅಂತಿಮ ದಿನಗಳ ಸಂಗಾತಿಗಳಲ್ಲೊಂದು. ಸುಡುಬಿಸಿಲು, ಸ್ವಲ್ಪ ಅಹಿತಕರ ಮಂಜು, ತುಂತುರು ಮಳೆ ಹೀಗೆ ಯಾವಾಗ ಯಾವಾಗ ತನ್ನ ಕೆಲಸಗಳಿಗೆ ಅಡ್ಡಿಯಾಗಬಹುದು ಎಂದು ಅನಿಸುತ್ತಿತ್ತೊ ಅಂತಹ ವೇಳೆಗಳಲ್ಲಿ ಯಾವಾಗಲೂ ಗಾಂಧಿ ಇದನ್ನು ಬಳಸುತ್ತಿದ್ದ. ಗಾಂಧಿಯ ತಲೆಯೇರಿ ಈ ಟೋಪಿ ಬೆಂಗಾಲ, ದೆಹಲಿ, ನೌಖಾಲಿಗಳನ್ನೆಲ್ಲ ನೋಡಿತ್ತು. ಈತ ಇದನ್ನು ತೊಟ್ಟುಕೊಂಡಾಗಲೆಲ್ಲ ನಗುತ್ತಿದ್ದವಳು ಮನು. ಅದು ಗಾಂಧಿಗೆ ಒಂದಿಷ್ಟೂ ಚಂದ ಕಾಣುತ್ತಿರಲಿಲ್ಲ. ಸೋಮವಾರ, ನವೆಂಬರ್ ೧೦ರಂದು ಗಾಂಧಿ ಈ ಟೋಪಿಯನ್ನು ಹಾಕಿಕೊಂಡು ನಿರಾಶ್ರಿತರನ್ನು ನೋಡಲು

ಪಾಣಿಪತ್ತಿಗೆ ಹೊರಟಾಗ ಮನು ಆಕೆಯ ಪ್ರಕಾರ ನಗಲಾರಂಭಿಸಿದಳು. ಗಾಂಧಿಗೆ ಗೊತ್ತು ಆಕೆಯ ನಗೆಯ ಅರ್ಥ. ಮೊಮ್ಮಗಳಿಗೆ ಬುದ್ಧಿ ಹೇಳಲು ಇಂತಹ ಸಂದರ್ಭವನ್ನೂ ಬಳಸಿಕೊಳ್ಳುತ್ತಾನೆ ಈ ಮುದುಕ. ಆಕೆಯ ನಗೆಗೆ ಬ್ರೇಕ್ ಹಾಕಿ ಆತ ಹೇಳುತ್ತಾನೆ, "ಅನ್ಯರಿಗೆ ನಾವು ಹೇಗೆ ಕಾಣಿಸುತ್ತೇವೆ ಎನ್ನುವುದನ್ನು ಮರೆತು ನಮಗೆ ನಮ್ಮ ವಸ್ತುವಿನಿಂದ ಲಾಭ ಏನಿದೆ ಎಂದು ಆಲೋಚಿಸುವುದನ್ನು ಕಲಿತರೆ ನಾವು ಯಾವುದೇ ಬಾಧೆಗಳಿಲ್ಲದೆ ಬದುಕಬಹುದು ಮನು. ಬೇರೆಯವರಿಗೆ ಒಳ್ಳೆಯವರಾಗಿ, ಸುಂದರವಾಗಿ, ಕಾಣಿಸುವುದಕ್ಕಾಗಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ನಮಗೇ ಹೊಂದದ ಅನೇಕ ಅಸ್ವಾಭಾವಿಕ ರೀತಿ ನೀತಿಗಳನ್ನು ನಾವು ಅನುಸರಿಸುತ್ತೇವೆ. ಆಗ ನಮ್ಮ ಸ್ಥಿತಿ ಬಹಳ ದಯನೀಯವಾಗುತ್ತದೆ. ಇವುಗಳನ್ನು ಮೀರುವುದಕ್ಕಾಗಿ ನಾನು ಈ ಟೋಪಿಯನ್ನು ಹಾಕಿಕೊಳ್ಳುತ್ತೇನೆ. ಬೇರೆಯವರಿಗೆ ಹೇಗೆ ಕಾಣುತ್ತೇನೆ ಅಥವಾ ಅಸಹ್ಯ ಕಾಣಿಸುತ್ತೇನೆ ಎಂದು ಭಾವಿಸಿ ಇದನ್ನು ಬಿಟ್ಟರೆ ರೋಗಗಳಿಗೆ ಬಲಿಯಾಗುತ್ತೇನೆ. ನಿನಗೆ ಇಷ್ಟು ತಿಳಿದರೆ ಸಾಕು. ಒಂದು ಕ್ಷಣ ನನ್ನ ಇಂದಿನ ಈ ಪಾಠವನ್ನ ಗಂಭೀರವಾಗಿ ಆಲೋಚಿಸು. ಭಾರತ ಇಂದು ಕೋಮಿನ ಹೆಸರಿನಲ್ಲಿ ಕಡಿದಾಡಿ ಸಾಯುತ್ತಿರುವುದೂ ಇಂತಹ ಒಂದು ಮನಸ್ಥಿತಿಯಿಂದಾಗಿಯೇ ಎನ್ನುವುದು ನಿನಗೇ ತಿಳಿಯುತ್ತದೆ. ಒಬ್ಬರು ಇನ್ನೊಬ್ಬರನ್ನು ಕೊಲ್ಲುತ್ತಿದ್ದಾರೆ, ಪ್ರದರ್ಶನಕ್ಕಾಗಿ, ಶಕ್ತಿಪ್ರದರ್ಶನಕ್ಕಾಗಿ, ಮತ್ತೊಬ್ಬರಿಗೆ ತೋರಿಸಿಕೊಳ್ಳುವುದಕ್ಕಾಗಿ ಮನುಷ್ಯನ ಪ್ರದರ್ಶನಾಬುದ್ಧಿ ಪ್ರಪಂಚವನ್ನು ವಿನಾಶಕ್ಕೆ ತಳ್ಳುತ್ತದೆ."

ಈ ವಿಚಾರವನ್ನು ಪ್ರಸ್ತಾಪಿಸುತ್ತ ಅದೇ ಟೋಪಿಯನ್ನು ಹಾಕಿಕೊಂಡು, ಮನುಳ ಹೆಗಲ ಮೇಲೆ ಕೈಯಿರಿಸಿಕೊಂಡು ದೆಹಲಿಯಿಂದ ೫೨ ಕಿಲೋಮೀಟರ್ ದೂರದ ಪಾಣಿಪತ್ತಿಗೆ ಗಾಂಧಿ ಹೊರಟಾಗ ಇಂದು ಜೊತೆಗಿದ್ದವರು ಮೌಲಾನಾ ಅಬ್ದುಲ್ ಕಲಾಂ ಆಜಾದ್.

ಪಾಣಿಪತ್ ಐವತ್ತು ಸಾವಿರ ಜನಸಂಖ್ಯೆಯುಳ್ಳ ಒಂದು ನಗರ. ಅದರ ಎಂಬತ್ತು ಪ್ರತಿಶತ ಜನರು ಮುಸ್ಲಿಮರೆ. ಕೋಮು ದಂಗೆಗಳ ಹಿನ್ನಲೆಯಲ್ಲಿ ನಗರದಲ್ಲಿ ಕರ್ಫ್ಯೂ ಜಾರಿಯಾಗಿದೆ. ಕನಿಷ್ಟ ೨೫ ಸಾವಿರ ಹಿಂದೂ ಮತ್ತು ಸಿಖ್ ನಿರಾಶ್ರಿತರು ಅಲ್ಲಿ ಈಗ ವಲಸೆ ಬಂದು ಧರ್ಮ ಶಾಲೆ, ರೈಲ್ವೆ ನಿಲ್ದಾಣ, ಬಸ್‌ಸ್ಟ್ಯಾಂಡ್ ದೇವಾಲಯ, ಮಸೀದಿ ಎಲ್ಲೆಂದರಲ್ಲಿ ಬೀಡುಬಿಟ್ಟಿದ್ದಾರೆ. ಗಾಂಧಿ ಈಗ ಹೆಗಲಿಗೊಂದು ಮೈಕು ಹಾಕಿಕೊಂಡು ಹಿಂದೂ-ಮುಸ್ಲಿಮರನ್ನು ಉದ್ದೇಶಿಸಿ ಮಾತನಾಡಬೇಕಿದೆ. ಆದರೆ ಇದ್ದಕ್ಕಿದ್ದಂತೆ ಮೈಕೂ ಕೈಕೊಟ್ಟಿತು, ಆತನ ಆರೋಗ್ಯ ಸರಿಯಾಗಿಲ್ಲ, ನೆಟ್ಟಗೆ ನಿಂತುಕೊಳ್ಳಲು ಒಂದು ಸ್ಥಳವೂ ಇಲ್ಲ. ಆದಾಗ್ಯೂ ಸಮೀಪದಲ್ಲಿಯೇ ಇದ್ದ ಕಲ್ಲುಗುಪ್ಪೆಯ ಮೇಲೆ ನಿಂತ ಗಾಂಧಿ ಎಲ್ಲರಿಗೂ

ಕಾಣುವಂತಾದ ಹಾಗೂ ಮೌನದ ಒಂದು ನೋಟದಿಂದಲೇ ಹೇಳಬೇಕಾದುದೆಲ್ಲವನ್ನೂ ಹೇಳಿದ. ಗಾಂಧಿ ಇಲ್ಲಿಗೆ ಬರಬೇಕು, ನಿರಾಶ್ರಿತರನ್ನು ನೋಡಬೇಕೆನ್ನುವುದು ಆಜಾದರ ಆಸೆ. ಅದು ಇಂದು ಈಡೇರಿತು. ಗಾಂಧಿ ಮತ್ತೆ ದೆಹಲಿಗೆ ಮರಳಿದ. ಆದರೆ ತಾನು ಅಲ್ಲಿ ಕಂಡುದನ್ನು ಜನರೊಂದಿಗೆ ಸಾಯಂಕಾಲದ ತನ್ನ ಪ್ರಾರ್ಥನಾ ಸಭೆಯಲ್ಲಿ ಹಂಚಿಕೊಳ್ಳಲು ಮರೆಯಲಿಲ್ಲ. ತಾನು ಪಾಣಿಪತ್‌ನಲ್ಲಿ ಏನನ್ನು ದರ್ಶಿಸಿದೆ ಎನ್ನುವುದನ್ನು ಗಾಂಧಿ ಹೀಗೆ ದಾಖಲಿಸುತ್ತಾನೆ: "ನನ್ನೊಂದಿಗೆ ಆಜಾದ್ ಇದ್ದರು. ಅಮೃತಾ ಕೌರ್ ಕೂಡ ಬರಬೇಕಾಗಿತ್ತು. ಬೇರೆಲ್ಲೋ ಹೋಗಬೇಕಾದುದರಿಂದ ಅವರು ಬಂದಿರಲಿಲ್ಲ. ಪಾಣಿಪತ್‌ನ ಆಸ್ಪತ್ರೆಗಳ ತುಂಬ, ಭೀಕರವಾಗಿ ಗಾಯಗೊಂಡ ಮುಸ್ಲಿಂ ರೋಗಿಗಳನ್ನು ನೋಡಿದೆ. ಅಮೃತಾ ಕೌರ್ ಅತ್ಯುತ್ತಮ ವೈದ್ಯರನ್ನು, ನರ್ಸ್‌ಗಳನ್ನೂ ಅಲ್ಲಿಗೆ ಕಳುಹಿಸಿದ್ದರಿಂದ ಅವರೆಲ್ಲರ ಆರೈಕೆ ಚೆನ್ನಾಗಿ ನಡೆಯುತ್ತಿದೆ. ಈ ಭೇಟಿಯ ನಂತರ ನಾನು ಅನೇಕ ಹಿಂದೂ-ಮುಸ್ಲಿಂ ನಾಯಕರನ್ನು ಭೇಟಿಯಾದೆ. ೨೫ ಸಾವಿರ ನಿರಾಶ್ರಿತರು ಬಂದಿದ್ದಾರೆ. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ನಿರಾಶ್ರಿತರ ಸಂಖ್ಯೆಯಿಂದಾಗಿ ಡೆಪ್ಯುಟಿ ಕಮಿಶನರ್ ಮತ್ತು ಪೋಲಿಸ ಅಧಿಕಾರಿಗಳು ವಿಚಲಿತರಾಗಿದ್ದಾರೆ, ತೊಂದರೆ ಇಲ್ಲ, ಸದ್ಯಕ್ಕಂತು. ಸರ್ಕಾರದ ಈ ಅಧಿಕಾರಿಗಳು ಎಲ್ಲ ಕೋಮಿನವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಅಲ್ಲಿಗೆ ಪಾಕಿಸ್ತಾನದಿಂದ ಬಂದು ಸೇರಿದ ನಿರಾಶ್ರಿತರನ್ನೂ ನಾನು ಭೇಟಿಯಾಗಿದ್ದೇನೆ. ಈ ಛಳಿಯಲ್ಲಿ ಅವರ ಸ್ಥಿತಿ ಕರುಣಾಜನಕವಾಗಿದೆ, ಸಂತೋಷವಿಷ್ಟೆ- ಪರಸ್ಪರರಲ್ಲಿ ವೈರವಿಲ್ಲ. ಅತ್ಯಂತ ಶಾಂತಿಯಿಂದಿದ್ದಾರೆ. ಆದರೆ ಇದು ಪಾಣಿಪತ್‌ನ ಜನಕ್ಕೆ ದಿಢೀರನೆ ಎರಗಿದ ಆಘಾತ. ಈ ಪ್ರಮಾಣದಲ್ಲಿ ನಿರಾಶ್ರಿತರು ಬರುತ್ತಾರೆಂದು ಅವರೆಂದೂ ಅಂದುಕೊಂಡಿರಲಿಲ್ಲ. ಮಹಿಳೆಯರು, ಮಕ್ಕಳು, ವಯಸ್ಸಾದವರು, ಅಯ್ಯಯ್ಯೋ ಕೆಲವು ಹೆರಿಗೆಗಳಂತೂ ರೈಲ್ವೆ ಸ್ಟೇಶನ್‌ಗಳಲ್ಲಿ ಆಗುತ್ತಿವೆ. ನನ್ನ ಪ್ರಶ್ನೆಯೊಂದೇ, ನಾವೆಲ್ಲರೂ ಇದನ್ನು ತಪ್ಪಿಸಲು ಸಾಧ್ಯವಿರಲಿಲ್ಲವೆ? ಜನರನ್ನು ಈ ರೀತಿಯಲ್ಲಿ ಹೊರಹಾಕುವಾಗ ಒಂದು ವಿವೇಚನೆ ಬೇಡವೆ? ಈ ಜನತೆ ಇಲ್ಲಿಗೆ ಬಂದಿರುವುದು ಪೂರ್ವ ಪಂಜಾಬಿನಿಂದ. ಅಲ್ಲಿರುವವರೂ ನನ್ನ ಸನ್ಮಿತ್ರ ಡಾ. ಗೋಪಿಚಂದ. ಅಲ್ಲಿಯ ಸದ್ಯದ ಮುಖ್ಯಮಂತ್ರಿ ಒಂದು ಕಾಲದಲ್ಲಿ ನನ್ನೊಂದಿಗೆ 'ಹರಿಜನ ಸೇವಕ ಸಂಘ' ಮತ್ತು 'ಅಖಿಲ ಭಾರತ ನೇಕಾರರ ಸಂಘ'ಕ್ಕಾಗಿ ದುಡಿದವರು. ನನಗೆ ಇನ್ನೊಂದು ಸುದ್ದಿ ಇದೆ. ಗುರುಗಾಂವ್ ಜಿಲ್ಲೆಯೊಂದರಲ್ಲಿಯೆ ಕನಿಷ್ಠ ಮೂರು ಲಕ್ಷ ಮುಸ್ಲಿಮರಿದ್ದಾರಂತೆ. ಊರುಗಳನ್ನು ಬಿಟ್ಟಿರುವ ಅವರೆಲ್ಲ ಮಕ್ಕಳು ಮರಿಗಳೊಂದಿಗೆ ಈ ಚಳಿಯಲ್ಲಿ ಕನಿಷ್ಠ ಮೂರು ನೂರು ಕಿಲೋಮೀಟರ್ ರಸ್ತೆಯ ಇಕ್ಕೆಲಗಳಲ್ಲಿ ವಾಸಿಸುತ್ತಿದ್ದಾರೆ ಎಂದು ಕೇಳಿದ್ದೇನೆ. ಈ ಸುದ್ದಿ ತಪ್ಪಾಗಿರಲೂ ಸಾಧ್ಯವಿದೆ. ನನ್ನ ಪ್ರಾರ್ಥನೆ ಇಷ್ಟೆ, ಡಾ. ಗೋಪಿಚಂದ

ಹಾಗೂ ಅವರ ಕ್ಯಾಬಿನೆಟ್ ಸರಿಯಾದ ಕ್ರಮಗಳನ್ನು ತೆಗೆದುಕೊಂಡರೆ ಬಹಳಷ್ಟು ಅನಾಹುತಗಳನ್ನು, ಅಸಹ್ಯಗಳನ್ನು ತಪ್ಪಿಸಲು ಸಾಧ್ಯವಿದೆ."

ಅತ್ತ ಭಾರತೀಯ ಸೈನ್ಯ ಜುನಾಗಡವನ್ನು ಹೊಕ್ಕಿದೆ. ಗುಜರಾತಿ ಸ್ನೇಹಿತನೊಬ್ಬ ಈಗ ಗಾಂಧಿ ಖಾಠೆವಾಡಿಗೆ ಬರಬೇಕು; ಜನರನ್ನು ಉದ್ದೇಶಿಸಿ, ಭಾರತೀಯ ಸೈನ್ಯವನ್ನುದ್ದೇಶಿಸಿ ಮಾತನಾಡಬೇಕು ಎಂದೆಲ್ಲ ಆಸೆಪಟ್ಟಿದ್ದಾನೆ. ಆದರೆ ಗಾಂಧಿ ಸ್ಪಷ್ಟ. ತಾನಿರುವ ದೆಹಲಿ ದೇಗುಲವಾಗದ ಹೊರತು ತಾನೆಲ್ಲಿಯೂ ಹೋಗುವುದಿಲ್ಲ ಎನ್ನುವ ಆತನ ನಿರ್ಧಾರ ಅಚಲ.

ತಾನು ಹುಟ್ಟಿ ಬೆಳೆದ, ಬಾಲ್ಯದ ೧೭ ವರ್ಷದ ಅದೆಷ್ಟೋ ನೆನಪುಗಳ ನೆಲವಾದ ಗುಜರಾತ್ ಅಥವಾ ಕಾಠೆವಾಡದ ಬಗೆಗೆ ಗಾಂಧಿ ನಿರ್ಮೋಹಿಯಾಗಿದ್ದಾನೆ. ಅವನಿಗೆ ಭರವಸೆ ಇದೆ. ಆದರೆ ಜಿನ್ನಾ ಹಾಗಲ್ಲ. ಗಾಂಧಿಯ ಶಾಂತಿ ಮಂತ್ರವನ್ನು, ಅಹಿಂಸಾ ತತ್ವವನ್ನು ಈತನ ನಾಡಿನಲ್ಲಿಯೇ ನೆಲಕ್ಕಚ್ಚಿಸಬೇಕ್ಕೆನ್ನುವ ಹಠ. ಹೀಗಾಗಿ ದುರ್ಬಲನಾದ ಅಲ್ಲಿಯ ನವಾಬನನ್ನು ಬಳಸಿಕೊಂಡು ಜುನಾಗಡದ ವಿಚಾರವನ್ನು ಅಂತಾರಾಷ್ಟ್ರೀಯವಾಗಿಸಲು ಹರಸಾಹಸ ಪಡುತ್ತಿದ್ದಾರೆ. ಅವರ ಈ ಪ್ರಯತ್ನಕ್ಕೆ ಉತ್ತರವೆನ್ನುವಂತೆ ಗಾಂಧಿ ನೀಡಿದ ಈ ಹೇಳಿಕೆಯನ್ನು ನೀವು ಗಮನಿಸಲೇಬೇಕು: "Hence, I find nothing illegal in this whole action. As against this, whatever the Dewan of Junagadh did, by publicly changing his mind was illegal. I look at the whole situation like this: the Nawab of Junagadh had no right at all to accede to Pakistan without the consent of his people, of which I am told that 85% are Hindus."

ಸ್ವಾತಂತ್ರ್ಯೋತ್ತರದ ರಾಜಕೀಯಕ್ಕೆ ಈ ಗಾಂಧಿ ಅಪ್ರಸ್ತುತನಾಗಿದ್ದ. ರಾಜಕೀಯದ ಕನಿಷ್ಠ ತಿಳುವಳಿಕೆಯೂ ಇಲ್ಲದ ಈತ ಸಕ್ರಿಯ ರಾಜಕಾರಣದಿಂದ ಸನ್ಯಾಸ ಘೋಷಿಸಿ, ಆಶ್ರಮಗಳಲ್ಲಿ ವಾಸಿಸಲು ಯೋಗ್ಯನಾದವ ಎಂದು ವಾದಿಸುವವರೂ ಗಾಂಧಿಯ ಈ ಮೇಲಿನ ಹೇಳಿಕೆಯನ್ನು ಮತ್ತೆ ಮತ್ತೆ ಓದಬೇಕಾದ ಅವಶ್ಯಕತೆ ಇದೆ ಎಂದು ತಿಳಿದಿದ್ದೇನೆ. ಜುನಾಗಡದ ಬಗೆಗಿನ ಆತನ ನಿಲುವು ನೆಹರು ಮತ್ತು ಸಮಕಾಲೀನ ರಾಜಕಾರಣಿಗಳಿಗಿಂತಲೂ ಸ್ಪಷ್ಟವಾಗಿತ್ತು. ಜುನಾಗಡದ ದೇವಾಲಯಗಳು ಭಾರತದ ಅಸಂಖ್ಯಾತ ಭಕ್ತರ ಆಸ್ತಿ. ಹಾಗೆ ನೋಡಿದರೆ ಇಡೀ ಭಾರತದ ಜನತೆಯ ಆಸ್ತಿ. ಇದರ ಯಾವ ಒಂದು ಸಣ್ಣ ಭಾಗವೂ ಯಾವುದೇ ರಾಜಕುಮಾರನ ವೈಯಕ್ತಿಕ ಆಸ್ತಿಯಲ್ಲ. ಬೇಕಿದ್ದರೆ ಜನರ ವಿಶ್ವಾಸದಲ್ಲಿದ್ದುಕೊಂಡು ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳಬಹುದು. ಆದಾಗ್ಯೂ ಅವರು ಜನರ ಪ್ರತಿನಿಧಿಗಳೇ. ಅವರ ಪ್ರತಿಯೊಂದು ಕ್ರಿಯೆಗೂ ಜನಮತ ಬೇಕು. ತಾವು ಯಾರೊಂದಿಗಿರಬೇಕು,

ಯಾರನ್ನು ಸೇರಿಕೊಳ್ಳಬೇಕು ಎನ್ನುವ ನಿರ್ಧಾರವೂ ಜನರಿಗೇ ಸೇರಿದ್ದು. ನವಾಬರು ತಮ್ಮ ಬಲ ಪ್ರದರ್ಶನದಿಂದ, ಮನಸಿಚ್ಛೆ ಪ್ರಾಂತಗಳನ್ನೊಯ್ದು ಭಾರತವನ್ನೋ, ಪಾಕಿಸ್ತಾನವನ್ನೋ ಸೇರಿಸಲಾಗದು ಎನ್ನುವ ವಿಚಾರವನ್ನು ಎಲ್ಲ ಕಾಲಕ್ಕೂ ಎತ್ತಿ ಹಿಡಿದಿದ್ದ ಗಾಂಧಿ, ಈ ಮಾತುಗಳು ಬರೀ ಜುನಾಗಡಕ್ಕಷ್ಟೇ ಅಲ್ಲ ಹೈದ್ರಾಬಾದ್ ಮತ್ತು ಕಾಶ್ಮೀರಗಳಿಗೂ ಅನ್ವಯವಾಗುತ್ತವೆ ಎಂದೇ ಹೇಳಿದ. ಇಡಿಯಾಗಿ ಕಾಶ್ಮೀರ ತಮಗೆ ದಕ್ಕದೇ ಹೋದರೆ ಅದನ್ನು ಜಮ್ಮು ಮತ್ತು ಕಾಶ್ಮೀರ ಎಂದು ಒಡೆದುಹಾಕಬೇಕೆನ್ನುವ ಕುತಂತ್ರಕ್ಕೂ ಗಾಂಧಿ ಒಂದು ಸ್ಪಷ್ಟ ನಿಲುವನ್ನು ತಾಳಿದ್ದ. ಇಂತಹ ವಿಭಜನೆಯನ್ನು ಸಾರಾಸಗಟಾಗಿ ಧಿಕ್ಕರಿಸಿದ್ದ. ಆತ ಬರೆದಿದ್ದ: “I have heard people talking in whispers that Kashmir could be divided, that Jammu would come to Hindus and that the Muslims could have the rest. I cannot even think of such divided loyalty and division of India’s Sates into several parts. I hope that the whole of India would act sensibly, and that this ugly situation will be avoided.”

೧೯೪೭ ನವೆಂಬರ್ ೧೨ರ ಈ ದಿನ, ಭಾರತೀಯರ ಪಾಲಿಗೆ ಅತ್ಯಂತ ಪ್ರಮುಖ ಮತ್ತು ಪವಿತ್ರ. ಇಂದು ದೀಪಾವಳಿ, ಆದರೆ ಸ್ವತಂತ್ರ ಭಾರತದ ಬೆಳಕಿಲ್ಲದ ಮೊದಲ ದೀಪಾವಳಿ. ರಕ್ತಪಾತ, ಕೊಲೆ, ಸುಲಿಗೆ, ಕಿತ್ತು ತಿನ್ನುವ ನಿರಾಶ್ರಿತರ ಸಮಸ್ಯೆ, ಹೊಯ್ದಾಟದಲ್ಲಿರುವ ಪ್ರಾಂತ್ಯಗಳು, ಮೈ ಕೊರೆಯುವ ಚಳಿ, ಒಂದೇ ಎರಡೇ? ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಗಾಂಧಿಯ ಭೆಟ್ಟಿಗೆ ಬಿರ್ಲಾಹೌಸ್‌ಗೆ ಬಂದಿದ್ದಾರೆ. ಕೃಪಲಾನಿ, ಪಟೇಲ್, ರಾಜೇಂದ್ರ ಪ್ರಸಾದ್, ಆಜಾದ್, ಕಮಲಾದೇವಿ, ಪಂಡಿತ್ ಪಂತ್, ಆಚಾರ್ಯ ದೇವ್, ಜುಗಲ್‌ಕಿಶೋರ್, ಶಂಕರ್‌ರಾವ್, ಜೆಪಿ, ಖೇರ್, ಪಟ್ಟಾಭಿ, ಎಸ್.ಕೆ.ಪಾಟೀಲ್, ಕಾಮರಾಜ್, ಪ್ರತಾಪ್‌ಸಿಂಗ್, ರಂಗಾ ಹೀಗೆ ನೆಹರೂರನ್ನು ಹೊರತುಪಡಿಸಿ ಎಲ್ಲರೂ ಇದ್ದಾರೆ. ಭಾರತದ ಪ್ರಜೆಗಳ ಬದುಕು ಕತ್ತಲೆಯಲ್ಲಿ ಇರುವುದರಿಂದ ಈ ದೀಪಾವಳಿ ಆಚರಿಸಲಾಗದು ಎನ್ನುವುದನ್ನು ಗಾಂಧಿ ಇವರೆಲ್ಲರಿಗೂ ಸ್ಪಷ್ಟಪಡಿಸುತ್ತಾನೆ. ಗಾಂಧಿಯ ಸಮೀಪ ಕುಳಿತು ಒಂದಿಷ್ಟು ಹರಟೆ ಹೊಡೆಯಬೇಕೆನ್ನುವ ಇವರಿಗೆ ಗಾಂಧಿ ಕೆಲಸದ ಒತ್ತಡ ಮತ್ತು ಅದನ್ನು ನಿಭಾಯಿಸುವ ರೀತಿಯನ್ನು ಕುರಿತು ಮಾರ್ಗದರ್ಶನ ನೀಡುತ್ತಾನೆ, ಸಮೀಪದ ಕುರುಕ್ಷೇತ್ರದಲ್ಲಿ ಎರಡು ಲಕ್ಷ ಜನ ನಿರಾಶ್ರಿತರು ಬಂದು ಬೀಡು ಬಿಟ್ಟಿದ್ದಾರೆ. ಆಲ್ ಇಂಡಿಯಾ ರೇಡಿಯೋ ಈ ಜನರನ್ನು ಉದ್ದೇಶಿಸಿ ಗಾಂಧಿ ಮಾತನಾಡಲಿರುವ ಸಂದರ್ಭಕ್ಕೆ ಸಜ್ಜಾಗಿ ಕುಳಿತಿದೆ. ಗಾಂಧಿ ಜನರಲ್ಲಿ ಆತ್ಮಸ್ಥೈರ್ಯ ಮತ್ತು ವಿಶ್ವಾಸವನ್ನು ತುಂಬುವ ತನ್ನ ಲಿಖಿತ

ಭಾಷಣವನ್ನು ಹೀಗೆ ಶುರು ಮಾಡುತ್ತಾನೆ, "ಈ ಕ್ಷಣದಲ್ಲಿ ನಾನು ನಿಮ್ಮೊಂದಿಗಿರಬೇಕಾಗಿತ್ತು ಬಂಧುಗಳೇ, ಆದರೆ ಕಾಂಗ್ರೆಸ್ಸಿನ ಕಾರ್ಯಕಾರಿ ಸಭೆಯ ಕಾರಣ ಬರಲಾಗಿಲ್ಲ. ಶ್ರೀಕೃಷ್ಣನಿಂದ ಗೀತೆಯ ಪಾಠವಾದ ಪವಿತ್ರ ನೆಲದಲ್ಲಿ ಇಂದು ಭಾರತೀಯ ಸೈನ್ಯ ನಿಮ್ಮೊಂದಿಗಿದೆ. ಭಯ ಹುಟ್ಟಿಸಲು ಅಲ್ಲ, ನಿಮಗೆ ಸೂಕ್ತ ಸಹಾಯವನ್ನು ನೀಡಲು. ನಿಮಗೊಂದು ನೆಲೆ ಮಾಡಿ ಕೊಡಲು ನಿಮ್ಮ ಬೇಡಿಕೆಗಳನ್ನು ಕೇಳುತ್ತಾ ಪೂರೈಸುವುದರಲ್ಲಿ ನಾನು ನಿರತನಾಗಿದ್ದೇನೆ, ಆದರೆ ಈ ನನ್ನ ಸೇವೆ ಬರೀ ಕುರುಕ್ಷೇತ್ರ ಅಥವಾ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಗಡಿಗಳನ್ನು ಮೀರುವುದೇ ನನ್ನ ಬದುಕಿನ ಉದ್ದೇಶವಾಗಿದೆ. ನನ್ನ ಸೇವೆ ಇಡೀ ವಿಶ್ವಕ್ಕೆ ಸೇರಿದ್ದು. ನನ್ನ ಆತ್ಮಕ್ಕೆ ಜನಾಂಗ, ಭಾಷೆ, ದೇಶಗಳ ಬಂಧನವಿಲ್ಲ. ಕುರುಕ್ಷೇತ್ರದಲ್ಲಿಯ ನಿಮ್ಮ ಸಮಸ್ಯೆಗಳನ್ನು ಸರಿಪಡಿಸುವ ಮೂಲಕ ನಾವು ವಿಶ್ವವನ್ನೂ ಸರಿಪಡಿಸಬಹುದು. ಎಲ್ಲರೂ ನಿಮ್ಮ ನೋವಿನಲ್ಲಿ ಪಾಲುಗೊಂಡಿದ್ದಾರೆ. ನಿಮ್ಮ ನೋವು ಅಪಾರ, ಆದರೆ ಎಂತಹ ಸರಕಾರಕ್ಕೂ, ಶಕ್ತಿಗೂ ಒಂದು ಮಿತಿಯಿದೆ. ಸಹನೆಯಿಂದ ಹಸನ್ಮುಖಿಗಳಾಗಿ ಸಂದರ್ಭವನ್ನು ಎದುರಿಸಿ. ಇಂದು ಈ ದೇಶಕ್ಕೆ ದೀಪಾವಳಿ ಇಲ್ಲ. ನಿಮ್ಮ ಸೇವೆಯಲ್ಲಿಯೇ ಎಲ್ಲ ದೀಪಗಳನ್ನೂ ಹೊತ್ತಿಸಿಕೊಳ್ಳಬೇಕಿದೆ. ಸಿಕ್ಕ ತಾಣಗಳಲ್ಲಿಯೇ ಸಹೋದರತೆಯ ಹಬ್ಬಗಳನ್ನು ಆಚರಿಸಿ, ಇದು ನಿಮಗೆ ಸಾಧ್ಯವಾಗುವುದಾದರೆ ಗೆಲುವು ನಿಮ್ಮದೇ."

ಹೀಗೆ ನಿರಾಶ್ರಿತರಿಗಾಗಿ, ಸಂಕಷ್ಟದಲ್ಲಿರುವವರಿಗಾಗಿ, ಸದಾ ಹಂಬಲಿಸಿದ ಈ ಗಾಂಧಿ ಇಂದು ರೂಪುಗೊಂಡವನಲ್ಲ. ಬಾಲ್ಯದಿಂದ, ಗುಜರಾತಿ ಹದಿನೇಳನೇ ಶತಮಾನದ ಸಂತ ಶ್ಯಾಮಲ ಭಟ್ಟರ ಭಜನೆಗಳನ್ನು ಕೇಳುತ್ತಲೇ ಬೆಳೆದವನು. ಆತನ ಭಜನೆಗಳಲ್ಲಿ ಒಂದು ಹೀಗಿದೆ–

> ತೊಟ್ಟು ನೀರು ಕೇಳಿದವನಿಗೆ ಹೊಟ್ಟೆ ತುಂಬ ಊಟ ಕೊಡು.
> ಒಂದು ದುಡ್ಡು ಕೊಟ್ಟವಗೆ ಬಂಗಾರವೇ ಇಟ್ಟುಬಿಡು.
> ಮುಖ ಸಿಂಡರಿಸಿದ ಮೂರ್ಖನಿಗೆ ಮುಗುಳ್ನಗೆಯ ಒಲವ ಕೊಡು
> ನಿನ್ನ ಬಳಿ ಕೊಡಲೇನೂ ಇಲ್ಲದಿರೆ ನಿನ್ನನ್ನೇ ಕೊಟ್ಟು ಬಿಡು.

ಮನುಷ್ಯ ಎಂದರೆ ಸಂಸ್ಕೃತಿ, ನಾಗರಿಕತೆ, ಅಧ್ಯಾತ್ಮ–ಆಲೋಚನೆ ಎಂದು ನೀವು ಒಪ್ಪಿಕೊಳ್ಳುವುದಾದರೆ ಇವುಗಳ ಅತ್ಯುತ್ತಮ ಪರಿಸರದಲ್ಲಿ ಬೆಳೆದ ಗಾಂಧಿಯನ್ನು ನೀವು ಅಪ್ಪಿಕೊಳ್ಳಬೇಕಾಗುತ್ತದೆ. ಅವನು ಬೆಳೆದ ಸಂಸ್ಕಾರವೇ ಅಷ್ಟು ಎನ್ನುವುದಾದರೆ ಸಂಸ್ಕಾರ ಎಂದರೇನು ಎನ್ನುವುದೇ ಬಗೆಹರಿಯದ ಪ್ರಶ್ನೆಯಾಗುತ್ತದೆ.

❑



ದೇವರನ್ನು ಹೊರದಬ್ಬಿ, ಸೈತಾನನ್ನು ತಬ್ಬಿ

೧೩ ನವೆಂಬರ್. ಗಾಂಧಿ ಪೂನಾದ ಬಳಿಯ ಉರುಳಿಕಾಂಚನಕ್ಕೆ ಹೋಗಬೇಕಾಗಿತ್ತು. ಅಲ್ಲಿ ಡಾ. ದಿನ್‌ಷಾ ಮೆಹತಾ ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಸದ್ಯದ ಎಡೆಬಿಡದ ರಾಜಕೀಯ ಸನ್ನಿವೇಶದಲ್ಲಿ ವಿಶ್ರಾಂತಿಯ ಅವಶ್ಯಕತೆ ಇರುವುದು ಗಾಂಧಿ ಮತ್ತು ಸರ್ದಾರ್ ಪಟೇಲರಿಗೆ. ಆದರೆ ಹೇಗೆ ಹೋಗುತ್ತಾನೆ ಗಾಂಧಿ? ನಿಮ್ಮ ಸೇವೆಯಲ್ಲಿಯೇ ನನಗೆ ದೇವರ ದರ್ಶನವಾಗಬೇಕೆಂದು ದೆಹಲಿಯ ಜನತೆಗೆ ಹೇಳಿ ಮತ್ತೊಂದೆಡೆ ವಿಶ್ರಾಂತಿಗೆ ಹೋಗಲು ಅವನೇನು ನಮ್ಮ ವರ್ತಮಾನದ ರಾಜಕಾರಣಿಯೇ? ಈ ದೀಪಾವಳಿಯಂತೂ ಆತನಿಗೆ ರಾಮರಾಜ್ಯದ ಸಾಕಾರಕ್ಕೆ ಇಡುವ ಮೊದಲ ಹೆಜ್ಜೆಯ ದಿನ. ನಮ್ಮೊಳಗಿರುವ ಶತ್ರುವನ್ನು ಶಾಶ್ವತವಾಗಿ ಕೊಂದು ಹೃದಯಗಳಲ್ಲಿ ದೇವರು ಹಚ್ಚಿಡುವ ಹಣತೆಗಳಿಗಾಗಿ ಮನೆ–ಮನಗಳ ಕಸ ಗುಡಿಸಲು

ಸಿದ್ಧನಾಗಿದ್ದಾನೆ ಆತ. ನವೆಂಬರ್ ೧೩ರ ಸಾಯಂಕಾಲ, ಪ್ರಾರ್ಥನಾ ಸಭೆ ಮುಗಿದಿದೆ, ಬಿರ್ಲಾಹೌಸ್ ಒಳಗಡೆ ಸುತ್ತಲೂ ಕತ್ತಲೆ, ಅನಂತರವೂ ಉಳಿದ ಕೆಲವರೊಂದಿಗೆ ಗಾಂಧಿ ಕುಳಿತಿದ್ದಾನೆ. ಅವರಿಗೆಲ್ಲ, ಅವರ ಮೂಲಕವೇ ಇಡೀ ದೇಶಕ್ಕೆಲ್ಲ ವಿಕ್ರಮ ಸಂವತ್ಸರದ ಶುಭಾಶಯಗಳನ್ನು ಹೇಳುತ್ತಾ ಗಾಂಧಿ ತಿಳಿಸುತ್ತಾನೆ, "We must kindle the light of love within, May God illumine your hearts, so that you can serve not only each other or just India but the world as a whole. In our hearts Rama should triumph over Ravana. All will be well."

ಇನ್ನೇನು ಎಲ್ಲ ಸೇರಿದ ಜನ ಹೊರಡಬೇಕು, ಗಾಂಧಿಗೆ ತಟ್ಟನೆ ಏನೋ ನೆನಪಾಯಿತು. ಒಂದು ಪತ್ರ ಬಿಚ್ಚಿದ, ಅದು 'ಹರಿಜನ' ಪತ್ರಿಕೆಗೆ ಬಂದ ಓದುಗನ ಓಲೆ. ಆತ ಕೇಳುತ್ತಾನೆ, ನಿಮ್ಮ ಆತ್ಮಕಥೆಯಾದ My Experiment with Truth ದ ಮುನ್ನುಡಿಯಲ್ಲಿ ಸತ್ಯದ ಸಂಕೇತವಾದ ದೇವರನ್ನು ಒಂದು ಅಂತರದಲ್ಲಿ ನೋಡಿದ್ದೇನೆ ಎಂದು ಬರೆದಿದ್ದೀರಿ, ಆದರೆ 'ಹರಿಜನ'ದಲ್ಲಿ ದೇವರೊಂದಿಗೆ ನಾನು ಎಂದೂ ಮುಖಾಮುಖಿಯಾಗಲಿಲ್ಲ ಎಂದೂ ಹೇಳುತ್ತೀರಿ. ಈ ನಿಮ್ಮ ದ್ವಂದ್ವ ಹೇಳಿಕೆಗಳ ಅರ್ಥಗಳೇನು?

ತನ್ನ ಸುತ್ತಲೂ ತನ್ನನ್ನು ಅತ್ಯಂತ ಜಾಗರೂಕವಾಗಿ ನೋಡುವ ಜನರನ್ನು ಹೊಂದಿದ್ದ ಗಾಂಧಿಗೆ ಮೈಮರೆಯಲು ಒಂದಿಷ್ಟೂ ಅವಕಾಶವಿರಲಿಲ್ಲ. ಆತನಿಗೆ ಸ್ವಂತದ್ದೊಂದು ಬದುಕಿರಲಿಲ್ಲ. ಹೀಗಾಗಿ ನಾಳೆ ತಾನು ಪತ್ರಿಕೆಗೆ ಕೊಡಲಿರುವ ಉತ್ತರವನ್ನು ಇಂದು ತನ್ನ ಜೊತೆಗಿದ್ದ ಗೆಳೆಯರಿಗೂ ಹೇಳಿ ಸರಿಪಡಿಸಿಕೊಳ್ಳುತ್ತಿದ್ದ. "ದೇವರನ್ನು ಮುಖಾಮುಖಿಯಾಗಿ ನೋಡುವುದಕ್ಕೂ, ಸತ್ಯದ ಸ್ವರೂಪಿಯಾಗಿ, ಅದರ ಪ್ರತಿನಿಧಿಯಾಗಿ ನೋಡುವುದಕ್ಕೂ ಮಧ್ಯೆ ಸಣ್ಣ ಅಂತರವಿದೆ. ನಾವು ಹಿಮಾಲಯವನ್ನು ಬಹಳ ದೂರದಿಂದ ನೋಡುತ್ತೇವೆ. ಆದರೆ ಹಿಮಾಲಯವನ್ನು ಹತ್ತಿ ನೋಡಿದರೆ ಅದರ ಮುಖದರ್ಶನವಾಗುತ್ತದೆ. ಕೋಟ್ಯಂತರ ಜನರು ಹಿಮಾಲಯವನ್ನು ನೂರಾರು ಮೈಲುಗಳ ಅಂತರದಿಂದ ನೋಡುತ್ತಾರೆ. ಆದರೆ, ಅವರಲ್ಲಿ ಕೆಲವರು ಮಾತ್ರ ಹಲವು ವರ್ಷಗಳ ತಮ್ಮ ಪ್ರಯತ್ನದ ನಂತರ ಅದನ್ನು ಮೇಲೆ ಹತ್ತಿ ಅದಕ್ಕೆ ಮುಖಾಮುಖಿಯಾಗುತ್ತಾರೆ. ಹೀಗೆಯೇ ನನ್ನ ಮತ್ತು ದೇವರ ಸಂಬಂಧ." ಇಷ್ಟು ಹೇಳಿ ಮುಗುಳ್ನಕ್ಕು ಗಾಂಧಿ ಎಲ್ಲರಿಗೂ ಶುಭರಾತ್ರಿ ಕೋರಿದ. ತನ್ನ ವಿರಾಮದ ಕೋಣೆಯ ಕತ್ತಲಲ್ಲಿ ಮರೆಯಾದ.

ಶುಕ್ರವಾರ, ನವೆಂಬರ್ ೧೪ರಂದು ಎಂದಿನಂತೆಯೆ ಮುಂಜಾನೆ, ಭಾರತದ ರಾಜಕೀಯ ನಾಯಕರು ಗಾಂಧಿಯೊಂದಿಗಿದ್ದಾರೆ. ವೈಚಾರಿಕವಾಗಿ ಅವರೆಲ್ಲರಲ್ಲಿ ಅದೆಷ್ಟೋ ಭಿನ್ನಾಭಿಪ್ರಾಯಗಳಿವೆ, ಆದರೆ ಗಾಂಧಿಯನ್ನು ಕಾಣುವ ಹಂಬಲದಲ್ಲಿ ಅಲ್ಲ. ರಾಜೇಂದ್ರ ಪ್ರಸಾದ್, ಕೃಪಲಾನಿ. ಜೀವರಾಜ್ ಮೆಹತಾ, ಸುಹ್ರಾವರ್ದಿ,

ಅನಂತ ರೈ, ಪಟ್ವಾನಿ, ದಾದಾ ಧರ್ಮಾಧಿಕಾರಿ ಇನ್ನೂ ಅನೇಕರು. ಅವರಿಂದ ಒಂದು ಹೂಗುಚ್ಛ ಸ್ವೀಕರಿಸಿದ ಗಾಂಧಿ ಎಲ್ಲರನ್ನೂ ಕೂಡ್ರಿಸಿಕೊಂಡು, "There must be differences of opinion but there should not be contradiction in behaviour" ಎಂದು ಹೇಳುತ್ತಾ, ಈ ಎಚ್ಚರಿಕೆ ಕಾಂಗ್ರೆಸ್ಸಿಗರಲ್ಲಿ ಮೊದಲೇ ಇದ್ದರೆ ಪಾಕಿಸ್ತಾನವೆನ್ನುವ ಹೊಸ ರಾಷ್ಟ್ರದ ಪ್ರಶ್ನೆಯೇ ಇರುತ್ತಿರಲಿಲ್ಲ ಎನ್ನುತ್ತಾನೆ ಗಾಂಧಿ. ಈ ಐಕ್ಯತೆಯ ಕೊರತೆಯೇ ದೇಶ ವಿಭಜನೆಗೆ ಕಾರಣವಾಯಿತು. ಅಪಾರ ಸಾವು, ನೋವು ಅಸೌಖ್ಯಕ್ಕೆ ಮೊದಲಾಯಿತು. ನೀವು ಒಪ್ಪಬಹುದು ಇಲ್ಲಾ ಗೋಡ್ಸೆಯಂತೆ ಧಿಕ್ಕರಿಸಲೂಬಹುದು, ಗಾಂಧಿ ಕಾಂಗ್ರೆಸ್ಸನ್ನು ಈ ಕ್ಷಣದಲ್ಲಿ ಆತ ಭಾರತದ ಒಂದು ರಾಷ್ಟ್ರೀಯ ಪಕ್ಷವಾಗಿ ಪರಿಗಣಿಸುತ್ತಿಲ್ಲ. ಬದಲಾಗಿ ವಿಶ್ವದ ಸೇವೆಯಲ್ಲಿ ತೊಡಗಿರುವ ಒಂದು ಸ್ವಯಂಸೇವಕ ಸಂಸ್ಥೆಯಂತೆ ಅದನ್ನು ಪರಿಗಣಿಸಿದ್ದಾನೆ. ಬೆಳೆಸಲಿಚ್ಛಿಸಿದ್ದಾನೆ. ಅಂತೆಯೇ The congress should die for the sake of the whole world ಎಂದು ಆತ ಎಚ್ಚರಿಸುತ್ತಾನೆ. ಆತನಿಗೆ ಜಯಪ್ರಕಾಶ್ ನಾರಾಯಣ್ ಮತ್ತು ಅವರ ಜನಪರ ಹೋರಾಟಗಳ ಕುರಿತು ಈಗ ಅಭಿಮಾನ ಉಂಟಾಗಿದೆ. ಆದರೆ ಜೆ.ಪಿ ಯ ಹೋರಾಟಕ್ಕೆ ಕಾಂಗ್ರೆಸ್ ಗೌರವವನ್ನಿಟ್ಟುಕೊಂಡಿಲ್ಲ ಎಂದೂ ಆತನಿಗೆ ಗೊತ್ತಿದೆ. ಅಂತೆಯೇ ಹೇಳುತ್ತಾನೆ: "Jayaprakash Narayan has immense energy. But he does not come forward now, because of party considerations. I feel strongly that if our country can get the benefit of whatever energy each one has, it will surely prosper" ಎಂದು ತಿಳಿಸಿ ಎಲ್ಲರನ್ನು ಬೀಳ್ಕೊಟ್ಟ ಗಾಂಧಿ.

ನಿರಾಶ್ರಿತರ ತಾಣಗಳಲ್ಲಿ ಸೇರಿದ ಜನತೆಯ ಸೇವೆಗಾಗಿ ತನ್ನವರನ್ನು ಸಿದ್ಧಮಾಡಬೇಕಾಗಿದ್ದ ಗಾಂಧಿ ಈ ಸಾಯಂಕಾಲದ ಪ್ರಾರ್ಥನಾ ಸಭೆಯನ್ನೂ ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳಲು ಆಲೋಚಿಸಿದ್ದಾನೆ. ಎ.ಐ.ಸಿ.ಸಿ.ಯ ಕೆಲವು ಮುಖಂಡರಿಗೂ ತಪ್ಪದೆ ಈ ಸಭೆಯಲ್ಲಿರಲು ತಿಳಿಸಿದ್ದಾನೆ. ಅಂದಹಾಗೆ ಇಂದಿನ ಪ್ರಾರ್ಥನೆಯ ವಿಶೇಷತೆ ಗಾಂಧಿಯ ಅತ್ಯಂತ ಪ್ರೀತಿಯ ತುಳಸಿ ಭಜನ್, "ಔರ್ ನಹೀ ಕಾಲು ಕಾಮ್ ಕೇ, ಮೈ ಭರೋಸೇ ಅಪನೆ ರಾಮ್ ಕೇ". ವಿಶೇಷತಃ ಈ ಪ್ರಾರ್ಥನೆಗೂ ಗಾಂಧಿಯ ಬದುಕಿಗೂ ಒಂದು ಅವಿನಾಭಾವ ಸಂಬಂಧ. ೧೯೪೩ ರಲ್ಲಿ ಬ್ರಿಟಿಷರು ಆತನನ್ನು ಆಗಾಖಾನ್ ಅರಮನೆಯಲ್ಲಿ ಬಂಧಿಸಿಟ್ಟಾಗ, ಪ್ರಪಂಚದಿಂದ ಮುಕ್ತನಾಗಿ ಆತ ಒಂಟಿಯಾಗಿದ್ದಾಗ ಆತ ಇದನ್ನು ಕೇಳಿದ್ದ. ಆ ಮೂಲಕ ಸಮಾಧಾನಿಸಿಕೊಂಡಿದ್ದ. ತನ್ನ ೨೧ ದಿನಗಳ ಉಪವಾಸವನ್ನು ಇದೇ ಸಾಲುಗಳನ್ನು ನಂಬಿಕೊಂಡು ಯಶಸ್ವಿಯಾಗಿಸಿಕೊಂಡಿದ್ದ. ಆ ನೆನಪನ್ನು ಇಂದು ಗಾಂಧಿ ಇಲ್ಲಿ ಎಲ್ಲರೆದುರು ಬಿಚ್ಚಿಡುತ್ತಿದ್ದಾನೆ. "೨೧ ದಿನ ಹೇಗೆ ಬದುಕಿದೆ ಎಂದುಕೊಳ್ಳುತ್ತೀರಿ? ಯಾವುದೇ ನೀರು, ಹಣ್ಣಿನ ರಸ, ವೈದ್ಯಕೀಯ ಕಾಳಜಿಗಳಿಂದ ಮಾತ್ರ ಖಂಡಿತವಾಗಿಯೂ ಅಲ್ಲ. ಈ ಪ್ರಾರ್ಥನೆಯಿಂದ, ಬರೀ ಶ್ರೀರಾಮನ

ಹೆಸರಿನಿಂದ. ಟೆಲಿಗ್ರಾಮ್ ಸಂದೇಶದ ಮೂಲಕ ಗೆಳೆಯರೊಬ್ಬರಿಂದ ನಾನು ಈ ಪ್ರಾರ್ಥನೆಯನ್ನು ತರಿಸಿಕೊಂಡೆ. ಇದರ ಅರ್ಥವಿಷ್ಟೆ, 'ರಾಮನೇ ಎಲ್ಲಾ, ಅವನ ಮುಂದೆ ಎಲ್ಲವೂ ಸೊಲ್ಲ'. ಎ.ಐ.ಸಿ.ಸಿ.ಯ ಎಲ್ಲ ಸದಸ್ಯರೂ ಈ ಶನಿವಾರ ಹಾಜರಾಗಲಿರುವ ಮಹತ್ವದ ಸಭೆಗೂ ಮುಂಚೆ ಈ ಸಾಲುಗಳನ್ನು ಸ್ಮರಿಸಿಕೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ. ಅವರು ಹಾಗೆ ಮಾಡಲೇಬೇಕು, ಏಕೆಂದರೆ ಅವರು ಹೊರಗಿರುವ ಎಲ್ಲ ಕಾಂಗ್ರೆಸ್ಸಿಗರ ಪ್ರತಿನಿಧಿಗಳು. ಹಾಗೆ ಮಾಡದೆ ಸೈತಾನನನ್ನು ತಮ್ಮ ಎದೆಗಳಲ್ಲಿ ಬಚ್ಚಿಟ್ಟುಕೊಂಡು, ದೇವರನ್ನು ಹೊರಗಿಟ್ಟು ಹೋದರೆ ಈ ದೇಶದ ಉಪ್ಪಿನ ಋಣ ತೀರದು. ಈಗ ಕೋಮುಗಲಭೆಯ ಕಾಲ ಮುಗಿದಿದೆ. ತಿಳುವಳಿಕೆಯ ಹೊಸ ಪರ್ವ ಶುರುವಾಗಿದೆ ಎನ್ನುವುದಾದರೆ ಅದು ಇಲ್ಲಿಂದಲೇ ಶುರುವಾಗಲಿ. ನಮ್ಮನ್ನು ನೋಡಿ ಆಗಲೇ ದೇಶ ಬಿಟ್ಟು ಬಂದಿರುವ ಸಿಖ್ ಮತ್ತು ಹಿಂದೂ ಸಹೋದರರನ್ನು ಪಾಕಿಸ್ತಾನ ಅವರ ನೆಲಗಳಿಗೆ, ಮನೆಗಳಿಗೆ ಮರಳಿ ಕರೆಯಿಸಿಕೊಳ್ಳಬಹುದು. ನನ್ನ ಈ ಮಾತುಗಳು ನಿಮ್ಮ ಈ ಹೃದಯಗಳನ್ನು ಕಲಕಿವೆಯೇ? ಎಐಸಿಸಿ ಈ ಎಚ್ಚರಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಹುದೇ? ನಾನು ನಿಮ್ಮನ್ನೇ ನಂಬಿದ್ದೇನೆ." ರಾಜಕೀಯ ಸಭೆಯೊಂದಕ್ಕೆ ಹೋಗುವಾಗ ಪ್ರಾರ್ಥನೆ ಹೇಳಬೇಕು, ರಾಮನ ಭಜನೆ ಮಾಡಬೇಕು ಎಂದು ಗಾಂಧಿ ಮಾತಾಡುವಾಗ ಈತನ ತಲೆ ಕೆಟ್ಟಿದೆ ಎಂದು ಕೆಲವು ಕಾಂಗ್ರೆಸ್ಸಿಗರು ಒಳಗೊಳಗೇ ನಗುತ್ತಿದ್ದರೆನ್ನಿ.

ಇಡೀ ನಾಡಿಗೆ ರಾಮ ನಾಮದ ಮಹಿಮೆಯನ್ನು, ಪ್ರಾರ್ಥನೆಯ ಮಹತ್ವವನ್ನು ಹೇಳುತ್ತಿದ್ದ ಗಾಂಧಿಗೂ ತನ್ನ ಪಕ್ಷದವರು ಇದನ್ನು ನಂಬಿರುವರೇ ಎನ್ನುವ ಸಂಶಯ ಇದ್ದೇ ಇತ್ತು. ಆದರೆ ಈ ಸಂಶಯ ಅತೀ ಮೋಹ, ಭಯ ಮತ್ತು ಒತ್ತಡದಿಂದ ಆತನಲ್ಲಿ ಸೃಷ್ಟಿಯಾದುದಲ್ಲ. ಹೀಗೆ ತಾನು ನಂಬಿದ ರಾಮನನ್ನು ಯಾರು ಎಷ್ಟರ ಮಟ್ಟಿಗೆ ನಂಬಿರಬಹುದು ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾ ನವೆಂಬರ್ ೧೫ರ ನಸುಕಿನಲ್ಲಿ ತನ್ನ ಆತ್ಮೀಯರೊಬ್ಬರಿಗೆ ಒಂದು ಪತ್ರ ಬರೆದಿದ್ದಾನೆ. ಈ ಪತ್ರವನ್ನು ನೀವು ಓದಲೇಬೇಕು–

"ಬಂಧು,

ಇತ್ತೀಚೆಗೊಂದು ಘಟನೆ, ನನ್ನೊಂದಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ, ಅದು ನಿಮಗೂ ತಿಳಿದಿರುವ ವಿಚಾರವೇ. ಅವರಿಬ್ಬರ ವಯಸ್ಸು ಮತ್ತು ಶಿಕ್ಷಣದ ಮಟ್ಟ ಒಂದೇ. ಒಬ್ಬಳು ಮನು, ಆಗಾಖಾನ್ ಅರಮನೆಯಲ್ಲಿ ನಾನು ಇದ್ದಾಗಲಿಂದ ಬಂದು ಸೇರಿಕೊಂಡವಳು, ಮೇಲಾಗಿ ನನ್ನ ಮೊಮ್ಮಗಳು. ಇನ್ನೊಬ್ಬಳು ಅಭಾ, ಇವಳು ನನ್ನ ಹತ್ತಿರದ ಸಂಬಂಧಿಯೇ. ನೌಖಾಲಿಯಲ್ಲಿದ್ದಾಗ ನಾನು ಮನುಳನ್ನು ಅನೇಕ ಪರೀಕ್ಷೆಗಳಿಗೊಳಪಡಿಸಿದೆ. ವಯಸ್ಸಿನಲ್ಲಿ ಮನು ಅಭಾಳಿಗಿಂತ ಒಂದು ವರ್ಷ ಸಣ್ಣವಳು. ಆದಾಗ್ಯೂ ನನ್ನಿಂದ ಬಹಳಷ್ಟನ್ನು ಆಕೆ ಕಲಿತಳು. ವಿಶೇಷತಃ ನನ್ನ


ಪ್ರಾರ್ಥನೆಗಳಿಂದ ಆಕೆ ಪ್ರಭಾವಿತಳಾದಳು. ಆದರೆ ಇನ್ನೊಬ್ಬಳು ಹಾಗಲ್ಲ, ಅವಳು ಎಷ್ಟರಮಟ್ಟಿಗೆ ನನ್ನ ಕ್ರಿಯೆಗಳಿಂದ ಪ್ರಭಾವಿತಳಾಗಿದ್ದಾಳೆ ಎನ್ನುವುದು ನನಗೆ ಇಂದಿಗೂ ಸ್ಪಷ್ಟವಿಲ್ಲ. ಒತ್ತಾಯದಿಂದ ಆಕೆಯನ್ನು ನಸುಕಿನಲ್ಲಿ ಎಬ್ಬಿಸುವುದಾಗಲೀ, ಪ್ರಾರ್ಥನೆಗೆ ಕೂಡ್ರಿಸಿಕೊಳ್ಳುವುದಾಗಲೀ ನನಗೆ ಎಂದೂ ಇಷ್ಟವಾಗುವುದಿಲ್ಲ. ಹಾಗೆಯೇ ನಾನು ಎಲ್ಲರೊಂದಿಗೆ. ನನ್ನ ಒತ್ತಡ ಎಲ್ಲರದೂ ಆಗಬೇಕೆಂದುಕೊಂಡವನಲ್ಲ ನಾನು. ನನ್ನ ಪಕ್ಕದಲ್ಲಿರುವ, ಎಳೆ ವಯಸ್ಸಿನ ಹೆಣ್ಣು ಮಗುವನ್ನೇ ಪ್ರಭಾವಿಸದ ನಾನು ಪ್ರಪಂಚವನ್ನು ಪ್ರಭಾವಿಸಿದ್ದೇನೆ ಎನ್ನುವ ಹುಚ್ಚು ಭ್ರಮೆಯಲ್ಲಿ ಖಂಡಿತ ಬದುಕಿಲ್ಲ. ನಿನ್ನೆಯ ಸಾಯಂಕಾಲದ ಪ್ರಾರ್ಥನೆಯಲ್ಲಿಯೂ ನೀನಿದನ್ನು ಗಮನಿಸಿರಬಹುದು. ಸರ್ವರ ಒಳಿತಿಗಾಗಿ, ಹಿತಕ್ಕಾಗಿ ನಾನು ಹೇಳಬೇಕಾದುದನ್ನು ಹೇಳಿದ್ದೇನೆ. ಎಲ್ಲವೂ ದೇವರಿಚ್ಛೆ. ಒಂದಂತೂ ಸತ್ಯ. ನನ್ನ ಉತ್ಸಾಹ, ಆತ್ಮವಿಶ್ವಾಸ ರಾಮನಾಮದಿಂದಾಗಿ ದಿನೇ–ದಿನೇ ಹೆಚ್ಚುತ್ತಿದೆ. ನಾನದನ್ನು ಒಳ್ಳೆಯ ಸಂಕೇತವೆಂದುಕೊಂಡಿದ್ದೇನೆ. ನಾನು ಸತ್ತರೂ ಚಿಂತೆಯಿಲ್ಲ. ದೆಹಲಿಯನ್ನು ಈ ಕತ್ತಲೆಯಲ್ಲಿ ಬಿಡುವುದಿಲ್ಲ. ನನಗೆ ಈ ಮಧ್ಯದ ದಾರಿ ಗೊತ್ತಿಲ್ಲ."

ಗಾಂಧಿ, ತನ್ನ ಮೇಲಿನ ಪತ್ರದಲ್ಲಿ ಚರ್ಚಿಸಿದ ಅಭಾ ಮತ್ಯಾರೂ ಅಲ್ಲ, ತನ್ನ ಛಾಯಾಚಿತ್ರಗಳ ಮೂಲಕ ಗಾಂಧಿಯನ್ನು ಪ್ರಪಂಚಕ್ಕೆ ಇನ್ನೊಂದು ರೀತಿಯಲ್ಲಿ ಕಟ್ಟಿಕೊಟ್ಟ ಗಾಂಧಿಯ ಮೊಮ್ಮಗ ಕನು ಗಾಂಧಿಯ ಹೆಂಡತಿ. ಗಾಂಧಿ ಹೇಳುತ್ತಿರುವುದಿಷ್ಟೆ, ಆತನಿಗೆ ತನ್ನ ಸಂಸಾರವನ್ನೂ ತಾನು ಸಂಪೂರ್ಣ ವ್ಯಾಪಿಸಿದ್ದೇನೆ ಎನ್ನುವ ಭ್ರಮೆ ಇಲ್ಲ. ಆಚಾರ–ವಿಚಾರ ಭಿನ್ನತೆ, ಭಾವಶುದ್ಧಿಯನ್ನು, ಸ್ನೇಹವನ್ನು ಪ್ರಭಾವಿಸಬೇಕೆಂದೇನು ಇಲ್ಲ ಎನ್ನುವುದು ಆತನ ಮತ. ಉದಾಹರಣೆಗೆ ಆತನೊಂದಿಗೆ ಮೌಲಾನಾ, ಪಟೇಲ್, ನೆಹರೂ ಹೀಗೆ ಅನೇಕರಿದ್ದಾರೆ. ಅವರೆಲ್ಲರಲ್ಲಿಯೂ ವೈಚಾರಿಕ ಸಾಮ್ಯ ಇಲ್ಲ. ಐದಾರು ದಶಕ ಜೊತೆಗಿರುವ ಜಿನ್ನಾ ಎಲ್ಲದರಲ್ಲಿಯೂ ಭಿನ್ನ. ಮೌಲಾನಾರ ಅನೇಕ ವಿಚಾರಗಳನ್ನು ಪಟೇಲರು ಒಪ್ಪುವುದಿಲ್ಲ. ಪಟೇಲರ ಅನೇಕ ನಿಲುವುಗಳೊಂದಿಗೆ ನೆಹರೂರವರ ಸಹಮತವಿಲ್ಲ, ಆದರೆ ಇವರ ಈ ವಿಚಾರ ಭಿನ್ನತೆ ದೇಶವನ್ನು, ಆಡಳಿತವನ್ನು ಹದಗೆಡಿಸಬಾರದು ಎಂದೇ ಆತನ ಎಚ್ಚರಿಕೆ. ಇದೇ ೧೫ರಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ದೆಹಲಿಯಲ್ಲಿ ಸೇರಿದಾಗ ಯಾವ ರೀತಿ ವರ್ತಿಸಬೇಕು, ಏನನ್ನು ಚರ್ಚಿಸಬೇಕು, ಅಲ್ಲಿ ಬಿರ್ಲಾ ಹೌಸ್‌ನಿಂದ ಕೂಗಳತೆಯಲ್ಲಿ ನಾಯಕರೆಲ್ಲಾ ಸೇರಿಕೊಂಡಾಗ ಸ್ವತಃ ತಾನೇನು ಮಾಡಬೇಕು ಎನ್ನುವುದರ ಸ್ಪಷ್ಟ ಅರಿವು ಗಾಂಧಿಗಿದೆ. ಈ ಕುರಿತು ತಿಳಿಸುತ್ತಾನೆ, 'ನನ್ನೊಳಗೆ ನಾನು ನೋಡಿಕೊಂಡಷ್ಟೂ ದೇವರು ನನ್ನೊಂದಿಗಿರುವ ಭರವಸೆ ನನ್ನಲ್ಲಿ ಗಟ್ಟಿಗೊಳ್ಳುತ್ತಾ ಹೋಗುತ್ತಿದೆ. ನನ್ನ ದೇವರು ನಿರ್ದೋಷಿ, ನಿರಾಕಾರಿ ಮತ್ತು ಸರ್ವಶಕ್ತ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನಡೆಯಲಿದೆ. ಅವರಿಗೆ ನಾನು ಹೇಳಿರುವುದಿಷ್ಟೆ, ಹೇಡಿಗಳಾದರೆ ಸರ್ವನಾಶವಾಗುತ್ತೇವೆ, ಕಾಂಗ್ರೆಸ್ ಇನ್ನಿಲ್ಲದಾಗುತ್ತದೆ, ಹಾಕಿಕೊಳ್ಳಬೇಕಾದ ಪ್ರಶ್ನೆಗಳು

ಅಸಂಖ್ಯಾತವಾಗಿವೆ. ರಾಷ್ಟ್ರದ ರಾಜಧಾನಿಯಲ್ಲಿ ಮತ್ತು ಗಡಿಯುದ್ಧಕ್ಕೂ ಹುಟ್ಟಿಕೊಂಡಿರುವ ಈ ಮತಾಂಧತೆಯ ಹುಚ್ಚಿಗೆ ಕಾರಣವೇನು? ಇಷ್ಟೊಂದು ಸಂಕುಚಿತರಾದ ನಾವು ರಾಷ್ಟ್ರದ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವುದು ಹೇಗೆ? ಇಂತಹ ಪ್ರಶ್ನೆಗಳ ಕರಾಳ ನೆರಳಿನಲ್ಲಿ ಇಂದು ಸಭೆ ನಡೆಯುತ್ತಿದೆ. ಸೇರಿದವರೆಲ್ಲರೂ ಬುದ್ಧಿಯನ್ನು ಪರಚಿಕೊಳ್ಳಬೇಕಿದೆ. ಕಾಂಗ್ರೆಸ್ಸನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ. ಕಳೆದ ೬೦ ವರ್ಷಗಳಿಂದ ಹಿಂದೂ–ಮುಸ್ಲಿಮರ ಐಕ್ಯತೆಯೇ ಕಾಂಗ್ರೆಸ್ಸಿನ ಬುನಾದಿಯಾಗಿದೆ. ಬರೀ ಹಿಂದೂಗಳಿಗಾಗಿ ಕಾಂಗ್ರೆಸ್ ಹಿಂದೆಂದೂ ಹೋರಾಡಿಲ್ಲ. ಯಾವ ತತ್ತ್ವ ಸಿದ್ಧಾಂತಗಳನ್ನು ಅದು ಪೋಷಿಸಿಕೊಂಡು ಬಂದಿದೆಯೋ ಅದನ್ನೇ ಈಗ ಅದು ಬಲಿಕೊಡಬಹುದೇ? ಕಾಂಗ್ರೆಸ್ ಸಮಗ್ರ ಭಾರತೀಯರದ್ದು. ಮುಸ್ಲಿಮ್, ಕ್ರಿಶ್ಚಿಯನ್, ಪಾರಸಿ ಹೀಗೆ ಅನೇಕರು ಇದರ ಅಧ್ಯಕ್ಷರುಗಳಾಗಿದ್ದರು, ಅದು ಸಮಗ್ರ ಭಾರತದ ಮಾನವ ಸಮುದ್ರದ ಪ್ರತಿನಿಧಿ. ಅದು ಕೆಲವರ ಸ್ವತ್ತಾಗುವುದನ್ನು ನಾನೆಂದೂ ಪ್ರೋತ್ಸಾಹಿಸುವುದಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ಜವಾಬ್ದಾರಿಗಳನ್ನು ನಾವು ಸಮಾನವಾಗಿ ಹಂಚಿಕೊಂಡಿದ್ದೇವೆ. ಅಂದಿಗಿಂತ ಇಂದು ನಮ್ಮ ಜವಾಬ್ದಾರಿ ನೂರ್ಮಡಿಗೊಂಡಿದೆ, ಆದರೆ ಇಂದು ನಡೆದಿರುವುದೇನು? ಮುಸ್ಲಿಮರಿಗೆ ಭದ್ರತೆ ಇಲ್ಲ. ಚಲಿಸುವ ರೈಲುಗಳಿಂದ ಹೊರದಬ್ಬಿ ಅನೇಕ ಕಡೆ ಮುಸ್ಲಿಂರನ್ನು ಕೊಲ್ಲಲಾಗಿದೆ. ನಾವು ಇದನ್ನು ತಡೆಯಬೇಕಿದೆ. ಮತ್ತೆ ಹೇಳುತ್ತಿದ್ದೇನೆ, ಕಾಂಗ್ರೆಸ್ ಯಾರೊಬ್ಬರ ಆಸ್ತಿಯೂ ಅಲ್ಲ. "Atleast I will not allow that. I am an Indian to the last. Ever since I returned from South Africa, I have tried to serve the Congress in every way and I have done practically nothing else. I have tried to understand India from different walks of life, I have lived with them, eaten with them and I have loved them. I have seen no difference between 'Harijan's and others, That is how I am made."

ಪಾಕಿಸ್ತಾನವನ್ನು ಗಮನದಲ್ಲಿಟ್ಟುಕೊಂಡೇ, ಅಲ್ಲಿಯ ಮಾನವವಿರೋಧಿ ಕೃತ್ಯಗಳನ್ನು ನೆನಪಿಸಿಕೊಂಡೇ ತನ್ನೆದುರು ಕುಳಿತ ಭಾರತೀಯರಿಗೆ ತನ್ನ ಮೆಚ್ಚಿನ ಸರ್ಮನ್ ಆನ್ ದ ಮೌಂಟ್‌ನ ಈ ಸಾಲುಗಳನ್ನು ಹೇಳಿದ – "Bless them that curse you, do good to them that hate you and pray for them which despitefully use you, and persecute you."

❑



ನಾನು ರಾಷ್ಟ್ರಪಿತನೇ?

೧೯೧೫ರಲ್ಲಿ ಸೌಥ್ ಆಫ್ರಿಕಾದಿಂದ ಗಾಂಧಿ ಭಾರತಕ್ಕೆ ಬಂದ ಎನ್ನುವುದು ನಿಮಗರಿಯದ ಸಂಗತಿಯೇನಲ್ಲ. ಆದರೆ ಒಂದು ವಿಚಾರ, ಆಗಲೇ ಅಸ್ತಿತ್ವದಲ್ಲಿದ್ದ ಕಾಂಗ್ರೆಸನ್ನು ಹಿಂದಿನ ಎಲ್ಲ ನಾಯಕರಿಗಿಂತಲೂ ಹೆಚ್ಚು ಪ್ರಭಾವಿಸಿದವನು ಗಾಂಧಿ. ಅಷ್ಟೇ ಅಲ್ಲ, ಗಾಂಧಿಯೆಂದರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ ಗಾಂಧಿ ಎನ್ನುವಷ್ಟರಮಟ್ಟಿಗೆ ಗಾಂಧಿ ಬೆಳೆದ. ಕೆಲವು ಕಾಂಗ್ರೆಸ್ಸಿಗರಂತೂ ಆತನನ್ನು 'ರಾಷ್ಟ್ರಪಿತ' ಎಂದು ಹೇಳಿ ವೈಭವೀಕರಿಸಿಯೂಬಿಟ್ಟರು. ಈ ಪದವೇ ಗಾಂಧಿಯ ದುರಂತವೂ ಆಯಿತು. ಗಾಂಧಿ ರಾಷ್ಟ್ರಪಿತ ಎನ್ನುವುದಾದರೆ ಈ ರಾಷ್ಟ್ರದ ಮಾತೆ ಯಾರು? ರಾಷ್ಟ್ರಪತ್ನಿ ಯಾರು? ರಾಷ್ಟ್ರಕ್ಕೆ ಒಬ್ಬ ಪಿತ ಬೇಕೆ? ಪಿತ ಸೃಷ್ಟಿಕರ್ತ, ಹಾಗಾದರೆ ಗಾಂಧಿಗೂ ಮುಂಚೆ ಭಾರತ ಸೃಷ್ಟಿಯಾಗಿರಲಿಲ್ಲವೇ? ಕೆಲವರಂತೂ ಈ ಪದವನ್ನೇ ಮುಂದಿಟ್ಟುಕೊಂಡು ಗಾಂಧಿ ಮಹಾ ಆತ್ಮರತಿಯ

ಮನುಷ್ಯನಾಗಿದ್ದ ಎಂದೂ ಬರೆದಿದ್ದಾರೆ. ಹೀಗೆಲ್ಲಾ ನೂರಾರು ಅವರವರ ಮೂಗಿನ ನೇರದ ಪ್ರಶ್ನೆಗಳು. ಸ್ವಯಂ ಗಾಂಧಿಗೂ ಈ ಪದ ಕಾಡಿತ್ತು, ಬೇಡವಾಗಿತ್ತು.

ಗಾಂಧಿಯೇನೋ ಈ ಪದದಿಂದ ಮುಕ್ತನಾಗಿರಲು ಯತ್ನಿಸಿದ, ಆದರೆ ಆತನ ಮಾತು, ಸಾರ್ವಜನಿಕ ಹೇಳಿಕೆಗಳು, ತನ್ನನ್ನೇ ತಾನು ತೊಡಗಿಸಿಕೊಂಡ ಪರಿ ಗಾಂಧಿಯನ್ನು ಆ ಪದದ ಒಳಹೂರಣದಂತೆಯೇ ಬಿಂಬಿಸಿದವು. ಇತಿಹಾಸದ ನನ್ನ ಓದಿನ ಪ್ರಕಾರ, ರವಿವಾರ ನವೆಂಬರ್ ೧೬ ಅತ್ಯಂತ ಮಹತ್ವದ ದಿನ. ದೆಹಲಿಯ ಕಾನ್ಸಿಟ್ಯೂಷನ್ ಕ್ಲಬ್ಬಿನಲ್ಲಿ ಗಾಂಧಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮುಂದೆ ಈ ಮಹತ್ವದ ಮಾತನ್ನು ಹೇಳುತ್ತಾನೆ, "India is as much home to the Muslims as it is to Hindus." ಗಾಂಧಿಯ ಈ ವಾದ ಇಲ್ಲಿಗೇ ನಿಲ್ಲುವುದಿಲ್ಲ. ಭಾರತದಲ್ಲಿಯ ವರ್ತಮಾನದ ಕೋಮು ಘಟನೆಗಳಿಂದ ನಾವೆಲ್ಲ ವಿಶ್ವದಲ್ಲಿ ತಲೆತಗ್ಗಿಸುವಂತಾಗಿದೆ. ನಾವು ಕೂಡಾ ಪಾಕಿಸ್ತಾನದ ತಪ್ಪುಗಳನ್ನೇ ನಕಲು ಮಾಡುತ್ತಿದ್ದೇವೆ ಎನ್ನುತ್ತಾನೆ. ಹಾಗೆಯೆ ಮುಂದುವರೆದು "I hear many things about the Rashtriya Swayam Sevak Sangha. I have heard that it is at the root of all present mischief. Hinduism cannot be saved by orgies of murder."

ಆದರೆ ಗಾಂಧಿಯ ಈ ಮೇಲಿನ ಮಾತುಗಳಲ್ಲಿ ಘಾಸಿಗೊಂಡ ಹಿಂದೂ ಮತ್ತು ಸಿಖ್ ಕೋಮಿನ ಜನಗಳು ಬೇರೆ ಬೇರೆ ಅರ್ಥಗಳನ್ನು ಕಂಡುಕೊಂಡರು. ಹೀಗೆ ಮಾತಾಡಲು ಗಾಂಧಿಯೇನು ಈ ದೇಶದ ಏಕೈಕ ನಾಯಕನೆ, ಸರ್ವಾಧಿಕಾರಿಯೆ? ಅವರು ಹೀಗಾಡಲು ಕಾರಣ ಗಾಂಧಿಯ ಹೇಳಿಕೆಗಳು. ಇದು ಒಂದು ಕೋಮಿಗೆ ಸಮಾಧಾನವೆನ್ನಿಸಿದರೆ ಇನ್ನೊಂದು ಕೋಮಿಗೆ ಗಾಯದ ಮೇಲೆ ಉಪ್ಪು ಎರಚಿದಂತೆನಿಸಿತ್ತು. ಸಕ್ರಿಯ ರಾಜಕಾರಣಿಗಳೂ ಹೇಳಲು ಹಿಂಜರಿದ ಈ ವಿಚಾರಗಳು ಗಾಂಧಿಯನ್ನು ಸಾವಿನ ಬಾಗಿಲಿಗೆ ತಂದು ನಿಲ್ಲಿಸಿದವು. ಇದಕ್ಕೆ ಒಂದು ಸಾಕ್ಷಿ ಇದೆ. ಗಾಂಧಿಯ ಹತ್ಯೆಗೈದ ನಾಥೂರಾಮ್ ಗೋಡ್ಸೆ ತನ್ನ ಮೇಲೆ ಮಾಡಿದ ಹತ್ಯಾ ಆರೋಪಗಳ ಪಟ್ಟಿಗೆ ಉತ್ತರಿಸುತ್ತಾ ಇದನ್ನು ಸ್ಪಷ್ಟಪಡಿಸಿದ್ದಾನೆ. "ಈ ದೇಶದ ಹೊರಗೆ ಹಿಂದೂಗಳಿಗೆ ತಮ್ಮದು ಎಂದು ಹೇಳಿಕೊಳ್ಳುವಂತಹ ಯಾವುದೇ ಭೂ ಪ್ರದೇಶವಿಲ್ಲ." ಈ ವಾಕ್ಯದ ವ್ಯಾಪ್ತಿಯಲ್ಲಿ ನೀವು ಎಷ್ಟೆಲ್ಲಾ ಅರ್ಥಗಳನ್ನು ಕಂಡುಕೊಳ್ಳಬಹುದು. ಮಧ್ಯಯುಗೀನ ಕಾಲಘಟ್ಟದಿಂದ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿದ್ದ ದೇಶ, "ಮರಾಠರ ಉದಯದಿಂದಲೂ, ರಜಪೂತರ ಬಂಡಾಯದಿಂದಲೂ, ಸಿಖ್ಖರ

ಉತ್ತಮಣದಿಂದಲೂ" ಮುಸ್ಲಿಮರಿಂದ ಮುಕ್ತವಾಗುತ್ತಾ ಬಂದಿತ್ತು. ಆ ಮೂಲಕ ಪ್ರಪಂಚದಲ್ಲಿ ಹಿಂದೂಗಳಿಗೇ ಮಾತ್ರವಾದ ಒಂದು ನೆಲ ಸಾಧ್ಯವಾಗಿತ್ತು. ಆದರೆ, "ಒಂದು ಕಡೆಯಿಂದ ಬ್ರಿಟಿಷ್ ಮಾಲಿಕರ ಪ್ರೇರಣೆಯಿಂದಲೂ, ಮತ್ತೊಂದು ಕಡೆಯಿಂದ ಗಾಂಧೀಜಿಯವರ ಮುಂದಾಳತ್ವ ಹೊಂದಿದ ಕಾಂಗ್ರೆಸ್ಸಿನ ಉತ್ತೇಜನದಿಂದಲೂ, ಮುಸ್ಲಿಂ ಸಮುದಾಯದ ಧರ್ಮಾಂಧತೆ ಹೆಚ್ಚುತ್ತಾ ಹೋಯಿತು" ಎಂದು ಆತ ತಿಳಿಸಿದ್ದಾನೆ. ಮೂಲನಿವಾಸಿಗಳಲ್ಲದ ಮುಸ್ಲಿಮರ ಜೀವನವನ್ನು ಗೌರವಿಸುವ ಈ ಗಾಂಧಿಗೆ ಹಿಂದೂಗಳಿಗೆ ಆಗಿರುವ ಅಪಮಾನ, ಹಿಂಸೆಗಳು ಕೇವಲವಾಗಿ ಕಾಣಿಸಬಾರದಿತ್ತು ಎಂದು ಆತನ ವಾದ. ಮುಂದುವರೆದು ಡಾ. ಹೆಡ್ಗೆವಾರ್‌ರ ರಾಷ್ಟ್ರಿಯ ಸ್ವಯಂ ಸೇವಾ ಸಂಘಕ್ಕಾಗಲೀ, ವೀರ ಸಾರ್ವಕರರ ಹಿಂದೂ ಮಹಾ ಸಭೆಗಾಗಲೀ ಹಿಂದೂ ಬಂಧು-ಭಗಿನಿಯರ ಜೀವ ಮತ್ತು ಮಾನಗಳನ್ನು ಉಳಿಸುವ ಉದ್ದೇಶವಿತ್ತೇ ವಿನಹ ಮುಸ್ಲಿಮರನ್ನು ಹಿಂಸಿಸುವ ಯಾವ ಉದ್ದೇಶಗಳೂ ಇರಲಿಲ್ಲ ಎಂದು ತನ್ನ ಗಲ್ಲಿಗೂ ಮುನ್ನ ಗೋಡ್ಸೆ ಸ್ಪಷ್ಟಪಡಿಸಿದ್ದಾನೆ.

ಆದರೆ ಮುಂದೊಂದು ದಿನ ತನ್ನ ಈ ಉದಾರ ನೀತಿ ತನ್ನದೇ ಜನಾಂಗದಿಂದ 'ಹೇಡಿತನ' ಎಂದು ಗ್ರಹಿಸಲ್ಪಡುತ್ತದೆ ಎನ್ನುವ ತಿಳುವಳಿಕೆ ಇಲ್ಲದ ಗಾಂಧಿ ಕಾಂಗ್ರೆಸ್ಸಿನ ಸದಸ್ಯರನ್ನು ಕೂಡ್ರಿಸಿಕೊಂಡು ಈ ದಿನ ತನ್ನ ಹೇಳಿಕೆಯನ್ನು ಹಾಗೆಯೇ ಮುಂದುವರೆಸಿದ್ದಾನೆ. ಆತ ಕೋಮಿನ ವಿಚಾರವನ್ನು ಗ್ರಹಿಸಿದ ರೀತಿಯೂ ಭಿನ್ನವಾಗಿದೆ. ಗಾಂಧಿಯ ಪ್ರಕಾರ ಸಹನೆಯೇ ಶಕ್ತಿ. "When your house is in flames, you must first put out the fire, before you can do anything else. That is why I have taken so much of your time. What I wish to emphasize to you is that if you maintain the civilized way, whatever Pakistan may do, sooner or later she will be obliged by the pressure of world opinion to confirm. Then war between India and Pakistan will not come, and it will not be necessary to empty our exchequer." ಗಾಂಧಿಯ ಈ ಹೇಳಿಕೆಯಲ್ಲಿ ಮುಖ್ಯವಾಗಿ ಕಾಣುವುದು ಹಿಂದೂ-ಮುಸ್ಲಿಮರ ಮಧ್ಯದ ತಿಕ್ಕಾಟವಲ್ಲ; ಬದಲಾಗಿ ಭಾರತ ಮತ್ತು ಪಾಕಿಸ್ತಾನದ ಮಧ್ಯ ಸಂಭವನೀಯವಾಗಿರುವ ಯುದ್ಧ. ಸಮಕಾಲೀನ ಯಾವ ರಾಜಕಾರಣಿಗಳೂ ಊಹಿಸದ ಯುದ್ಧದ ಭಯದಲ್ಲಿ ಬೆಂದವನು ಗಾಂಧಿ. ಅವನ ವಿಚಾರಕ್ಕೆ ವಿರುದ್ಧವಾಗಿಯೇ ದೇಶದ ವಿಭಜನೆಯಾಯಿತು. ಲಕ್ಷಾಂತರ ಸಂಸಾರಗಳು ಬೀದಿಪಾಲಾದವು. ಈಗ ದೇಶ ಮತ್ತೊಂದು ಭಯಾನಕ ದುರಂತಕ್ಕೆ ಸಾಕ್ಷಿಯಾಗಲು

ಆತ ಸಿದ್ಧನಿಲ್ಲ. ಅಂತೆಯೇ ಕಾಂಗ್ರೆಸ್ಸಿಗರನ್ನು ಕೂಡ್ರಿಸಿಕೊಂಡು ಆತ ಇಂದು ಹೇಳುತ್ತಾನೆ, ೧೯೧೫ ಮತ್ತು ಆನಂತರದ ಬೆಳವಣಿಗೆಗಳಲ್ಲಿ ತಾನು ಭಾರತೀಯರನ್ನು ಪ್ರಭಾವಿಸಿದ್ದ ರೀತಿಗೂ, ವರ್ತಮಾನದ ಸ್ಥಿತಿಗೂ ಬಹಳಷ್ಟು ಭಿನ್ನತೆಯಿದೆ. ತನ್ನನ್ನೀಗ 'ರಾಷ್ಟ್ರಪಿತ' ಎಂದು ಕರೆದು ಇನ್ನೊಂದು ರೀತಿಯ ಹಿಂಸೆ ನೀಡಲಾಗುತ್ತಿದೆ. ಯಾರೂ, ಯಾವುದಕ್ಕೂ ಪಿತ, ಮುಂದಾಳು, ಮಹಾತ್ಮ ಆಗುವ ಅವಶ್ಯಕತೆ ಇಲ್ಲ. ಇಂದು ಕಾಂಗ್ರೆಸ್ಸನ್ನು ತಾನು ಒತ್ತಾಯಿಸುತ್ತಿರುವುದೂ ಇಷ್ಟೇ ಮಾತ್ರವನ್ನು. "Everyone should do his duty and leave result to God. Hence, I attended the AICC meeting to address the members only to put before them that what in my view is the truth." ಗಾಂಧಿಗೆ ಇದನ್ನು ಮೀರಿದ ಯಾವುದೇ ಮೋಹವಿರಲಿಲ್ಲ. ಗಲ್ಲುಕಂಬಕ್ಕೆ ಕತ್ತಿಡುವವರೆಗೂ ಸಾವಿನ ಕುಣಿಕೆಯಿಂದ ಪಾರಾಗುವ ಯಾವುದೇ ಸಣ್ಣ ಪ್ರಯತ್ನವನ್ನೂ ಮಾಡದಷ್ಟು ಗೋಡ್ಸೆ ಹೇಗೆ ತನ್ನ ಕೃತ್ಯ ಸರಿ ಎಂದು ವಾದಿಸಿದನೋ, ಹಾಗೆಯೇ ಗುಂಡಿಗೆ ಎದೆಯೊಡ್ಡಿ ಸಾಯುವವರೆಗೂ ತಾನು ಏನನ್ನು ಸ್ವಿಕರಿಸುತ್ತೇನೆ, ಮತ್ತೆ ಯಾವುದನ್ನು ನಿರಾಕರಿಸುತ್ತೇನೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಾ ಹೋದವ ಗಾಂಧಿ. ಆತನಿಗೂ ಖಂಡಿತ ಲೋಕದ ಹಂಗಿರಲಿಲ್ಲ. ಕಾಂಗ್ರೆಸ್ ಕೈ ಜಾರುತ್ತಿದೆ, ಒಳಗೊಳಗೆ ಸಿಖ್ ಮತ್ತು ಹಿಂದೂಗಳು ಮುಸ್ಲಿಂರ ವಿರುದ್ಧ ಮಚ್ಚು ಮಸೆಯುತ್ತಿದ್ದಾರೆ ಎಂದು ಗೊತ್ತಿದ್ದೂ ಅವರೊಂದಿಗೆ ಪ್ರಾರ್ಥನೆಗೆ ಕೂಡಬೇಕಿತ್ತು ಗಾಂಧಿ. ಆತ ಒಂದು ಮಾತನ್ನು ಪದೇ-ಪದೇ ಹೇಳುತ್ತಿದ್ದ, "I prefer a bad man who admits his failings to a good one who does not even try to see his mistakes." ಹೀಗಾಗಿಯೇ ಆತ ಸುಹ್ರಾವರ್ದಿಯನ್ನು ಸಮೀಪದಲ್ಲಿಟ್ಟುಕೊಂಡಿದ್ದು, ಆತನ ಕಾರಣ ಪದರೊಳಗೇ ಬೆಂಕಿ ಕಟ್ಟಿಕೊಂಡಿದ್ದು.

ಮತ್ತೆ ಅಂತರ್ಮುಖಿಯಾದ ಗಾಂಧಿ. ಮೀರಾಬಾಯಿಯ ಪ್ರಾರ್ಥನೆಯೊಂದು ಕೇಳಿ ಬರುತಿತ್ತು. ರಾಮ್‌ಪುರದಿಂದ ಬಂದಿದ್ದ ಹರಿಜನ ಬಾಲಕನೊಬ್ಬ ಈ ಭಜನೆಯನ್ನು ಹೇಳುತ್ತಿದ್ದ. ದೂರದೂರದಿಂದ ಗಾಂಧಿಯನ್ನು ನೋಡಲು ಬಂದಿದ್ದರು ಜನರು. ಹರಿದುಬಂದವರಿಗೆಲ್ಲಾ ಮೀರಾಬಾಯಿಯ ಪ್ರಾರ್ಥನೆಯ ಅರ್ಥವನ್ನು ವಿವರಿಸುತ್ತಾ ಗಾಂಧಿ ಹೇಳಿದ, "ಭಗವಂತನನ್ನು ಕಾಣುವುದೇ ಮಾನವ ಬದುಕಿನ ಅಂತಿಮ ಗುರಿಯಾಗಬೇಕು. ದೇವಾಲಯಗಳಲ್ಲಿಲ್ಲದ ಅಥವಾ ನೀವು ಪ್ರಾರ್ಥಿಸುವ ಯಾವ ಸ್ಥಳಗಳಲ್ಲಿಯೂ ಇಲ್ಲದ, ನೀವು ಆಚರಿಸುವ ಉಪವಾಸ-ಪ್ರತಿಜ್ಞೆಗಳಿಗೆ ಒಲಿಯದ ಭಗವಂತ, ನಮ್ಮ ಪ್ರೀತಿಗೆ ಮಾತ್ರ ಒಲಿಯುತ್ತಾನೆ. ಪ್ರೀತಿಸುವ

ಜನರ ನೋವಿಗೆ ನುಲಿಯುತ್ತಾನೆ. ಆದರೆ ನಮ್ಮ ಈ ಪ್ರೀತಿ ವ್ಯಾವಹಾರಿಕವಾಗಿರದೆ ದೈವಪ್ರೇರಣೆಯಿಂದ ಕೂಡಿರಬೇಕು. ಮೀರಾಬಾಯಿ ಇದನ್ನೇ ಹೇಳುತ್ತಿದ್ದಾರೆ. ಆಕೆಗೆ ದೇವರೇ ಸರ್ವಸ್ವ"

ಬಹಳ ಅದ್ಭುತವಾಗಿದೆ, ಸರಳವಾಗಿದೆ ಹಾಗೂ ಸುಖವಾಗಿದೆ ಗಾಂಧಿಯ ಈ ವಿವರಣೆ. ಆದರೆ ಮಡಿದ ಹೆಂಡತಿ, ಮನಸ್ಸಿಲ್ಲದ ರಾಜಕೀಯ, ಆಧ್ಯಾತ್ಮಿಕ ಒಳತುಡಿತಗಳಿಗೆ ಮಕ್ಕಳನ್ನೂ ಮರೆತ ಈ ಗಾಂಧಿಗೆ ಇದು ತುಂಬಾ ಸರಳ. ಆತ ಹಂಗು ಹರಿದವನು. ಆದರೆ ಅವನೆದುರು ಕುಳಿತವರೆಲ್ಲರೂ ಅದೇ ಮಾನಸಿಕ ಬೆಳವಣಿಗೆಯವರಲ್ಲ. ಅವನ ಮರೆವಿಗೂ, ಅವರ ಮರೆಯುವಿಕೆಗೂ ಬಹಳ ವ್ಯತ್ಯಾಸವಿದೆ. ಆತ ಆಗಲೇ ಗಂತವ್ಯ ತಲುಪಿದ್ದಾನೆ, ಇವರಿನ್ನೂ ತಮ್ಮ ಗುರಿ ಯಾವುದೆನ್ನುವ ದ್ವಂದ್ವದಲ್ಲಿದ್ದಾರೆ.

ಪಾಕಿಸ್ತಾನದಲ್ಲಿ ಹಿಂದೂಗಳ ವಿರುದ್ಧ ನಡೆದ ಪೈಶಾಚಿಕ ಚಟುವಟಿಕೆಗಳ ನಕಲು ಎನ್ನುವಂತೆ ಈಗ ಭಾರತದ ರಾಮ್‌ಪುರ್ ಮತ್ತು ತ್ರಿಪುರಾಗಳಲ್ಲಿ ಮುಸ್ಲಿಮರ ವಿರುದ್ಧ ಚಟುವಟಿಕೆಗಳು ತೀವ್ರವಾಗಿವೆ. ಗಾಂಧಿ ಇದನ್ನು ಇಂದು ಪ್ರಸ್ತಾಪಿಸಲೇಬೇಕಿದೆ. ನೊಂದು ಹೇಳಿದ, "ನನಗೆ ಗೊತ್ತು, ರಾಮ್‌ಪುರವನ್ನು ಆಳುವ ದೊರೆ ಮುಸಲ್ಮಾನರೇ, ಹಾಗಂತ ಅದು ಮುಸ್ಲಿಂ ರಾಜ್ಯವಲ್ಲ. ಮೊಹಮ್ಮದ್ ಮತ್ತು ಶೌಕತ್ ಅಲಿ ಸಹೋದರರೊಂದಿಗೆ ಅನೇಕ ಬಾರಿ ನಾನಲ್ಲಿಗೆ ಬಂದಿದ್ದೇನೆ. ಮಾರ್ಚ್ ೧೯೧೯ರಲ್ಲಿ ಒಮ್ಮೆ ನವಾಬರನ್ನೂ ಕಂಡಿದ್ದೇನೆ. ಅವರು ನಮ್ಮ ಶ್ರೇಷ್ಠ ರಾಷ್ಟ್ರಭಕ್ತರಾದ ಹಕೀಂ ಅಜಮಲ್ ಖಾನ್ ಮತ್ತು ಡಾ. ಎಮ್. ಎ. ಅನ್ಸಾರಿಯವರ ಅತ್ಯಂತ ಒಳ್ಳೆಯ ಸ್ನೇಹಿತರು ಕೂಡಾ. ನಾನು ಕಂಡಂತೆ, ಅವರ ಆಳ್ವಿಕೆಯ ಅವಧಿಯಲ್ಲಿಯೂ ಹಿಂದೂ–ಮುಸ್ಲಿಮರು ಅಲ್ಲಿ ಅತ್ಯಂತ ಅನ್ಯೋನ್ಯವಾಗಿ ಬದುಕಿದ್ದಾರೆ. ಆದರೆ ಇಂದು ನೀವು ಕೊಡುತ್ತಿರುವ ಚಿತ್ರಣ ಇದಕ್ಕೆ ತೀರ ವ್ಯತಿರಿಕ್ತವಾಗಿದೆ. ರಾಮ್‌ಪುರ್ ಮತ್ತು ತ್ರಿಪುರಾಗಳು ಭಾರತದ ಒಕ್ಕೂಟವನ್ನು ಸೇರಿದ್ದಾಗ್ಯೂ ಅವು ಮುಸ್ಲಿಂಲೀಗ್‌ನ ಹಿಡಿತಕ್ಕೆ ಒಳಪಟ್ಟಿವೆ ಎಂದು ಹೇಳುತ್ತಿದ್ದೀರಿ. ಇದು ನಮಗೆ ಬಾಧೆಯಾಗಬೇಕೆ? ಇದರಿಂದ ಹೊರಗೆ ಬರುವುದು ತುಂಬಾ ಸರಳವಾಗಿದೆ. ರಾಷ್ಟ್ರಿಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಮಹಾಸಭಾ ಈ ದೇಶವನ್ನು ಮುಸ್ಲಿಂರಿಂದ ಮುಕ್ತವಾಗಿ ಕಾಣಲು ಇಷ್ಟಪಡುತ್ತಾರೆ. ಇದು ಸಾಧ್ಯವೇ? ಹಾಗೆಯೆ ಇದೂ ಕೂಡ. ಈ ಎರಡೂ ಪ್ರದೇಶಗಳಲ್ಲಿ ಕಾಂಗ್ರೆಸ್ಸಿನವರು ಸತ್ಯಾಗ್ರಹ ಘೋಷಿಸುವುದಾಗಿ ಹೇಳಿದ್ದಾರೆ, ಒಳ್ಳೆಯದು. ಉದಾರ ನೀತಿಯ ತಳಹದಿಯ ಮೇಲೆ ಕಾಂಗ್ರೆಸ್ ಸ್ಥಾಪನೆಯಾಗಿದೆ.

ಮತೀಯ ಯಾವ ಆಲೋಚನೆಗಳಿಗೂ ಅಲ್ಲಿ ಆಸ್ಪದವಿಲ್ಲ. ಜನರ ಸೇವೆಯೇ ಅದರ ಗುರಿ. ಅವರಿಗೆ ಈ ಕುರಿತು ನನ್ನ ವಿಚಾರವೇನು? ಎನ್ನುವ ಕುತೂಹಲವಿದೆ. ಆದರೆ ನಾನು ನಿರ್ಮೋಹಿ. ಇಷ್ಟು ಮಾತ್ರ ಹೇಳಬಲ್ಲೆ, ಪ್ರಪಂಚದ ಅತಿ ದೊಡ್ಡ ಶಕ್ತಿಯೇ ಸತ್ಯಾಗ್ರಹ. ಸರಿಯಾಗಿ ಬಳಸಿದರೆ ಅದರ ವಿರುದ್ಧ ಪ್ರತಿರೋಧದ ಯಾವ ಭಾಷೆಯೂ ಗೆಲ್ಲುವುದಿಲ್ಲ."

ಈ ಮಾತುಗಳನ್ನು ಹೇಳುವಾಗ ಗಾಂಧಿ ಭಾರತದಲ್ಲಿ ಸತ್ಯಾಗ್ರಹಕ್ಕೆಂದು ಸಶಕ್ತರಾದ ಯುವಕರನ್ನು ಹುಡುಕುತ್ತಿದ್ದ. ಈ ದೇಶದ ದುರ್ದೈವ, ಈ ಗಾಂಧಿಗೆ ಅವರೆಂದೂ ದೊರೆಯಲೇ ಇಲ್ಲ. ನಿಮಗೊಂದು ವಿಚಿತ್ರ ಗೊತ್ತೇ? ಗಾಂಧಿ ಹತ್ಯೆಗೂ ಮೊದಲು ನಾಥೂರಾವ್ ಈ ಗಾಂಧಿಯನ್ನು ಸೋಲಿಸಲೆಂದು, ಅವಹೇಳನಗೊಳಿಸಲೆಂದು ಎಷ್ಟೊಂದು ಜನರನ್ನು, ಯುವಕರನ್ನು ಹುಡುಕುತ್ತಾನೆ. ಮಹಾರಾಷ್ಟ್ರದ ಮುಂಬಯಿ-ಪುಣೆಗಳಲ್ಲಿ ಅಂತಹವರು ಸಿಗಲಾರದ್ದಕ್ಕಾಗಿ ಕೊನೆಗೆ ಗ್ವಾಲಿಯರ್‌ಗೆ ಹೋಗುತ್ತಾನೆ. ಆದರೆ ಈತ ನಂಬಿಹೋದ ಏಕೈಕ ವ್ಯಕ್ತಿ, ಹಿಂದೂರಾಷ್ಟ್ರ ಸೇನೆಯ ಸ್ವಯಂಸೇವಕ ಡಾ. ಪರಚುರೆ ಇದು ತನ್ನಿಂದ ಸಾಧ್ಯವಿಲ್ಲ ಎನ್ನುತ್ತಾನೆ. ಜೊತೆಗೆ ಗ್ವಾಲಿಯರ್‌ನಿಂದ ಈ ಸ್ವಯಂಸೇವಕರನ್ನು ತಂದು ಗಾಂಧಿಯ ವಿರುದ್ಧ ಘೋಷಣೆಗಳನ್ನು ಕೂಗಿಸುವ ಹಿಂದಿನ ವೆಚ್ಚವನ್ನು ಯಾರು ಭರಿಸಬೇಕು? ಎಂಬ ಪ್ರಶ್ನೆ. ಇಬ್ಬರ ಹುಡುಕಾಟವೂ ಒಂದೇ, ಫಲಿತಾಂಶಗಳು ಮಾತ್ರ ಭಿನ್ನ. ಒಬ್ಬ ಪಾತಕಿಯಾಗುತ್ತಾನೆ, ಮತ್ತೊಬ್ಬ ಮಹಾತ್ಮನಾಗುತ್ತಾನೆ.

❑



ಗಾಂಧಿ ಗೆದ್ದ !!!

ಕಾಂಗ್ರೆಸ್ ಮುಖಂಡರನ್ನು ಮುಂದೆ ಕೂಡ್ರಿಸಿಕೊಂಡು ಗಾಂಧಿ ಹೇಳಿದ್ದು ಬಹುತೇಕ ಸಫಲವಾಯಿತು. ಅವನ ಹಠ ಸಾಧಿಸಿತು. ಗಾಂಧಿಯ ವಿಚಾರಗಳನ್ನು ಕೇಳಿದ ಕಾಂಗ್ರೆಸ್ ನವೆಂಬರ್ ೧೮ರಂದು ಈ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಂಡಿತು.

೧. ಭಾರತ ಅನೇಕ ಧರ್ಮ ಮತ್ತು ಮತಗಳ ರಾಷ್ಟ್ರವಾಗಿರುವುದರಿಂದ ಅದು ಸರ್ವರಿಗೂ ಸಮಾನವಾಗಿ ಉಳಿಯುತ್ತದೆ. ಮೂಲತಃ ಏಕತೆಯನ್ನೇ ಮಂತ್ರವಾಗಿ ತೆಗೆದುಕೊಂಡಿದ್ದು, ಇಲ್ಲಿ ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು ಎನ್ನುವ ಭರವಸೆಯನ್ನು ನೀಡಲಾಗುತ್ತದೆ. ವಿಶೇಷತಃ ಅಲ್ಪಸಂಖ್ಯಾತರ ಹಕ್ಕು ಮತ್ತು ಆಸ್ತಿ–ಪಾಸ್ತಿಗಳ ರಕ್ಷಣೆ ತಮ್ಮ ಆದ್ಯ ಕರ್ತವ್ಯ ಎಂದು ಕಾಂಗ್ರೆಸ್ ಒಪ್ಪಿಕೊಳ್ಳುತ್ತದೆ.

೨. ದೇಶವಿಭಜನೆಯ ಕಾರಣ ಅಸಂಖ್ಯಾತ ಸಾವು-ನೋವು ಮತ್ತು ಸಂಸಾರಗಳ ವಿಭಜನೆಯಾಗಿ, ಕೋಟ್ಯಂತರ ಜನರ ಜೀವನ ದುರಂತಮಯವಾಗಿದೆ. ಅದಕ್ಕಾಗಿ, ಇನ್ನು ಮುಂದೆ ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿಯು ವಲಸೆಯಂತಹ ಪ್ರಕ್ರಿಯೆಯನ್ನು ನಿರುತ್ತೇಜಿಸುತ್ತದೆ. ಭಾರತ ಮತ್ತು ಪಾಕಿಸ್ತಾನಗಳೆರಡಲ್ಲಿಯೂ ಅಲ್ಪಸಂಖ್ಯಾತರು ನೆಮ್ಮದಿಯಿಂದ ಬಾಳುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುತ್ತದೆ. ಇಲ್ಲಿ ಉಳಿದಿರುವ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವುದರೊಂದಿಗೆ ಅವರನ್ನು ಇಲ್ಲಿಂದ ಒಕ್ಕಲೆಬ್ಬಿಸುವ ಎಲ್ಲ ಮಾರಕ ಶಕ್ತಿಗಳನ್ನು ಶಿಕ್ಷಿಸಲಾಗುತ್ತದೆ.

೩. ಕೆಲವು ಸಂಘಟನೆಗಳು ದೇಶದೊಳಗೆ ತಮ್ಮದೇ ಸೈನ್ಯವನ್ನು ಸಂಘಟಿಸುವ ಚಟುವಟಿಕೆಗಳಲ್ಲಿ ತೊಡಗಿದ್ದು ಅಂತವುಗಳಲ್ಲಿ ಮುಸ್ಲಿಂ ನ್ಯಾಷನಲ್ ಗಾರ್ಡ್ಸ್, ಆರ್.ಎಸ್.ಎಸ್, ಅಕಾಲಿ ಸಂಘ ಮುಂಚೂಣಿಯಲ್ಲಿವೆ. ರಾಷ್ಟ್ರಕ್ಕೆ ಎಲ್ಲರನ್ನೂ ರಕ್ಷಿಸುವ ತನ್ನದೇ ಆದ ಪೋಲಿಸ್ ವ್ಯವಸ್ಥೆ ಇರುವುದರಿಂದ ಈ ಮೇಲೆ ಸೂಚಿಸಿದ ಸಂಘಟನೆಗಳು ತಮ್ಮ ಸ್ವಯಂ ನಿರ್ಧಾರಿತ ಚಟುವಟಿಕೆಗಳನ್ನು ತಕ್ಷಣ ನಿಲ್ಲಿಸಬೇಕೆಂದು ಕಾಂಗ್ರೆಸ್ ಎಚ್ಚರಿಸುತ್ತದೆ.

೪. ಆಹಾರ ಮತ್ತು ಬಟ್ಟೆಗೆ ಸಂಬಂಧಪಟ್ಟಂತೆ ಹೇರಲ್ಪಡುವ ನಿಯಂತ್ರಣಗಳು ಕಾಳಸಂತೆಯನ್ನು ಹಾಗೂ ಭ್ರಷ್ಟಾಚಾರವನ್ನು ಉತ್ತೇಜಿಸುತ್ತಿವೆ ಎನ್ನುವುದನ್ನು ಮನಗಂಡಿರುವ ಎ.ಐ.ಸಿ.ಸಿ ಅವುಗಳನ್ನು ಬಲವಾಗಿ ವಿರೋಧಿಸುತ್ತದೆ. ಬದಲಾಗಿ, ಖಾದಿ ತತ್ವವನ್ನು ಪ್ರತಿಪಾದಿಸುತ್ತದೆ.

ಹೀಗೆ ಕಾಂಗ್ರೆಸ್ ಅನೇಕ ನಿರ್ಧಾರಗಳನ್ನು ತೆಗೆದುಕೊಂಡು, ತಾವು ನಿಸ್ಸಂಶವಾಗಿಯೂ ಗಾಂಧಿಯನ್ನು ಗೌರವಿಸಿದ್ದೇವೆ ಎಂದು ಸಾರಿ ಹೇಳಲು ಯತ್ನಿಸಿತು. ಆದರೆ ತಾವು ತೆಗೆದುಕೊಂಡ ನಿರ್ಧಾರಗಳನ್ನು ತಾವೇ ಎಷ್ಟರಮಟ್ಟಿಗೆ ನಿಭಾಯಿಸುತ್ತಾರೆ ಎನ್ನುವ ಸಣ್ಣ ಸಂಶಯ ಗಾಂಧಿಗೂ ಇತ್ತು. ಈ ಗಾಂಧಿಗಾಗಿ ೩೦ ಕೋಟಿ ಹಿಂದೂಗಳಿಗೆ ವಿರುದ್ಧವಾಗಿರುವ ಮತ್ತು ಮುಸ್ಲಿಮರನ್ನು ಓಲೈಸುವ ಕಾರ್ಯ ಇಲ್ಲಿ ನಡೆದಿದೆ ಎನ್ನುವ ಸಂಶಯವೂ ಕೆಲವರಿಗಿತ್ತು. ಸಕ್ರಿಯ ರಾಜಕಾರಣದಲ್ಲಿರಬಾರದ ಗಾಂಧಿಯ ಅಧ್ಯಾತ್ಮವನ್ನು ನಂಬಿಕೊಂಡು ಕಾಂಗ್ರೆಸ್ ತಪ್ಪು ಹೆಜ್ಜೆಗಳನ್ನಿಡುತ್ತಿದೆ ಎಂಬ ವಾದವೂ ಮತ್ತೊಂದೆಡೆ. ಆದಾಗ್ಯೂ ಸದ್ಯಕ್ಕಂತೂ ಎಲ್ಲವೂ ಗಾಂಧಿಯ ಆಣತಿಯಂತೆ ನಡೆಯುತ್ತಿರುವಂತೆ ಕಾಣಿಸುತ್ತಿರುವುದು ಸರ್ವವಿದಿತ.

ಕಾಂಗ್ರೆಸ್ ತೆಗೆದುಕೊಂಡ ನಿರ್ಧಾರಗಳ ಫಲಶ್ರುತಿ ಎನ್ನುವಂತೆ ನವೆಂಬರ್ ೧೯ ರಂದು ಗುರ್‌ಗಾಂವ್‌ನಿಂದ ಸುದ್ದಿ ಬಂತು. ಪಶ್ಚಿಮ ಪಂಜಾಬ್‌ನಿಂದ ನೆಲೆ ಅರಸಿ ಭಾರತಕ್ಕೆ ಹೊರಟ ನಿರಾಶ್ರಿತರು ಮಾರ್ಗಮಧ್ಯದಿಂದಲೇ ಇದ್ದಕ್ಕಿದ್ದಂತೆ ಮರಳಿ ತಮ್ಮ ತಮ್ಮ ಮನೆಗೆ ನಡೆದರು. ಈ ಬೆಳವಣಿಗೆಯಿಂದ ಸಂತಸಗೊಂಡು ಮತ್ತು ಆಸೆಗೆ ಬಿದ್ದು ಗಾಂಧಿ ನೌಖಾಲಿಯಲ್ಲಿರುವ ಪ್ಯಾರೆಲಾಲ್‌ಗೆ ಈ ರೀತಿಯಾಗಿ ಪತ್ರ ಬರೆದ: "I see that my battle has to be fought and won in Delhi itself. There is a lot for me to do here. Resolutions of the All India Congress Committee this time were practically mine. It remains to be seen how they are implemented."

ಕಾಂಗ್ರೆಸ್ ಎನ್ನುವುದೊಂದು ಸುಳ್ಳರ ಸಂಘಟನೆ. ಬೆರಳೆಣಿಕೆಯ ಕೆಲವು ಮೋಸಗಾರರು ಈ ಗಾಂಧಿಯ ಸತ್ಯಾಗ್ರಹ ಮತ್ತು ಅಹಿಂಸಾ ತತ್ವದಿಂದಲೇ ಎಲ್ಲವೂ ಸಾಧ್ಯವಾಗಿದೆ ಎನ್ನುವ ಸುಳ್ಳನ್ನು ನಿರಂತರವಾಗಿ ಹೇಳುತ್ತಾ ಗಾಂಧಿಯನ್ನೂ ಮೋಸಮಾಡುತ್ತಿದ್ದಾರೆ ಎನ್ನುವ ನಾಥುರಾಮ್ ಹಾಗೂ ಆತನ ಸಹಚರರ ವಾದ ಒಂದು ಹಂತಕ್ಕೆ ಸರಿಯಾಗಿಯೇ ಇದೆ. 'ಯಾರದೋ ಆಸ್ತಿಯನ್ನು ಇನ್ನಾರಿಗೊ ದಾನ ಮಾಡಿ, ಯಾರನ್ನೋ ಬಲಿಪಶುಗಳನ್ನಾಗಿ ಮಾಡಿ, ನಮ್ಮವರಿಗೇ ನೆಲೆ ಇಲ್ಲದಿರುವಾಗ ಬಂದ ಅಕ್ರಮ ವಲಸಿಗರಿಗೆ ದಾನ ಮಾಡಬಾರದು. ಇಂತಹ ದಾನದಿಂದ ಅವರು ಸಂಪ್ರೀತರಾಗುವುದಿಲ್ಲ' ಎನ್ನುವ ಗಾಂಧಿ ಹತ್ಯೆಯ ಸಂಚನ್ನು ರೂಪಿಸಿದ ನಾನಾ ಆಪ್ಟೆಯ ವಾದವೂ ಸರಿಯಾಗಿತ್ತು, ಯಾಕೆಂದರೆ ಇಲ್ಲಿ ಏನಾಯಿತು ನೋಡಿ. ನವೆಂಬರ್ ೧೯ ಬುಧವಾರದ ದಿನ ದೆಹಲಿಯ ಚಾಂದನಿ ಚೌಕದಲ್ಲಿ ಕನಿಷ್ಠ ೨೦೦೦ ಜನ ಕಲ್ಲು ತೂರಾಟ, ದೊಂಬಿ, ಹೊಡೆದಾಟಗಳಲ್ಲಿ ಕ್ಷಣಕಾಲ ಇಡೀ ಆ ಪ್ರದೇಶವನ್ನು ನರಕಮಯಗೊಳಿಸಿದ್ದರು. ಆದದ್ದಿಷ್ಟೆ, ದೇಶ ವಿಭಜನೆಯ ಸಂದರ್ಭದಲ್ಲಿ, ಮುಸ್ಲಿಂ ವ್ಯಾಪಾರಿಯೊಬ್ಬ ತರಾತುರಿಯಲ್ಲಿ ಚಾಂದನಿ ಚೌಕದಲ್ಲಿಯ ತನ್ನ ಅಂಗಡಿಯನ್ನು ಬಿಟ್ಟು ಪಾಕಿಸ್ತಾನಕ್ಕೆ ವಲಸೆ ಹೋದ. ಅತ್ತ ಪಾಕಿಸ್ತಾನದಿಂದ ಬಂದ ಹಿಂದೂ ನಿರಾಶ್ರಿತನೊಬ್ಬನಿಗೆ ಮೂಲ ವ್ಯಕ್ತಿ ಮರಳಿ ಬಂದರೆ ಈ ಅಂಗಡಿಯನ್ನು ಮರಳಿ ಅವನಿಗೇ ಬಿಟ್ಟುಕೊಡಬೇಕು ಎನ್ನುವ ನಿಬಂಧನೆಯ ಮೇರೆಗೆ ಅವಸರದಲ್ಲಿ ಆ ಅಂಗಡಿಯನ್ನು ಈತನಿಗೆ ಕೊಡಲಾಯಿತು. ಆದರೆ, ಇದ್ದಕ್ಕಿದ್ದಂತೆ ಗಾಂಧಿ ಮತ್ತು ಕಾಂಗ್ರೆಸ್ಸಿನ ಮೇಲಿನ ಭರವಸೆಯಿಂದಾಗಿ ವಲಸೆ ಹೋದ ಮುಸ್ಲಿಮರೆಲ್ಲರು ಮರಳಿ ಭಾರತಕ್ಕೆ ಬರಲಾರಂಭಿಸಿದರು. ಹಾಗೆ ಬಂದ ಆ ಮುಸ್ಲಿಂ ವ್ಯಾಪಾರಿ ತನ್ನ ಅಂಗಡಿಯನ್ನು ಮರಳಿ ತನಗೇ ಕೊಡಬೇಕೆಂದು ಜಗಳ ತೆಗೆದ. ಈತ ಕೊಡಲಾರ, ಆತ ಬಿಡಲಾರ. ವ್ಯಕ್ತಿಗತ ವಿಷಯ ಕೋಮು ರೂಪ ಪಡೆಯಿತು. ಪರಿಸ್ಥಿತಿ ಕೈಮೀರಿ ಹೋಯಿತು. ಪೋಲಿಸ್ ಮತ್ತು ಸೈನ್ಯದ

ಸಹಾಯದಿಂದ ಸಂದರ್ಭವನ್ನು ತಿಳಿಗೊಳಿಸುವ ಯತ್ನ ನಡೆಯಿತು. ಗಾಳಿಯಲ್ಲಿ ಗುಂಡು, ಅಶ್ರುವಾಯು ಬಳಸಿ ಸ್ಥಿತಿಯನ್ನು ತಹಬಂದಿಗೆ ತರಲಾಯಿತು, ಅದರೆ ಇದು ಗಾಂಧಿಯ ಅಹಿಂಸೆಯ ಭರವಸೆಗೆ ಬಹಳ ದೊಡ್ಡ ಹೊಡೆತವಾಗಿತ್ತು.

ಈ ದಿನದ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಮಾತನಾಡಿದ ಗಾಂಧಿ, "ಕೂಡಲೇ ತಪ್ಪಿತಸ್ಥರ ಬಂಧನವಾಗಬೇಕು, ಅಂಗಡಿಯನ್ನು ಮರಳಿ ಮೂಲ ಆ ವ್ಯಕಿಗೇ ಕೊಡಬೇಕು. ಇಲ್ಲದೇ ಹೋದಲ್ಲಿ ಸರ್ಕಾರಕ್ಕೆ ಯಾವ ಅರ್ಥವೂ ಇರುವುದಿಲ್ಲ" ಎಂದು ಫರ್ಮಾನು ಹೊರಡಿಸಿದ. ಮುಂದುವರೆದು ಆತ ಮಾತನಾಡಿದುದು ಬಹಳಷ್ಟಿದೆ. ನಿರಾಶ್ರಿತರ ಪುನರ್ವಸತಿಯ ಜವಾಬ್ದಾರಿಯನ್ನು ಈ ಎ.ಐ.ಸಿ.ಸಿ. ಗಂಭೀರವಾಗಿ ತೆಗೆದುಕೊಂಡಿದ್ದೇ ತನ್ನಿಂದ, ಒಬ್ಬ ಸಾಮಾನ್ಯ ಮುಸ್ಲಿಮನ ಹತ್ಯೆಯಾಗುವುದಕ್ಕೂ ತಾನು ಮೂಕಸಾಕ್ಷಿಯಾಗಲು ಸಿದ್ಧನಿಲ್ಲ. ದೇಶದಲ್ಲಿಯ ಎಲ್ಲ ಆಘಾತಗಳ ನಂತರವೂ ಇನ್ನೂ ೩೫೦ ಮಿಲಿಯನ್ ಮುಸ್ಲಿಮರು ಭಾರತದಲ್ಲಿದ್ದಾರೆ. ಅದೆಷ್ಟು ಜನ ಹೊರಟುಹೋಗಿದ್ದಾರೆ ಮತ್ತು ಇನ್ನೂ ಬರುವವರಿದ್ದಾರೆ ಅದೂ ಸ್ಪಷ್ಟವಿಲ್ಲ, ಆದರೆ ಬರುವವರಿಗೆ ಇಲ್ಲಿ ಬದುಕಿನ ಭರವಸೆ ಸಿಗಬೇಕು, ಅವರನ್ನು ಸಹೋದರರಂತೆಯೇ ಕಾಣಬೇಕು, ಮುಸ್ಲಿಮರನ್ನು ವೈರಿಗಳಂತೆ ಕಾಣುವ ಮನಸ್ಥಿತಿಯಿಂದ ನಾವು ಹೊರಗೆ ಬರಬೇಕು ಎನ್ನುವುದು ನನ್ನ ಬಲವಾದ ಒತ್ತಾಯ" ಎಂದು ಗಾಂಧಿ ಖಾರವಾಗಿಯೇ ಹೇಳಿದ. ಭಾರತದಲ್ಲಿಯ ಅಲ್ಪಸಂಖ್ಯಾತರಿಗೆ ಬಹುಸಂಖ್ಯಾತರಿಂದಲೇ ಅನ್ಯಾಯವಾಗುತ್ತಿದೆ ಎನ್ನುವ ರೀತಿಯಲ್ಲಿ ಗಾಂಧಿ ಮಾತನಾಡುತ್ತಿದ್ದಾನೆ ಎನ್ನುವುದು ಇಲ್ಲಿಗೆ ಸ್ಪಷ್ಟವಾಗಿತ್ತು. ಸ್ವಾತಂತ್ರ್ಯ ಸಿಗುವವರೆಗೆ ಸತ್ಯಾಗ್ರಹ ಮತ್ತು ಅಹಿಂಸೆಯನ್ನು ಪಾಲಿಸಿದವರಂತೆ ನಟಿಸಿದ ತನ್ನ ಜನರಿಂದಲೇ ತನಗೆ ಇನ್ನಿಲ್ಲದ ಅಪಮಾನವಾಯಿತು ಎನ್ನುವ ಧ್ವನಿಯೂ ಗಾಂಧಿಯ ಮಾತುಗಳಲ್ಲಿತ್ತು. ಅದನ್ನು ಆತ ಸ್ಪಷ್ಟಗೊಳಿಸಿದ್ದಾನೆ: "Truth and Ahimsa had been the weapons for achieving Swaraj. Today we have forgotten both Mistaken. I consider it my good luck that God has at last opened my eyes. I regard it now as God's grace that even if I can do nothing else, I shall now be able to do or die, bravely taking the name of God. If Hindus and Muslims become sincere friends, I will tour the whole of India and then go to Pakistan." ದುರಂತವೆಂದರೆ ಪಾಕಿಸ್ತಾನಕ್ಕೆ ಹೋಗಬೇಕೆನ್ನುವ ಗಾಂಧಿಯ ಆಸೆ ಕೊನೆಗೂ ಆಸೆಯಾಗಿಯೇ ಉಳಿಯುತ್ತದೆ. ಈತನ ಚಿತಾಭಸ್ಮವನ್ನು ಸಿಂಧೂ ನದಿಯಲ್ಲಿ ವಿಸರ್ಜಿಸಲು ಪಾಕಿಸ್ತಾನದ ಸರಕಾರ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ. ಭಾರತದ ಇತಿಹಾಸದಲ್ಲಿ ಇದಕ್ಕಿಂತ ವ್ಯಂಗ್ಯ ಮತ್ತೊಂದಿಲ್ಲ. ❑



ಗಾಂಧಿ ಎಂಬ ಜೂಜುಕೋರ

ಇಂದು ನವೆಂಬರ್ ೨೦, ಗಾಂಧಿಯ ತಲೆಯ ತುಂಬ ಬಾರಾಮುಲ್ಲಾದ ಕಾಶ್ಮೀರಿ ಮುಸ್ಲಿಂ ಯುವಕ, ಮೀರ್ ಮಕ್ಬುಲ್ ಶೇರ್‌ವಾನಿಯದೇ ಆಲೋಚನೆ. ಆಜಾದ್ ಕಾಶ್ಮೀರ್ ಸಂಘಟನೆಯ ಒತ್ತಾಯಕ್ಕೂ ಮಣಿಯದೇ ತನ್ನ ವಿಚಾರಗಳನ್ನು ಆತ ಭಾರತದ ಪರವಾಗಿ ಹೇಳಿದ್ದಕ್ಕಾಗಿ ೩೦ ವರ್ಷದ ಈ ಯುವಕನನ್ನು ಕಂಬಕ್ಕೆ ಕಟ್ಟಿ, ೧೪ ಗುಂಡುಗಳನ್ನು ಆತನ ದೇಹಕ್ಕೆ ಸಿಡಿಸುವುದರ ಮೂಲಕ ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಹಿಂದೂಗಳಿಗೆ, ಮುಸ್ಲಿಮರ ಪ್ರಾಮಾಣಿಕತೆಯನ್ನು ಕುರಿತು ನಿರಂತರ ಪಾಠ ಮಾಡುತ್ತಿದ್ದ ಗಾಂಧಿಯ ಕೈಯಲ್ಲಿ ಈಗ ದೊಡ್ಡ ಸಾಕ್ಷಿಯೊಂದು ಸಿಕ್ಕಿತ್ತು. ಇಂದು ತನ್ನ ಬಳಿ ಬಂದ ಹಿಂದೂ, ಮುಸ್ಲಿಂ, ಸಿಖ್ ಎಲ್ಲರಿಗೂ ನೀವೆಲ್ಲಾ ಅಭಿಮಾನಪಡಬೇಕಾದ ಮುಸ್ಲಿಂ ಯುವಕ ಈತ. ಆತನ

ದೇಶಾಭಿಮಾನವನ್ನು ಮೆಚ್ಚಲು ಆತನ ಜಾತಿ ಎಂದಿಗೂ ಅಡ್ಡಿಬರಬೇಕಿಲ್ಲ ಎಂದು ಹೇಳುತ್ತಲೇ ಇದ್ದ. ಹೀಗೆ ಹೇಳುವಾಗ ಮುಸ್ಲಿಮನೊಬ್ಬನ ದೇಶಭಕ್ತಿಗೆ ಗಾಂಧಿ ರೋಮಾಂಚನಗೊಂಡಿದ್ದ ಎಂದು ಕೆಲವರ ವಾದ. ಆದರೆ ಗಾಂಧಿ ಖುಷಿಯಾಗಿರುವುದು ಆತನ ಶ್ರದ್ಧೆಗೆ.

ಇದೇ ಯುವಕನ ಆದರ್ಶವನ್ನು ಆತ ಬಿರ್ಲಾ ಹೌಸ್‌ನ ಸಮೀಪದಲ್ಲಿ ಇರುವ ಓಕ್ಲಾ ಎಂಬ ಪ್ರದೇಶದಲ್ಲಿ ಬಂದು ಸೇರಿದ್ದ ಹಿಂದೂಗಳಿಗೂ ಇಂದು ಹೇಳಬೇಕಿತ್ತು ಗಾಂಧಿ. ಒಂದೆಡೆ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ, ಮತ್ತೊಂದೆಡೆ ಯಮುನಾ ನದಿ ಇವುಗಳ ಮಧ್ಯ ಇರುವ ಧರ್ಮಶಾಲೆಗಳಲ್ಲಿ ದೂರದೂರದ ಹಿಂದೂ ನಿರಾಶ್ರಿತರು ಬಂದು ಸೇರಿಕೊಂಡಿದ್ದರು. ಅವರೆಲ್ಲರಿಗೂ ಸತ್ಯಸಂಧ ಬದುಕಿನ ಮಹತ್ವವನ್ನು ವಿವರಿಸಬೇಕಾಗಿತ್ತು ಗಾಂಧಿಗೆ. ಯಾಕೆಂದರೆ ಬಂದು ಸೇರಿದ ನಿರಾಶ್ರಿತರಲ್ಲಿ ಕೆಲವರು ಕಾಳದಂಧೆಯಲ್ಲಿ ತೊಡಗಿದ್ದಾರೆನ್ನುವುದು ಗಾಂಧಿಗೇ ತಿಳಿದುಹೋಗಿತ್ತು. ಅಧಿಕಾರಿಗಳು ಪಥಭ್ರಷ್ಟರಾಗಿದ್ದರು. ನಿರಾಶ್ರಿತರ ತಾಣಗಳಲ್ಲಿ ಜನರಿಗೆ ಅವಕಾಶ ಮಾಡಿಕೊಡಲು ಅವರು ಲಂಚ ತೆಗೆದುಕೊಳ್ಳುತ್ತಿದ್ದಾರೆನ್ನುವುದೂ ಜಗಜ್ಜಾಹೀರುಗೊಂಡಿತ್ತು. ಹೀಗೆ ಪ್ರತಿ ನಿರಾಶ್ರಿತರ ತಾಣವೆನ್ನುವುದು ಭಯೋತ್ಪಾದಕರ, ಸಮಾಜ ವಿರೋಧಿ ಸಂಚುಗಳನ್ನು ರೂಪಿಸುವವರ ಅಡಗು ತಾಣಗಳಾಗಿಯೂ ಕೂಡ ಮಾರ್ಪಟ್ಟಿದ್ದವು. ಆದರೆ ಗಾಂಧಿ ಇಂತಹವರ ಮುಂದೆ ಕುಳಿತು ಈ ಒಂದು ಕಥೆಯನ್ನು ಹೇಳುತ್ತಿದ್ದ –

ನಾರಾಯಣ ಸಿಂಗ್, ಪಶ್ಚಿಮ ಪಂಜಾಬಿನಲ್ಲಿ ಅಪಾರ ಆಸ್ತಿಯನ್ನು ಹೊಂದಿದ್ದ ಒಬ್ಬ ನಿವೃತ್ತ ಅಧಿಕಾರಿ. ಆತನಿಗೊಬ್ಬ ಆತ್ಮೀಯ ಗೆಳೆಯ ಅಲಿ ಷಾ. ೧೫ ಆಗಸ್ಟ್ ೧೯೪೭ರ ದಿನ ಕೋಮು ದಂಗೆಗೆ ಬಲಿಯಾದ ನಾರಾಯಣ ಸಿಂಗ್ ತನ್ನ ಸರ್ವಸ್ವವನ್ನೂ ಕಳೆದುಕೊಂಡ. ದೆಹಲಿಗೆ ಬಂದ. ಈಗ ಆತ ಭಿಕ್ಷೆ ಬೇಡಬೇಕು ಇಲ್ಲವೇ ಸಾವನ್ನು ಎದುರಿಸಬೇಕು. ಇವೆರಡೇ ಆತನ ಮುಂದಿರುವ ಆಯ್ಕೆ. ಇನ್ನೇನು ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನುವಷ್ಟರಲ್ಲಿ ಆತನ ಪ್ರೀತಿಯ ಮುಸ್ಲಿಂ ಗೆಳೆಯ ಅಲಿ ಷಾ ಸಿಕ್ಕ. ಎದೆಗವಚಿಕೊಂಡು ಅತ್ತ, ಆದರೆ ಗೆಳೆಯನಿಗೆ ಬದುಕಿನ ಭರವಸೆ ಕೊಟ್ಟ. ದಂಗೆಯಲ್ಲಿ ಸ್ವಯಂ ಎಲ್ಲವನ್ನೂ ಕಳೆದುಕೊಂಡಿದ್ದ ಅಲಿ ಷಾ ನಾರಾಯಣ್ ಸಿಂಗ್‌ನಿಗೆ ಎಲ್ಲವೂ ಆದ. ಮತ್ತೆ ಜೀವನ ರೂಪಿಸಿಕೊಟ್ಟ. ಕತೆಯ ಕೊನೆಯಲ್ಲಿ ಗಾಂಧಿ ಹೇಳಿದ: "Ali Shah is a courageous man and so is Narayana Singh. Both of them have lost their all, but they have found again their precious friendship."

ಈ ಕತೆಯನ್ನು ಹೇಳುವಾಗ ಕಾಶ್ಮೀರದ ಸಮಸ್ಯೆಯನ್ನು ಒಡಲೊಳಗೆ ಇಟ್ಟುಕೊಂಡಿದ್ದ ಭಾರತದ ಪ್ರಧಾನಿ ಪಂಡಿತ್ ನೆಹರು ಹಾಗೂ ಉಪಪ್ರಧಾನಿ ಸರ್ದಾರ್ ಪಟೇಲ್ ಅಲ್ಲಿಯೇ ಇದ್ದರು. ಗಾಂಧಿಯ ಕತೆಯನ್ನು ಅವರೀರ್ವರು ಅತ್ಯಂತ ನಿಷ್ಠೆಯಿಂದ ಕೇಳುತ್ತಿದ್ದರು. ಆದರೆ ಗಾಂಧಿಯ ಪ್ರತಿ ವಾಕ್ಯವನ್ನು, ಚಲನವಲನೆಯನ್ನು ಅತ್ಯಂತ ಕೂಲಂಕಷವಾಗಿ ಗಮನಿಸುತ್ತಾ ಈ ಗಾಂಧಿಯ ಹತ್ಯೆಗೆ ಬೇಕಾಗಿದ್ದ ಒಂದು ಬಂದೂಕಿಗಾಗಿ ಹೆಚ್ಚೂ ಕಡಿಮೆ ಇದೇ ವೇಳೆಯಲ್ಲಿ ಹುಡುಕಾಡುತ್ತಿದ್ದ ಗೋಡ್ಸೆ ಹಿಂದೂ-ಮುಸ್ಲಿಂ ಸಾಮರಸ್ಯದ ಗಾಂಧಿಯ ಈ ಪ್ರಯತ್ನವನ್ನು ವ್ಯಾಖ್ಯಾನಿಸುವ ರೀತಿಯೇ ಭಿನ್ನವಾಗಿತ್ತು. ಆತ ಹೇಳುತ್ತಾನೆ, "ಹಿಂದೂ-ಮುಸ್ಲಿಂ ಸಮುದಾಯಗಳ ಏಕೈಕ ಮುಖಂಡರಾಗುವ ಸದಿಚ್ಛೆಯನ್ನು ಗಾಂಧೀಜಿಯವರು ಉಳಿಸಿಕೊಂಡೇ ನಡೆದರು. ಈ ಪ್ರಯತ್ನದಲ್ಲಿ ಹೆಚ್ಚು ಹೆಚ್ಚಾಗಿ ಅಪಯಶಸ್ಸು ಹೊಂದುತ್ತಾ ಹೋದಂತೆ, ಅವರು ಹೆಚ್ಚು ಹೆಚ್ಚಾಗಿ ಅಳತೆಗೆಟ್ಟ ರೀತಿಗಳಲ್ಲಿ ಮುಸ್ಲಿಮರನ್ನು ಉತ್ತೇಜಿಸಿದರು. ಪರಿಸ್ಥಿತಿ ಕೆಡುತ್ತಲೇ ಹೋಯಿತು. ಲೋಕಪ್ರಸಿದ್ಧನಾದ ಜೂಜುಕೋರನಂತೆ ಗಾಂಧೀಜಿಯವರು ತಾವು ಪಣಕ್ಕೆ ಇಟ್ಟ ಮೊತ್ತವನ್ನು ಹೆಚ್ಚಿಸುತ್ತಲೇ ಹೋದರು."

ನಾಥೂರಾಮನ ವಾದವಿಷ್ಟೇ, ಗಾಂಧಿಯ ಗ್ರಹಿಕೆ ತಪ್ಪಾಗಿದೆ. ಹಿಂದೂ-ಮುಸ್ಲಿಂ ಸಾಮರಸ್ಯದ ಬಗೆಗಿನ ಭ್ರಮಾತ್ಮಕ ನೀತಿಯೇ ಕಳೆದ ಮೂರು ದಶಕಗಳಿಂದ ಈ ದೇಶವನ್ನು ಚೂರು-ಚೂರುಗೊಳಿಸಿದೆ. ಈ ದೇಶದ ಐದು ಕೋಟಿ ಮುಸ್ಲಿಮರು ಇದರ ಮಾನಾಪಮಾನಗಳೊಂದಿಗೆ ಇಲ್ಲಿಯ ಪ್ರಜೆಗಳಾಗಿ ಎಂದಿಗೂ ಉಳಿಯಲಿಲ್ಲ. ಇಂತಹ ಒಂದು ಆಲೋಚನೆಯೇ ೧೧೦ ದಶಲಕ್ಷ ಜನರನ್ನು ನಿರಾಶ್ರಿತರನ್ನಾಗಿಸಿತು. ೪ ದಶಲಕ್ಷ ಮುಸ್ಲಿಮರನ್ನು ನರಕಕ್ಕೆ ತಳ್ಳಿತು. ಆತ ಬರೆಯುತ್ತಾನೆ, "ಇಂತಹ ಭಯಾನಕ ಪರಿಸ್ಥಿತಿಯ ನಿರ್ಮಾಣದ ನಂತರವೂ ಸಹ ಗಾಂಧೀಜಿಯವರು ತಮ್ಮ ಮೊದಲಿನ ತುಷ್ಟೀಕರಣ ನೀತಿಯನ್ನೇ ಮುಂದುವರೆಸಿಕೊಂಡು ಬಂದರು. ನನ್ನ ರಕ್ತ ಕುದಿಯಿತು. ಅವರನ್ನು ಸಹಿಸಿಕೊಂಡಿರುವುದು ನನಗೆ ಸಾಧ್ಯವಿಲ್ಲದಾಯಿತು. ವೈಯಕ್ತಿಕವಾಗಿ ಗಾಂಧೀಜಿಯವರ ವಿರುದ್ಧ ಕಠಿಣ ಶಬ್ದಗಳನ್ನು ಉಪಯೋಗಿಸಲು ನಾನು ಇಚ್ಛಿಸುವುದಿಲ್ಲ; ಆದರೆ ಒಡೆದು ಆಳುವ ನೀತಿಯ ಮೂಲಕ ಬ್ರಿಟಿಷರು ಸಾಧಿಸಬೇಕೆಂದಿದ್ದನ್ನು ಗಾಂಧೀಜಿಯವರು ಸಾಧಿಸುವಲ್ಲಿ ಯಶಸ್ವಿಯಾದರು ಎಂದು ಹೇಳಿದರೆ ಸತ್ಯವನ್ನೇ ಹೇಳಿದಂತಾಗುತ್ತದೆ."

ಇದು, ಸತ್ಯದ ಆರಾಧಕನೊಬ್ಬನ ಮೇಲೆ ಸತ್ಯವಂತನೊಬ್ಬನು ಸೇಡು ತೀರಿಸಿಕೊಳ್ಳುವ ಪರಿ.

ಗೋಡ್ಸೆಗೆ ಹಿಂದುತ್ವದ ಒಂದೇ ಒಂದು ಅಂಶದ ಕ್ರಿಯಾಯೋಜನೆ ಇದ್ದರೆ, ಗಾಂಧಿಗೆ ಒಂದೊಂದು ಕ್ಷಣಕ್ಕೂ ಒಂದೊಂದು ಯೋಜನೆ, ಒಂದೊಂದು ಹೊಸ ಸಮಸ್ಯೆ. ದೂರದ ರೋಹಟಕ್‌ನಿಂದ ಹರಿಜನರ ಸಮುದಾಯ ಇಂದು ಗಾಂಧಿಯನ್ನು ಕಾಣಲು ಬಂದಿದೆ. ಅಲ್ಲಿಯ ಬಹುಸಂಖ್ಯಾತರಾದ ಜಾಠರು ಮತ್ತು ಆಹೀರರು ಅವರನ್ನು ನಿರಂತರ ಪೀಡಿಸುತ್ತಿದ್ದಾರೆ. ಶೈಕ್ಷಣಿಕ ಸೌಲಭ್ಯಗಳಿಂದ ಅವರ ಮಕ್ಕಳನ್ನು ವಂಚಿತರನ್ನಾಗಿ ಮಾಡುತ್ತಿದ್ದಾರೆ. ಶಾಲೆ ಕಾಲೇಜುಗಳಿಗೆ ಬರದಂತೆ ನಿಷೇಧ ಹೇರಿದ್ದಾರೆ. ಕೆಲವು ಹರಿಜನ ಕುಶಲಕರ್ಮಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಬ್ರಿಟಿಷ್ ಆಳ್ವಿಕೆಯಲ್ಲಿ ಕಾನೂನಿನ ಬಗ್ಗೆ ಇದ್ದ ಭಯ, ಗೌರವ ಈಗ ರೋಹಟಕ್ ಜಿಲ್ಲೆಯಲ್ಲಿ ಒಂದಿಷ್ಟೂ ಉಳಿದುಕೊಂಡಿಲ್ಲ. ಮೇಲ್ಜಾತಿಯವರು ಈಗ ದೇಶ ನಮ್ಮದೇ ಎಂದು ಮನಸ್ಸಿಚ್ಛೇ ವರ್ತಿಸುತ್ತಿದ್ದಾರೆ. ಇದನ್ನೆಲ್ಲ ಕಿವಿಗೊಟ್ಟು ಕೇಳಿದ ಗಾಂಧಿ ಒಬ್ಬ ನಾಯಕನಾಗಿ ಕಣ್ಣೀರು ಹಾಕುವ ಸ್ಥಿತಿಯಲ್ಲಿರಲಿಲ್ಲ. ಆತ ಎಲ್ಲರಿಗೂ ಪರಿಹಾರಗಳನ್ನು ನೀಡಲೇಬೇಕು, ನೀಡುತ್ತಲೇ ಇರಬೇಕು. ಜವಾಬ್ದಾರಿಯುತ ಹಿರಿಯನ ಜವಾಬ್ದಾರಿಗಳವು. ಇದನ್ನೆಲ್ಲ ಕೇಳಿ ಸಿಟ್ಟಾದ ಗಾಂಧಿ ಹೇಳಿದ, "ಈಗ ನಮ್ಮನ್ನು ಪರಕೀಯರು ಆಳುತ್ತಿಲ್ಲ, ಆದರೆ ದುರಂತ– ನಮ್ಮ ಸರಕಾರಕ್ಕೆ ನಾವೇ ಉದ್ಧಟರಾಗಿದ್ದೇವೆ. ನಾವು ಹೇಗೆ ಬೇಕಾದರೂ ವರ್ತಿಸಬಹುದು ಎಂದುಕೊಂಡಿದ್ದೇವೆ. ನಮ್ಮನ್ನು ಪರೀಕ್ಷಿಸುವವರು, ನಿಯಂತ್ರಿಸುವವರು ಯಾರೂ ಇಲ್ಲ ಎಂದು ಹೇಗೆಲ್ಲ ಹೊರಟಿದ್ದೇವೆ. ನ್ಯಾಯಾಂಗದ ತೀರ್ಪನ್ನೂ ಬದಲಿಸಬಲ್ಲೆವು ಎನ್ನುವ ಮಹಾ ಮೊಂಡುತನ ಬೆಳದಿದೆ. ಇಂತಹವರನ್ನ, ಇಂತಹದನ್ನ ಯಾರು ನಿಯಂತ್ರಿಸಲು ಸಾಧ್ಯವಿದೆ? ಕೇಳುವ ಸಹನೆಯನ್ನೇ ಕಳೆದುಕೊಂಡವರಿಗೆ ದೇವರೂ ಕೈ ಹಿಡಿಯಲಾರ. ಬ್ರಿಟಿಷ್ ಆಳ್ವಿಕೆ ಇಲ್ಲ ಎಂದ ಮಾತ್ರಕ್ಕೆ ನಮ್ಮ ವರ್ತನೆ ಹೀಗೆ ಬದಲಾಗಬಾರದು. ಹರಿಜನರ ವಿಷಯದಲ್ಲಿ ನಾವು ಇದುವರೆಗೆ ಅಮಾನವೀಯವಾದುದನ್ನೇ ಶತಮಾನಗಳಿಂದ ಮಾಡಿದ್ದೇವೆ. ಅವರೊಂದಿಗೆ ಅಧರ್ಮದಿಂದಲೇ ನಡೆದುಕೊಂಡಿದ್ದೇವೆ. ಇಂತಹದನ್ನು ನಿಲ್ಲಿಸುವುದಕ್ಕಾಗಿಯೇ ಹರಿಜನ ಸೇವಕ ಸಂಘ ಹುಟ್ಟಿಕೊಂಡಿದೆ. ಅವರೇ ಪರಿಪೂರ್ಣ ಹಿಂದೂಗಳು. ಹಿಂದೂ ಸಿದ್ಧಾಂತದಲ್ಲಿ ಐದನೇ ಜಾತಿಯೆನ್ನುವುದು ಇಲ್ಲವೇ ಇಲ್ಲ. ವರ್ಣ ವ್ಯವಸ್ಥೆಯಲ್ಲಿ ಮೇಲು ಕೀಳು ಎನ್ನುವುದಿಲ್ಲ. ಬ್ರಾಹ್ಮಣರು ಪಾಠ–ಪ್ರವಚನಕ್ಕೆ, ಕ್ಷತ್ರಿಯರು ರಕ್ಷಣೆಗೆ, ವೈಶ್ಯರು ವ್ಯಾಪಾರಕ್ಕೆ, ಶೂದ್ರರು ಅನೇಕ ರೀತಿಯ ಪೂರಕ ಸೇವೆಗೆ. ಹೀಗೆ ಇದು ಕಾರ್ಯವಿಭಜನೆ ಅಷ್ಟೆ. ನಾಲ್ಕೂ ಗುಂಪಿನವರು ಒಟ್ಟಾಗಿ ಮನುಷ್ಯ ಸಮಾಜದ ಸೇವೆಗಾಗಿಯೇ ಮುಡಿಪಾದವರು. ಒಬ್ಬರಿನ್ನೊಬ್ಬರೊಂದಿಗೆ


ಬರೆಯಬಾರದೆನ್ನುವ ನಿಯಮವೇನೂ ಇಲ್ಲ, ಅಷ್ಟೆ. ಇದು ನಿಜವಾದ ಹಿಂದೂ ಧರ್ಮ. ಪ್ರತಿಯೊಬ್ಬನೂ ಸರಿಯಾದ ತಿಳುವಳಿಕೆಯಿಂದ ಈ ಧರ್ಮವನ್ನು ಪಾಲಿಸಿದರೆ ಧಾರ್ಮಿಕ ಕ್ಲೇಶಕ್ಕೆ ಅವಕಾಶವೆಲ್ಲಿ? ಹರಿಜನ ಬಂಧುಗಳನ್ನು ಕನಿಷ್ಠವಾಗಿ ಕಾಣುವ ಪ್ರಮೇಯವೆಲ್ಲಿದೆ? We are all bound to accept the Harijans whole- heartedly."

ಗಾಂಧಿಯ ಈ ಕಾಳಜಿಗಳನ್ನು ಸಂಶಯಿಸುವುದು ಇಡಿಯಾಗಿ ಮನುಷ್ಯತ್ವವನ್ನೇ ಸಂಶಯಿಸಿದಂತೆ, ಅಲ್ಲವೆ? ಹರಿಜನೋದ್ಧಾರಕ್ಕಾಗಿ ಅತ್ಯಂತ ಪ್ರಾಮಾಣಿಕವಾಗಿ ದುಡಿದವರಲ್ಲಿ ಗಾಂಧಿಯೂ ಒಬ್ಬ. ಆದರೆ ಅಂತಿಮವಾಗಿ ಮುಸ್ಲಿಮರ ನೆಲೆಯಲ್ಲಿ ಯಾವ ಅಪನಂಬಿಕೆಯ ಘಟ್ಟವನ್ನು ಗಾಂಧಿ ತಲುಪಿದನೋ ಅದೇ ಅಪನಂಬಿಕೆಯನ್ನು ಗಾಂಧಿ ಹರಿಜನೋದ್ಧಾರದ ವಿಚಾರದಲ್ಲೂ ಗಳಿಸಿಕೊಂಡ. ಡಾ. ಬಾಬಾ ಸಾಹೇಬ್ ಅಂಬೇಡ್ಕರರ ಗಾಂಧಿ ಕುರಿತಾದ ಆಪಾದನೆ, ತಕರಾರು, ವಿರೋಧಗಳಂತೂ ಗೋಡ್ಸೆಗಿಂತಲೂ ವೈಚಾರಿಕವಾಗಿ ಮತ್ತು ವ್ಯಾವಹಾರಿಕವಾಗಿ ಪ್ರಬುದ್ಧ. ವ್ಯತ್ಯಾಸವಿಷ್ಟೆ, ಶತಮಾನಗಳಿಂದ ಮೇಲ್ಜಾತಿಯವರ ತುಳಿತ, ದೌರ್ಜನ್ಯ, ಅಪಮಾನಗಳ ಕುಲುಮೆಯಲ್ಲಿ ಬೆಂದು ರೂಪುಗೊಂಡಿದ್ದ ಬಾಬಾ ಸಾಹೇಬ್ ಪ್ರತಿರೋಧದ ಪ್ರಜಾಸತ್ತಾತ್ಮಕ ದಾರಿಗಳನ್ನು ಗಾಂಧಿಗಿಂತಲೂ ಚೆನ್ನಾಗಿ ತಿಳಿದುಕೊಂಡವರಾಗಿದ್ದರು. ಮನುಷ್ಯನೇ ಒಂದು ಆಯುಧವೆಂದು ಮನಗಂಡಿದ್ದ ಅವರಿಗೆ, ದೇಹವನ್ನು ಮುಗಿಸುವ ಆಯುಧದ ಅವಶ್ಯಕತೆ ಇರಲಿಲ್ಲ. ಅವರ ದಾರಿ, ಆಲೋಚನೆಗಳೇ ಭಿನ್ನವಾಗಿದ್ದವು. ಅವರು ಗೋಡ್ಸೆ ಹಾಗೂ ಗಾಂಧಿ ಇಬ್ಬರಂತೆಯೂ ದ್ವಂದ್ವದಲ್ಲಿರಲಿಲ್ಲ.

ಇಲ್ಲೊಂದು ವಿಚಾರ ಸಿದ್ಧಾಂತಗಳ ಹಲವಾರು ಹಂತಗಳಲ್ಲಿ ವಿರೋಧಿಗಳಂತೆ ಕಾಣುವ ಗಾಂಧಿ ಮತ್ತು ಅಂಬೇಡ್ಕರ್ ಕುರಿತು ಆತ್ಮಶ್ರದ್ಧೆಯಿಲ್ಲದ ಓದನ್ನು ಮಾಡಿ, ರೋಚಕತೆಯನ್ನು ವಿಜೃಂಭಿಸುವ ಅಂಶಗಳನ್ನಿಟ್ಟುಕೊಂಡು ಹೇಳುವಂತೆ ಅವರದೇನು ಬೀದಿ ಕಾಳಗವಾಗಿತ್ತೆ? ತುಂಬಿದ ಸಭೆಯಲ್ಲಿ ಕೂಡಿದ ಕೋಮನ್ನು ಮೆಚ್ಚಿಸಲು ಮಾತನಾಡುವ ಬಹಳಷ್ಟು ಪಂಡಿತರು ಅವರಿಬ್ಬರಿಂದಲೂ ವ್ಯಕ್ತಿ ಗೌರವದ, ಅಧ್ಯಯನಶೀಲತೆಯ, ಪ್ರಾಮಾಣಿಕ ನಿಗರ್ವ ಸೇವೆಯ, ರಾಷ್ಟ್ರನಿಷ್ಠೆಯ ಪಾಠಗಳನ್ನು ಕಲಿಯಬೇಕಿದೆ. ಅಂಬೇಡ್ಕರರ ಎಲ್ಲ ರೋಷಕ್ಕೂ ಅರ್ಥ ಕೊಡುವ ಒಂದು ಆಧಾರ ಗಾಂಧಿಯೇ ಎಂದು ಅಂಬೇಡ್ಕರರಿಗೂ, ಈ ಅಂಬೇಡ್ಕರ್, ಜೆ.ಪಿ.ಲೋಹಿಯಾಗಳೇ ಭಾರತದ ನಾಳಿನ ಕನಸು ಎಂದು ಗಾಂಧಿಗೂ ಚೆನ್ನಾಗಿ

ತಿಳಿದಿರುವುದರಿಂದಲೇ ಇಲ್ಲಿ ಒಂದಿಷ್ಟು ಸಾಧನೆಯಾಗಿತೇ ವಿನಃ ಪರಸ್ಪರ ನ್ಯೂನತೆಗಳನ್ನು ಅಬ್ಬರಿಸಿದ್ದರಿಂದ ಅಲ್ಲ. ಗಾಂಧಿ, ಅಂಬೇಡ್ಕರ್ ಇಬ್ಬರೂ ನಮ್ಮಂತಹ ಮನುಷ್ಯರೇ ಆಗಿದ್ದರು. ಶಕ್ತಿ ಮೀರಿ ದುಡಿದರು, ಮಡಿದರು, ಇರುವಷ್ಟು ಕಾಲ ಮಾಡಿದರು. ಆದರೆ ಇವರಿಬ್ಬರ ನ್ಯೂನತೆಗಳನ್ನೂ ದಿನಾಂಕ ಸಹಿತ ಹೇಳುವ ನಮ್ಮ ಕೊಡುಗೆ ಏನು ಎಂಬುದೇ ನನಗೆ ಹೊಳೆಯುತ್ತಿಲ್ಲ.

❑



ಹಿಂದೂಯಿಸಂ ಎಂದರೇನು?

‘ಈ ವಿಶ್ವದಲ್ಲಿ ಮುಸ್ಲಿಮರಿಗೆ ೪೬ ದೇಶಗಳಿವೆ, ಕ್ರಿಶ್ಚಿಯನರಿಗೆ ೮೦ ರಾಷ್ಟ್ರಗಳಿವೆ, ಅದೇ ಹಿಂದೂಗಳಿಗೆ ಇರುವುದು ಕೇವಲ ಇದೊಂದೇ ದೇಶ’ ಎನ್ನುವ ವಾದವನ್ನು ಹಿಂದೂಗಳು ಮಂಡಿಸುತ್ತಿರುವಾಗಲೂ ಈಗಾಗಲೆ ಕಾಶ್ಮೀರದಲ್ಲಿ ಮೂರುವರೆ ಲಕ್ಷ ಹಿಂದೂಗಳ ಉಚ್ಚಾಟನೆಯಾಗಿದೆ ಎನ್ನುವ ಸತ್ಯ ಗೊತ್ತಿದ್ದಾಗ್ಯೂ ಗಾಂಧಿಯ ಸಾಮರಸ್ಯದ ಕನಸು ನಿರಂತರಗೊಂಡಿತು. ಎಲ್ಲ ಹಿಂಸಾಚಾರ, ಒತ್ತಡ, ಜಗಳಗಳ ಮಧ್ಯವೂ ಗಾಂಧಿ ಈ ನೆಲದ ಋಣವನ್ನು ಪ್ರಾಮಾಣಿಕವಾಗಿ ತೀರಿಸುವುದೆಂದರೆ ಹಿಂದೂ-ಮುಸ್ಲಿಮರ ಮಧ್ಯ ಸಾಮರಸ್ಯವನ್ನು ಸಾಧಿಸಿ ತೋರಿಸುವುದೇ ಆಗಿದೆ ಎಂದು ತನ್ನ ವಾದವನ್ನು ಮುಂದಿಟ್ಟುಕೊಂಡು ಹೊರಟ. ಮುಸ್ಲಿಮರನ್ನು ವಿರೋಧಿಸುವ ಹಿಂದೂಗಳಿಗೆ ಹಿಂದೂ ಪದದ ಸರಿಯಾದ ಅರ್ಥ ಗೊತ್ತಿಲ್ಲ ಎಂದು, ಶನಿವಾರ

ನವೆಂಬರ್ ೨೨ರ ಸಾಯಂಕಾಲ ಹಿಂದೂ ಎಂದರೆ ಯಾರು? ಹಿಂದೂಯಿಸಂ ಎಂದರೇನು?– ಎನ್ನುವ ಕುರಿತು ಪ್ರಾರ್ಥನಾ ಸಭೆಯ ನಂತರ ವಿವರಿಸಲು ಕುಳಿತ. ಗಾಂಧಿ ಹೇಳುತ್ತಾನೆ: "ನಾನು ಇತಿಹಾಸದ ಪಾಂಡಿತ್ಯವನ್ನು ಹೊಂದಿಲ್ಲ. ಪ್ರಪಂಚದಲ್ಲಿ ಎಲ್ಲವನ್ನೂ ತಿಳಿದುಕೊಂಡವನೆಂದು ಹೇಳುವುದಿಲ್ಲ. ಆದರೆ ಹಿಂದೂಯಿಸಂ ಕುರಿತು ಕೆಲವು ಪುಸ್ತಕಗಳನ್ನು ಓದಿದ್ದೇನೆ. ವೇದಗಳಲ್ಲಿ ಹಿಂದೂ ಪದದ ಉಲ್ಲೇಖವಿಲ್ಲ. ಅಲೆಗ್ಝಾಂಡರ್ ಭಾರತ ದೇಶದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಸಿಂಧೂ ನದಿಯ ಪೂರ್ವ ದಿಕ್ಕಿನ ಕಣಿವೆಗಳಲ್ಲಿ ವಾಸಿಸುವ ಜನರನ್ನು 'ಇಂಡಸ್' ಎಂದು ಕರೆದ. ಕಾಲಾಂತರದಲ್ಲಿ ಅದು ಹಿಂದೂಸ್ ಎಂದು ಬದಲಾಯಿತು. ಈ ಜನರು ಆಚರಿಸುವ ಧಾರ್ಮಿಕ ಪದ್ಧತಿಯನ್ನು ಕಾಲಕ್ರಮೇಣ ಹಿಂದೂಯಿಸಂ ಎಂದು ಗುರುತಿಸಲಾಯಿತು. ಗೊತ್ತಿರಲಿ ಬಂಧುಗಳೇ, ವಿಶ್ವದಲ್ಲಿಯೇ ಸಹನಶೀಲತೆಗೆ ಪ್ರಸಿದ್ಧವಾಗಿರುವ ಈ ಧರ್ಮದಲ್ಲಿ ಹುಟ್ಟಿದ್ದಕ್ಕಾಗಿ ನಾನು ಅತ್ಯಂತ ಋಣಿಯಾಗಿದ್ದೇನೆ. ಯಾಕೆಂದರೆ, ಅನ್ಯರ ಆಕ್ರಮಣ ಮತ್ತು ಹಿಂಸೆಗಳನ್ನು ಸಹಿಸಿಕೊಳ್ಳಲಾಗದೆ ಓಡಿ ಬಂದವರಿಗೂ ಹಿಂದೂ ಧರ್ಮ ತನ್ನಲ್ಲಿ ಆಶ್ರಯ ನೀಡಿದೆ. ಆದರೆ ನಿಜಕ್ಕೂ ಇಂದು ನಾಚಿಕೆಯಾಗುತ್ತಿದೆ. ಹಿಂದೂ ಮತ್ತು ಸಿಖ್ ಧರ್ಮದ ಹೆಸರಿನಲ್ಲಿ ಭಾರತದಲ್ಲಿ ಮಸೀದಿಗಳ ಮೇಲೆ ದಾಳಿ ನಡೆಯುತ್ತಿದೆ. ಪಾಕಿಸ್ತಾನದಲ್ಲಿಯೂ ಇದೇ ಕ್ರಿಯೆ ನಡೆದಿದೆಯಲ್ಲಾ? ಅಲ್ಲಿಯ ಹಿಂದೂ ದೇವಾಲಯಗಳನ್ನೂ ಮಸೀದಿಗಳಾಗಿ ಪರಿವರ್ತಿಸಿಲ್ಲವೆ? ಎಂದು ಕೇಳುವ ಮೂಲಕ ನಮ್ಮ ಅಪರಾಧಗಳಿಂದ ನಾವು ಪಲಾಯನ ಮಾಡಲಾಗದು. ಬಂಧುಗಳೇ, ಮುಸ್ಲಿಮರನ್ನು, ಅನ್ಯಧರ್ಮೀಯರನ್ನು, ಮಹಿಳೆ–ಮಕ್ಕಳನ್ನು ಅವರಿಷ್ಟದಂತೆ ಬದುಕಲು ಬಿಡಿ", ಎಂದು ಒಂದೆಡೆ ಕೈಮುಗಿದು ಗಾಂಧಿ ಕೋರಿಕೊಳ್ಳುತ್ತಿದ್ದರೆ ಇನ್ನೊಂದೆಡೆ ದೆಹಲಿಯ ರೆಡ್‌ಫೋರ್ಟ್ ಹಾಗೂ ಹಳೆಯ ದೆಹಲಿಗಳಲ್ಲಿ ಹಿಂಸಾಚಾರ ನಿರಂತರ ಹೆಚ್ಚಾಗುತ್ತಲೇ ಹೋಯಿತು. ಅತ್ತ ಪಾಣಿಪತ್ತಿನ ನಿರಾಶ್ರಿತರ ಕೇಂದ್ರಗಳಲ್ಲಿಯೂ ಪರಿಸ್ಥಿತಿ ಬಿಗುಡಾಯಿಸುತ್ತಲೇ ಹೊರಟಿತ್ತು. ಕಾನೂನು ಸುವ್ಯವಸ್ಥೆ ಎನ್ನುವ ವಿಚಾರ ಈಗ ನಗೆಪಾಟಲಾಗಿತ್ತಷ್ಟೆ. ದೆಹಲಿಯ ಉತ್ತರ, ಪಶ್ಚಿಮ ಮತ್ತು ದಕ್ಷಿಣದ ದಿಕ್ಕುಗಳಲ್ಲಿ ಮನುಷ್ಯರೆನ್ನುವವರನ್ನು ಹುಡುಕುವುದೇ ಕಷ್ಟಕರವಾಗಿತ್ತು.

ಇಂದಿನ ಪ್ರಾರ್ಥನಾ ಸಭೆಯ ನಂತರ, ರಾತ್ರಿಯ ತನ್ನ ವಿಶ್ರಾಂತಿಗೂ ಮುನ್ನ ಎರಡು ವಿಚಾರಗಳನ್ನು ಕುರಿತು ಗಾಂಧಿ ತನ್ನ ವರ್ಧಾ ಆಶ್ರಮವಾಸಿಯೊಬ್ಬರಿಗೆ ಪತ್ರ ಬರೆದಿದ್ದಾನೆ. ಮೊದಲನೆಯದಾಗಿ ಮಿ. ಘನಶ್ಯಾಂದಾಸ ಬಿರ್ಲಾರ ಮನೆಯಲ್ಲಿ ತನ್ನ ವಾಸ್ತವ್ಯದ ಕುರಿತು. ಗಾಂಧಿಯನ್ನು ಜನರು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಳ್ಳದೇ

ಇರುವುದಕ್ಕೆ ಈ ಮನೆಯೂ ಒಂದು ಮುಖ್ಯ ಕಾರಣವಾಗಿತ್ತು. ಗಾಂಧಿ ಹೇಳುತ್ತಾನೆ: ಇದು ಪಾರ್ಲಿಮೆಂಟಿಗೆ ಸಮೀಪವಿದ್ದು, ದೆಹಲಿ ನಗರದ ಕೇಂದ್ರ ಸ್ಥಳದಲ್ಲಿದ್ದು, ತನ್ನನ್ನು ಕೇಳಿಕೊಂಡು ಬರುವ ಸಾವಿರಾರು ಜನಗಳಿಗೆ ಆಶ್ರಯ ನೀಡುವ ಸಾಮರ್ಥ್ಯ ಇರುವುದಕ್ಕಾಗಿ ಇದನ್ನು ಆಯ್ದುಕೊಂಡೆ ಎಂದ. ಆದರೆ ಉಳಿದವರ ವಾದವೇ ಭಿನ್ನ. ಬಂಡವಾಳಶಾಹಿಯೊಬ್ಬನ ಹಂಗಿನರಮನೆಯಲ್ಲಿ ತಾನೇ ಸ್ವತಃ ಬಿದ್ದು ಒದ್ದಾಡುವ ಈ ಮಹಾತ್ಮ ನಮಗಿನ್ನಾ್ಯವ ದಾರಿಯನ್ನು ತೋರಿಸಲು ಸಾಧ್ಯವಿದೆ? ಕೆಲವರಂತೂ ನೇರವಾಗಿ ಗಾಂಧಿಗೇ ಪತ್ರ ಬರೆದು ಈ ಪ್ರಶ್ನೆಯನ್ನಿಟ್ಟಿದ್ದಾರೆ. ಈಗ ಗಾಂಧಿಗೂ ಯಾಕೋ ಇಲ್ಲಿಯ ಈ ತನ್ನ ವಾಸ್ತವ್ಯ ಸರಿಯನ್ನಿಸುತ್ತಿಲ್ಲ. ಆತ ಬರೆಯುತ್ತಾನೆ, "ಬಂಧು, ಘನಶಾಂದಾಸನ ಮನೆಯನ್ನು ನಾನು ಬಿಡಲೇಬೇಕು. ಜನತೆಗೆ 'ಮಾಡು ಇಲ್ಲವೆ ಮಡಿ' ಎಂದು ಮಂತ್ರ ಕೊಟ್ಟವ ನಾನು. ಪಾಣಿಪತ್‌ನಲ್ಲಿ ನಿರಾಶ್ರಿತರು ಉಸಿರಿಗಾಗಿ ಕೊಸರಾಡುವಾಗ ನಾನು ಈ ಬಿರ್ಲಾಹೌಸ್‌ನಲ್ಲಿ ಇರುವುದೇಕೋ ನನಗೆ ಸರಿ ತೋರುತ್ತಿಲ್ಲ. ಈ ಯಜ್ಞ ಯಾವಾಗ ಮುಗಿಯುವುದೋ ನನಗೆ ತಿಳಿಯುತ್ತಿಲ್ಲ. ಜವಾಹರಲಾಲ್ ನನ್ನನ್ನು ಪಾಣಿಪತ್‌ಗೆ ಹೋಗಲು ಬಿಡುತ್ತಿಲ್ಲ. ನಾನು ನಿರಂತರವಾಗಿ ಅವರ ಮನ ಒಲಿಸುವ ಯತ್ನಮಾಡುತ್ತಿದ್ದೇನೆ. ಆತ ಒಪ್ಪಿದ ಮರುಕ್ಷಣವೇ ನಾನು ಪಾಣಿಪತ್‌ಗೆ ಹೊರಡುತ್ತೇನೆ. ಆದರೆ ನನಗೆ ಅವರು ಮನಸಾರೆ ಅದನ್ನು ಸೂಚಿಸಬೇಕು, ಕಳುಹಿಸಿ ಕೊಡಬೇಕು. ನನ್ನ ಜೀವದ ಬಗೆಗೆ ನಿಮಗೆ ಇಲ್ಲದ ಭಯ ಬೇಡ. ಶ್ರೀರಾಮನೇ ನಮ್ಮೆಲ್ಲರ ರಕ್ಷಕ."

ಈ ಪತ್ರ ಬರೆದು ಗಾಂಧಿ ಇನ್ನೇನು ಮಲಗಬೇಕು, ಆತನಿಗೆ ಈ ದಿನದ ಸಂದರ್ಶಕರಲ್ಲಿ ಬಂದ ವ್ಯಕಿಯೊಬ್ಬನ ನೆನಪಾಯಿತು. ಆತ ಹೇಳಿದ್ದ, 'ನಿಮ್ಮ ಕರೆಗೆ ಓಗೊಟ್ಟು ನಾನು ವಿದೇಶಿ ಬಟ್ಟೆಯನ್ನು ಧರಿಸುವುದನ್ನೇ ಬಿಟ್ಟಿದ್ದೇನೆ ಬಾಪು. ಈಗ ಸರಕಾರಿ ನೌಕರಿಯನ್ನು ಬಿಡಬೇಕೆಂದಿದ್ದೇನೆ. ಈ ಕುರಿತು ಕೇವಲ ನಿಮ್ಮ ಆದೇಶಕ್ಕಾಗಿ ಕಾಯುತ್ತಿದ್ದೇನೆ.' ಎಂದಿದ್ದ. ಗಾಂಧಿ ಆತನಿಗೂ ಕೆಲವೇ ಕೆಲವು ಸಾಲುಗಳನ್ನ ಬರೆದ, "ಅದು ಸತ್ಯ. ನಿಮ್ಮ ನೌಕರಿಗಳನ್ನು ಬಿಟ್ಟು ಬನ್ನಿ ಎಂದು ನಾನು ಹೇಳಿದ್ದು ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ. ಅದೂ ಅವರ ವ್ಯವಸ್ಥೆಯೊಂದಿಗೆ ನಮ್ಮ ಅಸಹಕಾರವನ್ನು ತೋರಿಸುವುದಕ್ಕಾಗಿ ಮಾತ್ರ. ಆದರೆ ಈಗ ಆ ಸಂದರ್ಭವಿಲ್ಲ. ಯಾರಿಗೆ ದೇಶ ಸೇವೆಯನ್ನು ಮಾಡುವ ಇಚ್ಛೆಯಿದೆಯೋ, ಸರಕಾರಿ ಸೇವೆಯಲ್ಲಿದ್ದುಕೊಂಡು ಅದನ್ನು ಬೆಂಬಲಿಸಬೇಕು. ಹಿಂಸೆಗೆ, ಭ್ರಷ್ಟಾಚಾರಕ್ಕೆ ಆಸ್ಪದವೀಯದೆ ನಮ್ಮ ನಮ್ಮ ಕೆಲಸಗಳನ್ನು ನಾವು ಮಾಡಿಕೊಂಡು ಹೋಗುವ ಮೂಲಕವೂ ಈ ದೇಶದ ಸೇವೆಯನ್ನು ಮಾಡಲು ಸಾಧ್ಯವಿದೆ. ಇತ್ತೀಚಿನ ಘಟನೆ,

ಗುಜರಾತಿನ ವಸತಿ ಶಾಲೆಯೊಂದರಲ್ಲಿ ಮಕ್ಕಳು ಮತ್ತು ಶಿಕ್ಷಕಿಯರು ಕೂಡಿ ಒಂದು ಸಾಧನೆಯನ್ನು ಮಾಡಿದ್ದಾರೆ. ಅದು ಇಲ್ಲಿ ನಿಮಗೆ ಅನ್ವಯ, ಉಲ್ಲೇಖನೀಯ. ಅವರು ಭಾರತದ ಹಿಂದುಳಿದ ಪ್ರದೇಶಗಳ-ಜನಾಂಗಗಳ ಮಕ್ಕಳನ್ನು ದತ್ತು ತೆಗೆದುಕೊಂಡು ಅವರಿಗೆ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ದುರಭ್ಯಾಸಗಳಿಂದ ಮುಕ್ತಗೊಳಿಸುತ್ತಿದ್ದಾರೆ. ವಿಚಿತ್ರವೆಂದರೆ, ತಮ್ಮ ಮಕ್ಕಳಲ್ಲಿ ಆದ ಈ ಬದಲಾವಣೆಯನ್ನು ನೋಡಿ ಅವರ ಪಾಲಕರಲ್ಲಿಯೂ ಅಂತಹುದೇ ಒಂದು ಬದಲಾವಣೆಯಾಗಿದೆ. ಅವರೀಗ ಭಾರತದ ಸಶಕ್ತ ಬಾಲಕರು ಮತ್ತು ಪಾಲಕರು. ಸರಕಾರಿ ನೌಕರಿಗಳಲ್ಲಿದ್ದುಕೊಂಡೂ ಈ ರೀತಿಯ ಸೇವೆಗಳನ್ನು ಮಾಡಲು, ಯೋಜನೆಗಳನ್ನು ಹಮ್ಮಿಕೊಳ್ಳಲು ಎಲ್ಲರಿಗೂ ಅವಕಾಶವಿದೆ." ನಿಮಗೂ ಕೂಡ.

ಒಂದು ಪ್ರಶ್ನೆಯನ್ನು ಬರಿ ವೈಯಕ್ತಿಕ ಹಿತಾಸಕ್ತಿಗಳ ನೆಲೆಯಲ್ಲಿ ನೋಡುವುದರ ಬದಲು ಅದರ ಸಾಮಾಜಿಕ, ಆರ್ಥಿಕ ಆಯಾಮಗಳನ್ನು ಪ್ರತಿಯೊಬ್ಬರೂ ಗಮನಿಸಬೇಕೆನ್ನುವುದು ಗಾಂಧಿಯ ವಿಚಾರ. ಎಲ್ಲಿಯವರೆಗೆ ಇದು ಸಾಧ್ಯವಿಲ್ಲವೋ ಅಲ್ಲಿಯವರೆಗೂ ಒಂದು ದೇಶದಲ್ಲಿ ನಾಗರಿಕ ಪ್ರಜ್ಞೆ ಸರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ ಎನ್ನುತ್ತಿದ್ದ ಆತ.

ಇಂದು ೨೪ ನವೆಂಬರ್, ಸೋಮವಾರದ ದಿನ ಗಾಂಧಿ ಮಾತನಾಡುವುದಿಲ್ಲ. ಆದಾಗ್ಯೂ 'ಬೆಂಗಾಲ ಚೇಂಬರ್ ಆಫ್ ಕಾಮರ್ಸ್'ನ ಮುಖಂಡ ಶ್ರೀ ಕೆ.ಎನ್.ದಲಾಲ್ ನಾಯಕತ್ವದಲ್ಲಿ ಒಂದು ಗುಂಪು ಗಾಂಧಿಯನ್ನು ಕಾಣಲು ಬಂದಿದೆ. ಮತ್ತೆ ನೌಖಾಲಿಯಲ್ಲಿ ಮುಸ್ಲಿಂಲೀಗ್‌ನ ತಂಟೆಕೋರತನದಿಂದಾಗಿ ಹಿಂದೂಗಳು ಅನುಭವಿಸುತ್ತಿರುವ ಯಾತನೆಯನ್ನು ಕುರಿತು ಗಾಂಧಿಯೊಂದಿಗೆ ಚರ್ಚಿಸುವುದೇ ಈ ಭೇಟಿಯ ಉದ್ದೇಶ. ಅವರ ಬಳಿ ಒಂದು ಲಕ್ಷ ರೂಪಾಯಿ ಇದೆ. ಗಾಂಧಿ ಆ ಹಣವನ್ನು ಸ್ವೀಕರಿಸಿ ನೌಖಾಲಿಗೆ ಬಂದು, ಹಿಂದೂ ನಿರಾಶ್ರಿತರಿಗಾಗಿ ಆ ಹಣವನ್ನು ಬಳಸಿ, ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಬೇಕು ಎನ್ನುವುದು ಅವರ ಅಹವಾಲು. ಆದರೆ ಗಾಂಧಿ, ದೆಹಲಿ ಮೂಲ ಸ್ಥಿತಿಗೆ ಬರುವವರೆಗೂ ಇಲ್ಲಿಂದ ನಿರ್ಗಮನ ಅಸಾಧ್ಯವೆಂದೇ ಬರೆದು ಕೊಟ್ಟ.

ಇದೇ ದಿನ ಪೂರ್ವ ಬೆಂಗಾಲಿನ ಕೆಲವು ಗೆಳೆಯರೂ ಬಂದಿದ್ದಾರೆ. ದೇಶ ವಿಭಜನೆಯ ಸಂದರ್ಭದಲ್ಲಿ ತಮ್ಮ ನಾಡು ವಿಭಜನೆಯಾಗಬಾರದು ಎಂದು ಹೋರಾಡಿದ ಕಾರಣಕ್ಕಾಗಿ, ಜಾತಿ-ಮತ-ಪಂಥಗಳ ಭೇದವಿಲ್ಲದೆ ಬೆಂಗಾಲಿ ಭಾಷೆ ಮತ್ತು ಸಾಹಿತ್ಯಕ್ಕಾಗಿ ಗಟ್ಟಿಯಾಗಿ ನಿಂತಿದ್ದಕ್ಕಾಗಿ, ಪೂರ್ವ ಪಾಕಿಸ್ತಾನದ ಸರಕಾರ

ತಮ್ಮೊಂದಿಗೆ ಹೇಗೆ ಮಲತಾಯಿ ಧೋರಣೆಯನ್ನು ತೋರುತ್ತಿದೆ ಎನ್ನುವುದನ್ನು ಗಾಂಧಿಗೆ ವಿವರಿಸಿ ಹೇಳುವುದು ಈ ಗುಂಪಿನ ಉದ್ದೇಶ. ಅವರಿಗೆಲ್ಲ ಗಾಂಧಿ ಒಂದೇ ಮಾತಿನ ಉತ್ತರ ಕೊಡುತ್ತಾನೆ. 'ನಾನು ಆ ಕುರಿತು ಆಲೋಚಿಸುತ್ತೇನೆ.'

ಸೋಮವಾರದ ಈ ಸಾಯಂಕಾಲ ಗಾಂಧಿ ತನ್ನ ಲಿಖಿತ ಭಾಷಣದಲ್ಲಿ ಪ್ರಾರ್ಥನಾ ಸಭೆಗೆ ಸೇರಿದವರಿಗೆಲ್ಲ ಒಂದು ದೃಷ್ಟಾಂತವನ್ನು ವಿವರಿಸುತ್ತಾನೆ. ವ್ಯಕ್ತಿಯ ಮೂಲಭೂತ ಹಕ್ಕುಗಳಿಗೂ ಧಕ್ಕೆಯಾದಾಗ ಹಿಂಸೆಯ ಮೂಲಕ ಅದಕ್ಕೆ ಉತ್ತರಿಸಬಹುದೇ? ಇದು ಪ್ರಶ್ನೆ. ಅನುಯಾಯಿಯೋರ್ವ ಅದನ್ನು ಬರೆದು ಕಳುಹಿಸಿದ್ದಾನೆ.

ಗಾಂಧಿಯ ಉತ್ತರ: ಹಿಂಸೆಯ ಮೂಲಕ ಯಾರೂ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಹಕ್ಕುಗಳನ್ನಲ್ಲ, ಪ್ರಪಂಚದಲ್ಲಿ ಏನನ್ನೂ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಬಲಪ್ರಯೋಗದಿಂದ ನಾವು ಏನನ್ನೂ ಗೆಲ್ಲಬಹುದು ಎನ್ನುವ ಭ್ರಮೆ ಕೆಲವೊಮ್ಮೆ ಬದುಕಿನಲ್ಲಿ ಸೃಷ್ಟಿಯಾಗುತ್ತದೆ. ಉದಾಹರಣೆಗೆ, ಒಂದು ಮಗುವಿನ ಹತ್ತಿರ ಒಂದು ರೂಪಾಯಿ ಇದೆ. ನಾನು ಅದರ ಕೆನ್ನೆಗೆ ಬಾರಿಸಿ; ಬಲ, ಭಯ ಪ್ರಯೋಗಿಸಿ ಅದನ್ನು ಕಸಿದುಕೊಳ್ಳುತ್ತೇನೆ. ನಾನು ಅದನ್ನು ಕಸಿದುಕೊಂಡೆ ಎನ್ನುವ ಸಮಾಧಾನವೇನೋ ಆಗ ಸಿಗುತ್ತದೆ, ಆದರೆ ಮಗುವನ್ನು ಹಿಂಸಿಸುವ ಆ ಕ್ಷಣದಲ್ಲಿ ಎಷ್ಟೆಲ್ಲವನ್ನು ಕಳೆದುಕೊಂಡೆವು ಎನ್ನುವುದನ್ನು ಒಂದು ಕ್ಷಣ ಆಲೋಚಿಸಿ. ಪ್ರತಿಯಾಗಿ, ಮಗು ನಮ್ಮ ಮೇಲೆ ಏನೂ ಮಾಡುವ ಸ್ಥಿತಿಯಲ್ಲಿರಲಿಕ್ಕಿಲ್ಲ. ಆದರೆ ಮಗುವನ್ನು ಹಿಂಸಿಸಿ ನಾನದನ್ನು ಪಡೆದೆ ಎನ್ನುವ ನೋವೇ ನಮಗೆ ನಿರಂತರವಾಗಿ ಹಿಂಸಿಸುತ್ತದೆ. ಹಿಂಸೆ ಯಾವಾಗಲೂ ಹೀಗೆಯೇ. ಅದು ಯಾವಾಗಲೂ ಕೆಟ್ಟ ಫಲಶ್ರುತಿಗಳನ್ನೇ ನೀಡುತ್ತದೆ. ಅದಕ್ಕಾಗಿ ಹಿಂಸೆಯನ್ನು ಕೈಗೆತ್ತಿಕೊಳ್ಳಬೇಡಿ ಎನ್ನುವುದೇ ನಿಮ್ಮ ಬಗೆಗಿನ ನನ್ನ ಕಾಳಜಿ. ಸರ್ವರನ್ನೂ ಸೇವೆಯಿಂದ ಗೆಲ್ಲಿರಿ. ಪ್ರಪಂಚದ ಎಲ್ಲ ಧರ್ಮಗಳು ಇದನ್ನೇ ಹೇಳುತ್ತವೆ. ಸರ್ಮನ್ ಆನ್ ದ ಮೌಂಟ್ ಕೂಡ ಇದನ್ನೇ ಹೇಳುತ್ತದೆ "You have heard that it has been said, an eye for an eye, and a tooth for a tooth. But I say unto you, That you resist not evil, but shall smite thee on thy right cheek turn whosoever to him the other also." ಸೇವೆಯೇ ಧರ್ಮ. When I do my duty, as a result I gain a right. The best right of a human being is the right to serve others, and to reap thereby the results of that service.

ಹಿಂದೂ ಧರ್ಮದ ವಿಷಯಕ್ಕೆ ಬಂದಾಗ ಗಾಂಧಿ ಬಹುವಾಗಿ ಹಚ್ಚಿಕೊಂಡಿದ್ದು ತುಲಸಿದಾಸರ ಭಜನ್ ಒಂದನ್ನು. ಅದು ಹೇಳುತ್ತದೆ–

ಅನುಕಂಪವೇ ಧರ್ಮ, ದುರಹಂಕಾರವೇ ಅದರ ವೈರಿ,
ನೀನಿರುವವರೆಗೂ ನಿನ್ನೊಳಗೇ ಅನುಕಂಪವ ದೂರಬೇಡ.

ಬರೀ ಜೀವಿತಕ್ಕಾಗಿ ಜೀವಿಸುವುದಿಲ್ಲ ಮನುಷ್ಯ ಎನ್ನುವುದು ಗಾಂಧಿಯ ಅಚಲ ನಂಬಿಕೆ. ಸಾವಿನಿಂದ ಪಾರಾಗುವುದು ಯಾವ ದೊಡ್ಡ ಸಾಧನೆಯೂ ಅಲ್ಲ, ಧೈರ್ಯದಿಂದ ಬಾಳಿ ಸಾವನ್ನು ಎದುರಿಸುವುದು ಒಂದು ದೊಡ್ಡ ಸಾಧನೆ. ಇದು ಸುಮ್ಮನೆ ಸಿದ್ಧಿಸುವುದಿಲ್ಲ, ಯೋಗ್ಯವಾದುದ್ಯಾವುದೂ ಸರಳವಾಗಿ ಸಿದ್ಧಿಸುವುದಿಲ್ಲ ಎನ್ನುತ್ತಿದ್ದ ಗಾಂಧಿ, "Life becomes lovable only when death is treated as a friend" ಎಂದಿದ್ದಾನೆ. ಮೋಜಿನ ಸಂಗತಿ ಎಂದರೆ ಸಾವನ್ನು ಕುರಿತು ಹೆದರಿಯೇ ಇಲ್ಲ ಎನ್ನುವ ಧಾಂಬಿಕತೆಯನ್ನು ಬೋಧನೆಯಲ್ಲಿ ಪ್ರದರ್ಶಿಸುತ್ತಿದ್ದ ಗಾಂಧಿ, ನಾನಾ ಆಪ್ಟೆ ಗೆಳೆಯರ ಗುಂಪೊಂದು ಗಾಂಧಿ ಹಾಗೂ ಸುಹ್ರಾವರ್ದಿಗೆ ಧಿಕ್ಕಾರ ಹೇಳುತ್ತ, ಆತನ ವಿರುದ್ಧ ಘೋಷಣೆ ಕೂಗುತ್ತ ಈ ಹಿಂದೊಮ್ಮೆ ಆತನ ಬಳಿ ಹೋದಾಗ ಈ ಗಾಂಧಿ ಸಾವಿಗೆ ಹೆದರಿ ಸರಳುಗಳುಳ್ಳ ಭದ್ರವಾದ ಬಾಗಿಲುಗಳ ಹಿಂದೆ ಅಡಗಿಕೊಂಡ ಎಂದು ಲೇವಡಿ ಮಾಡುತ್ತಾನೆ ಗೋಡ್ಸೆ. ಆತ ಹೇಳುವ ಪ್ರಕಾರ ಆ ಯುವಕರಿಗೆ ಗಾಂಧಿಯ ಮೇಲೆ ದಾಳಿ ಮಾಡುವ ಯಾವ ಉದ್ದೇಶಗಳೂ ಇರಲಿಲ್ಲವಂತೆ.

ಗಾಂಧಿಯ ವಿಷಯದಲ್ಲಿ ತುಂಬಾ ಲೌಕಿಕನಾಗಿ ಮಾತನಾಡುತ್ತಾನೆ ಗೋಡ್ಸೆ. ಅವನು ಗಾಂಧಿ–ನೆಹರು ಕುರಿತು ಮಾಡುವ ಲೇವಡಿ ಮಜವಾಗಿದೆ. ನಾವು ಪ್ರದರ್ಶಿಸುವ ಔದಾರ್ಯಕ್ಕೆ ಎದುರಾಳಿಯೂ ಯೋಗ್ಯನಾಗಿರಬೇಕು ಎಂದು ಅವನ ವಾದ. ಜೀವನದುದ್ದಕ್ಕೂ ಎಂದೂ ಈ ನೆಲದವರಾಗಲು ಸಾಧ್ಯವಾಗದ ಮುಸ್ಲಿಮರನ್ನು ಓಲೈಸಲು ಹೋಗಿ ಅನರ್ಹ ಜಿನ್ನಾನಿಂದ ಅಸಹ್ಯಗೊಂಡರೆಂದೂ, ಜಿನ್ನಾ ನೆಹರುರನ್ನು 'ನಾಯಿಯಂತೆ ಗಾಂಧಿಯ ಕಾಲು ನೆಕ್ಕಿ ದೇಶದ ಪ್ರಧಾನಿಯಾದ 'ಪೀಟರ್ ಪ್ಯಾನ್', 'ರಾಜಕಾರಣವೇ ಗೊತ್ತಿಲ್ಲದ ಇಂಗ್ಲೀಷ್ ಮೇಷ್ಟ್ರ' ಎಂದೂ ಉಗಿಸಿಕೊಂಡರು. ಇನ್ನು ಗಾಂಧಿಯ ಸಾವನ್ನು ಲೇವಡಿ ಮಾಡಿ ಜಿನ್ನಾ ಇವರನ್ನು 'ಠಕ್ಕ ನರಿ', 'ಹಿಂದೂ ಪುನರುಜ್ಜೀವನದ ಹರಿಕಾರ' ಎಂದು ಅವಹೇಳನಕ್ಕೊಳಗಾದರು ಎಂದು ಇಬ್ಬರನ್ನೂ ನೋಡಿ ನಗುತಾರೆ. ಹೀಗೆ ಹೇಳುವಾಗ ಗೋಡ್ಸೆಗೂ ನಮಗೂ ಎಷ್ಟು ವ್ಯತ್ಯಾಸವಿದೆ? ನೀವೇ ಹೇಳಬೇಕು. ❑



ಸಬ್‌ಕೊ ಸನ್ಮತಿ ದೇ ಭಗವಾನ್

ಹೀಗೆಂದು ಪ್ರಾರ್ಥಿಸುವ ಗಾಂಧಿಯ ಈ ಪ್ರಾರ್ಥನೆಯಲ್ಲಿ ಆತನ ಹಂತಕರೂ ಬರುತ್ತಾರೆ. ಯಾಕೆಂದರೆ, ಗಾಂಧಿಯ ಸಾರ್ವತ್ರಿಕ ಒಳಿತಿನ ಈ ಪ್ರಾರ್ಥನೆಯನ್ನು ಸ್ವತಃ ಗೋಡ್ಸೆಯೂ ಒಪ್ಪಿಕೊಂಡಿದ್ದಾನೆ. ದೇಶದ ಸ್ವಾತಂತ್ರ್ಯ, ರಾಜಕೀಯ, ಕೋಮುಗಳ ಶಕ್ತಿ ಪ್ರದರ್ಶನ, ರಾಜರುಗಳ ಭ್ರಮೆ, ನಿರಾಶ್ರಿತರ ನೆಲೆಯಿಲ್ಲದ ಬದುಕು ಇವೆಲ್ಲವುಗಳು ಸರಿದೂಗುವ ಒಂದು ಮಾರ್ಗ 'ಸನ್ಮತಿ'. ಮತಿ ಮುಕ್ತವಾದರೆ, ಸುಂದರವಾದರೆ ಸ್ವರ್ಗ ನರಕದ ಪ್ರಶ್ನೆಗಳಿಲ್ಲ, ನಯವಂಚಕತನವಿಲ್ಲ, ನಾಟಕೀಯತೆ ಇಲ್ಲ.

ನವೆಂಬರ್ ೨೬ರ ಗಾಂಧಿಯ ಸಾಯಂಕಾಲದ ಪ್ರಾರ್ಥನೆಗೆ ನಿತ್ಯಕ್ಕಿಂತಲೂ ಒಂದಿಷ್ಟು ಹೆಚ್ಚಿನ ಸಂಖ್ಯೆಯಲ್ಲಿಯೇ ಜನ ಸೇರಿಕೊಂಡಿದ್ದರು. ವಿಪರೀತ ನೂಕು ನುಗ್ಗಲು. ಇತ್ತೀಚೆಗಂತೂ ಗಾಂಧಿಯನ್ನು

ನೋಡುವುದು, ಆತನನ್ನು ಮುಟ್ಟುವುದು, ಆತನಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವುದೆಂದರೆ ಜನರಿಗೆ ಅತ್ಯಂತ ಪವಿತ್ರ ಮತ್ತು ರೋಮಾಂಚನದ ಅನುಭವ. ಆದರೆ ಈ ಪೂಜೆ ಮತ್ತು ಕುರುಡು ಅಭಿಮಾನ ಏನನ್ನೂ ಬಗೆಹರಿಸದು. ಈ ಸ್ಪರ್ಶಕ್ಕೆ ಯಾವ ಹೊಸ ಅರ್ಥವೂ ಬಾರದು. ಪೂಜಿಸಿದಷ್ಟೂ ತಾನು ಜನರಿಂದ ದೂರವಾಗುತ್ತೇನೆ ಎನ್ನುವುದು ಗೊತ್ತು ಗಾಂಧಿಗೆ. ಹೀಗಾಗಿ ಬಹಳ ದಿನಗಳಿಂದ ತನ್ನ ಸುತ್ತಲೂ ನಡೆದಿರುವ ಈ ಎಲ್ಲವನ್ನೂ ಸುಮ್ಮನೆ ಗಮನಿಸಿದ್ದ ಗಾಂಧಿ ಇಂದು ಮಾತಾಡಲೇಬೇಕಾಯಿತು, ವ್ಯಕ್ತಿ ಆರಾಧನೆಯಿಂದ ಏನೂ ಸಾಧಿಸಲಾಗದು ಎಂದು ತಿಳಿಹೇಳಬೇಕಾಯಿತು. "ನಾನು ಪ್ರಾರ್ಥನೆಗೆ ಬರುವ ವೇಳೆ ಮತ್ತು ಇಲ್ಲಿಂದ ಹೊರಡುವ ವೇಳೆ ದಾರಿ ಮಾಡಿಕೊಡುವುದರ ಮೂಲಕ ನೀವು ನನಗೆ ಸಹಕರಿಸಿದ್ದೀರಿ, ನಿಮ್ಮ ಸ್ಪರ್ಶದಿಂದ ನನ್ನನ್ನು ಭಾವುಕನನ್ನಾಗಿಸಿದ್ದೀರಿ. ಆದರೆ ಈ ನಿಮ್ಮ ಅಭಿಮಾನ ಮತ್ತು ಭಾವುಕತೆ ನನ್ನ ಪ್ರಾರ್ಥನಾ ಸಭೆಯ ನಂತರವೂ, ನಾನಿಲ್ಲದೇ ಇರುವ ಸಮಯದಲ್ಲಿಯೂ ಮುಂದುವರಿಯಬೇಕೆನ್ನುವುದು ನನ್ನ ಬಲವಾದ ಇಚ್ಛೆ. ನಾನು ಸಾಗಿ ಹೋದಂತೆ ನನ್ನನ್ನು ಮುಟ್ಟಬೇಕೆನ್ನುವ ನಿಮ್ಮ ಆಸಕ್ತಿಯನ್ನು ನಾನು ಗಮನಿಸಿದ್ದೇನೆ. ನಾನು ಅದಕ್ಕೆ ಬಹಳ ದೊಡ್ಡ ಬೆಲೆಯನ್ನು ಕೊಡುತ್ತೇನೆ. ಆದರೆ, ಅದು ಅನಿಯಂತ್ರಿತ ವ್ಯಾಮೋಹವಾಗಬಾರದು, ಬದಲಾಗಿ ರಚನಾತ್ಮಕವಾಗಿರುವ ರಾಷ್ಟ್ರ ಸೇವೆಯ ಶಕ್ತಿಯಾಗಿ ಬದಲಾಗಬೇಕು. ಪ್ರಥಮತಃ ನನಗೆ ನಿಮ್ಮ ಶ್ರಮ, ಸೇವೆ ಬೇಕಾಗಿರುವುದು ಕೋಮು ಸೌಹಾರ್ದದಲ್ಲಿ. ನಿಮ್ಮ ಅನೈಕ್ಯತೆಯ, ಕದನದಲ್ಲಿ ನನ್ನ ಜೀವನ ಮತ್ತು ರಾಷ್ಟ್ರದ ಶಿಸ್ತು ಎಲ್ಲವೂ ಹಾಳಾಗಿ ಹೋಗಿವೆ. ನಿರಾಶ್ರಿತರಾಗಿ ಬಂದಿರುವ ನಿಮ್ಮ ಮುಸ್ಲಿಂ ಸಹೋದರರನ್ನು, ನೀನು ಹೊರಟು ಹೋಗು, ನಿಮ್ಮ ಮನೆಯಲ್ಲಿ ನಾನು ವಾಸಿಸಬೇಕಿದೆ ಎಂದು ಹೇಳಿ ಯಾಕೆ ಹೊರದಬ್ಬುತ್ತಿದ್ದೀರಿ? ಈ ತೆರನಾಗಿ ವರ್ತಿಸಿ ಇಲ್ಲಿ ಬಂದು ನನ್ನನ್ನು ಸ್ಪರ್ಶಿಸಿದರೆ ಏನು ಭಾಗ್ಯ? ಈ ರಾಷ್ಟ್ರ ನಿಮ್ಮೆಲ್ಲರದ್ದು. ಯಾವ ಸಂಘಟನೆಯಲ್ಲಿಯೂ, ಯಾವ ರಾಷ್ಟ್ರದಲ್ಲಿಯೂ, ಎಲ್ಲರೂ ಏಕಕಾಲಕ್ಕೆ ನಾಯಕರಾಗಲು ಆಗುವುದಿಲ್ಲ. ನೀವು ಸೇವಕರಾಗುವುದರಿಂದ ಈ ನಾಡಿಗೆ ಏನಾದರೂ ನೀಡಬಹುದೇ ವಿನಾ ನಾಯಕರಾಗುವುದರಿಂದಲ್ಲ. ಇಂದು ನಮ್ಮಲ್ಲಿ ಹುಟ್ಟಿಕೊಂಡಿರುವ ಎಲ್ಲ ಸಮಸ್ಯೆಗಳಿಗೂ ನಮ್ಮ ಈ ಭಾವನೆಯೇ ಕಾರಣ. ನೀವು ಮನಸ್ಸು ಮಾಡಿದರೆ ಹೈದರಾಬಾದ್ ಮತ್ತು ಕಾಶ್ಮೀರದ ಸಮಸ್ಯೆಯನ್ನು ಒಂದೇ ಒಂದು ಕ್ಷಣದಲ್ಲಿ ಬಗೆಹರಿಸಬಲ್ಲಿರಿ. ರಾಷ್ಟ್ರ ವಿಭಜನೆಯ ಕೆಟ್ಟ ಪರಿಣಾಮಗಳು ನನಗೆ ಮುಂಚಿತವಾಗಿಯೇ ತಿಳಿದಿದ್ದವು. ಅಂತೆಯೇ ನಾನೆಂದೂ ಈ ವಿಭಜನೆಯನ್ನು ಬೆಂಬಲಿಸಿದವನಲ್ಲ. ಸಾಧ್ಯವಿದ್ದಷ್ಟು ಪ್ರತಿರೋಧಿಸಿದೆ, ತಡೆದೆ, ಯಾರೂ ಕೇಳಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನನ್ನ ಕಾಂಗ್ರೆಸ್ ಮಿತ್ರರು

ರಾಜಕಾರಣಿಗಳಾಗಲಿ ಎಂದು ಆಶಿಸಿದವನೂ ಅಲ್ಲ. ಇಂದು ಇದೆಲ್ಲವನ್ನು ಕುರಿತು, ನೀವೇ ಆಸೆ ಪಟ್ಟು ಮಾಡಿಕೊಂಡದ್ದನ್ನು ಕುರಿತು, ತಕರಾರು ಎತ್ತಿ ನನಗೆ ಪತ್ರಗಳನ್ನು ಬರೆಯುತ್ತೀರಿ. ಏನು ಉಪಯೋಗ? ಇದಕ್ಕೆ ನಿಜವಾಗಿಯೂ ಯಾರು ಹೊಣೆಗಾರರು? ಯಾರನ್ನು ಕುರಿತೂ ನನಗೆ ಸಿಟ್ಟಿಲ್ಲ, ದ್ವೇಷವಿಲ್ಲ; ಆದರೆ ಅಯ್ಯೋ ಅನಿಸುತ್ತದೆ. ಬಂಧುಗಳೇ, ಮತಿಯನ್ನು ಬಳಸಿ, ಸನ್ಮತಿಗಳಾಗಿ. ಅದೊಂದೇ ನಾನು ನಿಮ್ಮಿಂದ ನಿರೀಕ್ಷಿಸುವುದು. May God grant good sense to all" ಎಂದು ಹೇಳಿದ ಗಾಂಧಿ ಪ್ರಾರ್ಥನಾ ಸಭೆಯ ನಂತರ ಸರಸರನೆ ಎದ್ದು ಹೋಗಲು ಪ್ರಯತ್ನಿಸಿದ. ಆದರೆ ಜನ ಬಿಡಬೇಕಲ್ಲ. ಮತ್ತೆ ಅದೇ ನೂಕು ನುಗ್ಗಲು, ಗಾಂಧಿಯನ್ನು ಮುಟ್ಟಿ ನೋಡುವ ಬಯಕೆ, ಮರಳಿ ಮತ್ತೆ ಗಾಂಧಿಯ ಅದೇ ಮುಗುಳ್ನಗೆ. ಆತ ಹಣೆ ಚಚ್ಚಿಕೊಂಡನಷ್ಟೆ.

ಈ ರಾತ್ರಿ ವಿಪರೀತ ಚಳಿ. ಅದರ ಪರಿಣಾಮ ಗಾಂಧಿಯ ಮುಪ್ಪಿನ ಕೈಗಳು ಪೆನ್ನು ಹಿಡಿದು ಪತ್ರವನ್ನೂ ಬರೆಯದಂತಾಗಿಸಿದ್ದವು. ಬೆರಳುಗಳು ಇದ್ದಕ್ಕಿದ್ದಂತೆ ಸೆಟೆದುಕೊಂಡುಬಿಡುತ್ತಿದ್ದವು. ಆದರೆ ಗಾಂಧಿ ಪತ್ರಗಳಿಗೆ ಉತ್ತರಿಸದೇ ಇರುವುದಕ್ಕಾಗುತ್ತಿಲ್ಲ. ಅವನ ಮುಂದೆ ಯಾವಾಗಲೂ ರಾಶಿ ರಾಶಿ ಪತ್ರಗಳು. ಒಂದನ್ನು ಬರೆದು ಮುಗಿಸುವುದರೊಳಗಾಗಿ ಮತ್ತೆ ಹತ್ತು ಬಂದು ಬಿದ್ದಿರುತ್ತಿದ್ದವು. ಈ ರಾತ್ರಿ ನಿದ್ರೆಗೆ ಜಾರುವ ಮುನ್ನ, ದೂರದಲ್ಲಿ ಎಲ್ಲೊ ವೈದ್ಯಕೀಯವನ್ನು ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳಿಗೆ ಗಾಂಧಿ ಉತ್ತರಿಸಲೇಬೇಕಿದೆ. ಅವಳ ಆರೋಗ್ಯ ಅಷ್ಟೊಂದು ಸರಿಯಿಲ್ಲ. ಅವಳಿಗೊಂದಿಷ್ಟು ಔಷಧಿಯನ್ನೂ ಈತನೇ ಸೂಚಿಸಬೇಕಿದೆ. ಮನುಳ ಸಹಾಯದಿಂದ ಈಗ ಆತ ಪತ್ರ ಬರೆಯಲು ಕೂತಿದ್ದಾನೆ, "ನೆಲದ ಮೇಲೆ ಒರಗಿಕೊಂಡೇ, ಚಿ. ಮನುದೀ ಕೈಯಿಂದ ನಾನು ಈ ಪತ್ರವನ್ನು ನಿನಗೆ ಬರೆಯಿಸುತ್ತಿದ್ದೇನೆ. ವಿಪರೀತ ಚಳಿಯಿಂದಾಗಿ ನಾನೇ ನೇರವಾಗಿ ಬರೆಯಲು ಆಗುತ್ತಿಲ್ಲ. ಹಾಗೆ ನೋಡಿದಲ್ಲಿ ಮನುಳ ಆರೋಗ್ಯ ನನಗಿಂತಲೂ ಸೂಕ್ಷ್ಮವಾಗಿದೆ. ಆದರೆ, ಅವಳಿಗಿನ್ನೂ ವಯಸ್ಸಿದೆ. ಅದೇಕೊ ನನಗೆ ನೀನು ನಿನ್ನ ಆರೋಗ್ಯದ ಬಗ್ಗೆ ಸರಿಯಾಗಿ ಗಮನಹರಿಸುತ್ತಿಲ್ಲ ಎನಿಸುತ್ತಿದೆ. ಉತ್ತಮವಾದ ಅಧ್ಯಯನ ಮಾಡಬೇಕೆನ್ನುವವರು, ಓದಿದ್ದನ್ನು ಸರಿಯಾಗಿ ಮನನ ಮಾಡಬೇಕೆನ್ನುವವರು ಮೊದಲು ಆರೋಗ್ಯವನ್ನು ಯಾವಾಗಲೂ ಸರಿಯಾಗಿಟ್ಟುಕೊಳ್ಳಬೇಕು. ನನ್ನ ಆರೋಗ್ಯದ ಬಗ್ಗೆ ಯಾವ ಚಿಂತೆಯೂ ಬೇಡ. ನಿನ್ನ ಪರೀಕ್ಷೆಗಳನ್ನು ಉತ್ತಮ ರೀತಿಯಲ್ಲಿ ಪಾಸು ಮಾಡುವುದೇ ನೀನು ನನಗೆ ತೋರಿಸುವ ಅತಿ ದೊಡ್ಡ ಗೌರವ. ಅನಾರೋಗ್ಯದಿಂದ ಬಳಲಿ ಫಸ್ಟ್‌ಕ್ಲಾಸ್ ಬೋಗಿಗಳಲ್ಲಿ ಪಯಣಿಸುವುದಕ್ಕಿಂತ ಆರೋಗ್ಯವಂತರಾಗಿ, ಜನಸಾಮಾನ್ಯರೊಂದಿಗೆ ಸಾಮಾನ್ಯ ಬೋಗಿಗಳಲ್ಲಿ ಪಯಣಿಸುವುದು ಎಷ್ಟೊಂದು ಸಂತಸದ ಸಂಗತಿಯಲ್ಲವೆ?"

ಮೊದಲ ಮೆಟ್ಟಿಲೂ ಕೊನೆಯ ಮೆಟ್ಟಿಲಿನೊಂದಿಗೆ ಕೂಡಿಕೊಂಡಿರುತ್ತದೆ. ದೇಶದ ಸಾಮಾನ್ಯ ಪ್ರಜೆಯೂ ಅದರ ಸರ್ವತೋಮುಖ ಬೆಳವಣಿಗೆಯಲ್ಲಿ ಶಾಮೀಲಾಗಿರುತ್ತಾನೆ. ಒಂದರ ನಿರ್ಲಕ್ಷ್ಯ ಸರ್ವರ ನಿರ್ಲಕ್ಷ್ಯವೂ ಕೂಡ. ಇದು ಗಾಂಧಿ ತನ್ನ ಸುತ್ತಲಿನ ಪ್ರಪಂಚವನ್ನು ಜೀವನದ ಅಂತಿಮ ಕ್ಷಣದವರೆಗೂ ಗ್ರಹಿಸಿದ ರೀತಿ. ರಾಜಕಾರಣ, ಆಧ್ಯಾತ್ಮ, ಸಂಸಾರಗಳು ಭಿನ್ನ ಭಿನ್ನವಲ್ಲ. ಬದಲಾಗಿ ಒಂದು ಇನ್ನೊಂದರಲ್ಲಿ ಬೇರೆತುಕೊಂಡಿವೆ. ಒಂದನ್ನು ಇನ್ನೊಂದರಿಂದ ತೆಗೆದಿಟ್ಟು ನೋಡುವುದು ನಮ್ಮ ಅಶಕ್ಯತೆಗೆ ಸಾಕ್ಷಿಯಾಗಬಹುದೇ ವಿನಾ ಜೀವನದ ಆರೋಗ್ಯಕರ ಗ್ರಹಿಸುವಿಕೆಗೆ ಅಲ್ಲ. ಗಾಂಧಿ ಇಂದು ಪ್ರಾರ್ಥನಾ ಸಭೆಯ ನಂತರ ಹೇಳಿದ ಮಾತುಗಳಿವು. ಆನಂತರ ಇದೇ ರಾತ್ರಿ ಕುಳಿತು ಲೀಲಾವತಿಗೆ ಬರೆಯುವ ಪತ್ರದ ಸಾಲುಗಳಲ್ಲಿ ಶಿಸ್ತಿನ ಒಂದು ಸಾಮಾನ್ಯ ಭಾಷೆ ಇದ್ದೇ ಇದೆ. ಇದೇ ರಾತ್ರಿ ಗಾಂಧಿ ಹೈದರಾಬಾದಿನ ಸೈಯದ್ ಖಾಜಿಮ್ ರಿಜ್ವಿಗೆ ಬರೆದ ಪತ್ರದಲ್ಲಿಯೂ ಒಂದು ಇನ್ನೊಂದನ್ನು ಹೇಗೆ ನಂಬಿಕೊಂಡಿದೆ ಎನ್ನುವುದನ್ನು ಸಾಬೀತುಪಡಿಸಿದ್ದಾನೆ.

ಸೈಯದ್ ಖಾಜಿಮ್ ರಿಜ್ವಿ ಹೈದರಾಬಾದ್ ಪ್ರಾಂತದ ಇತ್ತೇಹಾದ್-ಉಲ್-ಮುಸಲ್ಮಾನ್ ಸಂಘಟನೆಯ ನಾಯಕ. ಇವರಿಗೆ ಹೈದರಾಬಾದ್ ಪ್ರಾಂತ್ಯ ಭಾರತವನ್ನು ಸೇರುವುದು ಒಂದಿಷ್ಟೂ ಇಷ್ಟವಿಲ್ಲ. ಅದೊಂದು ಸ್ವತಂತ್ರ ರಾಜ್ಯವಾಗಿ ಪ್ರತ್ಯೇಕ ಉಳಿಯಬೇಕೆನ್ನುವುದೇ ಅವರ ನಿರೀಕ್ಷೆ. ತನ್ನ ನಿರೀಕ್ಷೆಯೊಂದಿಗೆ ಈ ಮುಂಜಾನೆ ತಮ್ಮ ಸಂಘಟನಾಕಾರರೊಂದಿಗೆ ಬಂದು ಅವರು ಗಾಂಧಿಯನ್ನು ಭೇಟಿಯಾಗಿ ಹೋಗಿದ್ದಾರೆ. ಈಗ ಗಾಂಧಿ ಉತ್ತರಿಸುತ್ತಾನೆ, "ಆತ್ಮೀಯ ಸೈಯದ್ ಸಾಹೇಬ್, ಸಂತೋಷ, ನಮ್ಮಿಬ್ಬರ ಭೇಟಿಯಾಯಿತು. ಆದರೆ ನೀವು ಮಾತನಾಡಿದ ರೀತಿ ನನಗೆ ಆಶ್ಚರ್ಯವೆನಿಸಿತು. ಇದು ನಂಬಲಾಗದ ಸಂಗತಿಯೂ ಕೂಡ. ಹೈದರಾಬಾದಿನ ಅನೇಕ ಮುಸ್ಲಿಂ ಬಂಧುಗಳು ಮತ್ತು ಅನ್ಯರೂ ನನಗೆ ಪತ್ರ ಬರೆದು ನಿಮ್ಮ ವಿರುದ್ಧ ಸಾಕಷ್ಟು ಆಪಾದಿಸಿದ್ದಾರೆ. ನಿಮ್ಮ ಪರಾಮರ್ಶೆಗಾಗಿ ಇಲ್ಲಿ ಕೇವಲ ಮೂರು ಪತ್ರಗಳನ್ನು ನನ್ನ ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ. ಹೈದರಾಬಾದ್, ದೇಶದ ಮುಖ್ಯವಾಹಿನಿಯಿಂದ ಹೊರಗುಳಿಯುವ ನಿಮ್ಮ ವಿಚಾರವನ್ನು ಯಾವುದೇ ಕಾಲಕ್ಕೂ ನಾನು ಸಮರ್ಥಿಸುವುದಿಲ್ಲ. ಇಷ್ಟರಲ್ಲಿಯೇ ದೆಹಲಿಯ ಯಾವುದೋ ಒಂದು ಮುಸ್ಲಿಂ ಪ್ರದೇಶಕ್ಕೆ ಬಿರ್ಲಾಹೌಸ್‌ನಿಂದ ನಾನು ನನ್ನ ವಾಸ್ತವ್ಯವನ್ನು ಬದಲಾಯಿಸಲಿದ್ದೇನೆ. ಏನಾಗುವುದು ಕಾದು ನೋಡಬೇಕು."

ಇಲ್ಲಿ ಒಂದು ಸಾಮ್ಯವನ್ನು ಗಮನಿಸಿ. ಶಿಸ್ತೇ ಇಲ್ಲದ ಒಣ ಮೋಹ ಮತ್ತು ಪ್ರತಿಷ್ಠೆಗಳಿಂದ ಕೂಡಿದ ಸಾರ್ವಜನಿಕ ಪ್ರಾರ್ಥನಾ ಸಭೆಯಾಗಿರಬಹುದು, ಲೀಲಾವತಿಯ ಅನಾರೋಗ್ಯ ಪೀಡಿತ ಅಧ್ಯಯನ ಕ್ರಮವಾಗಿರಬಹುದು, ರಿಜ್ವಿ

ಸಾಹೇಬರ ಹೈದರಾಬಾದ್ ಕುರಿತಾದ ಸಂಕುಚಿತ ರಾಜಕಾರಣವಾಗಿರಬಹುದು ಗಾಂಧಿ ಇಂತಹವುಗಳನ್ನೆಂದೂ ಸಮರ್ಥಿಸಲಿಲ್ಲ. ಶಿಸ್ತು, ಐಕ್ಯತೆ ಮತ್ತು ಸಾಮರಸ್ಯ ಇಡೀ ಗಾಂಧಿಯ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿತ್ತು. ಅಂತೆಯೇ ಅವನನ್ನು ಹತ್ಯೆ ಮಾಡುವ ಆಲೋಚನೆ ಮಾಡಿದ ಗೋಡ್ಸೆಯೂ ಕೂಡ ಗಾಂಧಿಯ ಈ ವಿಚಾರವನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾನೆ. "ಗಾಧೀಜಿಯವರು ತಮ್ಮ ಸತ್ಯಾಗ್ರಹ ಮತ್ತು ಶಿಸ್ತಿನ ಮೂಲಕ ಜನ ಸಾಮಾನ್ಯರೂ ನಮ್ಮ ದೇಶದ 'ಪರಾತಂತ್ರ್ಯ', 'ಸ್ವರಾಜ್ಯ' ಮುಂತಾದ ಶಬ್ದಗಳ ನಿಜವಾದ ಮಹತ್ವವನ್ನು ಅರಿತುಕೊಳ್ಳುವಂತೆ ಮಾಡಿದರು. ಇವರ ನಾಯಕತ್ವದಲ್ಲಿ ಒಂದು ತಲೆಮಾರಿನ ಹೋರಾಟಗಾರರು ರಾಷ್ಟ್ರ ಭಕ್ತಿಯ ಗೀತೆಗಳನ್ನು ಹಾಡುತ್ತಾ, ಮಾನಸಿಕವಾಗಿ ದೇಶ ಭಕ್ತಿಯ ಬಗೆಗೆ ಪೋಷಣೆ ಹೊಂದುತ್ತ ಬೆಳೆದರು." ಇದು ಗಾಂಧಿಯ ವ್ಯಕ್ತಿತ್ವ . ಅದು ಒಂದು ದಿನದಲ್ಲಿ ರೂಪಗೊಂಡಿದ್ದಲ್ಲ. ದೇಶದ ಶತಮಾನಗಳ ಸನಾತನತೆಯ ದಾರಿಯಲ್ಲಿ ಕ್ರಮಿಸಿ ಸಿದ್ಧಗೊಂಡದ್ದು.

ಈ ದಿನಗಳಲ್ಲಿ ಗಾಂಧಿಯ ಮೇಲೆ ಇನ್ನೊಂದು ಆಪಾದನೆ ಅತ್ಯಂತ ತೀವ್ರವಾಗಿತ್ತು. ಗಾಂಧಿ ಜನರನ್ನು ಒತ್ತಾಯಪೂರ್ವಕವಾಗಿ ತನ್ನ ಸಾಮರಸ್ಯದ ಸಿದ್ಧಾಂತವನ್ನು ಒಪ್ಪಿಕೊಳ್ಳುವಂತೆ ಮಾಡುತ್ತಿದ್ದಾನೆ. ಇದರ ಹಿಂದೆ ಆತನಿಗೆ ಮುಸ್ಲಿಮರನ್ನು ರಕ್ಷಿಸುವ ಉದ್ದೇಶ ಬಿಟ್ಟರೆ ಮತ್ತಿನ್ನೇನೂ ಇಲ್ಲ. ಕಾಂಗ್ರೆಸ್ಸಿನ ಮುಖವಾಣಿಯಂತೆ ಮಾತನಾಡುವ ಈ ಮುದುಕ ದೇಶದ ರೇಡಿಯೋ ವ್ಯವಸ್ಥೆಯನ್ನೂ ತನ್ನ ಈ ವಿಚಾರಗಳ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾನೆ. ಈ ಬೆಳವಣಿಗೆ ಅಂತಿಮವಾಗಿ ಗಾಂಧಿ ಎಂಬ ಒಬ್ಬ ಸರ್ವಾಧಿಕಾರಿಯನ್ನು ಸೃಷ್ಟಿಸುತ್ತದೆ.

ಆದರೆ ಗಾಂಧಿ ಈ ಮೇಲಿನ ಆಪಾದನೆಗಳನ್ನು ಅತ್ಯಂತ ವಿನಯಪೂರ್ವಕವಾಗಿಯೇ ಧಿಕ್ಕರಿಸಿದ ಮತ್ತು ಅದಕ್ಕೆ ಪ್ರತ್ಯುತ್ತರ ನೀಡಿದ. ಆತನ ಪ್ರಕಾರ ಆತ ಎಂತಹ ಸಂದರ್ಭದಲ್ಲಿಯೂ ಕಾಂಗ್ರೆಸ್ಸಿನ ಗುಣಗಾನವನ್ನು ಮಾಡಿಲ್ಲ. ಅರ್ಥಹೀನ ಅಗ್ಗಳಿಕೆ ತನ್ನ ಜಾಯಮಾನದಲ್ಲಿಯೇ ಇಲ್ಲ. ಹಾಗೊಂದು ವೇಳೆ ಆತ ಮಾಡಿದ್ದರೆ ಅದು ಇಡೀ ವಿಶ್ವದ ವಿಷಯದಲ್ಲಿ. ವಿಶ್ವ ಬಂಧುತ್ವವನ್ನು ಕುರಿತು ತಾನು ಸ್ವಲ್ಪ ಹೆಚ್ಚಿಗೆ ಮಾತನಾಡಿದ್ದು ಸತ್ಯ. ಅದು ತನ್ನ ಹಾಗೂ ಮನುಷ್ಯರಾದವರೆಲ್ಲರ ಧರ್ಮವೂ ಆಗಿದೆ. ಆದರೆ ಈ ತನ್ನ ಧರ್ಮದಲ್ಲಿ ಕೆಲವರಿಗೆ ಆಸಕ್ತಿ ಇಲ್ಲದಿರಬಹುದು. ಸಾಮರಸ್ಯದ ತನ್ನ ಮಾತುಗಳನ್ನು ಕೇಳಲೇಬೇಕು ಎಂದು ಯಾರನ್ನೂ ತಾನು ಬಲಾತ್ಕರಿಸುತ್ತಿಲ್ಲ ಎನ್ನುತ್ತಾನೆ ಗಾಂಧಿ. ಭಾರತೀಯ ರೇಡಿಯೊ ವ್ಯವಸ್ಥೆಯನ್ನು ತಾನೆಂದೂ ಸ್ವಾರ್ಥಕ್ಕಾಗಿ ಬಳಸಿಲ್ಲವೆಂದು ಸ್ಪಷ್ಟೀಕರಿಸುತ್ತಾನೆ.

ಆದರೆ ಗೋಡ್ಸೆ ಹೇಳುವುದೇ ಬೇರೆ. ಒಂದು ಕಾಲದಲ್ಲಿ ಅಫಘಾನಿಸ್ಥಾನದ ಅಮೀರರಿಗೆ ಭಾರತದ ಮೇಲೆ ದಾಳಿ ಮಾಡಲು ಆಹ್ವಾನವನ್ನು ನೀಡಿದ ಅಲೀ ಸಹೋದರರನ್ನು, ಮಲಬಾರ್, ಪಂಜಾಬ್, ಬಂಗಾಲ ಮತ್ತು ವಾಯುವ್ಯ ಸರಹದ್ದುಗಳಲ್ಲಿ ಹಿಂದೂ ಸ್ತ್ರೀಯರನ್ನು ಬಲಾತ್ಕರಿಸಿ ಮತಾಂತರಗೊಳಿಸಲು ಯತ್ನಿಸಿದ ಅನೇಕ ಮುಸ್ಲಿಮರನ್ನು, ೧೯೪೬ರಲ್ಲಿ ನೌಖಾಲಿಯಲ್ಲಿ ಹಿಂದೂ ಬಂಧುಗಳ ಮೇಲೆ ದೌರ್ಜನ್ಯಗಳನ್ನು ನಡೆಸಿದ ಸುಹ್ರಾವರ್ಧಿಯನ್ನು ಗಾಂಧಿ ಅನಾವಶ್ಯಕವಾಗಿ ಹೊಗಳಿ, ಅವರನ್ನೂ ರಾಷ್ಟ್ರ ಭಕ್ತರ ಸಾಲಿನಲ್ಲಿ ಸೇರಿಸುವ ಅಸಹ್ಯ ಪ್ರಯತ್ನವನ್ನು ಮಾಡಿದ್ದಾರೆ. 'ನಾನು ಮಾಡದೇ ಇರುವಂಥ ಯಾವ ತಪ್ಪನ್ನು ಅವರು (ಮುಸ್ಲಿಮರು) ಮಾಡಿದ್ದಾರೆ? ನನ್ನನ್ನು ಕ್ಷಮಿಸುವ ನೀವು ಅವರನ್ನೇಕೆ ಕ್ಷಮಿಸುವುದಿಲ್ಲ?' ಎನ್ನುವ ಭಾವನಾತ್ಮಕ ಪ್ರಶ್ನೆಯನ್ನು ಎತ್ತಿ ಮುಸ್ಲಿಂ ಅಪರಾಧಿಗಳನ್ನು ರಕ್ಷಿಸಿಟ್ಟಿದ್ದಾರೆ. ಹಿಂದೂ ಭಕ್ತರ ವಿರೋಧವನ್ನೂ ಕಡೆಗಣಿಸಿ ನಿತ್ಯ ತಮ್ಮ ಪ್ರಾರ್ಥನೆಯ ಅಂಗವಾಗಿ ಖುರಾನದ ಭಾಗಗಳನ್ನು ಓದಿಸಿರುವ ಗಾಂಧಿ ಮಸೀದಿಯಲ್ಲಿ ಭಗವದ್ಗೀತೆಯನ್ನು ಓದುವ, ಓದಿಸುವ ಸಾಹಸವನ್ನೇನೂ ಮಾಡಿಲ್ಲ.

ಈ ತೆರನಾಗಿ ವಾದಿಸುವ ಗೋಡ್ಸೆಯವರು ಚಿತ್ಪವನ ಬ್ರಾಹ್ಮಣರಂತೆ, 'ಅಗ್ರಣಿ' ಅಥವಾ 'ಹಿಂದೂ ರಾಷ್ಟ್ರ' ಪತ್ರಿಕೆಯ ಸಂಪಾದಕನಂತೆಯೇ ಮಾತನಾಡಿದ್ದು ಖಂಡಿತ ಸತ್ಯ. ಆದರೆ ಉಪವಾಸ ಸತ್ಯಾಗ್ರಹದಂತಹ ತಂತ್ರದ ಮೂಲಕ ಗಾಂಧಿ ತನ್ನ ಬಹುಸಂಖ್ಯಾತ ಹಿಂದೂ ವಿರೋಧಿ ವಿಚಾರವನ್ನು ಕಾಂಗ್ರೆಸ್ ಮೇಲೆ ಹೇರಿದ್ದು, ಕಾಂಗ್ರೆಸ್ಸನ್ನು ಅನೇಕ ಸಾರಿ ತನ್ನ ಇಷ್ಟದಂತೆಯೇ ಎಳೆದಾಡಿದ್ದೂ ಅಷ್ಟೇ ಚಿಂತನೆಗೊಳಪಡಿಸಬೇಕಾದ ವಿಚಾರವಾಗಿದೆ. ಯಾಕೆಂದರೆ ನಾವು ಹೀಗೆ ಪ್ರಶ್ನಿಸುವ ಈ ಗಾಂಧಿಯನ್ನು ಪ್ರಪಂಚದ ನವಜನಾಂಗ ಗ್ರಹಿಸಿದ ರೀತಿ ಭಗ್ನವಾಗಿತ್ತು. ವರ್ಣ ಭೇದದ ಕಹಿ ಅನುಭವಗಳಲ್ಲಿ ಕುದಿದು ಹೋಗಿದ್ದ ಮಾರ್ಟಿನ್ ಲೂಥರ್ ಕಿಂಗ್‌ನಂತಹ ಸಾಮಾಜಿಕ ಚಿಂತಕರೂ ಈ ನಾಡಿನಿಂದ ಆಚೆ ಈಗ "ಆಯ್ಕೆ ಅಹಿಂಸೆ ಇಲ್ಲವೇ ಸರ್ವನಾಶ ಎರಡರಲ್ಲಿ ಮಾತ್ರ" ಪ್ರತೀಕಾರದ ಯಾವ ಹೆಜ್ಜೆಯೂ ಸ್ವಾಗತನೀಯವಲ್ಲ ಎನ್ನುವುದನ್ನು ಹೇಳುವುದರ ಮೂಲಕ ಗಾಂಧಿಯ ಆಲೋಚನೆಯನ್ನೇ ಬೆಂಬಲಿಸಿದರು. ಐನ್‌ಸ್ಟೀನ್, ಟಾಯ್ನಬಿ, ರೋಮಾನ್ ರೋಲಾ, ಅಲಸ್ ಬ್ರಿಂಕ್ಲೆ, ರಾಲ್ಫ್, ಬುಲ್‌ಜೆನ್ಸ್, ವಿಲ್ ಡ್ಯುರಾಂಟ್, ಜೀನ್‌ಷಾರ್ಪ್, ಲೂಹಿ ಪ್ಯಾಶ್ಚರ್ ಎಲ್ಲರೂ ಗೆಲುವು ಮತ್ತು ಆಕ್ರಮಣದ ವಿಚಾರಗಳನ್ನು ಬಿತ್ತಿ ಬೆಳೆವ ನಾಡಿನಲ್ಲಿ ಹುಟ್ಟಿ ಬೆಳೆದೂ ಆ ದಾರಿಯನ್ನು ಧಿಕ್ಕರಿಸಿದ್ದರು. ಗೋಡ್ಸೆಯ ಮೂಲಕ ನಮ್ಮ ಹೊಸ ತಲೆಮಾರಿನ ಒಲವು ಮಾತ್ರ ಪಶ್ಚಿಮದೆಡೆಗೆ ಶುರುವಾಗಿತ್ತು.



'ಬಾ' ಈಗ ನೀ ನನ್ನೊಂದಿಗಿರಬೇಕಿತ್ತು

ಗಾಂಧಿ ನಂಬಿದ್ದ ಬಹುಪಾಲು ಮುಸ್ಲಿಂ ನಾಯಕರುಗಳನ್ನು ಕುರಿತು - ಉದಾಹರಣೆಗೆ ಅಲಿ ಬ್ರದರ್ಸ್, ಜಿನ್ನಾ, ಸುಹ್ರಾವರ್ದಿ, ಮಲಿಕ್ ಝಾಕೀರ್ ಹುಸೇನ್‌ರ ಬಗೆಗೆ - ಹಿಂದುವಾದಿಗಳ ತೀವ್ರ ಆಕ್ಷೇಪ ಇದೆ. ಅದರಿಂದ ಮುಕ್ತರಾದವರು ಮೌಲಾನಾ ಶೇಕ್ ಅಬ್ದುಲ್ಲಾ ಮತ್ತು ಮುಜೀಬುರ್ ರೆಹಮಾನ. ಗಾಂಧಿಯ ಮಾರ್ಗದರ್ಶನದಲ್ಲಿಯೇ ನಡೆದ ಒಬ್ಬ ರಾಷ್ಟ್ರನಿಷ್ಠ. ಜನಪರ ನಾಯಕ ಶೇಖ ಅಬ್ದುಲ್ಲಾ.

೨೮ ನವೆಂಬರ್, ಶುಕ್ರವಾರದ ದಿನ ಗಾಂಧಿ 'ಕಾಶ್ಮೀರದ ಹುಲಿ' ಎಂದೇ ಖ್ಯಾತರಾದ ಶೇಕ್ ಅಬ್ದುಲ್ಲಾರೊಂದಿಗೆ ಕಾಶ್ಮೀರ ಕುರಿತ ಸಮಸ್ಯೆಗಳಿಗೆ ಪರಿಹಾರದ ದಾರಿಗಳನ್ನು ಹುಡುಕಾಡುತ್ತಿದ್ದಾನೆ. ನಿಸ್ಸಂಶಯವಾಗಿಯೂ ಶೇಕ್ ಅಬ್ದುಲ್ಲಾ ಕಾಶ್ಮೀರದ

ಹಿಂದೂ, ಮುಸ್ಲಿಂ ಮತ್ತು ಸಿಖ್ ಜನಗಳ ಪ್ರಶ್ನಾತೀತ ನಾಯಕ. ಮೂರೂ ಜನಾಂಗಗಳನ್ನು ಸ್ನೇಹದ ತೆಕ್ಕೆಗೆ ತೆಗೆದುಕೊಂಡು, ಸಾಮರಸ್ಯದ ದಾರಿಯಲ್ಲಿ ನಡೆಸಿದ ಅಪರೂಪದ ವ್ಯಕ್ತಿ. ಕಾಶ್ಮೀರದಿಂದ ಇಂದು ಗಾಂಧಿಯೆಡೆಗೆ ಬರುವಾಗ ಅವರು ಜಮ್ಮುವಿಗೆ ಹೋಗಿ ಅಲ್ಲಿಯ ಬಹುಸಂಖ್ಯಾತ ಹಿಂದೂಗಳ ಅಭಿಪ್ರಾಯವನ್ನೂ ತಿಳಿದು ಬಂದಿದ್ದಾರೆ. ಅಬ್ದುಲ್ಲಾರು ಬರುವ ಮುಂಚೆ ಗಾಂಧಿ ಈಗಾಗಲೇ ಮಹಾರಾಜಾ ಹರಿಸಿಂಗ್ ಹಾಗೂ ಮೀರ್‌ಚಾಂದ್ ಮಹಾಜನ್ ಅವರೊಂದಿಗೂ ಅದೇ ಚರ್ಚೆಗಳನ್ನು ನಡೆಯಿಸಿದ್ದಾನೆ. ಮಾರ್ಗದರ್ಶನ ಕೇಳಿ ಬರುವ ಅಬ್ದುಲ್ಲಾರಿಗೆ ಕಾಶ್ಮೀರದ ವಿಚಾರದಲ್ಲಿ ಏನು ಸಲಹೆ ಸೂಚನೆಗಳನ್ನು ಕೊಡಬೇಕು ಎಂಬುದನ್ನು ಸ್ಪಷ್ಟಪಡಿಸಿಕೊಂಡಿದ್ದಾನೆ. ಅಬ್ದುಲ್ಲಾರಿಗೆ ಗಾಂಧಿ ಹೇಳುತ್ತಾನೆ, "ಜನರು ದ್ವಂದ್ವದಲ್ಲಿದ್ದಾರೆ, ಅವರಿಗೇನು ಮಾಡಬೇಕು ಎಂಬುದು ತೋಚುತ್ತಿಲ್ಲ. ನಾವೂ ಕೂಡ ನಮ್ಮ ನಮ್ಮ ಧರ್ಮವನ್ನು ಮರೆತಿದ್ದೇವೆ. ಸಮಚಿತ್ತರಾಗಿ, ಶಾಂತರಾಗಿ ಕೆಲಸ ಮಾಡಲಾಗುತ್ತಿಲ್ಲ. How can I remain unmoved in such situation? This is my sad tale and the tale of the whole India. ರಾಷ್ಟ್ರ ಮತ್ತು ಧರ್ಮದ ಪ್ರಶ್ನೆಗಳು ನನ್ನ ಮುಂದೆ ಬಂದಾಗ ನಾನು ಮೊದಲ ಆದ್ಯತೆ ನೀಡುವುದು ರಾಷ್ಟ್ರಕ್ಕೆ. ಅವೆರಡೂ ಭಿನ್ನ. ಆದಾಗ್ಯೂ ಅವೆರಡೂ ನನಗೆ ಅತ್ಯಂತ ಪ್ರೀತಿಯ ವಿಚಾರಗಳೇ. ಸರಿಯಾಗಿ ತೆಗೆದುಕೊಂಡಲ್ಲಿ, ತಿಳಿದುಕೊಂಡಲ್ಲಿ ಒಂದು ಇನ್ನೊಂದಕ್ಕೆ ಪೂರಕ. ಹೀಗಾಗಿ ರಾಷ್ಟ್ರದ ಒಬ್ಬ ಜವಾಬ್ದಾರಿ ಪ್ರಜೆಯಾಗಿ ಈ ಕ್ಷಣ ಕಾಶ್ಮೀರದ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯಬೇಕಾದುದೂ ನಮ್ಮ ಆದ್ಯ ಕರ್ತವ್ಯವಾಗಿದೆ. ದಯವಿಟ್ಟು ಪ್ರಾಮಾಣಿಕವಾಗಿ ಪ್ರಯತ್ನಿಸಿ, ದೇವರನ್ನು ನಂಬಿ" ಎಂದು ಹೇಳಿ ಗಾಂಧಿ ಚರ್ಚೆಯನ್ನು ಮುಗಿಸಿದ.

ಈ ದಿನ ನೆಮ್ಮದಿಪಡುವ ಒಂದೇ ಒಂದು ವಿಷಯವೂ ಇಲ್ಲ, ಬೆಳವಣಿಗೆಯೂ ಇಲ್ಲ. ಈಗಲೂ ಕೋಮು ಗಲಭೆಗಳು ಸಾಮಾಜಿಕ ಸ್ವಾಸ್ಥ್ಯವನ್ನು ಹೇಗೆ ಕೆಡಸುತ್ತಿವೆ ಎನ್ನುವುದನ್ನು ಕುರಿತು 'ಸರ್ವಂಟ್ಸ ಆಫ್ ಇಂಡಿಯಾ ಸೊಸೈಟಿ'ಯ ಗೆಳೆಯ ಎಂ.ಪಿ.ಕೋದಂಡರಾವ್ ನಾಗ್ಪುರದಿಂದ ಗಾಂಧಿಗೆ ಪತ್ರ ಬರೆದಿದ್ದಾರೆ. ನಾಳೆ ದೆಹಲಿಯಲ್ಲಿ ನಡೆಯಲಿರುವ ಗುರುನಾನಕ್ ಜಯಂತಿಗಾಗಿ ಆಹ್ವಾನವನ್ನು ನೀಡಿ ಅನೇಕ ಸಿಖ್ ಸಂಘಟನೆಗಳೂ ಗಾಂಧಿಗೆ ಇದೇ ದಿನ ಆಹ್ವಾನ ಪತ್ರಗಳನ್ನು ಕಳುಹಿಸಿವೆ. ಆದರೆ ನಾಳೆ ತನ್ನೊಂದಿಗೆ ಕಾಶ್ಮೀರಿ ನ್ಯಾಶನಲ್ ಕಾನ್ಫರೆನ್ಸ್‌ನ ನಾಯಕರಾದ ಶೇಕ್ ಅಬ್ದುಲ್ಲಾರಿಗೂ ಸಿಖ್ ಬಂಧುಗಳು ಬರಲು ಅವಕಾಶ ಮಾಡಿಕೊಟ್ಟರೆ ಮಾತ್ರ ತಾನು ಗುರುನಾನಕ್ ಜಯಂತಿಗೆ ಬರುವುದಾಗಿ ಗಾಂಧಿ ಹೇಳುತ್ತಿದ್ದಾನೆ. ಹಬ್ಬ ಇರುವುದೇ ಹಂಚಿಕೊಳ್ಳಲು ಅಲ್ಲವೆ? ಇದು ಆತನ ಪ್ರಶ್ನೆ.

ಅದೇನಾಯಿತೋ, ಈ ಮಧ್ಯಾಹ್ನ ಒಂಟಿಯಾಗಿ ಕುಳಿತುಕೊಂಡ ಗಾಂಧಿ, ರಾಮ ನಾಮ ಸ್ಮರಣೆಗೆ ಮೊರೆ ಹೋದ. ತಾನು ಸಾಗಿದ ದೀರ್ಘ ದಾರಿಯನ್ನು ಒಂದು ಕ್ಷಣ ಅವಲೋಕಿಸಿ ಸಹಯಾತ್ರಿಗಳೇ ಇಲ್ಲದ ತನ್ನ ಈ ಅಂತಿಮಯಾತ್ರೆಯಲ್ಲಿ ತಾನು ಒಂಟಿ ಎಂದುಕೊಂಡ. ಇನ್ನೊಂದೆಡೆ ತಾನು ಗಟ್ಟಿಯಾಗುತ್ತಿದ್ದೇನೆ ಎನ್ನುವ ನಂಬಿಕೆ, ಮತ್ತೊಂದೆಡೆ ತನ್ನೊಂದಿಗೆ ಯಾರೂ ಇಲ್ಲವೇ ಇಲ್ಲ ಎನ್ನುವ ಭಾವ ಗಾಂಧಿಯನ್ನು ಆಯ್ದುಕೊಳ್ಳಲಾಗದ ದಾರಿಯ ಮುಂದೆ ತಂದು ನಿಲ್ಲಿಸಿದೆ. ಮಡದಿ ಕಸ್ತೂರ್ ಬಾರನ್ನು ಈ ಕ್ಷಣದಲ್ಲಿ ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾನೆ. ಈಗ ಅವಳಿರಬೇಕಾಗಿತ್ತು ಎಂದುಕೊಳ್ಳುತ್ತಾನೆ. ಒಂಟಿತನ, ತನಗೆ ಬೇಡವಾದ ಜಂಜಾಟ, ತಬ್ಬಲಿತನಗಳನ್ನು ತನ್ನ ಈ ವಿಹ್ವಲತೆಯನ್ನು ವಿವರಿಸಿ ತನ್ನ ಗುಜರಾತಿನ ಪ್ರೀತಿಯ ಗೆಳೆಯನೊಬ್ಬನಿಗೆ ಪತ್ರ ಬರೆದು ತಿಳಿಸುತ್ತಾನೆ, "ಪ್ರಿಯ ಮಿತ್ರನೆ, ನನ್ನ ದುರ್ದೈವ, ಇಂದು ಕಸ್ತೂರ್ ಬಾ ನನ್ನೊಂದಿಗಿಲ್ಲ. ಒಂದು ವೇಳೆ ಅವಳು ನನ್ನೊಂದಿಗಿದ್ದಿದ್ದರೆ ಈ ದೇಶದ ಪ್ರತಿಯೊಬ್ಬ ಮಹಿಳೆಯಿಂದಲೂ ನಿರೀಕ್ಷಿಸಬಹುದಾದ ಧೈರ್ಯ ಮತ್ತು ಸಮಾಧಾನಗಳನ್ನು ನಾನವಳಿಂದ ಪಡೆಯಬಹುದಾಗಿತ್ತು. ಇಂದು ಈ ದೇಶದಲ್ಲಿ ನಮ್ಮ ಮಹಿಳೆಯರು ಸಾಮಾಜಿಕವಾಗಿ ಒಂದು ಸ್ಥಾನವನ್ನು ಗಳಿಸಿದ್ದಾರೆ ಎನ್ನುವುದಾದರೆ ಅದು ಕಸ್ತೂರ್ ಬಾಳ ಧೈರ್ಯ, ಚಾರಿತ್ರ್ಯ ಮತ್ತು ಅಚಲ ವಿಶ್ವಾಸದಿಂದಾಗಿ. ಗೆಳೆಯನೆ, ಅವಳು ನಿರಕ್ಷರಿಯಾಗಿದ್ದಳು. ಆದರೆ ಪ್ರತಿಯೊಬ್ಬ ಮಹಿಳೆಯಲ್ಲಿ ಇರುವ ಚಾರಿತ್ರಿಕ ಗುಣಗಳಿಂದ ಸೇವಾಭಾವದಿಂದ ಸಂಪನ್ನೆಯಾಗಿದ್ದಳು. ಅವಳ ಮತ್ತು ಅವಳಂತವರ ಮೌಲ್ಯಗಳನ್ನು ತಳಹದಿಯಾಗಿಸಿಕೊಂಡೇ ಈ ದೇಶ ಮತ್ತು ನಾನು ಈ ಎತ್ತರವನ್ನು ಮುಟ್ಟಿದ್ದೇವೆ. ಈ ದೇಶದ ಆಸ್ತಿಯೇ ನಮ್ಮ ಮಹಿಳೆಯರು. ಆದರೆ ಈ ಸತ್ಯವನ್ನು ನಾವು ಅದೆಷ್ಟೋ ಬಾರಿ ಬಚ್ಚಿಟ್ಟಿದ್ದೇವೆ. ಉಪಕೃತಿಯ ಮಾತುಗಳನ್ನಾಡಲೂ ಹಿಂಜರಿದಿದ್ದೇವೆ. ಅವರ ಋಣ ತೀರಿಸುವುದರಲ್ಲಿ ಸೋತಿದ್ದೇವೆ. ಸಂಕಷ್ಟದ ನನ್ನ ಎಲ್ಲ ಘಳಿಗೆಗಳಲ್ಲಿ ಯಾವಾಗಲೂ ನಾನಂದುಕೊಳ್ಳುವುದೊಂದೆ 'ಬಾ' ಈಗ ನನ್ನೊಂದಿಗಿರಬೇಕಾಗಿತ್ತು."

ಗೆಳೆಯನಿಗೆ ಪತ್ರ ಮುಗಿಸಿದ ಗಾಂಧಿ ನಾಳೆಯ ನಾನಕ್ ಜಯಂತಿಗೆ ತನಗೂ ಶೇಕ್ ಅಬ್ದುಲ್ಲಾರಿಗೂ ಸಿಖ್ ಬಂಧುಗಳು ಜೊತೆಯಾಗಿ ಬರಲು ಆಸ್ಪದ ಕೊಡುವರೆ ಅಥವಾ ಪ್ರತಿರೋಧ ಒಡ್ಡುವರೆ ಎನ್ನುವುದನ್ನು ನಿರೀಕ್ಷಿಸುತ್ತಲೇ ಈ ದಿನವನ್ನು ದೂಡಿದ.


ಸುದೈವಕ್ಕೆ ಗಾಂಧಿಯ ನಿರೀಕ್ಷೆ ಸುಳ್ಳಾಗಲಿಲ್ಲ. ಪ್ರತಿರೋಧದ ಬದಲು ಪ್ರೀತಿಯ ಸ್ವಾಗತವೇ ಗಾಂಧಿಗೆ ಕಾದಿತ್ತು. ವಿಭಜನೆಯ ನೆಪದಲ್ಲಿ, ಅಂದು ಕೋಮಿನ ಹೆಸರಿನಲ್ಲಿ ಪರಸ್ಪರ ಭಯಾನಕವಾಗಿ ಕಾದಾಡಿದವರು ಸಿಖ್ ಮತ್ತು ಮುಸ್ಲಿಂ ಬಂಧುಗಳು.

ಹೀಗಾಗಿ ಅಬ್ದುಲ್ಲಾರನ್ನು ಕರೆದುಕೊಂಡು ಹೋಗಬೇಕೆನ್ನುವ ತನ್ನ ವಿಚಾರಕ್ಕೆ ಬಹುತೇಕ ಬೆಂಬಲ ಸಿಗಲಿಕ್ಕಿಲ್ಲ ಎಂದುಕೊಂಡಿದ್ದ ಗಾಂಧಿ. ಆದರೆ ದೆಹಲಿಯ ಸಿಖ್ಖ್ ಜನಾಂಗದ ಅತ್ಯಂತ ಪ್ರಮುಖ ಮತ್ತು ಹಿರಿಯ ಧುರೀಣರಾಗಿದ್ದ ಸ್ವಯಂ ಬಾಬಾ ಬಂತಾರ್‌ಸಿಂಗ್‌ರೆ, ಗಾಂಧಿಗೆ ಅವನ ಇಷ್ಟದಂತೆಯೇ ಅಬ್ದುಲ್ಲಾರನ್ನು ಕರೆದುಕೊಂಡು ಬರಲು ಆಹ್ವಾನವನ್ನಿಟ್ಟರು.

ಇಂದು ಮಧ್ಯಾಹ್ನ, ಚಾಂದನಿ ಚೌಕ್‌ದ ಒಂದು ಗುರುದ್ವಾರ, ಅಪಾರ ಸಂಖ್ಯೆಯಲ್ಲಿ ಸಿಖ್ ಬಂಧುಗಳು ನಾನಕ್ ಜಯಂತಿಗೆ ಸೇರಿಕೊಂಡಿದ್ದಾರೆ. ನಗುನಗುತ್ತಾ ಅಬ್ದುಲ್ಲಾರೊಂದಿಗೆ ಪ್ರಾರ್ಥನಾ ಸ್ಥಳಕ್ಕೆ ಬಂದ ಗಾಂಧಿ ಸುತ್ತಲೂ ನೋಡಿದ, ಎಲ್ಲ ಅಸ್ತವ್ಯಸ್ತ. ಎಲ್ಲಿ ನೋಡಿದರಲ್ಲಿ ತಿಂದು ಒಗೆದ ಹಣ್ಣಿನ ಸಿಪ್ಪೆಗಳು, ಊಟದ ಎಲೆಗಳು, ಅಲ್ಲಲ್ಲಿ ಚೆಲ್ಲಿದ ನೀರು, ಅನ್ನ, ಎಲ್ಲವೂ ಅಸಹ್ಯ. ಈ ಅವಕಾಶವನ್ನೇ ಬಳಸಿಕೊಂಡು ಗಾಂಧಿ ಮಾತಿಗಿಳಿದ. "ಹಬ್ಬಗಳೆಂದರೆ ಒಳ-ಹೊರಗಿನ ಸ್ವಚ್ಚತೆ ಅಲ್ಲದೆ ಮತ್ತೇನೂ ಅಲ್ಲ. ಕ್ಷಮಿಸಿ, ನಾನದನ್ನು ಇಲ್ಲಿ ನೋಡುತ್ತಿಲ್ಲ. ನನ್ನ ತಾಯಿ ನಾನು ರೋಗಗ್ರಸ್ತನಾದಾಗ ನನಗೆ ಔಷಧಿಯನ್ನು ನೀಡುತ್ತಿದ್ದರು. ಔಷಧಿ ನಾಲಿಗೆಗೆ ಹಿತವೆನ್ನಿಸುತ್ತಿರಲಿಲ್ಲ. ಆದರೆ ರೋಗಗಳಿಂದ ರಕ್ಷಿಸಿಕೊಳ್ಳಲು ಅವುಗಳನ್ನು ನಾನು ತೆಗೆದುಕೊಳ್ಳಲೇಬೇಕಾಗುತ್ತಿತ್ತು. ಈಗ ನೀವೂ ನನ್ನ ಮಾತುಗಳನ್ನು ಹಾಗೆಯೇ ಸ್ವೀಕರಿಸಬೇಕು. ಇವು ಕೇಳಲು ಕಟು, ಆದರೆ ನನ್ನ ಸುತ್ತಲಿನ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕ. ಇಂದು ನನ್ನೊಂದಿಗೆ ಈ ಸಭೆಯಲ್ಲಿ ಅಬ್ದುಲ್ಲಾ ಸಾಹೇಬ್ ಹಾಗೂ ಸರ್ದಾರ್ ದಾತಾರ್‌ಸಿಂಗ್‌ರ ಮಗಳು ಇಬ್ಬರೂ ಇದ್ದಾರೆ. ದಾತಾರ್‌ಸಿಂಗ್ ದಂಗೆಯ ದಿನಗಳಲ್ಲಿ ಪಂಜಾಬಿನಲ್ಲಿ ನೂರಾರು ಎಕರೆ ಭೂಮಿ, ದನ-ಕರು, ಬಂಧು-ಬಳಗ ಹಾಗೂ ಅಪಾರ ಸಂಖ್ಯೆಯ ಸ್ನೇಹಿತರನ್ನು ಕಳೆದುಕೊಂಡವರು. ಆದರೆ ಅವರೆಂದೂ ಅದಕ್ಕಾಗಿ ಕಣ್ಣೀರು ಕಕ್ಕಲಿಲ್ಲ, ದ್ವೇಷದಿಂದ ಖಡ್ಗ ಮಸೆಯಲಿಲ್ಲ, ಮುಸ್ಲಿಮರ ವಿರುದ್ಧ ದ್ವೇಷ ಭಾವ ಬೆಳೆಸಿಕೊಳ್ಳಲಿಲ್ಲ. ಹಾಗೆಯೇ ನಮ್ಮ ಮುಂದೆ ಇನ್ನೊಂದು ನಿದರ್ಶನ, ಶ್ರೀಯುತ ಶೇಕ್ ಅಬ್ದುಲ್ಲಾ. ಅವರೊಬ್ಬ ಪಕ್ಕಾ ಮುಸ್ಲಿಂ. ಆದಾಗ್ಯೂ ಕಾಶ್ಮೀರದಲ್ಲಿ ಹಿಂದೂ-ಸಿಖ್ ಇಬ್ಬರಿಗೂ ಅತ್ಯಂತ ಪ್ರೀತಿಯ ಜನನಾಯಕ. ಇಂದು ಅಲ್ಲಿ, ಅವರ ನಾಯಕತ್ವದಲ್ಲಿ ಕೋಮು ದ್ವೇಷ ಉರಿಯುತ್ತಿಲ್ಲ. ನನಗೆ ಖುಷಿಯಾಗಿದೆ, ನನ್ನಷ್ಟೇ ಗೌರವ ಆದರಗಳಿಂದ ಅವರನ್ನೂ ಸ್ವಾಗತಿಸಿದ್ದೀರಿ. ಇಂದಿನ ಈ ಆಚರಣೆಗೆ ನಿಜಕ್ಕೂ ಹೊಸ ಅರ್ಥ ತುಂಬಿದ್ದೀರಿ. ಆದರೆ, ನನ್ನ ಈ ಸಂತೋಷ ಇನ್ನೂ ಹೆಚ್ಚಾಗಲು ಸಾಧ್ಯವಿತ್ತು. ಬೇಸರದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇಂದು ಇಲ್ಲಿಗೆ ಬರುವಾಗ ಒಬ್ಬನೇ ಒಬ್ಬ ಮುಸ್ಲಿಂ ಬಂಧು ಇಲ್ಲಿಯ ರಸ್ತೆಗಳಲ್ಲಿ ಸುತ್ತಾಡುವುದನ್ನು ನಾನು ನೋಡಲಿಲ್ಲ. ಇಡೀ ದೇಶದುದ್ದಕ್ಕೂ ಅವರಿದ್ದಾರೆ. ಈ ರಸ್ತೆಯಲ್ಲಿ ಮಾತ್ರ ಇಲ್ಲ ಎಂದರೇನು? ಅವರು ಖಂಡಿತ

ಭಯಗ್ರಸ್ತರಾಗಿದ್ದಾರೆ. ಮುಸ್ಲಿಂ ಮಕ್ಕಳನ್ನು, ಮಹಿಳೆಯರನ್ನು, ಮುಪ್ಪಿನವರನ್ನು ನಾವು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿದ್ದೇವೆ. ಆ ಕುರಿತು ನನಗೆ ವಿಷಾದವಿದೆ. ಇನ್ನು ಮುಂದೆ ಅವುಗಳ ಪುನರಾವರ್ತನೆಯಾಗಬಾರದು. ಸಿಖ್‌ರ ಬಳಿ 'ಕಿರ್‌ಪಾನ' ಇರುವುದು ಯಾತಕ್ಕಾಗಿ? ಅದು ಶೌರ್ಯದ ಸಂಕೇತ. ದುರ್ಬಲರನ್ನ ರಕ್ಷಿಸುವುದರ ಸಂಕೇತ. ಸಿಖ್‌ರ ಹತ್ತನೆ ಮತ್ತು ಕೊನೆಯ ಗುರುವಾಗಿದ್ದ ಗುರು ಗೋವಿಂದಸಿಂಗ್ ಖಂಡಿತವಾಗಿ ಖಡ್ಗವನ್ನ ಧರಿಸುತ್ತಿದ್ದರು. ಆದರೆ ಅದನ್ನು ಅಸಮರ್ಪಕವಾಗಿ ಬಳಸಿದ ಉದಾಹರಣೆಗಳಿಲ್ಲ. ಸ್ವಂತಕ್ಕೆ ಸಾಕಷ್ಟು ನಿಬಂಧನೆಗಳನ್ನು ಹಾಕಿಕೊಂಡ ಅಪರೂಪದ ಗುರು ಅವರು. ಗೊತ್ತಿರಲಿ ಬಂಧುಗಳೇ, ಅವರಿಗೆ ಮುಸ್ಲಿಂ ಅನುಯಾಯಿಗಳೂ ಇದ್ದರು. ಇದು ಗುರುನಾನಕ್ ಸಾಹೇಬ್‌ರ ವಿಷಯದಲ್ಲಿಯೂ ಸತ್ಯ. ಮುಸ್ಲಿಂರಾದಿಯಾಗಿ ಎಲ್ಲ ಭಿನ್ನ ನಂಬಿಕೆಯ ಜನಗಳು ನಿಮ್ಮ ಅನುಚರರಾದಾಗಲೇ ನಿಮ್ಮ ಶೌರ್ಯದ ನಿಜವಾದ ಅನುಭವವಾಗುವುದು. ಗುರು ಗ್ರಂಥಸಾಹೇಬನ್ನು ಓದುವವರು ಮತ್ತು ಗುರು ಪರಂಪರೆಯನ್ನು ನಂಬುವವರು ದುರ್ಬಲರಾಗಿರಲಿಲ್ಲ. ಕುಡಿತ, ಮಾದಕದ್ರವ್ಯ, ನೃತ್ಯ ಹೀಗೆ ಯಾವುದೇ ವ್ಯಸನಗಳಿಗೂ ಅವರು ಆಸ್ಪದವೀಯಲಿಲ್ಲ. ಇಂದು ಮತ್ತೆ ಅದೇ ವಚನವನ್ನು ನಾನು ನಿಮ್ಮಿಂದ ಪಡೆಯಲು ಬಂದಿದ್ದೇನೆ, ವ್ಯಸನಗಳ ದಾಸರಾಗುವುದಿಲ್ಲ ಎಂದು. ನನಗೆ ಭರವಸೆ ಕೊಡಿ, ಮಾನಸಿಕ ಕ್ಲೇಶಕ್ಕೊಳಗಾಗುವುದಿಲ್ಲವೆಂದು; ಹಾಗೆಯೇ ಯಾರನ್ನೂ ದ್ವೇಷಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ. ಈ ದೇಶದಲ್ಲಿ ಸಿಖ್‌ರಿಗೆ ಉಳಿದವರಿಗಿಂತ ಹೆಚ್ಚಿನ ಜವಾಬ್ದಾರಿ ಇದೆ. ಅವರಿಗೆ ಎಲ್ಲರೂ ಸಹೋದರರೇ. ನಾನಕರು ನಮಗಿದನ್ನು ಕಲಿಸಿಹೋಗಿದ್ದಾರೆ. ಅವರೂ ಜಾತ್ಯತೀತರು. ಅಂತೆಯೇ ಅವರು ಮೆಕ್ಕಾಕೆ ಹೋಗಿಬಂದಿದ್ದರು. ಸಾಮಾಜಿಕ ಸಾಮರಸ್ಯವನ್ನು ಕುರಿತು ಬರೆದರು, ಮುಸ್ಲಿಂರನ್ನೂ ಶಿಷ್ಯರಾಗಿ ಸ್ವೀಕರಿಸಿದರು. ಅದಕ್ಕಾಗಿಯೇ ಹೇಳುತ್ತಿದ್ದೇನೆ, ಗೆಳೆಯರೇ, ಒಳ್ಳೆಯವರಾಗೋಣ, ನಮ್ಮ ನಮ್ಮ ಕರ್ತವ್ಯಗಳನ್ನು ಮಾಡೋಣ."

ಗಾಂಧಿಯ ಮಾತು ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಒಂದು ಕ್ಷಣ ಸೇರಿದವರೆಲ್ಲರೂ ಚಿಂತೆಗೊಳಗಾದರು. ಯಾರ ಕಣ್ಣಲ್ಲಿಯೂ ಗಾಂಧಿಯ ವಿಚಾರವನ್ನು ತಿರಸ್ಕರಿಸುವ ಒಂದು ಸಣ್ಣ ಸೆಳಕೂ ಇರಲಿಲ್ಲ. ಗಾಂಧಿಯ ನಂತರ ಆತನ ವಿಚಾರಗಳ ಮುಂದುವರಿಕೆಯಾಗಿ ಶೇಖ್ ಅಬ್ದುಲ್ಲಾ ಇಲ್ಲಿ ಮಾತನಾಡಿದರು. ಆ ಮಾತುಗಳ ಅವಶ್ಯಕತೆ ಇರಲಿಲ್ಲ. ಅಂದಹಾಗೆ ಜಗತ್ತಿಗೆ ಸಾಂತ್ವನ ಹೇಳಿ ಹೊರಟ ಗಾಂಧಿ ಕಾರು ಹತ್ತಿ ಮರಳಿ ಹೊರಟಾಗ ಮತ್ತೂ ಅಂದುಕೊಂಡ 'ಬಾ, ಈಗ ನೀನು ನನ್ನೊಂದಿಗಿರಬೇಕಿತ್ತು'



ಸಹನೆಯೋ, ಷಂಡತನವೋ?

ಇದು ವಾರಂತ್ಯ. ಇಡೀ ಯುರೋಪ್ ತನ್ನೆಲ್ಲ ಮಾನವ ಸಂಬಂಧಗಳ ತಳಬುಡಗಳನ್ನು ಜಾಲಾಡಿಸಿ ಅಳುವ-ನಗುವ ಯೋಜನೆಗಳಿಗೆ ಸಿದ್ಧವಾಗುವ ದಿನ, ರವಿವಾರ, ೩೦ ನವೆಂಬರ್ ೧೯೪೭. ಯುರೋಪಿಯನ್ನರಿಗೂ ಮೀರಿದ ಅವಸರದಲ್ಲಿದ್ದಾನೆ ಗಾಂಧಿ. ಇಂದು ಆತ ಅನುಸೂಯಾ ಬೆಹನ್, ಪ್ರಿವ್ಯಾಟ್ ಹಾಗೂ ಮೌಲಾನಾ- ಈ ಅನೇಕರೊಂದಿಗೆ ಅದೆಷ್ಟೋ ವಿಚಾರಗಳನ್ನು ಚರ್ಚಿಸುವುದಿದೆ, ಕೆಲವರಲ್ಲಿ ಚರ್ಚಿಸಿದ್ದಾನೆ. ಅವೆಲ್ಲವುಗಳಲ್ಲಿ ನನಗೇಕೊ ಸ್ವಿಟ್ಜರ್‌ಲ್ಯಾಂಡಿನ ಮ್ಯಾಡಮ್ ಯುವೋನ್ ಪ್ರಿವ್ಯಾಟ್‌ಗೆ ಬರೆದ ಈ ಸಾಲುಗಳನ್ನು ನೀವು ಓದಲೇಬೇಕು ಎನಿಸುತ್ತಿದೆ. ಯಾಕೆಂದರೆ ನಮ್ಮೊಳಗೊಳಗೆ ಗೋಡ್ಸೆಯೊಂದಿಗೆ ಕೈ ಕುಲುಕಿಸಿಕೊಂಡ ನಾವು ಗಾಂಧಿಯನ್ನು ಒಬ್ಬ ಅವ್ಯವಹಾರಿಕ, ಆದರ್ಶದ ಬೋಧಕ

ಎಂದು ನಿಸ್ಸಂಶಯವಾಗಿಯೂ ಕೆಲವು ಚರ್ಚೆಗಳ ವ್ಯಾಪ್ತಿಯಿಂದ ಆತನನ್ನು ಹೊರಗಿಟ್ಟಾಗಿದೆ. ಯಾವಾಗಲೂ ಆತ್ಮವಂಚನೆಯ ದೀರ್ಘ ಪರಂಪರೆಯ ಮೇಲೆ ನಿಂತುಕೊಂಡೇ ನೀವು, ನಾವು ಗಾಂಧಿಯೊಂದಿಗೆ ಸತ್ಯವನ್ನು ಹುಡುಕಾಡುವ ದೊಡ್ಡ ಸೋಗಲಾಡಿತನವನ್ನು ಪ್ರದರ್ಶಿಸಿದ್ದೇವೆ. ಸಹನೆ ಎಂದರೇನು ಎನ್ನುವುದನ್ನು ಗಾಂಧಿ ಪ್ರಿವ್ಯಾಟಳಿಗೆ ಬರೆದ ಇಂದಿನ ಪತ್ರದಲ್ಲಿ ಚರ್ಚಿಸಿದ್ದಾನೆ. ಓದಿ, "ಇಡೀ ಯುರೋಪ್ ಸಹನೆಯ ನನ್ನ ಸಿದ್ಧಾಂತವಾದ ಅಹಿಂಸೆಯನ್ನು ತಪ್ಪಾಗಿ ಗ್ರಹಿಸಿದೆ. ಅದನ್ನ ದುರ್ಬಲರ ಭಾಷೆ ಎಂದು ತಿಳಿದಿದೆ. ಆದರೆ ನ್ಯೂ ಟೆಸ್ಟಮೆಂಟನ್ನು ಓದಿದ ನನಗೆ ಜೀಸಸ್ ಎಲ್ಲಿಯೂ ಅಹಿಂಸೆಯನ್ನು ಆತ್ಮವಂಚನೆ ಎಂದಾಗಲಿ, ಹೇಡಿತನವೆಂದಾಗಲಿ ಪ್ರತಿಪಾದಿಸಿದ್ದು ನೆನಪಿಲ್ಲ. 'ಹಾರ್ಮನಿ ಆಫ್ ದ ಗಾಸ್ಫಲ್ಸ್' ಬರೆದ ಟಾಲ್‌ಸ್ಟಾಯ್ ಕೂಡ ಹಾಗಂದುಕೊಂಡಿಲ್ಲ. ಅಹಿಂಸೆಯಿಂದಲೇ ನಾವು ಜೈಸಿದ್ದು ಸತ್ಯ. ಆದರೆ ಅದನ್ನು ಸರಿಯಾಗಿ ತಿಳಿದುಕೊಳ್ಳದೆ ಅನುಸರಿಸಿ ನಾವು ಅದೆಷ್ಟು ಬಡ್ಡಿಯನ್ನು ಈಗ ತೆರುತ್ತಿಲ್ಲ? ಅಹಿಂಸೆಯ ಪಥಕ್ಕೆ ವಿಶ್ವವನ್ನು ಬಲವಂತವಾಗಿ ಎಳೆಯಲು ಯತ್ನಿಸಿ ನಾನು ಖಂಡಿತ ಕೆಲವು ತಪ್ಪುಗಳನ್ನು ಮಾಡಿದ್ದೇನೆ, ಒಪ್ಪಿಕೊಳ್ಳೋಣ. ಆದರೆ ಬರೀ ಹಿಂಸೆಯನ್ನೇ ಅನುಸರಿಸಿದ್ದರೆ ಈಗ ನಾವು ಎಲ್ಲಿರುತ್ತಿದ್ದೆವು? ಇಂದಿಗೂ ನಿತ್ಯ ದೇವರಿಗೆ ನನ್ನ ಪ್ರಾರ್ಥನೆ ಒಂದೇ– ಈ ರಕ್ತಪಾತ ನಿಲ್ಲಲಿ, ವಿಶ್ವಾಸದ್ರೋಹ ನಿಲ್ಲಲಿ, ಭರವಸೆಯ ಹೊಸ ಭಾರತ ನಮ್ಮಿಂದ ಹುಟ್ಟಿಕೊಳ್ಳಲಿ. ಹಾಗೆ ಹುಟ್ಟಿದ ಹೊಸ ಭಾರತ ಪಶ್ಚಿಮದ ಅನುಕರಣೆಯಿಂದ ಮುಕ್ತವಾಗಿರಲಿ. ಸುವಿಚಾರ ಯುರೋಪನಿಂದಲೇ ಬಂದಿದ್ದರೂ ಚಿಂತೆಯಿಲ್ಲ. ಕಲಿಯುವಿಕೆಯಲ್ಲಿ ಭಾರತ ಯಾವಾಗಲೂ ವಿಧೇಯವಾಗಿರಲಿ, ವಿನೀತವಾಗಿರಲಿ. ಆ ಮೂಲಕ ವಿಶ್ವಕ್ಕೇ ಮಾದರಿಯಾಗಲಿ."

ಈ ಸಾಲುಗಳನ್ನು ಬರೆಯುವ ಗಾಂಧಿ ಭಾರತವನ್ನು ವಿಶ್ವಕ್ಕೇ ಮಾದರಿಯಾಗಿಸುವ ಪಂಕ್ತಿಯಲ್ಲಿ ನೋಡಿದ್ದ. ಧರ್ಮ, ದೇಶ, ಕಾಲಗಳ ವಿಭಜನೆಯನ್ನು ಹೊರತುಪಡಿಸಿದ ಮಾನವ ಜನಾಂಗವನ್ನು ಆತ ಒಂದು ಅಖಂಡ ಸಾಗರದಂತೆ ಗ್ರಹಿಸಿದ. ಇನ್ನೊಂದು ಮುಖ್ಯ ವಿಚಾರ. ವಿಶ್ವ ಬಂಧುತ್ವದಲ್ಲಿ ಭಾರತ ಹೇಗೆ ಬೆರೆಯಬೇಕು, ಅಖಂಡ ಮಾನವೀಯತೆಯಲ್ಲಿ ವ್ಯಕ್ತಿಗತವಾಗಿ ಮನುಷ್ಯ ಹೇಗೆ ಒಂದಾಗಬೇಕು ಎಂದು ತಿಳಿಸಿದ ಗಾಂಧಿ ಅಹಮದಾಬಾದಿನ ಮಜ್ದೂರ್ ಮಹಾಜನ್ ಸಂಘದ ಅಧ್ಯಕ್ಷರಾದ ಅಂಬಾಲಾಲ್ ಸಾರಾಭಾಯಿಯ ಸಹೋದರಿ ಅನುಸೂಯಾ ಬೆಹನ್‌ಳಿಗೆ ತಿಳಿಸುತ್ತಾನೆ. ಆತನ ಬದುಕೇ ಒಂದು ಸಂದೇಶ ಆ ಕಾರಣ ಕಾರ್ಮಿಕರ ದಿನಾಚರಣೆಗೂ ಇಂದು ಅದೇ ಅವನ ಸಂದೇಶ. ಜೊತೆಗೆ ದುಡಿಯುವವನಿಗೆ ಜಾತಿಗಳಿಲ್ಲ, ಕಾರ್ಮಿಕರು ವರ್ಗರಹಿತ ಸಮಾಜವನ್ನು ಬಯಸುವುದಾದರೆ ಮೊದಲು ತಮ್ಮ ಜಾತಿಗಳನ್ನು ಮರೆಯಬೇಕು. ತಾವೂ

ಮಾಲೀಕರಷ್ಟೇ ಪ್ರಮುಖರು ಎಂದುಕೊಳ್ಳುವುದಾದರೆ ಕಂಪನಿಯ ಹಾನಿಯಲ್ಲಿಯೂ ಸಹಪಾಲು ಕೇಳಬೇಕು. ವಿಫಲತೆಯ ಜವಾಬ್ದಾರಿಗಳನ್ನು ಹಂಚಿಕೊಳ್ಳಬೇಕು. ಅಹಮದಾಬಾದಿನ ಕಾರ್ಮಿಕ ಬಂಧುಗಳಿಗೆ ಅನ್ಯಾಯವನ್ನು ವಿರೋಧಿಸುವುದು ಹೇಗೆ ಎನ್ನುವುದು ನಿಮಗೆ ಚೆನ್ನಾಗಿ ಗೊತ್ತು, ಆದಾಗ್ಯೂ ಕಲಿಯಬೇಕಾದುದು ಇನ್ನೂ ಸಾಕಷ್ಟಿದೆ, ಅಂತಿಮವಾಗಿ ಅಹಿಂಸೆಯ ದಾರಿಯನ್ನು ಸದಾಕಾಲ ಗೌರವಿಸಬೇಕು ಎನ್ನುತ್ತಾನೆ.

ಯಾರು ಏನೇ ಹೇಳಿದರೂ ಗಾಂಧಿಯ ಭರವಸೆಗಳೇ ಭಿನ್ನ. ಆತ ವಾಸ್ತವವನ್ನು ಅವಲೋಕಿಸುವ ರೀತಿಯೂ ಭಿನ್ನ.

ಮರುದಿನ ಸೋಮವಾರ, ಡಿಸೆಂಬರ್ ತಿಂಗಳ ಮೊದಲ ದಿನ. ಇನ್ನು ಆತನ ಕೊಲೆಗೆ ಸರಿಯಾಗಿ ೫೯ ದಿನಗಳ ಲೆಕ್ಕ. ಆತನ ಇಡೀ ವ್ಯಕ್ತಿತ್ವವನ್ನು ರೂಪಿಸಿದ ರಾಜಕೋಟ್‌ನಿಂದ ಅಲ್ಲಿಯ ಮುಸ್ಲಿಮರ ಮೇಲೆ ಆಗುತ್ತಿರುವ ಅನಾಚಾರ, ಅತ್ಯಾಚಾರಗಳ ಕುರಿತು ಒಂದು ಟೆಲಿಗ್ರಾಂ ಬಂದಿದೆ. ಅದು ನೀಡುವ ಮಾಹಿತಿ ಯಾರನ್ನೂ ಬೆಚ್ಚಿಬೀಳಿಸುವಂತೆಯೇ ಇದೆ. ಆದರೆ ಜ್ವಾಲಾಮುಖಿಯ ಮಧ್ಯೆಯೂ ಜಪ್ ಎನ್ನದೆ ಕುಳಿತುಕೊಳ್ಳಬಲ್ಲವನಾದ ಗಾಂಧಿ ಹಿಂದಿನ ತನ್ನ ಲಿಖಿತ ಸಂದೇಶದಲ್ಲಿ ಏನನ್ನು ಚರ್ಚಿಸಿದ್ದಾನೆ ನೋಡಿ. ಯಾಕೆಂದರೆ ಇಂದು ಸೋಮವಾರ. ಆತ ಮಾತನಾಡುವುದಿಲ್ಲ, ಬರೆಯುತ್ತಾನೆ. “ಇಂದು ನಾವು ಶತಮಾನಗಳಿಂದ ನಮ್ಮಲ್ಲಿದ್ದ ಅನೇಕ ಒಳ್ಳೆಯ ಪದ್ಧತಿಗಳನ್ನ ಮರೆತಿದ್ದೇವೆ. ಪ್ರವಚನ, ಪೂಜೆ, ಎಲ್ಲೇ ಹೋದರೂ ನಮ್ಮ ಆಸನವನ್ನು ತೆಗೆದುಕೊಂಡು ಹೋಗುವ ಪದ್ಧತಿ ಶತಮಾನಗಳಷ್ಟು ಹಳೆಯದ್ದು. ಆದರೆ ನಮ್ಮ ವಿಲಾಸೀ ಪ್ರವೃತ್ತಿ ಇಂದು ಅದನ್ನ ನಿರ್ಲಕ್ಷಿಸುವಂತೆ ಮಾಡಿದೆ. ದಯವಿಟ್ಟು ಇಲ್ಲಿ ಪ್ರಾರ್ಥನೆಗೆ ಬರುವವರು ಅಂತಹ ತಪ್ಪನ್ನು ಇನ್ನು ಮುಂದೆ ಮಾಡಬಾರದು. ಎಂತಹದಾದರೂ ಸರಿ, ಕುಳಿತುಕೊಳ್ಳಲು ಒಂದು ಹಾಸಿಗೆಯನ್ನು ನಿಮ್ಮ ನಿಮ್ಮ ಮನೆಗಳಿಂದ ಇಲ್ಲಿ ನೀವೇ ತೆಗೆದುಕೊಂಡು ಬನ್ನಿ. ನಿತ್ಯವೂ ಅದು ನಿಮ್ಮೊಂದಿಗಿರಲಿ. ಅಂದಹಾಗೆ ರಾಜಕೋಟ್‌ನಿಂದ ಟೆಲಿಗ್ರಾಂ ಬಂದಿದೆ. ನನಗೆ ಕಾಠೇವಾಡದ ಮುಸ್ಲಿಂ ಬಂಧುಗಳ ಬಗೆಗೆ ಚೆನ್ನಾಗಿ ಗೊತ್ತು. ವ್ಯಕ್ತಿಗತವಾದ ಹೆಸರುಗಳು ಗೊತ್ತಿರಲಿಕ್ಕಿಲ್ಲ ಅಷ್ಟೆ. ಆದರೆ ಅಲ್ಲಿಯ ಮುಸ್ಲಿಮರಲ್ಲಿಯ ಖೊಜಾ, ಮೀನಾ, ವಾಖೇರ, ಕುಂಬಿ ಮತ್ತು ಮಾಹೇರ್ ಜನಾಂಗಗಳ ಬಗ್ಗೆ ಚೆನ್ನಾಗಿ ಗೊತ್ತು. ಅದೇ ಕಾಠೇವಾಡನಲ್ಲಿ ಹುಟ್ಟಿ ೧೭ ವರ್ಷ ಬೆಳೆದಿದ್ದೇನೆ. ಶಾಲಾ-ಕಾಲೇಜು ಶಿಕ್ಷಣವನ್ನು ಭಾವನಗರದಲ್ಲಿ ಮುಗಿಸಿದ್ದೇನೆ. ಕೆಲವು ಹಿಂದೂಗಳು ಅಲ್ಲಿಯ ಮುಸ್ಲಿಮರನ್ನ ಹಿಂಸಿಸುತ್ತಿರಬಹುದು. ಮುಸ್ಲಿಮರ ರಕ್ಷಣೆಗೆ ನಿಂತದ್ದಕ್ಕಾಗಿ ನಮ್ಮವರೇ ಆದ ದೇಭರ್ ಭಾಯಿಯವರನ್ನು ಸಾರ್ವಜನಿಕವಾಗಿ ಥಳಿಸಲಾಗಿದೆ. ಆದರೆ ಇದ್ಯಾವುದಕ್ಕೂ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಇದಕ್ಕೆಲ್ಲ ಕಾಂಗ್ರೆಸ್

ಉತ್ತರಿಸುತ್ತದೆ. ಆರ್.ಎಸ್.ಎಸ್. ನ ಬಗ್ಗೆ, ಹಿಂದೂ ಮಹಾ ಸಭೆಗಳ ಬಗ್ಗೆ ಎಚ್ಚರವಾಗಿರಿ. ಅವು ಶತಮಾನಗಳ ನಿಮ್ಮ ತಪಸ್ಸನ್ನು, ರಾಷ್ಟ್ರದ ಮರ್ಯಾದೆಯನ್ನು ಮಣ್ಣುಪಾಲು ಮಾಡುತ್ತವೆ" ಎಂದು ತಿಳಿಸಿದ ಗಾಂಧಿ ಇದೇ ದಿನ ತನ್ನ ಸಹಾಯಕನಾದ ಪ್ಯಾರೇಲಾಲರಿಗೆ ಪೂರ್ವ ಪಾಕಿಸ್ತಾನಕ್ಕೆ ಹೋಗಲು ತಿಳಿಸಿದ್ದಾನೆ. ಗಾಂಧಿ ಇಂದು ತನ್ನನ್ನು ಕಾಣಲು ಬರಲಿರುವ ಭಾರತೀಯ ಸೇನೆಯ ಸರ್ವೋಚ್ಚ ಅಧಿಕಾರಿ ಜನರಲ್ ಕೆ.ಎಂ.ಕಾರ್ಯಪ್ಪರಿಗಾಗಿ ಕಾಯುತ್ತಿದ್ದಾನೆ. ಭಾರತ ಸರಕಾರದ ಪರವಾಗಿ ಲಂಡನ್ನಿಗೆ ಹೋಗಿದ್ದ ಕಾರ್ಯಪ್ಪ ದೆಹಲಿ ವಿಮಾನ ನಿಲ್ದಾಣದಿಂದ ನೇರವಾಗಿ ಬಿರ್ಲಾಹೌಸಿಗೆ ಬಂದರು.

ಗಾಂಧಿಯ ಎದುರು ಕುಳಿತು, ಈ ಹಿಂದಿನ ಅಹಿಂಸೆಯ ಕುರಿತಾದ ತಮ್ಮಿಬ್ಬರ ಮಧ್ಯದ ಚರ್ಚೆಗಳಿಗೆ ಸ್ಪಷ್ಟನೆ ನೀಡಲಾರಂಭಿಸಿದರು. "ಬಾಪು, ಸಣ್ಣವನಾದ ನನ್ನ ವಿಚಾರಗಳನ್ನು ನೀವು ಗಂಭೀರವಾಗಿ ಪರಿಗಣಿಸಿದ್ದೀರಿ, ನನ್ನನ್ನು ಗೌರವಿಸಿದ್ದೀರಿ, ಅದಕ್ಕಾಗಿ ಧನ್ಯವಾದಗಳು. ಈ ಸಮಾಜದಲ್ಲಿ ಯುದ್ಧವನ್ನು ಭಯಾನಕವಾಗಿ ವಿರೋಧಿಸುವವರಿರುವಂತೆಯೇ ಯುದ್ಧವನ್ನು ನಿರೀಕ್ಷಿಸುವವರೂ ಇದ್ದಾರೆ. ನಾವು ಸೈನಿಕರು ಎಂದಿಗೂ ಯುದ್ಧದ ಪರವಲ್ಲ. ಅದರಿಂದ ನಮ್ಮ ಸಂಸಾರಗಳಿಗೆ ಸುಖವಿಲ್ಲ. ಅಂತಾರಾಷ್ಟ್ರಿಯ ವ್ಯಾಜ್ಯಗಳನ್ನು ಬಗೆಹರಿಸುವ ವಿಚಾರಗಳಲ್ಲಿ ಯುದ್ಧ ಎಂದೂ ಗೆದ್ದಿಲ್ಲ. ಇತಿಹಾಸ ಗಮನಿಸಿದವರಿಗೆ ಇದು ಗೊತ್ತು. ಒಂದು ಯುದ್ಧ ಇನ್ನೊಂದು ಯುದ್ಧಕ್ಕೆ ಎಡೆಮಾಡಿಕೊಡುತ್ತಲೇ ಬಂದಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸೈನಿಕರು ಸರಕಾರದ ಆಜ್ಞೆಯನ್ನು ಪಾಲಿಸುವವರಷ್ಟೆ. ಇದರಲ್ಲಿ ನಮ್ಮ ವೈಯಕ್ತಿಕ ಹಿತಾಸಕ್ತಿ ಏನೂ ಇಲ್ಲ. ಶೀಘ್ರದಲ್ಲಿಯೇ ಮತ್ತೆ ನಿಮ್ಮ ಭೇಟಿಗೆ ಬರುತ್ತೇನೆ. ಬೇರೆ ವಿಚಾರಗಳನ್ನು ಕುರಿತು ಚರ್ಚಿಸೋಣ" ಎಂದು ಹೇಳಿ ಹೊರಟ ಕಾರ್ಯಪ್ಪನವರು ಇಂದು ಬಹಳ ಮಾತನಾಡಲಿಲ್ಲ, ಕಾರಣವಿಷ್ಟೇ. ಇಂದು ಸೋಮವಾರ, ಗಾಂಧಿಯ ಮೌನಾಚರಣೆಯ ದಿನ.

ಬುಧವಾರ, ಡಿಸೆಂಬರ್ ೩ರಂದು ಮತ್ತೆ ಬಂದರು ಕಾರ್ಯಪ್ಪ. ಮುಗುಳ್ನಗುತ್ತ ಕುಳಿತಿದ್ದ ಗಾಂಧಿ. ಪಾದುಕೆಗಳನ್ನು ಬಿಚ್ಚಿಡುತ್ತ ಕಾರ್ಯಪ್ಪ, 'ದೇವತಾ ಮನುಷ್ಯರನ್ನು ಸಂದರ್ಶಿಸಲು ಬರುವಾಗ ನಾವು ಸಾಧ್ಯವಾದಷ್ಟು ಶುಚಿಯಾಗಿರಬೇಕು' ಎಂದರು. ಗಾಂಧಿ ಮತ್ತೆ ಮುಗುಳ್ನಕ್ಕ. ಇಂದು ಕಾರ್ಯಪ್ಪನವರು ಮಾತನಾಡಲೇ ಇಲ್ಲ. ಆದರೆ ನಿನ್ನೆಯ ಅವರ ಅನೇಕ ವಿಚಾರಗಳ ಪರವಾಗಿ, ಅವುಗಳಿಂದ ಭಿನ್ನವಾಗಿ, ತನ್ನ ಅಭಿಪ್ರಾಯಗಳನ್ನು ತಿಳಿಸಿದ ಗಾಂಧಿ ದೇಶದ ಸೈನಿಕ ವ್ಯವಸ್ಥೆ ಮತ್ತು ಪೋಲಿಸ್ ವ್ಯವಸ್ಥೆಗಳೂ ಸ್ವಜನ ಪಕ್ಷಪಾತ ಮಾಡಿದರೆ ಹೇಗೆ? ಅಲ್ಪಸಂಖ್ಯಾತರನ್ನು ರಕ್ಷಿಸುವವರಾರು? ದೇಶದ ಆಂತರಿಕ ಭದ್ರತೆ ಏನಾದೀತು? ಎನ್ನುವ ಪ್ರಶ್ನೆಗಳನ್ನಿಟ್ಟ. ಅಂತಿಮವಾಗಿ ಗಾಂಧಿ ಒಪ್ಪಿಕೊಂಡ,

"Violence can be overcome only through non-violence. This is as clear to me as two and two make four. But, for this to work, one must have faith. Very few people have learned this eternal truth. Faith must be supplemented by knowledge. Training in *ahimsa* requires purity of heart and soul-force. A votary of non-violence will not let the slightest hint of violence to enter into his heart."

ಕಾರ್ಯಪ್ಪ ಸುಮ್ಮನೆ ಎಲ್ಲವನ್ನು ಆಲಿಸುತ್ತಿದ್ದರು. ಕಾರ್ಯಪ್ಪನವರ ಮನಸ್ಸಿನಲ್ಲಿ ಒಂದು ಪ್ರಶ್ನೆ. ಗಾಂಧಿಯನ್ನು ಕೇಳಿಯೇ ಬಿಟ್ಟರು, "ಹಾಗಾದರೆ, ಭಾರತಕ್ಕೊಂದು ಸೈನ್ಯವಿರಬೇಕು ಎನ್ನುವುದಾದರೆ ಅದು ಹೇಗಿರಬೇಕು? ಖಂಡಿತವಾಗಿಯೂ ನನ್ನ ಸೈನ್ಯಕ್ಕೆ ನಾನು ಅಹಿಂಸೆಯ ಮಹತ್ವವನ್ನು ಕುರಿತು ತಿಳಿಸುತ್ತೇನೆ, ಆದರೆ ಅದನ್ನು ಸೈನಿಕರು ಅನುಸರಿಸುವುದು ಹೇಗೆ? ವೃತ್ತಿಯಿಂದ ಸೈನಿಕರಾದ ಅವರಿಗೆ ತಮ್ಮ ಕರ್ತವ್ಯಕ್ಕೆ ಚ್ಯುತಿಬಾರದಂತೆ ಅದನ್ನು ಪಾಲಿಸಲು ಅವಕಾಶವೆಲ್ಲಿದೆ? ಈ ವಿಚಾರಗಳಲ್ಲಿ ನಾನಿನ್ನೂ ಬಾಲಕನೆ. ದಯವಿಟ್ಟು ನನಗೆ ಮಾರ್ಗದರ್ಶನ ಮಾಡಿ. ತಿಳಿಸಿ ಹೇಳಿ."

ಗಾಂಧಿ ಜೋರಾಗಿ ನಕ್ಕ. ಚರಕದ ಮೇಲಿನ ತನ್ನ ದೃಷ್ಟಿಯನ್ನು ಕಾರ್ಯಪ್ಪನವರ ಕಡೆಗೆ ಹರಿಸಿ ಹೇಳಿದ, "ಹೌದು, ನೀವೆಲ್ಲರೂ ಮಕ್ಕಳು. ನಾನೂ ಮಗುವಲ್ಲವೆ? ಒಂದಷ್ಟು ನಿಮಗಿಂತ ವಯಸ್ಸಿನಲ್ಲಿ ಹಿರಿಯ ಮಗುವೇನೋ. ಆ ಕಾರಣ ಈ ವಿಚಾರ ಕುರಿತು ನಿಮ್ಮೆಲ್ಲರಿಗಿಂತ ಸ್ವಲ್ಪ ಹೆಚ್ಚಿಗೇ ಚಿಂತೆಗೀಡಾಗಿದ್ದೇನೆ. ಸೈನ್ಯಕ್ಕೆ ಅಹಿಂಸೆಯ ಪಾಠವನ್ನ ಹೇಗೆ ಕಲಿಸುವುದು ಎನ್ನುವುದು ನಿಮ್ಮ ಪ್ರಶ್ನೆ. ಈ ಪ್ರಶ್ನೆಯ ಸಮರ್ಥ ಉತ್ತರಕ್ಕಾಗಿ ನಾನೂ ಹುಡುಕಾಡುತ್ತಿದ್ದೇನೆ. ನಿಸ್ಸಂಶಯವಾಗಿ ದಾರಿ ಸಿಗುತ್ತದೆ. ಉತ್ತರ ಸಿಕ್ಕ ದಿನ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ನಿಮಗೆ ಗೊತ್ತಿರುವಂತೆ ಲಾರ್ಡ್ ವೇವೆಲ್ ಮತ್ತು ಲಾರ್ಡ್ ಮೌಂಟ್‌ಬ್ಯಾಟನ್ ಇಬ್ಬರೂ ಸೈನ್ಯಾಧಿಕಾರಿಗಳೇ. ಆದರೆ ಅವರು ನನ್ನ ಅಹಿಂಸಾವಾದದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ವಿಶೇಷತಃ ವೇವೆಲ್‌ರಂತೂ ಭಾರತದಲ್ಲಿ ಅಹಿಂಸಾ ಮಾರ್ಗವಾಗಿ ಹಿಂದೂ–ಮುಸ್ಲಿಮರ ಮಧ್ಯದ ಗಲಭೆಗಳು ಬಗೆಹರಿದ ರೀತಿಯಿಂದ ತುಂಬಾ ಪ್ರಭಾವಿತರಾಗಿದ್ದಾರೆ. ಆಗಸ್ಟ್ ತಿಂಗಳಲ್ಲಿಯ ಕಲ್ಕತ್ತೆಯ ದಂಗೆಗಳು ಅಹಿಂಸೆಯ ಕಾರಣಕ್ಕಾಗಿಯೇ ಶಾಂತವಾದುದನ್ನು ಕಂಡು ಮೌಂಟ್‌ಬ್ಯಾಟನ್ನರು ಅಚ್ಚರಿಗೊಂಡಿದ್ದಾರೆ. ಖಂಡಿತವಾಗಿಯೂ ದೇಶಕ್ಕೆ ಸೈನ್ಯ ಬೇಕು. ಅದು ರಾಷ್ಟ್ರವನ್ನು ರಕ್ಷಿಸುವುದಕ್ಕಾಗಿ ಸದಾ ಸನ್ನದ್ಧವಾಗಿರಬೇಕು. ಈ ವಿಚಾರದಲ್ಲಿ ನಾನು ನಿಮ್ಮ ಸೈನ್ಯವನ್ನು, ಅದರ ಶಕ್ತಿಯನ್ನು ಒಪ್ಪುತ್ತೇನೆ. ಸೈನ್ಯದ ಶಿಸ್ತು, ಆರೋಗ್ಯ ಮತ್ತು ಸಾರ್ವಜನಿಕ ಸೇವೆಗಳ ಕುರಿತು ನನಗೆ ಅಭಿಮಾನವಿದೆ. ನಿಮ್ಮೊಂದಿಗೆ ಇನ್ನೂ ಬಹಳಷ್ಟು ಚರ್ಚಿಸಬೇಕಿದೆ. ದಯವಿಟ್ಟು ಅವಕಾಶ ಮಾಡಿಕೊಂಡು ಆಗಾಗ ಬರುತ್ತಿರಿ."

ಗಾಂಧಿ ಅವಸರದಲ್ಲಿಯೇ ತನ್ನ ಚರ್ಚೆಯನ್ನು ಮೊಟಕುಗೊಳಿಸಿದ. ಆತನಿಗೆ ಇದೇ ದಿನ ಪಾಣಿಪತ್‌ನ ನಿರಾಶ್ರಿತರ ತಾಣಗಳಿಗೆ ಇನ್ನೊಂದು ಭೇಟಿ ಕೊಡಬೇಕಿದೆ. ಪೂರ್ವ ಪಂಜಾಬದ ಮುಖ್ಯಮಂತ್ರಿ ಡಾ. ಗೋಪಿಚಂದ್ ಭಾರ್ಗವ ಗಾಂಧಿಗಾಗಿ ಗಂಟೆಗಳಿಂದ ಕಾಯುತ್ತಿದ್ದಾರೆ. ನಿರಾಶ್ರಿತರಲ್ಲಿ ಕೆಲವು ಮುಸ್ಲಿಮರು ತಮಗೆ ಇಲ್ಲಿ ಭದ್ರತೆ ಇಲ್ಲ, ಹಿಂದೂಗಳ ಆಕ್ರೋಶಕ್ಕೆ ಬಲಿಯಾಗುವುದಕ್ಕಿಂತ ನಮ್ಮ ಬಂಧುಗಳೊಂದಿಗೆ ಸಾಯುತ್ತೇವೆ; ನಮ್ಮನ್ನು ಪಾಕಿಸ್ತಾನಕ್ಕೆ ಕಳುಹಿಸಿಕೊಡಿ ಎಂದು ಹಟ ಹಿಡಿದಿದ್ದಾರೆ. ಈ ಭಾವ ಎಲ್ಲ ಕಡೆಯಲ್ಲೂ ವ್ಯಾಪಿಸಿ ಅವಘಡವಾಗುವ ಮುಂಚೆ ಗಾಂಧಿ ಇದನ್ನು ಬಗೆಹರಿಸುವ ವಿಚಾರ ಮಾಡಿದ್ದಾನೆ. ಹೀಗಾಗಿ ಪಾಣಿಪತ್‌ಗೆ ಹೋಗುವ ಅವಸರದಲ್ಲಿದ್ದಾನೆ.

ಡಿಸೆಂಬರ್ ೩ರಂದು ಮಧ್ಯಾಹ್ನ, ನಿರಾಶ್ರಿತರೊಂದಿಗಿದ್ದ ಗಾಂಧಿ ಅವರ ಸಮಸ್ಯೆಗಳನ್ನು ಆಲಿಸಿದ, ಯಾರನ್ನೂ ದೂಷಿಸಲಿಲ್ಲ. ಎಲ್ಲರೂ ತಮಗೆ ಆಗಿರುವ ಅನಾನುಕೂಲತೆ, ಅನ್ಯಾಯ, ಹಿಂಸೆ ಕುರಿತು ಹೇಳುವುದರಲ್ಲಿಯೇ ತೊಡಗಿದ್ದರೆ ಒಂದು ಕ್ಷಣ ಇದಕ್ಕೆ ಯಾರು ಹೊಣೆಗಾರರು? ಯಾಕೆ ಹೀಗಾಯಿತು? ಒಂದು ಸಾಮ್ರಾಜ್ಯವನ್ನೇ ಹೊರಗಟ್ಟುವ ಶಕ್ತಿ ಇದ್ದ ತಾವು ತಮ್ಮ ನೆಲದಲ್ಲೇ ಯಾಕೆ ಪರಕೀಯರಾದೆವು? ಯಾರೂ ಆಲೋಚಿಸುತ್ತಿಲ್ಲ. ಆದರೆ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಕೆಲವು ಪ್ರಶ್ನೆಗಳನ್ನಿಟ್ಟ, "ನನಗೆ ಈ ದೇಶವನ್ನು ರಾಮರಾಜ್ಯವನ್ನಾಗಿಸುವ ಕನಸಿದೆ, ಆದರೆ ಅದು ನನ್ನೊಬ್ಬನಿಂದ ಸಾಧ್ಯವೆ? ಒಂದು ಕಾಲಕ್ಕೆ ೧೨೫ ವರ್ಷ ಬದುಕುವ ಕನಸು ಕಂಡಿದ್ದೆ. ಈಗ ಆ ಕನಸಿಗೆ ಅರ್ಥವಿದೆಯೇ? ನಾವು ಅನುಭವಿಸುತ್ತಿರುವುದು ಸ್ವಾತಂತ್ರ್ಯವೆ? ನಮ್ಮ ಬುಡಗಳನ್ನು ನಾವೇ ಕತ್ತರಿಸಿಕೊಳ್ಳುತ್ತಿದ್ದೇವೆ ಎನಿಸುತ್ತಿಲ್ಲವೆ? ಈ ನಮ್ಮ ದುರಂತಸ್ಥಿತಿಗಳಿಗೆ ಏನು ಕಾರಣ? ಈ ಪ್ರಶ್ನೆಗಳನ್ನು ಹಾಕಿಕೊಂಡಷ್ಟೂ ಸಮಸ್ಯೆ ಗಂಭೀರವಾಗುತ್ತದೆ. ನಾನು ಹೇಳುವುದಿಷ್ಟೆ: I do not believe in shedding tears. Do as God guides you. I have said what I have to say. I can only pray to God to grant us good sense."

ಗುರುವಾರ, ಡಿಸೆಂಬರ್ ೪ರಂದು ಗಾಂಧಿಯ ದರ್ಶನಕ್ಕಾಗಿ ಬರ್ಮಾದ ಪ್ರಧಾನಮಂತ್ರಿ ತಾಕಿನ್ ನು ತನ್ನ ವಿದೇಶಾಂಗ ಸಚಿವ ಉ–ತಿನ್–ಟುಟ್‌ರೊಂದಿಗೆ ಬಂದು ಕುಳಿತಿದ್ದಾರೆ. ಆದರೆ ಗಾಂಧಿಗೆ ಅವರಿಗದ್ಯಾವ ದೊಡ್ಡ ಸಂದೇಶವನ್ನು ಕೊಡಬೇಕು ತಿಳಿಯುತ್ತಿಲ್ಲ. ಯಾಕೆಂದರೆ ಆತನ ಪ್ರಕಾರ ತಾನು ತನ್ನ ದೇಶ ಅಹಿಂಸೆಯ ದಾರಿಯಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಕಂಡಿಲ್ಲ. ಈಗಷ್ಟೇ ಅದು ಮನವರಿಕೆಯೂ ಆಗಿದೆ. ಹೀಗಾಗಿ ಯಾವುದೋ ದೊಡ್ಡ ನಿರೀಕ್ಷೆಯಲ್ಲಿ ಬಂದ ಅತಿಥಿಗಳಿಗೆ ಅಪ್ರಾಮಾಣಿಕವಾದ ಸಂದೇಶವನ್ನು, ಚಿತ್ರಣವನ್ನು ನೀಡುವುದರ ಬದಲು ಪ್ರಾಮಾಣಿಕವಾದ ತನ್ನ ದೇಶದ ವಾಸ್ತವವನ್ನು ಬಿಚ್ಚಿಡುವುದು ಸೂಕ್ತ

ಎಂದುಕೊಂಡ ಗಾಂಧಿ. ಅಂತೆಯೇ ಹೇಳಿದ, "ಇಲ್ಲಿ, ನಮ್ಮ ಬಳಿ ಅನುಕರಿಸಲು ಯೋಗ್ಯವಾದುದೇನೂ ಇಲ್ಲ. ಪರಸ್ಪರ ಸಹೋದರರು ಇಲ್ಲಿ ಕಿತ್ತಾಡುತ್ತಿದ್ದಾರೆ. ದಯವಿಟ್ಟು ಭಾರತದಿಂದ ಈ ಚಿತ್ರಣವನ್ನು ಮಾತ್ರ ತೆಗೆದುಕೊಂಡು ಹೋಗಬೇಡಿ. ಇದು ಭಿನ್ನ ಸಂಸ್ಕೃತಿ ಮತ್ತು ಜೀವನ ಶೈಲಿಗಳನ್ನು ಹೊಂದಿದ ಸನಾತನ ದೇಶ. ಈಗ ಸ್ವಲ್ಪ ಸಂಕಷ್ಟದಲ್ಲಿದೆ. ದಯವಿಟ್ಟು ಕೆಟ್ಟದನ್ನು ಇಲ್ಲಿಯೇ ಬಿಟ್ಟು, ಸಿಕ್ಕಷ್ಟು ಮೌಲ್ಯಗಳನ್ನು ತೆಗೆದುಕೊಂಡು ಹೋಗಿ. ಅವು ಮಾತ್ರ ನಿಮ್ಮವು. ಖಂಡಿತ ಭಾರತಕ್ಕೆ ಸೈನ್ಯವಿದೆ, ಸೈನ್ಯದ ಬಳಿ ಮದ್ದು ಗುಂಡುಗಳಿವೆ, ಆದರೆ ಅವುಗಳ ಸಹಾಯವಿಲ್ಲದೆ ರಾಷ್ಟ್ರವನ್ನು ರಕ್ಷಿಸುವಂತೆ ಸೈನ್ಯವನ್ನು ಮಾನಸಿಕವಾಗಿ ಸಿದ್ಧಮಾಡುವ ದಾರಿಗಳನ್ನು ನಾವು ಹುಡುಕುತ್ತಿದ್ದೇವೆ" ಎಂದು ಹೇಳಿ ಗಾಂಧಿ ಬಂದ ಅತಿಥಿಗಳನ್ನು ಬೀಳ್ಕೊಟ್ಟ.

ಬಂದವರು ಹೋಗುತ್ತಾರೆ, ಆದರೆ ಈ ಗಾಂಧಿ ಎಲ್ಲಿಗೆ ಹೋಗಬೇಕು! ತನಗೆ, ತನ್ನ ದೇಶಬಾಂಧವರನ್ನು ಆವರಿಸಿಕೊಂಡಿರುವ ಸುತ್ತಲಿನ ಕತ್ತಲೆಯಲ್ಲಿ ಬೆಳಕಿಗಾಗಿ ತಡಕಾಡುತ್ತಾ ಆತ ಇಲ್ಲಿಯೇ ಕೂತಿರುತ್ತಾನೆ. ಬಂದ ಒಬ್ಬಿಬ್ಬರು ಅತಿಥಿಗಳು ಹೊಸ್ತಿಲಿನಿಂದ ಹೊರಗೆ ಕಾಲಿಡುತ್ತಲೇ ಮತ್ತೆ ಹತ್ತು ಜನ ಪ್ರಶ್ನೆಗಳೊಂದಿಗೆ ಗಾಂಧಿಯ ಬಳಿಗೆ, ಆತನ ಒಳಗೆ ಬರಲು ಕಾದಿರುತ್ತಾರೆ. ಇಂದು ಹಾಗೆ ಕಾದವರಲ್ಲಿ ನೆಹರು, ರಾಜೇಂದ್ರ ಪ್ರಸಾದ, ಮೃದುಲಾ ಸಾರಭಾಯಿ, ರೇಣುಕಾ ರೇ, ಜೀವರಾಜ ಮೇಹತಾ, ಅನುಗ್ರಹ ನಾರಾಯಣ ಸಿನ್ಹಾ ಮತ್ತು ಘನಶ್ಯಾಂದಾಸ ಗುಪ್ತಾ ಇದ್ದಾರೆ. ದಿನವೆಲ್ಲಾ ಹೊರಗಿನವರೊಂದಿಗೆ ಮಾತನಾಡುವುದರಲ್ಲಿಯೇ ಕಳೆದಿದ್ದ ಗಾಂಧಿಗೆ ಇಂದು ತುಂಬಾ ಅವಸರವಿದೆ. ಸೇರಿದ ಎಲ್ಲ ರಾಜಕೀಯ ಮುಖಂಡರೊಂದಿಗೆ, ಅನುಯಾಯಿಗಳೊಂದಿಗೆ ಆತ ಮಹತ್ವದ ವಿಚಾರವೊಂದನ್ನು ಹಂಚಿಕೊಳ್ಳಲೇಬೇಕಿದೆ. ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ದೊಂಬಿ, ಕೋಮುಗಲಭೆ ಕುರಿತು ಅನೇಕ ತಂತಿ ಸಂದೇಶಗಳು, ಪತ್ರಿಕಾ ವರದಿಗಳು, ಅಲ್ಪಸಂಖ್ಯಾತರ ಪತ್ರಗಳು ಸಾಕಷ್ಟು ಬಂದು ಬಿದ್ದಿವೆ. ಕಾಠೇವಾಡದಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಮರೊಂದಿಗೆ ಅನ್ಯಾಯಗಳು ನಡೆಯಲೇ ಇಲ್ಲ ನಡೆಯುತ್ತಿಲ್ಲ ಎಂದು ನೀವು ಒಪ್ಪುತ್ತೀರ? ಎಂದು ಪಾಕಿಸ್ತಾನದಿಂದ ಲೀಯಾಖತ್ ಅಲಿ ಖಾನ ಪ್ರಶ್ನೆ ಮಾಡಿದ್ದಾರೆ. ಇಂದು ಗಾಂಧಿ ಪ್ರಾರ್ಥನೆಯ ನಂತರ ಇವೆಲ್ಲವನ್ನೂ ಸಾರ್ವಜನಿಕರ ಮುಂದೆ ಪ್ರಸ್ತಾಪಿಸುತ್ತಾನೆ.

"ಬಂಧುಗಳೆ, ಭಾರತದ ಅಲ್ಪಸಂಖ್ಯಾತರೊಂದಿಗೆ ನಡೆದಿರುವ ಅನ್ಯಾಯಗಳನ್ನು ಪಾಕಿಸ್ತಾನದ ಮಾಧ್ಯಮ ಮತ್ತು ಪತ್ರಿಕೆಗಳು ವೈಭವೀಕರಿಸಿ ಬಿಂಬಿಸುತ್ತಿವೆ. ನಾನು ತಿಳಿದಿರುವಂತೆ ಸರ್ದಾರ ಪಟೇಲ್ ಮತ್ತು ಸೋಮಲ್ ದಾಸ್ ಗಾಂಧಿ ಅಲ್ಪಸಂಖ್ಯಾತರ ವಿಷಯದಲ್ಲಿ ಸಾಕಷ್ಟು ನಿಗಾ ವಹಿಸುತ್ತಿದ್ದಾರೆ. ತಾವು ಈ ಮೊದಲು ಕಳುಹಿಸಿದ ತಂತಿಸಂದೇಶಗಳು ತಪ್ಪಾದವು ಎಂದು ಮುಸ್ಲಿಂ ಬಾಂಧವರೇ ನನ್ನ ಮುಂದೆ ಒಪ್ಪಿಕೊಂಡಿದ್ದಾರೆ. ಪಾಕಿಸ್ತಾನದ ವರದಿಗಳು ಸುಳ್ಳಾಗಿವೆ ಎಂದೂ

ತಿಳಿಸಿದ್ದಾರೆ. ಈ ಬದಲಾವಣೆ ನೋಡಿ ನನಗೆ ಖುಷಿಯಾಗಿದೆ. ಮುಸ್ಲಿಂ ಸಹೋದರರ ವಿಷಯದಲ್ಲಿ ನನ್ನಿಂದ ಇನ್ನೂ ಏನೇನು ಮಾಡಲು ಸಾಧ್ಯವಿದೆಯೋ ಅದೆಲ್ಲವನ್ನೂ ಪ್ರಾಮಾಣಿಕವಾಗಿ ಮಾಡುತ್ತೇನೆ. ಅವರನ್ನು ಮೇಲೆತ್ತಬೇಕಾದುದು ನಾಗರಿಕರಾದ, ಮನುಷ್ಯರಾದ ನಮ್ಮ ನಿಮ್ಮೆಲ್ಲರ ಕರ್ತವ್ಯ. ಪಾಕಿಸ್ತಾನ ಸೃಷ್ಟಿಯಾದ ಮಾತ್ರಕ್ಕೆ ತಾವು ಬಯಸುವುದೆಲ್ಲವೂ ಸಾಧಿಸಿಬಿಡುತ್ತದೆ ಎಂದುಕೊಂಡದ್ದು ಒಂದು ಭ್ರಮೆ. ಅಲ್ಲಿರುವವರು ಮಾತ್ರ ಜೀವಂತವಾಗಿರುತ್ತಾರೆ, ಉಳಿದ ಇಲ್ಲಿಯ ಮುಸ್ಲಿಮರೆಲ್ಲರೂ ಸತ್ತೇ ಬಿಡುತ್ತಾರೆ ಎನ್ನಿಸುವಷ್ಟು ಈ ಭ್ರಮೆಯನ್ನ ವೈಭವೀಕರಿಸಿ ಬಿಂಬಿಸಲಾಗಿತ್ತು. ಹಿಂದೂ, ಮುಸ್ಲಿಂ ಮತ್ತು ಸಿಖ್‌ರು ಸಾಕಷ್ಟು ಸಂಖ್ಯೆಯಲ್ಲಿ ಪಾಕಿಸ್ತಾನದಲ್ಲೂ ಇದ್ದಾರೆ. ಅವರನ್ನು ಅಲ್ಲಿಂದ ಸಂಪೂರ್ಣವಾಗಿ ಹೊರಗಟ್ಟಲು ಸಾಧ್ಯವೆ? ಅಲ್ಲಿಯಂತೆಯೇ ಇಲ್ಲಿಯೂ ಕೂಡ. ನೆಮ್ಮದಿಯಾಗಿರಿ. ಅಂದಹಾಗೆ ಕಾಠೇವಾಡದಲ್ಲಿ ನಿಮ್ಮ ಕಾಳಜಿವಹಿಸಲು ನನ್ನ ಪ್ರತಿನಿಧಿಯಾಗಿ ಕಾಂಗ್ರೆಸ್ಸಿನ ಯು.ಎನ್.ಢೇಬರ್ ಇದ್ದಾರೆ. ನನಗೆ ಅವರ ಪ್ರಾಮಾಣಿಕತೆಯ ಬಗೆಗೆ ಸಂಶಯಗಳಿಲ್ಲ."

ಇದೇ ದಿನ ಗಾಂಧಿ ಘನಶ್ಯಾಂದಾಸ ಬಿರ್ಲಾಗೆ ಭಾರತದಲ್ಲಿ ಬಟ್ಟೆ ಉತ್ಪಾದನೆ ನಿಯಂತ್ರಣ ಕಾಯ್ದೆ ಕುರಿತು ಮಾತನಾಡಿ ಯಾವುದೇ ಕಾರಣಕ್ಕೂ ನನ್ನ ಉಪಸ್ಥಿತಿಯಲ್ಲಿ ಈ ದೇಶದ ಜನ ಎಂದೂ ಕೂಡ ಊಟ ಮತ್ತು ವಸ್ತ್ರದ ಸಮಸ್ಯೆಗಳನ್ನು ಎದುರಿಸಬಾರದು. ಎಷ್ಟೇ ಆದರೂ ಮೊದಲು ನಾನು ಸಾರ್ವಜನಿಕ ಸೇವಕ. ನಂತರ ಉಳಿದಂತೆ.

ಗಾಂಧಿ ಅಲ್ಪಸಂಖ್ಯಾತರಿಗೆ ಈ ಭರವಸೆಗಳನ್ನು ಸಾರ್ವಜನಿಕವಾಗಿ ನೀಡುತ್ತಿದ್ದಾನೆ, ಆತ್ಮಸಾಕ್ಷಿಯಾಗಿ ನೀಡುತ್ತಿದ್ದಾನೆ ಎನ್ನುವುದನ್ನು ಗಮನಿಸಬೇಕು. ಆತ ಚುನಾವಣೆಯ ಭಾಷಣವನ್ನು ಮಾಡುತ್ತಿಲ್ಲ. ದೈವಸಾಕ್ಷಿಯಾದ ರಾಜಕೀಯ ಮಾಡುತ್ತಿದ್ದಾನಷ್ಟೆ. ರಾಷ್ಟ್ರವನ್ನು ನಡೆಸುವವನು ತತ್ವಜ್ಞಾನಿಯಾಗಿರಬೇಕು ಎನ್ನುವ ಗ್ರೀಕರ ನಿರೀಕ್ಷೆ ಸರಿಯಾದುದು ಎನ್ನುವುದಾದರೆ ಭಾರತಕ್ಕೆ ಗಾಂಧಿಯಲ್ಲಿ ಅಂತಹ ಒಬ್ಬ ನಾಯಕ ಸಿಕ್ಕಿದ್ದ ಎನ್ನಬಹುದೆ?



ಈ ಸೀತೆಯರಿಗೆ ಸಾವೇ?

ಡಿಸೆಂಬರ ೬ ಶನಿವಾರ, ಸಾಯಂಕಾಲದ ಪ್ರಾರ್ಥನೆ ಶ್ರೀಮತಿ ಎಮ್.ಎಸ್.ಸುಬ್ಬಲಕ್ಷ್ಮಿಯವರ 'ರಾಮ ಧುನ್'ದೊಂದಿಗೆ ಮುಕ್ತಾಯವಾಯಿತು. ಎಂತಹ ಭಯಾನಕ ಘಟ್ಟದಲ್ಲೂ ರಾಮನಾಮವೆಂಬ ಹರಿಗೋಲನ್ನು ಹಿಡಿದು ಸಾಗರವನ್ನು ದಾಟಬಲ್ಲ ಈ ಗಾಂಧಿಗೆ ಬಹಳ ದಿನಗಳಿಂದ ಸೇವಾಗ್ರಾಮದ ತನ್ನ ಆಶ್ರಮಕ್ಕೆ ಹೋಗಿಬರಲಾಗಿಲ್ಲ. ಇತ್ತೀಚೆಗೆ ಗಾಂಧಿಯನ್ನು ಕಾಣಲು ಜನಗಳೇ ಅಲ್ಲಿಂದ ಬಂದು ಹೋಗುತ್ತಿದ್ದಾರೆ. ಕಸ್ತೂರ್ ಬಾ ಟ್ರಸ್ಟ್‌ನ ಕೆಲಸಗಳು ಚುರುಕುಗೊಳ್ಳಬೇಕಿದೆ. ಹಳ್ಳಿಗಳಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸುವ ನಯೀ ತಾಲೀಂ ಶುರುವಾಗಬೇಕಿದೆ. ಕೆಲಸಗಳಿಗೇನು ಕೊರತೆಯಿಲ್ಲ. ಅವುಗಳನ್ನು ನಿಭಾಯಿಸುವುದೇ ಪ್ರಶ್ನೆ ಈಗ. ಈ ಎಲ್ಲ ಯೋಚನೆಗಳೊಂದಿಗೆ ಡಿಸೆಂಬರ್ ೭ರಂದು ತಡಕಾಡುತ್ತಿದ್ದ ಗಾಂಧಿಗೊಂದು ಬೆದರಿಕೆಯ

ಪತ್ರ ಬಂದಿದೆ. ಪಾಕಿಸ್ತಾನದಲ್ಲಿ ಹಿಂದೂ–ಸಿಖ್‌ರ ವಿರುದ್ಧ ಎಂತಹ ಘೋರ ಅನ್ಯಾಯ ನಡೆಯುತ್ತಿದೆ. ಅದಕ್ಕೆ ಪ್ರತೀಕಾರವನ್ನು ಭಾರತದ ಮುಸ್ಲಿಮರ ಮೇಲೆ ತೆಗೆದುಕೊಳ್ಳುವಲ್ಲಿ ನೀನು ಅಡ್ಡಿಯಾಗಿದ್ದೀಯಾ, ಇನ್ನು ಮುಂದೆ ಎಚ್ಚರವಾಗಿರು ಎಂದು ಅದರ ಒಕ್ಕಣಿಕೆ. ಇನ್ನೊಂದು ಕಡೆ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಪ್ಲೇಗ್‌ಗಳಂಥ ರೋಗಗಳಿಂದ ಮಹಿಳೆ ಮತ್ತು ಮಕ್ಕಳನ್ನು ಹೇಗೆ ಮುಕ್ತಗೊಳಿಸಬೇಕು ಎಂಬ ವಿಚಾರಸಂಕಿರಣಕ್ಕೆ ಇದೇ ದಿನ (ಡಿಸೆಂಬರ್ ೭ರಂದು) ಗಾಂಧಿ ಹೋಗಬೇಕಿದೆ. ಆದರೆ ಇವೆಲ್ಲಕ್ಕೂ ಮೀರಿದ ದೊಡ್ಡ ಸಮಸ್ಯೆಯೊಂದು ಗಾಂಧಿಯನ್ನು ನಿರಂತರವಾಗಿ ಕಾಡುತ್ತಿದೆ. ಈ ಸಮಸ್ಯೆಯನ್ನು ಗಾಂಧಿ ಮೃದುಲಾ ಸಾರಾಭಾಯಿ ಹಾಗೂ ಅನೇಕ ಮಹಿಳಾ ಮುಖಂಡರೊಂದಿಗೆ ಹಂಚಿಕೊಳ್ಳುತ್ತಾನೆ.

ದೇಶವಿಭಜನೆಯ ಸಂದರ್ಭದಲ್ಲಿ ಭಯಾನಕ ಕ್ಷಣಗಳನ್ನು ಎದುರಿಸಿದವರು ಮಹಿಳೆಯರು, ಮಕ್ಕಳು ಮತ್ತು ಮುಪ್ಪಿನವರು. ಕನಿಷ್ಠ ಹನ್ನೆರಡು ಸಾವಿರ ಮುಸ್ಲಿಂ ಮಹಿಳೆಯರು ಭಾರತದಲ್ಲಿ, ಉಳಿದಂತೆ ಮೂವತ್ತಾರು ಸಾವಿರ ಸಿಖ್ ಮತ್ತು ಹಿಂದೂ ಮಹಿಳೆಯರು ಪಾಕಿಸ್ತಾನದ ಸೆರೆಯಾಳಾದರು. ಒಟ್ಟು ಅರ್ಧ ಕೋಟಿ ನಿರ್ಭಾಗ್ಯರ, ದುರ್ಬಲರ ಪ್ರಶ್ನೆ ಇದು. ಭಾರತ ಸ್ವತಂತ್ರವಾದ ಕ್ಷಣದಲ್ಲಿ ಸಮಾಜದ ಕೆಳವರ್ಗದ ಮಹಿಳೆಯೊಬ್ಬಳು ಈ ದೇಶದ ಪ್ರಧಾನಿಯಾಗಿರುತ್ತಾಳೆ, ಎಂದುಕೊಂಡಿದ್ದ ಗಾಂಧಿಗೆ ಇದು ಅತ್ಯಂತ ನಾಚಿಕೆಗೇಡಿನ ಸಂದರ್ಭವೆನಿಸಿದೆ. ಅರ್ಧ ಕೋಟಿ ಮಹಿಳೆಯರನ್ನು ಕತ್ತಲೆಯಲ್ಲಿಟ್ಟು, ಸ್ಥಳವಲ್ಲದ ಸ್ಥಳಗಳಲ್ಲಿ ಸಾವಿನೊಂದಿಗೆ ಅವರನ್ನು ಬಿಟ್ಟು ಮಾಡುವ ತನ್ನ ಈ ಪ್ರಾರ್ಥನೆ, ಚರ್ಚೆಗಳಿಗೇನು ಅರ್ಥವಿದೆ? ತಾನ್ಯಾವ ರೀತಿಯಲ್ಲಿ ಶ್ರೀರಾಮನ ಅನುಯಾಯಿ ಎಂದುಕೊಂಡ ಗಾಂಧಿ ಈ ಕುರಿತು ಚರ್ಚಿಸಲು ಮೃದುಲಾ ಮತ್ತು ರಾಮೇಶ್ವರಿ ಬೇಹನ್‌ರನ್ನ ಅನೇಕ ಸಾರಿ ಲಾಹೋರಕ್ಕೆ ಕಳುಹಿಸಿದ್ದಾನೆ. ಆದಾಗ್ಯೂ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ.

ಮಾತುಕತೆಯಿಂದ, ರಾಜಕೀಯ ಪ್ರಯತ್ನಗಳಿಂದ ಮಹಿಳೆಯರನ್ನು ಮರಳಿ ತರಬಹುದು. ಆದರೆ ಸ್ವೀಕರಿಸಲು ಗಂಡಂದಿರು ಸಿದ್ಧರಿಲ್ಲ. ಮಾಡದ ತಪ್ಪಿಗೆ ಬಲಿಯಾದ ಅಮಾಯಕರಿಗೆ ಯಾವ ಮನೆಯ ಬಾಗಿಲುಗಳೂ ತೆರೆದಿಲ್ಲ. ಯಾವುದೋ ಊರು, ಒಂದು ಮಧ್ಯಾಹ್ನ, ಸದ್ಭಾವನಾ ಸಮಿತಿಯ ಪ್ರಚಾರಕರು ಹಿಂದೂಗಳ ಗಲ್ಲಿಯಿಂದ ಸಾಗಿ ಹೋಗುತ್ತಿರಬೇಕಾದರೆ ಆಲದ ಮರದ ನೆರಳಿನಲ್ಲಿ ಕುಳಿತ ಕೆಲವರು ರಾಮಾಯಣವನ್ನು ಕುರಿತು ಚರ್ಚಿಸುತ್ತಿದ್ದರು. ಅದು ರಾಮಾಯಣದಲ್ಲಿಯ ಅಗಸನ ಕಥೆ. "ಬಿಟ್ಟ ಹೆಂಡತಿಯನ್ನು ಆಳಲು ನಾನೇನು ಶ್ರೀ ರಾಮಚಂದ್ರನೆ?" ಎನ್ನುವ ಅಗಸನ ಪ್ರಸಂಗ. "ಅಗಸನ ಪ್ರಶ್ನೆಯ ಒಳ ಉದ್ದೇಶವನ್ನು ಸರಿಯಾಗಿ ತಿಳಿದುಕೊಂಡ ರಾಜಾ ಶ್ರೀರಾಮಚಂದ್ರ ಒಂದು

ಮಗುವಿನ ತಾಯಿಯಾಗಲಿದ್ದ ಸೀತೆಯನ್ನು ಪರೀಕ್ಷೆಗೆ ಒಡ್ಡಲಿಲ್ಲವೆ? ಮನುಷ್ಯ ಇತಿಹಾಸದಲ್ಲಿ ನೈತಿಕತೆಗೆ ಇದಕ್ಕಿಂತಲೂ ಉತ್ತಮ ಉದಾಹರಣೆ ಬೇಕೆ? ಇದು ರಾಮರಾಜ್ಯ. ರಾಮರಾಜ್ಯದಲ್ಲಿ ಅರಸನ ಮಾತಿಗೂ ಅಗಸನ ಪ್ರಶ್ನೆಗೂ ಸಮಾನ ಸ್ಥಾನ. ಹೀಗಾಗಿ ಅದು ದೇವರ ರಾಜ್ಯ." ಎಂದು ರಾಮನ ಅಭಿಮಾನಿ ಹೇಳಿದ. ಆದರೆ ದೇಶವಿಭಜನೆಯಲ್ಲಿ ಹೆಂಡತಿಯನ್ನು ಕಳೆದುಕೊಂಡ ಮತ್ತೊಬ್ಬ "ಯಾರಿಗೆ ಬೇಕು ಇಂತಹ ರಾಮರಾಜ್ಯ? ನಮಗಂತೂ ಬೇಕಿಲ್ಲ" ಎಂದು ಕೋಪೋದ್ರಿಕ್ತನಾಗಿ ಉತ್ತರಿಸಿದ.

"ಶಾಂತಿ, ಶಾಂತಿ. ಯಾರಾತ? ಯಾರವರು ಉತ್ತರಿಸಿದವರು? ಶಾಂತಿ, ದಯವಿಟ್ಟು ಶಾಂತಿ", ಕೂಡಿದ ಜನರೆಲ್ಲ ತಬ್ಬಿಬ್ಬು. ಗೊಂದಲ ಹಾಗೂ ಭಯ. ಕೂಡಿದ ಜನರನ್ನು ಸೀಳಿಕೊಂಡು ಆತ ಹೇಳಿದ–

"ನನ್ನನ್ನು ನೀವ್ಯಾರೂ ತಡೆಯಲು ಸಾಧ್ಯವಿಲ್ಲ. ನೀವು ಸತ್ಯವನ್ನು ಬಚ್ಚಿಡಲಾಗದು."

"ನಿಲ್ಲು, ನೀನಿಲ್ಲಿ ಮಾತಾಡಬೇಕಿಲ್ಲ. ಹೊರಟುಹೋಗು ನಾವಾರೂ ನಿನ್ನ ಮಾತುಗಳನ್ನು ಕೇಳಲು ಸಿದ್ಧರಿಲ್ಲ. ಹೆಜ್ಜೆ ಮುಂದಿಟ್ಟು ನೋಡು, ಸಾವನ್ನು ಎದುರಿಸಬೇಕಾದೀತು ಹುಷಾರು" ಎಂದರು ಗುಂಪಿನ ಜನ.

ಆತ ಮತ್ತೆ ಮರುಪ್ರಶ್ನೆ ಹಾಕಿದ, "ನೋಡಿ, ನನಗೆ ಒಂದು ಮಾತಂತೂ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ರಾಮರಾಜ್ಯದಲ್ಲಿ ಕನಿಷ್ಠ ಅಗಸನ ಮಾತನ್ನು ಕೇಳುವ ಸೌಜನ್ಯವಾದರೂ ಶ್ರೀರಾಮನಿಗೆ ಇತ್ತು. ಆದರೆ, ಅದೇ ರಾಮನ ಅನುಯಾಯಿಗಳಾದ ನಿಮಗೆ ನನ್ನ ಒಂದು ಮಾತನ್ನೂ ಕೇಳುವ ಸಹನೆ, ಸೌಜನ್ಯ ಇಲ್ಲವಲ್ಲ" ಎಂದ. ಆತನನ್ನು ಥಳಿಸಲು ಮುಂದಾಗಿದ್ದ ಜನ ನಾಚಿಕೆಯಿಂದ ನಿಸ್ತೇಜರಾದರು.

ಆತನ ವಾದ ಮುಂದುವರಿಯಿತು.

"ಶ್ರೀರಾಮಚಂದ್ರ ನಮ್ಮ ಆದರ್ಶ ನಾಯಕ. ಸರಿ, ನಾನೂ ಒಪ್ಪುತ್ತೇನೆ. ಆದರೆ ಇದೆಂಥ ನ್ಯಾಯ? ಅಗಸನ ಮಾತುಗಳನ್ನು ಗೌರವಿಸುವ ರಾಮನಿಗೆ ಪಟ್ಟದರಸಿ, ತನ್ನ ಬಾಳಿನ ಸಂಗಾತಿ, ಸೀತೆಯ ಮಾತುಗಳನ್ನೇಕೆ ನಂಬಲಾಗಲಿಲ್ಲ?"

ಸಿಟ್ಟಿನಿಂದ ಒಬ್ಬ ಉತ್ತರಿಸಿದ– "ಸೀತೆ, ಶ್ರೀರಾಮನ ಹೆಂಡತಿಯಾಗಿದ್ದಳು. ಈ ಮುಖ್ಯ ಅಂಶವನ್ನು ನಾವು ಮರೆಯಲಿಕ್ಕಾಗದು."

ಈಗ ಪ್ರತಿಕ್ರಿಯೆ ಚಿಂತನಪರವಾಗಿತ್ತು – "ನನ್ನ ಕಲ್ಪನೆಯ ರಾಮರಾಜ್ಯದಲ್ಲಿ ಯಾರೊಬ್ಬರೂ ಯಾರಿಗೂ ಅನ್ಯಾಯ ಮಾಡುವುದಿಲ್ಲ. ಯಾರೂ ಯಾರಿಂದಲೂ ಅನ್ಯಾಯಕ್ಕೊಳಪಡುವುದಿಲ್ಲ."

ಆತನ ಮಾತುಗಳು ಜನರನ್ನು ಮಂತ್ರಮುಗ್ಧವಾಗಿಸಿದವು. "ಆತ್ಮವಂಚನೆ, ದ್ರೋಹದಷ್ಟೇ ಘೋರ ಅಪರಾಧ. ರಾವಣ ಸೀತೆಯನ್ನು ಬಲವಂತವಾಗಿ ಎತ್ತಿಕೊಂಡು ಹೋದ. ಅವನೊಂದಿಗೆ ಇರಬೇಕಾದುದು ಸೀತೆಯ ಆಸೆಯಾಗಿರಲಿಲ್ಲ, ಅನಿವಾರ್ಯವಾಗಿತ್ತು. ಇಲ್ಲಿಯ ಸೀತೆಯ ಅಪರಾಧವೇನು? ಸ್ವಲ್ಪ ಯೋಚಿಸಿ. ಅಂದು ಸೀತೆಗೊದಗಿದ್ದು ಇಂದಿನಂತಹುದೇ ಒಂದು ಸನ್ನಿವೇಶ. ಇಂದು ನಮ್ಮ ಅಕ್ಕ, ತಂಗಿ, ತಾಯಿ ಹಾಗೂ ಹೆಂಡಂದಿರಿಗೆ ಇದ್ದ ಸ್ಥಿತಿಯೇ ಅಂದು ಸೀತೆಗೂ ಇರಲಿಲ್ಲವೆ? ಈಗ ಹೇಳಿ, ಇದು ಸೀತೆಯ ಚಾರಿತ್ರ್ಯದ ಪ್ರಶ್ನೆಯೋ ಅಥವಾ ರಾವಣನ ಅನಾಗರಿಕತೆಯ ಪ್ರಶ್ನೆಯೋ? ಕತ್ತೆಗೂ ಕೂಡಾ ಒಂದೇ ತಲೆಯಿದೆ. ಆದರೆ ರಾವಣನಿಗೆ? ಹತ್ತು ತಲೆಗಳು. ಇಂದು ನಮ್ಮ ಸೀತೆಯರು ನಮ್ಮ ನಮ್ಮ ಮನೆಗಳಿಂದ ನಮ್ಮಿಂದಲೇ ತಳ್ಳಲ್ಪಟ್ಟಿದ್ದಾರೆ.

ಇಂತವರು ಅನೇಕರು ಗಾಂಧಿ ಅನುಯಾಯಿಗಳ ಗುಂಪಿನಲ್ಲೂ ಇದ್ದಾರೆ. ಗಾಂಧಿ ಪುರುಷರ ಇಂತಹ ಆಲೋಚನೆ ಕೇಳಿ ಕುದ್ದು ಹೋಗಿದ್ದಾನೆ. ಒಂದು ಕ್ಷಣ ತನ್ನ ವ್ಯಾಪ್ತಿಯಲ್ಲಿ ಇಲ್ಲದ ಮಾತುಗಳನ್ನಾಡುತ್ತಾನೆ, ಯಾಕೆಂದರೆ ಆತ ಇತಿಹಾಸದ ಕಟು ಸತ್ಯದೊಂದಿಗೆ ಮುಖಾಮುಖಿಯಾಗಿದ್ದಾನೆ. ಮಹಿಳೆಯರನ್ನ ಪೂಜಿಸುವ ಈ ದೇಶದಲ್ಲಿ ಮಹಿಳೆಗೇ ಸ್ಥಾನವಿಲ್ಲ ಎನ್ನುವುದು ಎಂತಹ ನಾಚಿಕೆಗೇಡು ವಿಚಾರ! ಇಂಥ ಪೈಶಾಚಿಕ ಬೆಳವಣಿಗೆಗೆ ಹೆಚ್ಚು ಕಾರಣ ಪಾಕಿಸ್ತಾನ ಮತ್ತು ಇಸ್ಲಾಮಿನ ಸ್ತ್ರಿ ವಿರೋಧಿ ಧೋರಣೆ. ಗಾಂಧಿಯಂತಹ ಗಾಂಧಿಯೂ ಇದನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಕಠೋರವಾಗಿ ಹೇಳಿದ್ದಾನೆ. In my view, Pakistan has been responsible for this poison. But what good can come from apportioning responsibility? The two governments should even now wake up to their duty, give this task their first priority and all their time and accomplish it even at the cost of their lives. Only thus can the women be rescued."

ಪಂಜಾಬಿನ ಪ್ರಮುಖ ನಗರಗಳಿಂದ ಎಷ್ಟು ಸಂಖ್ಯೆಯಲ್ಲಿ ಮಹಿಳೆಯರ ಅಪಹರಣವಾಗಿದೆ ಎನ್ನುವ ಸ್ಪಷ್ಟ ಮಾಹಿತಿಯನ್ನು ಗಾಂಧಿ ಪಡೆದುಕೊಂಡಿದ್ದಾನೆ. ಅಂಬಾಲಾ, ಪಟಿಯಾಲಾ, ಅಮೃತಸರ ಹೀಗೆ. ಆ ಮಹಿಳೆಯರ ಹೆಸರು ಸಮೇತ ಒಂದು ಪಟ್ಟಿಯನ್ನೂ ತರಿಸಿಕೊಂಡಿದ್ದ. ಹಾಗೆಯೇ ಪಾಕಿಸ್ತಾನಕ್ಕೆ ಹೋಗಬೇಕಾದ


ಅನೇಕ ಪ್ರತಿಷ್ಠಿತ ಮನೆತನದ ಮಹಿಳೆಯರ ಮಾಹಿತಿಯನ್ನೂ ತರಿಸಿಕೊಂಡಿದ್ದ. ಅಪಹರಣ ಒಂದು ದಿನ ಘಟಿಸಿ ಮುಗಿದು ಹೋಗಿಬಿಡುವ ಒಂದು ಕ್ರಿಯೆ ಅಲ್ಲ. ಅದರ ಪರಿಣಾಮ ದೀರ್ಘ, ಕಾಲಾತೀತ. ಅಂತೆಯೇ ಆತ ಇದನ್ನೊಂದು ಹೀನ ಕೃತ್ಯ ಎಂದು ಖಂಡಿಸಿದ. ಯಾರು ಯಾರಿಂದಲೇ ಅಪಹರಣಕ್ಕೆ ಒಳಗಾಗಲಿ, ಒತ್ತಾಯಪೂರ್ವಕ ಮದುವೆಗಳಾಗಿರಲಿ, ಅವರನ್ನು ಮರಳಿ ಮತ್ತೆ ಮನೆ ಮಗಳೆಂದು ನೀವು ಸ್ವೀಕರಿಸುತ್ತಿರೋ ಇಲ್ಲವೋ ಎಂದು ಸಿಟ್ಟಿನಿಂದ ಕೇಳುವ ಮೂಲಕ ಗಾಂಧಿ ತಾನು ಮಾತ್ರ ಬರಮಾಡಿಕೊಳ್ಳಲು ಸಿದ್ಧನಾಗಿದ್ದಾನೆ. "We should sympathise with her and take pity on her. If the families will not accept them, a home should be established providing food, shelter and education, to make them stand on their own feet. If we want to retain our freedom, we must learn decency of conduct."

ಪಾಕಿಸ್ತಾನದಲ್ಲಿ ನಿರಾಶ್ರಿತರ ಉಸ್ತುವಾರಿಯನ್ನು ವಹಿಸಿಕೊಂಡವರೂ ಮತ್ತು ಕೇಂದ್ರ ಸಚಿವರೂ ಆದ ಮೀಯಾನ್ ಇಸ್‌ಮತ್-ಇಫ್ತಿಕಾರ್-ಉದ್-ದಿನ್‌ರ ಹೆಂಡತಿ ಬೇಗಂ ಇಸ್‌ಮತ್‌ರೊಂದಿಗೆ ಈ ಕುರಿತು ಸ್ವಯಂ ಗಾಂಧಿ ಚರ್ಚೆಗಿಳಿದ. ಮಿ.ಇಸ್‌ಮತ್ ಅವಿಭಜಿತ ಭಾರತೀಯ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಅನುಯಾಯಿ. ಪಾಕಿಸ್ತಾನದ ನಿರ್ಮಾಣದ ನಂತರ ಮುಸ್ಲಿಂಲೀಗನ್ನು ಸೇರಿಕೊಂಡಿದ್ದರೂ ಗಂಡ ಹೆಂಡತಿ ಇಬ್ಬರೂ ಗಾಂಧಿಗೆ ತುಂಬಾ ಆತ್ಮೀಯರು. ಈಗ ಬೇಗಂ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾರೆ. ಗಾಂಧಿ ಹೇಗೆ ಬರೆಯುತ್ತಾನೆ ನೋಡಿ, "ಕ್ಷಮಿಸಿ, ನಿಮ್ಮ ಅನಾರೋಗ್ಯದ ಸಂಗತಿ ನನಗೆ ತಡವಾಗಿ ತಿಳಿಯಿತು. ಈಗ ಚೇತರಿಸಿಕೊಂಡಿದ್ದೀರಿ ಎಂದು ಕೇಳಿದ್ದೇನೆ. ಇನ್ನೂ ಅವಸರದಿಂದ ಮತ್ತು ಪರಿಪೂರ್ಣವಾಗಿ ನಿಮ್ಮ ಆರೋಗ್ಯ ಸುಧಾರಿಸಬೇಕು. ಯಾಕೆಂದರೆ ದೇಶದ ಗಡಿಭಾಗಗಳಲ್ಲಿ ಅದರಲ್ಲೂ ವಿಶೇಷವಾಗಿ ಪಂಜಾಬ್ ಪ್ರಾಂತ್ಯದಿಂದ ದೋಚಲ್ಪಟ್ಟ ಮಹಿಳೆಯರ ಪಾಲಿನ ಆಶಾಕಿರಣ ನೀವು. ನೀವು ಅನಾರೋಗ್ಯದಿಂದ ಮುಕ್ತರಾದರೆ ಅವರು ಅಕ್ರಮ ಬಂಧನದಿಂದ ಮುಕ್ತರಾಗುತ್ತಾರೆ. ಇಫ್ತಿಕಾರರಿಗೆ ಕೇಳಿದೆ ಎಂದು ಹೇಳಿ. ಇಲ್ಲಿಂದ ಹೋದಂದಿನಿಂದ ಅವರಿಂದ ಪತ್ರಗಳಿಲ್ಲ. ಇಂದಿಗೂ ಅವರ ನಿಷ್ಠೆ ಬದಲಾಗಿಲ್ಲವೆಂದೇ ನನ್ನ ನಂಬಿಕೆ." ಗಾಂಧಿ, ಸರಕಾರ, ಸೈನ್ಯ, ರಾಜಕೀಯ ರಾಯಭಾರಿಗಳನ್ನು ಹೊರತುಪಡಿಸಿ ಮಾನವತೆಯ ಸಂದಿಗ್ಧತೆಯ ಸಂದರ್ಭದಲ್ಲಿ ಇಂತಹ ಅನೇಕ ಸಂಬಂಧಗಳನ್ನ ಸ್ಮರಿಸಿಕೊಂಡು ಸಹಾಯಕ್ಕಾಗಿ ಎಲ್ಲರಲ್ಲೂ ಅಂಗಲಾಚುತ್ತಾನೆ ಮತ್ತು ತನ್ನ ಹತ್ಯೆಯನ್ನು ತಪ್ಪಿಸಿಕೊಳ್ಳಲಾಗದ ಈತ ಲಕ್ಷಾಂತರ ಮುಗ್ಧರ ಮಾರಣ ಹೋಮ ತಪ್ಪಿಸುತ್ತಾನೆ.

ಭಾರತದಲ್ಲಿ ಈ ಕೆಲಸವನ್ನು ಗಾಂಧಿ ಸುಹ್ರಾವರ್ದಿಗೆ ವಹಿಸಿದ್ದಾನೆ. ಈತ ಇಸ್‌ಮತ್‌ರ ಗೆಳೆಯನೂ ಕೂಡ. ಪಾಕಿಸ್ತಾನಕ್ಕೆ ಈತನ ಮೂಲಕ ಮಾತ್ರ ಈ ಸೂಕ್ಷ್ಮ ವಿಚಾರವನ್ನು ಚರ್ಚಿಸಲು ಸಾಧ್ಯ. ಹಾಗಂತ ಸುಹ್ರಾವರ್ಧಿಯನ್ನು ಗಾಂಧಿ ಓಲೈಸುವುದಿಲ್ಲ. ಡಿಸೆಂಬರ ೧೦ರ ಮುಂಜಾನೆ ಆತನನ್ನು ಕರೆಯಿಸಿಕೊಂಡು ಗಾಂಧಿ ನೇರವಾದ ಭಾಷೆಯಲ್ಲಿ ಈ ವಿಚಾರವನ್ನು ತಿಳಿಸುತ್ತಾನೆ, "ನಿಮ್ಮ ಮೇಲೆ ನನಗಿರುವ ಭರವಸೆ ಭಾರತೀಯರಿಗಿಲ್ಲ. ಅದು ನಿಮಗೂ ಗೊತ್ತು. They tell me that you are fooling me. They say that in Calcutta you hung on my words because the Muslims were in Peril. If you wish to remove their distrust and suspicion, you must plainly tell Jinnah and Liaqat Ali that they must adopt a uniform policy with India in regard to the recovery of abducted women. ಜೊತೆಗೆ ಕರಾಚಿಯಲ್ಲಿ ಹಿಂದೂಗಳ ಮೇಲೆ ಆಗುತ್ತಿರುವ ಅನ್ಯಾಯವನ್ನು ಕುರಿತು ನೀವು ಜಿನ್ನಾರಿಗೆ ಮನವರಿಕೆ ಮಾಡಿಕೊಡಬೇಕು. ಎಲ್ಲಿಯುವರೆಗೆ ಈ ಕಾರ್ಯಗಳು ನಿಮ್ಮಿಂದ ಸಾಧಿತವಾಗುವುದಿಲ್ಲವೊ ಅಲ್ಲಿಯವರೆಗೂ ಸುಹ್ರಾವರ್ದಿ ಭಾರತೀಯರಿಗೆ ಪ್ರಿಯವಾದ ಒಬ್ಬ ವ್ಯಕ್ತಿಯಾಗಲು ಸಾಧ್ಯವಿಲ್ಲ.

ಮರುಕ್ಷಣ ಗಾಂಧಿ ಮೌನಕ್ಕೆ ಶರಣಾದ.

❑



ರಾಮ, ರಹೀಮ, ರೆಹಮಾನ

ಗಾಂಧಿಯ ಪ್ರಕಾರ ರಾಮನ ರಾಜ್ಯಕ್ಕೆ ಎಷ್ಟು ಭಕ್ತರೋ ಅಷ್ಟು ದಿಕ್ಕುಗಳು, ಬೆಳಕಿನ ದಾರಿಗಳು. ಎಷ್ಟು ಶ್ರದ್ಧಾವಂತರೋ ಆತನಿಗೆ ಅಷ್ಟು ಹೆಸರುಗಳು. ಶ್ರೀರಾಮ ಗಾಂಧಿಗೆ ದೇವರಿಗಿಂತಲೂ ಮಿಗಿಲಾಗಿ ಚೆಲುವು, ಅಂತರಂಗದ ಚೆಲುವು. ಡಿಸೆಂಬರ ೮ ಸೋಮವಾರ. ದೇವರನ್ನು ಕುರಿತು ಧ್ಯಾನಿಸುವುದೆಂದರೇನು? ಪ್ರಾರ್ಥನೆ ಎಂದರೇನು? ಎಂದು ಬಹಳ ಸುಂದರವಾಗಿ ಒಂದು ಟಿಪ್ಪಣಿ ಮಾಡಿದ್ದಾನೆ. ಆತ ಹೇಳುತ್ತಾನೆ: ಪ್ರಾರ್ಥನೆ ಪ್ರತಿಯೊಬ್ಬ ಮನುಷ್ಯನ ನಿತ್ಯದ ಜೀವನದ ಅವಿಭಾಜ್ಯ ಅಂಗವಾಗಬೇಕು. ಯಾಕೆಂದರೆ ಪ್ರಾರ್ಥನೆ ಆತ್ಮದ ಆಹಾರ. ಮನಸ್ಸಿನ ಕ್ಲೇಶವನ್ನು ಕಳೆಯಲು ಪ್ರಾರ್ಥನೆಯೇ ದಿವ್ಯ ಪರಿಹಾರ. ಹೀಗಾಗಿ ತನ್ನ ಆಶ್ರಮಗಳಲ್ಲಿ, ಮಹಿಳಾ ತರಬೇತಿ ಕೇಂದ್ರಗಳಲ್ಲಿ, ಅದನ್ನು ಆತ ಅನಿವಾರ್ಯ ಮಾಡಿದ್ದ. ಯಾರು ಅದನ್ನು ಎಷ್ಟು ನಂಬುತ್ತಾರೆನ್ನುವುದು ಆತನಿಗೆ ಮುಖ್ಯವಾಗಿರಲೇ ಇಲ್ಲ. ಈ ದೇಶದ ಪ್ರತಿಯೊಬ್ಬನೂ ಪ್ರಾರ್ಥನೆಯ ಮೂಲಕ

ಬೆಸೆಯಲ್ಪಡಬೇಕು. ಪ್ರಪಂಚಕ್ಕೆ, ಬಾಳಿಗೆ ಬಿಗಿಯಲ್ಪಡಬೇಕು. ಎನ್ನುವುದು ಬರೀ ಆತನ ಕನಸಾಗಿರಲಿಲ್ಲ, ಹಠವಾಗಿತ್ತು.

ಡಿಸೆಂಬರ ೧೧ರಂದು ತನ್ನ 'ಹರಿಜನ' ಪತ್ರಿಕೆಯಲ್ಲಿ ವಿದೇಶಿಗನೊಬ್ಬ ಈ ಕುರಿತು ಕೇಳಿದ ಪ್ರಶ್ನೆಗೆ ಗಾಂಧಿ ವಿಶೇಷವಾಗಿ ಉತ್ತರಿಸಿದ್ದಾನೆ. ಊರಿಗೆ ಹೊರಟ ಅಥವಾ ಮೊಮ್ಮಕ್ಕಳನ್ನು ಕಳುಹಿಸಲು ಬಂದ ಅಜ್ಜ ಕೊನೆಯದಾಗಿ ಏನೆಲ್ಲ ಕಾಳಜಿಗಳನ್ನು ಹಂಚಿಕೊಳ್ಳುವಂತೆ ಗಾಂಧಿ ಈ ಕೊನೆಗಾಲದಲ್ಲಿ ನಮ್ಮೊಂದಿಗೆ ಎಷ್ಟೆಲ್ಲ ಹಂಚಿಕೊಂಡಿದ್ದಾನೆ ನೋಡಿ.

ಪ್ರಶ್ನೆ: ಎಲ್ಲ ಸಂದಿಗ್ಧ ಸಂದರ್ಭದಲ್ಲಿ ನೀವು ಆ ಪ್ರಸಂಗ ಎದುರಿಸುವುದನ್ನು ಬಿಟ್ಟು ಪ್ರಾರ್ಥನೆ ಮತ್ತು ಉಪವಾಸಗಳಿಗೆ ಯಾಕೆ ಮೊರೆ ಹೋಗುತ್ತೀರಿ? ಈ ನಿಮ್ಮ ಕ್ರಿಯೆಗಳಿಂದ, ಪ್ರಾರ್ಥನೆಗಳಿಂದ ಭಾರತೀಯರ ಮೇಲಾಗುವ ಪರಿಣಾಮಗಳೇನು?

ಗಾಂಧಿ: ಉತ್ತರ ಸರಳವಾಗಿದೆ. ಪ್ರಾರ್ಥನೆ ಮತ್ತು ಉಪವಾಸಗಳನ್ನ ಅಹಿಂಸಾವಾದಿಯಾದ ನಾನು ಸಂಕಷ್ಟಗಳ ವಿರುದ್ಧ ಅಂತಿಮ ಆಯುಧಗಳೆಂದು ಪರಿಗಣಿಸಿದ್ದೇನೆ. ಮನುಷ್ಯ ತನ್ನೆಲ್ಲ ಶಕ್ತಿ ತೀರಿತು ಎಂದುಕೊಂಡಾಗ ಇವುಗಳ ಮೊರೆ ಹೋಗುತ್ತಾನೆ. ಇವೆರಡೂ ದೇವರನ್ನು ಸಂಭೋದಿಸುವ ಆಧ್ಯಾತ್ಮಿಕ ಕ್ರಿಯೆಗಳು. ತಮಗೆ ಪರಿಚಿತನಾದ ವ್ಯಕ್ತಿಯೊಬ್ಬ ತಮ್ಮ ಸಂಕಷ್ಟಗಳಿಗಾಗಿ ಪ್ರಾರ್ಥನೆ ಮತ್ತು ಉಪವಾಸಗಳ ಮೊರೆಹೊಕ್ಕಿದ್ದಾನೆ ಎಂದು ಜನರಿಗೆ ಗೊತ್ತಾದಾಗ ಅವರು ಸಂವೇದನಾಶೀಲರಾಗುತ್ತಾರೆ. ಆದರೆ ಒಂದು ಎಚ್ಚರಿಕೆ. ಇಲ್ಲಿ ಅಹಿಂಸೆಯ ಆರಾಧಕನಿಗೆ ಬೇಕಾಗಿರುವುದು ಜನರ ಅನುಕಂಪವಲ್ಲ, ಬದಲಾಗಿ ಆತ್ಮಸಾಕ್ಷಿಯಾದ ಕ್ರಿಯೆ. ಹೀಗಾಗಿ ಇವು ನನಗೆ ಸರಿಯಾದ ಮಾರ್ಗವೆನಿಸಿವೆ. ಅಹಿಂಸೆ, ಪ್ರಾರ್ಥನೆ ಮತ್ತು ಉಪವಾಸಗಳ ಮುಂದೆ ಜಗತ್ತಿನ ಎಲ್ಲ ಅನ್ಯಾಯಗಳೂ ಸೋಲುತ್ತವೆ.

ಈ ಸುದ್ದಿ ಪ್ರಕಟಗೊಂಡ ಮರುದಿನವೇ ಅಂದರೆ ಡಿಸೆಂಬರ ೧೧ ಮತ್ತು ೧೨ ರಂದು ದೆಹಲಿ ಮತ್ತು ಅಜ್ಮೇರಗಳಲ್ಲಿ ಮತ್ತೆ ಹಿಂದೂ-ಮುಸ್ಲಿಂ ದಂಗೆಗಳು ಭುಗಿಲೆದ್ದ ಸುದ್ದಿ ಗಾಂಧಿಗೆ ಬರಸಿಡಿಲಿನಂತೆ ಬರುತ್ತದೆ. ಅದು ವಿಶೇಷತಃ ಲಾಹೋರ್ ಮತ್ತು ಕರಾಚಿಗಳಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ಅತ್ಯಾಚಾರಕ್ಕೆ ಪ್ರತೀಕಾರವಾಗಿ ಇದು ಇಲ್ಲಿ ಶುರುವಾಗಿದೆ. ಆಲ್ ಇಂಡಿಯಾ ರೇಡಿಯೋ ಪರಿಸ್ಥಿತಿಯನ್ನ ತಿಳಿಗೊಳಿಸಲು ಜನರನ್ನುದ್ದೇಶಿಸಿ ಮಾತನಾಡಬೇಕೆಂದು ಈಗ ಗಾಂಧಿಯನ್ನು ಕೇಳಿಕೊಂಡಿದೆ. ಅತ್ಯಂತ ನೋವಿನಿಂದ ಗಾಂಧಿ ಇಂದು ರೇಡಿಯೋದ ಮೂಲಕ ಕೇವಲ ೧೫ ನಿಮಿಷ ಮಾತನಾಡಿದ್ದಾನೆ. ಆ ಮಾತುಗಳನ್ನು ನೀವು ಆಲಿಸಲೇಬೇಕು.

"ದೇಶ ಬಾಂಧವರೇ,

ಇದಕ್ಕಿಂತಲೂ ನಾಚಿಕೆಗೇಡಿನ ಸಂದರ್ಭ ಇನ್ನೊಂದಿಲ್ಲ. ನಮ್ಮ ಈ ಪ್ರತೀಕಾರದ ಕ್ರಿಯೆಗಳಿಂದ ಹಿಂದೂ ಸಂಸ್ಕೃತಿಯೇ ನಾಚಿಕೆಪಡುವಂತಾಗದಿರಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ. ಮುಸ್ಲಿಮರ ವಿರುದ್ಧ ಹೋಗುವುದರಿಂದ ವಿನಾಶದ ಹೊರತು ಮತ್ತೇನೂ ಸಾಧಿಸಲಾಗದು. ಮನುಷ್ಯ ಕೊಲ್ಲಲೆಂದು ಹುಟ್ಟಿದವನೇ ಅಲ್ಲ. ನಮ್ಮ ಜೀವಿತ ಸತ್ಯ ಎನ್ನುವುದಾದರೆ ಅನ್ಯರಿಗೂ ಬದುಕಲು ಅವಕಾಶ ಮಾಡಿಕೊಡುವುದೇ ಧರ್ಮ. ಆದರೆ ನಮ್ಮ ತಲೆ ಕೆಟ್ಟಿದೆ. ವಿನಾಶವನ್ನು ಕೂಗಿ ಕೂಗಿ ಕರೆಯುತ್ತಿದ್ದೇವೆ. 'ವಿನಾಶ ಕಾಲೇ ವಿಪರೀತ ಬುದ್ಧಿಃ' ಎನ್ನುವ ಸಂಸ್ಕೃತ ಸುಭಾಷಿತ ನಿಮಗೆಲ್ಲರಿಗೂ ಗೊತ್ತು. ಕೊಲೆ, ರಕ್ತಪಾತ ನಾವು ಹುಚ್ಚರಾಗುತ್ತಿರುವ ಸಂಕೇತವಷ್ಟೆ. ಖುರಾನದಲ್ಲಿಯ ಒಂದು ವಿಚಾರ. ದೇವರು ಒಬ್ಬನೇ ಮತ್ತು ಆತ ಎಲ್ಲರಿಗೂ ಸಮಾನ. ಅಲ್ಲಾಹ ಆತನ ಸಾವಿರ ಸಾವಿರ ಹೆಸರುಗಳಲ್ಲಿ ಒಂದು. ಆತನನ್ನು ನೀವು ರಹೀಮ್, ರೆಹಮಾನ್, ರಾಮ ಹೀಗೆ ಏನಾದರೂ ಕರೆದುಕೊಳ್ಳಬಹುದು. ಆದರೆ ಆತ ಒಬ್ಬನೇ. ಸೈತಾನರಿಂದ ನಮ್ಮನ್ನು ಆತನೊಬ್ಬನೇ ರಕ್ಷಿಸಬಲ್ಲ. ಈ ಸೈತಾನ ಪದೇ ಪದೇ ನಮ್ಮನ್ನು ಕೆಳಗೆಳೆದು ತನ್ನಂತೆ ಮಾಡಲು ಯತ್ನಿಸುತ್ತಿರುತ್ತಾನೆ. ಆದರೆ ಆ ದುರ್ದೈವದಿಂದ ದೇವರೊಬ್ಬನೇ ನಮ್ಮನ್ನು ರಕ್ಷಿಸುತ್ತಾನೆ. ಮನುಷ್ಯ ಒಪ್ಪಿಕೊಂಡಿದ್ದಾನೆ, ತನ್ನಿಂದಾದ ಎಲ್ಲ ಒಳ್ಳೆತನಕ್ಕೆ ಈ ಭಗವಂತನ ಪ್ರೇರಣೆಯೇ ಕಾರಣವೆಂದು. ದೇವನ ಸಾಗರದ ಒಂದು ಹನಿ ಮನುಷ್ಯ. ಈ ಹನಿಯನ್ನು ದಯಾಸಾಗರನಾದ ಭಗವಂತ ಕಾಯದೇ ಹೋದರೆ ಸೈತಾನ ಆತನನ್ನು ನುಂಗಿ ಬಿಡುತ್ತಾನೆ. ದೇವರು ದೊಡ್ಡವನು ಬಂಧುಗಳೇ, ಆತನ ದಯೆ ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯವಿದೆ. ನನಗೆ ಹೇಳಿ, ಬೈಬಲ್‌ನ ಅರ್ಥದಂತೆ ಬದುಕಿದ ಕ್ರಿಶ್ಚಿಯನ್ನರು ಯಾರಿದ್ದಾರೆ? ಗಾಯತ್ರಿ ಮಂತ್ರದ ಅರ್ಥದಂತೆ ಬದುಕಿದ ಹಿಂದೂಗಳು ಯಾರಿದ್ದಾರೆ? ಈಶಾವಾಶೋಪನಿಷತ್ ಹೇಳುತ್ತದೆ, 'ಸೃಷ್ಟಿಯ ವಸ್ತುಗಳೆಲ್ಲ ಭಗವತ್‌ಪ್ರೇರಿತ'. ಖುರಾನ್‌ನಂತೆ ಬದುಕಿದ ಮುಸ್ಲಿಮರು ಯಾರಿದ್ದಾರೆ? ಎಲ್ಲವೂ ಹೇಳುತ್ತವೆ, ಇಡೀ ಪ್ರಪಂಚವೇ ದೇವ ಪ್ರೇರಿತ, ದೇವರಿಗೆ ಅಧೀನ. ಹಾಗಿದ್ದಲ್ಲಿ ಈ ಪರಸ್ಪರ ದ್ವೇಷ ಎಲ್ಲಿಂದ ಬಂತು? ಸಂಕುಚಿತತೆ ಎಲ್ಲಿ ಮನೆ ಮಾಡಿತ್ತು? ಮಂತ್ರ ಎಂದರೇನು? ಮಾನವ ಕುಲಕ್ಕೆ ಈ ದುರಂತ ಯಾಕೆ ಬಂತು?"

ಇನ್ನೂ ಮಾತನಾಡಬೇಕಿತ್ತು ಗಾಂಧಿ. ೧೫ ನಿಮಿಷಗಳು ಕರಗಿಹೋಗಿದ್ದವು. ಹೆಚ್ಚಿಗೆ ಮಾತನಾಡಿದರೆ ಕಾಂಗ್ರೆಸ್ಸಿನ ಕೈಗೊಂಬೆಯಾಗಿರುವ ಗಾಂಧಿ ಅದಕ್ಕೆ ಸಂಕಷ್ಟ ಬಂದೊದಗಿದಾಗೆಲ್ಲ ಆಕಾಶವಾಣಿಯನ್ನು ದುರುಪಯೋಗಪಡಿಸಿಕೊಳ್ಳುತ್ತಾನೆಂದು ದೂರುತ್ತಾರೆ ಜನಗಳು. ಹೀಗಾಗಿ ಗಾಂಧಿ ಥಟ್ಟನೆ ತನ್ನ ಭಾಷಣವನ್ನು ನಿಲ್ಲಿಸಿದ.

ಮಾತಿನಲ್ಲಿ ಖಾಲಿಯಾಗುವ ಮನುಷ್ಯನಿಗೂ ಒಂದು ಪೂರಕ ಪ್ರಕ್ರಿಯೆ ಎನ್ನುವುದು ಬೇಕಾಗುತ್ತದೆ. ಸಾರ್ವಜನಿಕ ಮತ್ತು ವೈಯಕ್ತಿಕ, ಆಧ್ಯಾತ್ಮಿಕ ಮತ್ತು ವ್ಯಾವಹಾರಿಕ ಹೀಗೆ ಈ ಬದುಕನ್ನು ನೋಡದೆ ಅದನ್ನೊಂದು ಅಖಂಡ ಪ್ರವಾಹದಂತೆ ಪರಿಗಣಿಸಿದ ಗಾಂಧಿ ಆಗಾಗ ಓದಿನ ಮೂಲಕ ಅದನ್ನು ಒಪ್ಪಗೊಳಿಸಿಕೊಳ್ಳುತ್ತಿದ್ದ. ಈಗ ಆತ ಚಾರ್ಲಸ್ ಫ್ರೀರ್ ಆಂಡ್ರೀವ್ಸನ ಆತ್ಮಕತೆಯನ್ನು ಓದುತ್ತಿದ್ದಾನೆ. ಆಂಡ್ರೀವ್ಸ್ ಗಾಂಧಿ ಮತ್ತು ಟ್ಯಾಗೋರರಿಗೆ ಆತ್ಮೀಯರಾಗಿದ್ದವರು. ಮಗುವಿನ ಮುಗ್ಧತೆಯೊಂದಿಗೆ ಸಾರ್ವಜನಿಕ ಸೇವೆ ಮಾಡಿದವರು.

ಡಿಸೆಂಬರ್ ೧೨ರ ಸುಮಾರಿಗೆ ಇನ್ನೊಂದು ಸೂಕ್ಷ್ಮ ವಿಚಾರ ಗಾಂಧಿಯ ಬಳಿ ಬಂದಿದೆ. ಪಾಕಿಸ್ತಾನದಿಂದ ವಲಸೆ ಬರುತ್ತಿರುವವರ ವಿಷಯದಲ್ಲಿ ಮೌಲಾನಾ ಆಝಾದ ಮತ್ತು ಸರ್ದಾರ ಪಟೇಲರ ಮಧ್ಯೆ ಜಗಳವಾಗಿದೆ. ಮೌಲಾನಾ ಬರುತ್ತಿರುವ ಮುಸ್ಲಿಂ ಬಂಧುಗಳಿಗೆ ದೆಹಲಿಯಲ್ಲಿ ಖಾಲಿಯಾಗಿರುವ ಮನೆಗಳಲ್ಲಿ ವಾಸಿಸಲು ಅವಕಾಶ ಮಾಡಿಕೊಡಬೇಕು ಎನ್ನುತ್ತಾರೆ. ಪಟೇಲ ದೆಹಲಿಯ ಹಜರತ್ ನಿಜಾಮುದ್ದಿನ್ ಪ್ರದೇಶದಲ್ಲಿ ಯಾವುದೇ ರಾಷ್ಟ್ರನಿಷ್ಠ ಮುಸ್ಲಿಂ ತಮಗೆ ಸಿಕ್ಕ ಖಾಲಿ ಸ್ಥಳಗಳಲ್ಲಿ ವಾಸಿಸಲಿ. ಆದರೆ ಅವರನ್ನು ದೆಹಲಿಯ ಒಳ ಪ್ರದೇಶದಲ್ಲಿ ವಾಸಿಸಲು ಅನುಮತಿಸಲಾಗದು. ಯಾಕೆಂದರೆ ಹೋಗಿರುವ ಮುಸ್ಲಿಮರು ಮರಳಿ ಬಂದರೆ ಅವರಿಗೆ ಎಲ್ಲಿ ಅವಕಾಶ ಮಾಡಿಕೊಡುವುದು ಎನ್ನುತ್ತಿದ್ದಾರೆ. ಗಾಂಧಿ ಅವರಿಬ್ಬರ ಈ ಗೊಂದಲವನ್ನು ಬಗೆಹರಿಸಬೇಕಿದೆ. ಡಿಸೆಂಬರ್ ೧೦ರಿಂದ ಪಟೇಲರ ಆರೋಗ್ಯವೂ ಸರಿಯಾಗಿಲ್ಲ. ನಿರಂತರ ಕೆಲಸದಿಂದಾಗಿ, ನಿದ್ರಾಹೀನತೆಯಿಂದಾಗಿ ಅವರ ಆರೋಗ್ಯ ಕೆಟ್ಟಿದೆ. ವಿಶ್ರಾಂತಿಗಾಗಿ ಅವರನ್ನು ಒಂದಿಷ್ಟು ಕಾಲ ಎಲ್ಲಿಯಾದರೂ ಕಳುಹಿಸುವ ಆಲೋಚನೆ ಮಾಡುತ್ತಿದ್ದಾನೆ ಗಾಂಧಿ. ಸ್ವತಃ ತನಗೂ ವಿಶ್ರಾಂತಿ ಬೇಕಿದೆ. ನಿರಂತರ ಸಂದರ್ಶನ, ಪ್ರವಾಸ, ಚರ್ಚೆಗಳಿಂದಾಗಿ ತಾನು ಖಾಲಿಯಾಗುತ್ತಿದ್ದೇನೆ ಎನ್ನುವ ಭಾವ ಆವರಿಸಿದೆ. ಹೀಗಾಗಿ ತನ್ನ ಸೆಕ್ರೆಟರಿ ಆದ ಬ್ರಿಜ್ ಕೃಷ್ಣನಿಗೆ ಸಾರ್ವಜನಿಕ ಸಂದರ್ಶನದ ವೇಳಾಪಟ್ಟಿಯಲ್ಲಿ ಒಂದಿಷ್ಟು ಬದಲಾವಣೆ ಮಾಡಬೇಕೆಂದು ಕೇಳಿಕೊಂಡಿದ್ದಾನೆ.

ಈ ಕತೆಯಲ್ಲಾ ಒಂದೆಡೆಯಾದರೆ, ಡಿಸೆಂಬರ್ ೧೩ರಂದು ತನ್ನ ತವರು ಸ್ಥಳವಾದ ಅಲಹಾಬಾದ್‌ನಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಗಾಂಧಿಯನ್ನು ಕುರಿತು ಆತನ ಮಾನಸ ಪುತ್ರ ನೆಹರು ಭಾಷಣ ಮಾಡುತ್ತಿದ್ದಾರೆ–

"ನನ್ನ ಪ್ರೀತಿಯ ವಿದ್ಯಾರ್ಥಿಗಳೇ,

ನಮಗೆ ಸ್ವಾತಂತ್ರ್ಯ ಬಂತು. ಆದರೆ ಅದಕ್ಕಾಗಿ ನಾವು ತುಳಿದ ದಾರಿ ರಕ್ತ ಮತ್ತು ಕಣ್ಣೀರಿನದ್ದಾಗಿತ್ತು. ಜನ ಹುಚ್ಚಾದರು, ಸುತ್ತಲೂ ಕತ್ತಲಾವರಿಸಿತು, ಭಯದ ಮೇಲೆ

ಭಯ, ಕ್ಷಣದಲ್ಲಿಯೇ ಮತ್ತಿನ್ನೇನು - ಎನ್ನುವ ಖಾಲಿತನದ ಭಾವ ಬೆಳಕು ಇನ್ನೆಂದಿಗೂ ಸಾಧ್ಯವಿಲ್ಲ ಎಂದುಕೊಳ್ಳುವಷ್ಟರಲ್ಲಿ, ಒಂದೇ ಒಂದು ಕಿರಣ ನಮ್ಮನ್ನ ರಕ್ಷಿಸಿತು. ನಿರಂತರವಾಗಿ ತನ್ನನ್ನು ತಾನು ಸುಟ್ಟುಕೊಂಡು ಸುತ್ತಲಿರುವವರನ್ನೆಲ್ಲ ಅಂಧಕಾರದಿಂದ, ಸಾವಿನಿಂದ ಮುಕ್ತ ಮಾಡಿತು. ಅದರೊಂದಿಗೆ ಇದ್ದ ಕಾರಣಕ್ಕಾಗಿ ನಮ್ಮೊಳಗೆ ಹೊಸ ಚೈತನ್ಯ ಹುಟ್ಟಿಕೊಂಡಿತು, ಮತ್ತೆ ಬದುಕಿನ ಆಸೆ ಹುಟ್ಟಿಕೊಂಡಿತು. ಆ ಬೆಳಕು ಮತ್ತಿನ್ನಾವ್ಯರೂ ಅಲ್ಲ, ಮಹಾತ್ಮಾ ಗಾಂಧಿ. ಇತ್ತೀಚಿನ ತಿಂಗಳುಗಳಲ್ಲಿ ಯಾರಾದರೂ ಅವರನ್ನ ಸಮೀಪದಿಂದ ಗಮನಿಸಿದ್ದೀರಾ? ಕಳೆದ ಅರ್ಧ ಶತಮಾನದಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ, ಸಾಮಾಜಿಕತೆಗೆ ಅವರ ಕೊಡುಗೆ ಎಂತಹುದು ಎಂದು ನಿಮಗೆ ಗೊತ್ತೆ? ಈ ನಾಲ್ಕು ತಿಂಗಳುಗಳಲ್ಲಂತೂ ಅವರು ಎದುರಿಸಿದ ಅಪಮಾನ, ಸಂಕಷ್ಟ ಆ ದೇವರಿಗೂ ಬೇಡ. ಆದರೂ ಅವರು ನಿಂತೇ ಇದ್ದಾರೆ, ದೀಪಸ್ತಂಭದಂತೆ, ಸತ್ಯದ ಅಖಂಡ ಬೆಳಕಿನಂತೆ. ಈ ಬೆಳಕಿನ ಕಾರಣಕ್ಕಾಗಿ ಭಾರತದ ಭವಿಷ್ಯದಲ್ಲಿ ಬಲವಾದ, ಅಚಲವಾದ ವಿಶ್ವಾಸವನ್ನಿರಿಸಿಕೊಳ್ಳಬೇಕಿದೆ."

ನೆಹರುವಿನ ಇಂದಿನ ಈ ಭಾಷಣವನ್ನು ಅನುಯಾಯಿಯೊಬ್ಬರು ಗಾಂಧಿಗೆ ಒಪ್ಪಿಸಲು ಉತ್ಸುಕರಾಗಿ ನಿಂತಿದ್ದಾರೆ. ನೆಹರು ಗಾಂಧಿಯನ್ನು ಹೊಗಳಿದ ರೀತಿಯನ್ನು ಒಂದು ಶಬ್ದವೂ ಬಿಡದಂತೆ ಇನ್ನೇನು ಹೇಳಿಬಿಡಬೇಕೆನ್ನುವಷ್ಟರಲ್ಲಿ ಗಾಂಧಿ ಆತನಿಗೆ ಅವಕಾಶವನ್ನೇ ಕೊಡದೆ ಸಾಯಂಕಾಲದ ಪ್ರಾರ್ಥನಾ ಸಭೆಗೆ ಸಂಬಂಧಿಸಿದ ಕೆಲವು ಕೆಲಸಗಳಿಗೆ ಆತನನ್ನು ಹಚ್ಚಿದ.

ಗಾಂಧಿಯ ಈ ವರ್ತನೆಗೆ ಕಾರಣವಿಲ್ಲದೆ ಇಲ್ಲ. ತಾನು ತಿಂಗಳುಗಳವರೆಗೆ ನಿಂತು ಕಲ್ಕತ್ತೆಯಲ್ಲಿ ಕಟ್ಟಿ ಬಂದಿದ್ದ ಶಾಂತಿಯ ಸೌಧ ಮತ್ತೆ ಕುಸಿದು ಬಿದ್ದಿದೆ. ಡಿಸೆಂಬರ ೧೩ರ ಈ ದಿನ ಸರಕಾರದ ಧೋರಣೆಗಳನ್ನು ವಿರೋಧಿಸಿ ಒಂದಿಷ್ಟು ಜನ ಕಲ್ಕತ್ತೆಯಲ್ಲಿ ಮುಷ್ಕರ ಕುಳಿತಿದ್ದರು. ಹೀಗೆ ಅವರನ್ನು ವಿರೋಧಿಸಿ ಮತ್ತೊಂದು ಗುಂಪು ಸೇರಿಕೊಂಡಿತು. ಪರಸ್ಪರ ಬಡಿದಾಟವಾಗಿ ಒಬ್ಬ ವ್ಯಕ್ತಿಯ ಕೊಲೆಯಾದರೆ ಮತ್ತೆ ಕೆಲವರು ಗಾಯಾಳುಗಳಾದರು. ಗೂಂಡಾಗಿರಿ ಕಲ್ಕತ್ತೆಯ ಬೀದಿ ಬೀದಿಗಳನ್ನು ಆವರಿಸಿಕೊಂಡಿದೆ. ಸಮಾಜದ ಸಂಕಷ್ಟದ ಈ ಘಳಿಗೆಯನ್ನು ದುರುಪಯೋಗ ಪಡಿಸಿಕೊಳ್ಳಲು ಹೊಂಚುಹಾಕುತ್ತಿದೆ. ಗಾಂಧಿಗೆ ಇದು ಚಿಂತೆಯಾಗಿದೆ. ಕಲ್ಕತ್ತೆಯಲ್ಲೇ ಉಳಿದರೆ ದೆಹಲಿಗೆ ಬೆಂಕಿ ಬೀಳುತ್ತದೆ. ದೆಹಲಿಯ ಬೆಂಕಿ ನಂದಿಸುವುದರಲ್ಲಿ ಕಲ್ಕತ್ತೆಯಲ್ಲಿ ಲೂಟಿ ನಡೆಯುತ್ತದೆ. ಇದೆಲ್ಲ ಏನು? ಎಲ್ಲಿಯವರೆಗೆ? ಯಾರೊಂದಿಗೆ?

ಇಂದಿನ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ಎಲ್ಲರನ್ನೂ ಇದನ್ನೇ ಕೇಳುತ್ತಿದ್ದಾನೆ, "ಗೂಂಡಾಗಿರಿಯ ಮೂಲಕ ಏನೆಲ್ಲವನ್ನೂ ಕಸಿದುಕೊಳ್ಳಬಹುದು ಎನ್ನುವ

ಆಲೋಚನೆಯೇ ಅನೈತಿಕವಾದುದು. ಇಂತದ್ದನ್ನು ಕಲ್ಕತ್ತೆಯ ಜನರಿಗೆ ನಾನೆಂದೂ ಕಲಿಸಲಿಲ್ಲ. ಬಲಪ್ರಯೋಗದಿಂದ ಕಸಿದುಕೊಳ್ಳುವ ಕಿತ್ತುಕೊಳ್ಳುವ ದಾರಿ ನನ್ನದಲ್ಲ. ಮೂವತ್ತು ವರ್ಷ ಬ್ರಿಟಿಷರ ವಿರುದ್ಧ ಅಹಿಂಸೆಯ ತತ್ವವನ್ನು ಆಧರಿಸಿ ಹೋರಾಟ ಮಾಡಿದೆವು. ಆದರೆ ಏನು ಪ್ರಯೋಜನ? ಇಂತಹ ವರ್ತನೆ ಏಕೆ? ವಿರೋಧ ವ್ಯಕ್ತಪಡಿಸಲು ಶಾಂತಿಯ ದಾರಿಗಳಿಲ್ಲವೆ? ನ್ಯಾಯಕ್ಕೆ ದಾರಿಗಳಿಲ್ಲವೆ? ಆದರೆ ಹೀಗೆ ಅರಾಜಕತೆಯನ್ನು ಸೃಷ್ಟಿಸಿ ಎಲ್ಲವನ್ನೂ ನಿಲ್ಲಿಸಿ ಬಿಡುವುದೇ ಕೆಲವರು ಸಾಧನೆ ಎಂದುಕೊಂಡಿದ್ದಾರೆ. ಗೊತ್ತಿರಲಿ, ಈಗ ಸರಕಾರ ನಿಮ್ಮದು. ಯಾವುದೇ ಅಸಮಾಧಾನವನ್ನು ವ್ಯಕ್ತಪಡಿಸಲು ನಿಮಗೆ ಅನೇಕ ಯೋಗ್ಯ ದಾರಿಗಳಿವೆ. ನಾವು ಕಂಡುಕೊಂಡ ಅಹಿಂಸೆ, ಸತ್ಯಾಗ್ರಹ ಅಥವಾ ಸ್ವಾವಲಂಬನೆಯ ಸಂಕೇತವಾದ ಖಾದಿ ಯಾವುದೋ ಒಂದು ಕಾಲ ಮತ್ತು ಸರಕಾರದ ವಿರುದ್ಧ ಘೋಷಿಸಿದ್ದವುಗಳಲ್ಲ. ಅವು ಎಲ್ಲ ಕಾಲಕ್ಕೂ ಸಲ್ಲುವ ಮೌಲ್ಯಗಳು. ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸಿಕೊಳ್ಳಲು ನಾವು ಅನುಸರಿಸಿದ ಸೂತ್ರಗಳು."

ಗಾಂಧಿ ಏನೇ ಮಾತನಾಡಿದರೂ ಉಪಯೋಗವಾಗಲಿಲ್ಲ. ಅಂತಿಮವಾಗಿ ಪೋಲಿಸ್ ಸಹಾಯದಿಂದಲೇ ಕಲ್ಕತ್ತೆಯ ಮುನ್ಸಿಪಾಲಿಟಿ ಗೂಂಡಾಗಿರಿಯನ್ನು ತಹಬಂದಿಗೆ ತರಬೇಕಾಯಿತು. ಗಾಂಧಿಯ ಪ್ರಾರ್ಥನಾ ಸಮಯದ ಈ ಕೋರಿಕೆ ಗಾಳಿಯಲ್ಲಿ ಹೋಯಿತು.

ನಿಮಗೊಂದು ವಿಚಿತ್ರ ಗೊತ್ತಿರಲಿ, ಜನರು ಗಾಂಧಿಗೆ ಪ್ರಶ್ನೆಗಳನ್ನ ಏಕೆ ಕೇಳುತ್ತಿದ್ದರು? ಎಂತವುಗಳನ್ನು ಕೇಳುತ್ತಿದ್ದರು? ಎಲ್ಲೆಲ್ಲಿ ಕೇಳುತ್ತಿದ್ದರು? ಎನ್ನುವುದನ್ನು ಗಮನಿಸಿದರೆ ನಮಗೆ ನಗಬೇಕೊ ಅಳಬೇಕೊ ತಿಳಿಯುವುದಿಲ್ಲ. ನಮ್ಮ ಸ್ಥಿತಿಯೇ ಹೀಗಾಗುವುದಾದರೆ ಗಾಂಧಿಯ ಗತಿ ಇನ್ನೇನಾಗಬೇಕು? ಡಿಸೆಂಬರ ೧೪ ರಂದು ಒಬ್ಬ ಕೇಳಿದ, ನಮ್ಮ ದೇಶಕ್ಕೆ ಈಗ ಸ್ವಾತಂತ್ರ್ಯ ಬಂದಿದೆ. ನಾವು ಸ್ವತಂತ್ರರಾಗಿದ್ದೇವೆ, ಈಗಲೂ ನಾವು ಚರಕ ನೂಲಬೇಕೆ? ಹಾಗೆಯೇ, ಇಂದು ಇನ್ನೊಬ್ಬ, ಗಾಂಧಿ ಪ್ರಾರ್ಥನೆಗೆ ಬರುವ ವೇಳೆಯಲ್ಲಿ ಒಂದು ಚೀಟಿಯಲ್ಲಿ ತನ್ನ ಪ್ರಶ್ನೆ ಬರೆದು ಕೈಯಲ್ಲಿ ಕೊಟ್ಟ. ತನ್ನ ಹಿಂದೂ ಗೆಳೆಯನೊಬ್ಬನನ್ನು ವಿಭಜನೆಯ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಪಾಕಿಸ್ತಾನಕ್ಕೆ ಅಟ್ಟಲಾಗಿದೆ. ಹೋಗುವಾಗ ಆತ ಚಿನ್ನ, ಬೆಳ್ಳಿ ಹಾಗೂ ಅನೇಕ ಮೌಲ್ಯಯುತ ವಸ್ತುಗಳನ್ನು ಈ ಮುಸ್ಲಿಂ ಗೆಳೆಯನ ಕೈಯಲ್ಲಿ ಕೊಟ್ಟು ಹೋಗಿದ್ದಾನೆ. ಈಗ ಅವುಗಳನ್ನು ಪಾಕಿಸ್ತಾನಕ್ಕೆ ಹೇಗೆ ಕಳುಹಿಸುವದು? ಮತ್ತೊಬ್ಬ ಅಲ್ಲಿಯೇ ಮುಂದಿನ ಸಾಲಿನಲ್ಲಿ ಕುಳಿತಿದ್ದಾನೆ. ಕಳೆದ ಮೂರು ತಿಂಗಳುಗಳಿಂದ ತನ್ನ ಮಗಳನ್ನು ಸುರಕ್ಷಿತವಾಗಿ ತಂದು ಸೈನ್ಯ ತನಗೆ ಕೊಡುವ ಭರವಸೆ ನೀಡಿದೆ. ಆದರೆ ಮಗಳು ಇನ್ನೂ ಮನೆ ತಲುಪಿಲ್ಲ. ಈತನಿಗೂ ಈ ಗಾಂಧಿಯೇ ಮುಂದೆ ನಿಂತು ತನ್ನ ಮಗಳಿಗೊಂದು ದಾರಿ ತೋರಿಸಬೇಕು.

ಮುಪ್ಪು ಮತ್ತು ಸಾವಿನ ಹೊಸ್ತಿಲಿನಲ್ಲಿ ನಿಂತ, ಹಿಡಿ ಮೂಳೆಯ ಮುದುಕನಿಗೆ ಎಷ್ಟೊಂದು ಪ್ರಶ್ನೆಗಳು!

ಡಿಸೆಂಬರ ೧೫ರ ಮುಂಜಾವು ಸೋಮವಾರ, ಗಾಂಧಿ ದೆಹಲಿಯ ಹರಿಜನ ಕಾಲೊನಿಯಲ್ಲಿ ಕಸ್ತೂರ್ ಬಾ ಟ್ರಸ್ಟ್‌ವತಿಯಿಂದ ಮಹಿಳೆಯರಿಗಾಗಿ ಹಮ್ಮಿಕೊಂಡ ಕಾರ್ಯಕ್ರಮ ಒಂದರಲ್ಲಿದ್ದಾನೆ. ಹಳ್ಳಿಗರಿಗಾಗಿ ಹೊಸ ಶಿಕ್ಷಣ ಎನ್ನುವ ತನ್ನ ವಿಚಾರವನ್ನಾಧರಿಸಿ ನಯೀ ತಾಲೀಂ ಎನ್ನುವ ಕಾರ್ಯಕ್ರಮವನ್ನು ಝಕೀರ್ ಹುಸೇನರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಗಿದೆ. ಆರ್ಯ ನಾಯಕಂ ಮತ್ತು ಅವರ ಹೆಂಡತಿ ಆಶಾದೇವಿ ಇಲ್ಲಿ ಸೆಕ್ರೆಟರಿಗಳಾಗಿದ್ದಾರೆ. ಈ ಕಾರ್ಯಕ್ರಮ ಶುರುವಾಗಿ ಎಳೆಂಟು ವರ್ಷಗಳಾಗಿವೆ. ಇಲ್ಲಿಯ ಶಿಕ್ಷಣ ಸಂಪೂರ್ಣ ಕರಕುಶಲತೆಗೆ ಸಂಬಂಧ ಪಟ್ಟಂತದ್ದು. ಅದರೊಂದಿಗೆ ಸನಾತನ ಭಾಷೆಗಳಾದ ಸಂಸ್ಕೃತ, ಅರೇಬಿಕ್ ಮತ್ತು ಪರ್ಶಿಯನ್ ಸಾಹಿತ್ಯದಲ್ಲಿರುವ ಉತ್ತಮ ವಿಚಾರಗಳನ್ನೂ ಇಲ್ಲಿ ತಿಳಿಸಲಾಗುತ್ತದೆ. ಕರ್ಮ ಮತ್ತು ಮುಕ್ತಿಗಳನ್ನು ಕುರಿತು ಇಲ್ಲಿ ಆಲೋಚಿಸಲಾಗುತ್ತದೆ. ನಿಜವಾದ ಶಿಕ್ಷಣ ಎಂದರೇನು ಎನ್ನುವುದನ್ನು ಅರಿಯುವುದೇ ಇಲ್ಲಿಯ ಮುಖ್ಯ ಹುಡುಕಾಟ. ಇಂದು ಗಾಂಧಿ ಹೇಳುತ್ತಾನೆ, “ಜ್ಞಾನ ಮತ್ತು ಅದನ್ನು ಸಾಧಿಸುವ ದಾರಿ ಸರಿಯಾಗಿರಬೇಕು. ಇಲ್ಲದೇ ಹೋದಲ್ಲಿ ಮನುಷ್ಯ ದುರಂತವನ್ನು ತಲುಪುತ್ತಾನೆ. Education that is not rooted in truth and non-violence is not education in the proper sense of the word. There are many instances of people who were highly learned and yet were satanic. Ravana possessed great learning and had done tremendous penance. Yet, because his pursuits were evil, he perished.”

ಇದು ಶಿಕ್ಷಣಕ್ಕಿರುವ ನೈತಿಕ ಜವಾಬ್ದಾರಿ. ಇದು ಎಲ್ಲ ಕಾಲಕ್ಕೂ ಶಿಕ್ಷಣ ತಜ್ಞರು, ಶಿಕ್ಷಣ ಪ್ರೇಮಿಗಳು ಅಳವಡಿಸಿಕೊಳ್ಳಬೇಕಾದ ಆಲೋಚನಾ ಕ್ರಮ.

❑



ನಾನೀಗ ಅನುಪಯುಕ್ತ

ಈಗ ಸಾಯಂಕಾಲದ ಪ್ರಾರ್ಥನೆಯ ವೇಳಾಪಟ್ಟಿಯಲ್ಲಿ ಒಂದಿಷ್ಟು ಬದಲಾವಣೆಯಾಗಿದೆ. ದಿನಾಲು ೫.೩೦ ನಿಮಿಷಕ್ಕೆ ಪ್ರಾರಂಭವಾಗುತ್ತಿದ್ದ ಪ್ರಾರ್ಥನೆಯನ್ನು ಈಗ ೫ ಗಂಟೆಗೇ ಪ್ರಾರಂಭಿಸಲಾಗುತ್ತಿದೆ. ಕಾರಣವಿಷ್ಟೇ- ದೆಹಲಿಯಲ್ಲಿ ಬೀಸುತ್ತಿರುವ ಚಳಿ-ಗಾಳಿ. ಬಂದು ಹೋಗುವವರಿಗೆ ಒಂದಿಷ್ಟು ಅನುಕೂಲವಾಗಲಿ, ಜನ ಬೇಗ ತಮ್ಮ ಮನೆಗಳನ್ನು ಸೇರಿಕೊಳ್ಳಲಿ ಎನ್ನುವುದೇ ಈ ಬದಲಾವಣೆಯ ಹಿಂದಿನ ಉದ್ದೇಶ.

ಡಿಸೆಂಬರ ೧೬ರ ವೇಳೆಗೆ ಗಾಂಧಿಗೆ ಒಂದಿಷ್ಟು ಗೆಲುವಾಗಿದೆ. ಆಹಾರ ನಿಯಂತ್ರಣ ಕಾಯ್ದೆಯನ್ನು ಸಡಿಲಿಸಬೇಕೆಂಬ ಆತನ ಕೋರಿಕೆಗೆ ಕಿವಿಗೊಟ್ಟ ಸರಕಾರ ಜನಪರವಾಗಿ ಸ್ಪಂದಿಸಿದೆ. ಒಂದು ರೂಪಾಯಿಗೆ ಒಂದು ಸೇರು ಬೆಲ್ಲದ ಬೆಲೆ ಈಗ ಎಂಟು ಆಣೆ ಅಷ್ಟೆ. ೩೨

ರೂಪಾಯಿಗೆ ಮಾರಾಟವಾಗುತ್ತಿದ್ದ ಸಕ್ಕರೆಯ ಬೆಲೆ ೨೦ ರೂಪಾಯಿ. ೩೪ ರೂಪಾಯಿಗೆ ಸಿಗುತ್ತಿದ್ದ ಗೋದಿಯ ಬೆಲೆ ಈಗ ೨೪. ವ್ಯಾವಹಾರಿಕ ಜ್ಞಾನವೇ ಇಲ್ಲ ಎನ್ನುತ್ತಿದ್ದ ಗಾಂಧಿಯಿಂದ ಈಗ ಸರಕಾರಕ್ಕೆ ವ್ಯಾವಹಾರಿಕತೆಯ ಹೊಸ ಪಾಠ. ಜನರೂ ಕೂಡ ಈಗ ಗಾಂಧಿಯನ್ನು ವ್ಯಾವಹಾರಿಕ ಕುಶಲ-ಜಾಣ ಎಂದು ಒಪ್ಪಿಕೊಂಡಿದ್ದಾರೆ. ಕಾರಣ ವಿವರಿಸಬೇಕೆ?

ಜನರಿಗೆ ಸಿಗಬೇಕಾದ ವಸ್ತುವಿನ ಬೆಲೆಯೇನೋ ಇಳಿದಿದೆ. ಆದರೆ ಇನ್ನೊಂದೆಡೆ ಬದುಕಿನ ಭರವಸೆಯೇ ಉಡುಗಿ ಹೋಗಿದೆಯಲ್ಲ. ಒಬ್ಬ ಇನ್ನೊಬ್ಬನನ್ನು ಕೊಚ್ಚಿ ಹಾಕುವ ತಂತ್ರ ಪ್ರತಿತಂತ್ರವನ್ನು ಮಾಡುತ್ತಿರುವಾಗ ಈ ಬೆಲ್ಲ-ಸಕ್ಕರೆ ಯಾವ ಸುಖಕ್ಕೆ? ಎದೆಯ ಬಟ್ಟಲದೊಳಗೆ ವಿಷವೆರೆದುಕೊಂಡವರಿಗೆ ಬೆಲ್ಲ-ಸಕ್ಕರೆಯೂ ಕಹಿಯಾಗಿ ಮಾರ್ಪಡುತ್ತವೆ. ಈ ಕಹಿಯನ್ನು ಶಾಶ್ವತವಾಗಿ ಅಳಿಸುವ ಹಠ ತೊಟ್ಟಿದ್ದಾನೆ ಗಾಂಧಿ. ಬುಧವಾರ ಡಿಸೆಂಬರ ೧೭ರ ನಸುಕಿನ ೩.೩೦ಕ್ಕೆ ಎದ್ದು ತನ್ನ ಈ ಸಂಕಷ್ಟವನ್ನ ಪತ್ರದ ಮೂಲಕ ಗುಜರಾತಿ ಗೆಳೆಯನೊಬ್ಬನೊಂದಿಗೆ ಹಂಚಿಕೊಳ್ಳುತ್ತಿದ್ದಾನೆ. ಹೊರಗೆ ಮೆಲ್ಲಗೆ ಬೆಳಕಾಗುತ್ತಿದೆ. ಆದರೆ ಮನುಷ್ಯರೊಳಗಿನ ಅಂಧಕಾರಕ್ಕೆ ಬೆಳಕು ಹರಿಯುತ್ತಲೇ ಇಲ್ಲ ಎನ್ನುವುದೇ ಗಾಂಧಿಗೆ ಚಿಂತೆಯಾಗಿದೆ. ಮೈ ಕೊರೆಯುವ ಚಳಿಯಲ್ಲಿ ಆತ ಬರೆಯುತ್ತಾನೆ-

"ಬಂಧು,

ಬದುಕಿನ ಅತ್ಯಂತ ಸಂಕಷ್ಟದ ದಿನಗಳನ್ನು ಎದಿರುಸುತ್ತಿದ್ದೇನೆ. ಶ್ರೀರಾಮನಾಣೆಗೂ ಜೀವನದ ಒಂದೇ ಒಂದು ಕ್ಷಣವನ್ನು ವ್ಯರ್ಥ ಕಳೆದಿಲ್ಲ. ಆದರೆ ಈ ಕೋಮುಗಲಭೆಯ ಬೆಂಕಿ ಆರುತ್ತಲೇ ಇಲ್ಲ. ಖಂಡಿತವಾಗಿಯೂ ಇದು ಜನ ಸಾಮಾನ್ಯರ ಆಸೆಯಲ್ಲ. ಅವರಿಗೆ ಅದು ಬೇಕೂ ಆಗಿಲ್ಲ. ಎಷ್ಟು ನೀರು ಹುಯ್ದರೂ ಕೇವಲ ಮುಷ್ಟಿಯಷ್ಟು ಜನ ರಾಷ್ಟ್ರಕ್ಕೆ ಎಷ್ಟೊಂದು ಕಷ್ಟ ಕೊಡುತ್ತಿದ್ದಾರೆ! ಸುಳ್ಳು ಕ್ಷಣಾರ್ಧದಲ್ಲಿ ಹಬ್ಬಿಬಿಡುತ್ತದೆ. ಯಾರೋ ಹಬ್ಬಿಸುವ ಸುಳ್ಳಿನಿಂದ ಪ್ರಚೋದಿತರಾಗಿ ಕಡಿದಾಡುವ ಇಡೀ ಜನಸಾಗರ ಕೋಮುಬೆಂಕಿಯಲ್ಲಿ ಸುಟ್ಟು ನರಳಾಡುತ್ತದೆ. ನನಗಂತೂ ಚಿಂತೆಯಾಗಿದೆ. ನಿಜಕ್ಕೂ ನಮಗೆ ಸ್ವರಾಜ್ಯ ಬಂದಿದೆಯೇ? ದೇವರೇ ಇದಕ್ಕೆ ಸಾಕ್ಷಿ. ಸತ್ಯಕ್ಕಾಗಿ ನನ್ನ ಪ್ರಾರ್ಥನೆ, ತಪಸ್ಸು ಎಲ್ಲವೂ. ನಾನೊಬ್ಬ ಹಿಂದೂ. ನನ್ನ ಹಿಂದೂ ವಾದವನ್ನು ಎಲ್ಲರೂ ಒಪ್ಪಿಕೊಳ್ಳುವುದಾದರೆ ಅವರೂ ನನ್ನಂತೆಯೇ ಜಗದ ನರಳಿಕೆಯಿಂದ ಮುಕ್ತರು. ಇಂತದರಲ್ಲೂ ನನ್ನ ಆರೋಗ್ಯ ಚೆನ್ನಾಗಿದೆ ಎನ್ನುವುದು ಅತ್ಯಂತ ಸಂತೋಷದ ವಿಷಯ. ನನ್ನ ಶರೀರಕ್ಕೆ ಇತ್ತೀಚೆಗೆ ನಾನು ಕೊಟ್ಟ ಕೆಲಸವನ್ನು ನೋಡಿದರೆ ಅದು ಎಂದೋ ಅನಾರೋಗ್ಯಕ್ಕೀಡಾಗಬೇಕಿತ್ತು. ದೇವರ ದಯೆ, ಹಾಗಾಗಿಲ್ಲ.

ಹಲವು ಬಾರಿ ನನಗೂ ಸಿಟ್ಟು ಬರುತ್ತದೆ, ಆದರೆ ನನ್ನೊಂದಿಗೆ ಮಾತ್ರ ಯಾರೊಂದಿಗೆ ಆಗಲಿ ನಾನು ಯಾಕೆ ಸಿಟ್ಟಾಗಬೇಕು? ದೇಶ ವಿಭಜನೆಯಾಯಿತು ಎನ್ನುವುದು ಯಾವ ದೊಡ್ಡ ವಿಚಾರ? ಮನೆಗಳಲ್ಲಿ ಸಹೋದರರಿಬ್ಬರು ಬೇರ್ಪಟ್ಟು ಸುಖದಿಂದ ಇರುವುದಿಲ್ಲವೆ? ನನ್ನ ಆಶ್ರಮದ ಸ್ಥಿತಿಯೂ ಈಗ ಸರಿಯಾಗಿಲ್ಲ. ಜನ ತಿಳಿದುಕೊಂಡಂತೆ ಕಾಂಗ್ರೆಸ್ಸು ನನ್ನ ನಿಯಂತ್ರಣದಲ್ಲಿಲ್ಲ. ಅಹಿಂಸೆ ಮತ್ತು ಸತ್ಯದ ಬೆಳಕಿನಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎನ್ನುವುದನ್ನು ಈ ಎಲ್ಲ ಬೆಳವಣಿಗೆಗಳನ್ನು ನೋಡಿದರೆ ನನಗೇಕೊ ಒಪ್ಪಲಾಗುತ್ತಿಲ್ಲ. ನಾವು ಹಿಂದಿನ ನಮ್ಮ ತಪ್ಪುಗಳನ್ನು ಸರಿ ಪಡಿಸಿಕೊಳ್ಳುವುದು ಹೋಗಲಿ, ಅವುಗಳನ್ನು ಗಮನಿಸಲೂ ಕೂಡ ಸಿದ್ಧರಿಲ್ಲ. ಹೀಗಾಗಿಯೇ ಎಲ್ಲ ಕಡೆ ರಕ್ತದ ಕಾಲುವೆ ಹರಿಯುತ್ತಿರುವುದು. ಮನೆಮನೆಗೂ ಮಕ್ಕಳು, ಮಹಿಳೆಯರು ಪರದೇಶಿಗಳಾಗಿರುವರು. ಗೊತ್ತಿರಲಿ ಬಂಧು, ಅರಾಜಕತೆಯ ಮೊದಲ ಮೆಟ್ಟಿಲು ವ್ಯಕ್ತಿಗತ ಬೇಜವಾಬ್ದಾರಿತನ.

ನನ್ನ ಈ ಸ್ಥಿತಿಯನ್ನು ನೋಡಿ ನಿನಗೆ ಮರುಕ ಹುಟ್ಟುತ್ತಿಲ್ಲವೆ? ಕನಿಷ್ಠ ನಿನ್ನಂತವರಾದರೂ ನನ್ನನ್ನು ಸಾಧ್ಯವಾದಷ್ಟು ಬೇಗ ಈ ಪ್ರಪಂಚದಿಂದ ಕರೆಸಿಕೊಳ್ಳುವಂತೆ ಯಾಕೆ ದೇವರ ಮೊರೆ ಹೋಗಬಾರದು? ಪ್ರಾರ್ಥಿಸಬಾರದು? ನಾನೀಗ ಎಲ್ಲರಿಗೂ ಕಿರಿಕಿರಿಯಾಗಿದ್ದೇನೆ ಅಲ್ಲವೆ? ಉಳಿದವರು ತಪ್ಪು, ನಾನು ಸರಿ ಎಂದು ನಾನು ಅಂದುಕೊಳ್ಳುವುದಾದರೂ ಹೇಗೆ? ಆದರೆ ನನಗೂ ಅಷ್ಟೇ ನೋವಾಗುತ್ತದೆ. ಯಾವ ಜನರನ್ನು ನಾನು ಶ್ರೀರಾಮನ ಸ್ವರೂಪರು, ನಾರಾಯಣರು ಅಂದುಕೊಂಡಿರುವೆನೋ ಅದೇ ಜನಗಳು, ನನಗೆ ಹೀಗೆ ಮೋಸ ಮಾಡುವುದೇ?

ನನಗೆ ವಯಸ್ಸಾಯಿತು ಎಂದು ಅವರು ನೇರವಾಗಿ ಹೇಳಬಹುದಲ್ಲ. ನಾನು ಅನುಪಯುಕ್ತ, ಅವರ ದಾರಿಗಳಲ್ಲಿ ಅಡ್ಡಿ ಎಂದು ನೇರವಾಗಿ ತಿಳಿಸಿದರೆ ನನಗೆ ನೋವಾಗುವುದಿಲ್ಲ. ಬದಲಾಗಿ ದರಿದ್ರ ನಾರಾಯಣನ ಸೇವೆಗೆ ನಾನು ಮತ್ತೆ ಹೇಗೆ ಸಿದ್ಧನಾಗಬೇಕು ಎನ್ನುವುದಕ್ಕೆ ತಯಾರಿಗಳನ್ನು ಮಾಡಿಕೊಳ್ಳುತ್ತೇನೆ. ಈ ವಿಚಾರಗಳನ್ನು ಹೇಳಿಕೊಳ್ಳಲು ಈಗ ನನ್ನೊಂದಿಗೆ ಯಾರೂ ಇಲ್ಲ. ಹೀಗಾಗಿ ನಿನ್ನೊಂದಿಗೆ ಹಂಚಿಕೊಂಡು ಹೃದಯದ ಭಾರವನ್ನು ಕಡಿಮೆಗೊಳಿಸಿಕೊಂಡಿದ್ದೇನೆ.

ಇಂತೀ ನಿನ್ನ

ಬಾಪು"

ಇಷ್ಟರಲ್ಲಿ ಬೆಳಕಾಯಿತು. ಮುಂಜಾನೆಯ ತನ್ನ ಕ್ರಿಯಾವಿಧಿಗಳನ್ನು ಮುಗಿಸಿ, ವಿದ್ಯಾರ್ಥಿ ಒಕ್ಕೂಟದ ಆಹ್ವಾನ ಪತ್ರಿಕೆಗೆ ಉತ್ತರಿಸಬೇಕೆನ್ನುವಷ್ಟರಲ್ಲಿ ಪೂರ್ವ ಪಂಜಾಬಿನಿಂದ ಸರ್ದಾರ್ ಸ್ವರಣ್‌ಸಿಂಗ್ ಬಂದರು. ಅವರೊಂದಿಗೆ

ರಾಮಮನೋಹರ ಲೋಹಿಯಾ, ಡಾ. ಗೋಪಿಚಂದ ಭಾರ್ಗವ, ಶಂಕರ ರಾವ್, ರಾಜೇಂದ್ರ ಪ್ರಸಾದ, ಸುಹ್ರಾವರ್ದಿ ಎಲ್ಲರೂ ಇದ್ದರು. ಸ್ವಲ್ಪ ತಡವಾಗಿ ನೆಹರು ಕೂಡ ಸೇರಿಕೊಂಡರು. ಕಸ್ತೂರ್ ಬಾ ಟ್ರಸ್ಟ್ ಮತ್ತು ಬೇರೆ ಬೇರೆ ಸಂಘಟನೆಗಳ ಕುರಿತು ಪ್ರಸ್ತಾಪಿಸಬೇಕಿದೆ. ಅದಕ್ಕೂ ಮುಂಚೆ ಸುಹ್ರಾವರ್ದಿಗೊಂದು ಗಾಂಧಿಯ ಕಿವಿ ಮಾತು. "ಮುಸ್ಲಿಂ ಪಂಡಿತರು ಅನಾವಶ್ಯಕವಾಗಿ ಭಯಕ್ಕೊಳಗಾಗಿದ್ದಾರೆ. ಸಾಮಾನ್ಯ ಜನರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ. ನನ್ನನ್ನು ಕಾಣಲು ಬರುವ ಅನೇಕರು ಇರುವ ಸತ್ಯವನ್ನು ತಿರುಚಿ ಮತ್ತು ವೈಭವೀಕರಿಸಿ ಹೇಳುತ್ತಿದ್ದಾರೆ. ಇದರಿಂದ ಯಾವ ಕೋಮಿಗೂ ಲಾಭವಾಗುವುದಿಲ್ಲ. ಪ್ರಪಂಚದಲ್ಲಿ ನಾವೇ ಸರಿ ಎಂದುಕೊಳ್ಳುವವರು ಸ್ವಂತಕ್ಕೆ ಮೋಸ ಮಾಡುಕೊಳ್ಳುತ್ತಾರೆ. ತನ್ನದು ಸರಿ ಎಂದುಕೊಳ್ಳುವವ ಅಥವಾ ತನ್ನದು ಸತ್ಯ ಎಂದುಕೊಳ್ಳುವವ ಭಯವೇಕೆ ಪಡಬೇಕು? ಒಂದು, ತಾನು ಸತ್ಯವಿರಲಿಕ್ಕಿಲ್ಲ; ಇಲ್ಲ, ವಾಸ್ತವ ಸ್ಥಿತಿ ಹಾಗಿರಲಿಕ್ಕಿಲ್ಲ.

ನಾವು ಗೊಂದಲದಲ್ಲಿದ್ದೇವೆ. ನಮಗ್ಯಾರೂ ವಿಷವನ್ನ ಹಾಕಲಿಲ್ಲ. ನಾವೇ ನಮ್ಮ ಪಾಲಿನ ಬದುಕನ್ನು ವಿಷಮಗೊಳಿಸಿಕೊಂಡಿದ್ದೇವೆ. ನಾನು ಹೇಳುವ ಈ ಮಾತು ಎಲ್ಲ ಹಿಂದೂಗಳಿಗೂ ಅನ್ವಯವಾಗುತ್ತವೆ.

ನನ್ನ ಕೊನೆಯ ದಿನಗಳು ಸಮೀಪಿಸುತ್ತಿವೆ. ಇಷ್ಟರಲ್ಲಿ ನಾನು ನಿಮ್ಮೆಲ್ಲರನ್ನೂ ಅಗಲುತ್ತೇನೆ. ಬಹುತೇಕ ನನ್ನ ನಿರ್ಗಮನದ ನಂತರ ನಾನು ಏನು ಹೇಳುತ್ತಿದ್ದೆ ಎನ್ನುವುದು ನಿಮಗೆ ಅರ್ಥವಾಗುತ್ತದೆ. ಎಲ್ಲಿಯವರೆಗೆ ಇಸ್ಲಾಂ ಬರೀ ಮುಸ್ಲಿಮರನ್ನು ಕುರಿತು ಆಲೋಚಿಸುತ್ತದೆಯೊ ಅಲ್ಲಿಯವರೆಗೂ ಅದು ಸತ್ತಂತೆಯೇ. ಇದು ಎಲ್ಲ ಧರ್ಮಕ್ಕೂ ಅನ್ವಯವಾಗುವ ಮಾತು. ಪ್ರಪಂಚದ ಎಲ್ಲ ಧರ್ಮಗಳೂ ಒಳ್ಳೆಯದನ್ನೇ ಕಲಿಸುತ್ತವೆ. ಸಹೋದರತೆ ಮತ್ತು ಸ್ನೇಹವನ್ನೇ ಕಲಿಸುತ್ತವೆ. ಇದನ್ನು ಕಲಿಸಿದವುಗಳು ಮಾತ್ರ ಧರ್ಮ, ಉಳಿದವುಗಳು ನನ್ನ ದೃಷ್ಟಿಯಲ್ಲಿ ಧರ್ಮಗಳೇ ಅಲ್ಲ." ಎಂದು ಕಡ್ಡಿ ಮುರಿದಂತೆ ಮಾತನಾಡಿದ ಗಾಂಧಿ ಉಳಿದವರೊಂದಿಗೆ ಯಾವುದೇ ಮಾತುಗಳನ್ನಾಡುವ ಉತ್ಸುಕತೆಯನ್ನು ತೋರಿಸಲಿಲ್ಲ.

ಯಾಕೋ ಈ ದಿನದ ನಸುಕಿನಿಂದ ಆತನಿಗೆ ಸಮಾಧಾನವಿಲ್ಲ. ಯಾರೊಂದಿಗೂ ಮಾತುಗಳೇ ಬೇಡ ಎನ್ನುವಷ್ಟು ಗಾಂಧಿ ರೋಸಿ ಹೋಗಿದ್ದಾನೆ, ಬೇಸರಿಸಿಕೊಂಡಿದ್ದಾನೆ. ಒಂದು ಕ್ಷಣ ಆತನಿಗೆ ಇಂದು ತಾನು ಹೋಗಬೇಕಾದ ವಿದ್ಯಾರ್ಥಿಗಳ ಕಾರ್ಯಕ್ರಮ ನೆನಪಾಯಿತು. ಬದುಕಿನ ವಿಷಯದಲ್ಲಿ ಯಾವಾಗಲೂ ತನ್ನನ್ನೊಬ್ಬ ವಿದ್ಯಾರ್ಥಿ ಎಂದೇ ಪರಿಗಣಿಸಿಕೊಂಡಿರುವ ಗಾಂಧಿಗೆ ವಿದ್ಯಾರ್ಥಿಗಳೇ ನಾಳಿನ ನಾಡು, ನುಡಿ, ಸಂಸ್ಕೃತಿ ಹಾಗೂ ಆತನ ಪಾಲಿನ ಕೊನೆಯ ಭರವಸೆ. ಅವರೊಂದಿಗೊಂದಿಷ್ಟು ಸಮಯ ಕಳೆಯಬೇಕೆನ್ನುವ ಆಸೆ ಅವನಿಗೂ ಇದೆ. ಆದರೆ ಮಾಡುವುದೇನು? ಪಕ್ಕದ ಬೆಂಕಿಯೇ ನಂದುತ್ತಿಲ್ಲ. ಆತ ಹಿಂದೂ-ಮುಸ್ಲಿಂ ಸೌಹಾರ್ದದ ಮೋಹದಿಂದ ಇನ್ನೆಂದೂ ಹೊರಗೆ ಬಾರದಂತೆ

ಸಿಕ್ಕಿಹಾಕಿಕೊಂಡಿದ್ದಾನೆ. ಆದರೆ ಇಂತಹ ಪ್ರತಿ ಸಂದರ್ಭವೂ ಆತನಿಗೆ ಕಲಿಕೆಯ ಅವಕಾಶವೇ. ಆತನಿಗೆ ಫಲಿತಾಂಶ ನೀಡಬೇಕಾದವನು ಭಗವಂತ. ಅದಕ್ಕಾಗಿ ನಾಡ ರಕ್ಷಣೆಗೆ ನೈತಿಕತೆ ಎಷ್ಟೊಂದು ಮುಖ್ಯ ಎನ್ನುವುದನ್ನು ಕುರಿತು ವಿದ್ಯಾರ್ಥಿಗಳಿಗೊಂದು ಸಂದೇಶವನ್ನು ಗಾಂಧಿ ಕಳುಹಿಸುತ್ತಾನೆ–

"ಪ್ರಿಯ ಎಳೆಯ ಸ್ನೇಹಿತರೇ,

ಇಂದು ನೀವು ನನಗಿಂತಲೂ ಸಂಕಷ್ಟದಲ್ಲಿದ್ದೀರಿ. ಶಾಲಾ ಕಾಲೇಜುಗಳ ವಾತಾವರಣ ಪರಿಶುದ್ಧವಾಗಿ ಉಳಿದಿಲ್ಲ. ಮೊದಲು ಅವುಗಳ ಶುದ್ಧೀಕರಣವಾಗಬೇಕಿದೆ. ಎಷ್ಟೆಲ್ಲ ಹಣ ಮತ್ತು ಸಮಯವನ್ನು ವ್ಯಯಮಾಡಿ ಓದಿಯೂ ನೀವೀಗ ನೆಮ್ಮದಿಯಾಗಿಲ್ಲ. ಯಾಕೆಂದರೆ ನೀವು ಸ್ವಾವಲಂಬಿಗಳಾಗಿಲ್ಲ. ನಾನು ಈ ಚಿಂತಾಜನಕ ಸ್ಥಿತಿ ಬದಲಾಗಬೇಕೆಂದು ಆಶಿಸುತ್ತೇನೆ. ಈ ನಿಟ್ಟಿನಲ್ಲಿ ನಿಮಗೆ ಸಹಾಯ ಮಾಡಲು ಇರುವ ಕುಟುಂಬದ ಕಸಬುಗಳನ್ನು ನೀವು ಎಲ್ಲಿಯವರೆಗೆ ಗೌರವಿಸುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಶಿಕ್ಷಣ ಹೀಗೆಯೇ ಕುಂಟುತ್ತಲೇ ಸಾಗಬೇಕಾಗುತ್ತದೆ. ಭಾರತಕ್ಕೆ ಸ್ವರಾಜ್ಯ ಬಂದಿದೆ. ಅದು ನಿಮ್ಮ ಕೈಗಳಿಗೆ ಹರಿಯಬೇಕಿದೆ. ಮೇಲು–ಕೀಳು, ಹಿಂದೂ–ಮುಸ್ಲಿಂ ಎನ್ನುವ ಮಿತಿಗಳಿಂದ ಹೊರಬರುವವರೆಗೂ ಸ್ವರಾಜ್ಯಕ್ಕೆ ಯಾವ ಅರ್ಥವೂ ಇಲ್ಲ. ಧರ್ಮ ಬೇರೆ. ನಾವು ಭಾರತೀಯರಾಗಿರಲು ಧರ್ಮವೇನು ಅಡ್ಡಿಯಾಗಿರಬೇಕಿಲ್ಲವಲ್ಲ." ಎಂದು ಸಂದೇಶ ಕಳುಹಿಸಿದ ಗಾಂಧಿ ಕೆಲಸದ ಒತ್ತಡಗಳಿಂದ ನಿರಾಳನಾದ.

ಈ ಇಡೀ ದಿನದ ಗಾಂಧಿಯ ಬರಹಗಳನ್ನ ಗಮನಿಸಿ. ಆಲೋಚನೆಗಳನ್ನ ಗಮನಿಸಿ. ಆತನಲ್ಲಿ ಸಹಿಸಲಾಗದ ಅಸಮಾಧಾನ ಹೊಗೆಯಾಡುತ್ತಿದ್ದುದು ಸ್ಪಷ್ಟವಾಗುತ್ತದೆ. ಇಷ್ಟೊಂದು ದೀರ್ಘ ದಾರಿಯನ್ನು ಕ್ರಮಿಸಿಯೂ ಈ ದಾರಿಗಳು ತನ್ನನ್ನು ಎಲ್ಲಿಯೂ ಒಯ್ಯಲಿಲ್ಲ ಎನ್ನುವುದು ಯಾರಿಗೆ ಅಸಮಾಧಾನವನ್ನುಂಟು ಮಾಡುವುದಿಲ್ಲ ಹೇಳಿ. ಮನುಷ್ಯಮಿತಿಯ ಒಂದು ದೇಹವನ್ನು ಹೊಂದಿದ ಗಾಂಧಿಯೂ ಅದರ ಮಿತಿಯೊಳಗೇ ಸಂಘರ್ಷಿಸಲು ಮತ್ತು ಸಮಾಧಾನ ಪಡಲು ಸಾಧ್ಯವಿದೆ. ಏಳು ದಶಕಗಳ ನಿರಂತರ ಹೋರಾಟದ ನಂತರವೂ ತನ್ನ ಆಲೋಚನೆಗಳು ಕೇವಲ ಜನರ ಸಮಯಸಾಧಕತೆಗಳಿಗೆ ಬಳಕೆಯಾಗುವುದಾದರೆ ಎಂತಹ ಮಹಾತ್ಮನಿಗೂ ಭ್ರಮನಿರಸನವಾಗುತ್ತದೆ.

ಈ ಗಾಂಧಿಯಂತೂ ಕೇವಲ ಮನುಷ್ಯ. ಆತನನ್ನು ನಮ್ಮ ಸ್ವಾರ್ಥಕ್ಕಾಗಿ ನಾವು ಮಹಾತ್ಮನನ್ನಾಗಿಸಿದವರು.

ಬಿಹಾರಿನ ಸಾಮಾಜಿಕ ಕಾರ್ಯಕರ್ತರು ಮತ್ತು ಜನಪರ ಹೋರಾಟಗಾರರು ಗಾಂಧಿ ಬಿಹಾರಕ್ಕೆ ಬರಬೇಕೆಂದು ಆಶಿಸುತ್ತಿದ್ದಾರೆ. ಆತ ಹೇಗೆ ನೌಖಾಲಿಯವನೋ,

ದೆಹಲಿಯವನೋ, ಗುಜರಾತಿನವನೋ ಹಾಗೇ ಗಾಂಧಿ ಎಲ್ಲ ಕಾಲಕ್ಕೂ ನಮ್ಮವ. ನಮ್ಮ ಸಂಕಷ್ಟಗಳಿಗೂ ಬೆಳಕಾಗಬೇಕಾದವ ಎನ್ನುವುದು ಬಿಹಾರಿಗಳ ವಾದ. ಈ ವಾದಕ್ಕೆ ಕಾರಣಗಳಿವೆ.

ಗಾಂಧಿಗೆ ಆರಂಭದಲ್ಲಿ ಭೂಮಾಲೀಕರ ವಿರುದ್ಧದ, ೧೯೧೭ರ ಆತನ ಸಾಮಾಜಿಕ ಹೋರಾಟದಲ್ಲಿ ಪ್ರಥಮ ಯಶಸ್ಸನ್ನು ತಂದುಕೊಟ್ಟವರು ಬಿಹಾರದ ರೈತರು. ೧೭ ವರ್ಷಗಳ ನಂತರ ಮತ್ತೆ, ೧೯೩೪ರಲ್ಲಿ ಬಿಹಾರದಲ್ಲಿ ಭೂಕಂಪದಿಂದ ಜನರು ಕಷ್ಟಕ್ಕೀಡಾದಾಗ ಗಾಂಧಿ ಅಲ್ಲಿ ತೊಡಗಿಸಿಕೊಂಡಿದ್ದ. ಈಗ ಮತ್ತೆ ಗಾಂಧಿ ಬರಬೇಕೆಂದು ಅಲ್ಲಿಯ ಜನತೆ ಕೇಳಿಕೊಂಡಿದೆ. ಗಾಂಧಿ ಸಿದ್ಧನಾಗಿದ್ದಾನೆ. ದೆಹಲಿಯಿಂದ ಆತನಿಗೂ ಬದಲಾವಣೆ ಬೇಕಿದೆ.

ಡಿಸೆಂಬರ ೧೯, ೨೦ ಗಾಂಧಿಯ ನಡಿಗೆ ಬಿಹಾರದ ಕಡೆಗೆ. ಇಂದಿಗೆ ಸರಿಯಾಗಿ ಒಂದು ತಿಂಗಳು. ಇದೇ ದಿನ ಗಾಂಧಿಗೆ ಬಾಂಬ್ ಬೆದರಿಕೆಯೊಂದು ಬರುವುದಿದೆ. ಅದು ಗಾಂಧಿಯ ಅಂತಿಮ ದಿನದ ಸ್ವರೂಪವನ್ನು ನಿಶ್ಚಯಿಸಲಿದೆ.

ಅಂದಹಾಗೆ ಬಿಹಾರ ಎಂದರೆ ಕಿತ್ತು ತಿನ್ನುವ ಬಡತನ, ಹಸಿವು ಮತ್ತು ಇಂಗಿಸಲಾಗದ ದಾರಿದ್ರ್ಯ. ಹೀಗಾಗಿ ಉಳಿದವರಷ್ಟು ಕಡಿದಾಡಲು, ಕಿತ್ತಾಡಲು, ಅವರ ಬಳಿ ಸಮಯವಿಲ್ಲ. ಗಾಂಧಿ ಇಲ್ಲಿ ಬಡತನ ಇಂಗಿಸುವ ದಾರಿಗಳನ್ನು ಕುರಿತು ಇಲ್ಲಿ ಚರ್ಚಿಸಬೇಕಿದೆ. ಅವನ ಮುಂದೆ ಈಗ ದಾರಿದ್ರ್ಯಗಳಿಂದ ಜನರನ್ನು ಮೇಲೆತ್ತುವ ಏಕೈಕ ಸಾಧನ ಚರಕ. ಕಾರಣ ಬಿಹಾರಿಗಳಿಗೆ ಚರಕವನ್ನು ಕುರಿತು ತಿಳಿಸಿದ, "ಚರಕ ಸೂರ್ಯನಂತೆ. ಉಳಿದ ಕೈಗಾರಿಕೆಗಳು ಅದರ ಸುತ್ತಲಿನ ಕಾಯಗಳು. ನಮ್ಮ ರಾಷ್ಟ್ರಧ್ವಜದಲ್ಲಿರುವ ಚಕ್ರ ನನ್ನ ದೃಷ್ಟಿಯಲ್ಲಿ ಆ ಚರಕದ ಸಂಕೇತವೇ. ಚರಕಸಂಘ ಉಳಿಯುವುದು, ಹಳ್ಳಿಯ ಸಾಂಪ್ರದಾಯಿಕ ಉದ್ಯೋಗಗಳು ಉಳಿಯುವುದು ಮತ್ತು ಅಳಿಯುವುದು ಎರಡೂ ನಿಮ್ಮ ಕೈಯಲ್ಲಿವೆ. ದೇಶದ ಹರಿಜನ ಸೇವಕ ಸಂಘ, ಗ್ರಾಮೋದ್ಯೋಗ ಸಂಘ, ನಯೀ ತಾಲೀಮಿ ಸಂಘ, ಕಸ್ತೂರ್ ಬಾ ಟ್ರಸ್ಟ್ ಜೊತೆಗೆ ಉಳ್ಳವರು–ಇಲ್ಲದವರು ಎಲ್ಲರೂ ಚರಕವನ್ನು ಉಳಿಸಿಕೊಳ್ಳಬೇಕು. ಸಾಮಾಜಿಕ ಸಾಮರಸ್ಯದ ವಿಷಯದಲ್ಲಿ ಎಲ್ಲರೂ ಧೈರ್ಯಶಾಲಿಗಳಾಗಬೇಕು. ಹೇಡಿಗಳು ಮಾತ್ರ ಮುಸ್ಲಿಮರನ್ನು ಈ ದೇಶದಿಂದ ಒಕ್ಕಲೆಬ್ಬಿಸುವ ವಿಚಾರ ಮಾಡುತ್ತಾರೆ. ಪಾಕಿಸ್ತಾನದಲ್ಲಿ ಹಿಂದೂಗಳಿಗೆ ಭಯವಿದೆ. ಹಿಂದುಸ್ತಾನದಲ್ಲಿ ಮುಸ್ಲಿಮರು ಅತಂತ್ರರಾಗಿದ್ದಾರೆ– ಇವೆಲ್ಲ ಹೇಡಿ ಆಲೋಚನೆಗಳು. ನೀವು ಒಳ್ಳೆಯವರಾದರೆ ಸರಕಾರ ಒಳ್ಳೆಯದು, ಸೈನಿಕ ಒಳ್ಳೆಯದವನು, ಪೋಲಿಸ ಒಳ್ಳೆಯವನು." ವಿಚಿತ್ರ ನೋಡಿ, ರಾಷ್ಟ್ರಧ್ವಜದಲ್ಲಿ ಗಾಂಧಿ ಸೂಚಿಸಿದ ಚರಕಕ್ಕೂ ಆ ನಂತರ ಅದನ್ನು ಅನುಲಕ್ಷಿಸಿ ಬಂದ ಅಶೋಕ ಚಕ್ರಕ್ಕೂ ಏನೂ ಸಂಬಂಧವಿಲ್ಲ. ಗಾಂಧಿ ಬದಲಾಗುತ್ತಿದ್ದಾನೆ. ಬದಲಾಗಲೇಬೇಕಿದೆ.

ಅದೇನಾಯಿತೋ, ಬಿಹಾರದಿಂದ ಬರುತ್ತಲೇ ಗಾಂಧಿ ಅನಾರೋಗ್ಯಕ್ಕೆ ಬಿದ್ದ. ದಣಿವರಿಯದ ದೇಹಕ್ಕೆ ವಿಶ್ರಾಂತಿ ಬೇಕಾಗಿತ್ತು. ಮಾಗಿದ ವಯಸ್ಸು, ಅವಿಶ್ರಾಂತ ಬದುಕು ಆತನ ಮುಪ್ಪಿನ ದೇಹವನ್ನು ಮತ್ತಷ್ಟು ಮುಪ್ಪಿಗೆ ಎಳೆದಿತ್ತು. ಗಾಂಧಿ ಈ ಸಂಗತಿಯನ್ನು ಯಾರಿಗೂ ತಿಳಿಸದೆ ಅಲ್ಲಿಂದ ಬಂದವನೇ ಒಂದು ದೀರ್ಘ ನಿದ್ರೆ ಮಾಡಿದ. ನಿಸರ್ಗ ಚಿಕಿತ್ಸೆಯ ಕೆಲವು ನಿಯಮಗಳನ್ನು ಪಾಲಿಸಿದ. ಧ್ಯಾನಕ್ಕೆ ಇನ್ನೂ ಹೆಚ್ಚು ತೊಡಗಿಸಿಕೊಂಡ. ಮರುದಿನ ಸೋಮವಾರ ಡಿಸೆಂಬರ ೨೨ಕ್ಕೆ ಮತ್ತೆ ಸರಿ ಹೋದ. ಯಥಾಪ್ರಕಾರ ಇಂದು ಆತನ ಮೌನ ವ್ರತ. ಎಲ್ಲವೂ ಸಂಕೇತದ ಮೂಲಕವೇ

ಗಾಂಧಿಯ ಆರೋಗ್ಯದ ಕುರಿತು ಮಾತನಾಡಿಸಲು ಆತ್ಮೀಯರೆಲ್ಲ ಸೇರಿದ್ದಾರೆ. ಶೇಖ್ ಅಬ್ದುಲ್ಲಾ, ಬೇಗಂ ಅಬ್ದುಲ್ಲಾ, ಬಕ್ಷಿ ಗುಲಾಮ್ ಅಹಮದ್, ಭಾವನಗರದ ಮಹಾರಾಜ, ಚಟ್ಟಾರಿಯ ನವಾಬ, ಕಛ್‌ನ ರಾಜಕುಮಾರ ಡಾ. ಸೈಫ್–ಉದ್ದಿನ್, ಬ್ರಿಜ್ ಲಾಲ್ ನೆಹರು, ಶ್ರೀಮತಿ ರಾಮೇಶ್ವರಿ ನೆಹರು, ಅನಂತರಾಯ ಪಟ್ಟಾನಿ, ಸುಹ್ರಾವರ್ದಿ ಹಾಗೂ ರಾಮ್ ಮನೋಹರ ಲೋಹಿಯಾ – ಎಲ್ಲರೂ ಬಂದಿದ್ದಾರೆ. ಗಾಂಧಿ ಎಲ್ಲರನ್ನೂ ನೋಡಿ ಮುಗುಳ್ನಕ್ಕ ಅಷ್ಟೆ. ಆತನ ಆರೋಗ್ಯ ಸ್ಥಿರವಾಗಿದೆ, ಚಿಂತಿಸಬೇಕಾಗಿಲ್ಲ ಎನ್ನುವ ಸಂದೇಶವನ್ನು ತನ್ನ ಮುಗುಳ್ನಗೆಯಲ್ಲಿಯೇ ಎಲ್ಲರಿಗೂ ರವಾನಿಸಿದ. ಬರಹದ ಮೂಲಕವೇ ಬ್ರಿಜ್ ಲಾಲ್ ನೆಹರು ಕೇಳಿದ್ದ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದ. ಎಲ್ಲ ಶಾಲಾ ಕಾಲೇಜುಗಳಲ್ಲಿ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳುವ ಪ್ರಾಥಮಿಕ ವಿಚಾರಗಳನ್ನು ಮಕ್ಕಳಿಗೆ ಬೋಧಿಸಬೇಕು ಎನ್ನುವ ಒಂದು ಸಾಲಿನ ಬರಹವನ್ನು ಎಲ್ಲರೊಂದಿಗೆ ಹಂಚಿಕೊಂಡ.

ಲೀಲಾವತಿ ಅಸರಳಿಗೆ ಆಶೀರ್ವದಿಸಿ ಡಾ. ಮಂಗಲ್‌ದಾಸ ಷಾರ ಕೈಯಲ್ಲಿ ನೀನು ತರಬೇತಿ ಪಡೆಯುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಸಮರ್ಥ ವೈದ್ಯಳಾಗು. ವೈದ್ಯನ ಅಜಾಗರೂಕತೆಗೆ, ಪ್ರಯೋಗಕ್ಕೆ ಸಾಮಾನ್ಯ ವ್ಯಕ್ತಿ ಬಲಿಪಶುವಾಗಬಾರದು ಎಂದು ಬರೆದು ತಿಳಿಸಿದ. ಕಸವನ್ನೇ ರಸವಾಗಿಸಿಕೊಂಡು ಸಾವಯವ ಕೃಷಿಯಾಧಾರಿತ ಕೃಷಿಯನ್ನ ಹೇಗೆ ಮಾಡಬಹುದು ಎನ್ನುವ ಸಂದೇಶವನ್ನೂ ಸೇರಿದ್ದ ಜನರಿಗೆ ಕೊಟ್ಟ.

ಎಲ್ಲರನ್ನೂ ಬೀಳ್ಕೊಟ್ಟು ಕಳೆದ ನಾಲ್ಕು ದಿನಗಳಿಂದ ಬಂದು ಬಿದ್ದಿದ್ದ ಪತ್ರದ ಗುಡ್ಡೆಯ ಮುಂದೆ ಒಂದೊಂದಕ್ಕೆ ಉತ್ತರಿಸಲು ಕುಳಿತುಕೊಂಡ. ತನ್ನ ಮಗನಾದ ರಾಮದಾಸ ಗಾಂಧಿಯ ಮಗ, ತನ್ನ ಮೊಮ್ಮಗ ಕನು ಗಾಂಧಿಯ ಪತ್ರಕ್ಕೆ ಉತ್ತರಿಸುತ್ತ ಈಗ ಆತನ ಕೈ ಬರಹ ಸುಧಾರಿಸಿದ್ದಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸಿದ. ಹಾಗೇ ಜ್ಞಾನದಲ್ಲಿ ವೈಚಾರಿಕತೆಯ ಪಾತ್ರ ಏನು ಎನ್ನುವುದಕ್ಕೆ ವಿಶ್ಲೇಷಣೆ ನೀಡಿದ. ಇದೇ ವೇಳೆಗೆ ಮಗನಾದ ರಾಮದಾಸ ಗಾಂಧಿಯ ಪತ್ರವೂ ಬಂದಿದೆ. ದೆಹಲಿಯ ಹರಿಜನ

ಕಾಲೋನಿಯಲ್ಲಿ ಘಟಿಸಿದ ಒಂದು ಸಂಗತಿಯನ್ನು ಕುರಿತು ಆತ ಗಾಂಧಿಗೆ ಪತ್ರ ಬರೆದಿದ್ದಾನೆ. ಇದುವರೆಗೂ ಗಾಂಧಿ ಬಚ್ಚಿಟ್ಟಿದ್ದ ಒಂದು ವಿಚಾರವನ್ನು ಈಗ ಪ್ರಸ್ತಾಪಿಸಲೇಬೇಕಾದ ಸಂದರ್ಭ ತಂದಿದ್ದಾನೆ. ಗಾಂಧಿ ಉತ್ತರಿಸುತ್ತಾನೆ–

"ಪ್ರಿಯ ರಾಮದಾಸ,

ನನ್ನ ಬೆರಳಿಗೆ ಗಾಯವಾದದ್ದು ಸತ್ಯ. ಆ ಕ್ಷಣದಲ್ಲಂತೂ ನಾ ಸತ್ತೇ ಹೋದೆ ಎನ್ನುವಷ್ಟು ನೋವಾಯಿತು. ಅಂದಹಾಗೆ, ಅಲ್ಲಿಗೆ ನಾನು ಮೀಟಿಂಗಿಗೆ ಹೋಗಿದ್ದೆ. ನಾನು ಕಾರಿನಿಂದ ಇಳಿಯುತ್ತಿರುವಂತೆಯೇ ನನ್ನ ಕೈ ಬೆರಳುಗಳನ್ನು ಗಮನಿಸದ ಬ್ರಿಜ್ ಕೃಷ್ಣ ಕಾರಿನ ಕದವನ್ನು ಎಳೆದುಕೊಂಡ. ನನ್ನ ಬೆರಳು ಆಗ ಜಜ್ಜಿ ಹೋಯಿತು. ಭಯಾನಕವಾದ ನೋವಿನಿಂದಾಗಿ ನನಗೆ ಮೀಟಿಂಗಿನಲ್ಲಿ ಬಹಳ ಹೊತ್ತು ಮಾತನಾಡಲಾಗಲಿಲ್ಲ. ಬೇಸರವೆನಿಸಿತು. ನನ್ನ ಬೇಜವಾಬ್ದಾರಿತನದಿಂದಾಗಿ ಸಮಯ ಪೋಲಾಯಿತು. ಖಂಡಿತವಾಗಿಯೂ ನಾನು ಸಾಕಷ್ಟು ಎಚ್ಚರವಾಗಿರುತ್ತೇನೆ. ಆದರೆ ಎಂತಹ ಎಚ್ಚರದ ವ್ಯಕ್ತಿಯೂ ಕೆಲವೊಮ್ಮೆ ಮೈ ಮರೆಯುತ್ತಾನೆ ಎನ್ನುವುದಕ್ಕೆ ನಿನಗೆ ಈ ಘಟನೆಯೊಂದು ನಿದರ್ಶನ. ಚಿಂತಿಸಬೇಡ. ಈಗ ಎಲ್ಲವೂ ಸರಿಯಾಗಿದೆ

ಇಂತೀ ನಿನ್ನ

ಬಾಪು"

ಒಂದಿಷ್ಟು ಅನಾರೋಗ್ಯದಿಂದ ಈ ಗಾಂಧಿ ಬಳಲಿದರೆ ಅವನ ಸುತ್ತಲೂ ಸಾಮಾನ್ಯರಿಂದ ಅಸಾಮಾನ್ಯರ ಒಂದು ದೊಡ್ಡ ಪಡೆಯೇ ಸೇರಿಕೊಳ್ಳುತ್ತದೆ. ಮಗ, ಮೊಮ್ಮಗ ಎಲ್ಲರೂ ತುದಿಗಾಲುಗಳ ಮೇಲೆ ಕುಳಿತುಕೊಳ್ಳುತ್ತಾರೆ. ಏನೆಲ್ಲ ಇದ್ದೂ ಯಾವುದೂ ತನ್ನದಲ್ಲ ಎನ್ನುವ ನಿರ್ಮೋಹದ ಬದುಕನ್ನು ಬದುಕುವ ಈ ಗಾಂಧಿಯ ಸುತ್ತಲೂ ಇಂತಹ ಮೋಹದ ದೊಡ್ಡ ಪ್ರಪಂಚವೇ ಇದೆ. ಈ ಸಾತ್ವಿಕ ಮೋಹ ಆತನ ಸ್ವಾಮಿನಿಷ್ಠೆ, ರಾಷ್ಟ್ರನಿಷ್ಠೆ ಮತ್ತು ಸೇವಾಭಾವದಿಂದ ಸಾಧ್ಯವಾಗಿದೆ. ಆದರೆ ದುರಂತವೆಂದರೆ ಈ ಎಲ್ಲರ ಮಧ್ಯದಿಂದ, ಎಲ್ಲರಂತೆಯೇ ಬಂದು, ಸೇವಕನಂತೆಯೇ ನಮಸ್ಕರಿಸಿ, ಗೋಡ್ಸೆ ಗಾಂಧಿಗೆ ಮೂರು ಸುತ್ತು ಗುಂಡು ಹಾರಿಸುವಾಗ ಕಾಲ ಎಷ್ಟೊಂದು ಕ್ರೂರವಾಗಿರಬೇಕಲ್ಲ? ಗಾಂಧಿಯ ಬೆರಳ ಹನಿಯ ರಕ್ತಕ್ಕೆ ರಾಮದಾಸನ ಮೋಹದ ಪ್ರಶ್ನೆಯಾದರೂ ಇತ್ತು. ಆದರೆ ಗುಂಡಿನಿಂದ ಗಾಯಗೊಂಡ ಗಾಂಧಿಯ ಗುಂಡಿಗೆಯಿಂದ ರಕ್ತ ಸುರಿಯುವಾಗ ಈ ದೇಶದ ಪ್ರಜ್ಞಾವಂತರಿಗೆ, ರಾಜಕಾರಣಿಗಳಿಗೆ, ಹಿಂದೂ–ಮುಸ್ಲಿಮರಿಗೆ ಯಾವ ಜವಾಬ್ದಾರಿ ಇತ್ತು?

❑



ಮರುಳ ಮಹಾತ್ಮ : ಮುಗಿಯದ ಮಾತು

ಗಾಂಧಿ ಇಡೀ ದೇಶಕ್ಕೆ ಮಾರ್ಗದರ್ಶನ ಮಾಡುವ, ತಿದ್ದುವ–ತೀಡುವ, ಜನರನ್ನು ಸರಿಯಾಗಿ ನಡೆಸುವ, ಸರಿಯಾದುದನ್ನೇ ನುಡಿಸುವ, ಕ್ರಿಯೆಯಲ್ಲಿ ನಿತ್ಯ ತೊಡಗಿರಬಹುದು. ತನ್ನೆಡೆಗೆ ತಾನು ನೋಡಿಕೊಳ್ಳದಷ್ಟೂ ಆತ ಕಾರ್ಯಮಗ್ನನಾಗಿರಬಹುದು. ಆದರೆ ಅವನನ್ನೇ ಗಮನಿಸುತ್ತ, ಅವನ ಸೇವೆಯಲ್ಲಿಯೇ ತಮ್ಮ ಸಂಪೂರ್ಣ ಬದುಕನ್ನು ತೊಡಗಿಸಿಕೊಂಡವರೂ ಕೆಲವರು ಇದ್ದಾರೆ. ಆತನ ಉಸಿರಿಗಿಂತಲೂ ಕರಾರುವಾಕ್ಕಾದ, ನಿಯಮಿತವಾದ, ನಿರಂತರವಾದ ಪ್ರಜ್ಞಾಪೂರ್ವಕ ಜೀವನ ಮಾಡಿದವರವರು. ಅಂತಿಮವಾಗಿ ಆತನ ಉಸಿರು ನಿಂತು ನೆಲಕ್ಕುರುಳಿದಾಗಲೂ ಆತನ ತಲೆಗೆ ಆಸರೆ ಕೊಟ್ಟ ಪಾತ್ರಗಳವು. ಅಂತವುಗಳಲ್ಲಿ ನಾವೆಂದೂ ಮರೆಯಲಾಗದ ಒಂದು ಪಾತ್ರ ಮನು. ಈಕೆ ಗಾಂಧಿಯ ಹೆಗಲು, ಹಗಲು ಎಲ್ಲವೂ ಹೌದು. ಈತನ ಸೇವೆಯಲ್ಲಿದ್ದಾಗ ಆಕೆಯ

ವಯಸ್ಸು ಹದಿನೆಂಟು. ಈತನ ಶರೀರಕ್ಕೆ ಬಾಗುವ ಮುಪ್ಪು, ಆಕೆಗೆ ತುಡಿವ ಯೌವನ. ಆಕೆಗೆ ಎಲ್ಲವೂ ಬೆರಗು, ಆತನಿಗೆ ಎಲ್ಲ ನಿಶಾಂತ. ಗಾಂಧಿಯ ಸಮಗ್ರ ಉತ್ತರಾರ್ಧವನ್ನು ಇಂಚು ಇಂಚಾಗಿ ಗಮನಿಸಿದ ಸಮಗ್ರ ಹಾಗೂ ಸಮರ್ಥ ಸಾಕ್ಷಿ ಇವಳು. ಹಾಗೆ ನೋಡಿದರೆ ಈ ಗಾಂಧಿಯನ್ನು ಕುರಿತು ಈಕೆ ಬರೆಯಬೇಕಿತ್ತು. ಅಂಥ ಬರಹಕ್ಕೆ ದೊಡ್ಡ ಅರ್ಥವೂ ಇರುತ್ತಿತ್ತು. ಆದರೆ ಈಕೆ ಬರೆದಿರುವ, ಬರೆಯದಿರುವ ಬಗೆಗೆ ನನಗೆ ಗೊತ್ತಿಲ್ಲ.

ಗಾಂಧಿಯನ್ನು ಅಟ್ಟಕ್ಕೇರಿಸದೆ, ಅನಾವಶ್ಯಕವಾಗಿ ಅಗ್ಗಡಿಸದೆ, ಮಾತನಾಡಿದವರು ಇತಿಹಾಸದಲ್ಲಿ ಯಾರಾದರೂ ಇದ್ದರೆ ಅದು ಮನು ಮಾತ್ರ. ಆಕೆ ಆತನೊಂದಿಗಿದ್ದಿದ್ದು ಆತನೊಬ್ಬ ದೊಡ್ಡ ಮಹಾತ್ಮನೋ, ದಾರ್ಶನಿಕನೋ, ನಾಯಕನೋ, ಪವಾಡ ಪುರುಷನೋ ಎನ್ನುವ ಕಾರಣಕ್ಕಾಗಿ ಅಲ್ಲ, ಕೇವಲ ಸೇವಕಿಯಾಗಿ. ಮೊಮ್ಮಗಳಾಗಿ ಬಂದು, ಸೇವಕಿಯಾಗಿ ಬಾಳಿ ತಾಯಿಯಂತೆ ಗಾಂಧಿಯ ನಿಗಾ ವಹಿಸಿದವಳು. ಆಕೆ ಗಾಂಧಿಯ ಮುಂದೆಯೇ ಬೆಳೆದ ಹೆಣ್ಣು ಮಗು. ಆತನ ಪತ್ರಗಳನ್ನ ಬರೆಯುತ್ತ, ವರದಿಗಳನ್ನು ಓದುತ್ತ, ಸುತ್ತಲಿನ ಚರ್ಚೆಗಳಿಗೆ ಕಿವಿಗೊಡುತ್ತ, ಪ್ರವಾಸಗಳಲ್ಲಿ ಅವನೊಂದಿಗೆ ಪ್ರವಾಸಿಯಾಗುತ್ತಾ, ಆತನ ತಿಂಡಿ ತೀರ್ಥಗಳ ಮುತುವರ್ಜಿ ವಹಿಸಿ ತಾಯಿಯಾಗುತ್ತಾ, ಕೆಲವೊಮ್ಮೆ ತುಂಟು ತುಂಟಾಗಿ ಮಾತನಾಡಿ ಎಂತಹ ಗಂಭೀರ ಸ್ಥಿತಿಯಲ್ಲಿಯೂ ನಗೆಯ ಬುಗ್ಗೆಗಳನ್ನೆಬ್ಬಿಸುತ್ತ, ಮತ್ತೆ ಕೆಲವೊಮ್ಮೆ ಗಾಂಧಿ ಮೈಮರೆತು ಮಾಡುತ್ತಿದ್ದ ತಪ್ಪುಗಳನ್ನ ತೋರಿಸುತ್ತ, ಒಂದು ವಿಚಿತ್ರ ಮತ್ತು ವಿಶಿಷ್ಟ ಪಾತ್ರಧಾರಿಯಾಗಿ ಗಾಂಧಿಯೊಂದಿಗಿದ್ದವಳು ಮನು.

ಮಂಗಳವಾರ, ಡಿಸೆಂಬರ ೨೩, ಸ್ನಾನ, ಬೆಳಗಿನ ಉಪಾಹಾರದ ನಂತರ ಯಾರೂ ಇಲ್ಲ. ಗಾಂಧಿ ಮತ್ತು ಮನು ಇಬ್ಬರೇ. ಗಾಂಧಿ ಚರಕದಲ್ಲಿ ತೊಡಗಿಸಿಕೊಂಡಿದ್ದಾನೆ. ಪಕ್ಕದಲ್ಲಿಯೇ, ಬಂದ ಪತ್ರಗಳ ಲಕೋಟಿಗಳನ್ನು ಒಡೆಯುವದರಲ್ಲಿ ಮಗ್ನಳಾಗಿದ್ದ ಮನು ತಟ್ಟನೆ ಒಂದು ಪ್ರಶ್ನೆ ಕೇಳಿದಳು.

ಪ್ರಶ್ನೆ: ಇತ್ತೀಚೆಗಂತೂ ಎಷ್ಟೊಂದು ಮಾತನಾಡುತ್ತೀಯ ಬಾಪು, ಮಾತನಾಡಿದ್ದನ್ನೇ ಮಾತನಾಡುತ್ತೀಯ. ಈ ನಿನ್ನ ಪುನರಾವರ್ತಿತ ಮಾತುಗಳಿಂದ ಜನರಿಗೆ ಕಿರಿಕಿರಿಯಾಗುತ್ತದೆಂದು ನಿನಗೆ ತಿಳಿಯುವುದೇ ಇಲ್ಲವೆ? ಕೆಲವೊಮ್ಮೆಯಂತೂ ಕೊನೆಯ ಕ್ಷಣದವರೆಗೂ ಅದೇನು ಮಾತನಾಡುತ್ತೀಯಾ ಅಂತ ನಿನಗೇ ತಿಳಿಯುತ್ತಿಲ್ಲ ಬಿಡು. ನನಗಂತೂ ಕೇಳಿ ಕೇಳಿ ಸಾಕಾಗಿ ಹೋಗಿದೆ.

ಮನುಳ ಈ ಪ್ರಶ್ನೆಗೆ, ಮುಗ್ಧ ಟೀಕೆಗೆ ಗಾಂಧಿ ಒಂದು ಕ್ಷಣ ಗಂಭೀರನಾದ. ಮತ್ತೆ ಮುಗುಳ್ನಕ್ಕ, ಮತ್ತೆ ಜೋರಾಗಿ ನಕ್ಕು ಮನು ಇಟ್ಟ ಈ ಪ್ರಶ್ನೆಯಲ್ಲಿ ಬಹಳಷ್ಟು ಅರ್ಥವಿದೆ, ತಾನದಕ್ಕೆ ಉತ್ತರಿಸಲೇಬೇಕು ಎಂದು ಮಹಾತ್ಮ ಮತ್ತೆ ಮಾತಿಗೆ ಇಳಿದ.

ಗಾಂಧಿ: ನಿನ್ನ ಪ್ರಶ್ನೆ ಪರಿಗಣಿಸಬೇಕಾದುದೇ ಮನು, ಆದರೆ ನನ್ನ ಮಾತುಗಳಿಂದ ಯಾವುದಾದರೂ ದೊಡ್ಡ ಹಾನಿ ಇದೆಯೇ? ಹಾಗೆಯೇ ನನ್ನ ಮಾತುಗಳಿಗೆ ಯಾವುದಾದರೂ ದೊಡ್ಡ ಅರ್ಥವಿದೆಯೇ? ಜನರ ಮೇಲೆ ಅದು ಏನಾದರೂ ಪರಿಣಾಮವನ್ನು ಉಂಟುಮಾಡುತ್ತದೆಯೇ? ಮಾಡುವುದಿಲ್ಲವೆ? ಇದಾವುದೂ ನನಗೆ ಪ್ರಶ್ನೆ ಅಲ್ಲ. ನಾನು ಇವುಗಳ ಬಗೆಗೆ ತಲೆಕೆಡಸಿಕೊಳ್ಳುತ್ತಲೂ ಇಲ್ಲ. ಯಾವುದು ನನಗೆ ಸತ್ಯವೆನ್ನಿಸಿತೋ ಅದನ್ನು ಹೇಳುತ್ತಿದ್ದೇನಷ್ಟೆ. ನಿರ್ಣಯ ಆ ದೇವರಿಗೆ ಬಿಟ್ಟದ್ದು. ಅವನ ಭಯದಲ್ಲಿ, ಅವನಿಗೇ ನಿಷ್ಠನಾಗಿ ಮಾತನಾಡುತ್ತ ಹೋದರೆ ಅದಕ್ಕೆ ಬರುವ ಫಲಿತಾಂಶವೂ ಅವನನ್ನೇ ಸೇರಿದ್ದು. ನಾನು ಜನರ ಕಿವಿಗೆ ಹಿತ ಕೊಡುವ ಮಾತುಗಳನ್ನಾಡುವ ದಲ್ಲಾಳಿ ಅಲ್ಲ. ಇದನ್ನೇ ನಾನು ಎಲ್ಲರಿಗೂ ತಿಳಿಸುವ ಯತ್ನ ಮಾಡುತ್ತಿದ್ದೇನೆ. ಕಾಂಗ್ರೆಸ್ಸೇ ಇರಲಿ, ಮುಸ್ಲಿಂಲೀಗೇ ಆಗಿರಲಿ, ಇದ್ದ ವಿಚಾರವನ್ನು ಮುಕ್ತವಾಗಿ, ಆತ್ಮಸಾಕ್ಷಿಯಾಗಿ, ಮಾತನಾಡಿಬಿಡಬೇಕು. ಅದಿರಲಿ ಮನು, ಅದೇನು ಇದ್ದಕ್ಕಿದ್ದಂತೆ ಈ ಪ್ರಶ್ನೆ ಇಂದು ನಿನ್ನಲ್ಲಿ ಬಂತು? ಒಟ್ಟಾರೆ ನಿನಗೆ ಈ ಮುದುಕನ ಮಾತು, ಮೌನ ಎಲ್ಲ ಗೋಳಾಡಿಸಿಬಿಟ್ಟಿದೆ ಅಲ್ಲವೆ?

ಪ್ರತಿಕ್ರಿಯಿಸಿದ ಗಾಂಧಿ ಜೋರಾಗಿ ನಕ್ಕು ಮತ್ತೆ ಚರಕದಲ್ಲಿ ತೊಡಗಿಸಿಕೊಂಡ. ಮನು ಮೌನವಾಗಿ ವಿದೇಶಿಗನೊಬ್ಬ ಗಾಂಧಿಯ ಅಹಿಂಸಾ ತತ್ವ, ಅದನ್ನು ಆಧರಿಸಿ ಭಾರತಕ್ಕೆ ಬಂದ ಸ್ವಾತಂತ್ರ್ಯಗಳನ್ನು ಮೆಚ್ಚಿ ಬರೆದ ಪತ್ರವನ್ನು ಹಾಗೂ ನಿಮ್ಮ ಸೇವೆ ಮಾಡಿಕೊಂಡು ನಿಮ್ಮೊಂದಿಗೆ ಇರುತ್ತೇನೆ. ನನಗೆ ಒಂದು ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡಿದ್ದ ಗಂಗಿ ಹಿಂಗೋರಾಣಿಯ ಪತ್ರವನ್ನು ಗಾಂಧಿಯ ಮುಂದೆ ಬಿಚ್ಚಿಟ್ಟಳು. ಗಾಂಧಿ ಹಿಂಗೋರಾಣಿಯ ಪತ್ರವನ್ನು ನೋಡಿ ನಕ್ಕು ಮನುಳಿಗೆ ಹೇಳಿದ, "ಎಂತಹ ಮೋಜು ನೋಡು, ಮನೆಯೇ ಇಲ್ಲದವನ ಮುಂದೆ ಬಾಡಿಗೆ ಮನೆಗಾಗಿ ಕೇಳುವುದೇ? ನಾನೇ ಒಬ್ಬ ಶ್ರೀಮಂತನ ಮನೆಯಲ್ಲಿ ಬಾಡಿಗೆಗೆ ಇದ್ದೇನೆ. ಜನ ನನ್ನನ್ನು ಏನಂತ ತಿಳಿದುಕೊಂಡಿದ್ದಾರೊ ಅದೇ ಗೊತ್ತಾಗುತ್ತಿಲ್ಲ ಮನು. ಅವಳಿಗೆ ಪತ್ರ ಬರೆದು ತಿಳಿಸಿ ಬಿಡು. ಇಲ್ಲಿ ಮಹಿಳೆಯರಿಗೆ ಯೋಗ್ಯ ಅನುಕೂಲತೆಗಳಿಲ್ಲ. ನಾನೇ ಅನ್ಯರ ಮನೆಯಲ್ಲಿ ಅತಿಥಿಯಾಗಿರುವಾಗ ಇನ್ನೊಬ್ಬರನ್ನು ತಂದು ಅವರ ಮನೆಯ ಅತಿಥಿಯಾಗಿಸುವುದು ತಪ್ಪು. ನಾನೇನಾದರೂ ಆಶ್ರಮ ಪ್ರಾರಂಭಿಸಿದರೆ ಖಂಡಿತವಾಗಿ ಕರೆಯಿಸಿಕೊಳ್ಳುತ್ತೇನೆಂದು ಹೇಳು. ನನ್ನ ಪಕ್ಕದಲ್ಲಿ ನಿಂತು ನನ್ನಿಂದ ಕಲಿಯಬಹುದಾದುದೆಲ್ಲವನ್ನೂ ದೂರದಲ್ಲಿದ್ದೂ ಕಲಿಯಲು ಸಾಧ್ಯವಿದೆ ಎಂದು ತಿಳಿಸು." ಗಾಂಧಿಯನ್ನು ವಿರೋಧಿಸುವುದೇ ತಮ್ಮ ಗುರಿ ಎಂದುಕೊಂಡ ಕೆಲವರು ಗಾಂಧೀ–ಮನು ಸಂಬಂಧಗಳಲ್ಲಿ ಕಾಮದ ಕೆಟ್ಟ ವಾಸನೆಯನ್ನು ಕಂಡುಕೊಂಡಿದ್ದಾರೆ. "ಬ್ರಹ್ಮಚರ್ಯದ ಯಜ್ಞವನ್ನು ಮಾಡುತ್ತೇನೆಂದು ಹೇಳುತ್ತಿದ್ದ ಈ ಗಾಂಧಿ ೧೯ ವರ್ಷದ ಮನುಳೊಂದಿಗೆ ತಮ್ಮ ಹಾಸಿಗೆ ಹತ್ತಿರದ ಹುಲ್ಲಿನ ಹಾಸಿಗೆ ಮೇಲೆ ಮನುಳೊಂದಿಗೆ ಪ್ರತಿ ರಾತ್ರಿ ಕಳೆಯುವುದಾಗಿ ಗಾಂಧಿ ಪ್ರಕಟಿಸಿದರು" ಎಂದು

ಹೇಳುವ ಇವರು ಇದನ್ನೂ ಗಾಂಧಿಯೇ ಸ್ವಯಂ ಪ್ರಕಟಿಸಿದ್ದ ಎನ್ನುವುದನ್ನು ಮರೆಯಬಾರದಲ್ಲ. ಗಾಂಧಿಯ ಈ ನಿಲುವನ್ನು ವಿರೋಧಿಸಿ ಪತ್ರಿಕೆಯ ಇಬ್ಬರು ಸಂಪಾದಕರು ಪತ್ರಿಕೆ ತ್ಯಜಿಸಿದರು. ಯುವತಿಯರಿಂದ ಆಯಿಲ್ ಮಸಾಜ್ ಮಾಡಿಸಿಕೊಳ್ಳುತ್ತಿದ್ದ ಗಾಂಧಿ ಎಂದು ಬರೆದು ಗಾಂಧಿಯನ್ನೊಬ್ಬ ವಿಕೃತ ಕಾಮಿಯಂತೆ ಬಿಂಬಿಸಿದರು. ‘ಅರೆನಗ್ನ ಫಕೀರ’ ಎಂಬ ಚರ್ಚಿಲ್‌ನ ಟೀಕೆಗೆ ಉತ್ತರಿಸಿ ನಗ್ನತೆ ಮುಗ್ಧತೆಯ ಪರಮಹಂತ; ಅದರ ಸಾಧನೆಯೇ ತನ್ನ ಗುರಿ ಎಂದು ಸ್ವಯಂ ಗಾಂಧಿ ಹೇಳಿದ್ದನ್ನೂ ಗಮನಿಸಬೇಕು. ಮನುವಿಳೊಂದಿಗಿನ ತನ್ನ ಕಾರ್ಯ ಕುರಿತು ವಿವರಿಸಿ ಸುಮಾರು ೧೨ ಪತ್ರಗಳನ್ನು ಜವಾಬ್ದಾರಿಯುತ ಗೆಳೆಯರಿಗೆ ಬರೆದಿದ್ದಾನೆ.

ಇಷ್ಟರಲ್ಲಿ ಸುಚೇತಾ, ಆಚಾರ್ಯ ಕೃಪಲಾನಿ, ಲಕ್ಷ್ಮೀದಾಸ ಅಸರ್, ಕೆ. ಮುನ್ಸಿ, ಲೇಡಿ ಮೌಂಟ್‌ಬ್ಯಾಟನ್, ಸುಹ್ರಾವರ್ದಿ, ನೆಹರು, ಪಟೇಲ ಎಲ್ಲರೂ ಬಂದರು. ಇದೇ ೨೭, ೨೮ರಂದು ಲಖನೌ ಮತ್ತು ಮದ್ರಾಸುಗಳಲ್ಲಿ ಝಾಕೀರ್ ಹುಸೇನ್ ಮುಸ್ಲಿಂ ಮಹಾಸಭೆಯೊಂದನ್ನು ಏರ್ಪಡಿಸಿದ್ದಾರೆ. ಆದರೆ ಇದರ ಹಿಂದೆ ಪಾಕಿಸ್ತಾನದ ಮುಸ್ಲಿಂಲೀಗ್‌ನ ಪ್ರೇರಣೆ ಇದೆ ಎನ್ನುವ ಸಣ್ಣ ಸಂಶಯ ಹುಟ್ಟಿದೆ. ಈ ಕಾರಣಕ್ಕಾಗಿಯೇ ಇರಬಹುದೇನೋ, ಗಾಂಧಿ ಬಹಳ ಹಿಂದೆಯೇ ಪಾಕಿಸ್ತಾನದ ರಚನೆಯ ನಂತರ ಭಾರತದಲ್ಲಿ ಇನ್ನು ಮುಂದೆ ಮುಸ್ಲಿಂಲೀಗ್ ಯಾವುದೇ ಕಾರಣಕ್ಕೂ ಒಂದು ರಾಜಕೀಯ ಸಂಘಟನೆಯಾಗಿ ಮುಂದೆವರಿಯಬಾರದು ಎಂದು ಸ್ಪಷ್ಟವಾಗಿ ಹೇಳಿದ್ದ. ರಾಷ್ಟ್ರನಿಷ್ಠ ಮುಸ್ಲಿಂರು ಕಾಂಗ್ರೆಸ್ಸನ್ನು ಸೇರಿಕೊಳ್ಳಬೇಕು ಎಂದಿದ್ದ. ಆದರೆ ಈಗ ಎಲ್ಲವೂ ನಡೆದುಹೋಗಿದೆ. ಕನಿಷ್ಟ ಈ ಮುಸ್ಲಿಂ ಮಹಾ ಸಭೆಯಲ್ಲಾದರೂ ನಮ್ಮ ರಾಜಕಿಯ ನಾಯಕರ ವಿಚಾರಗಳು ಸ್ಪಷ್ಟವಾಗಿರಬೇಕೆಂದು ಗಾಂಧಿ ತಿಳಿಸುತ್ತಾನೆ. ಮುಸ್ಲಿಮರು ತಮ್ಮ ೩೦ ವರ್ಷಗಳ ಹಿಂದೂಗಳೊಂದಿಗಿನ ರಾಜಕೀಯ ಒಡನಾಟದಿಂದ ಏನಾದರೂ ಕಲಿತಿದ್ದರೆ, They should not worry that they are in a minority in the Indian Union and that the majority in Pakistan can be of no help to them. If the Muslims of India see the virtues of being a minority, they can show the beauties of Islam in their own way. They must remember that the best days of Islam were the days of the Prophet Mohammed’s minority in Mecca.

ಗಾಂಧಿ ಟ್ರಾನ್ಸವಾಲ್ ಸರಕಾರದ ವಿರುದ್ಧದ ತನ್ನ ಹೋರಾಟದ ಆ ದಿನದಿಂದ ಇಂದಿನವರೆಗೂ ನಿರಂತರವಾಗಿ ಬೆಂಬಲಿಸಿದ್ದು ಅಲ್ಪಸಂಖ್ಯಾತರನ್ನ. ಅಲ್ಪಸಂಖ್ಯಾತರು ಸಾಮಾನ್ಯವಾಗಿ ತಪ್ಪುಗಳನ್ನು ಮಾಡುವುದಿಲ್ಲ; ಮಾಡಿದರೆ ತಕ್ಷಣ ತಿದ್ದಿಕೊಳ್ಳುತ್ತಾರೆ. ಆದರೆ ಬಹುಸಂಖ್ಯಾತ ಜನಾಂಗ ಅಧಿಕಾರದ ದರ್ಪದಲ್ಲಿ ಹೋಗಿಬಿಟ್ಟರೆ ಅದನ್ನು ಸರಿ ದಾರಿಗೆ ತರುವುದು ಬಹಳ ಕಷ್ಟ ಎನ್ನುವುದು ಗಾಂಧಿಯ

ವಾದ. ಗಾಂಧಿಯ ಈ ಚರ್ಚೆಗೆ ಮುಸ್ಲಿಮರಿಂದಲೂ ವ್ಯಾಪಕ ಬೆಂಬಲ ಸಿಕ್ಕಿತು. ಕೆಲವರು ಗಾಂಧಿಗೆ ಕೃತಜ್ಞತಾ ಪತ್ರವನ್ನೂ ಬರೆದರು. ಉದಾಹರಣೆಗೆ ಮುಂಬಯಿಯ ಶಿಯಾ ಸಂಘಟನೆಯ ಅಧ್ಯಕ್ಷ ಹುಸೇನ್‌ಭಾಯ್ ಲಾಲಜಿ ತನ್ನ ಈ ಮಾತುಗಳಿಂದ ಗಾಂಧಿ ಅಲ್ಪಸಂಖ್ಯಾತರಿಗೆ ಯಾವ ರೀತಿ ಯೋಗ್ಯ ಮಾರ್ಗದರ್ಶನ ಮಾಡಿದ್ದಾನೆ ಎನ್ನುವುದನ್ನು ಬರೆಯುತ್ತಾರೆ: "Not only all true Muslims, also all Indian nationalists will feel grateful to Mahatma Gandhi for his proper exposition of the situation between the different classes and for his right advice to us. The Muslims in every town and village of India should hold meetings and sincerely propagate these statements."

ಆದರೆ ಈ ಮಾತನ್ನು ಎಲ್ಲರೂ ಒಪ್ಪಬೇಕಲ್ಲ? ಗಾಂಧಿಯ ದೃಷ್ಟಿಯಲ್ಲಿ ಅಲ್ಪಸಂಖ್ಯಾತರೆಂದರೆ ಮುಸ್ಲಿಮರು ಮಾತ್ರ. ಅವರನ್ನು ಓಲೈಸುವ ಮೂಲಕ ಭಾರತದ ಎಲ್ಲ ಅಲ್ಪಸಂಖ್ಯಾತರಿಗೂ ತಾನು ನ್ಯಾಯ ಒದಗಿಸಿದ್ದೇನೆ ಎಂದು ತಿಳಿದುಕೊಂಡಿದ್ದರೆ ಅದಕ್ಕಿಂತ ಅನ್ಯಾಯ ಮತ್ತೊಂದಿಲ್ಲ. ಅಂತಹ ಅನ್ಯಾಯವನ್ನು ನಮ್ಮ ಪಾಲಿಗೆ ಈ ಮತಿಗೇಡಿ ಮುದುಕ ಮಾಡಿದ್ದಾನೆ ಎಂದು ನಿರಂತರವಾಗಿ ಸಿಖ್ ಯುವಕರು ಗಾಂಧಿಯನ್ನು ಆಪಾದಿಸುತ್ತಲೇ ಇದ್ದಾರೆ. ಈ ದೇಶದಲ್ಲಿ ಸಿಖ್‌ರು ಅಲ್ಪಸಂಖ್ಯಾತರೇ. ಅತಿ ಹೆಚ್ಚು ಹತ್ಯಾಕಾಂಡ, ಬಲಿದಾನ, ಮಾನಹಾನಿಗಳ ಅನುಭವಿಸಿದವರು. ಆದರೆ ಅವರಿಗೆ ಈ ಗಾಂಧಿಯಿಂದ ಆದ ಲಾಭವೇನು? ಇಂದಿಗೂ ೨೬ ಸಾವಿರ ದೋಚಲ್ಪಟ್ಟ ತಮ್ಮ ಮಹಿಳೆಯರ ಬಗೆಗೆ ಈತ, ಈತನ ಸರಕಾರ ಮಾಡಿರುವುದಾದರೂ ಏನು? ಇಂತಹ ನೂರಾರು ಪ್ರಶ್ನೆಗಳಿವೆ.

ಬುಧವಾರ ಡಿಸೆಂಬರ ೨೪ರ ಸಾಯಂಕಾಲದ ಸಭೆಯ ನಂತರ ಆ ದಿನ ಸಿಖ್ ಸಂದರ್ಶಕರೊಂದಿಗೆ ತನಗಾದ ಅನುಭವವನ್ನು ಗಾಂಧಿ ಜನರೊಂದಿಗೆ ಹಂಚಿಕೊಂಡಿದ್ದಾನೆ. "ಇಂದು ಮಧ್ಯಾಹ್ನ ನನ್ನನ್ನು ಕಾಣಲು ಕೆಲವು ಸಿಖ್ ಯುವ ಮುಖಂಡರು ಬಂದಿದ್ದರು. ಅವರು ನನ್ನನ್ನು ಅಲ್ಪಸಂಖ್ಯಾತರಾದ ಸಿಖ್‌ರ ವೈರಿಯೆಂದು ಪರಿಗಣಿಸಿದ್ದಾರೆ. ಮರ ಹಣ್ಣುಗಳಿಂದ ಗುರುತಿಸಲ್ಪಡುತ್ತದೆ. ಹಾಗೆಯೇ ದೇವರಲ್ಲದ ಮನುಷ್ಯನ ಕ್ರಿಯೆ ಅವನಿಗೆ ಸಿಗುವ ಫಲಿತಾಂಶದ ಮೂಲಕ ಗೊತ್ತಾಗುತ್ತದೆ. ಭಾರತದ ಸ್ವಾತಂತ್ರ್ಯದ ಪ್ರತಿಫಲವೇನು ಎಂದು ಕೇಳಿದರೆ ಹಿಂದೂ-ಸಿಖ್ ಮತ್ತು ಮುಸ್ಲಿಮರ ಮಧ್ಯೆ ಕೋಮು ಗಲಭೆ ಎಂದೇ ಉತ್ತರಿಸಬೇಕಾಗುತ್ತದೆ. ಈಗಾಗಲೇ ನಾನು ಒಪ್ಪಿಕೊಂಡಂತೆ ಅಹಿಂಸೆಯ ಮೂಲಕ ನಾವು ಸ್ವರಾಜ್ಯವನ್ನು ಗಳಿಸಿದೆವು ಎನ್ನುವ ನನ್ನ ವಾಕ್ಯವನ್ನು ಹಿಂತೆಗೆದುಕೊಂಡಿದ್ದೇನೆ. ದೇವರು ನನ್ನನ್ನು ಕುರುಡನನ್ನಾಗಿಸಿದ್ದ. ಕುರುಡರು, ಕುಂಟರು, ಹೇಡಿಗಳು ಅಹಿಂಸಾವಾದಿಗಳಾಗಲು

ಸಾಧ್ಯವಿಲ್ಲ. ಶುದ್ಧ ಅಹಿಂಸೆಯಿಂದ ಪುಟ್ಟ ಮಗು ಬೇಕಾದರೂ ಪ್ರಪಂಚವನ್ನು ಎದುರಿಸೀತು. ಆದರೆ ತಮ್ಮೊಳಗೇ ಅಂಗಹೀನರಾದವರಿಗೆ ಅಂಗಾಂಗ ಯಾರು ಕೊಡಬೇಕು? ನಾವು ಸ್ವರಾಜ್ಯಕ್ಕಾಗಿ ಬ್ರಿಟಿಷರನ್ನು ಕೊಲ್ಲಲಿಲ್ಲ. ಆದರೆ ಕೊಲ್ಲುವ ಎಲ್ಲ ಆಲೋಚನೆಯನ್ನೂ ಮಾಡಿದ್ದೆವು. ನಾವು ಅವರನ್ನು ಕೊಲ್ಲಲಿಲ್ಲ ಯಾಕೆಂದರೆ ನಮ್ಮ ಬಳಿ ಆ ಶಕ್ತಿಯೂ ಇರಲಿಲ್ಲ; ಸೈನ್ಯವೂ ಇರಲಿಲ್ಲ. ಇಂತಹ ಹಿಂಸೆಯ ಆಲೋಚನೆಯಿಂದ ಸ್ವಾತಂತ್ರ್ಯ ಪಡೆದುದಕ್ಕಾಗಿಯೇ ನಮ್ಮ ಸ್ಥಿತಿ ಹೀನಾಯವಾಗಿದೆ.

ಸಿಖ್ ಸಹೋದರರು ನಾನು ಅವರ ವೈರಿ ಎಂದು ಹೇಳಿದಾಗ ನನಗೆ ನಗೆ ಬಂದೇ ಬರುತ್ತದೆ. ನನ್ನ ದೃಷ್ಟಿಯಲ್ಲಿ ಹಿಂದೂ ಮತ್ತು ಸಿಖ್ ಇಬ್ಬರೂ ಒಂದೇ. ನಾನು ಪವಿತ್ರ ಗ್ರಂಥವಾದ ಗ್ರಂಥ ಸಾಹೇಬ್ ಓದಿದ್ದೇನೆ. ಆದರೆ ಕುಡಿತ ಮತ್ತು ಜೂಜಿನಲ್ಲಿ ತೊಡಗಿರುವ ಸಿಖ್‌ರು ಆ ಧರ್ಮದ ಮೌಲ್ಯಗಳೊಂದಿಗೆ ಬದುಕುತ್ತಿದ್ದಾರೆಯೆ? ಹಾಗಂತ ಇಡೀ ಸಮೂಹವೇ ಹೀಗೆ ಮಾಡುತ್ತಿದೆ ಎಂದು ನಾನು ಹೇಳುತ್ತಿಲ್ಲ. ಇಂತಹ ತಪ್ಪುಗಳನ್ನು ಮಾಡುವವರು ಹಿಂದೂ-ಮುಸ್ಲಿಮರಲ್ಲೂ ಇದ್ದಾರೆ. ಹಿಂದೂ ಮತ್ತು ಸಿಖ್‌ರಲ್ಲಿ ಸಾಕಷ್ಟು ಶೌರ್ಯ, ಧೈರ್ಯ ಇದೆ. ನಮ್ಮ ಬಳಿ ಖಡ್ಗಗಳಿವೆ. ಆದರೆ ಅವುಗಳನ್ನು ಯೋಗ್ಯ ಕಾರ್ಯಕ್ಕೆ ಮಾತ್ರ ಬಳಸಬೇಕಿದೆ. ನನ್ನ ಬಂಧುಗಳು ಎಂದಿಗೂ ಅಪರಾಧಿಗಳಾಗಬಾರದು ಎನ್ನುವುದು ನನ್ನ ಕಳಕಳಿ. ತಾನು ಅಪರಾಧ ಮಾಡುವ ಮೂಲಕ ಮನುಷ್ಯ ತನ್ನ ಧರ್ಮಕ್ಕೂ ಕಳಂಕ ತರುತ್ತಾನೆ.

ನಾನು ಯಾರ ವಿರೋಧಿಯೂ ಅಲ್ಲ. ನನಗೆ ತಿಳಿದುದ್ದನ್ನ ಹೇಳುತ್ತ ಬಂದಿದ್ದೇನೆ. ಆದರೆ ನಿಮ್ಮ ಸ್ವಾತಂತ್ರ್ಯ ನಿಮ್ಮೊಂದಿಗಿದೆ. ನಿನ್ನೆಯಷ್ಟೇ ಹಿಂದೂ ಪ್ರಚಾರ ಸಭೆಯ ಸೆಕ್ರೆಟರಿಯಾದ ಅಮೃತಲಾಲ್‌ರಿಗೂ ನಾನಿದನ್ನೇ ಹೇಳಿದೆ. ಅವರಿಗೆ ನನ್ನ ಆಶೀರ್ವಾದ ಬೇಕಿತ್ತು. ಆದರೆ ನಾನು ಅವರಿಗೆ ಬರೆದೆ: why need you worry whether or not I give my blessings? Even if I disapprove of what you propose, you should do what you believe to be a good thing. Even if I give my approval, you should never do what you believe to be wrong. This I strongly feel. The question of my blessings, therefore, does not arise. Do unhesitatingly what seems right to you.

ಇದೇ ಮಾತನ್ನು ನಾನು ಎಲ್ಲರಿಗೂ ಹೇಳಲಿಷ್ಟಪಡುತ್ತೇನೆ. ಒಬ್ಬ ಮನುಷ್ಯನ ಸೀಮಿತ ಮತ್ತು ಸಮಯೋಚಿತ ತಿಳುವಳಿಕೆಯ ವ್ಯಾಪ್ತಿಯಲ್ಲಿ ಮಾಡಬಹುದಾದಷ್ಟನ್ನು ನಾನು ಮಾಡಿದ್ದೇನೆ. ಯಾರನ್ನೋ ಓಲೈಸುವ, ಇನ್ಯಾರನ್ನೋ ಹಿಂಸಿಸುವ ಪೂರ್ವನಿರ್ಧರಿತ ಆಲೋಚನೆಗಳಿಂದ ನಾನು ಯಾವ

ಕ್ರಿಯೆಯನ್ನೂ ಮಾಡಿಲ್ಲ. ಈ ನಂತರವೂ ಸಿಖ್ ಬಂಧುಗಳು ನನ್ನನ್ನು ತಮ್ಮ ವೈರಿಯೆಂದೇ ಪರಿಗಣಿಸುವುದಾದರೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಅವರು ನನ್ನ ವೈರಿಗಳಲ್ಲ."

ಡಿಸೆಂಬರ ೨೫, ಕ್ರಿಸ್‌ಮಸ್ ಸಮೀಪಿಸುತ್ತಿದೆ. ಈಗಾಗಲೇ ಗಾಂಧಿ ಧರ್ಮದ ವಿಷಯದಲ್ಲಿ ಯಾವುದು ಯೋಗ್ಯ? ಯಾವುದು ಅಯೋಗ್ಯ? ಎನ್ನುವುದನ್ನು ಅಲ್ಪಸಂಖ್ಯಾತರಿಗೆ ಹಾಗೂ ಬಹುಸಂಖ್ಯಾತರಿಗೆ ತಿಳಿಸಿದ್ದಾನೆ. ದೇಶವನ್ನು ಶತಮಾನಗಳ ಕಾಲ ಗುಲಾಮಗಿರಿಗೆ ತಳ್ಳಿದ್ದರೂ ಗಾಂಧಿ ಕ್ರಿಶ್ಚಿಯನ ಬಂಧುಗಳಿಗೆ ಕೆಲವು ಎಚ್ಚರಿಕೆಯ ಮಾತುಗಳೊಂದಿಗೇ ಶುಭಾಷಯಗಳನ್ನೂ ಕೋರುತ್ತಾನೆ. ದೇಶದಲ್ಲಿರುವ, ಪ್ರಪಂಚದುದ್ದಕ್ಕೂ ವ್ಯಾಪಿಸಿರುವ ಕ್ರಿಶ್ಚಿಯನ್ನರಿಗೆ ನಿಮ್ಮ ಎದೆಯೊಳಗಿಲ್ಲದ ಚರ್ಚನ್ನ ಹೊರಗಡೆ ಹುಡುಕಿ ಆಯುಷ್ಯ ಹಾಳು ಮಾಡಿಕೊಳ್ಳಬೇಡಿ. ಕ್ರಿಸ್‌ಮಸ್ ಎಂದರೆ ಬರೀ ಕುಡಿತಕ್ಕಾಗಿ ಒಂದು ಅವಕಾಶವಲ್ಲ. ಬದಲಾಗಿ ಜೀಸಸ್‌ನ ತ್ಯಾಗ ಬಲಿದಾನಗಳನ್ನು ಅರಿತುಕೊಳ್ಳುವ ಸಂದರ್ಭ ಎಂದಿದ್ದಾನೆ. ನಮ್ಮ ದೇಹಗಳೇ ಚರ್ಚುಗಳಾಗಿ, ನಮ್ಮ ಆತ್ಮವನ್ನೇ ದೇವರಾಗಿ ಪ್ರತಿಷ್ಠಾಪಿಸಿದರೆ ಅನ್ಯದೇವರಿಗಾಗಿ ಹಲುಬಬೇಕಿಲ್ಲ ಎನ್ನುತ್ತಾನೆ.

ಗಾಂಧಿಯ ಈ ಸಂದೇಶ ಅತ್ಯಂತ ಅರ್ಥಪೂರ್ಣವಾಗಿತ್ತು ಎನ್ನುವುದನ್ನು ಸಮರ್ಥಿಸುವಂತೆ ಇದೇ ದಿನ ಆಯರ್ಲಂಡ್‌ನ ಪತ್ರಿಕೆಗಳಲ್ಲಿ ಒಂದು ಸುದ್ದಿ ಪ್ರಕಟವಾಗಿದೆ. ೯೧ ವರ್ಷದ ವಯಸ್ಸಿನ ಹಿರಿಯ ಸಾಹಿತಿ, ನಾಟಕಕಾರ ಜಾರ್ಜ್ ಬರ್ನಾರ್ಡ ಷಾ ಒಂದು ಹೇಳಿಕೆಯನ್ನು ನೀಡಿದ್ದಾರೆ. ಗಾಂಧಿಯಂತೆ ವ್ಯಸನಮುಕ್ತ ಬಾಳನ್ನು ಬಾಳುತ್ತಿದ್ದ ಷಾ ತನ್ನ ದೇಶದಲ್ಲಿ ಪಾನನಿಷೇಧ ಘೋಷಣೆಯಾಗಬೇಕೆಂದು ಅಲ್ಲಿಯ ಸರಕಾರವನ್ನು ಒತ್ತಾಯ ಮಾಡಿದ್ದಾರೆ.

ಮನುಳ ಪ್ರಶ್ನೆಯ ನಂತರವೂ, ಸಿಖ್‌ರ ಪ್ರತಿರೋಧದ ನಂತರವೂ, ಕೆಲವರ ಹೊಗಳಿಕೆ, ಇನ್ನೂ ಕೆಲವರ ತೆಗಳಿಕೆಯ ನಂತರವೂ, ಗಾಂಧಿ ಬದಲಾಗಿಲ್ಲ. ಬದಲಾಗುವುದೂ ಇಲ್ಲ. ಆತ ಹೇಳಿದ್ದನ್ನೆ ಮತ್ತೆ ಮತ್ತೆ ಹೇಳುತ್ತಿದ್ದಾನೆ. ಯಾಕೆಂದರೆ ತನ್ನ ಬದುಕಿನ ಹಣತೆಯಲ್ಲಿ ಎಣ್ಣೆ ತೀರುತ್ತಿದೆ ಎನ್ನುವ ಭಾವ ಗಾಂಧಿಯನ್ನು ಆವರಿಸಿಕೊಂಡಿದೆ. ಏಳೆಂಟು ದಶಕಗಳ ನಿರಂತರ ಸುಟ್ಟುಕೊಳ್ಳುವಿಕೆ ಯಾವ ಬೆಳಕನ್ನು ಬೀರೀತು? ಅದ್ಯಾರಿಗೆ ದಾರಿಯಾಯಿತು? ಆತನಿಗೂ ತಿಳಿಯುತ್ತಿಲ್ಲ. ಮಾತು ಬಿಟ್ಟರೆ ಈಗ ಆತನ ಬಳಿ ಮತ್ತೊಂದು ಸಾಧನವಿಲ್ಲ. ಮೊದಲಿನಂತೆ ಮತ್ತೆ ಚಳುವಳಿಗೆ ಧುಮುಕಲು ಆತನ ವಯಸ್ಸು ಮೂವತ್ತಲ್ಲ. ಇದು ಬಾಳಿನ ಮುಸ್ಸಂಜೆಯ ಸಮಯ. ಎಲ್ಲವೂ ಮಸುಕು ಮಸುಕು. ಆತ ನಂಬಿದ ದೈವ ಒಂದೇ ಆತನ ಪಾಲಿನ ಶಕ್ತಿ, ಸಹಾಯ, ಅವಲಂಬನೆ ಎಲ್ಲ-ಎಲ್ಲವೂ.

ಗುರುವಾರ, ಡಿಸೆಂಬರ್ ೨೪ ನಸುಕಿನ ೫ ಗಂಟೆಗೆ ಬಾಧಿಸುವ ಚಳಿಯಿಂದ ಬಚಾವಾಗಲು ಒಂದಿಷ್ಟು ಬಿಸಿ ನೀರು ಕುಡಿದು, ಗಾಂಧಿ ಒಂದು ಮಹತ್ವದ ಪತ್ರವನ್ನು ಬರೆಯಲು ಕುಳಿತಿದ್ದಾನೆ. ಈ ಪತ್ರ ಗುಜರಾತಿನಲ್ಲಿರುವ ತನ್ನ ಸ್ನೇಹಿತನಿಗೆ–

"ಬಂಧು,

ಮನು ನನ್ನನ್ನು ಹೇಗೆ ಗಮನಿಸಿದ್ದಾಳೆನ್ನುವುದನ್ನು ನಿನಗೀಗಾಗಲೇ ತಿಳಿಸಿದ್ದೇನೆ. ನಿನ್ನೊಂದಿಗೆ ನನ್ನ ಸದ್ಯದ ಮನೋವಿಚಾರಗಳನ್ನು ಹಂಚಿಕೊಳ್ಳಲು ಕುಳಿತಿದ್ದೇನೆ.

ರಾಮನಾಮವನ್ನ ಉಸಿರಾಡುವ ನನ್ನನ್ನು ಯಾರೂ ಹಿಂಸಿಸಲು ಸಾಧ್ಯವಿಲ್ಲ. ಇದು ನನ್ನ ಅಚಲ ನಂಬಿಕೆ. ನನ್ನ ಸುತ್ತಲಿನ ಪ್ರಪಂಚ ಹೊತ್ತಿ ಉರಿಯುತ್ತಿದ್ದರೂ ಶಾಂತನಾಗಿ ಉಳಿಯುವ ಶಕ್ತಿ ನನಗೆ ಬಂದುದೇ ಈ ರಾಮನಾಮದಿಂದ. ಈ ನಾಮಸ್ಮರಣೆಗಾಗಿಯೇ ನಾನು ಪ್ರಾತಃಕಾಲ ಎದ್ದು ಕುಳಿತುಕೊಳ್ಳುವುದು. ನಾನು ಆತ ಕುಣಿಸಿದಂತೆ ಕುಣಿಯುವ ಒಂದು ಸಾಮಾನ್ಯ ಗೊಂಬೆ. ಈ ಪ್ರಪಂಚದಲ್ಲಿ ನಾವು ಕ್ರಿಯೆಗೆ ತೊಡಗಿಕೊಂಡಿರುವುದೇ ಆತನ ಆಜ್ಞೆಯಿಂದಾಗಿ. ಅವನ ಆಜ್ಞೆಯಿಲ್ಲದೇ ಇಲ್ಲಿ ಒಂದು ಹುಲ್ಲು ಕಡ್ಡಿಯೂ ಅಲುಗದು. ಆದರೂ ಮನುಷ್ಯನ ಸೊಕ್ಕನ್ನು ಗಮನಿಸು. ಎಲ್ಲವೂ ತಾನೇ, ತನ್ನಿಂದಲೇ, ತನಗಾಗಿಯೇ ಎನ್ನುವ ದುರಹಂಕಾರದ ಅಬೇದ್ಯ ಕೋಟೆಯನ್ನು ನಿರ್ಮಿಸಿಕೊಂಡಿದ್ದಾನೆ. ಆದರೆ ಈತನ ಈ ಅಜ್ಞಾನಕ್ಕೆ ದೇವರು ಸುಮ್ಮನೆ ನಗುತ್ತಾನಷ್ಟೆ.

ನನ್ನ ಈ ಸಾಲುಗಳ ಮೂಲಕ ನಾನು ಈಗ ಯಾವ ಮನಸ್ಥಿತಿಯಲ್ಲಿದ್ದೇನೆ ಎನ್ನುವುದು ನಿನಗೆ ಸ್ಪಷ್ಟವಾಗಬಹುದು ಅಥವಾ ಹರಿಜನದಲ್ಲಿ ನಾನು ಬರೆಯುವ ಲೇಖನಗಳಲ್ಲಿಯೂ ನನ್ನನ್ನು ನೀನು ನೋಡಬಹುದು. ಭಾಷೆಯಲ್ಲಿ ನಾನು ಅತ್ಯಂತ ಸರಳ. ರಾಜಕೀಯ ವಿಚಾರಗಳಲ್ಲಿಯೂ ಕೂಡ ನಾನು ನೇರ ಮತ್ತು ಸ್ಪಷ್ಟ. ದೇವರಿಚ್ಛೆ ಅದೇನಿದೆಯೋ ನೋಡೋಣ."

ಈ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ಹಾಜರಿದ್ದ ಭಾರತದ ಪ್ರಧಾನಿ ಪಂಡಿತ್ ನೆಹರು, ಉಪಪ್ರಧಾನಿ ಪಟೇಲ್ ಹಾಗೂ ಶೇಖ್ ಅಬ್ದುಲ್ಲಾರ ಸಮ್ಮುಖದಲ್ಲಿಯೇ ಗಾಂಧಿ ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ತನ್ನ ವಿಚಾರವನ್ನು ಸ್ಪಷ್ಟವಾಗಿ ತಿಳಿಸುತ್ತಾನೆ. ಪಾಕಿಸ್ತಾನ ಕಾಶ್ಮೀರದ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಲು ನಮ್ಮಿಬ್ಬರ ಮಧ್ಯ ಮೂರನೆಯವರ ಅವಶ್ಯಕತೆ ಇದೆ ಎಂದು ಪದೇ ಪದೇ ಹೇಳುತ್ತಿದೆ. ಆದರೆ ಮೊದಲಿನಿಂದಲೂ "ಈ ವಿಚಾರವನ್ನು ನಾನು ವಿರೋಧಿಸುತ್ತಾ ಬಂದಿದ್ದೇನೆ. ನಮ್ಮ ಮುಂದೆ ಸಾಕಷ್ಟು ಸಮಸ್ಯೆಗಳಿವೆ. ಕಾಶ್ಮೀರದಲ್ಲಿ

ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರಿದ್ದಾರೆ, ಜಮ್ಮುವಿನಲ್ಲಿ ಹಿಂದೂಗಳಿದ್ದಾರೆ ಎಂದುಕೊಂಡು ಮತ್ತೆ ವಿಭಜನೆಯ ಆಲೋಚನೆ ಮಾಡುವುದೇ? "Kashmir simply can not be partitioned."

ಇದೇ ಸಾಯಂಕಾಲ ದೇಶದಲ್ಲಿಯ ಹಳ್ಳಿಗಳ ಸ್ಥಿತಿ–ಗತಿ, ಹಳ್ಳಿಗರ ಉಪಜೀವನ ೬೦ ವರ್ಷಗಳಿಂದ ಖಾದಿ ಜನರನ್ನು ಒಗ್ಗೂಡಿಸಿದ ರೀತಿ ಮತ್ತು ವರ್ತಮಾನದಲ್ಲಿಯೂ ಅದರ ಅವಶ್ಯಕತೆಯನ್ನು ಕುರಿತು ಗಾಂಧಿ ಮಾತನಾಡುತ್ತಾನೆ. ಖಾದಿಯನ್ನು, ಚರಕವನ್ನು ನಿರ್ಲಕ್ಷಿಸಿದರೆ ದೇಶಕ್ಕೆ ಖಂಡಿತ ಉಳಿಗಾಲವಿಲ್ಲ ಎನ್ನುತ್ತಾನೆ. ಒಂದು ಸಣ್ಣ ಎಳೆ ಈ ಪ್ರಪಂಚವನ್ನು ಹೇಗೆ ಶ್ರೀಮಂತಗೊಳಿಸೀತು? ಎಂದು ನೀವು ಕೇಳಿದರೆ ಇಲ್ಲಿದೆ ಗಾಂಧಿಯ ಉತ್ತರ: "Fragile as this thread is, it has the strength to bind not only India, but the entire world. My purpose in laboring the point is simply this: if India is to live and live well, there is no alternative to the constructive programme. Otherwise, our fall will be quick."

ಇಂದಿಗೂ ಗಾಂಧಿಯ ಈ ಮಾತುಗಳು ಅನ್ವಯವಾಗಲಿಲ್ಲ. ಗಾಂಧಿಯ ಭಾವ ಚಿತ್ರ ನಮ್ಮ ಸರಕಾರಿ ಕಡತಗಳಲ್ಲಿ ಅನಿವಾರ್ಯವಾದಂತೆ ಆತನ ಕನಸುಗಳು, ಆಲೋಚನೆಗಳು ಇಲ್ಲಿ ಅನುಶಾಸನಗಳಾಗಲಿಲ್ಲ ಎಂದು ವಿಷಾದದಿಂದ ಹೇಳಬೇಕಲ್ಲವೆ?

❑



ಸಂಭಾಲಕ್ಕೆ ಹೋಗಿಬರುವೆ

ಶುಕ್ರವಾರ, ಡಿಸೆಂಬರ ೨೬ರ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಎಲ್ಲರೂ ಇದ್ದರು. ಇಂಡೊ-ಪಾಕ್ ಗಡಿ ಸಮಸ್ಯೆಗಳನ್ನು ಎತ್ತಿಕೊಂಡು ರಾಮೇಶ್ವರಿ ನೆಹರು ನಿನ್ನೆಯಷ್ಟೆ ಪಾಕಿಸ್ತಾನಕ್ಕೆ ಹೋಗಿಬಂದರು. ಬಲವಂತರಾಯ್ ಮೆಹತಾ ಮತ್ತು ದಿನ್‌ಷಾ ಮೆಹತಾರೊಂದಿಗೆ ಕಾಠೇವಾಡದ ಸಮಸ್ಯೆಗಳ ಚರ್ಚೆಯಾಯಿತು. ಕಾನೂನು ಸಚಿವರು ಕಾಶ್ಮೀರದ ಮೇಲೆ ನಿಗಾ ಇಟ್ಟಿದ್ದಾರೆ. ಸಿಂಧ್‌ನ ನಾಯಕರಾದ ಜೋಯಿತರಾವ್ ಗಿದವಾನಿ ಗಾಂಧಿಯೊಂದಿಗೆ ಮಾತನಾಡಲು ಕಾದು ಕುಳಿತಿದ್ದಾರೆ. ಆದರೆ ಇಂದು ಗಾಂಧಿ ಕೊಡಲಿರುವ ಸಂದೇಶವೇ ಬೇರೆ ಇದೆ. ಯಥಾ ಪ್ರಕಾರ ೫ ಗಂಟೆಗೆ ಪ್ರಾರಂಭವಾದ ಪ್ರಾರ್ಥನೆ ತನ್ನ ನಿಗದಿತ ಸಮಯಕ್ಕೆ ಮುಕ್ತಾಯವಾಯಿತು. ಮುಕ್ತಾಯಕ್ಕೂ ಮುನ್ನ ಗಾಂಧಿಯ ಒಂದು ಹೇಳಿಕೆ:

ನಗುನಗುತ್ತ ಗಾಂಧಿ ಹೇಳಿದ, "ಸಹೋದರರೇ ಸಹೋದರಿಯರೇ,

ನನಗೆ ಖುಷಿಯಾಗಿದೆ, ನಾಳೆ ನಾನು ಸಂಭಾಲಕ್ಕೆ ಹೋಗುತ್ತಿದ್ದೇನೆ. ಜೊತೆಗೆ ನಾಳಿನ ಸಾಯಂಕಾಲದ ಪ್ರಾರ್ಥನೆ ನಿಮ್ಮೊಂದಿಗಾಗುತ್ತಿಲ್ಲವಲ್ಲ ಎಂಬ ಖೇದವೂ ಇದೆ. ಬಹಳ ದಿನಗಳ ನಂತರ ಪ್ರಧಾನಿಗಳು ನನ್ನ ಮೇಲೆ ಕರುಣೆ ತೋರಿಸಿ, ತಿರುಗಾಡಿ ಬರಲು ಅನುಮತಿಸಿದ್ದಾರೆ. ನಾಳಿನ ನನ್ನ ಪ್ರಾರ್ಥನೆ ಸಂಭಾಲದ ನನ್ನ ಹಳ್ಳಿಯ ಬಂಧುಗಳೊಂದಿಗೆ. ಅಲ್ಲಿ ಒಂದು ಗ್ರಾಮ ಪಂಚಾಯತ್ ನಿರ್ಮಾಣವಾಗಿದೆ. ಅದನ್ನ ನೋಡಿ, ಆ ಕುರಿತು ಅವರೊಂದಿಗೆ ಮಾತನಾಡಿ ಬರಬೇಕೆನ್ನುವ ಆಸೆ. ಆದರೆ ಇಲ್ಲಿಂದ ಹೋಗುವ ಮುಂಚೆ ಇಂದಿನ ಈ ಸಭೆಯಲ್ಲಿ ನಾನು ನಿಮಗೆ ತಿಬಿಯಾ ಕಾಲೇಜಿನ ಬಗ್ಗೆ ತಿಳಿಸಲು ಉತ್ಸುಕನಾಗಿದ್ದೇನೆ.

ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಈ ದೇಶದ ಸನಾತನ ಜ್ಞಾನವಾದ ಆಯುರ್ವೇದವನ್ನು ಅಭ್ಯಸಿಸುವ ಸಲುವಾಗಿ ಈ ಕಾಲೇಜಿಗೆ ಸೇರುತ್ತಾರೆ. ಆಶ್ಚರ್ಯವೆಂದರೆ ಯುನಾನಿ, ಅಲೋಪಥಿ ಮತ್ತು ಹೋಮಿಯೊಪಥಿಯನ್ನೂ ಕೂಡ ಇಲ್ಲಿ ಕಲಿಸಲಾಗುತ್ತದೆ. ಹಕಿಂ ಅಝುಮಲ್‌ಖಾನರು ಈ ಕಾಲೇಜಿನ ಸ್ಥಾಪಕರು. ನಿಮಗೆ ತಿಳಿದಿರುವಂತೆ ಅವರು ದೆಹಲಿಯ ಪ್ರಮುಖ ನಾಯಕರೂ ಕೂಡ. ದುರ್ದೈವ ನೋಡಿ, ಇಂದು ಹಿಂದೂಗಳು ಮುಸ್ಲಿಮರನ್ನು ವೈರಿಗಳನ್ನಾಗಿಸಿಕೊಂಡಿದ್ದಾರೆ. ಆದರೆ ಕಾಲೇಜು ಪ್ರಾರಂಭವಾದಾಗ ಈ ಸ್ಥಿತಿ ಇರಲಿಲ್ಲ. ಜಾತ್ಯತೀತವಾಗಿ ಯಾರೂ ಕೂಡ ಇಲ್ಲಿ ಔಷಧ ಶಾಸ್ತ್ರವನ್ನ ಓದಬಹುದಾಗಿತ್ತು. ಕಾಲೇಜು ನಿರ್ಮಾಣಕ್ಕೆ ಎಲ್ಲ ಕೋಮಿನವರೂ ಉದಾರವಾಗಿ ದೇಣಿಗೆಯನ್ನು ಕೊಟ್ಟರು. ಹಿಂದೂ ರಾಜರೂ, ಮುಸ್ಲಿಂ ನವಾಬರೂ ಅದರ ಬೆಳವಣಿಗೆಗೆ ನಿಂತರು. ಡಾ. ಅನ್ಸಾರಿಯಂತೂ ಕಾಲೇಜಿನ ಪ್ರಗತಿಯೇ ತಮ್ಮ ಜೀವನ ಪ್ರಗತಿ ಎಂದುಕೊಂಡರು. ಕಾಲೇಜಿನ ಆಡಳಿತ ಮಂಡಳಿಯಲ್ಲಿ ಹಿಂದೂ ಮುಸ್ಲಿಂ ಎಲ್ಲರೂ ಇದ್ದರು.

ಇಂತಹ ಕಾಲೇಜಿನ ಬಗೆಗೆ ಇಂದು ಒಬ್ಬ ಹಿಂದೂ ಮಿತ್ರ ಬಂದು, ಇನ್ನು ಮುಂದೆ ಕಾಲೇಜಿನ ಗತಿಯೇನು ಎಂದು ಪ್ರಶ್ನಿಸಿದರು. ಸದ್ಯದ ಸ್ಥಿತಿಯಲ್ಲಿ ಕಾಲೇಜನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗಿದೆಯಂತೆ. ಜಾತಿ ಕಾರಣ ದೇಣಿಗೆಗಳು ನಿಂತು ಹೋಗಿವೆ. ಕಾಲೇಜು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದೆ. ಈ ವಿಚಾರವನ್ನ ನಿಮ್ಮೊಂದಿಗೆ ಮಾತನಾಡುವ ಉದ್ದೇಶವಿಷ್ಟೆ. ಒಂದು ವೇಳೆ ಕಾಲೇಜೇನಾದರೂ ನಿಂತು ಹೋದರೆ ಅದಕ್ಕಿಂತಲೂ ಅವಮಾನ ಮತ್ತೊಂದಿಲ್ಲ. ಈ ಸಂದರ್ಭ ಬಾರದಂತೆ ನಾನು ನನ್ನ ಕೈಲಾದ ಮಟ್ಟಿಗೆ ಹೋರಾಡುತ್ತಿದ್ದೇನೆ.

ತಿಬಿಯಾ ಕಾಲೇಜು ಈ ದೇಶದ ಹಿಂದೂ-ಮುಸ್ಲಿಂ ಐಕ್ಯತೆಯ, ಜ್ಞಾನದ ಸಂಕೇತ. ಕಾಲೇಜು ಕರೋಲ್ ಭಾಗದಲ್ಲಿದೆ. ಕರೋಲ್ ಭಾಗಕ್ಕೆ ಬರಲು ಮುಸ್ಲಿಂ ಹುಡುಗ ಹುಡುಗಿಯರು ಈಗ ಭಯಪಡುತ್ತಾರೆ. ಇದು ಸಲ್ಲದು. ಕಾಲೇಜು ಅದರ ದಿವ್ಯ ಪರಂಪರೆಯೊಂದಿಗೆ ತಲೆಯೆತ್ತಿ ನಿಲ್ಲಬೇಕು. ನಾವು ಇಂತಹ ಸಂಸ್ಥೆಗಳನ್ನು ಸಮರ್ಥಿಸದೇ ಹೋದರೆ, ಕಾಯ್ದುಕೊಳ್ಳದೇ ಹೋದರೆ ನಮ್ಮ ವಿನಾಶವನ್ನು ನಾವೇ ಸ್ವಾಗತಿಸಿಕೊಂಡಂತೆ" ಎಂದು ತಿಳಿಸಿದ ಗಾಂಧಿ ಕಾಲೇಜನ್ನು ಪುನರುಜ್ಜೀವನಗೊಳಿಸುವ ಜವಾಬ್ದಾರಿಯನ್ನು ಅಲ್ಲಿರುವ ಕೆಲವು ನಾಯಕರಿಗೆ ವಹಿಸಿದ.

ತಾನು ಇನ್ನು ಸಂಭಾಲಕ್ಕೆ ಹೋಗಲಿರುವುದರಿಂದ ಬಾಕಿ ಉಳಿಯಬಹುದಾಗಿದ್ದ ಪತ್ರಗಳಿಗೆ ಉತ್ತರಿಸುವ ಕೆಲಸಕ್ಕೆ ಗಾಂಧಿ ಇಂದು ಕುಳಿತುಕೊಂಡ. ಶನಿವಾರ, ಡಿಸೆಂಬರ ೨೭ ಸಂಪೂರ್ಣ ಅದರಲ್ಲಿಯೇ ಕಳೆದುಹೋಯಿತು. ಬಂಕಿಮಚಂದ್ರ ಚಟರ್ಜಿಯವರ ಒಂದೇ ಮಾತರಂ ಹಾಗೂ ತಮ್ಮ ಜನಗಣ ಮನಕ್ಕೆ ಶಾಂತಿನಿಕೇತನದ ಸಂಗೀತಗಾರರು, ಕಲಾವಿದರು ಸಂಗೀತ ಸಂಯೋಜನೆ ಮಾಡಿದ್ದಾರೆ. ನೀವು ಒಮ್ಮೆ ಬಂದು ಕೇಳಿ ಹೋಗಬೇಕು ಎಂದು ಟ್ಯಾಗೋರರು ಪತ್ರ ಬರೆದಿದ್ದಾರೆ. ಆದರೆ ಸಂಗೀತದ ಬಗೆಗಿನ ತನ್ನ ಜ್ಞಾನ ಅಷ್ಟಕ್ಕಷ್ಟೆ. ಹೀಗಾಗಿ ಕಲಾವಿದರಾದ ತಾವು ಏನನ್ನು ಮಾಡುತ್ತಿರೋ ಅದು ನನಗೆ ಮುದವನ್ನು ನೀಡುವಂತೆಯೇ ಇರುತ್ತದೆ ಎಂದು ಗಾಂಧಿ ಉತ್ತರಿಸುತ್ತಾನೆ. ಹಾಗೆಯೇ ಸೇವಕರಾಮನನ್ನು ಕುರಿತು ಬೊಂಬಾಯಿಯ ಬಿ.ಜಿ.ಖೇರ್ ಅವರಿಗೆ ಪತ್ರ ಬರೆಯುತ್ತಾನೆ. ಸಿಂಧ್‌ನ ತನ್ನ ಅನುಯಾಯಿ ಸೇವಕರಾಮ ಹೆಸರೇ ಸೂಚಿಸುವಂತೆ ಭಾರತದ ಒಬ್ಬ ಅತ್ಯಂತ ನಿಷ್ಠಾವಂತ ಸಾಮಾಜಿಕ ಕಾರ್ಯಕರ್ತ. ಸಿಂಧನಲ್ಲಿ ಬೇರು ಕಳೆದುಕೊಂಡಿರುವ ಹರಿಜನರಿಗೆ ವಾಸಿಸಲು ಮುಂಬೈ ಪ್ರಾಂತ್ಯದಲ್ಲಿ ಅವಕಾಶ ಮಾಡಿಕೊಡಬೇಕೆಂದು ನನಗೆ ತಿಳಿಸಿದ್ದಾನೆ. ಆದರೆ ನೀವು ಅದಕ್ಕೆ ಸಂಬಂಧ ಪಟ್ಟವರಾಗಿರುವುದರಿಂದ ಸೇವಕರಾಮರ ಈ ಪ್ರಾರ್ಥನೆಯನ್ನು ಪರಿಗಣಿಸಬೇಕೆಂದು ಖೇರ ಅವರಿಗೆ ಗಾಂಧಿ ಕೇಳಿಕೊಳ್ಳುತ್ತಾನೆ.

ಉಳಿದಂತೆ ಇನ್ನೂ ಎರಡು ಪತ್ರಗಳನ್ನು - ಒಂದು ಮನಿಬೆನ್ ಪಟೇಲರಿಗೆ, ಇನ್ನೊಂದನ್ನು ಕಂದುಬಾಯಿ ದೇಸಾಯಿಯವರಿಗೆ ಬರೆಯುತ್ತಾನೆ. ಹಾಗೆಯೇ ಸೂರ್ಯಕಾಂತ ಎನ್ನುವ ಯುವಕನೊಬ್ಬನಿಗೆ ಪತ್ರ ಬರೆದು 'ಸತ್ಯದ ಮಾರ್ಗದಿಂದ ವಿಚಲಿತನಾಗುವ ಯಾವ ಪ್ರಮೇಯವೂ ಇಲ್ಲ' ಎಂದು ಬೆಂಬಲಿಸುತ್ತಾನೆ.

ಪತ್ರಬರಹ, ಮುಂಜಾನೆಯ ವಿಹಾರ, ನಿಸರ್ಗ ಚಿಕಿತ್ಸೆ ಹಾಗೂ ಅಲ್ಪೋಪಹಾರಗಳ ನಂತರ ಗಾಂಧಿ ತನ್ನ ಬಿರ್ಲಾಹೌಸಿನಿಂದ ಕಾರು ಹತ್ತಿ ನೇರವಾಗಿ

ಹೋದದ್ದು ಗೌರ್ನಮೆಂಟ್ ಹೌಸಿಗೆ. ಇಂದು ಮೌಂಟ್‌ಬ್ಯಾಟನ್‌ರ ಅಧ್ಯಕ್ಷತೆಯಲ್ಲಿ ಕಾಶ್ಮೀರದ ಸದ್ಯದ ಸ್ಥಿತಿ–ಗತಿಗಳನ್ನು ಕುರಿತು ಚರ್ಚಿಸುವ ಒಂದು ಮಹತ್ವವಾದ ಸಭೆಯನ್ನು ಏರ್ಪಡಿಸಲಾಗಿದೆ. ಗಾಂಧಿಯೊಂದಿಗೆ ನೆಹರು, ಪಟೇಲ್ ಹಾಗೂ ಇನ್ನೂ ದೇಶದ ಅನೇಕ ಪ್ರಮುಖ ನಾಯಕರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ದೆಹಲಿಯಲ್ಲಿ ಶನಿವಾರ ಮುಂಜಾನೆ ಈ ಎಲ್ಲ ಕ್ರಿಯೆಗಳನ್ನು ಮುಗಿಸಿ ಗಾಂಧಿ ಸಂಭಾಲಕ್ಕೆ ಹೋಗಿ ಮುಟ್ಟಿದಾಗ ನಡು ಮಧ್ಯಾಹ್ನ. ಹಳ್ಳಿಗರೆಲ್ಲ ಹೂ ಗುಚ್ಛಗಳನ್ನು ಕೈಯಲ್ಲಿ ಹಿಡಿದುಕೊಂಡು ರಸ್ತೆಯ ಇಕ್ಕೆಲಗಳಲ್ಲಿ ನಿಂತುಕೊಂಡಿದ್ದರು. ರೈತರು, ಮಕ್ಕಳು, ಮಹಿಳೆಯರು ತಮ್ಮನ್ನೇ ತಾವು ನಂಬಲಾಗದ ಒಂದು ಸ್ಥಿತಿ. ಗಾಂಧಿ ಕಾರಿನಿಂದ ಕೆಳಗಿಳಿದು ಅವರ ಮಧ್ಯದಿಂದ ಸಾಗಿಹೋಗುತ್ತಿರಬೇಕಾದರೆ ಎಲ್ಲರಿಗೂ ಆತನನ್ನು ಮುಟ್ಟಿ ನೋಡುವ ಉತ್ಸಾಹ ಮತ್ತು ಕುತೂಹಲ. ಅಂತೂ ತಮ್ಮ ಪ್ರೀತಿಯನ್ನು ಮನ್ನಿಸಿ ಗಾಂಧಿ ತಮ್ಮ ಹಳ್ಳಿಗೆ ಬಂದನಲ್ಲ ಎನ್ನುವ ಸಮಾಧಾನ. ಕೆಲವರಿಗಂತೂ ದೇವರೇ ಅವರ ಮುಂದೆ ಬಂದು ನಿಂತಿದ್ದರೂ ಇಷ್ಟು ಸಮಾಧಾನವಾಗುತ್ತಿತ್ತೋ ಇಲ್ಲವೊ!

ಸ್ವಾಗತದ ನಂತರ ಗ್ರಾಮ ಪಂಚಾಯತ್‌ನ ಸದಸ್ಯರೆಲ್ಲ ಸೇರಿ ತಾವು ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ವಿವರಣೆ ಕೊಟ್ಟರು. ಪ್ರವಾಸದಿಂದ ಬಳಲಿ ಬಂದಿದ್ದ ಗಾಂಧಿಗೆ ವಿರಾಮಕ್ಕಾಗಿ ಒಂದಿಷ್ಟು ಸಮಯಾವಕಾಶ ಮಾಡಿಕೊಟ್ಟರು. ಗಾಂಧಿ ಈ ವಿಶ್ರಾಂತಿಯ ಅವಧಿಯಲ್ಲಿಯೂ ಹಳ್ಳಿಗರ ಕೆಲವು ಲಿಖಿತ ರೂಪದ ಅಹವಾಲುಗಳನ್ನು, ಕರಕುಶಲದ ಕೆಲವು ವಸ್ತುಗಳನ್ನು ಗಮನಿಸುವ ಕಾರ್ಯವನ್ನು ಪೂರೈಸಿದ. ಸಂಭಾಲಾದಲ್ಲಿಯ ಸಾಯಂಕಾಲದ ಪ್ರಾರ್ಥನಾ ಸಭೆಯನ್ನ ನಿಗಧಿತ ಅವಧಿಗೂ ಸ್ವಲ್ಪ ಮುಂಚೆಯೇ ಪ್ರಾರಂಭಿಸಿದ. ಪ್ರಾರ್ಥನೆಯಲ್ಲಿ ಗಾಂಧಿಗೆ ಇಷ್ಟವಾದ ಬಹುಪಾಲು ಭಜನ್‌ಗಳನ್ನು ಹಳ್ಳಿಯ ಮಕ್ಕಳು, ಮಹಿಳೆಯರು ಮತ್ತು ಅಲ್ಲಿಯ ಗಾಯಕರೇ ಹಾಡಿದರು. ಸಭೆಯ ನಂತರ ಗಾಂಧಿ ಸೇರಿದವರೆಲ್ಲರಿಗೆ ಸಂದೇಶವನ್ನು ಕೊಟ್ಟ.

"ಬಂಧುಗಳೆ, ಎಲ್ಲವನ್ನು ತುಂಬಾ ಮುತುವರ್ಜಿಯಿಂದ ನಡೆಯಿಸಿಕೊಂಡು ಬರುತ್ತಿದ್ದೀರಿ. ಈ ಪ್ರಾರ್ಥನೆಯನ್ನ ಕಾಯ್ದುಕೊಳ್ಳಿ. ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ಮರೆಯದೇ ಪ್ರಾರ್ಥಿಸಿರಿ. ಪ್ರಾರ್ಥನೆ ನಮ್ಮ ಧರ್ಮ. ಚಳಿಗಾಲದಲ್ಲಿ ಸಾಯಂಕಾಲದ ಪ್ರಾರ್ಥನೆಯನ್ನು ೫ ಗಂಟೆಗೆ ಮಾಡಿ. ಕುಳಿತಾಗ, ನಿಂತಾಗ, ಆಹಾರ ಸೇವಿಸುವಾಗ ಮತ್ತು ಮಲಗುವಾಗ ಯಾವಾಗಲೂ ದೇವರ ಧ್ಯಾನ ಮಾಡುತ್ತಿರಬೇಕು. ಈ ದೇಶದಲ್ಲಿ ಸತ್ಯ ಮತ್ತು ಅಹಿಂಸೆಗಳ ಬಗೆಗೆ ಪ್ರತಿಯೊಬ್ಬರೂ ಮಾತನಾಡುತ್ತಾರೆ. ಆದರೆ ನಮ್ಮ ಮಾತು ಒಂದು ಕಡೆ, ಕ್ರಿಯೆ ಮತ್ತೊಂದೆಡೆ ಆಗಿದೆ.

ನಮ್ಮ ನಗರಗಳು ಕೋಮು ಬೆಂಕಿಯಲ್ಲಿ ಸುಟ್ಟು ಹೋಗುತ್ತಿವೆ. ಹಾಗೆ ನೋಡಿದರೆ ಹಳ್ಳಿಯ ಬದುಕು ಒಂದಿಷ್ಟು ಇಂತಹ ಸಂಕುಚಿತತೆಗಳಿಂದ ಮುಕ್ತ. ಹಳ್ಳಿಯಲ್ಲಿರುವ ನೀವು ಧನ್ಯರು.

ಇಲ್ಲಿ ನಾನು ಮಾಡಬೇಕಾದುದೇನೂ ಇಲ್ಲ. ಪಂಚಾಯತನ್ನು ರಚನೆ ಮಾಡಿದವರು ನೀವು. ನಿಮ್ಮನ್ನು ಅಭಿನಂದಿಸಿ ನಿಮ್ಮ ಜ್ಞಾನವನ್ನು, ಮುಗ್ಧತೆಯನ್ನು ನನ್ನೊಂದಿಗೆ ತೆಗೆದುಕೊಂಡು ಹೋಗಲು ಇಂದು ನಿಮ್ಮೊಂದಿಗಿದ್ದೇನೆ. ನೀವು ರಚಿಸಿರುವ ಪಂಚಾಯತ್ ಕೇವಲ ಹೆಸರು ಮಾತ್ರವಾಗಿ ಉಳಿಯದೆ ಒಂದು ಕ್ರಿಯಾಶೀಲ ಸಂಘಟನೆಯಾಗಿ ಕಾರ್ಯತತ್ಪರವಾಗಬೇಕು. ಪೂರ್ವದಲ್ಲಿ ಭಾರತ ಶತಮಾನಗಳಿಂದಲೂ ಹಳ್ಳಿಗಳಲ್ಲಿ ಈ ವ್ಯವಸ್ಥೆಯನ್ನ ಹೊಂದಿತ್ತು. ಗ್ರೀಸ್, ಚೈನಾದಿಂದ ಈ ಕಾರಣಕ್ಕಾಗಿಯೇ ಭಾರತವನ್ನು ಸಂದರ್ಶಿಸಿದ ಅನೇಕ ಪ್ರವಾಸಿಗಳು ತಮ್ಮ ಪ್ರವಾಸ ಕಥನಗಳಲ್ಲಿ ಈ ವಿಚಾರಗಳನ್ನು ದಾಖಲಿಸಿದ್ದಾರೆ. ಅವರೇ ಬರೆದಿರುವಂತೆ ಆವತ್ತು ಹಳ್ಳಿಗಳಲ್ಲಿ ಪಂಚಾಯತ್ ಕ್ರಿಯಾಶೀಲವಾಗಿರುವುದರಿಂದಲೇ ಜನರು ಮನೆಗೆ ಬಾಗಿಲುಗಳನ್ನು ಹಾಕುತ್ತಿರಲಿಲ್ಲ, ಕೀಲಿ ಹಾಕುತ್ತಿರಲಿಲ್ಲ. ಅವುಗಳಿಗೆ ವಿಶ್ವಾಸ ಮತ್ತು ಸೌಹಾರ್ದ ಅಷ್ಟೊಂದು ಅವಿಚ್ಛಿನ್ನವಾಗಿತ್ತು. ಇದೆಲ್ಲ ಸಾವಿರಾರು ವರ್ಷಗಳ ಹಿಂದಿನ ಮಾತಲ್ಲ.

ಇಂದು ಸಂಭಾಲಾದಲ್ಲಿ ಪಂಚಾಯತನ್ನ ಮತ್ತೆ ಅಸ್ತಿತ್ವಕ್ಕೆ ತಂದು ನೀವೂ ಎಲ್ಲರ ಗಮನ ಸೆಳೆದಿದ್ದೀರಿ. ಈ ಮೂಲಕ ನಿಮ್ಮ ಆರೋಗ್ಯವನ್ನು ಗಟ್ಟಿಯಾಗಿಯೂ ಹಳ್ಳಿಯನ್ನು ಸ್ವಚ್ಛವಾಗಿಯೂ ಇಟ್ಟುಕೊಳ್ಳಿ. ದೇವರು ನಿಮ್ಮ ಈ ಕಾರ್ಯದಲ್ಲಿ ನಿಮಗೆ ಯಶಸ್ಸು ನೀಡಲಿ" ಎಂದು ಹರಸಿ ಗಾಂಧಿ ಮತ್ತೆ ದೆಹಲಿಗೆ ಹೊರಟ.

ಇಂದು ರವಿವಾರ, ಡಿಸೆಂಬರ ೨೮. ಆತ ದೆಹಲಿ ಬಟ್ಟೆ ವ್ಯಾಪಾರಿಗಳ ಸಂಘದ ಸಭೆಯೊಂದರಲ್ಲಿ ಹಾಜರಾಗಬೇಕಿತ್ತು. ಕಾರ್ಮಿಕ ಮತ್ತು ಮಾಲೀಕರ ಮಧ್ಯದ ಪರಸ್ಪರ ಸಂಶಯ ಮತ್ತು ವಿಸ್ತಾರಗೊಳ್ಳುತ್ತಿರುವ ಕಂದಕವನ್ನು ಕಡಿಮೆ ಮಾಡಬೇಕು, ಮಿಲ್ ಮಾಲಿಕರುಗಳು ಹಳ್ಳಿಗಳಲ್ಲಿ ಮಹಿಳೆಯರನ್ನು ಪ್ರೋತ್ಸಾಹಿಸುವ ಮೂಲಕ ಭಾರತಕ್ಕೆ ಬೇಕಾಗಿರುವ ಬಟ್ಟೆಗಳನ್ನ ನಾವೇ ಸಿದ್ಧಪಡಿಸುವಂತಾಗಬೇಕು. ಇವೆಲ್ಲ ವಿಚಾರಗಳನ್ನು ಗಾಂಧಿ ಅವರೊಂದಿಗೆ ಹಂಚಿಕೊಳ್ಳಬೇಕಿದೆ. ಇದಕ್ಕೂ ಮುಖ್ಯವಾಗಿ ವ್ಯಾಪಾರಧರ್ಮವೆಂದರೇನು? ಅದೇನು ಬರೀ ಹಣದ ವಹಿವಾಟವೇ? ಈ ಕುರಿತು ಸಭೆಯಲ್ಲಿ ಮಾತನಾಡುತ್ತಾನೆ ಗಾಂಧಿ. "ವ್ಯಾಪಾರವನ್ನೂ ಒಂದು ಪೂಜೆಯಂತೆ ತೆಗೆದುಕೊಳ್ಳಬೇಕು. ನನ್ನನ್ನು ನಾನು ಯಾವಾಗಲೂ ಹಾಗೆಯೇ ನೋಡಿಕೊಂಡಿದ್ದೇನೆ. ಒಂದೆಡೆ ನಾನು ಒಬ್ಬ ಭಂಗಿ. ಮತ್ತೊಂದೆಡೆ? ಒಬ್ಬ ವ್ಯಾಪಾರಿ. ಒಂದು ಪ್ರಾಮಾಣಿಕವಾದ ವ್ಯಾಪಾರವನ್ನು ಹೇಗೆ

ಮಾಡಲು ಸಾಧ್ಯ ಎನ್ನುವುದನ್ನು ನೀವು ನನ್ನಲ್ಲಿ ಗಮನಿಸಬೇಕು. ಇಂದು ನಾನು ಯಾರದೇ ಸೇವೆ ಮಾಡುವಾಗಲೂ ನನ್ನ ವ್ಯಾಪಾರಧರ್ಮವನ್ನೂ ಹೂಡಿರುತ್ತೇನೆ. ವ್ಯಾಪಾರವೆಂದರೆ ಬರೀ ಹಣ ಗಳಿಸುವುದಲ್ಲ. ಜನ ವಿರೋಧಿಯಾದ ವ್ಯಾಪಾರದಿಂದ ಯಾರಿಗೂ ಲಾಭವಾಗುವುದಿಲ್ಲ.

ಕೆಲವು ದಿನಗಳ ಹಿಂದೆ ಭಾರತದಲ್ಲಿಯ ಬಟ್ಟೆಯ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ವಿದೇಶದಿಂದ ಬಟ್ಟೆಗಳನ್ನು ತರಿಸಿಕೊಳ್ಳಿ ಎನ್ನುವ ವಿಚಾರ ತಿಳಿಸಿ ನನಗೊಂದು ಪತ್ರ ಬಂತು. ಹಾಗೆ ಮಾಡುವುದಾದಲ್ಲಿ ನಮಗೆ ಸ್ವರಾಜ್ಯವೇಕೆ ಬೇಕಿತ್ತು? ನನ್ನ ದೃಷ್ಟಿಯಲ್ಲಿ ಅದು ಅತ್ಯಂತ ಅನುಚಿತ ಕ್ರಿಯೆ. ಮುಂದೊಂದು ದಿನ ಬರುತ್ತದೆ, ಮದುವೆ ಮಾಡಿಕೊಳ್ಳಲು ಭಾರತೀಯ ನಾರಿ ಬೇಡ. ಅವಳನ್ನೂ ವಿದೇಶದಿಂದಲೇ ಆಮದು ಮಾಡಿಕೊಳ್ಳೋಣ ಎಂದು. ಇಂತಹ ಪರತಂತ್ರದ ವಿಚಾರಗಳಿಗೆ ಆಸ್ಪದವೀಯುವ ವ್ಯಾಪಾರದಿಂದ ಏನು ಸಾಧಿಸಲು ಸಾಧ್ಯ?

My mother is my mother. Shall I choose for my mother, another woman more beautiful than she? In the same way we should not get beautiful cloth from outside."

ಮರುದಿನ ಸೋಮವಾರ, ಗಾಂಧಿ ಮೌನದಲ್ಲಿ. ಗೆಳೆಯರಿಗೆ, ಬಂಧು ಮಿತ್ರರಿಗೆ, ಪತ್ರ ಬರೆಯುವುದರಲ್ಲಿ ಮಗ್ನ. ಮೀರಾಬೆನ್ ಹೃಷಿಕೇಶದಲ್ಲಿ ಆಶ್ರಮವೊಂದನ್ನು ಪ್ರಾರಂಭಿಸಿದ್ದಾರೆ. ಭೂಮಿ ಮತ್ತು ನಿಸರ್ಗವನ್ನು ಕಾಪಾಡುವ ಆ ಕುರಿತು ಚಿಂತನ ಮಂಥನ ಮಾಡುವ ಒಂದು ಮಹದಾಸೆ ಈ ಆಶ್ರಮದ್ದು. ಗಾಂಧಿ ಅವಳಿಗೆ ಅವಳ ಕಾರ್ಯದಲ್ಲಿ ಯಶಸ್ಸನ್ನು ಕೋರಿ ಹಾರೈಸುತ್ತ ಪತ್ರವನ್ನು ಬರೆದು, ಮನುಷ್ಯರು, ತಾಯಿ ವಸುಂಧರೆಯನ್ನು ಇದುವರೆಗೆ ಬಳಸಿಕೊಂಡಿದ್ದಾರೆ. ನಮ್ಮನ್ನು ಇಷ್ಟೊಂದು ಪ್ರೀತಿ ಮತ್ತು ಭರವಸೆಯಿಂದ ಸಾಕಿ ಸಲಹುವ ಭೂಮಿಯೊಂದಿಗೆ ನಾವು ಎಷ್ಟು ವಿಕೃತವಾಗಿ ವರ್ತಿಸಿದ್ದೇವೆ? ಶತಮಾನಗಳಿಂದ ಈ ಭೂಮಿಯನ್ನು ಎಷ್ಟೊಂದು ಉತ್ತಿದ್ದೇವೆ? ಬಿತ್ತಿದ್ದೇವೆ? ಅದನ್ನು ಮಾರಿ ಬೆಳೆದಿದ್ದೇವೆ ಬದುಕಿದ್ದೇವೆ? ಆದರೆ ಅದೇ ಭೂಮಿಯ ಫಲವತ್ತತೆಗೆ ನಮ್ಮ ಕೊಡುಗೆ ಏನು? ನಮಗೆ ಹೇಗೆ ಶುಚಿಯಾದ ಸಶಕ್ತವಾದ ಆಹಾರ ಬೇಕೋ ಹಾಗೆ ಭೂಮಿಗೂ ಬೇಕು ಎನ್ನುವ ವಿಚಾರವನ್ನು ಗಾಂಧಿ ಅವಳೊಂದಿಗೆ ಹಂಚಿಕೊಳ್ಳುತ್ತಾನೆ.

ನೌಖಾಲಿಯಲ್ಲಿ ಸಣ್ಣ ಪುಟ್ಟ ಗಲಾಟೆಗಳಾಗಿವೆ. ಆದರೆ ಪ್ರಾಣ ಹೋದರೂ ಅಲ್ಲಿಯೇ ನಿಂತು ಅವುಗಳನ್ನು ಸಮರ್ಥವಾಗಿ ಎದುರಿಸಬೇಕೆನ್ನುವ ಒಂದು ಪತ್ರವನ್ನು ಪ್ಯಾರೇಲಾಲರಿಗೆ ಬರೆಯುತ್ತಾನೆ. ಶಾರದಾ ಚೋಕಾವಾಲಾರಿಗೊಂದು ಪತ್ರ ಬರೆದು ಡಾ. ಸುಶೀಲಾ ನೈಯರ್‌ರಂತಹ ವೈದ್ಯರು ಸಿಗುವುದೇ ವಿರಳ. ಅವರ

ಮೇಲೆ ಪೂರ್ಣ ಭರವಸೆ ಇಟ್ಟು, ಅವರು ಹೇಳಿದ ನಿಯಮಗಳನ್ನು ಪಾಲಿಸಬೇಕೆಂದು ಆದೇಶಿಸುತ್ತಾನೆ. ಮನೆಯಲ್ಲಿಯ ಹಿರಿಯರು ನಮ್ಮ ಧರ್ಮವೇ ಶ್ರೇಷ್ಠ ಎಂದು ಮಕ್ಕಳಿಗೆ ಪಾಠ ಮಾಡುವುದರಿಂದ ಆ ಮಗು ಬೇರೆ ಸತ್ಯವನ್ನು ಗೌರವಿಸುವ ಸಂಸ್ಕೃತಿಯನ್ನು ಹೇಗೆ ಕಳೆದುಕೊಳ್ಳುತ್ತದೆ ಎನ್ನುವುದನ್ನು ವಿವರಿಸಿ ಗುಜರಾತಿನ ಗೆಳೆಯನಿಗೆ ಪತ್ರ ಬರೆಯುತ್ತಾನೆ. ದೇಶವಿಭಜನೆಯ ಕರಾಳ ದಿನಗಳಿಂದ ಇಂದಿನವರೆಗೂ ಆತನ ಮುಸ್ಲಿಂ ಅನುಯಾಯಿಯಾದ ನೌಖಾಲಿಯ ಅಮ್ತುಸ್ ಸಲಾಂ ಗಾಂಧಿಯ ಬಳಿ ಬರಲು ಅದೆಷ್ಟೋ ಬಾರಿ ಕೇಳಿಕೊಂಡಿದ್ದಾಳೆ. ಆಕೆಯ ಸಮಸ್ಯೆಯನ್ನು ಕುರಿತು ಗಾಂಧಿ ಪಟಿಯಾಲಾದ ಮಹಾರಾಜನೊಂದಿಗೂ ಮಾತನಾಡಿದ್ದಾನೆ. ಈಗ ಅವಳಿಗೆ ದೆಹಲಿಗೆ ಬರುವಂತೆ ಪತ್ರ ಬರೆಯುತ್ತಾನೆ. ಹಾಗೆಯೇ ಪ್ರಜಾಪ್ರಭುತ್ವ ಎಂದರೇನು ಎಂದು ವಿವರಿಸಿಯೂ ಒಂದು ಮಹತ್ವದ ಪತ್ರವನ್ನು ಈ ದಿನ ಗಾಂಧಿ ಬರೆದಿದ್ದಾನೆ.

ಆಗಲೇ ಹೇಳಿದಂತೆ ಈ ದಿನಗಳಲ್ಲಿ ಆತನ ಸಮಗ್ರ ಸೇವೆಗೆ ಸದಾ ಸಿದ್ಧಳಾದವಳು ಆತನ ಮೊಮ್ಮಗಳಾದ ಮನು ಗಾಂಧಿ. ಆಕೆ ಇಲ್ಲದ ಯಾವ ಕ್ಷಣವೂ, ಯಾವ ವ್ಯವಹಾರವೂ ಗಾಂಧಿಗೆ ಅಸಾಧ್ಯ. ನಗಿಸಲು, ಒಮ್ಮೊಮ್ಮೆ ತನ್ನ ನೇರ ಮಾತುಗಳಿಂದ ನೋಯಿಸಲು, ಬರೆಯಲು, ಭಾಷಣ ಮಾಡಲು, ಪ್ರಾರ್ಥನೆಗೆ ಕರೆದುಕೊಂಡು ಹೋಗಲು, ಪತ್ರಗಳನ್ನು ಬಿಚ್ಚಿ ನೋಡಲು ಎಲ್ಲದಕ್ಕೂ ಅವಳಿರಲೇ ಬೇಕು. ಆದರೆ ಹೀಗೆ ಗಾಂಧಿಯ ಅಸಾಧ್ಯ ಕೆಲಸಗಳನ್ನೆಲ್ಲ ಸಾಧ್ಯವಾಗಿಸಿ ಮನು ಆರೋಗ್ಯ ಕೆಡಿಸಿಕೊಂಡಳು. ಡಿಸೆಂಬರ ೩೧ರ ಸುಮಾರಿಗೆ ಅವಳನ್ನು ಪರೀಕ್ಷಿಸಿದ ವೈದ್ಯರು ಟೈಫೈಡ್ ಆಗಿರಬಹುದು ಎಂದು ಸಂಶಯಪಟ್ಟರು. ಈ ಕುರಿತು ಮಿತ್ರರೊಬ್ಬರಿಗೆ ಪತ್ರ ಬರೆದು, ತನಗೆ ಚಿಂತೆಯಾಗಿದೆ. ತನ್ನ ಆರೋಗ್ಯವನ್ನು ಆರೈಕೆ ಮಾಡಿದ ಮನು ಸ್ವಂತಕ್ಕೆ ನಿರ್ಲಕ್ಷಿತಳಾಗಿರುವುದು ತನಗೆ ಇಷ್ಟವಾಗುತ್ತಿಲ್ಲ. ತನ್ನ ಆರೋಗ್ಯವೆಂದರೆ ಎಲ್ಲರ ಆರೋಗ್ಯ ಎಂದು ತಿಳಿಸಿದ್ದಾನೆ ಗಾಂಧಿ.

ಡಿಸೆಂಬರ ೩೧ರಂದು ತಿರಿಹೋದ ತನ್ನ ರಾಜಕೀಯ ವಿರೋಧಿ ಒಬ್ಬನನ್ನು ಕುರಿತು ಗಾಂಧಿ ಹರಿಜನದಲ್ಲಿ ಬರೆಯುತ್ತಾನೆ. ಇಂತಹ ಬರಹಗಳ ಮೂಲಕವೇ ವೈಚಾರಿಕ ಭಿನ್ನತೆ ಮಾನವ ಸಂಬಂಧಗಳನ್ನು ಬಾಧಿಸಬೇಕಿಲ್ಲ ಎಂದು ಗಾಂಧಿ ಜನರಿಗೆ ತಿಳಿಸಬೇಕಿದೆ. ತೀರಿಕೊಂಡವರು ತಾತ್ಯಾ ಸಾಹೇಬ್ ಕಾಲೇಲ್ಕರ್.

"ರಾಜಕೀಯ ವಿರೋಧಿಯಾಗಿದ್ದರೂ ಚಿಂತೆಯಿಲ್ಲ, ನಾನು ತಾತ್ಯಾ ಸಾಹೇಬ್ ಕಾಲೇಲ್ಕರ್‌ರ ಟೀಕೆಗಳಿಂದ ಲಾಭವನ್ನೇ ಅನುಭವಿಸಿದ್ದೇನೆ. ಅವರು ಲೋಕಮಾನ್ಯ ತಿಲಕರ ಅನುಯಾಯಿಗಳಾಗಿದ್ದು, ನಾನೂ ಅವರ ಅನುಯಾಯೀ ಆಗಿದ್ದೇನೆ. ೧೯೧೯ರಿಂದ ನಮ್ಮ ಒಡನಾಟ ಅಂದಿನಿಂದ ಶುರುವಾಯಿತು. ಲೋಕಮಾನ್ಯರು

ನನಗೆ ತಾತ್ಯಾ ಸಾಹೇಬ್‌ರನ್ನು ನೀಡಿದರು. ತಾತ್ಯಾ ಸಾಹೇಬರು ನನಗೆ ಸಿ.ಆರ್.ದಾಸ್ ಹಾಗೂ ಐ.ಬಿ.ಸೇನ್‌ರಂತಹ ಗೆಳೆಯರನ್ನು ನೀಡಿದರು.

"ರಚನಾತ್ಮಕವಲ್ಲದ ವಿಮರ್ಶೆಯಲ್ಲಿ ಅವರು ತೊಡಗಿದ್ದನ್ನು ನಾನೆಂದೂ ನೋಡಲಿಲ್ಲ. ತಾತ್ಯಾ ನಿರ್ಭಯರಾಗಿದ್ದರು, ಹಾಗೆಯೇ ನಮ್ರರೂ, ಸ್ನೇಹ ಜೀವಿಯೂ ಆಗಿದ್ದರು. ನಿಸ್ಸಂಶಯವಾಗಿಯೂ ಅವರು ಮರಾಠಿಯ ದೊಡ್ಡ ಲೇಖಕರೂ ಆಗಿದ್ದರು. ಆದರೆ ಮರಾಠಿ ಭಾಷೆಯನ್ನು ಸರಿಯಾಗಿ ಕಲಿಯದ ನಾನು ಅವರ ಸಾಹಿತ್ಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲಾಗಲಿಲ್ಲ. ಇಂದು ಅವರನ್ನು ಕಳೆದುಕೊಂಡ ದೇಶ ಯಾವ ಹಾನಿಯನ್ನು ಅನುಭವಿಸುತ್ತಿದೆಯೋ ಆ ಹಾನಿ ನನ್ನ ಪಾಲಿಗೂ ಸತ್ಯ."

–ಹೀಗೆ ಸಂತಾಪ ಸೂಚಿಸಿದ ಗಾಂಧಿ ಸಮರ್ಥವಾಗಿ ಸಂಪಾದಿಸಲಾಗದ, ಸಂಬಾಳಿಸಲಾಗದ ಭಾರತದ ಸ್ವರಾಜ್ಯ ಕುರಿತು ಅತ್ಯಂತ ಖೇದದ ಒಂದು ಪತ್ರವನ್ನು ಗೆಳೆಯನೊಬ್ಬನಿಗೆ ಬರೆದಿದ್ದಾನೆ. ಇದು ಗಾಂಧಿಯ ದೀರ್ಘ ಪತ್ರಗಳಲ್ಲಿ ಒಂದು. ಅಲ್ಲಿಯ ಕೆಲವು ಮಹತ್ವದ ಸಾಲುಗಳನ್ನು ಮಾತ್ರ ಇಲ್ಲಿ ನಿಮ್ಮ ಮುಂದೆ ಇಟ್ಟಿದ್ದೇನೆ: "Now, when duty calls to us we run away from it. We cannot establish a good government for ourselves without purification. We have deserved what is happening to us because we have not purified ourselves. What we have, in my view, is not Swaraj. True Swaraj means that we will be under own government and live a simple life, allowing others too to lead such a life."

❑



ಮರಣ ಮಾಸದ ಮೊದಲ ದಿನ

ಜನವರಿ ೧ನೇ ತಾರೀಖು ಎಂದರೆ ಗಾಂಧಿ ಭೌತಿಕ ಬದುಕು ಅಂತ್ಯವನ್ನು ಕಂಡ ತಿಂಗಳ ಮೊದಲ ದಿನ. ಇಂದಿನಿಂದ ಸರಿಯಾಗಿ ಒಂದು ತಿಂಗಳು. ಒಟ್ಟು ೩೦ ದಿನ ೭೨೦ ಗಂಟೆಗಳ ಅವಧಿ. ಈ ಕ್ಷಣದಿಂದ ಆತನ ದಿನಗಳ ಗಂಟೆಗಳ, ಲೆಕ್ಕವಿಡಬೇಕಾದುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಈ ತಿಂಗಳ ಕೊನೆಯವರೆಗೆ ಅಂದರೆ ಜನವರಿ ೩೦ರ ಸಾಯಂಕಾಲ ೫.೧೭ ನಿಮಿಷಗಳವರೆಗೆ ಗಾಂಧಿ ಯಾವ ಕಾಳಜಿ, ಕನಸು, ಆಲೋಚನೆ ಮತ್ತು ಕ್ರಿಯೆಗಳೊಂದಿಗೆ ಪುಟಿಯುವ ಚೈತನ್ಯವಾಗಿದ್ದ; ತುಂಬು ಬಾಳನ್ನು ಬಾಳಿದ್ದ ಎಂಬುದನ್ನು ಗಮನಿಸಬೇಕಾದುದು. ಪ್ರತಿಕ್ಷಣವನ್ನೂ ಎಚ್ಚರಿಕೆಯಿಂದ ಬಾಳಿದ ಗಾಂಧಿ. ಇತಿಹಾಸವೇ ಹಿನ್ನೋಡಿ ಒಂದು ಕ್ಷಣ ಪರೀಕ್ಷಿಸಿಕೊಳ್ಳುವಂತೆ ಮಾಡಿದ್ದ. ಮೃಗತ್ವದ ಕೂಪದಲ್ಲಿ ಬಿದ್ದವರನ್ನು ಕೈ ಹಿಡಿದು ಮೇಲೆತ್ತಿದ್ದ. ತಾನು ಒಬ್ಬ ಮುಪ್ಪಾವರಿಸಿದ ಮನುಷ್ಯ ಎನ್ನುವುದನ್ನೇ ಮರೆತು ಈ

ದೇಶದ ಕೋಟಿ ಕೋಟಿ ಮಹಿಳೆಯರ, ಮಕ್ಕಳ, ಮುದುಕರ ಬಾಳಿನ ಜವಾಬ್ದಾರಿ ಹೊತ್ತ, ನೋಯ್ದು, ನುಲಿದ, ಜಗಳಕ್ಕೆ ಮನುಷ್ಯರು ಸಿಗದಾದಾಗ ದೇವರೊಂದಿಗೆ ಕಚ್ಚಾಡಿದ. ಒತ್ತರಿಸಿ ಬರುತ್ತಿದ್ದ ದುಃಖ, ವಯಸ್ಸು, ಮುಪ್ಪುಗಳನ್ನು ಕಿತ್ತೆಸೆದು ಈ ದೇಶದ ಯುವಕರೊಂದಿಗೆ ಅತಿ ಹೆಚ್ಚು ಜಗಳಾಡಿದ, ಹಠಹಿಡಿದ ಮುದುಕ ಯಾರಾದರೂ ಇತಿಹಾಸದಲ್ಲಿ ಇದ್ದರೆ ಅದು ಈ ಗಾಂಧಿ. ಅಧ್ಯಾತ್ಮಕ್ಕೂ ಮುದುಕರಿಗೂ ಈ ನೆಲದಲ್ಲಿ ಮಹಾ ಪರಂಪರೆ. ಆದರೆ ಈ ಅಧ್ಯಾತ್ಮವನ್ನು ಗಾಂಧಿಯ ಮೇಲಿನ ಸಿಟ್ಟಿಗೋ, ಪ್ರೀತಿಗೋ ಯುವಕರೂ ಚಿಂತಿಸುವಂತೆ ಮಾಡಿದ. ಈ ಭಾರತದ ಇಂಚಿಂಚು ನೆಲಕ್ಕೂ ನಾಗರಿಕತೆಯ, ಸಂಸ್ಕೃತಿಯ, ಮಾನವೀಯತೆಯ ಬೀಜಗಳನ್ನು ಸಾವಿಗೂ ಭಯಪಡದೆ ಬಿತ್ತಲು ಯತ್ನಿಸಿದ. ಕಚ್ಚಾಡುವವರನ್ನು ಕೂಡಿಸಿ ಒಲಿಸಿದ. ಹೊಟ್ಟೆಯ ಕಿಚ್ಚಿಗೆ ಕಣ್ಣೀರು ಸುರಿಸಿದ. ನೆಲವಿಲ್ಲದವರಿಗೆ ನೆಲೆ ನೀಡಿ ರಕ್ಷಿಸಿದ. ಇದೆಲ್ಲವನ್ನೂ ಒಬ್ಬ ಗಾಂಧಿ ಹೇಗೆ ಮಾಡಿದ ಎನ್ನುವುದನ್ನೂ ನಾವು ಲೆಕ್ಕವಿಡಬೇಕಲ್ಲವೆ?

ಆತನ ಮರಣ? ತಿಂಗಳಿನ ಈ ಮೊದಲ ದಿನವನ್ನೂ ನೋಡಿ. ಈಗಲೂ ಈತ ಜಗಳಾಡುತ್ತಿದ್ದಾನೆ. ಸಾಮಾಜಿಕ ಕಾರ್ಯಕರ್ತರೆಂದು ಹೇಳಿಕೊಂಡು ಹೊಟ್ಟೆ ತುಂಬಾ ತಿಂದು, ಪೊದೆ ಪೊದೆಯಾದ ದೇಹ ಬಿಟ್ಟುಕೊಂಡು ದೆಹಲಿಯ ನಿರಾಶ್ರಿತರ ತಾಣಗಳಿಗೆ ಹೋಗಿ ಬರುತ್ತಿರುವ ಸುಭದ್ರಾ ಗುಪ್ತಾ ಹಾಗೂ ಅವರ ಮಹಿಳಾ ಗುಂಪನ್ನು ನಿಲ್ಲಿಸಿಕೊಂಡು ಈ ಮುಂಜಾವು ಗಾಂಧಿ ಸಿಟ್ಟಿನಿಂದ ಕೇಳುತ್ತಿದ್ದಾನೆ. "ನಿಮ್ಮ ಬಗೆಗೆ ನಿರಾಶ್ರಿತರಲ್ಲಿ ಗೌರವ ಹುಟ್ಟಲಿ ಎಂದರೆ ಅದು ಹೇಗೆ ಹುಟ್ಟುತ್ತದೆ? ಗರಿಗರಿಯಾದ ಬಟ್ಟೆ ತೊಟ್ಟುಕೊಂಡು, ಸುಗಂಧಗಳನ್ನ ಹಾಕಿಕೊಂಡು ಬೆಚ್ಚನೆಯ ವಿದೇಶಿ ಬಟ್ಟೆ ತೊಟ್ಟು ನೀವು ಅವರೆದುರು ನಿಂತು ಸ್ವತಃ ಕೈಯಿಂದ ತಯಾರಿಸಿದ ಖಾದಿಯನ್ನೇ ಧರಿಸಬೇಕು ಎಂದು ಅವರಿಗೆ ನೀವು ಪಾಠ ಮಾಡಿದರೆ ಅವರದನ್ನು ಗೌರವಿಸಲು ಸಾಧ್ಯವಿದೆಯೆ? ನಿಮ್ಮಲ್ಲಿ ಸರಳತೆ ಇದ್ದರೆ, ಪ್ರಾಮಾಣಿಕತೆ ಇದ್ದರೆ, ಆತ್ಮ ಶುದ್ಧಿ ಇದ್ದರೆ ಖಂಡಿತವಾಗಿ ಅದು ಅವರನ್ನು ಪ್ರಭಾವಿಸುತ್ತದೆ. ಗೊತ್ತಿರಲಿ, ನಮ್ಮೊಳಗಿನ ಪ್ರಾಮಾಣಿಕತೆ ನಮ್ಮ ಕ್ರಿಯೆಗಳಲ್ಲಿಯೂ ವ್ಯಕ್ತವಾಗುತ್ತದೆ. ಐಷಾರಾಮಿ ಮನೆಗಳಲ್ಲಿ ಕುಳಿತು, ಹೊಟ್ಟೆ ತುಂಬಾ ತಿಂಡಿ ತಿಂದು, ಹೆಗಲಿಗೊಂದು ವೆನಿಟಿ ಬ್ಯಾಗನ್ನ ಜೋತಾಡಿಸಿಕೊಂಡು, ಕಾರು ಹತ್ತಿಕೊಂಡು, ನಿರಾಶ್ರಿತರ ತಾಣಗಳಿಗೆ ಹೋಗಿ, ನಿಮ್ಮ ಸೇವೆಗಾಗಿ ಬಂದಿದ್ದೇವೆ ಎಂದು ಹಸಿದವರ ಮುಂದೆ ನಿಂತರೆ ಅವರು ನಿಮ್ಮೊಂದಿಗೆ ಹರಿಹಾಯದೆ ಇನ್ನೇನು ಮಾಡುತ್ತಾರೆ? ಮೊದಲು ನಿಮ್ಮ ಬಟ್ಟೆಗಳನ್ನು ಬದಲಾಯಿಸಿಕೊಳ್ಳಿ. ಸಾಮಾಜಿಕ ಸೇವೆಯೆನ್ನುವುದು ಕಾಲಕಳೆಯುವ ಒಂದು ಸೋಗಾಗಿದೆ. ಕೆಲವರಿಗಂತೂ ಒಂದು ಲಾಭದಾಯಕ ಹವ್ಯಾಸವಾಗಿದೆ. ನನ್ನ ಈ ಮಾತನ್ನು ನಾನು ಎಲ್ಲರಿಗೂ ಅನ್ವಯಿಸುತ್ತಿಲ್ಲ. ಸಾಮಾಜಿಕ

ಕಾರ್ಯಕರ್ತರು ಮೊದಲು ಕಾಯಕದ ಮಹತ್ವವನ್ನು ತಿಳಿದುಕೊಳ್ಳಬೇಕು. ಆತ್ಮಸಾಕ್ಷಿಯಿಲ್ಲದೇ ಜನಗಳ ಮುಂದೆ ಹೋಗಿ ನಿಲ್ಲುವುದನ್ನು ಬಿಡಿ. ಅದರಲ್ಲೂ ವಿಶೇಷವಾಗಿ ಸಾಮಾಜಿಕ ಕಾರ್ಯಕರ್ತೆಯರು ಎಂದು ಹೇಳಿಕೊಂಡು ತಿರುಗಾಡುವ ಮಹಿಳೆಯರು ಈ ನನ್ನ ಮಾತುಗಳನ್ನು ಗಂಭೀರವಾಗಿ ಪರಿಗಣಿಸುವ ಅವಶ್ಯಕತೆ ಇದೆ" ಎಂದು ಮುಂದೆ ನಿಂತವರನ್ನು ಉಗಿದು ಕಳುಹಿಸಿದ ಗಾಂಧಿ ಹೆಚ್ಚುತ್ತಿರುವ ಚಳಿಗಾಲದ ಚಳಿಯ ಈ ದಿನಗಳಲ್ಲಿ ನಿರಾಶ್ರಿತರ ಬಗ್ಗೆ ಅತ್ಯಂತ ಚಿಂತಾಕ್ರಾಂತನಾಗಿದ್ದ.

ಇದೇ ಮಧ್ಯಾಹ್ನ ರಾಜಕುಮಾರಿ ಅಮೃತಾ ಕೌರ್ ಅವರ ನೇತೃತ್ವದಲ್ಲಿ ಗಾಂಧಿ ಅಭಿಮಾನಿಗಳ ಒಂದು ಸಮೂಹ ಆತನ ಭೇಟಿಗೆ ಬಂತು. ಈಗಲೂ ಆತನ ಮನಸ್ಥಿತಿ ಬದಲಾಗಿಲ್ಲ. ಅದೇ ಸಿಟ್ಟಿನಲ್ಲಿದ್ದಾನೆ. ಹೊಸ ವರ್ಷದ ಮೊದಲ ದಿನ ಏನಾದರೂ ತಮಗೆ ಸಂದೇಶ ನೀಡಿ ಎಂದು ಅವನನ್ನು ಕೇಳುತ್ತಿದ್ದಾರೆ. ಅದರಲ್ಲಿ ಬಹುಪಾಲು ಜನರು ಕ್ರಿಶ್ಚಿಯನ್ನರು. ಎಷ್ಟು ವಿಚಿತ್ರ ನೋಡಿ, ಗಾಂಧಿ ಇಂದು ಅವರೊಂದಿಗೆ ಒಬ್ಬ ವ್ಯಕ್ತಿಯ ಮರಣಾನಂತರ ಕಟ್ಟಲ್ಪಡುವ ಸಮಾಧಿ, ಇಡಲಾಗುವ ಪುತ್ಥಳಿ, ಕಟ್ಟಲಾಗುವ ಸ್ಮಾರಕಗಳ ಕುರಿತು, ಅವುಗಳ ನಿರರ್ಥಕತೆಯನ್ನು ಕುರಿತು ಮಾತನಾಡಿದ್ದಾನೆ. ವ್ಯಂಗ್ಯವಾಡಿದ್ದಾನೆ. ದುರಂತವೆಂದರೆ ಇಂದು ಯಾವುದು ಅಯೋಗ್ಯ ಕ್ರಿಯೆ ಎಂದು ಆತ ಖಂಡಿಸುತ್ತಿರುವನೋ ಅವನ ಮರಣದ ನಂತರ ಅದೇ ಕ್ರಿಯೆ ಅವನ ಹೆಸರಿನಲ್ಲಿ ಅತಿ ಹೆಚ್ಚು ನಡೆಯುತ್ತದೆ. ಇಂದು ಪ್ರಪಂಚದಲ್ಲಿ ಅತಿ ಹೆಚ್ಚು ಸ್ಮಾರಕಗಳನ್ನು ಹೊಂದಿದ ಒಬ್ಬ ವ್ಯಕ್ತಿ ಯಾರಾದರೂ ಇದ್ದರೆ ಅದು ಗಾಂಧಿ ಮಾತ್ರ. ಇಡೀ ತನ್ನ ಬದುಕಿನ ಉತ್ತರಾರ್ಧವನ್ನು ಬಾಡಿಗೆ ಮನೆಯಲ್ಲಿ ಕಳೆದ ಗಾಂಧಿ ತೀರಿದ ನಂತರ ಸಾವಿರ ಸಾವಿರ ಎಕರೆಯಷ್ಟು ಭೂಮಿಯನ್ನು ತನ್ನ ಪುತ್ಥಳಿ ಸ್ಥಾಪನೆಗೆ ಈ ಭಾರತೀಯರು ಬಳಸಿದರು ಎಂದು ಆತನಿಗೆ ಗೊತ್ತಾಗುವುದಾಗಿದ್ದರೆ ಈ ಗಾಂಧಿ ಏನು ಮಾಡಿರುತ್ತಿದ್ದ ಎನ್ನುವ ಪ್ರಶ್ನೆ ಕಾಡದೇ ಇರುವುದಿಲ್ಲ. ಹೊಸ ವರ್ಷದ ಬಾಗಿಲಲ್ಲಿ ನಿಂತವರಿಗೆ ಇದು ಗಾಂಧಿಯ ಇಂದಿನ ಸಂದೇಶವಾಗಿತ್ತು.

"ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ಈ ಅಪೂರ್ಣ ಪ್ರಪಂಚದಲ್ಲಿ ಯಾವ ಧರ್ಮಗಳೂ ಪರಿಪೂರ್ಣವಾಗಿಲ್ಲ. ಪ್ರತಿ ಕಾಲ ಮತ್ತು ಸಂದರ್ಭಕ್ಕೆ ಉತ್ತರವಾಗಿ, ಪ್ರತಿಕ್ರಿಯೆಯಾಗಿ ಹೊಸ ಧಾರ್ಮಿಕ ಸಂಸ್ಥೆ ಹುಟ್ಟಿಕೊಳ್ಳುತ್ತದೆ. ಬದುಕಿದಾಗ ಸಾಧಕರೆಡೆಗೆ ಕಲ್ಲೆಸೆದು, ಹಿಂಸಿಸಿ, ಅವಹೇಳನಗೊಳಿಸಿ, ಅವರ ಮರಣದ ನಂತರ ಚರ್ಚು, ಸಮಾಧಿ, ಸ್ಮಾರಕಗಳನ್ನು ಕಟ್ಟುವುದು ಶತಮಾನಗಳಿಂದ ಈ ಸಮಾಜದ ಕ್ರಿಯೆಯಾಗಿದೆ. ಈ ಹಿಂದೆ ತಾವೇನು ಮಾಡುತ್ತಿದ್ದೇವೆ ಎನ್ನುವ ತಿಳುವಳಿಕೆ ಇಲ್ಲದ ಜನರಿಂದ ಇಂತಹ ಕ್ರಿಯೆ ನಡೆದವು. ಅದನ್ನವರು ಒಪ್ಪಿಕೊಂಡಿದ್ದಾರೆ. ಆದರೆ ಈಗ ನಾವು ಆ ವಾದವನ್ನು ಮಾಡಲಾಗದು.

ನಮಗೆಲ್ಲವೂ ಗೊತ್ತಿದೆ. ಕನ್ಫುಷೀಯಸ್ ಹೇಳಿಲ್ಲವೆ? ನಮಗೆ ಸರಿ ಯಾವುದೆಂದು ಚೆನ್ನಾಗಿ ಗೊತ್ತು. ಆದರೆ ಅದನ್ನು ಅನುಸರಿಸದಿರುವುದೇ ಹೇಡಿತನ. ನಮ್ಮ ತಿಳುವಳಿಕೆಗೂ ಮಾರಕ. ಪಾಕಿಸ್ತಾನವೊ ಭಾರತವೊ, ಹಿಂದೂಗಳೊ, ಕ್ರಿಶ್ಚಿಯನ್ನರೊ ಮೊದಲು ನೀವು ಬದಲಾಗದೆ ಪ್ರಪಂಚ ಬದಲಾಗಲಿ ಎಂದು ಆಶಿಸಬೇಡಿ."

ಈ ಸಾಲುಗಳಲ್ಲಿ ಈಗ ಹಿಂದೂ-ಮುಸ್ಲಿಂ, ಸಿಖ್ ಎಂದು ಕಡಿದಾಡಿ, ಪರಸ್ಪರ ನಂಬಿಕೆಯನ್ನು ಕಳೆದುಕೊಂಡು ನಗ್ನರಾಗಿ ನಿಂತಿರುವ ತನ್ನ ಜನಗಳಿಂದ ತನಗ್ಯಾವ ಮರ್ಯಾದೆ ಸಿಗುತ್ತಿದೆ ಎನ್ನುವುದನ್ನೂ ಗಾಂಧಿ ಮಾತಾಡಿರಬಹುದೇ?

ಹೊಸ ವರ್ಷದ ಈ ದಿನದ ಪ್ರಾತಃಕಾಲವನ್ನೇ ಈ ರೀತಿ ಸಿಡಿಸಿಡಿಯಾಗಿ ಪ್ರಾರಂಭಿಸಿದ್ದಾನೆ ಗಾಂಧಿ. ಆತ ತನ್ನ ಮೊದಲ ಪತ್ರವನ್ನು ಇಂದು ಬರೆದದ್ದೇ ತನ್ನ ಜರ್ಮನಿಯ ಸ್ನೇಹಿತ ಕಾರ್ಲ್ ಸ್ಟುವೆಗೆ. ಪತ್ರದಲ್ಲಿ ಬೇಸರ, ಸಿಟ್ಟು, ನಿಟ್ಟುಸಿರು, ಅಸಮಾಧಾನ ಎಲ್ಲ ಎರಕ ಹೊಯ್ದಿದ್ದಾನೆ. ಎಲ್ಲಿ ಹೇಗೆ ನಿಂತು ಮಾತನಾಡಬೇಕು, ಯಾರನ್ನು ಕುರಿತು ಮಾತನಾಡಬೇಕು? ಅವರಿಗೆ ಏನನ್ನು ಹೇಳಬೇಕು? ಎನ್ನುವ ಗೊಂದಲದ ಮುಂದೆ ಕೈ ಚೆಲ್ಲಿದ್ದಾನೆ. ತಾನು ನಂಬಿದ ತತ್ವಗಳು ಸೋತವೊ, ನೆಚ್ಚಿದ್ದ ದಾರಿಗಳೆಲ್ಲ ತಪ್ಪು ದಿಕ್ಕಿನೆಡೆಗೆ ಹೋದವೊ? ಎಲ್ಲವನ್ನೂ ಪರಾಮರ್ಶಿಸಿ ಕೊನೆಗೆ ಈ ನಿರ್ಧಾರಕ್ಕೆ ಬಂದಿದ್ದಾನೆ.

"ಬಂಧು,

ನಾನು ಹೇಳಿದ ಯಾವ ಮಾತುಗಳೂ ಅಹಿಂಸಾ ತತ್ವದ ಸೋಲನ್ನು ಸೂಚಿಸಬಾರದು. ಬಹಳ ತಡವಾಗಿಯಾದರೂ ಚಿಂತೆಯಿಲ್ಲ, ದೇಶದಲ್ಲಿ ಈ ಸಿದ್ಧಾಂತ ಯಶಸ್ಸು ಕಾಣಲಿಲ್ಲ ಎನ್ನುವುದಾದರೆ ಅದರ ಸೋಲಿನ ಕಾರಣಗಳನ್ನು ನನ್ನಲ್ಲಿ ಕಂಡುಕೊಂಡಿದ್ದೇನೆ. ೩೦ ವರ್ಷ ಅದನ್ನು ತಿಳಿಯದೇ ಅನುಸರಿಸಿಕೊಂಡು ಬಂದರು ಜನರು. ನಾನು ಅದನ್ನು ತಿಳಿಸುವ ರೀತಿಯಲ್ಲಿ ತಪ್ಪು ಮಾಡಿದ್ದೇನೆ. ಪ್ರಪಂಚದಲ್ಲಿ, ಭಾರತದಲ್ಲಿ ಅಹಿಂಸೆಯ ಸಿದ್ಧಾಂತ ಯಶಸ್ಸು ಕಾಣಲಿಲ್ಲ ಎನ್ನುವುದಕ್ಕೆ ಹಿಂಸೆಯನ್ನು ಅಳಿಸಿ ಹಾಕುವ ಸರಿಯಾದ ದಾರಿಗಳನ್ನು ನಾವು ಹುಡುಕಲಿಲ್ಲ ಎನ್ನುವುದೇ ಉತ್ತರವಾಗಬೇಕು. ಅಹಿಂಸೆಯ ಯಾವ ಕ್ಷಣಗಳೂ ವ್ಯರ್ಥ ಹೋಗುವುದಿಲ್ಲ. ಅದರ ಹೆಸರಿನಲ್ಲಿ ನಾನು ನಾಯಕನಂತೆ ಬಿಂಬಿಸಿಕೊಳ್ಳಲೂ ಇಷ್ಟಪಡುವುದಿಲ್ಲ. ನಾನು ಯಾರ ನಾಯಕನೂ ಅಲ್ಲ. ನನ್ನೊಳಗಿನ ಹುಡುಕಾಟವೇ ನನ್ನ ಗುರಿ. ಈ ಹುಡುಕಾಟವೇ ನನ್ನನ್ನು ನಾಯಕನನ್ನಾಗಿಸಿದ್ದರೆ ಅದು ಆಕಸ್ಮಿಕ ಅಷ್ಟೆ. ಒಂದನ್ನ ಮಾತ್ರ ಹೇಳಬಲ್ಲೆ: ಒಂದು ಕ್ಷಣವನ್ನೂ ಹಾಳುಮಾಡದ ಅಹಿಂಸೆಯ ಸಾಧನೆಯ ದಾರಿಯಲ್ಲಿರುವ ಒಬ್ಬ ಸಾಮಾನ್ಯ ಆಕಾಂಕ್ಷಿ ನಾನು. ಈ ನನ್ನ ತಪ್ಪೊಪ್ಪಿಗೆ ಅಹಿಂಸಾ ತತ್ವದಲ್ಲಿ ನಿನ್ನ ನಂಬಿಕೆಯನ್ನೂ ನಿನ್ನಂತ ಅನೇಕ ಗೆಳೆಯರ ನಂಬಿಕೆಯನ್ನೂ ನಿರ್ಮೂಲನಗೊಳಿಸಬಾರದು. ಸೇಡಿಗೆ ಸೇಡು, ಒಬ್ಬ ಹಿಂದೂವಿಗೆ ಇನ್ನೊಬ್ಬ

ಮುಸ್ಲಿಂ, ಮತ್ತೊಂದು ಭಾರತಕ್ಕೆ ಒಂದು ಪಾಕಿಸ್ತಾನ ಎನ್ನುವ ಸೇಡಿನ ಭಾಷೆ ಎಲ್ಲಿಯವರೆಗೆ ಜನರಲ್ಲಿ ಇರುತ್ತದೆಯೊ ಅಲ್ಲಿಯವರೆಗೂ ಅಹಿಂಸಾ ತತ್ವ ಸಂಕಷ್ಟದಲ್ಲಿದೆ ಎಂದೇ ಅರ್ಥ. ಹಾಗೆಯೇ ಜಗತ್ತಿನ ಯಾವುದೇ ದೇಶ, ಕಾಲ ಮತ್ತು ಜನಾಂಗಗಳಲ್ಲಿಯೂ ಕೂಡ.

ಇಂತೀ ನಿನ್ನ

ಎಮ್.ಕೆ.ಗಾಂಧಿ"

ವರ್ಷದ ಮೊದಲ ದಿನ ಹೀಗೆ ಪ್ರಾರಂಭವಾದದ್ದು ಮಧ್ಯಾಹ್ನ ಸುಭದ್ರಾ ದಾಸ ಗುಪ್ತಾ ಎಂಬ ಸಾಮಾಜಿಕ ಸೇವಕಿಯೊಂದಿಗಿನ ಚರ್ಚೆಯಲ್ಲಿ ತಾರಕಕ್ಕೇರುತ್ತಿತ್ತು. ಸಾಯಂಕಾಲದ ಪ್ರಾರ್ಥನಾ ಸಭೆಗೆ ಜನ ಸೇರುವ ಹೊತ್ತಿಗೆ ಗಾಂಧಿಯ ಆಲೋಚನೆ ದೇಶ, ಪ್ರಪಂಚವೆಲ್ಲಾ ಸುತ್ತಾಡಿ ವ್ಯಕ್ತಿಯ ಬಾಹ್ಯ ಮತ್ತು ಆಂತರಿಕ ಸೌಂದರ್ಯದ ಕಡೆ ಕೇಂದ್ರಿತವಾಗಿತ್ತು.

ಉಳಿದ ದಿನಗಳಿಗಿಂತಲೂ ಇಂದು ಪ್ರಾರ್ಥನಾ ಸಭೆಗೆ ಹೆಚ್ಚು ಜನ ಸೇರಿಕೊಂಡಿದ್ದಾರೆ. ಸಭೆಯಲ್ಲಿ ಮಹಿಳೆಯೊಬ್ಬಳಿಗೆ ಕುಳಿತುಕೊಳ್ಳಲು ಒಂದಿಷ್ಟೂ ಸ್ಥಳ ಸಿಗಲಾರದ್ದಕ್ಕಾಗಿ ಅವಳು ತಿರುಗಾಡುತ್ತಲೇ ಇದ್ದಾಳೆ. ಯಾವುದೇ ಯುವಕ, ಯುವತಿ ಅಲ್ಲಿರುವ ಸ್ವಯಂಸೇವಕರು ಅವಳೆಡೆಗೆ ಗಮನ ಹರಿಸುತ್ತಿಲ್ಲ, ಕೆಲವರು ಗಮನ ಹರಿಸಿದವರು ಸ್ಥಳಾವಕಾಶ ಮಾಡಿಕೊಡುವ ಸಂಸ್ಕೃತಿಯನ್ನು ತೋರಿಸುತ್ತಿಲ್ಲ. ಎತ್ತರದಲ್ಲಿ, ಮಂಚದ ಮೇಲಿರುವ ಗಾಂಧಿ ಅದನ್ನು ಗಮನಿಸುತ್ತಲೇ ಇದ್ದಾನೆ. ಕನಿಷ್ಠ ತಿಳುವಳಿಕೆಯೂ ಇಲ್ಲದ ಅಪಾರ ಸಂಖ್ಯೆಯ ಜನಸ್ತೋಮ ಈಗ ಗಾಂಧಿಗೆ ಬೇಕಾಗಿಲ್ಲ. ಅವನ ಬದುಕೇ ಜನಸಾಗರದ ಮಧ್ಯ ಕಳೆದುಹೋಗಿದೆ. ಈಗ ಆತನಿಗೆ ನೋಡುವ ಕಣ್ಣಿರುವ, ಶುದ್ಧ ಆತ್ಮವಿರುವ ಸ್ನೇಹಿತರು ಬೇಕಾಗಿದ್ದಾರೆ. ಒಬ್ಬ ಮಹಿಳೆಗೆ ಕುಳಿತುಕೊಳ್ಳಲು ಸ್ಥಳ ಸಿಗುವುದಕ್ಕಾಗಿ ಏಳು ನಿಮಿಷ ವ್ಯಯವಾಗುವುದೆಂದರೇನು? ಇಂತಹ ಮನಸ್ಥಿತಿಯೊಂದಿಗೆ ಹೊಸ ವರ್ಷದ ಮೊದಲ ಪ್ರಾರ್ಥನಾ ಸಭೆಗೆ ಉಪಸ್ಥಿತವಿರುವುದೆಂದರೇನೆ? ಎನ್ನುವ ಪ್ರಶ್ನೆಯೊಂದಿಗೇ ಈ ಸಾಯಂಕಾಲದ ಮಾತುಗಳನ್ನು ಪ್ರಾರಂಭಿಸುತ್ತಾನೆ ಗಾಂಧಿ.

"Our brothers every where should learn to offer first place to their sisters. A country in which women are not honoured is not really civilized. We should learn to behave with added restraint now that we are free. I hope the audience attending these prayer meetings will be even larger in future. But all those that come here should come with prayer in their hearts. Prayer is the food of the

heart and it nourishes the soul. Nowhere else can we get such nourishment as we can get from God.

ಹೊಸ ವರ್ಷಾಚರಣೆಯ ಈ ದಿನ ಜನರು ವಿಷದಿಂದ ದೂರವಿರುವಂತೆ ಕುಡಿತದಿಂದಲೂ ದೂರವಿರಬೇಕಿದೆ. ವಿಷ ಶರೀರವನ್ನು ಕೊಲ್ಲುತ್ತದೆ. ಆದರೆ ಕುಡಿತ ಆತ್ಮವನ್ನೇ ನಾಶಮಾಡುತ್ತದೆ. ಮನುಷ್ಯ ನಿಯಂತ್ರಣ ತಪ್ಪುತ್ತಾನೆ. ನಿಯಂತ್ರಣದ ಮಾತನ್ನಾಡುವ ಸರಕಾರಗಳು ನಿಯಂತ್ರಣ ತಪ್ಪಿಸುವ ಶೆರೆಯನ್ನು ಮಾರಾಟ ಮಾಡುವ ಅಂಗಡಿಗಳನ್ನು ಸಂಪೂರ್ಣವಾಗಿ ಮುಚ್ಚಿಬಿಡಬೇಕು. ಅವುಗಳ ಬದಲು ಉಪಾಹಾರ ಗೃಹಗಳನ್ನು ದೇಶೀಯ ಸಾತ್ವಿಕ, ಆಯುಷ್ಯವೃದ್ಧಿ ಪೇಯಗಳ ಅಂಗಡಿಗಳನ್ನು ಪ್ರಾರಂಭಿಸಬೇಕು. ಖಂಡಿತವಾಗಿಯೂ ಇದರಿಂದ ಸಮಾಜದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾಗುತ್ತದೆ. ಈ ಕ್ರಿಯೆಯನ್ನು ಮಾಡಬೇಕು ಎಂದು ೧೯೨೦ರಿಂದ ನಾನು ಕಾಂಗ್ರೆಸ್ಸನ್ನು ಒತ್ತಾಯಿಸುತ್ತಲೇ ಇದ್ದೇನೆ. ಅಬಕಾರಿಯಿಂದ ಬರುವ ಆದಾಯಕ್ಕೆ ಆಶಿಸದೆ ಸರಕಾರಗಳು ಈ ಕ್ರಿಯೆಯನ್ನು ಮಾಡಬೇಕು" ಎಂದು ಹೇಳುತ್ತಾನೆ ಗಾಂಧಿ. ಇದನ್ನು ಕೇಳಿದ ಮಹಿಳೆಯೊಬ್ಬಳು ಎದ್ದು ನಿಂತು 'ಗಾಂಧೀಜೀ ಕೀ ಜೈ" ಎಂದಳು. ಬಹುತೇಕ ಅವಳು ಕುಡುಕ ಗಂಡನಿಂದ ನೋವುಂಡ ಮಹಿಳೆಯೇ ಆಗಿರಲು ಸಾಧ್ಯ. ಗಾಂಧಿಯ ಗುರಿಯೂ ಇದುವೇ. ಮಹಿಳೆಯರು ನಿಶ್ಚಿಂತರಾಗಿರಬೇಕಾದರೆ ಕುಡಿತ ನಿಯಂತ್ರಣವಾಗಬೇಕು.

ಮರಳಿ ಬಿರ್ಲಾಹೌಸಿನ ತನ್ನ ವಾಸ್ತವ್ಯಕ್ಕೆ ಬಂದರೆ ಆತನ ಚಿಂತೆಯೇ ಬೇರೆ. ಮನುಳ ಆರೋಗ್ಯ ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸುತ್ತಿಲ್ಲ. ಜನರೊಂದಿಗೆ ಹೊರಗೆ ಯಾವುದೇ ಸಮಾಧಾನದ ಮಾತುಗಳನ್ನಾಡಿ ಬಂದರೂ ತನ್ನೊಳಗೆ ತಾನು ಬೆಂಕಿಗೆ ಬಿದ್ದ ಯಾತನೆ ಇದೆ. ೧೪, ೧೮ ಗಂಟೆಗಳ ಕಾಲ ಆ ಕಿರು ವಯಸ್ಸಿನ ಹುಡುಗಿಗೆ ಕೆಲಸ ಮಾಡಲು ಹಚ್ಚಿ ತಾನೇ ತಪ್ಪು ಮಾಡಿದೆನೊ ಎನ್ನುವ ತಪ್ಪಿತಸ್ತ ಭಾವ ಕಾಡುತ್ತಿದೆ. ಅದನ್ನು ಈ ರಾತ್ರಿ ಶ್ರೀ ಜಯಸುಖಲಾಲ್ ಹಾಥಿ ಎನ್ನುವ ಗೆಳೆಯನಿಗೆ ಬರೆದ ಪತ್ರದಲ್ಲಿ ಒಪ್ಪಿಕೊಂಡಿದ್ದಾನೆ. ತನ್ನ ಹೆಗಲಾಸರೆಯಾದ, ಹಗಲಿರುಳು ತಾಯಾದ ಮನುಳ ಬಗ್ಗೆ ಗಾಂಧಿಯಲ್ಲಿ ಎಂತಹ ಗೌರವವಿತ್ತು ಎನ್ನುವುದನ್ನು ತಿಳಿಯಲು ನೀವು ಈ ಸಾಲುಗಳನ್ನು ಓದಲೇ ಬೇಕು.

"In my *yagna* her part is of no small significance. But in the matter of service, Manu, considering her age, surpasses all others. Now my only wish is to see her restored to health. I cannot say how long I have to stay here in Delhi. I have to do or I have to die. There is no third way."

ಮತ್ತೆ ವರ್ಷಾರಂಭದ ಮೊದಲ ದಿನವೇ ತನ್ನ ಸಾವಿನ ಕುರಿತಾಗಿ ಮಾತಾಡಿದ್ದಾನೆ ಗಾಂಧಿ.

ಒಂದೆಡೆ ಗಾಂಧಿ ಹೀಗೆ ಸಾಗಿದ್ದರೆ, ಮತ್ತೊಂದೆಡೆ ಅವರವರ ಮೂಗಿನ ನೇರದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಜನ ಆತನಿಗೆ ಪತ್ರ ಬರೆಯುತ್ತಲೇ ಇದ್ದಾರೆ. ಅಂಥ ಒಂದು ಪತ್ರ ಜನವರಿ ೨ರಂದು ಗಾಂಧಿಯ ಕೈ ತಲುಪಿತು. ಈಗ ಅದನ್ನು ತಪ್ಪಿಸಲು, ಹರಿದು ಹಾಕಲು, ಬೀಸಿ ಒಗೆಯಲು ಗಾಂಧಿಯ ಬಳಿ ಮನು ಇಲ್ಲ. ಅವಳು ರೋಗಗ್ರಸ್ತಳು. ಕೋಮು ಸೌಹಾರ್ದ ಎನ್ನುವುದು ನಿನ್ನ ಹುಚ್ಚು ಭ್ರಮೆ ಎಂದು ಹಿಂದೂ ಒಬ್ಬ ಗಾಂಧಿಯನ್ನು ಟೀಕಿಸಿ, ಅವಹೇಳನ ಮಾಡಿ ಬರೆದ ಪತ್ರ. 'ಗಾಂಧಿಗೆ ಅನೇಕ ಕಟುಸತ್ಯಗಳು ಗೊತ್ತಿಲ್ಲ. ಹೀಗಾಗಿಯೇ ಆತ ಈಗಲೂ ಮುಸ್ಲಿಂರ ಗೆಳೆಯನಾಗಿ ಉಳಿದಿದ್ದಾನೆ. ಸತ್ಯದ ದರ್ಶನವಾದರೆ ಇದೇ ಗಾಂಧಿ ಮುಂದೆ ನಿಂತು ಭಾರತ ಪಾಕಿಸ್ತಾನಗಳ ಮಧ್ಯ ಯುದ್ಧಕ್ಕೂ ಅನುಮತಿ ನೀಡುತ್ತಾನೆ' ಎಂದು ಪತ್ರ ಬರೆದ ಹಿಂದೂವಿನ ವಾದ. ಗಾಂಧಿಯ ಸುತ್ತಲೂ ವಿಷವೇ. ಇದ್ದ ವಿಷಕ್ಕೆ ಕಾಶ್ಮೀರದ ರಾಜಕೀಯ ಬಿಕ್ಕಟ್ಟು ಮತ್ತಷ್ಟನ್ನು ಸೇರಿಸಿದೆ. ಆತ ಬರೆದಂತೆ ಯುದ್ಧ ಸತ್ಯವಾಗುವುದಾದರೆ ನಾನ್ಯಾತಕ್ಕೆ ಬದುಕಿರಬೇಕು? ಈ ದಾರಿಯಲ್ಲಿ ಇಷ್ಟೊಂದು ದೀರ್ಘಯಾನ ಯಾತಕ್ಕಾಗಿ ನಡೆಯಬೇಕಿತ್ತು? ಇದು ಇಡೀ ಶನಿವಾರ ಗಾಂಧಿಯನ್ನು ಬೆನ್ನಟ್ಟಿ ಕಾಡಿದ ಪ್ರಶ್ನೆ.

ದೇಶದ, ನಮ್ಮವನೇ ಆದ ವ್ಯಕ್ತಿಯೊಬ್ಬ ಗಾಂಧಿಯನ್ನು ಹುಚ್ಚ, ಮೂರ್ಖ, ಅವಾಸ್ತವವಾದಿ, ಬದುಕಲು ಅನರ್ಹ ಎಂದು ಜರಿಯುತ್ತಿದ್ದರೆ ಅಮೇರಿಕಾದ ಡಾ.ಜಾನ್ ಹೋಮ್ಸ್ ಗಾಂಧಿಯನ್ನು, ಆತನ ಧೈರ್ಯವನ್ನು, ಶ್ಲಾಘಿಸಿ ಭಾರತದಲ್ಲಿ ಏನು ನಡೆಯುತ್ತಿದೆ ಎಂದು ನಮಗೆ ಗೊತ್ತು, "But you must never feel that this involves breakdown of your life's work. Your teaching has remained as true and your leadership as sound as ever." ಎಂದು ಪ್ರೋತ್ಸಾಹಿಸುತ್ತಾನೆ.

ರವಿವಾರ ಈ ಎರಡು ಪತ್ರಗಳನ್ನು ಮುಂದಿಟ್ಟುಕೊಂಡು ಯಾವುದನ್ನ ನಂಬಬೇಕು, ಯಾವುದನ್ನು ಬಿಡಬೇಕು ಅಥವಾ ಎರಡರ ಹಂಗು ಹರಿದು ಹೇಗೆ ಮುಂದೆ ಹೋಗಬೇಕು ಎಂದು ಗಾಂಧಿ ಯೋಚಿಸುತ್ತಿದ್ದಾನೆ. ಕಲ್ಕತ್ತೆಯ ಸ್ನೇಹಿತನೊಬ್ಬನಿಗೆ ಪತ್ರ ಬರೆದು ತಾನು ದೇಶದ ಅತ್ಯಂತ ಶ್ರೀಮಂತ ಬಿರ್ಲಾಹೌಸಿನಲ್ಲಿದ್ದೂ ಹೇಗೆ ಬಡವನಾಗಿದ್ದೇನೆ, ಒಂಟಿಯಾಗಿದ್ದೇನೆ, ಸಂಕಷ್ಟದಲ್ಲಿದ್ದೇನೆ ಎನ್ನುವುದನ್ನು ವಿವರಿಸುತ್ತಾನೆ. ಇಂದಿನ ಪ್ರಾರ್ಥನೆಯನ್ನು ಜನರೊಂದಿಗೆ ಆತ ವೇವೆಲ್ ಕ್ಯಾಂಟಿನ್‌ದಲ್ಲಿ ನಡೆಸಿಕೊಡಬೇಕಿದೆ. ಕೊಟ್ಟ ವಚನದ

ಪ್ರಕಾರ ನಡೆಯಿಸಿಯೂ ಕೊಡುತ್ತಾನೆ. ಇಂದಿನ ಪ್ರಾರ್ಥನೆಯಲ್ಲಿ ಆತನ ಕೇಂದ್ರ ವಿಚಾರವೇ ಶ್ರೀ ರಾಮಚಂದ್ರನ ಬದುಕು–

"ಬಂಧುಗಳೇ,

ತನ್ನೊಳಗೆ ಶಾಂತನಾದವನ ಸಮೃದ್ಧಿ ಆತನ ದೃಷ್ಟಿ, ಮಾತು ಮತ್ತು ಕಾಯಕದಲ್ಲಿ ವ್ಯಕ್ತವಾಗುತ್ತಾ ಹೋಗುತ್ತದೆ. ಆತ ಗುಡಿಸಲಿನಲ್ಲಿಯೂ ನಾಳೆಯ ಚಿಂತೆ ಇಲ್ಲದೆ ನಿಶ್ಚಿಂತನಾಗಿರುತ್ತಾನೆ. ಯಾಕೆಂದರೆ ನಾಳೆಯನ್ನು ಆತ ದೇವರಿಗೆ ಬಿಟ್ಟಿರುತ್ತಾನೆ. ಮಹಾರಾಜ ದಶರಥನ ಮಗ ಶ್ರೀ ರಾಮಚಂದ್ರ ನಮ್ಮ ನಿಮ್ಮಂತೆಯೇ ಒಬ್ಬ ಮನುಷ್ಯ. ಅಯೋಧ್ಯೆಯ ಪಟ್ಟವನ್ನೇರುವಾಗ ತಾನು ೧೪ ವರ್ಷ ವನವಾಸಕ್ಕೆ ಹೋಗಬೇಕಾಗುತ್ತದೆ ಎನ್ನುವುದು ಆತನಿಗೂ ಗೊತ್ತಿರಲಿಲ್ಲ. ಆದರೆ ಶಾಂತಿಯನ್ನು ತನ್ನೊಳಗೆ ಸ್ಥಾಪಿಸಿಕೊಳ್ಳುವುದು ರಾಜ್ಯಭಾರದ ಸಂಕೇತವಾದ ಕಿರೀಟ ಧರಿಸುವುದಕ್ಕಿಂತಲೂ ಕಷ್ಟಕರ ಎನ್ನುವುದು ಆತನಿಗೆ ಗೊತ್ತಿದ್ದುದರಿಂದ ಈ ಬೆಳವಣಿಗೆ ಆತನಿಗೆ ಆಘಾತಕಾರಿಯಾಗಲಿಲ್ಲ. ಬಹುತೇಕದ ಶಾಂತಿ ವಸ್ತುಗಳಲ್ಲಿಲ್ಲ ಎನ್ನುವುದು ಶ್ರೀ ರಾಮನಿಗೆ ಗೊತ್ತಿತ್ತು. ಹೀಗಾಗಿ ವನವಾಸಕ್ಕೆ ಹೋಗಬೇಕೆಂದು ಆಜ್ಞೆ ಬಂದಾಗ ಆತನ ಮನಃಶಾಂತಿ ಕದಡಲಿಲ್ಲ. ಈ ಕಾರಣ ಶ್ರೀರಾಮ ಮೂರು ವಿಚಾರಗಳಲ್ಲಿ ವಿಶೇಷವಾದ. ಮೊದಲನೆಯದಾಗಿ ತನ್ನ ಹೆಂಡತಿ, ಸಹೋದರ, ಸಾಮ್ರಾಜ್ಯ ಕಳೆದುಕೊಂಡು; ಎರಡನೆಯದಾಗಿ ಜಗತ್ತಿನಿಂದ ನಿಂದಿಸಲ್ಪಟ್ಟು, ಒಂದು ಹಂತದಲ್ಲಿ ಮರ್ಯಾದೆ ಕಳೆದುಕೊಂಡು; ಮೂರನೆಯದಾಗಿ ಶಾರೀರಿಕ ಹಿಂಸೆಗೂ ಒಳಗಾಗಿ, ನಿದ್ರಾಹೀನನಾಗಿ ಮಡದಿ, ಯುದ್ಧ ಎಂದು ಅಲೆದ. ಆದರೆ ಇಂತಹ ಮೂರು ಕೆಟ್ಟ ಘಳಿಗೆಗಳಲ್ಲಿ ಆತ ದೇವರನ್ನೇ ಸ್ಮರಿಸಿದ, ದೇವನಾಗಿ ಬದುಕಿದ. ಹೀಗಾಗಿ ದೇವ ಮಾನವನಾದ. ನಮ್ಮ ಆಲೋಚನೆಗಳಂತೆಯೇ ನಮ್ಮ ಬದುಕು.

ಈ ನಿದರ್ಶನದ ಸಂದೇಶವೇನು? ಇಂತಹ ಮನಸ್ಥಿತಿ ನಮ್ಮ ಹಿಂದೂ ಮತ್ತು ಸಿಖ್ ಬಂಧುಗಳದ್ದಾದರೆ ಯಾವ ಮುಸ್ಲಿಮರು ಅವರನ್ನು ಬಾಧಿಸಲು ಸಾಧ್ಯವಿದೆ? ಶ್ರೀರಾಮನ ಈ ಶಾಂತಿಯನ್ನು, ಭರವಸೆಯನ್ನು, ಹಿಂದೂಗಳು ರೂಢಿಸಿಕೊಂಡರೆ ಅದರ ಒಳ್ಳೆಯ ಪರಿಣಾಮಗಳು ಮುಸ್ಲಿಮರ ಮೇಲೂ ಆಗುತ್ತವೆ. ನಿಮಗೆ ಈ ಭರವಸೆ ಇರಲಿ." ಎಂದು ಗಾಂಧಿ ಸಾರ್ವಜನಿಕವಾಗಿ ಹೇಳಿದ.

ಆದರೆ ಸಾರ್ವಜನಿಕರಿಗೆ ನಿರಾಳತೆಯ ಸಂದೇಶವನ್ನು ಕೊಟ್ಟ ಗಾಂಧಿಯ ಮನಸ್ಸು ಸಂಪೂರ್ಣ ನಿರಾಳವಾಗಿತ್ತೆ? ಇದಕ್ಕೆ ನನ್ನ ಉತ್ತರ ಇಲ್ಲ. ಖಂಡಿತವಾಗಿಯೂ ಇಲ್ಲ. ಇದಕ್ಕೆ ಇತಿಹಾಸದ ಸಾಕ್ಷಿ ಇದೆ. ಆತ ಬರೆದ ಪತ್ರಗಳ ಸಾಕ್ಷಿ ಇದೆ. ಜನವರಿ ೪ ರಂದು ಆತ ಬರೆದ ಒಂದು ಪತ್ರದ ಎರಡೇ ಸಾಲುಗಳು: "Who knows what will happen tomorrow? Everything about me is uncertain." ❑



ಇನ್ನೆಷ್ಟು ದಿನ ಈ ಬದುಕು?

ಜನವರಿ ೫ರ ಸಾಯಂಕಾಲದ ಪ್ರಾರ್ಥನೆ ನಡೆಯಲಿಲ್ಲ. ನಡು ಚಳಿಗಾಲದಲ್ಲಿ ವಿಚಿತ್ರವಾಗಿ ಮಳೆ ಬಂತು. ತುಂಬಾ ಅನಿರೀಕ್ಷಿತವಾದದ್ದು. ಇಂತಹ ಮಳೆಯಲ್ಲಿಯೂ ಪ್ರಾರ್ಥನಾ ಸಭೆಗೆ ಬಂದಿದ್ದ ಹಲಕೆಲವು ಜನರನ್ನು ಮರಳಿ ಹೋಗುವಂತೆ ಕೋರಿಕೊಳ್ಳಲಾಯಿತು. ಅಳಿದುಳಿದವರಿಗೆ ತನ್ನೊಂದಿಗಿರಲು, ಉಳಿಸಿಕೊಳ್ಳಲು ಸೂಕ್ತ ವ್ಯವಸ್ಥೆಗಳನ್ನು ಮಾಡಲಾಯಿತು. ಹಾಗೆ ಜೊತೆಗಿದ್ದ ನಾಲ್ಕಾರು ಜನರನ್ನು ಕೂಡ್ರಿಸಿಕೊಂಡು ಗಾಂಧಿ ಯಥಾ ಪ್ರಕಾರ ಪ್ರಾರ್ಥನೆಯನ್ನು ಕೋಣೆಯೊಳಗೆ ಶುರುಮಾಡಿಕೊಂಡ. ಆತನಿಗೆ ಏನೆಲ್ಲವೂ ನೆನಪಾಗುತ್ತಿತ್ತು. ತಿಂಗಳುಗಳ ಹಿಂದೆ ನೌಖಾಲಿಯ ಬೀದಿಗಳಲ್ಲಿ ಆತ ಸದ್ಭಾವನಾ ಯಾತ್ರೆ ಮಾಡುವಾಗ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಅತ್ಯಂತ ಪ್ರೀತಿ ಗೌರವಗಳಿಂದ ಯಾರೋ ಒಬ್ಬರು ಆತನಿಗೆ ಒಂದು ಕೊಡೆಯನ್ನು ನೀಡಿದ್ದರು.

ಈಗ ಅನಿರೀಕ್ಷಿತವಾಗಿ ಹೊರಗೆ ಶುರುವಿಟ್ಟುಕೊಂಡ ಮಳೆ ನೋಡಿದಾಗ ಆ ಕೊಡೆ ನೆನಪಾಗುತ್ತಿತ್ತು. ಮತ್ತೊಂದು ಕ್ಷಣ ಪ್ರಾರ್ಥನೆಯ ನಂತರ ಪಕ್ಕದಲ್ಲಿದ್ದವರಿಗೆ ತಾನು ಈ ದೇಶದ ಮಹತ್ವದ ಸ್ಥಾನದಲ್ಲಿದ್ದರೆ ಪಾಕಿಸ್ತಾನದ ಪ್ರತಿನಿಧಿಗಳನ್ನು ಕರೆಯಿಸಿಕೊಂಡು ಎರಡೂ ರಾಷ್ಟ್ರಗಳಿಗೆ ಸಂಬಂದಪಟ್ಟ ಅದೆಷ್ಟೋ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಯತ್ನ ಮಾಡಿರುತ್ತಿದ್ದೆ; ಈಗ ಸರಕಾರ ನಮ್ಮದು, ಆದರೆ ಅದನ್ನು ವಿರೋಧಿಸುವ ಜನರೂ ನಮ್ಮವರೆ ಎಂದು ಬರೆದು ತೋರಿಸಿದ. ಸೋಮವಾರ ಆತ ಮಾತನಾಡುವುದಿಲ್ಲ. ಈ ಸಾಲನ್ನೇ ಬರೆಯಲು ಕಾರಣವೂ ಇತ್ತು. ದೆಹಲಿಯ ಯಾವುದೋ ಒಂದು ಪ್ರದೇಶದಲ್ಲಿ ಸರಕಾರದ ವಿರುದ್ಧ ಮುಷ್ಕರದಲ್ಲಿ ನಿರತರಾದವರು ತಮ್ಮ ಮೇಲೆ ಪೋಲಿಸರು ಕ್ರಮ ಕೈಗೊಳ್ಳಬಾರದೆಂದು ಮಹಿಳೆಯರನ್ನು ಮತ್ತು ಮಕ್ಕಳನ್ನು ಬಳಸಿಕೊಂಡಿದ್ದರು. ಇದು ಗಾಂಧಿಗೆ ಅನೈತಿಕವೆನ್ನಿಸಿತ್ತು. ತಾನು ಸರಿಯಾದುದಕ್ಕೇ ಹೋರಡುತ್ತಿದ್ದೇನೆ ಎನ್ನುವ ಭರವಸೆ ಇದ್ದವನು ಹೀಗೆ ಹೆಂಗಸರ ಸೆರಗಿನಲ್ಲಿ ಅಡಗಿಕೊಳ್ಳಬಾರದೆನ್ನುವುದು ಆತನ ವಿಚಾರ. ಇಂದು ಗೆಳೆಯ ನರಸಿಂಹಪ್ರಸಾದ ಭಟ್ಟರ ಹುಟ್ಟುಹಬ್ಬ. ಅವನಿಗಾಗಿ ಒಂದಿಷ್ಟು ಪ್ರಾರ್ಥನೆ ಮಾಡಿದ.

ಜನವರಿ ೬ರ ಮುಂಜಾನೆ ಗಾಂಧಿಯನ್ನು ಕಾಣಲು ಬಂದ ಮುಸ್ಲಿಂ ನಾಯಕನೊಬ್ಬ ಹಿಂದೂಗಳು ಮತ್ತೆ ಹಿಂಸಾಚಾರವನ್ನು ಹರಡುವ ಸಲುವಾಗಿ ಆಯುಧಗಳನ್ನು ಸಂಗ್ರಹಿಸುತ್ತಿದ್ದಾರೆ ಎನ್ನುವ ಆತಂಕಕಾರಿ ಸುದ್ದಿಯನ್ನು ಕೊಟ್ಟ. ಆದರೆ ವಿಚಲಿತನಾಗದ ಗಾಂಧಿ 'ಇದಕ್ಕೆ ನಿನ್ನ ಬಳಿ ಆಧಾರವೇನಿದೆ? ಇದೇ ಕ್ರಿಯೆಯಲ್ಲಿ ತಿಂಗಳುಗಳ ಹಿಂದಿನಿಂದಲೇ ಮುಸ್ಲಿಮರೂ ತೊಡಗಿದ್ದಾರೆಂದು ನನಗೆ ಅನೇಕ ಪತ್ರಗಳು ಬಂದಿವೆ. ಮೊದಲು ಎಲ್ಲ ಮುಸ್ಲಿಂ ಬಂಧುಗಳು ತಮ್ಮ ಆಯುಧಗಳನ್ನು ತಂದು ನನಗೆ ಒಪ್ಪಿಸಲು ತಿಳಿಸು. ಆಮೇಲೆ ಹಿಂದೂಗಳನ್ನು ನಿರಾಯುಧರಾಗಿಸುವ ದಾರಿಗಳನ್ನು ನಾನು ಹುಡುಕುತ್ತೇನೆ' ಎಂದು ತಿಳಿಸಿದ ಗಾಂಧಿ. ಐದು ದಶಕಗಳಷ್ಟು ದೀರ್ಘ ಜೀವನವನ್ನು ಒಂದು ಉದ್ದೇಶಕ್ಕಾಗಿ ಕಳೆದು ಮತ್ತೆ ಮತ್ತೆ ಅದನ್ನೇ ಹೇಳುವುದಿದೆಯಲ್ಲ ಅದಕ್ಕಿಂತ ಹಿಂಸೆ ಮತ್ತೊಂದಿಲ್ಲ.

ಜನವರಿ ೭ರಂದು ಗಾಂಧಿ ಅತ್ಯಂತ ಭಯಾನಕವಾದ ಸುದ್ದಿಯೊಂದನ್ನು ಕೇಳಿದ. ಪಾಕಿಸ್ತಾನದ ಸಿಂಧ್‌ನಿಂದ ಬಂದ ಈ ಸುದ್ದಿ ಕರಾಚಿಯ ಗುರುದ್ವಾರ ಒಂದಕ್ಕೆ ಹೋಗುತ್ತಿದ್ದ ಮುಸ್ಲಿಮರನ್ನು ಹೇಗೆ ಮಾರ್ಗ ಮಧ್ಯೆ ಕಲ್ಲಿನಿಂದ ಜಜ್ಜಲಾಯಿತು ಎನ್ನುವುದನ್ನು ತಿಳಿಸಿತು. ಲೂಟಿ, ಕೊಲೆ, ಪರಸ್ಪರ ಧಾರ್ಮಿಕ ಕೇಂದ್ರಗಳ ಮೇಲೆ ಆಕ್ರಮಣ, ಒಟ್ಟಾರೆ ಕರಾಚಿ ನರಕವಾಗಿಹೋಗಿತ್ತು. ಕನಿಷ್ಠ ಎರಡು ಸಾವಿರ ಅಂಗಡಿಗಳ ಲೂಟಿಯಾಗಿ, ಅನೇಕರ ಸ್ಥಿತಿ ಅತ್ಯಂತ ಗಂಭೀರವಾಗಿತ್ತು. ಕಳೆದ ಅನೇಕ ದಿನಗಳಿಂದ ತಾನು ಪಾಕಿಸ್ತಾನದ ಸಿಂಧ್‌ಗೆ ಹೋಗಬೇಕು ಎಂದುಕೊಳ್ಳುತ್ತಿದ್ದ ಗಾಂಧಿ, ಈ ಗಲಭೆಯ ಸುದ್ದಿಯನ್ನು ಕೇಳಿ ನೊಂದುಕೊಂಡ.

ಇಂಥದೇ ಒಂದು ಕ್ರಿಯೆ ಜನವರಿ ೮ರಂದು ದೆಹಲಿಯಲ್ಲಿಯೂ ಜರುಗುವುದಿತ್ತು. ದೆಹಲಿಯ ವಿದ್ಯಾರ್ಥಿ ಸಂಘಟನೆಯೊಂದು ಸರಕಾರದ ವಿರುದ್ಧ, ದೆಹಲಿ ಆಡಳಿತ ವ್ಯವಸ್ಥೆಯ ವಿರುದ್ಧ ಮುಷ್ಕರ ಹೂಡಬೇಕೆಂದು ಆಲೋಚನೆ ನಡೆಸಿತ್ತು. ಮುಂಜಾನೆ ಗಾಂಧಿಯ ಭೇಟಿಗೆ ಬಂದಿದ್ದ ಡಿ.ಬಿ.ಕಾಲೇಕರ್, ಕೃಪಲಾನಿ, ರುಕ್ಮಿಣಿ ಎರುಲ್ಕರ್, ಎ.ವಿ.ಟಕ್ಕರ್ ಈ ವಿಚಾರವನ್ನು ಗಾಂಧಿಯೊಂದಿಗೆ ಪ್ರಸ್ತಾಪಿಸಿದ್ದರೂ ಕೂಡ. ಮುಂದಾಗಬಹುದಾದ ಅನಾಹುತವನ್ನು ಅರಿತು ಗಾಂಧಿ ಇಂದು ಸಾಯಂಕಾಲ ಪ್ರಾರ್ಥನೆಯಲ್ಲಿ ಎಲ್ಲರಿಗೂ ತಿಳುವಳಿಕೆ ನೀಡಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಯತ್ನಿಸಿದ.

ಕೆಲವು ವಿದ್ಯಾರ್ಥಿಗಳು ಮುಷ್ಕರ ಹೂಡುವ ವಿಚಾರ ತನಗೆ ಗೊತ್ತಾಗಿದೆ. ಇದು ತಪ್ಪು ದಾರಿ. ಹಿಂಸೆಗೆ ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ತಮ್ಮ ಧರ್ಮವಾದ ಅಧ್ಯಯನಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಮುಷ್ಕರ, ದೊಂಬಿ, ಗಲಭೆಗಳಿಂದ ದೂರವಿರಬೇಕು. "ನೀವು ನನ್ನ ಮಾತನ್ನು ಕೇಳುತ್ತೀರಿ ಎಂದು ನಂಬಿದ್ದೇನೆ. ಇಂದು ನನ್ನ ಆರೋಗ್ಯ ಸರಿ ಇಲ್ಲ. ಅಶಕ್ತತೆಯ ಅನುಭವವಾಗುತ್ತಿದೆ. ನಾನು ಅಹಿಂಸೆಯ ಆರಾಧಕ. ನನ್ನದು ಒಂಟಿ ಧ್ವನಿಯಾದರೂ ಚಿಂತೆಯಿಲ್ಲ, ನಾನಿದನ್ನು ಪದೇ ಪದೇ ಹೇಳುತ್ತಲೇ ಇರುತ್ತೇನೆ. ಬದಲಾದ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ನನ್ನದು ಅರಣ್ಯರೋದನ ಎನ್ನುವುದು ನಾನು ಬಲ್ಲೆ. ಆದರೂ ನಿಮ್ಮೊಂದಿಗೆ ಜಗಳಾಡುತ್ತಾ ಹೇಳಬೇಕಾದುದನ್ನು ಹೇಳಲೇ ಬೇಕಿದೆ. ಕೇಳಿದರೆ ನಿಮಗೂ ಒಳಿತು. ಇದಕ್ಕೂ ಮೀರಿ ಅನಾಹುತಗಳನ್ನು ನೀವಾಗಿಯೇ ಸ್ವಾಗತಿಸಿಕೊಂಡರೆ ನಾನು ಅಸಮರ್ಥ. ನಾನು ದೇವರಲ್ಲ, ಆದರೆ ದೇವರ ಅನುಗ್ರಹಕ್ಕೆ ಪಾತ್ರನಾದವನು. ಆತ ಕೊಟ್ಟಿದುದೆಲ್ಲವನ್ನೂ ಸ್ವೀಕರಿಸಿ ಸಂತೃಪ್ತನಾಗಿರುವವನು" ಎಂದು ಅಷ್ಟೊಂದು ಲವಲವಿಕೆ ಇಲ್ಲದೆ ಮಾತನಾಡಿದ ಗಾಂಧಿ ಅಲ್ಲಿದ್ದ ಕೆಲವು ಹಿರಿಯರಿಗೂ ಒಂದು ಮಾತನ್ನು ಹೇಳಿದ. ತಾನಿಲ್ಲದೆ ಎಲ್ಲವೂ ನಿರಾತಂಕವಾಗಿ ನಡೆಯಬೇಕಾದ ಒಂದು ಸಂದರ್ಭ ಬಂದೇ ಬರುತ್ತದೆ, ಅದಕ್ಕಾಗಿ ಸಿದ್ಧರಾಗಿರಿ ಎನ್ನುವುದು ಗಾಂಧಿಯ ಈ ಮಾತಿನ ಅರ್ಥ. ಆತ ಹೇಳಿದ, "If you depend on my help all the time you are likely to become weak. How long can I live? If you have the grace of God, you have everything."

ಗಾಂಧಿ ಎಷ್ಟೆಲ್ಲ ಮಾತನಾಡಿದರೂ ನಡೆಯಬೇಕಾದುದು ನಡೆದೇಹೋಯಿತು. ಕಮ್ಯುನಿಸ್ಟ್ ಸಂಘಟನೆಗಳು ದೆಹಲಿಯಲ್ಲಿ ವಿದ್ಯಾರ್ಥಿ ಸಂಘಟನೆಗಳನ್ನು ಬೆಂಬಲಿಸಿದವು. ವಿದ್ಯಾರ್ಥಿಗಳು ಬೀದಿಗಿಳಿದರು. ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಅನಿವಾರ್ಯವಾಗಿ ಸರಕಾರ, ಪೋಲಿಸ್ ಮತ್ತು ಸೈನ್ಯದ ಸಹಾಯ ಪಡೆದು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಬೇಕಾಯಿತು.

ಇದೆಲ್ಲವನ್ನು ಮೂಕ ಪ್ರೇಕ್ಷಕನಂತೆ ಗಮನಿಸಬೇಕಾದುದು ಗಾಂಧಿಯ ಕೊನೆಯ ದಿನಗಳ ದುರ್ವಿಧಿಯಾಗಿತ್ತು. ಕೋಮುಗಲಭೆ, ದೇಶವಿಭಜನೆ, ವೈಯಕ್ತಿಕ ಹಾನಿಗಳಿಂದ ರೋಸಿಹೋಗಿದ್ದ. ಆದರೆ ಈ ಗಾಂಧಿಯ ಕಾರಣದಿಂದ ಏನೂ ಮಾಡಲಾಗದ ಬಹುಪಾಲು ಹಿಂದೂ ಮತ್ತು ಸಿಖ ವಿದ್ಯಾರ್ಥಿಗಳು ಈ ಮೋರ್ಚಾಗಳಲ್ಲಿ ಸೇರಿ ಒಂದು ರೀತಿಯಲ್ಲಿ ಗಾಂಧಿಯ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದರು.

ಇದು ಗಾಂಧಿಗೆ ಇಷ್ಟವಿಲ್ಲದ ವಿಚಾರ. ಅಂತಿಮವಾಗಿ ರಾಜಧಾನಿಯನ್ನು ತಾನು ಜೀವಂತವಾಗಿರುವಾಗಲೇ ಸೈನ್ಯ ಮತ್ತು ಪೋಲಿಸ್ ಸಹಾಯದಿಂದ ತನ್ನ ಜನಗಳಿಂದಲೇ ರಕ್ಷಿಸಿಕೊಳ್ಳುವಂತಾಗಿರುವುದು ಜೀವನದ ದುರ್ದೈವವೆಂದು ಪರಿಗಣಿಸಿದ. ದೆಹಲಿಯೇ ಇರಲಿ, ವಿಶ್ವವೇ ಇರಲಿ, ಅದು ಮನುಷ್ಯರಿಂದ ಆವೃತವಾದವುಗಳು; ಮೃಗಗಳಿಂದಲ್ಲ. ಪ್ರಪಂಚದ ಶಾಂತಿ ಸಮೃದ್ಧಿಯನ್ನ ರಕ್ಷಿಸಿಡುವುದರ ಮೂಲಕ ಮನುಷ್ಯ ತನ್ನನ್ನೂ ತಾನು ರಕ್ಷಿಸಿಕೊಳ್ಳಲು ಸಾಧ್ಯವಿದೆ ಎನ್ನುವ ಸೂತ್ರದ ಮೇಲೆ ಇಡೀ ಸಮಾಜ ಬದುಕಬೇಕೆನ್ನುವ ಗಾಂಧಿ, ವಾಸ್ತವದಲ್ಲಿ ಅಸಹ್ಯವಾದುದನ್ನೇ ನೋಡುತ್ತಿದ್ದ. ತನ್ನ ವ್ಯಾಪ್ತಿಯನ್ನು ಮೀರಿಹೋದ ವಿಚಾರಗಳಲ್ಲಿ ತಾನು ಅಸಹಾಯಕ ಎಂದು ಈಗಾಗಲೆ ಹೇಳಿರುವಂತೆ ಒಂದು ಕ್ಷಣ ಎಲ್ಲವನ್ನೂ ಮರೆತು ಪತ್ರ ಒಂದಕ್ಕೆ ಉತ್ತರಿಸಲು ಕುಳಿತ.

"ಬಂಧು,

ಕಳೆದ ಎರಡು ದಿನಗಳಿಂದ ನನ್ನೊಂದಿಗೆ ಕಾಕಾಸಾಹೇಬ್ ಕಾಲೇಲ್ಕರ್ ಇದ್ದಾರೆ. ಹಿರಿಯರು, ಅವರನ್ನೂ ನಾನು ಕಾಯಿಸುವಂತಾಗಿದೆ. ಹಿಂದೂಸ್ತಾನಿಯ ಕುರಿತು ಎಷ್ಟೆಲ್ಲ ವಿಚಾರಗಳನ್ನು ಅವರೊಂದಿಗೆ ಮಾತನಾಡುವುದಿತ್ತು. ಆದರೆ ಏನು ಮಾಡಲಿ? ನಿತ್ಯವೂ ಅಸಂಖ್ಯಾತ ಜನರು. ದಿನದ ಒಂದು ಕ್ಷಣವೂ ಖಾಲಿ ಇಲ್ಲ. 'ಹರಿಜನ'ದ ಕೆಲಸ ಎಷ್ಟೊಂದು ಬಾಕಿ ಉಳಿದುಕೊಂಡಿದೆ. ಒಂದೇ ಒಂದು ಕ್ಷಣವೂ ಮೈಮರೆಯುವಂತಿಲ್ಲ. ಆದರೆ ಸಂತಸದ ಸಂಗತಿಯೆಂದರೆ ಮನುಳ ಆರೋಗ್ಯ ಸುಧಾರಿಸುತ್ತಿದೆ. ನಾಳೆಯಿಂದ ಆಕೆ ಮತ್ತೆ ಮೊದಲಿನಂತಾಗುತ್ತಾಳೆ. ಆದರೆ ನನ್ನ ಆರೋಗ್ಯದಲ್ಲಿ ಸೊಗಸು ಉಳಿದುಕೊಂಡಿಲ್ಲ. ರಾಮನಾಮದ ಮಹಿಮೆ, ಶಕ್ತಿ ಬಂದಂತೆನಿಸುತ್ತದೆ.

ಅಂದಹಾಗೆ, ಪಾನನಿಷೇಧದ ನನ್ನ ಪ್ರಸ್ತಾಪವನ್ನು ಚರ್ಚೆಗಿಟ್ಟಿದ್ದೆ. ಅದೇನಾಗುತ್ತದೆಯೊ ನನಗೆ ಗೊತ್ತಿಲ್ಲ. ಆದರೆ ದಲಿತರು ಮತ್ತು ಕೂಲಿ ಕಾರ್ಮಿಕರು ಕುಡಿತದಿಂದ ದೂರವಿರಬೇಕೆನ್ನುವುದೇ ನನ್ನ ವಿಚಾರ. ಕುಡಿತದ ಮತ್ತಿನಲ್ಲಿರುವವರಿಗೆ ಬದುಕಿನ ಉಳಿದ ಸುಖ ತಿಳಿಯುವದಿಲ್ಲ. ಅವರ ಬಡತನಕ್ಕೆ ಅದರಿಂದ ಮತ್ತಷ್ಟು ಬಡತನ ಸೇರಿಕೊಳ್ಳುತ್ತದೆ. ನಿನಗೆ ಹೇಳಬೇಕೆಂದರೆ, ಸೈನಿಕರು

ಮತ್ತು ಶ್ರೀಮಂತರಾದರೂ ಶೆರೆಯನ್ನೇಕೆ ಕುಡಿಯುತ್ತಾರೆ? ಎನ್ನುವುದು ನನಗೆ ಇಂದಿಗೂ ತಿಳಿಯುತ್ತಿಲ್ಲ. ಯುರೋಪನಲ್ಲಿಯೂ ಕುಡಿಯದೇ ಇದ್ದವರನ್ನು ಕಂಡಿದ್ದೆ ನಾನು. ನನ್ನ ದೇಶ ಕುಡಿತದಿಂದ ಮುಕ್ತವಾಗಿರಬೇಕೆಂದೇ ನನ್ನ ಸದಿಚ್ಛೆ." ಎಂದು ಪತ್ರ ಬರೆದ ಗಾಂಧಿ ಶುಕ್ರವಾರ ಜನವರಿ ೯ರ ದಿನವನ್ನು ನಿಸರ್ಗ ಚಿಕಿತ್ಸೆ ಹಾಗೂ ಜನರ ಸಂದರ್ಶನದಲ್ಲಿ ಕಳೆದ.

ಮರುದಿನ, ಅಂದರೆ ಶನಿವಾರ ಗಾಂಧಿಯನ್ನು ಕಾಣಲು ಬ್ರಿಟಿಷ್ ಸೆಕ್ರೆಟರಿ ಆರ್ಥರ್ ಹೆಂಡರಸನ್ ಮತ್ತು ಮಲಯಾದ ಗೌವರ್ನರ್ ಜನರಲ್ ಮ್ಯಾಕ್ ಡೋನಾಲ್ಡ್ ಬಂದರು. ಅವರಿಗೆ ಭಾರತದಲ್ಲಿ ಗಾಂಧಿ ಮಾಡಿದ ಸಾಧನೆ ಶಬ್ದಶಃ ಆಶ್ಚರ್ಯ ಹುಟ್ಟಿಸಿದೆ. ಗಾಂಧಿಯ ಬಗೆಗೆ ಅಭಿಮಾನ ಮೂಡಿಸಿದೆ. ತಮ್ಮ ಮಧ್ಯದ ಒಬ್ಬ ವ್ಯಕ್ತಿ ಯಾವುದೇ ರಾಜಕಿಯ ಮತ್ತು ಸೈನಿಕ ಸಹಾಯವಿಲ್ಲದೆ ಮಾಡಿದ ಈ ಸಾಧನೆಗೆ ಅಭಿನಂದನೆಗಳನ್ನು ಹೇಳಬೇಕೆಂದು ಅವರು ಇಲ್ಲಿಗೆ ಬಂದಿದ್ದಾರೆ. ಗಾಂಧಿ ಸಾಯಂಕಾಲದ ಇಂದಿನ ಪ್ರಾರ್ಥನೆಗೆ ಅವರನ್ನೂ ಆಹ್ವಾನಿಸಿದ. ಜೊತೆಗೆ ಕಳೆದ ಅನೇಕ ದಿನಗಳಿಂದ, ಅನೇಕ ಜನರಿಗೆ ಕಾಡಿದ್ದ ಒಂದು ಪ್ರಶ್ನೆಗೆ ಇಂದಿನ ಪ್ರಾರ್ಥನಾ ಸಭೆಯಲ್ಲಿ ಉತ್ತರಿಸಬೇಕೆಂದು ನಿರ್ಧರಿಸಿದ್ದ. ಈ ವಿಚಾರ ಕುರಿತು ಅವನಿಗೆ ಅನೇಕರು ಪತ್ರ ಬರೆದಿದ್ದಾರೆ, ಟೀಕೆ ಮಾಡಿದ್ದಾರೆ. ಬಂಡವಾಳಷಾಹಿಯ ಮನೆಯ ಸಾಕು ನಾಯಿಯಾಗಿ ಬಿದ್ದಿರುವ ಈತ ಈ ದೇಶವನ್ನು ಬಡವರ ಪರ, ಶೋಷಿತರ ಪರ, ದೀನ ದಲಿತರ ಪರ ಮಾಡಲು ಸಾಧ್ಯವೇ? ಎಂದು ಕುಹಕವಾಡಿದ್ದಾರೆ.

ಪ್ರಶ್ನೆ: ನಾವು ಚಳಿಯಲ್ಲಿ ಸೂರಿಲ್ಲದೆ ಸಾಯುವಾಗ ಈ ಗಾಂಧಿ ಬಿರ್ಲಾಹೌಸದಲ್ಲಿ ಏಕೆ ವಾಸಿಸಿದ್ದಾನೆ?

ಗಾಂಧಿ: ದೆಹಲಿ ಕೋಮು ದಳ್ಳುರಿಯಲ್ಲಿ ಹೊತ್ತಿ ಉರಿಯುತ್ತಿರುವಾಗ ನೌಖಾಲಿಯಿಂದ ನಾನು ಇಲ್ಲಿಗೆ ಬಂದೆ. ಇಡೀ ನಗರ ಸ್ಮಶಾನದಂತೆ ಕಾಣುತ್ತಿತ್ತು. ಭಂಗಿ ಕಾಲೋನಿಯಂತೂ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿದ್ದ ನಿರಾಶ್ರಿತರಿಂದ ತುಂಬಿ ಹೋಗಿತ್ತು. ಯಾವ ಕ್ಷಣದಲ್ಲಿಯೂ ಏನು ಬೇಕಾದರೂ ಘಟಿಸಿ ಬಿಡುವ ಉದ್ವಿಗ್ನದ ಕ್ಷಣಗಳು. ನಾನು ನಿರಾಶ್ರಿತರಲ್ಲಿಗೆ ಭಂಗಿ ಕಾಲೋನಿಯಲ್ಲಿಯೇ ವಾಸಿಸಲು ನಿರ್ಧರಿಸಿದ್ದೆ, ಆದರೆ ಸರ್ದಾರ ಪಟೇಲ್ ಯಾವುದೇ ಕಾರಣಕ್ಕೂ ನನಗೆ ಅಲ್ಲಿ ವಾಸಮಾಡಲು ಅನುಮತಿ ನೀಡುವುದಿಲ್ಲ ಎಂದರು. ಅದು ಭಾರತದ ಉಪಪ್ರಧಾನಿಯ ಆಜ್ಞೆಯೂ ಕೂಡ. ನನ್ನ ವಾಸಸ್ಥಳ ಬಿರ್ಲಾಹೌಸ್ ಎಂದು ನಿರ್ಧರಿಸಿದವರು ಅವರು. ನನಗೆ ವಿರೋಧ ವ್ಯಕ್ತಪಡಿಸುವ ಅವಕಾಶವೇ ಇರಲಿಲ್ಲ. ನನ್ನ ವಾಸಸ್ಥಳವೆಂದರೆ ಬರೀ ಒಂದು ಕೋಣೆಯಾದರೆ ಸಾಲದು. ಖಂಡಿತವಾಗಿಯೂ ವಾಸದ ಕೋಣೆಯೊಂದಿಗೆ ಒಂದು ಆಫೀಸು, ಅಡುಗೆ ಮನೆ, ನನ್ನೊಂದಿಗೆ ಕೆಲವು ಸಂದರ್ಭಗಳಲ್ಲಿ ಉಳಿದುಕೊಳ್ಳುವ ಅತಿಥಿಗಳಿಗೂ ವಾಸಿಸಲು ಮತ್ತೊಂದು ಕೋಣೆ ಇರಲೇಬೇಕು. ಹೊರಗೆ ಬಂದರೆ ನನ್ನ ಸಾರ್ವಜನಿಕ

ಪ್ರಾರ್ಥನೆಗೆ ವಿಶಾಲ ಸ್ಥಳವೂ ಬೇಕು. ಅದೆಲ್ಲವೂ ಈ ಬಿರ್ಲಾಹೌಸಿನಲ್ಲಿ ಅವರು ಕಂಡುಕೊಂಡರು. ಜೊತೆಗೆ ನಾನು ಅವರಿಗೆ ಸಮೀಪದಲ್ಲಿಯೇ ಸಹಜವಾಗಿ ನಿಲುಕಿಸಿಕೊಳ್ಳುವ ಅಂತರದಲ್ಲಿರಬೇಕೆನ್ನುವುದೂ ಅವರ ಬಯಕೆ. ಎಲ್ಲೋ ದೂರದಲ್ಲಿ ನನ್ನನ್ನಿಡುವ ಇರಾದೆ ಅವರದಾಗಿರಲಿಲ್ಲ. ಎರಡೇ ಎರಡು ನಿಮಿಷದಲ್ಲಿ ನಾನು ಅವರನ್ನು, ಅವರು ನನ್ನನ್ನು ಕಾಣುವ ಅಂತರದಲ್ಲಿ ಈಗ ನಾವಿದ್ದೇವೆ.

ಭಂಗಿ ಕಾಲೋನಿಗೆ ಹೋಗಲು ಭಯವಾದರೆ ತಕ್ಷಣ ನನ್ನನ್ನು ಕಾಣಲು ಮುಸ್ಲಿಂ ಬಂಧುಗಳಿಗೂ ಈ ಸ್ಥಳ ಅನುಕೂಲಕರವಾಗಿದೆ. ಇಲ್ಲಿಂದಲೇ ಎಲ್ಲವನ್ನೂ ಗಮನಿಸಬಹುದಾಗಿದೆ. ಈ ಉದ್ದೇಶವನ್ನು ಹೊರತುಪಡಿಸಿ ಬಿರ್ಲಾಹೌಸ್‌ನಲ್ಲಿರುವ ಮತ್ತ್ಯಾವ ವಿಶೇಷ ಕಾರಣಗಳೂ ಇಲ್ಲ. ನಾನು ಶ್ರೀರಾಮನನ್ನು ಹೊರತುಪಡಿಸಿ ಇನ್ನಾರ ದಾಸನಾಗಲೂ ಸಾಧ್ಯವಿಲ್ಲ."

ಸಭೆ ಮುಗಿಯಿತು, ವಿದೇಶಿ ಸ್ನೇಹಿತರಿಬ್ಬರೂ ನವದೆಹಲಿಯಿಂದ ಲಂಡನ್ನಿಗೆ ಹೊರಟು ನಿಂತರು. ಇಂದಿನ ಪ್ರಾರ್ಥನಾ ಸಭೆಯಲ್ಲಿ ೫-೧೦ ನಿಮಿಷಗಳ ಸಮಯದ ವ್ಯತ್ಯಾಸವಾಯಿತು. ಗಾಂಧಿ ಎಲ್ಲರ ಕ್ಷಮೆಯನ್ನೂ ಕೋರಿದ. ತೀರ ಅಪರೂಪಕ್ಕೆನ್ನುವಂತೆ ಹೀಗೆ ಆತನ ದಿನಚರಿಯಲ್ಲಿ ಸಮಯದ ವ್ಯತ್ಯಾಸವಾಗಿದೆ. ಆತನ ಕೊನೆಯ ದಿನ ಜನವರಿ ೩೦ರಂದು ಮತ್ತೆ ಇಂತಹ ವ್ಯತ್ಯಾಸವನ್ನು ಕಾಣಬಹುದು. ಸರಿಯಾಗಿ ಸಾಯಂಕಾಲದ ೫ ಗಂಟೆಗೆ ಪ್ರಾರ್ಥನೆಯಲ್ಲಿ ಇರಬೇಕಾದ ಗಾಂಧಿ ಅಂದು ಹೊರಟದ್ದು ೧೬ ನಿಮಿಷಗಳಷ್ಟು ತಡವಾಗಿ. ಕಾಲದ ಪರಿಜ್ಞಾನವಿಲ್ಲದೆ ಬದುಕುವವರಿಗೆ ಆಯುಷ್ಯವೇ ಒಂದು ಹೊರೆ. ಪ್ರತಿ ಗಂಟೆಯೂ ಬೇಸರ. ಆದರೆ ಎಲ್ಲವನ್ನೂ ಪ್ರಜ್ಞಾಪೂರ್ವಕವಾಗಿ ಬದುಕುವ ಗಾಂಧಿಯಂತವರಿಗೆ ಪ್ರತಿಕ್ಷಣವೂ ಬದುಕು ಇಲ್ಲವೇ ಸಾವು.

ನೌಖಾಲಿಯ ತನ್ನ ಅಭಿಮಾನಿ ಅಮ್ತುಸ್ ಸಲಾಂಳ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಆಕೆ ದೆಹಲಿಗೂ ಬರಲಿಲ್ಲ. ಕೊನೆಗೂ ಆಕೆಯ ಕುಟುಂಬದ ಅಳಿದುಳಿದವರ ಬಗೆಗೆ ಗಾಂಧಿಗೆ ಯಾವ ಮಾಹಿತಿಯೂ ಸಿಗಲಿಲ್ಲ. ಪಟಿಯಾಲಾದ ಮಹಾರಾಜರೊಂದಿಗೆ ಎಲ್ಲ ಮಾತನಾಡಿಯೂ ಏನೂ ಪ್ರಯೋಜನವಾಗಲಿಲ್ಲ. ಆಕೆ ಮಾತ್ರ ಹತಾಶಳಾಗಿ ಸಿಟ್ಟಿನಿಂದ ಗಾಂಧಿಗೆ ಪತ್ರಗಳನ್ನು ಬರೆಯುತ್ತಲೇ ಇದ್ದಾಳೆ. ಯಾರ ಸಿಟ್ಟಿಗೂ ಯಾರೇ ಸಿಗದಿದ್ದರೂ ಗಾಂಧಿ ಸಿಕ್ಕೇ ಸಿಗುತ್ತಿದ್ದ. ಸಾಕು ಸಾಕೆನ್ನುವಷ್ಟು ಬೈಯಿಸಿಕೊಂಡು ಮತ್ತೆ ಸಮಾಧಾನದ ಉತ್ತರ ನೀಡುತ್ತಿದ್ದ. ಇಂದು ಜನವರಿ ೧೦ ರಾತ್ರಿಯ ನಿದ್ರೆಗೆ ಜಾರುವ ಮುನ್ನ, ಒಂದು ಅತ್ಯಂತ ಪ್ರೀತಿಯ ಪತ್ರವನ್ನು ಗಾಂಧಿ ಆಕೆಗೆ ಬರೆದಿದ್ದಾನೆ.

"ಅಮ್ತುಸ್ ಸಲಾಂ,

ನಿನ್ನ ಪತ್ರದ ಸಾಲು ಸಾಲೂ ಸಿಟ್ಟು. ಬಹುತೇಕ ನೀನು ಅದನ್ನೇ ಆಹಾರವಾಗಿಸಿಕೊಂಡು ಬದುಕಿರಬಹುದು. ಅದೇನೇ ಇರಲಿ, ಈ ಆಲೋಚನೆಗಳನ್ನು ಎಷ್ಟೂ ಅಂತ ಮಾಡಬಹುದು. ನೀನು ಮುಸ್ಲಿಂ, ನಾನು ಹಿಂದೂ ಹೀಗೆ ನನಗೆ ಎಂದೂ ಅನ್ನಿಸಲಿಲ್ಲ. ನನ್ನ ಭಾವನೆ ಇಷ್ಟೇ. ನೀನು ಅಮ್ತುಸ್ ನಾನು ಗಾಂಧಿ. ಎಲ್ಲಿ ನಮ್ಮ ಆತ್ಮಗಳ ಮಿಲನವಾಗುತ್ತದೆಯೋ ನಾವು ಅಲ್ಲಿ ಒಂದೇ. ನನ್ನ ದೃಷ್ಟಿಯಲ್ಲಿ ಇಂದು ನೌಖಾಲಿಯಲ್ಲಿ ಸ್ಥಾಪಿತವಾಗಿರುವ ಶಾಂತಿಯ ಹಿಂದಿನ ಜಂಗಮ ಆತ್ಮ ನೀನು. ಇದು ನಿನ್ನ ಅತ್ಯಂತ ಮಹತ್ವದ ಕೊಡುಗೆಯಾಗಿತ್ತು, ಕಾಯಕವಾಗಿತ್ತು. ಈಗಲೂ ಅದು ನಿನ್ನ ಕಾಯಕವಾಗಿಯೇ ಇದೆ. ನೀನು ಎಲ್ಲಿಯೇ ಇದ್ದರೂ ನನ್ನ ಮಗಳೆ. ಇಂತಹ ಕಾಯಕವನ್ನೇ ನಾನು ನಿನ್ನಿಂದ ನಿರೀಕ್ಷಿಸಲು ಸಾಧ್ಯವಿದೆ. ನೀನು ಅನ್ಯ ಆಲೋಚನೆಗಳಲ್ಲಿ ತೊಡಗಿಕೊಂಡರೆ ಲಾಭವೇನು? ಪಟಿಯಾಲಾ ಹಾಗೂ ನಿನ್ನನ್ನು ಹಿಂದೆ ಬಿಟ್ಟು ಪಟಿಯಾಲಾದಿಂದ ಪಾಕಿಸ್ತಾನಕ್ಕೆ ಹೋದ ನಿನ್ನ ಸಹೋದರರು, ಆ ನಿನ್ನ ಭಯಾನಕ ದಿನಗಳು ಎಲ್ಲ, ಎಲ್ಲವನ್ನೂ ಮರೆತುಬಿಡು. ನನ್ನ ಮಗಳಾಗಿ ಮಾಡಬೇಕಾದುದರ ಕಡೆ ಗಮನಹರಿಸು.

ಆಶೀರ್ವಾದಗಳೊಂದಿಗೆ

ಇಂತೀ ನಿನ್ನ

ಬಾಪು."


ಮರುದಿನ ರವಿವಾರ, ಭಾವಲ್‌ಪೂರ್ ಸ್ಟೇಟ್‌ನಿಂದ ಸಿಖ್ ಮತ್ತು ಹಿಂದೂ ನಿರಾಶ್ರಿತರ ಒಂದು ದೊಡ್ಡ ಪಡೆ ದೆಹಲಿಯ ಗಾಂಧಿಯ ವಾಸ್ತವ್ಯ, ಬಿರ್ಲಾಹೌಸ ಮುಂದೆ ನಿಂತು ಗಾಂಧಿಯ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿತು. ಈ ಗಾಂಧಿ ತನ್ನ ಆದರ್ಶದ ಕನಸು, ಸಾಯಂಕಾಲದ ಪ್ರಾರ್ಥನೆ, ಮಹಾತ್ಮ ಎನ್ನುವ ಸೋಗಲಾಡಿತನ ಎಲ್ಲ ಬದಿಗಿಟ್ಟು ೭೦ ಸಾವಿರ ಹಿಂದೂ ನಿರಾಶ್ರಿತರ ಬದುಕಿನ ಪ್ರಶ್ನೆಗಳಿಗೆ ಒಂದು ವ್ಯಾವಹಾರಿಕ ಪರಿಹಾರವನ್ನು ಸೂಚಿಸಲೇಬೇಕೆಂದು ಆಗ್ರಹಿಸುತ್ತಿದ್ದರು. ಎಲ್ಲ ಕೆಟ್ಟ ಪದಗಳನ್ನು, ಘೋಷಣೆಗಳನ್ನು ಅಲ್ಲಿ ಕೂಗಲಾಗುತ್ತಿತ್ತು. ಏನೂ ಘಟಿಸಬಹುದಾದ ಸಂದರ್ಭ. ಗಾಂಧಿ ನಿರ್ಭಯನಾಗಿ ಹೊರಗೆ ಬಂದು ಜನರ ಎದುರು ನಿಂತುಕೊಂಡ. ಜನರ ಮಧ್ಯದಿಂದ ಖಾವಿ ಪೇಟವನ್ನು ಸುತ್ತಿಕೊಂಡ ಸಾಧು ಒಬ್ಬ ಸಿಟ್ಟಿನಿಂದ ಗಾಂಧಿಯ ಮುಂದೆ ಬಂದು, ತಾನು ಓದುವ ಮನವಿಯನ್ನು, ತಮ್ಮ ಸಂಕಷ್ಟಗಳನ್ನು ಮೊದಲು ಕೇಳಬೇಕೆಂದು ಗಾಂಧಿಗೆ ಒತ್ತಾಯಿಸಿದ. ಆತ ಹಾಗೆಯೇ ಕೂಗಾಡಿದ್ದರೆ ವಿಧಿ ಇಲ್ಲದೆ ಗಾಂಧಿ ಮರಳಿ ಒಳಗೆ ಹೋಗಬೇಕಾಗುತ್ತಿತ್ತು. ಆದರೆ ಗಾಂಧಿ ಸಮಾಧಾನ ಚಿತ್ತದಿಂದಿರುವದನ್ನು ನೋಡಿ ಅಲ್ಲಿರುವ ಕೆಲವು ಜನರೇ ಸಾಧುವಿಗೆ ಸುಮ್ಮನೆ ಕುಳಿತು ಗಾಂಧಿಯ ಮಾತುಗಳನ್ನು

ಕೇಳಬೇಕೆಂದು ವಿನಂತಿಸಿಕೊಂಡರು. ಗಾಂಧಿ ಘೋಷಣೆಗಳ ಅಬ್ಬರ, ಜನರ ಸಿಟ್ಟು, ಆಕ್ರೋಶ, ಆ ಸನ್ಯಾಸಿಯ ಅರಚಾಟ, ಎಲ್ಲವೂ ಒಂದು ಹಂತಕ್ಕೆ ತಣ್ಣಗಾದ ಮೇಲೆ ಮಾತನಾಡಲು ಶುರುಮಾಡಿದ.

"ಬರೀ ಮುಸ್ಲಿಮರ ಮಾತುಗಳನ್ನು ಕೇಳುವ ನಾನು, ಹಿಂದೂಗಳ ಬಗ್ಗೆ ನಿರ್ಲಕ್ಷ್ಯದಿಂದಿದ್ದೇನೆ ಎನ್ನುವ ನನ್ನ ಮೇಲಿನ ಆಪಾದನೆಗೆ ನಾನೇನು ಹೇಳಬೇಕೊ ತಿಳಿಯುತ್ತಿಲ್ಲ. ಆದರೆ ನಾವು ಇಂದು ಎಷ್ಟು ಅಧಃಪತನಗೊಂಡಿದ್ದೇವೆ ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತಿದೆ. ಗೀತೆಯ ಸಾಲುಗಳನ್ನು ಹೇಳುತ್ತಾ ಆತ್ಮಸಂಯಮದ ವಿಚಾರಗಳನ್ನು ಬದುಕುತ್ತೇವೆ ಎಂದು ಹೇಳಿಕೊಳ್ಳುವ ಈ ಸಾಧುಗಳೂ ಹೀಗೆ ಮನಸೋ ಇಚ್ಛೆ ಕೂಗಾಡಿದರೆ ಸಂಯಮ ಪದಕ್ಕೆ ಯಾವ ಅರ್ಥ? ಪದಗಳಿಗೆ ಅರ್ಥ ಬರುವುದು ನಮ್ಮ ಕ್ರಿಯೆಯಿಂದ. ನನಗೆ ನಿಮ್ಮ ಕಷ್ಟಗಳ ಸಂಪೂರ್ಣ ತಿಳುವಳಿಕೆ ಇದೆ. ಭಾವಲ್‌ಪೂರದ ನಿರಾಶ್ರಿತರ ಸಮಸ್ಯೆ ಒಂದಿಲ್ಲಾ ಒಂದು ದಿನ ಗಂಭೀರವಾಗುತ್ತದೆ ಎನ್ನುವುದನ್ನು ನಮ್ಮ ನಾಯಕರುಗಳಿಗೆ ನಾನು ಹೇಳುತ್ತಲೇ ಬಂದಿದ್ದೇನೆ. ನಿಮಗೆ ಭರವಸೆ ಕೊಡುತ್ತೇನೆ– ನಾನು ಅಲ್ಲಿರುವ ಎಲ್ಲಾ ಸಿಖ್ ಮತ್ತು ಹಿಂದೂ ಬಂಧುಗಳನ್ನ ಸುರಕ್ಷಿತವಾಗಿ ಕರೆಯಿಸಿಕೊಳ್ಳುವ ವ್ಯವಸ್ಥೆಗಳಿಗಾಗಿ ಸರಕಾರಕ್ಕೆ ಒತ್ತಾಯಿಸುತ್ತೇನೆ. ಕರಾಚಿಯಿಂದ ನನಗೂ ತಂತಿ ಸಂದೇಶ ಬಂದಿದೆ. ಪತ್ರಿಕೆಗಳಲ್ಲಿ ಆಗಿರುವ ವರದಿಗಿಂತಲೂ ಅಲ್ಲಿಯ ಪರಸ್ಥಿತಿ ಗಂಭೀರವಾಗಿದೆ.

ಇದು ನಾವೆಲ್ಲರೂ ಅತ್ಯಂತ ಸಹನೆ ಮತ್ತು ಶಾಂತಿಯಿಂದ ವರ್ತಿಸಬೇಕಾದ ಸಂದರ್ಭ. ನಾವು ಸಹನೆಯನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಳ್ಳುತ್ತೇವೆ, ಸೋಲುತ್ತೇವೆ. And defeat is a word that should find no place in our dictionary. Do not believe in anything simply because I said. Learn from your mistakes. Do only that which appears to you to be right. ನೀವು ಸಮರ್ಥರಾಗಿರಿ. ಸಿಕ್ಕ ನಿಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಿ. ನಾನು ಹೊರಡಬೇಕಾದ ಬದುಕಿನ ರಂಗಸ್ಥಳದಿಂದ ನಿರ್ಗಮಿಸಲೇಬೇಕಾದ ಕಾಲ ಸನ್ನಿಹಿತವಾಗಿದೆ. ಆದರೆ ನೀವು ಇನ್ನೂ ಬಾಳಿ ಬದುಕಬೇಕಿದೆ." ಇವು ಜನವರಿ ೧೦ರ ಗಾಂಧಿಯ ಮಾತುಗಳು. ತನ್ನ ಅಂತ್ಯವನ್ನು ತಾನೇ ಮುಂಚಿತವಾಗಿ ಸಾರಿಕೊಂಡಿದ್ದ ಭವಿಷ್ಯದರ್ಶಿಯ ಸಾಲುಗಳು.

❑



ನಾನೇ ರಾಷ್ಟ್ರವಲ್ಲ

ಗಾಂಧಿಯ ಮಾತು ಕೇಳಿ ಆಹಾರ ನಿಯಂತ್ರಣ ಕಾಯ್ದೆಯನ್ನು, ಬಟ್ಟೆ ಉತ್ಪಾದನೆ ಮೇಲಿನ ನಿಯಂತ್ರಣವನ್ನು ಹಿಂತೆಗೆದುಕೊಂಡಿದ್ದಕ್ಕಾಗಿ ಜನರು ಮತ್ತಷ್ಟು ಹೆಚ್ಚಿಗೆ ಬೇಜಾವಾಬ್ದಾರರಾಗಿದ್ದಾರೆ, ವಿಲಾಸಿಗಳಾಗಿದ್ದಾರೆ, ನಾವು ನಿಯಂತ್ರಣವನ್ನು ಉಳಿಸಿಕೊಳ್ಳಬೇಕಾಗಿತ್ತು ಎಂದು ಕಾಂಗ್ರೆಸ್ಸಿನ ಮುಖಂಡನೊಬ್ಬ ಗಾಂಧಿಗೆ ಪತ್ರ ಬರೆದು ತಿಳಿಸಿ ಇಂದು ಗಾಂಧಿ ಸಿಡಿಮಿಡಿಗೊಳ್ಳುವಂತೆ ಮಾಡಿದ್ದಾನೆ. ಸ್ವತಂತ್ರ ರಾಷ್ಟ್ರದ ಜನಪರ ನಾಯಕನೊಬ್ಬ ಜನಪರವಾದುದನ್ನು ಆಲೋಚಿಸುವುದನ್ನು ಬಿಟ್ಟು, ಅವರ ಪರವಾದ ಕಾರ್ಯಗಳಲ್ಲಿ ತನ್ನನ್ನೇ ತಾನು ತೊಡಗಿಸಿಕೊಳ್ಳುವುದನ್ನು ಬಿಟ್ಟು, ಈ ತೆರನಾಗಿ ಬರೆದುದು ಗಾಂಧಿಗೆ ಎಲ್ಲಿಲ್ಲದ ಸಿಟ್ಟು ತರಿಸಿದೆ. ರಾಜಕಾರಣವೇನು ಎನ್ನುವುದನ್ನು ರಾಷ್ಟ್ರದ ಸಾಮಾನ್ಯ ಜನಕ್ಕೆ ತಿಳಿಸುವುದಕ್ಕಿಂತಲೂ ಮುಖ್ಯವಾಗಿ

ರಾಜ್ಯಭಾರ ಮಾಡಲು ಹೊರಟಿದ್ದೇವೆ ಎನ್ನುವ ಭ್ರಮೆಯಲ್ಲಿರುವವರಿಗೆ ಕಲಿಸಲೇಬೇಕಾದ ಅವಶ್ಯಕತೆ ಇದೆ ಎಂದು ಗಾಂಧಿಗೆ ಅನ್ನಿಸಿದೆ. ಜನವರಿ ೧೧ರ ಮುಂಜಾವು, ಅನಾರೋಗ್ಯದಿಂದ ಚೇತರಿಸಿಕೊಂಡು ಬಂದ ಮನುಳನ್ನು ಕೂಡ್ರಿಸಿಕೊಂಡು ಗಾಂಧಿ ತನ್ನ ಪತ್ರದಲ್ಲಿ ಅನೇಕ ಮೌಲಿಕ ಪ್ರಶ್ನೆಗಳನ್ನು ಎತ್ತುತ್ತಾ ಹೋಗುತ್ತಾನೆ. ಈ ಪತ್ರ ರಾಜಕಾರಣಕ್ಕೆ ಇಳಿಯಬೇಕೆನ್ನುವ ಜಗತ್ತಿನ ಯಾವುದೇ ದೇಶ, ಜನಾಂಗ, ಕಾಲದ ಪ್ರತಿಯೊಬ್ಬ ವ್ಯಕ್ತಿಯೂ ಗಾಂಧಿಯ ಈ ಸಾಲುಗಳನ್ನು ಗಮನಿಸಲೇಬೇಕು ಅನ್ನಿಸಿದ್ದರಿಂದ ಆ ಪತ್ರವನ್ನು ನಾನಿಲ್ಲಿಟ್ಟಿದ್ದೇನೆ.

"ಬಂಧು,

ಒಂದು ಕ್ಷಣ ನಿನ್ನ ಪತ್ರ ನೋಡಿ ನಾನು ಗಲಿಬಿಲಿಗೊಂಡೆ. ಪತ್ರದಲ್ಲಿ ನೀನು ಸ್ವತಂತ್ರ ದೇಶದ ನಾಯಕನಂತೆ ಮಾತನಾಡುವುದರ ಬದಲು ವ್ಯವಸ್ಥೆಯ ಗುಲಾಮನಂತೆ ಬರೆದಿದ್ದೀಯಾ. ಆಹಾರ ಮತ್ತು ಬಟ್ಟೆ ನಿಯಂತ್ರಣ ಕಾಯ್ದೆಯನ್ನು ಹಿಂತೆಗೆದುಕೊಂಡುದುದಕ್ಕಾಗಿ ಜನ ಭ್ರಷ್ಟಾಚಾರಿಗಳಾಗಿದ್ದಾರೆ ಎಂದು ನೀನು ವಾದಿಸುವುದಾದರೆ ಆ ಭ್ರಷ್ಟಾಚಾರಕ್ಕೆ ನಿನ್ನ ಕೊಡುಗೆಯೂ ಇದೆ. ನಾನು ಭ್ರಷ್ಟನಾಗದ ಹೊರತು ಜನತೆ, ನಾಡು ಭ್ರಷ್ಟವಾಗಲು ಸಾಧ್ಯವೇ ಇಲ್ಲ. ನಾನು ಪ್ರಾಮಾಣಿಕನಾಗಿದ್ದೇನೆ ಎನ್ನುವುದಾದರೆ ಇಡೀ ನಾಡೇ ನನ್ನ ವಿರುದ್ಧ ನಿಂತರೂ ನಾನು ಹೇಳಬೇಕಾದುದನ್ನು ನೇರವಾಗಿ ಹೇಳುತ್ತಲೇ ಇರಬೇಕು. ಒಂಟಿ ಧ್ವನಿಯನ್ನು ದುರ್ಬಲ ಧ್ವನಿ ಎಂದು ಅಂದುಕೊಳ್ಳಬಾರದು.

ಇದ್ದ ವಿಚಾರವನ್ನೇ ಹೇಳಬೇಕೆಂದರೆ, ಪಾರ್ಲಿಮೆಂಟಿನಲ್ಲಿ ನೀನು ಒಂಟಿ ಅಲ್ಲವೇ ಅಲ್ಲ, ನಿನಗೆ ಅನೇಕ ಸಹಚರರಿದ್ದಾರೆ. ಅಧಿಕಾರದ ದುರಭಿಮಾನ ಮಾತ್ರ ನಿಮ್ಮ ಧ್ವನಿಯನ್ನು ದುರ್ಬಲ ಮಾಡಬಹುದೇ ವಿನಾ ಭಗವಂತ ಕೊಟ್ಟಿರುವ ಧ್ವನಿ ಎಂದೂ ದುರ್ಬಲವಾಗಲು ಸಾಧ್ಯವಿಲ್ಲ. ಸಮಾಜದಲ್ಲಿ ತಿಮಿಂಗಿಲಗಳಿವೆ, ಅವುಗಳನ್ನು ಮನಸೋ ಇಚ್ಛೆ ಬಲಿಯಲು ಬಿಟ್ಟು, ಜನಸಾಮಾನ್ಯರನ್ನು ಅವುಗಳ ಬಾಯಿಗೆ ಕೊಟ್ಟು, ಅದನ್ನು ನಿಭಾಯಿಸುವುದು ಹೇಗೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ ಎನ್ನುವುದಾದರೆ ನಾಯಕ ಅದಕ್ಕೆ ಬಲಿಯಾಗಬೇಕು, ಜನರಲ್ಲ. ರಾಜಕಾರಣಕ್ಕೆ ಇಳಿದ ಮೇಲೆ ತಿಮಿಂಗಿಲದ ಮಾರಣಾಂತಿಕ ಹಲ್ಲೆಗಳಿಂದ, ಅದರ ಸಾವಿನ ದವಡೆಯಿಂದ ಹೇಗೆ ಪಾರಾಗಬೇಕೆನ್ನುವುದು ನಿನಗೆ ಗೊತ್ತಿರಬೇಕು. ಭಿನ್ನ ಆಲೋಚನೆಯ ಈ ರಾಷ್ಟ್ರದ, ಎಲ್ಲರಿಗೂ ಬೇಕಾಗುವ ಬಾಳಿನ ನೈಪುಣ್ಯವೂ ನಮಗೆ ಬೇಕು.

ಬಂಧು, ಗೊತ್ತಿರಲಿ ನಿಜವಾದ ಪ್ರಜಾಪ್ರಭುತ್ವದಲ್ಲಿ ಜನಗಳು ಎಲ್ಲವನ್ನೂ ಪುಸ್ತಕ ಓದಿ ಕಲಿಯುವುದಿಲ್ಲ. ಸರಕಾರದ ಅನುಶಾಸನಗಳಿಂದ ಕಲಿಯುವುದಿಲ್ಲ, ಏಕೆಂದರೆ

ಸರ್ಕಾರ ತನ್ನ ಸೇವಕ ಎನ್ನುವುದು ಸಾಮಾನ್ಯನಿಗೂ ಗೊತ್ತು. ಆತ ತನ್ನ ಅನುಭವಗಳಿಂದ ಕಲಿಯುತ್ತಾನೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಅನುಭವವೇ ಗುರು. ಈಗ ನಿನ್ನ ಎರಡನೆಯ ಪ್ರಶ್ನೆಯಾದ ಹಿಂದೂ-ಮುಸ್ಲಿಂ ಗಲಭೆಯ ಕುರಿತು ಮಾತಾಡುತ್ತೇನೆ, ಇಲ್ಲಿಯೂ ನನ್ನ ವಾದ ಇಷ್ಟೆ, ಸ್ನೇಹ ಮತ್ತು ಮನುಷ್ಯತ್ವದ ಪರಿಧಿಯಲ್ಲಿ ನಾನು ಇದನ್ನು ಬಗೆಹರಿಸಬಲ್ಲೆ ಎನ್ನುವ ವಿಶ್ವಾಸ ನನಗಿದ್ದರೆ ನಾನು ಒಂಟಿಯಾದರೂ ಚಿಂತೆಯಿಲ್ಲ, ಅದನ್ನು ಘಂಟಾಘೋಷವಾಗಿ ಹೇಳಬೇಕು. ಈ ವಿಚಾರದಲ್ಲಿ ನಾನೂ ನಿನ್ನೊಂದಿಗಿದ್ದೇನೆ. ನನ್ನ ಪಾಲಿನ ಸಹಾಯವನ್ನು ನಾನು ಮಾಡುತ್ತೇನೆ, ಆದರೆ ನನ್ನ ಸೇವೆಗೊಂದು ಮಿತಿ ಇದೆ. ಒಂದು ಕಾಲಕ್ಕೆ ಈ ವಿಚಾರದಲ್ಲಿ ನಾನು ಅನಭಿಷಕ್ತ ನಾಯಕನಾಗಿದ್ದೆ, ಈಗ? ನನ್ನೊಂದಿಗೆ ಅನೇಕ ನಾಯಕರಿದ್ದಾರೆ, ಈಗಲೂ ನನ್ನ ಹಳೆಯ ವಾದವನ್ನೇ ಮುಂದಿಟ್ಟರೆ ನಾನು ಅವರಲ್ಲಿ ಕೊನೆಯವನಾಗುತ್ತೇನೆ, ಯಾಕೆಂದರೆ ನನಗಿಂತಲೂ ಅವರ ಆಲೋಚನೆಗಳು ಉತ್ಕೃಷ್ಟ.

ಈ ಒಂದು ಕಟು ಸತ್ಯವನ್ನು ನಿನ್ನ ಹೊರತು ಇನ್ಯಾರಿಗೆ ಹೇಳಲಿ? ಇಂದು ಕಾಂಗ್ರೆಸ್ ನೆಲಕಚ್ಚುತ್ತಿದೆ. ಅದರಲ್ಲಿರುವವರೆಲ್ಲರಿಗೂ ಎಮ್.ಎಲ್.ಎ. ಗಳಾಗಬೇಕೆನ್ನುವ ಆಸೆಬುರುಕತನ. ಬೇಸರವಿಲ್ಲ, ಆದರೆ ಹಾಗೆ ಆಯ್ಕೆಯಾದವರು ರಾಷ್ಟ್ರದ ಸೇವೆಯನ್ನೇ ಮಾಡುತ್ತಿಲ್ಲ. ಅವರಷ್ಟಕ್ಕೆ ಅವರು ಸ್ವತಂತ್ರರು. ಕೈ ತುಂಬಾ ಸಂಬಳ, ಕಾರು, ಕಾರು-ಬಾರು. ನಿಮ್ಮ ವ್ಯವಸ್ಥೆಯಲ್ಲಿ ನನ್ನೊಬ್ಬ ವ್ಯಕ್ತಿ ಇದ್ದಾರೆ, ಅವರ ಹೆಸರು ಕೊಂಡ ವೆಂಕಟಪ್ಪಯ್ಯ. ಕಾಂಗ್ರೆಸ್ಸಿನ ಎಮ್.ಎಲ್.ಎ. ಗಳು ಯಾವ ಕನಿಷ್ಠ ಹಂತಕ್ಕೆ ಇಳಿದಿದ್ದಾರೆ ಅನ್ನುವುದನ್ನು ಆತ ನನಗೆ ನಿರಂತರವಾಗಿ ತಿಳಿಸುತ್ತಾನೆ. ನಾಗರಿಕ ಸೇವಾಧಿಕಾರಿಗಳನ್ನು ಈ ಕಾಂಗ್ರೆಸ್ಸಿಗರು ಕೆಟ್ಟದಾಗಿ ನಡೆಯಿಸಿಕೊಳ್ಳುವುದನ್ನೂ ನನಗೆ ಆತ ವಿವರಿಸಿದ್ದಾನೆ.

ನಮ್ಮ ಮಧ್ಯದ ಅಂತರ ಹೆಚ್ಚಾಗುತ್ತಿದೆ. ನನ್ನ ಸಾಮಾನ್ಯ ಪ್ರತಿನಿಧಿಯ ವಾದ, ಈ ದೇಶದಲ್ಲಿ ಮೊದಲು ಎಮ್.ಎಲ್.ಎ. ಗಳ ಸಂಖ್ಯೆ ಕಡಿಮೆಯಾಗಬೇಕು. ಜನರನ್ನು ಪ್ರತಿನಿಧಿಸದ ಈ ಎಮ್.ಎಲ್.ಎ. ಗಳು ಯಾರಿಗೆ ಬೇಕು? ಒಂದು ಪ್ರದೇಶದಲ್ಲಿ ನಾಯಕನಾದ ಮಾತ್ರಕ್ಕೆ ಒಬ್ಬ ಎಮ್.ಎಲ್.ಎ. ಇಡೀ ರಾಷ್ಟ್ರದ ನಾಯಕನಂತೆ ವರ್ತಿಸುತ್ತಾನೆ. ನಾನಿಲ್ಲದೆ ಹೋದರೆ ಈ ನಾಡಿನ ಗತಿಯೇನು ಎಂದು ಮಾತಾಡುತ್ತಾನೆ. ಇಂತವರು ಭಾರತ ನಮ್ಮದು ಎಂದು ಹೇಳಬಾರದು, ನಾವು ಜನಸಾಮಾನ್ಯರು, ಅವನನ್ನು ಬದಿಗಿರಿಸಿ ಭಾರತ ನಮ್ಮದು ಎಂದು ಹೇಳಬೇಕು. ಹಾಗೊಂದು ವೇಳೆ ನಾವು ಹೇಳುವುದಾದರೆ ನಮ್ಮ ದೇಶದ ಕಾನೂನುಗಳು ನಮ್ಮ ವ್ಯಾಪ್ತಿಯಲ್ಲಿರಬೇಕು, ಈ ದೇಶದ ಸಾಮಾನ್ಯನ ವ್ಯಾಪ್ತಿಯಲ್ಲಿ. ಆಹಾರ ನಿಯಂತ್ರಣ ಕಾಯ್ದೆ ಇರಬಾರದು ಎಂದು ನಾನು ಹೇಳಿದ್ದೇನೆ ಮತ್ತು ಗೆದ್ದಿದ್ದೇನೆ."

ಸೋಮವಾರ ಜನವರಿ ೧೨, ಗುಜರಾತಿನ ಸಾಬರಮತಿ ಆಶ್ರಮದಲ್ಲಿ ತೋತಾ ರಾಮಜೀ ತೀರಿಕೊಂಡಿದ್ದಾರೆ. ಇದೇ ದಿನ ಹಿಂದೂತ್ವದ ಮಾಹಾ ಪ್ರತಿಪಾದಕರಾದ ವಿವೇಕಾನಂದರ ಜನ್ಮದಿನ. ಗಾಂಧಿ ಅವನೇ ಹೇಳಿಕೊಳ್ಳುವಂತೆ ಈ ದೇಶದ ಸನಾತನ ಹಿಂದೂ. ಸಾಬರಮತಿಯಲ್ಲಿ ಕಸಗುಡಿಸುವುದು, ಅಡುಗೆ ಮಾಡುವುದು, ಶೌಚಾಲಯಗಳನ್ನು ಶುಚಿಯಾಗಿಡುವುದು - ಇಂತಹ ಕ್ರಿಯೆಗಳಲ್ಲಿ ತೊಡಗಿದ್ದ ತೋತಾರಾಮ್ ಗಾಂಧಿಯಂತೆ ಸನಾತನಿಯೂ ಅಲ್ಲ, ವಿವೇಕಾನಂದರಂತೆ ಧರ್ಮಪ್ರಚಾರಕನೂ ಅಲ್ಲ, ಆತ ಮೀರಾನಿಂದ ರಹೀಮನವರೆಗೂ ರಾಮಭಜನೆಗಳ ಮಹಾ ಕಣಜ. ಆತನಿಗೆ ಸಂಗೀತದ ಶಾಸ್ತ್ರೀಯ ಅನುಭವವೂ, ಜ್ಞಾನವೂ ಇರಲಿಲ್ಲ. ಆದರೆ ಏಕತಾರಿಯನ್ನು ಹಿಡಿದು ಭಗವಂತನಲ್ಲಿ ಮರುಳಾಗುತ್ತಿದ್ದ ತೋತಾರಾಮ್ ಎನ್ನುವ ಈ ಮುನಿಯನ ಧ್ವನಿಗೆ ಇನ್ನಾವುದೂ ಸರಿಸಾಟಿಯಾಗಿರಲಿಲ್ಲ.

ಜನವರಿ ೧೩ರಂದು ಗಾಂಧಿ ತನ್ನ ಜೀವಿತದ ಕೊನೆಯ ಉಪವಾಸವನ್ನು ಘೋಷಿಸುತ್ತಾನೆ. ಇದು ತನ್ನ ಜೀವಮಾನದ ಕೊನೆಯ ಉಪವಾಸವೆಂದು ಆತನಿಗೂ ಗೊತ್ತಿಲ್ಲ. ಅವನು ಅಂದುಕೊಂಡಂತೆ ೧೩೩ ಅಥವಾ ೧೨೫ ವರ್ಷ ಬದುಕಿದ್ದರೆ ಇಂತಹ ಅದೆಷ್ಟು ಉಪವಾಸಗಳನ್ನು ಮಾಡುತ್ತಿದ್ದನೋ. ಈ ಉಪವಾಸವನ್ನು ಕುರಿತು ಚರ್ಚಿಸುವುದಕ್ಕಿಂತಲೂ ಮುಂಚೆ ಇನ್ನೂ ಒಂದು ವಿಚಾರ ಜೂಜನ್ನು ಕುರಿತಾದುದು. ತನ್ನ ಅನುಯಾಯಿ ಒಬ್ಬನಿಂದ ಜನರು ಕುದುರೆ ಜೂಜಿನಲ್ಲಿ ಹೇಗೆ ಹಣ ಮತ್ತು ಸಮಯವನ್ನು ಹಾಳು ಮಾಡುತ್ತಾರೆ ಎನ್ನುವುದನ್ನು ಕೇಳಿ ತಿಳಿದಿದ್ದ ಗಾಂಧಿ ಇದನ್ನು ಅಷ್ಟೇ ಗಂಭೀರವಾಗಿ ತೆಗೆದುಕೊಂಡಿದ್ದ. ಜನವರಿ ೧೨ರ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಯಾವುದೇ ಕಾರಣಕ್ಕೆ ಭಾರತೀಯರು ಇಂತವುಗಳತ್ತ ಗಮನಹರಿಸಲೇಬಾರದು ಎಂದು ಎಚ್ಚರಿಕೆ ನೀಡಿದ್ದ.

ಗಾಂಧಿಯನ್ನು ಸಾವಿನೆಡೆಗೆ ನಡೆಯಿಸಿಕೊಂಡು ಹೋಗುವ ಒಂದು ಮಹತ್ವದ ಘಟನೆ ಇಂದಿನದು. ದೇಶ ವಿಭಜನೆಯ ಸಂದರ್ಭದಲ್ಲಿ ಆಗಿರುವ ಒಪ್ಪಂದದಂತೆ ಭಾರತ ೫೫ ಕೋಟಿ ಹಣವನ್ನು ಪಾಕಿಸ್ತಾನಕ್ಕೆ ಕೊಡಬೇಕು, ಇಷ್ಟರೊಳಗಾಗಿ ಕೊಟ್ಟು ಮುಗಿದಿರಬೇಕಾದ ವ್ಯವಹಾರವದು. ಆದರೆ ದೇಶದ ಅನೇಕ ಹಿಂದೂ ನಾಯಕರು, ಅದರಲ್ಲೂ ವಿಶೇಷವಾಗಿ ಸರ್ದಾರ್ ಪಟೇಲ್ ಈ ಕುರಿತು ಈಗ ಭಿನ್ನಮತ ಶುರುವಿಟ್ಟುಕೊಂಡಿದ್ದಾರೆ. ಅವರ ಪ್ರಕಾರ ಪಾಕಿಸ್ತಾನಕ್ಕೆ ಭಾರತ ಕೊಡಬೇಕಾದ ಹಣದ ವಿಚಾರವನ್ನು ಕಾಶ್ಮೀರದ ವಿಷಯದಿಂದ ಭಿನ್ನವಾಗಿ ನೋಡಬಾರದು, ಕಾಶ್ಮೀರದಲ್ಲಿ ಅಕ್ರಮ ಚಟುವಟಿಕೆಗಳನ್ನು ಮಾಡಿ, ಬುಡಕಟ್ಟು ಜನಾಂಗಗಳನ್ನು ಭಾರತದ ವಿರುದ್ಧ ಎತ್ತಿ ಕಟ್ಟಿ, ಅಲ್ಲಿಯ ಭೂ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ಶಕ್ತಿ ಇರುವ ಪಾಕಿಸ್ತಾನಕ್ಕೆ ಯಾವುದೇ ಕಾರಣಕ್ಕೂ ಹಣ ಕೊಡಬಾರದು. ಹಾಗೊಂದು ವೇಳೆ ಕೊಡುವುದೇ ಆದಲ್ಲಿ ಪಾಕಿಸ್ತಾನ ಅಕ್ರಮವಾಗಿ ಆಕ್ರಮಿಸಿಕೊಂಡಿರುವ

ಪ್ರದೇಶವನ್ನು ಬಿಟ್ಟುಕೊಡಬೇಕು, ಕಾಶ್ಮೀರ ಪಾಕಿಸ್ತಾನಿಯರ ಅನೈತಿಕ ಚಟುವಟಿಕೆಗಳಿಂದ ಮುಕ್ತವಾಗಿರಬೇಕು.

ಗಾಂಧಿಗೆ ಪಟೇಲರ ಈ ವಾದ ಅರ್ಥವಾಗುತ್ತಿಲ್ಲ. ಇದು ಮೊಂಡತನ ಎನ್ನುವುದು ಗಾಂಧಿಯ ಗ್ರಹಿಕೆ. ಹೀಗಾಗಿ ಆತ್ಮಶುದ್ಧಿಗಾಗಿ ಉಪವಾಸ ಎಂದು ಕುಳಿತುಬಿಟ್ಟ. ಶ್ರೀರಾಮನ ನಾಮದ ಮೇಲೆ ಬದುಕುವ ತಾನು ಕೊಟ್ಟ ಮಾತಿಗೆ ತಪ್ಪಿ ನಡೆಯುವುದೆಂದರೆ ಸಾವೇ ಸರಿ. ಈ ವಿಚಾರವನ್ನು ತಾನು ಉಪವಾಸ ಕೂಡ್ರುವಕ್ಕಿಂತ ಮುಂಚೆ ಜನತೆಗೆ ನೇರವಾಗಿ ಗಾಂಧಿ ಹೇಳಿದ್ದಾನೆ. "I have no answer to give to my Muslim friends. My impotence has been gnawing at me from day to day. It will go immediately my fast is undertaken. No man, if he is pure, has anything more precious to give than his life. I hope I have that purity in me to justify my step. I ask all of you to bless my effort". ಗಾಂಧಿ ಇಷ್ಟನ್ನು ಹೇಳಿ ಉಪವಾಸವನ್ನು ಆರಂಭಿಸಿಯೇ ಬಿಟ್ಟ. ಮಿಗಿಲಾಗಿ ತಾನು ಪ್ರಾರಂಭಿಸಿರುವ ಈ ನಿರಶನದ ಯಜ್ಞಕ್ಕೆ ನಿಮ್ಮ ಸಹಾಯಬೇಕೆಂದು ದೇಶಬಾಂಧವರನ್ನು ಕೇಳಿಕೊಂಡ.

ಸುದ್ದಿ ರಾಷ್ಟ್ರವ್ಯಾಪಿಯಾಯಿತು. ಕಾಂಗ್ರೆಸ್ಸಿನ ಪ್ರಮುಖರಾದ ಬಿ.ಜಿ.ಖೇರ್, ಎಸ್.ಕೆ.ಪಾಟೀಲ್, ಗುಲ್ಜಾರಿಲಾಲ್ ನಂದಾ, ಸರ್ದಾರ್ ಚೋಕಾವಾಲಾ, ಕೇದಾರ್‌ನಾಥ್ ಸಹಾನಿ, ಹೀಗೆ ಅನೇಕರು ಅನೇಕ ರೀತಿಯಲ್ಲಿ ಈ ಉಪವಾಸಕ್ಕೆ ಪ್ರತಿಕ್ರಿಯಿಸಿದರು. ಸಿ.ರಾಜಗೋಪಾಲಾಚಾರಿಯುವರಂತೂ ತಾನೂ ಗಾಂಧಿಯೊಂದಿಗೆ ನಿರಶನ ಮಾಡಿ ಸತ್ತು ಹೋಗಬೇಕು, ಭ್ರಷ್ಟಗೊಂಡಿರುವ ವರ್ತಮಾನದ ರಾಜಕಾರಣದಲ್ಲಿ ಯಾತಕ್ಕಾಗಿ ಬದುಕಿರಬೇಕು ಎಂದುಕೊಂಡರು. "I really do not see why we, old people, should continue to live if we are useless. People like me who have grown up to an advanced age feel that if we cannot influence society, it is better that we pass on". ರಾಜಗೋಪಾಲಾಚಾರಿಯ ಈ ಮಾತುಗಳಲ್ಲಿ ಗಾಂಧಿಯ ಸಂಕಟವನ್ನೇ ಓದಿದೆವಷ್ಟೆ. ಗಾಂಧಿಯೂ ಇದನ್ನೇ ತಾನೆ ಹೇಳುತ್ತಿರುವುದು? 'ನೀವು ಬದಲಾಗಿ, ಇಲ್ಲದೇ ಹೋದರೆ ನನಗೆ ಸಾಯಲು ಬಿಡಿ.'

ಜನವರಿ ೧೫, ಯಥಾಪ್ರಕಾರ ಗಾಂಧಿ 'ಹರಿಜನ' ಪತ್ರಿಕೆಗೆ ತನ್ನ ಲೇಖನವನ್ನು ಕಳುಹಿಸಿದ. ಅದರಲ್ಲಿ ನಿರಶನದ ವಿಚಾರವನ್ನು ಬೇರೆ ರೀತಿಯಾಗಿ ಬರೆದ. "ಇಂದು ಪ್ರತಿಯೊಬ್ಬ ಭಾರತೀಯನು ಏನು ಮಾಡಬೇಕಿದೆ? ದೇಶ ವಿಭಜನೆಯನ್ನು ನಾವು ಒಪ್ಪಿಕೊಂಡಿಲ್ಲ ಎನ್ನುವುದಾದರೆ, ಜನರನ್ನು ಹಿಂದೂಗಳು ಮತ್ತು ಮುಸ್ಲಿಮರು ಎಂದು ವಿಭಜಿಸಿ ಗುರುತಿಸುವುದಿಲ್ಲ ಎನ್ನುವುದಾದರೆ, ದೆಹಲಿಯನ್ನು ಭಾರತದ

ರಾಜಧಾನಿಯೆಂದು ನಾವು ಪರಿಗಣಿಸಬೇಕಾಗಿಲ್ಲ. ಒಂದು ಕಾಲಕ್ಕೆ ಇಂದ್ರಪ್ರಸ್ಥ, ಹಸ್ತಿನಾವತಿ ಎಂದು ಕರೆಯಿಸಿಕೊಂಡ ಈ ನಗರ ಭಾರತದ ಹೃದಯ. ಇದು ಕೇವಲ ಹಿಂದೂಗಳದೆಂದು ಪರಿಗಣಿಸುವುದು ಶುದ್ಧ ಮೂರ್ಖತನ. ಎಲ್ಲಾ ಹಿಂದೂಗಳು–ಮುಸ್ಲೀಮರು ಸಿಖರು, ಪಾರಸಿ, ಕ್ರಿಶ್ಚಿಯನ್ ಮತ್ತು ಜ್ಯೂಗಳು ಹೀಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಕರಾಚಿಯಿಂದ ದಿಬ್ರುಗಢದವರೆಗೆ ತಮ್ಮ ಕೈಲಾದ ಮಟ್ಟಿಗಿನ ಸೇವೆಯನ್ನು ಮಾಡಿಕೊಂಡು ಬದುಕಿರುವ ಪ್ರತಿಯೊಬ್ಬರಿಗೂ ಈ ದೇಶ ಸೇರಿದೆ. ಬಹುಸಂಖ್ಯಾತ ಕೋಮಿನವರಿಗೆ ಈ ದೇಶ ಸೇರಿದೆ ಎಂದು ಹೇಳಿದರೆ ಆ ಕೋಮನ್ನು ಅವಮಾನಿಸಿದಂತೆ. ಯಾರು ಶುದ್ಧ ಹೃದಯದಿಂದ ಕಾಯಕದಲ್ಲಿ ತೊಡಗಿರುವರೋ ಅವರು ಈ ದೇಶದ ಮೊದಲ ಹಕ್ಕುದಾರರು. ಯಾರು ದೆಹಲಿಯಿಂದ ಮುಸ್ಲಿಮರನ್ನು ಹೊರಹಾಕಬೇಕು ಎಂದು ವಾದಿಸುತ್ತಿರುವರೋ ಅವರೇ ಈ ದೇಶದ ಮೊದಲ ವೈರಿಗಳು. ಯಾರು ಶುದ್ಧಾತ್ಮರೋ ಅವರು ಜಾಣರು. ಜಾತಿ–ಜಾತಿಯ ಮಧ್ಯೆ, ಧರ್ಮ–ಧರ್ಮದ ಮಧ್ಯೆ ವ್ಯತ್ಯಾಸ ಎಣಿಸದ ಪೂರ್ಣಾಂಗರು. ತಮ್ಮಂತೆಯೇ ಮಹಿಳೆಯರನ್ನು ರಕ್ಷಿಸುವ, ಅಸ್ಪೃಶ್ಯರನ್ನು ಗೌರವಿಸುವ ಪುಣ್ಯಾತ್ಮರು. ಸಂದರ್ಭ ಬಂದರೆ ತಮ್ಮ ಪ್ರಾಣವನ್ನು ಲೆಕ್ಕಿಸದೇ ಅನ್ಯರಿಗಾಗಿ ಹೋರಾಡಿ ಸಾಯುವ ಹುತಾತ್ಮರು. ಪ್ರತಿಕ್ಷಣವೂ ಈ ದೇಶಕ್ಕೆ ತನ್ನ ಕರ್ತವ್ಯವೇನು ಎಂದು ತಮ್ಮನ್ನೇ ತಾವು ಪರೀಕ್ಷಿಸಿಕೊಳ್ಳುವ ಪ್ರಜ್ಞಾವಂತರು.

ಸತ್ಯವನ್ನೇ ಹೇಳಬೇಕೆಂದರೆ ಎಂತಹ ಸಂದರ್ಭದಲ್ಲಿಯೂ ನಾನು ಬದುಕಿರಲೇಬೇಕು ಎನ್ನುವ ಹುಚ್ಚು ಮೋಹ ನನಗೆ ಈ ಜೀವದ ಬಗೆಗಿಲ್ಲ. ನನ್ನ ಬದುಕಿನ ಉಳಿವು ಮತ್ತು ಅಳಿವಿನ ಪ್ರಶ್ನೆಯನ್ನು ದೇವರಿಗೆ ಬಿಟ್ಟಿದ್ದೇನೆ. ಅನೇಕರು ನಾನು ಉಪವಾಸವನ್ನು ಕೈಬಿಡಬೇಕು, ಉಂಡುಟ್ಟು, ಭಾಷಣಗಳನ್ನು ಮಾಡುತ್ತಾ ಬದುಕಿರಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಆದರೆ ನಾನು ಉಪವಾಸವನ್ನು ಕೈಬಿಡುವುದು ಹೇಗೆ? ಈ ಉಪವಾಸ ನನಗೆ ದೇವರು ನೀಡಿದ ಆಜ್ಞೆ, ನನ್ನ ಆತ್ಮಶುದ್ಧಿಗಾಗಿ ನಾನಿದನ್ನು ಮಾಡುತ್ತಿದ್ದೇನೆ. ನನ್ನ ದೇಶಬಾಂಧವರಿಗೆ ಸದ್ಬುದ್ಧಿಯನ್ನು ಕರುಣಿಸೆಂದು ನಾನು ಈ ಉಪವಾಸಕ್ಕೆ ತೊಡಗಿದ್ದೇನೆ. ಇದನ್ನು ನಿಲ್ಲಿಸಬೇಕಾದರೂ ಆ ದೇವರು ನೀಡುವ ಆಜ್ಞೆಯನ್ನು ಅನುಸರಿಸಿಯೇ ನಿಲ್ಲಿಸುತ್ತೇನೆ.

"My request is that each one of you should examine your own self and purify yourself. If people in large numbers purify themselves, India will benefit and may be I shall be able to give up my fast. Let no one be concerned about me. You must give

thought only to the people's welfare. In the end, all who are born have to die. Why then should we fear death or grieve over it?"

ಜನವರಿ ೧೬ರಂದು ಗಾಂಧಿಯನ್ನು ಮಾತನಾಡಿಸಲು, ಆತನ ಆರೋಗ್ಯದ ಸ್ಥಿತಿಯನ್ನು ಪರೀಕ್ಷಿಸಲು ವೈದ್ಯರುಗಳಾದ ಡಾ. ಬಿ.ಸಿ.ರಾಯ್, ಜೀವರಾಜ್ ಮೆಹತಾ ಮತ್ತು ಎಮ್.ಡಿ.ಡಿ. ಗಿಲ್ಡರ್ ಬಂದರು. ಆದರೆ ಅವರಿಗೆ ಅನುಮತಿಸದ ಗಾಂಧಿ, ತನ್ನ ಬಗ್ಗೆ ಚಿಂತಿಸುವ ಅವಶ್ಯಕತೆ ಇಲ್ಲ. ದೇವರು ತನ್ನ ಆರೋಗ್ಯದ ನಿಗಾ ವಹಿಸುತ್ತಾನೆ ಎಂದು ಮುಗುಳ್ನಕ್ಕು ಮಾಡಲು ಬಹಳಷ್ಟು ಕೆಲಸವಿದೆ, ಮಕರ ಸಂಕ್ರಮಣದ ಶುಭ ಹಾರೈಸಿ ಎಷ್ಟೆಲ್ಲಾ ಪತ್ರಗಳು ಬಂದಿವೆ, ಕೆಲವು ಪತ್ರಗಳಿಗಂತೂ ತಾನು ಉತ್ತರಿಸಲೇಬೇಕಿದೆ ಎಂದು ಅವರನ್ನು ಮರಳಿ ಕಳುಹಿಸಿದ. ಮಗ ದೇವದಾಸ್ ಗಾಂಧಿಗೆ, ಮೀರಾಬೆನ್‌ಳಿಗೆ ಮಕರ ಸಂಕ್ರಮಣದ ಅರ್ಥವನ್ನು ವಿವರಿಸಿ ಎಳ್ಳು-ಬೆಲ್ಲವನ್ನು ಕಳುಹಿಸಿದ್ದ ಪ್ರೇಮಾ ಕಾಂಟಕ್‌ರಿಗೆ ಜನವರಿ ೧೬ರಂದು ಗಾಂಧಿ ಪತ್ರಗಳನ್ನು ಬರೆದ. ಕಾಂಗ್ರೆಸ್ ವರ್ಕಿಂಗ್ ಕಮೀಟಿಗೆ ಇದೇ ದಿನ ಇನ್ನೊಂದು ಪತ್ರ ಬರೆದು ಜನಪರ ನಾಯಕರಾದ ಜಯಪ್ರಕಾಶ ನಾರಾಯಣರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಎಲ್ಲ ಕಾಲಕ್ಕೂ ಮೆಜಾರಿಟಿ ಸರಿಯಾಗಿರುತ್ತದೆ ಎನ್ನುವ ಭ್ರಮೆಯಿಂದ ಹೊರಬರಬೇಕು, ಪ್ರಜಾಪ್ರಭುತ್ವದಲ್ಲಿ ಪರಸ್ಪರ ವಿಚಾರಗಳನ್ನು ಗೌರವಿಸಬೇಕು, ಅಹಿಂಸೆಯನ್ನು ಪಾಲಿಸದೇ ಇರುವವರು ಸರಕಾರಿ ವ್ಯವಸ್ಥೆಗಳಲ್ಲಿ ಇರಬಾರದು, ಹೀಗೆ ಕೆಲವು ವಿಚಾರಗಳನ್ನು ಹಂಚಿಕೊಂಡ.

ಮಧ್ಯಾಹ್ನದ ವೇಳೆಗೆ ಗಾಂಧಿಯ ಆರೋಗ್ಯ ವಿಷಮಿಸಲಾರಂಭಿಸಿತು. ಎದ್ದು ಕೂಡ್ರುವಷ್ಟು ಶಕ್ತಿ ಶರೀರದಲ್ಲಿ ಉಳಿದಿರಲಿಲ್ಲ. ಬಹುತೇಕ ಸಾಯಂಕಾಲದ ಪ್ರಾರ್ಥನೆ ನಡೆಯಲಿಕ್ಕಿಲ್ಲವೆಂದು ಎಲ್ಲರ ಲೆಕ್ಕಾಚಾರವಾಗಿತ್ತು. ಆದರೆ ಹಾಗಾಗಲಿಲ್ಲ. ಪಂಡಿತ್ ನೆಹರೂರವರ ಕ್ಯಾಬಿನೆಟ್ ಪಾಕಿಸ್ತಾನಕ್ಕೆ ಕೊಡಬೇಕಾದ ೫೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಲೇ, ಹಣ ಬಿಡುಗಡೆಯಾದ ಈ ಸುದ್ದಿ ಗಾಂಧಿಗೆ ಗೊತ್ತಾಗುತ್ತಲೇ ಗಾಂಧಿ ಚೈತನ್ಯದ ಚಿಲುಮೆಯಾದ. ಆದರೆ ಗೋಡ್ಸೆ ಮಾತ್ರ ಇನ್ನು ಗಾಂಧಿಯನ್ನು ಉಳಿಸಲೇಬಾರದು, ಈತನನ್ನು ಹೀಗೆಯೇ ಬಿಟ್ಟರೆ ಮುಸ್ಲಿಮರಿಗಾಗಿ ದೇಶವನ್ನೇ ಹರಾಜು ಹಾಕುತ್ತಾನೆ ಎಂದು ಗಾಂಧಿಯನ್ನು ಕೊಲೆ ಮಾಡುವ ತನ್ನ ನಿರ್ಧಾರವನ್ನು ಈ ಕ್ಷಣದಿಂದ ಗಟ್ಟಿಗೊಳಿಸಿಕೊಂಡ.

ಯಥಾಪ್ರಕಾರ ಸಾಯಂಕಾಲದ ಪ್ರಾರ್ಥನಾ ಸಭೆ. ಇಂದು ಪ್ರಾರ್ಥನೆಗೆ ಪ್ರಧಾನಿ ನೆಹರು ಕೂಡಾ ಉಪಸ್ಥಿತರಿದ್ದರು. ಸೇರಿದ ಜನರ ಸಮ್ಮುಖದಲ್ಲಿ ಪಾಕಿಸ್ತಾನಕ್ಕೆ ಕೊಡಬೇಕಾದ ೫೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ನೆಹರು ಪುನರುಚ್ಚರಿಸಿದರು. ಗಾಂಧಿ ಮಲಗಿಕೊಂಡೇ ಆತನ ಮುಂದಿಟ್ಟಿರುವ ಧ್ವನಿವರ್ಧಕದ ಮೂಲಕ ಕೆಲವೇ ಕೆಲವು

ಮಾತುಗಳನ್ನಾಡಿ ಇಂತಹ ಒಂದು ಯೋಗ್ಯ ಮತ್ತು ಸಮಯೋಚಿತ ನಿರ್ಧಾರ ತೆಗೆದುಕೊಂಡಿದುದಕ್ಕಾಗಿ ನೆಹರು ಕ್ಯಾಬಿನೆಟನ್ನು ಸಮಗ್ರ ಭಾರತೀಯರ ಪರವಾಗಿ ಗಾಂಧಿ ಅಭಿನಂದಿಸಿದ. ಎಲ್ಲವೂ ಗಾಂಧಿ ಅಂದುಕೊಂಡಂತೆ ಆಗಿತ್ತು. ೫೫ ಕೋಟಿ ರೂಪಾಯಿಗಳೂ ವಿಚಾರವನ್ನು ಯಾವುದೇ ಕಾರಣಕ್ಕೂ ಕಾಶ್ಮೀರದ ವಿಚಾರದೊಂದಿಗೆ ಬೆರೆಸಬಾರದು ಯಾವುದಕ್ಕೋ ಯಾವುದೋ ಕುಂಟು ನೆಪ ಹೇಳಿ ನಮ್ಮ ಕ್ಯಾಬಿನೆಟ್ ವಚನಭ್ರಷ್ಟವಾಗಬಾರದು ಎನ್ನುವ ಆತನ ಹಟ ಸಾಧಿಸಿತ್ತು. ಆದರೆ ಇಷ್ಟನ್ನು ಸಾಧಿಸುವುದರೊಳಗಾಗಿ ಗಾಂಧಿಯ ಆರೋಗ್ಯ ಈಗ ನಿರೀಕ್ಷೆ ಮೀರಿ ಹದಗೆಟ್ಟಿತ್ತು.

೭೯ನೇ ವಯಸ್ಸಿನಲ್ಲಿದ್ದ ಗಾಂಧಿಗೆ ದೇಹ ಭಾರವೆನಿಸಲಾರಂಭಿಸಿತ್ತು. ಕಿಡ್ನಿಗಳು ದುರ್ಬಲಗೊಂಡಿದ್ದವು. ನಿಶ್ಯಕ್ತತೆ ಗಾಂಧಿ ಮೇಲೇಳದಂತೆ ಮಾಡಿತ್ತು. ನಸುಕಿನ ಮೂರು ಗಂಟೆ ಮೂವತ್ತು ನಿಮಿಷಕ್ಕೆ ಎದ್ದು ಕಾರ್ಯೋನ್ಮುಖನಾಗುತ್ತಿದ್ದ ಗಾಂಧಿ ಕಳೆದ ೫ ದಿನಗಳಿಂದ ಏನೂ ಮಾಡಲಾಗದೇ ಮಲಗಿಕೊಂಡಿದ್ದಾನೆ. ಈ ಸುದ್ದಿ ತಿಳಿದು ಜನತೆ ಆತಂಕಗೊಂಡು ದೆಹಲಿಗೆ ಬರಲಾರಂಭಿಸಿದರೆ ಪರಿಸ್ಥಿತಿ ಇನ್ನೂ ಹದಗೆಡುತ್ತದೆ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿತ್ತು. ಹಣ ಬಿಡುಗಡೆಯಾದ ಮರುಕ್ಷಣ ಗಾಂಧಿ ಉಪವಾಸ ನಿಲ್ಲಿಸುತ್ತಾನೆ ಎಂದು ಎಲ್ಲರ ಕಲ್ಪನೆಯಾಗಿತ್ತು, ಆದರೆ ರಾಜಕೀಯಕ್ಕೂ ನನ್ನ ಉಪವಾಸಕ್ಕೂ ಯಾವುದೇ ಸಂಬಂಧವಿಲ್ಲ. ಭಾರತ ಮತ್ತು ಪಾಕಿಸ್ತಾನಗಳು ವೈರವನ್ನು ಬಿಟ್ಟು ಸಹೋದರರಂತೆ ಬದುಕುವುದನ್ನು ನೋಡುವವರೆಗೂ, ಜನರಲ್ಲಿ ಹೃದಯ ಪರಿವರ್ತನೆಯನ್ನು ನೋಡುವವರೆಗೂ ತಾನು ಉಪವಾಸವನ್ನು ಬಿಡುವ ಪ್ರಮೇಯವೇ ಇಲ್ಲವೆಂದು ಗಾಂಧಿ ಹೇಳಿದ. ಆತನ ಪ್ರಕಾರ ಖಡ್ಗಕ್ಕಿಂತಲೂ ಸತ್ಯಾಗ್ರಹಿಯ ಬಳಿ ಇರುವ ಉಪವಾಸದ ಈ ಆಯುಧ ಪರಿಣಾಮಕಾರಿಯಾದುದು. ಈ ಸಂದರ್ಭದ ಆತನ ಕೆಲವು ಹೇಳಿಕೆಗಳನ್ನು ಕೇಳಿದರೆ ಗಾಂಧಿ ಜೀವದೊಂದಿಗೆ ಹುಡುಗಾಟವಾಡುತ್ತಿದ್ದಾನೆ, ಈತನ ತಲೆ ಕೆಟ್ಟಿದೆ, ಅವನು ಸಾಯಲು ನಿರ್ಧರಿಸಿದ್ದರೆ ಸಾಯಲಿ ಬಿಡಿ ಎನ್ನುವಷ್ಟು ಯಾರಿಗಾದರೂ ಬೇಸರ ಹುಟ್ಟುತ್ತದೆ. ಆತ ಹೇಳುತ್ತಾನೆ, ತನ್ನನ್ನು ಉಪವಾಸ ಬಿಡುವಂತೆ ಎಲ್ಲರೂ ಒತ್ತಾಯಿಸುತ್ತಿದ್ದಾರೆ, ನನ್ನ ನಿಗಾವಹಿಸಿರುವ ವೈದ್ಯರುಗಳಿಗೆ ಚಿಂತೆಯಾಗಿದೆ. ಸಾಧ್ಯವಾದರೆ ಈ ಉಪವಾಸವನ್ನು ಬಿಟ್ಟುಬಿಡು ಎಂದು ನಾನೂ ಗಾಂಧಿಯನ್ನು ಒತ್ತಾಯಿಸುತ್ತಿದ್ದೇನೆ. I wish, I could persuade myself to do so. ಆದರೆ ಏನು ಮಾಡಲಿ? ಆ ಶ್ರೀರಾಮ ನನಗೆ ಆದೇಶಿಸುತ್ತಿಲ್ಲ. ಈ ಕ್ಷುದ್ರ ದೇಹದಿಂದ ಆತನಿಗೇನಾದರೂ ಉಪಯುಕ್ತವಾದುದು ಆಗಬಹುದು ಎನ್ನಿಸಿದರೆ ಆತ ಕಾಯುತ್ತಾನೆ, ಇಲ್ಲದಿದ್ದರೆ ಕೊಲ್ಲುತ್ತಾನೆ ಎಂದೆಲ್ಲಾ ಆಲೋಚಿಸುತ್ತಾನೆ.

ವೈದ್ಯರು ಗಾಂಧಿಯ ಕಿಡ್ನಿಗಳು ವಿಫಲವಾಗುವ ಹಂತದಲ್ಲಿವೆ ಎಂದು ಪರದಾಡುತ್ತಿದ್ದರೆ, ತನ್ನ ಆರೋಗ್ಯ ಹಿಂದಿನ ಉಪವಾಸಗಳಿಗಿಂತಲೂ ಈ ಸಾರಿ ತುಂಬಾ ಚೆನ್ನಾಗಿದೆ, ತನಗೆ ಶಕ್ತಿ ಬಂದ ಅನುಭವವಾಗುತ್ತಿದೆ, ತನ್ನೊಳಗೊಂದು ಮಹಾ ಯಜ್ಞ ನಡೆಯುತ್ತಿದೆ ಎಂದು ಆತ ಜನರಿಗೆ ಸಂದೇಶ ಕೊಡುತ್ತಾನೆ. ಇಷ್ಟರಲ್ಲಿಯೇ ಉಪವಾಸದ ತನ್ನ ಯಜ್ಞ ಮುಗಿಯುವುದರಲ್ಲಿ ಭಾರತ ಮತ್ತು ಪಾಕಿಸ್ತಾನಗಳಿಗೆ ಸದ್ಬುದ್ಧಿ ಬರುತ್ತದೆ ಎಂದು ಹೇಳುತ್ತಾನೆ. ಆತನ ಈ ಸಾಲುಗಳನ್ನು ಓದಿ: "During all my previous fasts, I never felt as strong as I am feeling today on the fourth day. My hope is that if you will continue the Yagna of self purification, my strength to address you can remain till the very end. I am in no hurry at all. Hurry will not help us in our work. I feel an ineffable peace. I have no wish to live if I cannot see peace established all around me, in India as well as in Pakistan."

ಎಲ್ಲವೂ ವಿಚಿತ್ರವಾಗಿದೆ. ತನ್ನ ಉಪವಾಸಕ್ಕೂ, ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎಂದು ಗಾಂಧಿ ಹೇಳುತ್ತಿದ್ದರೆ, ಈ ಉಪವಾಸದ ಮೂಲಕ ಮಹಾತ್ಮ ನಮಗೆ ೭ ನಿಬಂಧನೆಗಳನ್ನು ಹಾಕಿದ್ದಾರೆ ಎಂದು, ಆ ೭ ನಿಬಂಧನೆಗಳನ್ನು ಗಾಂಧಿಯ ಸಮ್ಮುಖದಲ್ಲಿಯೇ ಜನವರಿ ೧೮ರ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಮೌಲಾನಾ ಆಜಾದ್ ಜನರಿಗೆ ತಿಳಿಸುತ್ತಾರೆ.

೧. ಶೀಘ್ರದಲ್ಲಿಯೇ ದೆಹಲಿಯಲ್ಲಿ ಜರುಗಲಿರುವ ಖ್ವಾಜಾ ಭಕ್ತಿಯಾರ್ ಸಾಹೇಬ್ ಉರಸ್‌ಗೆ ಎಲ್ಲಾ ಅಲ್ಪಸಂಖ್ಯಾತರು ಭಯಮುಕ್ತರಾಗಿ ಪಾಲ್ಗೊಳ್ಳುವಂತಾಗಬೇಕು.

೨. ದೆಹಲಿಯಲ್ಲಿ, ದೇಶವಿಭಜನೆಯ ದಂಗೆಯ ದಿನಗಳಲ್ಲಿ, ಹಿಂದೂ ದೇವಾಲಯಗಳಾಗಿ ಪರಿವರ್ತನೆಗೊಂಡಿರುವ ಮಸೀದಿಗಳನ್ನು ಅವುಗಳ ಮೂಲ ಸ್ಥಿತಿಗೆ ತರಬೇಕು.

೩. ಅತೀ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಮರು ವಾಸವಾಗಿರುವ ದೆಹಲಿಯ ಕರೋಲ್‌ಬಾಗ್, ಸಬ್ಜಿ ಮ್‌ಂಡಿ, ಪಹಾಡ್‌ಗಂಜ್ ಪ್ರದೇಶಗಳನ್ನು ಅಲ್ಪಸಂಖ್ಯಾತರಿಗೆ ಸುರಕ್ಷಿತ ಮಾಡಿಕೊಡಬೇಕು.


೪. ದೇಶವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಹೋಗಿರುವ ಮುಸ್ಲಿಂ ಬಾಂಧವರು ಮರಳಿ ಬಂದು ದೆಹಲಿಯಲ್ಲಿ ವಾಸಿಸುವುದನ್ನು ಯಾವುದೇ ಕಾರಣಕ್ಕೂ ಹಿಂದೂಗಳು ವಿರೋಧಿಸಬಾರದು.

೫. ಮುಸ್ಲಿಂ ಬಾಂಧವರು ರೈಲುಗಳಲ್ಲಿ ಪ್ರಾಣಭಯವಿಲ್ಲದೆ ಪ್ರವಾಸ ಮಾಡುವ ಸ್ಥಿತಿಯ ಭರವಸೆಯನ್ನು ಭಾರತದ ಕಾನೂನು ವ್ಯವಸ್ಥೆ ನೀಡಬೇಕು.

೬. ಮುಸ್ಲಿಂರ ಮೇಲೆ ಹೇರಲಾಗಿರುವ ಆರ್ಥಿಕ ಉಚ್ಚಾಟನೆಯನ್ನು ಹಿಂತೆಗೆದುಕೊಳ್ಳಬೇಕು.

೭. ಮುಸ್ಲಿಂ ಪ್ರದೇಶಗಳಲ್ಲಿ ಬಲಾತ್ಕಾರದಿಂದ ಅವರ ಮನೆ-ಮಠಗಳನ್ನು ಆಕ್ರಮಿಸಿಕೊಂಡು ಈಗ ವಾಸಿಸುತ್ತಿರುವ ಮುಸ್ಲಿಮೇತರರು ಆ ಸ್ಥಳಗಳನ್ನು ಮರಳಿ ಅವರಿಗೇ ಬಿಟ್ಟುಕೊಡಬೇಕು.

ಈ ನಿಬಂಧನೆಗಳನ್ನು ಹೊರತುಪಡಿಸಿ ಹಿಂದಿಯೋ ಅಥವಾ ಉರ್ದುವೋ ಇಲ್ಲಿಯ ರಾಷ್ಟ್ರಭಾಷೆ ಯಾವುದು? ಯಾವುದಾಗಬೇಕು? ಈ ಪ್ರಶ್ನೆ ಇನ್ನೂ ಹಾಗೇ ಉಳಿದಿದೆ. ಉರ್ದುವಿಗೆ ಆ ಸ್ಥಾನವನ್ನು ನೀಡಬೇಕೆಂದೂ, ಅದು ಮುಸ್ಲಿಮರಿಗಷ್ಟೇ ಸೇರಿದ್ದಲ್ಲವೆಂದೂ, ಕವಿ ಇಕ್ಬಾಲನ 'ಸಾರೆ ಜಹಾಂಸೇ ಅಚ್ಛಾ, ಹಿಂದೂಸ್ತಾನ್ ಹಮಾರಾ' ಇದು ಹಿಂದಿಯೋ, ಉರ್ದುವೋ? ಎನ್ನುವ ಮತ್ತೊಂದು ವಾದವನ್ನು ಗಾಂಧಿ ಇಡುತ್ತಾನೆ. ಒಟ್ಟಾರೆ ಮತ್ತೂ ಗಾಂಧಿ ಗೆಲ್ಲುತ್ತಾನೆ. ಶಾಂತಿ ಸದ್ಭಾವನಾ ಕಮಿಟಿಯ ಎಲ್ಲ ಸದಸ್ಯರು ಡಾ. ರಾಜೇಂದ್ರ ಪ್ರಸಾದರ ಮುಂದಾಳತ್ವದಲ್ಲಿ ಗಾಂಧಿಯ ಬಳಿ ಬಂದು, ತಾವು ಗಾಂಧಿಯ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡಿದ್ದು ಅವುಗಳನ್ನು ಪಾಲಿಸುತ್ತೇವೆ ಎಂದು ಲಿಖಿತ ಪತ್ರವನ್ನು ಗಾಂಧಿಗೆ ನೀಡುತ್ತಾರೆ. ಜನವರಿ ೧೮ರಂದು ಮಧ್ಯಾಹ್ನ ೧೨ ಗಂಟೆ ೪೦ ನಿಮಿಷಕ್ಕೆ ಹಣ್ಣಿನ ರಸವನ್ನು ಸೇವಿಸುವುದರ ಮೂಲಕ ಹಟಮಾರಿ ಮುದುಕ ತನ್ನ ಆರು ದಿನದ ಜೀವನದ ಕೊನೆಯ ಉಪವಾಸವನ್ನು ನಿಲ್ಲಿಸುತ್ತಾನೆ.



ಬಾಂಬು ಇಟ್ಟವನೂ ಭಗವಂತನೇ?

ಗುಜರಾತ್‌ನ ರೈಲ್ವೇ ನಿಲ್ದಾಣದಲ್ಲಿ ಹಿಂದೂಗಳ ಸಾಮೂಹಿಕ ಭೀಕರ ಕಗ್ಗೊಲೆ ನಡೆದ ಜನವರಿ ಹದಿಮೂರರಂದೇ ಗಾಂಧಿ ಈ ಉಪವಾಸ ಪ್ರಾರಂಭಿಸಿದ್ದು, ಹಸ್ಕೆ ಲಿಯಾ ಹೈ ಪಾಕಿಸ್ತಾನ, ಲಡ್ಕೆ ಲೇಂಗೆ ಹಿಂದೂಸ್ತಾನ' ಎಂದು ಮತಾಂಧರು ತವರು ನೆಲದಲ್ಲಿ ಹಿಂದುಗಳನ್ನು ಬಹಿರಂಗವಾಗಿ ಕತ್ತರಿಸುವಾಗ ಈ ಗಾಂಧಿ ಪಾಕಿಸ್ತಾನಕ್ಕೆ ಕೊಡಬೇಕಾದ ಹಣಕ್ಕಾಗಿ, ಮುಸ್ಲಿಮರ ಹಿತರಕ್ಷಣೆಗಾಗಿ ಉಪವಾಸ ಪ್ರಾರಂಭಿಸಿದ್ದು ಯಾಕೆ? ಎನ್ನುವ ಪ್ರಶ್ನೆಗೆ ಉತ್ತರ ಇಂದಿಗೂ ನಿಗೂಢವಾಗಿಯೇ ಉಳಿದಿದೆ. ದೆಹಲಿ, ಅಜ್ಮೀರ, ಆಗ್ರಾ, ಅಲಿಗಢ ಮತ್ತು ಹೈದ್ರಾಬಾದ್‌ಗಳನ್ನು, ಒಟ್ಟಾರೆ ಮುಸ್ಲಿಂ ಸಂಸ್ಕೃತಿಯ ಪರಮೋಚ್ಚ ನಗರಗಳನ್ನು ಸೇರಿಸಿಕೊಂಡಾಗಲೇ ಪಾಕಿಸ್ತಾನ ಪರಿಪೂರ್ಣ ಎನ್ನುತ್ತಿದ್ದವರಿಗೆ ದೆಹಲಿಯಲ್ಲಿ ವಾಸಿಸಲು ಸ್ಥಳ ಮಾಡಿಕೊಡುವುದಕ್ಕಾಗಿ ಈ ಗಾಂಧಿ ಯಾಕೆ ಹಂಬಲಿಸಿದ? ಇವೆಲ್ಲ ಗಾಂಧಿಯೇ ಉತ್ತರಿಸಬೇಕಾಗಿದ್ದ ಪ್ರಶ್ನೆಗಳು.

ಅದೇನೆ ಇರಲಿ, ಗಾಂಧಿಯನ್ನು ಈ ಉಪವಾಸದ ನಿರ್ಧಾರದಿಂದ ಹೊರಗೆ ತರಲು ನಾಯಕರೇನು ಕಡಿಮೆ ಹೋರಾಡಿರಲಿಲ್ಲ. ಹಾಗೆಯೇ, ಆತನ ಈ ಅಂತಿಮ ಉಪವಾಸ ಸಣ್ಣ ಘಟನೆಯೇನೂ ಆಗಿರಲಿಲ್ಲ. ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರು ಇದಕ್ಕಾಗಿ ಹೆಣಗಾಡಿದ ರೀತಿಯನ್ನು ಗಮನಿಸಬೇಕು. ದೆಹಲಿಯ ಚೀಫ್ ಕಮೀಷನರ್ ಮಿ. ಖುರ್ಷಿದ. ಡೆ.ಕಮೀಷನರ್ ರಾಂದವಾ, ದೇಶಬಂಧು ಗುಪ್ತಾ ನಿರಂತರ ಕಾರ್ಯೋನ್ಮುಖರಾಗಿ ೧೮ರ ಮುಂಜಾನೆ ಅಂತಿಮವಾಗಿ ಕಾಂಗ್ರೆಸ್ಸಿನ ಕೆಲವು ನಾಯಕರಿಂದ ಸಹಿ ಪಡೆದು, ದೆಹಲಿಯ ಸಬ್ಜಿ ಮಂಡಿಯಲ್ಲಿ ಸುಮಾರು ೧೫೦ ಜನ ಮುಸ್ಲಿಮರು ಹಾಗೂ ಹಿಂದೂಗಳನ್ನು ಸೇರಿಸಿ, ಸೌಹಾರ್ದದ ಸಂಕೇತವಾಗಿ ಪರಸ್ಪರ ಒಬ್ಬರನ್ನೊಬ್ಬರು ಅಪ್ಪಿಕೊಂಡು, ಹಣ್ಣು ಮತ್ತು ಸಿಹಿಯನ್ನು ಹಂಚಿ ಇನ್ನೆಂದೂ ತಾವು ಪರಸ್ಪರ ಕಾದಾಡುವುದಿಲ್ಲ ಎಂದು ಲಿಖಿತ ಭರವಸೆಯನ್ನು ಕೊಟ್ಟ ಮೇಲೆಯೇ ಗಾಂಧಿ ತನ್ನ ಉಪವಾಸದ ಸತ್ಯಾಗ್ರಹವನ್ನು ೬ ದಿನಗಳ ನಂತರ ಮುಕ್ತಾಯಗೊಳಿಸಿದ. ಈತ ತನ್ನ ನಿರ್ಧಾರವನ್ನು ಹಿಂತೆಗೆದುಕೊಂಡಾಗ ದೇಶ-ವಿದೇಶಗಳಲ್ಲಿ ಸಂತಸಪಟ್ಟು ಅನೇಕ ನಾಯಕರು ಪತ್ರಿಕಾ ಪ್ರಕಟಣೆಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿಯ ಪಾಕಿಸ್ತಾನದ ಹೈ ಕಮೀಷನರ್ ಜಹೀರ್ ಹುಸೇನ್ ತಾನು ಮತ್ತು ತನ್ನ ರಾಷ್ಟ್ರ ಹಾಗೂ ರಾಷ್ಟ್ರದ ಜನತೆ ಮಹಾತ್ಮರ ಆರೋಗ್ಯದ ಬಗ್ಗೆ ಅತ್ಯಂತ ಚಿಂತಿತರಾಗಿದ್ದು, ಅವರು ಉಪವಾಸವನ್ನು ಬಿಡುವುದರ ಮೂಲಕ ಪಾಕಿಸ್ತಾನದ ಜನತೆ ಈಗ ನಿರಾಳರಾಗಿದ್ದಾರೆ ಎಂದು ತಿಳಿಸಿದ್ದಾನೆ. ಗುರು ಗೋವಿಂದಸಿಂಗ್‌ರ ಜನ್ಮದಿನವಾದ ಇಂದು ಹಣ್ಣಿನ ರಸವನ್ನು ಸ್ವೀಕರಿಸುವ ಮೂಲಕ ಉಪವಾಸವನ್ನು ಅಂತ್ಯಗೊಳಿಸಿ ಸಿಖ್ ಜನರ ಮರ್ಯಾದೆಯನ್ನು ಹೆಚ್ಚಿಸಿದ್ದಾರೆ ಬಾಪು ಎಂದು ಗುರುದ್ವಾರ ಸಮಿತಿಯ ಗುರುಗಳೊಬ್ಬರು ಹೇಳಿದ್ದಾರೆ. ಹಿಂದೂ ಮಹಾ ಸಭೆ ಮತ್ತು ಆರ್.ಎಸ್.ಎಸ್.ನ ಪರವಾಗಿ ಗಣೇಶ್ ದತ್ ಮಾತನಾಡಿ, ಬಾಪು ಅವರ ಈ ಹೆಜ್ಜೆಗಾಗಿ ನಾವು ದೇವರಲ್ಲಿ ಮೊರೆಹೊಕ್ಕಿದ್ದೆವು, ನಮ್ಮ ಮೊರೆಯನ್ನು ದೇವರು ಆಲಿಸಿದ್ದಾನೆ ಎಂದಿದ್ದಾರೆ. ಆದರೆ ಉಪವಾಸದಿಂದ ಹೊರಬಂದ ಮರುಕ್ಷಣವೇ ಗಾಂಧಿ ಹೇಳುತ್ತಾನೆ, ಶಾಂತಿ ಬರೀ ದೆಹಲಿಯಲ್ಲಿ ಸ್ಥಾಪನೆಯಾಗಿ, ರಾಷ್ಟ್ರದುದ್ದಕ್ಕೂ ನಾವು ಹೀಗೆಯೇ ಕಚ್ಚಾಡುತ್ತಿರುತ್ತೇವೆ ಎಂದಾದರೆ ತಾನು ಮತ್ತೆ ನಿಮ್ಮಿಂದ ಮೋಸಹೋದಂತೆಯೇ. ತನಗೆ ಕೊಟ್ಟ ಮನವಿಯಲ್ಲಿ ಆರ್.ಎಸ್.ಎಸ್. ಹಿಂದೂ ಮಹಾ ಸಭೆಯ ಇಬ್ಬರು ವ್ಯಕ್ತಿಗಳು ಹಸ್ತಾಕ್ಷರ ಹಾಕಿದ್ದಾರೆ ಎನ್ನುವುದನ್ನು ಗಾಂಧಿ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದ ಮತ್ತು ಎಷ್ಟರಮಟ್ಟಿಗೆ ಅದನ್ನು ಪಾಲಿಸುತ್ತಾರೆನ್ನುವುದನ್ನು ಕಾದು ನೋಡುತ್ತಿದ್ದ. ಶರೀರ ದುರ್ಬಲವಾಗಿದ್ದರಿಂದ, ನಿತ್ರಾಣವಾದುದರಿಂದ ವಿಶ್ರಾಂತಿಯ ಮೇಲಿದ್ದ ಗಾಂಧಿ ಮಂಗಳವಾರ ಅಂದರೆ ಜನವರಿ ೨೦ರ ಸಾಯಂಕಾಲದ ಪ್ರಾರ್ಥನಾ ಸಭೆಗೆ ಒಂದು ಮಹತ್ವದ ಭಾಷಣವನ್ನು ಸಿದ್ಧಮಾಡುವುದರಲ್ಲಿ ತಲ್ಲೀನನಾಗಿದ್ದ.

ಮಂಗಳವಾರದ ಈ ದಿನ ಅತ್ಯಂತ ಮಹತ್ವದ್ದು. ಮೋಹನ್‌ದಾಸ್ ಗಾಂಧಿಗೆ ಒಬ್ಬ ಜೀವಂತ ವ್ಯಕ್ತಿಯಾಗಿ ಜನರ ಮುಂದೆ ಮತ್ತೆ ಕಾಣಿಸಿಕೊಳ್ಳಲು ಹೇಗೆ ಅವಕಾಶ ನೀಡಿತೋ ಹಾಗೆಯೇ ಗಲ್ಲುಗಂಬವನ್ನು ಹತ್ತಿದರೂ ಚಿಂತೆಯಿಲ್ಲ, ಬ್ರಿಟಿಷರಿಗಿಂತಲೂ ಪ್ರಮುಖವಾಗಿ ಈ ದೇಶವನ್ನು ಮಹಾತ್ಮ ಎನ್ನುವ ಈ ಮೂರ್ಖನ ಕೈಯಿಂದ ಮುಕ್ತ ಮಾಡಬೇಕು. ಆತ ರಾಷ್ಟ್ರರಾಜಕಾರಣದಲ್ಲಿ ತಾನು ಇಲ್ಲ ಎಂದು ಹೇಳುತ್ತಲೇ ಆಡುತ್ತಿರುವ ಪಾತ್ರಕ್ಕೆ ಒಂದು ಕಡಿವಾಣ ಹಾಕಬೇಕು. ತಾನು ಹಾಕುವ ಈ ಬೆದರಿಕೆಯಿಂದ ಆತ ಹೆದರಿ ಹಿಂದೆ ಸರಿಯಬೇಕು ಎಂದು ಮದನ್‌ಲಾಲ್ ಪಹುವಾ ಗಾಂಧಿಯ ಪ್ರಾರ್ಥನಾ ಸಭೆಯಿಂದ ಸ್ವಲ್ಪ ದೂರದಲ್ಲಿ, ಅಂದರೆ ಸುಮಾರು ೨೦ ಅಡಿ ಅಂತರದಲ್ಲಿ ಬಾಂಬನ್ನು ಉಡಾಯಿಸಿದ್ದು ಇದೇ ಮಂಗಳವಾರದಂದು. ಒಬ್ಬನಿಗೆ ಮಂಗಳಕಾರಿಯಾಗಲಿದ್ದ ಈ ಮಂಗಳವಾರ, ಇನ್ನೊಬ್ಬನಿಗೆ ಅಮಂಗಳಕಾರಿಯಾಗಬೇಕಾದುದು ಚರಿತ್ರೆಯ ಅನಿವಾರ್ಯ. ಆದರೆ ಯಾರಿಗೆ ಮಂಗಳಕಾರಿ, ಇನ್ಯಾರಿಗೆ ಅಮಂಗಳಕಾರಿ ಎನ್ನುವುದು ಮಾತ್ರ ಈಗಲೂ ಜಟಿಲ ಪ್ರಶ್ನೆಯೇ. ಈ ಕಾರ್ಯಕ್ಕಾಗಿ ಜನವರಿ ೧೯ರಂದೇ ಗೋಡ್ಸೆ ಸಹೋದರರು, ನಾರಾಯಣ ಆಪ್ಟೆ, ಮದನಲಾಲ ಪಡುವಾ ಬಿರ್ಲಾಹೌಸ್‌ಗೆ ಬಂದು ಸ್ಥಳ ವೀಕ್ಷಣ ಮಾಡಿಕೊಂಡು ಹೋಗಿದ್ದರು.

ಗಾಂಧಿಯ ಭಾಷಣ ಸಿದ್ಧವಾಗಿತ್ತು. ಡಾ.ಸುಶೀಲಾ ನಯ್ಯರ್ ಇಂದಿನ ವಿಶೇಷ ಪ್ರಾರ್ಥನೆಯ ನಂತರ ಅದನ್ನು ಜನತೆಗೆ ಓದಿ ಹೇಳಲಿದ್ದಾರೆ. ಇಂದಿನ ಪ್ರಾರ್ಥನೆಯಲ್ಲಿ ಹಿಂದೂ, ಮುಸ್ಲಿಂ, ಪಾರಸಿ, ಕ್ರಿಶ್ಚಿಯನ್, ಬುದ್ಧಿಸ್ಟ್ ಧರ್ಮಗಳಿಂದ ಹೆಕ್ಕಿ ತೆಗೆದ ಮಹತ್ವದ ಸಂದೇಶಗಳೊಂದಿಗೆ ರಾಮ್‌ಧುನ್ನನ್ನು ಹೇಳಲಾಗುತ್ತಿದೆ. ಗಾಂಧಿ ಮಾತನಾಡುವ ಸ್ಥಿತಿಯಲಿಲ್ಲ. ಡಾ. ನಯ್ಯರ್ ಗಾಂಧಿಯ ಪಕ್ಕದಲ್ಲಿಯೇ ನಿಂತುಕೊಂಡು ಈ ಭಾಷಣವನ್ನು ಓದುತ್ತಾರೆ–

"ನನ್ನ ದೇಶ ಬಾಂಧವರೇ,

ನಾನು ನನ್ನ ಉಪವಾಸದ ನಿರ್ಧಾರವನ್ನು ಕೈ ಬಿಟ್ಟಿದ್ದೇನೆ, ಉಪವಾಸ ವ್ರತವನ್ನು ಇಂದಿನಿಂದ ನಿಲ್ಲಿಸಿದ್ದೇನೆ. ಈ ೬ ದಿನಗಳ ಅವಧಿಯಲ್ಲಿ ದೆಹಲಿಯ ನಿರಾಶ್ರಿತರಿಂದ ಹಿಡಿದು ಪ್ರತಿಯೊಬ್ಬರೂ ನನ್ನ ಬಗ್ಗೆ ತೆಗೆದುಕೊಂಡ ಕಾಳಜಿಗೆ ನಾನು ಋಣಿಯಾಗಿದ್ದೇನೆ. ಇಂತಹ ಒಂದು ಪ್ರೀತಿಯ ಅನುಭವ ನನಗೆ ಹಿಂದೆ ಕಲ್ಕತ್ತೆಯಲ್ಲಿ ಆಗಿತ್ತು. ಇನ್ನು ಮುಂದೆ ಯಾವುದೇ ಕಾರಣಕ್ಕೂ ಯಾರು ಯಾರನ್ನೂ ವೈರಿಗಳೆಂದು ಪರಿಗಣಿಸಬಾರದು. ಪ್ರಪಂಚದೊಂದಿಗೆ, ನಮ್ಮೊಂದಿಗೆ ಸೌಹಾರ್ದದಿಂದಿರಬೇಕು. ನಮ್ಮ ನೆಲದಲ್ಲಿ ನಮ್ಮವರೇ ಆದ ಮುಸ್ಲಿಮರನ್ನು ಯಾಕೆ ವೈರಿಗಳೆಂದು ನೋಡಲಾಯಿತೋ ನನಗೆ ತಿಳಿಯುತ್ತಿಲ್ಲ. ನಾನು ಪ್ರವಾದಿ ಅಲ್ಲದಿದ್ದರೂ ದೇವರು ವಿವೇಕ ಮತ್ತು ಹೃದಯಗಳನ್ನು ಕೊಟ್ಟಿದ್ದಾನೆ. ಈ ವೈರ ಮುಂದುವರಿದರೆ ನೀವು

ವೈಯಕ್ತಿಕವಾಗಿ ಹಾಳಾಗುವುದಲ್ಲದೇ ಇದುವರೆಗೆ ಹೋರಾಡಿ ಕಷ್ಟಪಟ್ಟು ಪಡೆದ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುತ್ತೇವೆ, ಪಾಕಿಸ್ತಾನವೂ ಸೇರಿಕೊಂಡಂತೆ ಮತ್ತೆ ನಾವು ಅನ್ಯರ ಗುಲಾಮರಾಗುತ್ತೇವೆ.

ಈ ದಿನ ಅನೇಕ ಹಿರಿಯರು ನನಗೆ ಆಶೀರ್ವದಿಸಿದ್ದಾರೆ. ನನಗಾಗಿ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾರೆ. ಪ್ರಚೋದನೆಗಳಿಗೆ ತಲೆಕೊಟ್ಟು ಇನ್ನೆಂದೂ ನಮ್ಮೊಳಗೆ ನಾವು ಕಿತ್ತಾಡುವುದಿಲ್ಲ ಎಂದು ಎಲ್ಲ ಕೋಮಿನವರು ಲಿಖಿತ ಭರವಸೆಯನ್ನು ಕೊಟ್ಟಿದ್ದಾರೆ. ಇದು ಸಣ್ಣದಲ್ಲ. ಇತಿಹಾಸ ಮರೆಯಬಾರದ ಮಹತ್ವದ ಒಪ್ಪಂದ. ಇದರ ಅರ್ಥ ಇನ್ನು ಮುಂದೆ ಭಾರತ ಮತ್ತು ಪಾಕಿಸ್ತಾನಗಳು ಆತ್ಮೀಯ ಗೆಳೆಯರಂತೆ ಬಾಳುತ್ತಾರೆ. ಇಂದು ದೆಹಲಿಯಲ್ಲಿ ಏನು ನಡೆಯಿತೋ ಅದು ರಾಷ್ಟ್ರದುದ್ದಕ್ಕೂ ನಡೆಯಬೇಕು, ಪಾಕಿಸ್ತಾನಕ್ಕೂ ಅನ್ವಯವಾಗಬೇಕು. ನನಗೆ ಆ ಭರವಸೆ ಇದೆ. ಇದುವರೆಗೂ ಸೈತಾನನ ಕಡೆಗೆ ನಡೆದಿದ್ದ ನಾವು ಇನ್ನು ಮುಂದೆ ದೇವರೆಡೆಗೆ ಹೋಗುತ್ತೇವೆ. ಹೀಗೆ ಒಮ್ಮೆ ದೇವರೆಡೆಗೆ ಮೊಗ ಮಾಡಿದರೆ ಸಾಕು, ಮತ್ತೆ ಅದನ್ನು ಸೈತಾನನೆಡೆಗೆ ತಿರುಗಿಸುವ ಪ್ರಮೇಯವೇ ಇಲ್ಲ. ಭಾರತ, ಪಾಕಿಸ್ತಾನಗಳೆರಡೂ ಸೇರಿ ಪ್ರಪಂಚದ ಸೇವೆ ಮಾಡುತ್ತವೆ ಮತ್ತು ಪ್ರಪಂಚವನ್ನು ಪುಣ್ಯದ ನೆಲವಾಗಿ ಪರಿವರ್ತಿಸುತ್ತವೆ. ನಾನು ಬದುಕಿರುವುದು ಇಷ್ಟಕ್ಕಾಗಿಯೇ ಮಾತ್ರ. ಸತ್ಯಸ್ವರೂಪಿಯಾದ ದೇವರು ಉಪವಾಸದ ಈ ೬ ದಿನ ನನಗೆ ಮಾರ್ಗದರ್ಶನ ಮಾಡಿದಂತೆಯೇ ನಿಮ್ಮನ್ನು ಬೆಳಕಿನೆಡೆಗೆ ನಡೆಯಿಸಲಿ".

ಸುಶೀಲಾ ನಯ್ಯರ್ ಗಾಂಧಿಯ ಈ ಭಾಷಣವನ್ನು ಓದಿದ ನಂತರ ಡಾ. ಬಿ.ಸಿ.ರಾಯ್ ಮತ್ತು ಜೀವರಾಜ್ ಮೆಹತಾ, ಗಾಂಧಿ ಶಾರೀರಿಕವಾಗಿ ಮತ್ತೆ ಮೂಲ ಸ್ಥಿತಿಗೆ ಬರಲು ಇನ್ನೂ ಒಂದು ವಾರದ ಸಮಯ ಬೇಕು ಎಂದು ತಿಳಿಸುತ್ತಾರೆ. ಈ ಕ್ಷಣದಲ್ಲಿ ಕೋಟಿ-ಕೋಟಿ ಭಾರತೀಯರು ಗಾಂಧಿಯ ಈ ನಿರ್ಧಾರದಿಂದ ಖುಷಿಯಾಗಿದ್ದರು, ಆದರೆ ಒಬ್ಬನನ್ನು ಹೊರತುಪಡಿಸಿ. ಇಷ್ಟರಲ್ಲಿ ದೂರದಲ್ಲಿ ಬಾಂಬ್ ಸ್ಫೋಟಗೊಂಡು, ಭೀಕರ ಸದ್ದು. ಒಂದು ಕ್ಷಣ ಪ್ರಾರ್ಥನೆಗೆ ಸೇರಿದ್ದ ಜನಗಳು ವಿಚಲಿತರಾದರು. ಶಬ್ದಶಃ ಮನುಗಾಂಧಿ ಆ ಭಯಾನಕ ಸದ್ದಿಗೆ ಬೆದರಿ ಹೋದಳು. ನಡುಗುತ್ತಲೇ ಗಾಂಧಿಯ ಬಳಿ ಬಂದಾಗ ಆಕೆಯ ಮೈದಡವಿ ಸಮಾಧಾನದಿಂದ ಗಾಂಧಿ ಕೇಳಿದ, "ಇಷ್ಟೊಂದು ಅಂಜಿಕೆ? ನಿಜಕ್ಕೂ ಯಾರಾದರೂ ನಮ್ಮನ್ನು ಕೊಲ್ಲಲೆಂದೇ ಬರುತ್ತಾರೆ ಎಂದಿಟ್ಟುಕೊ, ಆಗ ಏನು ಮಾಡುವುದು? ಹುಚ್ಚಿ, ಎಲ್ಲೋ ಸೈನಿಕರು ಮಿಲಿಟರಿ ತರಬೇತಿ ಪಡೆಯುತ್ತಿರಬಹುದು" ಎಂದು ನಗುತ್ತಾ ಆಕೆಯ ಕೈ ಹಿಡಿದು ಗಾಂಧಿ ಕೋಣೆಯ ಒಳಗೆ ನಡೆದ. ಆದರೆ, ವಸ್ತುಸ್ಥಿತಿ ಹಾಗಿರಲಿಲ್ಲ. ಹಾಗಿಲ್ಲ ಎನ್ನುವುದು ಗಾಂಧಿಗೂ ಗೊತ್ತು. ಇದು ತನ್ನನ್ನೇ ಗುರಿಯಾಗಿಟ್ಟುಕೊಂಡು ಹೆದರಿಸುವ ಸಲುವಾಗಿ ಮಾಡಿದ ಕ್ರಿಯೆ ಎನ್ನುವುದೂ

ಗಾಂಧಿಗೆ ತಿಳಿದಿತ್ತು. ಆ ದಿನ ಬಾಂಬ್ ಸ್ಫೋಟ ಮಾಡಿದ ಯುವಕನನ್ನು ಪ್ರಾರ್ಥನೆಗೆ ಬಂದಿದ್ದ ಸುಲೋಚನಾದೇವಿ ಎಂಬ ಮಹಿಳೆ ಪೋಲಿಸರಿಗೆ ಹಿಡಿದುಕೊಟ್ಟಿದ್ದಳು. ಆತನನ್ನು ಪೋಲಿಸ್ ವಿಚಾರಣೆಗೂ ಒಳಪಡಿಸಲಾಯಿತು.

ಇಪ್ಪತ್ತು ವರ್ಷದ ಪಂಜಾಬಿನ ಯುವಕ ಮದನ್‌ಲಾಲ್ ಪಹುವಾ ಈ ಬಾಂಬನ್ನು ಸ್ಫೋಟಗೊಳಿಸುವ ಮೂಲಕ ಇಂದಿಗೆ ೧೦ ದಿನಗಳ ನಂತರ ನಡೆಯಲಿರುವ ಗಾಂಧಿಯ ಹತ್ಯೆಯ ಸಂದೇಶವನ್ನು ರವಾನಿಸಿದ್ದ. ಭಗತ್ ಸಿಂಗ್, ರಾಜ್‌ಗುರು, ಸುಖದೇವ್ ಬ್ರಿಟಿಷ್ ಸರಕಾರಕ್ಕೆ ತಮ್ಮ ನೋವು ಅರ್ಥವಾಗಲಿ ಎಂದು ಬಾಂಬನ್ನು ಉಡಾಯಿಸಿದಂತೆ, ಪಾಕಿಸ್ತಾನ ಮತ್ತು ಮುಸ್ಲಿಮರು ಬಹುಸಂಖ್ಯಾತರಾಗಿರುವ ಸ್ಥಳಗಳಲ್ಲಿ ಹಿಂದೂಗಳಿಗೆ ಆಗುತ್ತಿರುವ ಅನ್ಯಾಯವನ್ನು ಈ ಗಾಂಧಿ ಮತ್ತು ಕಾಂಗ್ರೆಸ್ ತಿಳಿದುಕೊಳ್ಳಲಿ ಎಂದು ಪಹುವಾ ಈ ಕೆಲಸವನ್ನು ಮಾಡಿದ್ದ. ಆದರೆ ಆತನ ಈ ಸಾಹಸ ಗಾಂಧಿಯನ್ನು ಯಾವುದೇ ರೀತಿಯಿಂದಲೂ ವಿಚಲಿತನನ್ನಾಗಿಸಲಿಲ್ಲ, ಅದು ವ್ಯರ್ಥವಾಯಿತು ಎನ್ನುವುದು ಆತನಿಗೆ ಅಸಮಾಧಾನದ ವಿಷಯವಾಗಿಯೇ ಉಳಿಯಿತು.

ಗಾಂಧಿ ಈ ರಾತ್ರಿ ಕುಳಿತುಕೊಂಡು ಪತ್ರಗಳಿಗೆ ಉತ್ತರಿಸುವ, ಕಸ್ತೂರ್ ಬಾ ಟ್ರಸ್ಟ್‌ನ ವತಿಯಿಂದ ಒಂದು ಪಾಕ್ಷಿಕವನ್ನು ತರುವ, ಇನ್ನೂ ಮುಂದೆ ಹೋಗಿ ಒಂದಿಷ್ಟು ಕಾಲ ಪಾಕಿಸ್ತಾನದಲ್ಲಿ ಪ್ರಾರ್ಥನಾ ಸಭೆಗಳನ್ನು ನಡೆಸುವ ಯೋಜನೆ-ಯೋಚನೆಗಳಲ್ಲಿ ನಿರತನಾಗಿದ್ದಾನೆ. ಆದರೆ ಪಾಕಿಸ್ತಾನಕ್ಕೆ ಹೋಗಬೇಕಾದರೆ ಆತನಿಗೊಂದು ವಿಶಿಷ್ಟ ನಿರೀಕ್ಷೆಯೂ ಇತ್ತು, ಈ ರಾತ್ರಿ ಬರೆದ ಒಂದು ಪತ್ರದಲ್ಲಿ ಆತ ಹೇಳುತ್ತಾನೆ, "ನಾನು ಪಾಕಿಸ್ತಾನಕ್ಕೆ ಹೋಗುತ್ತೇನೆ, ಆದರೆ ಪಾಕಿಸ್ತಾನದ ಜನತೆ ಮತ್ತು ಸರ್ಕಾರ ನನ್ನನ್ನು ಹಿಂದೂ, ಸಿಖ್ ಮತ್ತು ಇಸ್ಲಾಮಿನ ಒಬ್ಬ ಅತ್ಯುತ್ತಮ ಸ್ನೇಹಿತನೆಂದು, ಬಂಧುವೆಂದು ಪರಿಗಣಿಸಿ ಸ್ವಾಗತಿಸಬೇಕು. ಇಷ್ಟರಲ್ಲಿಯೇ ಹೋಗಬಹುದಿತ್ತೇನೋ. ಆದರೆ ಆರೋಗ್ಯ ಸುಧಾರಿಸಲು ಕನಿಷ್ಟ ೧೫ ದಿನಗಳಾದರೂ ಬೇಕು ಎಂದು ವೈದ್ಯರು ಅನುಮತಿಸದಿದ್ದುದರಿಂದ ಎಲ್ಲಿಗೂ ಹೋಗುವಂತಿಲ್ಲ. ಏನನ್ನೂ ತಿನ್ನುವಂತಿಲ್ಲ. ಹಾಲು ಮತ್ತು ಹಣ್ಣಿನ ರಸ ಮಾತ್ರದ ಮೇಲೆ ಉಳಿದುಕೊಳ್ಳಬೇಕಿದೆ." ೭೮ ವರ್ಷದ ಈ ಗಾಂಧಿ ಹೀಗೆ ಆಲೋಚಿಸುತ್ತಿದ್ದರೆ ಭಾರತ-ಪಾಕಿಸ್ತಾನದ ಕೆಲವು ಸಂಘಟನೆಗಳು ಮತ್ತು ನಾಯಕರು ಸರ್ದಾರ್ ಪಟೇಲ್ ಮತ್ತು ನೆಹರೂವಿನ ಮಧ್ಯೆ ಹೆಚ್ಚುತ್ತಿರುವ ಅಂತರ, ವಿಚಾರ ಭೇದ ಹಾಗೂ ಸಣ್ಣ ಪುಟ್ಟ ಘರ್ಷಣೆಗಳ ಲೆಕ್ಕವಿಡುತ್ತಿದ್ದಾರೆ. ಈ ಕುರಿತು ಗಾಂಧಿಗೂ ಪತ್ರ ಬರೆಯುತ್ತಾರೆ, ಆದರೆ ಗಾಂಧಿ ಮಾತ್ರ ತಾನು ಬದುಕಿರುವವರೆಗೂ ಇದ್ಯಾವುದೂ ಬೆಳೆಯದಂತೆ ನೋಡಿಕೊಳ್ಳುವ ಅಚಲ ವಿಶ್ವಾಸದಿಂದಿದ್ದಾನೆ. ತನ್ನ ಇಬ್ಬರು ನಾಯಕರ ಬಗ್ಗೆ ಅತ್ಯಂತ ಅಭಿಮಾನದಿಂದಲೇ ಮಾತನಾಡುತ್ತಾನೆ.

ಗಾಂಧಿ ಪಾಕಿಸ್ತಾನಕ್ಕೆ ಹೋಗುವ ಆಲೋಚನೆ ಮಾಡುವ ಈ ದಿನ ಸಾಯಂಕಾಲ ಅಂದರೆ ಜನವರಿ ೨೧ರಂದು ಗಿಯಾನಿ ಕರ್ತಾರ್ ಸಿಂಗ್ ಎಂಬ ವ್ಯಕ್ತಿ ತನ್ನ ಕೆಲವಷ್ಟು ಅನುಯಾಯಿಗಳೊಂದಿಗೆ ಬಂದು ಗಾಂಧಿಯನ್ನು ಭೆಟ್ಟಿಯಾಗಿ ಈ ಕ್ಷಣದಲ್ಲಿ ಪಾಕಿಸ್ತಾನದಲ್ಲಿ ಏನು ನಡೆಯುತ್ತಿದೆ, ಇಲ್ಲಿ ನಿಮ್ಮ ಮಾತನ್ನು ಕೇಳಿ ಉದಾರವಾಗಿ ಮನುಷ್ಯತ್ವವನ್ನು ಮೆರೆಯುತ್ತಿದ್ದರೂ ಅಲ್ಲಿ ನಮ್ಮವರೊಂದಿಗೆ ಏನು ನಡೆಯುತ್ತಿದೆ ಎನ್ನುವುದನ್ನು ಗಾಂಧಿಗೆ ವಿವರಿಸುತ್ತಾನೆ. ಪಾಕಿಸ್ತಾನದಲ್ಲಿ ಹಿಂದೂಗಳು, ಸಿಕ್ಖರು ಅಲ್ಪಸಂಖ್ಯಾತರೇ, ಅದರೆ ಅವರ ರಕ್ಷಣೆಗಾಗಿ ಅಲ್ಲಿಯ ಸರ್ಕಾರ ಏನು ಕೆಲಸ ಮಾಡುತ್ತಿದೆ, ಪಾಕಿಸ್ತಾನಕ್ಕೆ ಹೊರಡಲಣಿಯಾಗಿರುವ ನೀವು ಅವರಿಗೆ ಏನು ತಿಳಿಹೇಳಲಿದ್ದೀರಿ ಎಂದು ಪ್ರಶ್ನಿಸುತ್ತಾನೆ. ಈಗಲೂ ಗಾಂಧಿಯ ವಾದವೊಂದೆ, ಅಹಿಂಸೆ. ಆದರೆ ನಾವು ಎದುರಿಸುತ್ತಿರುವ ಮತಾಂಧರು ಮನುಷ್ಯರೂ ಅಲ್ಲ, ಮಹಾತ್ಮರೂ ಅಲ್ಲ ಎಂದು ಕರ್ತಾರ್ ಸಿಂಗ್ ವಾದಿಸುತ್ತಾನೆ. ಹಾಗೆಯೇ ಮಹಾತ್ಮಾ ಗಾಂಧಿ ದೇವರೂ ಅಲ್ಲ, ವಿಚಿತ್ರ ಶಕ್ತಿಯ ಭೂತವೂ ಅಲ್ಲ ಎಂದು ಗಾಂಧಿ ಉತ್ತರಿಸುತ್ತಾನೆ. ತಾನು ಒಬ್ಬ ಸಾಮಾನ್ಯ ಮನುಷ್ಯ, ಯಾರು ಹೆಚ್ಚಿನ ಸಂಖ್ಯೆಯಲ್ಲಿ ಯಾರನ್ನು ಕೊಂದರು ಎಂದು ಧ್ಯಾನಿಸುವುದರಲ್ಲಿ ಏನನ್ನೂ ಪ್ರಾಪ್ತಿಸಿಕೊಳ್ಳಲಾಗದು. ಕೆಟ್ಟದಕ್ಕೂ ಒಳ್ಳೆಯತನ ಒಂದೇ ಉತ್ತರ ಎಂದು ತನ್ನ ಮುಂದೆ ಇಂದು ಸೇರಿದ್ದ ಸಿಕ್ಖರನ್ನು ಸಾಗಹಾಕುತ್ತಾನೆ.

ಮದನ್‌ಲಾಲ್ ಪಹುವಾ ಬಾಂಬ್ ಸ್ಫೋಟ ಮಾಡಿದ ಮರುಕ್ಷಣದಿಂದ ಗಾಂಧಿಗೆ ಏನಾಯಿತು? ಆತನ ವರ್ತನೆಯಲ್ಲಿ, ಆಲೋಚನೆಯಲ್ಲಿ ಏನು ಬದಲಾವಣೆಯಾಗಿದೆ? ಇದರ ನಂತರವೂ ಈತ ನಮಗೆ ತನ್ನ ಸಾಮರಸ್ಯದ ಪಾಠವನ್ನೇ ಮಾಡುತ್ತಾನೆಯೇ? ಹೀಗೆ ಅನೇಕ ಪ್ರಶ್ನೆಗಳು ಜನಸಾಮಾನ್ಯರಲ್ಲಿ ಇವೆ. ಇಂತಹ ಆಸಕ್ತಿಗಳಿಗೆ ಜನವರಿ ೨೨ರಂದು ತನ್ನ ಪ್ರಾರ್ಥನಾ ಸಭೆಯ ಭಾಷಣದಲ್ಲಿ ಗಾಂಧಿ ಒಂದು ತೆರೆಯೆಳೆಯುತ್ತಾನೆ. ತನ್ನ ನಿರ್ಧಾರ ಅಚಲ, ತನ್ನ ದಾರಿ ನಿರ್ಭೀತ ಎಂದು ತೋರಿಸುತ್ತಾನೆ. ಇಂದಿನ ಪ್ರಾರ್ಥನೆಗೆ ಬರುವುದರಲ್ಲಿ ಆತನಿಗೆ ೧೦ ನಿಮಿಷದಷ್ಟು ತಡವಾಗಿದೆ.

"ಬಂಧುಗಳೆ,

ನಿನ್ನೆಯ ಸ್ಫೋಟ ಮಿಲಿಟರಿ ತರಬೇತಿಯ ಒಂದು ಭಾಗ ಎಂದು ನಾನು ತಿಳಿದಿದ್ದೆ. ಆದರೆ ಅದು ನನ್ನನ್ನು ಗುರಿಯಾಗಿಸಿಕೊಂಡೇ ಮಾಡಿದ ಯೋಜನೆಯೆಂದೂ, ನನ್ನ ಪ್ರಾಣ ಕೂಡಾ ಅದರಲ್ಲಿ ಹೋಗುವ ಎಲ್ಲಾ ಸಾಧ್ಯತೆಗಳಿದ್ದವೆಂದೂ ನನಗೆ ಅನಂತರ ತಿಳಿಯಿತು. ನಾನು ಯಾವ ಶೌರ್ಯವನ್ನೂ ಪ್ರದರ್ಶಿಸಲಿಲ್ಲ. ನನ್ನ ಕಣ್ಣೆದುರೇ ಬಾಂಬ್ ಸ್ಫೋಟಗೊಂಡು ದುರ್ಘಟನೆಯಲ್ಲಿ ನಾನು ಮುಗುಳ್ನಗುತ್ತ ಸಾಯುವುದಾದರೆ ನನ್ನ ಅಸ್ತಿತ್ವಕ್ಕೆ ಒಂದು ಅರ್ಥವಿದೆಯೆಂದು

ನೀವು ಹೇಳಬಹುತ್ತೆಂದೂ ನಾನು ನಿಮ್ಮ ಸ್ತುತಿಗೆ ಯೋಗ್ಯನಾಗಿಲ್ಲ. ನಿನ್ನೆ ಆ ಕ್ರಿಯೆಯನ್ನು ಮಾಡಿದ ಯುವಕನ ಬಗ್ಗೆ ನೀವು ದ್ವೇಷದ ಭಾವವನ್ನು ಎಂದೂ ಬೆಳೆಸಿಕೊಳ್ಳಬಾರದು. ಸಾಧ್ಯವಾದರೆ ದೇವರು ಅವನಿಗೆ ಸದ್ಬುದ್ಧಿಯನ್ನು ಕೊಡಲಿ ಎಂದು ಪ್ರಾರ್ಥಿಸಬೇಕು. ಅವನೊಂದಿಗೆ ಯಾರಿದ್ದಾರೆ? ಅವನು ಯಾರ ಆಣತಿಯಂತೆ ಈ ಕೃತ್ಯ ಮಾಡಿದ ಎನ್ನುವುದನ್ನು ತಿಳಿಯುವುದಕ್ಕಿಂತ ಇದು ಹಿಂದುತ್ವ ಅಲ್ಲ ಎಂದು ತಿಳಿಯುವುದು ಬಹಳ ಮುಖ್ಯ.

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ ಅವರಿಗೆ ಆತನನ್ನು ಹಿಂಸಿಸಬಾರದೆಂದು ನಾನು ಕೇಳಿಕೊಂಡಿದ್ದೇನೆ. ಆದರೆ ಆತನನ್ನು ಬಿಡುಗಡೆ ಮಾಡಿರಿ ಎಂದು ನಾನು ಅವರಿಗೆ ಹೇಳಲಾಗುವುದಿಲ್ಲ, ಯಾಕೆಂದರೆ ಅದು ಒಂದು ಸರಕಾರಿ ವ್ಯವಸ್ಥೆಯ, ಕರ್ತವ್ಯದ ವ್ಯಾಪ್ತಿ. ಆತನಿಗೆ ತಾನು ಹಿಂದುತ್ವದ ವಿರುದ್ಧ, ಭಾರತದ ಸಂಸ್ಕೃತಿಯ ವಿರುದ್ಧ, ಮುಸ್ಲಿಮರ ವಿರುದ್ಧ ಹಾಗೆಯೇ ಇಡೀ ಪ್ರಪಂಚದ ವಿರುದ್ಧ ಒಂದು ಹೇಯ ಕ್ರಿಯೆ ಮಾಡಿದೆ ಎಂದು ಮನವರಿಕೆಯಾಗಿದ್ದರೆ ಅವನ ವಿರುದ್ಧ ಯಾವುದೇ ಗಂಭೀರ ಹೆಜ್ಜೆಗಳನ್ನು ತೆಗೆದುಕೊಳ್ಳಬಾರದೆಂದು ನಾವು ಒತ್ತಾಯಿಸಬಹುದು. ನನಗೆ ಆತನ ಬಗ್ಗೆ ಮರುಕವಿದೆ. ನಾವು ಆತನ ಕ್ರಿಯೆಯನ್ನು ಖಂಡಿಸೋಣ. ಖಂಡಿತವಾಗಿಯೂ ಆತನ ಮನಸ್ಸು ಪರಿವರ್ತನೆಯಾಗುತ್ತದೆ. ಪ್ರಪಂಚದಲ್ಲಿ ಪಾಪ ದೀರ್ಘ ಕಾಲ ಬದುಕಲು ಅವಕಾಶವಿಲ್ಲ. ದೇವರು ಮಾತ್ರ ಅಂತಿಮವಾಗಿ ಉಳಿದುಕೊಳ್ಳುತ್ತಾನೆ.

ನಮ್ಮನ್ನು ನಾವು ಶಾಂತರಾಗಿಟ್ಟುಕೊಳ್ಳಲು ದೇವರಲ್ಲಿ ಪ್ರಾರ್ಥಿಸೋಣ, ಗೊತ್ತಿರಲಿ, ನನ್ನ ಸುತ್ತಲೂ ಗುಂಡಿನ ಮಳೆಗರೆಯುತ್ತಿದ್ದರೂ ನಾನು ಮಾತ್ರ ಶ್ರೀರಾಮನನ್ನೇ ಜಪಿಸುತ್ತಿರಬೇಕು.

ನಿನ್ನೆ ಓರ್ವ ಅಶಿಕ್ಷಿತ ಮಹಿಳೆ ಸುಲೋಚನಾದೇವಿ ಆತನನ್ನು ಹಿಡಿದುಕೊಡುವಲ್ಲಿ ತಮ್ಮ ಶೌರ್ಯವನ್ನು ಪ್ರದರ್ಶಿಸಿದ್ದಾರೆ. ನಾನು ಅವರ ಧೈರ್ಯವನ್ನು ಶ್ಲಾಘಿಸುತ್ತೇನೆ. ಒಳ್ಳೆಯ ಹೃದಯದ ಮುಂದೆ ಸುಶಿಕ್ಷಿತ ಮತ್ತು ಅಶಿಕ್ಷಿತ ಎನ್ನುವ ಪ್ರಶ್ನೆಗಳು ಬರುವುದಿಲ್ಲ. ನಿಮ್ಮೆಲ್ಲರ ಹೃದಯಗಳು ಪ್ರೇಮ ದೇಗುಲಗಳಾಗಬೇಕು. ನಿಧಾನವಾಗಿ ನನ್ನ ಆರೋಗ್ಯ ಸುಧಾರಿಸುತ್ತಿದೆ. ಶೀಘ್ರದಲ್ಲಿಯೇ ಮೊದಲಿನಷ್ಟೇ ಸಶಕ್ತನಾಗುತ್ತೇನೆ. ಅಭಾ ಮತ್ತು ಮನು ಹಗಲು ರಾತ್ರಿ ನನ್ನ ಕಾಳಜಿ ತೆಗೆದುಕೊಳ್ಳುತ್ತಿದ್ದಾರೆ" ಎಂದು ಹೇಳಿದ ಗಾಂಧಿ ಭಾಷಣ ಮುಗಿಸುತ್ತಿರುವಂತೆಯೇ ಇಬ್ಬರು ಸೇವಕರು ಬಂದು ಗಾಂಧಿ ಕುಳಿತ ಕುರ್ಚಿಯೊಂದಿಗೆ ಗಾಂಧಿಯನ್ನು ಎತ್ತಿಕೊಂಡು ಹೋದರು.

ಈ ಮಧ್ಯದಲ್ಲಿ ಒಂದು ಬೆಳವಣಿಗೆ. ಬಾಪು ಸೇವಾ ಗ್ರಾಮಕ್ಕೆ ಬರಬೇಕೆಂದು ಅವನ ಆಶ್ರಮದ ಜನಗಳು ಹಲವು ದಿನಗಳಿಂದ ಒತ್ತಾಯಿಸುತ್ತಿದ್ದಾರೆ. ಆರೋಗ್ಯ ಸುಧಾರಣೆಗಾಗಿ ಗಾಂಧಿ ಒಂದಿಷ್ಟು ಕಾಲ ದೆಹಲಿಯಿಂದ ಹೊರಗೆ, ಅಲ್ಲಿರುವುದು ಸೂಕ್ತ ಎಂದು ಡಾ. ಬಿ.ಸಿ.ರಾಯ್ ಕೂಡಾ ಅಭಿಪ್ರಾಯಪಟ್ಟಿದ್ದಾರೆ. ಕಳೆದ ೧೭ ತಿಂಗಳುಗಳಿಂದ ಗಾಂಧಿಯೂ ಅಲ್ಲಿಗೆ ಹೋಗಿಯೇ ಇಲ್ಲ. ಈಗ ಹೋಗಲೇಬೇಕಾದ ಸಂದರ್ಭ. ಹೆಚ್ಚು ಕಡಿಮೆ ಫೆಬ್ರುವರಿಯ ಮೊದಲ ವಾರ ಈ ಹೆಜ್ಜೆಗೆ ಸೂಕ್ತ ಎಂದುಕೊಳ್ಳಲಾಗಿದೆ. ಫೆ.೧ ಅಥವಾ ೨ರಂದು ಅಲ್ಲಿಗೆ ಹೋಗಿ, ೩ ಮತ್ತು ೪ರಂದು ಮಹತ್ವದ ಸಭೆಗಳನ್ನು ನಡೆಯಿಸುವುದು, ಇನ್ನುಳಿದವುಗಳನ್ನು ೬ ಮತ್ತು ೭ರಂದು ನಡೆಯಿಸುವುದು. ಡಾ.ಬಾಬು ರಾಜೇಂದ್ರ ಪ್ರಸಾದ, ಡಾ. ಶಂಕರ್‌ರಾವ್ ದೇವ್ ಮತ್ತು ಬಿ.ಜಿ.ಖೇರ್ ಗಾಂಧಿಯ ಈ ಮೀಟಿಂಗುಗಳಲ್ಲಿ ಭಾಗವಹಿಸುವುದು ಎಂದೆಲ್ಲಾ ಯೋಜನೆ ಹಾಕಿಕೊಳ್ಳಲಾಗಿದೆ.

ಇದೆಲ್ಲವೂ ಮುಂದಿನ ಯೋಜನೆ. ಈಗ ಮಾತ್ರ ಆತ ವಿರಮಿಸಬೇಕಿದೆ. ಅದಕ್ಕೂ ಮುಂಚೆ 'ಹರಿಜನ'ಕ್ಕೆ ಇಂದು ಆತ ಕೆಲವು ಸಾಲುಗಳನ್ನು ಬರೆಯಲೇಬೇಕು. ಅದಕ್ಕಾಗಿ ಎತ್ತಿಕೊಂಡ ವಿಚಾರ – ಹಣ, ರಾಜಕಾರಣ ಮತ್ತು ರಾಷ್ಟ್ರ. ಆತನ ಪ್ರಕಾರ ಹಿಂದೆ ಕಾಂಗ್ರೆಸ್ ಕೆಲವು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಬೇಕಾದರೆ ವರ್ಷಗಳವರೆಗೆ ಒದ್ದಾಡುತ್ತಿತ್ತು. ಹೀಗಿದ್ದ ಈ ದೇಶದಲ್ಲಿ ಇಂದು ಪ್ರತಿಯೊಬ್ಬ ಕಾಂಗ್ರೆಸ್ಸಿಗನ ಬಳಿ ಕೋಟಿ ಕೋಟಿ ಹಣ ಹೇಗೆ ಸಂಗ್ರಹವಾಯಿತು? ಇದು ಅಧಿಕಾರದ ದುರುಪಯೋಗದಿಂದ ಮಾತ್ರ ಸಾಧ್ಯ. ಪ್ರಪಂಚದ ಬಡ ರಾಷ್ಟ್ರದವರಾದ ನಾವು ದುಂದುಗಾರಿಕೆಯಲ್ಲಿ ಅನ್ಯರೊಂದಿಗೆ ಸ್ಪರ್ಧಿಸುವುದಾದರೆ ವಿನಾಶ ಕಟ್ಟಿಟ್ಟದ್ದು ಎಂದು ಹೇಳುತ್ತಾನೆ. ಮನುಷ್ಯ ಮಹತ್ವ ಪಡೆಯಬೇಕಾದುದು ಹಣದಿಂದಲ್ಲ. ಅದನ್ನು ಪ್ರದರ್ಶಿಸುವ ರೀತಿಯಿಂದಲೂ ಅಲ್ಲ, ಬದಲಾಗಿ ಸರಳತೆಯಿಂದ. ಕೆಲವು ರಾಷ್ಟ್ರಗಳು ಭೌತಿಕ ಸಂಪತ್ತಿನಿಂದಾಗಿ, ಮತ್ತೆ ಕೆಲವು ರಾಷ್ಟ್ರಗಳು ಮಿಲಿಟರಿಯಿಂದಾಗಿ ಅಭಿಮಾನಪಟ್ಟುಕೊಳ್ಳುತ್ತವೆ. ಆದರೆ ಭಾರತ ಮಾತ್ರ ಸರಳತೆಯಲ್ಲಿ ಬದುಕಿ ಆ ವಿಚಾರದಲ್ಲಿ ಪ್ರಪಂಚಕ್ಕೆ ತಾನೇ ಆದರ್ಶವಾಗಿ ಉಳಿಯಬೇಕೆನ್ನುವುದು ಇಂದು ಗಾಂಧಿ 'ಹರಿಜನ'ಕ್ಕೆ ಹಂಚಿಕೊಂಡ ವಿಚಾರ.

ಟೇಬಲ್ ಮೇಲೆ ಮದ್ರಾಸಿನ ಮುಸ್ಲಿಂ ನಾಯಕರಾದ ಜಮಾಲ್ ಮೊಹಮ್ಮದ್ ಸಾಹೇಬರ ತಂತಿ ಸಂದೇಶ ಇದೆ. ಇತ್ತೀಚಿಗಷ್ಟೇ ಭಾರತದ ಶಾಂತಿಪಾಲನಾ ಸಮಿತಿಯ ಸದಸ್ಯರಾಗಿ ಅವರು ಸಹೋದರ ನಾಡಾದ ಪಾಕಿಸ್ತಾನವನ್ನು ಸಂದರ್ಶಿಸಿ ಬಂದಿದ್ದರು. ಆದರೆ ಗವರ್ನರ್ ಜನರಲ್ ಜಿನ್ನಾರನ್ನು ಭೆಟ್ಟಿಯಾಗುವುದು ಆಗಿರಲಿಲ್ಲ. ಉಳಿದಂತೆ ಈ ದೇಶಕ್ಕೆ ಗಾಂಧಿ ಎಂಬ ಮಹಾತ್ಮನ ಸೇವೆ ಎಂತಹದು ಮತ್ತು ಎಷ್ಟು ಅನಿವಾರ್ಯವಾದುದು ಎನ್ನುವುದನ್ನು ವಿವರಿಸಿ ಅವರು ಈ

ಸಂದೇಶವನ್ನು ಗಾಂಧಿಗೆ ಕೊಟ್ಟಿದ್ದರು. ಹೈದರಾಬಾದಿನ ನಿಜಾಮರನ್ನು ಒಲಿಸುವ ಕೆಲಸವಾಗಬೇಕು, ಪಾಕಿಸ್ತಾನದಲ್ಲಿ ಜಿನ್ನಾರ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಿದೆ. ಇಷ್ಟರಲ್ಲಿಯೇ ಭಾರತದಲ್ಲಿರುವ ಕೆಲವು ಪ್ರಾಂತ್ಯಗಳಲ್ಲಿರುವ ಸಮಸ್ಯೆಗಳು ಬಗೆಹರಿದು ರಾಷ್ಟ್ರ ಅದ್ಭುತವಾದ ಪ್ರಗತಿಯನ್ನು ಕಾಣುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳಲ್ಲಿ ಈಗ ಭಾರತದ ಕೊಡುಗೆ ವಿಶ್ವಕ್ಕೆ ಎಷ್ಟು ಅವಶ್ಯಕತೆ ಇದೆ, ಇಸ್ಲಾಂ ಮತ್ತು ಹಿಂದೂ ತತ್ವಜ್ಞಾನಗಳ ಸಂಗಮವಾದ ಈ ದೇಶ ಅಧ್ಯಾತ್ಮದಲ್ಲಿ ಹೇಗೆ ಮುಂಚೂಣಿಯಲ್ಲಿದೆ ಎನ್ನುವುದನ್ನು ವಿವರಿಸುವುದರೊಂದಿಗೆ ಗಾಂಧಿಯನ್ನು ಕುರಿತು ಈ ಸಾಲುಗಳನ್ನು ದಾಖಲಿಸಿದ್ದಾರೆ: "Mahatma Gandhi is the real and only key to it, and I am hopeful you will succeed by God's grace and the world will ultimately be grateful to India for helping to solve the crying problem of war, hatred, selfishness and narrow-minded nationalisms. God Almighty is with you. You will succeed to the lasting benefit of the country and its lasting usefulness and glory to the whole world".

ಆದರೆ ಈ ಎಲ್ಲ ಹೊಗಳಿಕೆ ಗಾಂಧಿಯನ್ನು ಮೂರ್ಖನನ್ನಾಗಿಸುವ, ಗಾಂಧಿ ಮೂಲಕ ಹಿಂದೂ ಸಮಾಜವನ್ನು ಶಕ್ತಿಹೀನಗೊಳಿಸುವ ತಂತ್ರವಷ್ಟೆ ಎನ್ನುತ್ತಾನೆ ಗಾಂಧಿ. ಈ ಮೇಲಿನ ಗಾಂಧಿ ಆರಾಧನೆಗೆ ಸಂಪೂರ್ಣ ವಿರುದ್ಧವಾಗಿ ಗೋಡ್ಸೆ ಗಾಂಧಿಯನ್ನು ತನ್ನ ಆರೋಪಿ ಹೇಳಿಕೆಯಲ್ಲಿ ವ್ಯಾಖ್ಯಾನಿಸುವುದು ಹೀಗೆ – "ಎದುರಿಲ್ಲದ ಮತ್ತು ಆತ್ಯಂತಿಕ ಬೇಜವಾಬ್ದಾರಿ ವಾತಾವರಣದಲ್ಲಿ ಗಾಂಧಿ ತಪ್ಪುಗಳ ಮೇಲೆ ತಪ್ಪು, ವೈಫಲ್ಯಗಳ ಮೇಲೆ ವೈಫಲ್ಯ ಮತ್ತು ದುರಂತಗಳ ಮೇಲೆ ದುರಂತಗಳನ್ನು ಮಾಡುತ್ತಲೇ ಹೋದರು. ೩೩ ವರ್ಷಗಳ ರಾಜಕೀಯ ಅಧಿಕಾರದ ಅವಧಿಯಲ್ಲಿ ಒಂದೇ ಒಂದು ರಾಜಕೀಯ ವಿಜಯವನ್ನೂ ಅವರ ಹೆಸರಿನಲ್ಲಿ ಪ್ರತಿಪಾದಿಸುವಂತಿಲ್ಲ."

ಈ ಹೇಳಿಕೆಗೂ ಮಿಗಿಲಾಗಿ ಬದುಕೆಲ್ಲ ಪಾಕಿಸ್ತಾನದ ಪರ, ಮುಸ್ಲಿಮರ ಪರ ಮಾತಾಡಿದ್ದ ಗಾಂಧಿಯ ಚಿತಾಭಸ್ಮವನ್ನು ಪಾಕಿಸ್ತಾನದ ಮೂಲಕ ಹರಿಯುವ ಪವಿತ್ರ ಸಿಂಧು ನದಿಯಲ್ಲಿ ವಿಸರ್ಜಿಸಲು ಪಾಕಿಸ್ತಾನ ಸರಕಾರ ಅನುಮತಿಸಲಿಲ್ಲ ಎನ್ನುವುದು ಎಂತಹ ಲೇವಡಿ ಅಲ್ಲವೆ?

❑



ಉರಿಗೆ ತೆರೆಯಿಲ್ಲ

ಎಂತಹ ಮಹಾತ್ಮನೂ ಮೂಲತಃ ಮನುಷ್ಯ. ಕೇವಲ ಮನುಷ್ಯ. ಈ ಸತ್ಯ ಆತನಿಗೂ ಚೆನ್ನಾಗಿ ತಿಳಿದಿರಬೇಕು ಎನ್ನುವ ವಿಚಾರಕ್ಕೆ ಪೂರಕವಾದ ಅನೇಕ ನಿದರ್ಶನಗಳು ಗಾಂಧಿಗೆ ಜೀವನದಲ್ಲಿ ಸಿಗುತ್ತವೆ. ಬಹಳ ತಡವಾಗಿದೆ, ಚಿಂತೆಯಿಲ್ಲ. ಆದರೆ ಒಂದು ಸತ್ಯವನ್ನು ಗಾಂಧಿ ಈಗ ಒಪ್ಪಿಕೊಂಡಿದ್ದಾನೆ. ಜನವರಿ ೨೩ರ ನಸುಕಿನ ಜಾವ ಅಂತಹ ಒಂದು ತಪ್ಪೊಪ್ಪಿಗೆಯ ಪತ್ರವನ್ನು ಗಾಂಧಿ ಶ್ರೀಮತಿ ಕಾಂತಿ ಗಾಂಧಿಯವರಿಗೆ ಬರೆದು, ಉಪವಾಸದ ವೇಳೆಯಲ್ಲಿ ತಾನು ತನ್ನ ದೇಹದೊಂದಿಗೆ ಒಂದಿಷ್ಟು ಅತಿಯಾಗಿಯೇ ವರ್ತಿಸಿದೆ. ಅದರ ಕೆಟ್ಟ ಪರಿಣಾಮಗಳು ಈಗ ಕಾಣಿಸಿಕೊಳ್ಳುತ್ತಿವೆ. ಇದನ್ನು ತನ್ನ ತಪ್ಪೆನ್ನಬೇಕೊ ಅಥವಾ ತಾನು ದೇವರಲ್ಲಿ ಇಟ್ಟಿರುವ ವಿಶ್ವಾಸದ ಕೊರತೆ ಎಂದುಕೊಳ್ಳಬೇಕೊ ಎಂದು ಪ್ರಶ್ನಿಸಿಕೊಂಡಿದ್ದಾನೆ. ಮುಂದುವರೆದು ಉಪವಾಸ ಅಂತ್ಯಗೊಂಡ ಕ್ಷಣದಿಂದ ತನ್ನ ಜವಾಬ್ದಾರಿಗಳು ಇನ್ನೂ ಹೆಚ್ಚಾಗಿವೆಯೆ ವಿನಾ

ಕಡಿಮೆಯಾಗಿಲ್ಲ, ಜನವರಿ ೨೦ರ ಬಾಂಬ್ ಘಟನೆಯಲ್ಲಿ ತಾನು ಸತ್ತು ಹೋಗಿದ್ದರೂ ಯಾವ ನಷ್ಟವಿರಲಿಲ್ಲ, ಜೀವ ಉಳಿದಿದೆ ಎಂದರೆ ದೇವರು ಯಾವುದೋ ಒಂದು ನಿಶ್ಚಿತ ಉದ್ದೇಶಕ್ಕಾಗಿ ತನ್ನನ್ನು ಉಳಿಸಿರಬಹುದು. ಈ ದೇವರ ಕರುಣೆಗೆ ತಾನು ಅರ್ಹನೇ? ಎಂದೆಲ್ಲಾ ಪ್ರಶ್ನಿಸಿಕೊಂಡಿದ್ದಾನೆ. ಇದೇ ಮುಂಜಾವು ಇನ್ನೂ ನಿದ್ರೆಯಲ್ಲಿದ್ದ ಮನುಳನ್ನು ಎಬ್ಬಿಸಿ ದೀರ್ಘವಾಗಿ, ಮುಕ್ತವಾಗಿ ಏನನ್ನೋ ಚರ್ಚಿಸಿದ್ದಾನೆ ಎಂದೂ ದಾಖಲಿಸಿದ್ದಾನೆ. ಈ ಎಲ್ಲಾ ವಿವರಗಳನ್ನು ನೋಡಿದಾಗ ಇದನ್ನು ಗಾಂಧಿಯ ಪಾಲಿನ ತಪ್ಪೊಪ್ಪಿಗೆಯ ದಿನವೆಂದೇ ಪರಿಗಣಿಸಬೇಕೇನೋ! ತನ್ನ ಸುತ್ತಲಿನ ಉರಿಯೊಂದಿಗೆ ತನ್ನೊಳಗೂ ಸುಟ್ಟುಕೊಳ್ಳುತ್ತಿರುವ ಗಾಂಧಿ ಸಾಮಾನ್ಯರ ಲೆಕ್ಕಕ್ಕೆ ಸಿಗದ ಒಂದು ಲೆಕ್ಕಾಚಾರದಲ್ಲಿದ್ದಾನೆ. ಆಶ್ಚರ್ಯವೆಂದರೆ ಇಂದಿನ ಆತನ ಒಂದೇ ಒಂದು ಕಾರ್ಯಕ್ರಮ, ಸುಭಾಷಚಂದ್ರ ಬೋಸರಿಗೆ ಸಂಬಂಧಿಸಿದ್ದು. ಗಾಂಧಿ ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್‌ರ ವಿಚಾರಗಳಲ್ಲಿ ಸಮಯೋಚಿತವಾದುದನ್ನು, ಸೂಕ್ತವಾದುದನ್ನು ಕೊನೆಗೂ ಮಾಡಲೇ ಇಲ್ಲ ಎನ್ನುವ ಆಪಾದನೆ ಇತಿಹಾಸದುದ್ದಕ್ಕೂ ದಾಖಲಾಗಿರುವುದು ಎಲ್ಲರೂ ತಿಳಿದ ಸಂಗತಿಯೇ.

ಇಂದಿನ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಒಂದು ರೀತಿಯ ತಪ್ಪೊಪ್ಪಿಗೆಯ ಹಾಗೆ ಬೋಸರ ಹುಟ್ಟುಹಬ್ಬವನ್ನು ನೆಪವಾಗಿಸಿಕೊಂಡು ಗಾಂಧಿ ಮಾತನಾಡಿದ್ದಾನೆ. ಇಂದಿನ ಈ ಆಲೋಚನೆಗಳು ಈ ಕ್ಷಣಕ್ಕೆ ಹುಟ್ಟಿದವುಗಳಲ್ಲ. ಈ ಗಾಂಧಿ ತನ್ನ ಪ್ರಾರ್ಥನಾ ಸಭೆಗಳಲ್ಲಿ ಎಂದೂ ನಾಯಕರ ಕುರಿತು ಮಾತನಾಡಿಯೂ ಇಲ್ಲ. ಆದರೆ ಸುಭಾಷ್‌ಚಂದ್ರ ಬೋಸರನ್ನು ಕುರಿತು ಇಂದು ಹೇಳುತ್ತಾನೆ:

"ನಿಮಗೆಲ್ಲಾ ಸುಭಾಷ್ ಬಾಬು ಅವರ ಹುಟ್ಟುಹಬ್ಬದ ಶುಭಾಷಯಗಳು.

ಸುಭಾಷ ಬಾಬು ಹಿಂಸೆಯ ಪರವಾಗಿದ್ದರು, ನಾನು ಅಹಿಂಸೆಯ ಪಕ್ಷದವನು. ಹಾಗಿದ್ದ ಮಾತ್ರಕ್ಕೆ ಏನಾಯಿತು? ಇಬ್ಬರೂ ರಾಷ್ಟ್ರದ ಪರವಾಗಿದ್ದವರು. ವ್ಯಕ್ತಿ ಧರ್ಮಗಳ ಪರವಾಗಿದ್ದವರು. ಜೀವನಮೌಲ್ಯಗಳನ್ನು ಯಾರಿಂದಲೂ ಕಲಿಯಬಹುದಾಗಿದೆ. ಹಿಂಸೆಯೋ ಅಹಿಂಸೆಯೋ ಸುಭಾಷ್ ಒಬ್ಬ ಅದ್ವಿತೀಯ ರಾಷ್ಟ್ರಭಕ್ತರಾಗಿದ್ದರು. ಸ್ವತಂತ್ರ ಭಾರತ ಒಟ್ಟು ಅವರ ಗುರಿ, ಉದ್ದೇಶ ಮತ್ತು ಹೋರಾಟ. ಅದಕ್ಕಾಗಿ ಅವರು ರಾಷ್ಟ್ರಕ್ಕಾಗಿ ಪ್ರಾಣ ತೆತ್ತವರು. ಅವರ ಆಝಾದ ಹಿಂದ ಫೌಜ್‌ನಲ್ಲಿ ಹಿಂದೂ, ಮುಸ್ಲಿಂ, ಸಿಖ್ ಎಲ್ಲರೂ ಇದ್ದರು. ಅವರ ದೃಷ್ಟಿಯಲ್ಲಿ ಎಲ್ಲರೂ ಭಾರತೀಯರು, ಸೈನಿಕರು, ದೇಶದ ಸೇವಕರು. ಅವರ ಸ್ಮರಣೆಯಲ್ಲಿ ದೇಶದ ಒಳಿತನ್ನು ಉಜ್ವಲ ಭವಿಷ್ಯವನ್ನು ಚರ್ಚಿಸೋಣ." ಎಂದು ಭಾಷಣ ಮುಗಿಸುತ್ತಾನೆ. ಜನವರಿ ೨೫, ಗಾಂಧಿ ಜೈ ಸುಖ್‌ಲಾಲ್ ಗಾಂಧಿಗೆ ಒಂದು ಪತ್ರ, ಹಾಗೂ ಇತ್ತೀಚಿಗಷ್ಟೇ ಯು.ಕೆ. ಗೆ ಹೋಗಿ ಬಂದ ಜೆ.ಸಿ.ಕುಮಾರಪ್ಪನೊಂದಿಗೆ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಕುರಿತು ಹೊಸ ಆಲೋಚನೆಗಳು,

ಕರ್ನಾಟಕದಿಂದ ಬಂದ ಕಾಂಗ್ರೆಸ್ ನಾಯಕರುಗಳ ಭೆಟ್ಟಿ, ಕರ್ನಾಟಕ ರಾಜ್ಯ ರಚನೆಯ ವಿಚಾರದಲ್ಲಿ ಆತನ ಸಲಹೆ, ಲಾಹೋರಿಗೆ ಹೋಗಿ ಬಂದ ಡಾ. ಸುಶೀಲಾ ನಯ್ಯರ್‌ರೊಂದಿಗೆ ಅಲ್ಲಿಯ ಸ್ಥಿತಿ-ಗತಿಯ ವಿಚಾರ, ಹೀಗೆ ಚಟುವಟಿಕೆಗಳಲ್ಲಿ ದಿನ ಕಳೆಯುವ ಮುನ್ನ, ಈ ಕೋಮು ದಳ್ಳುರಿಯನ್ನು ನೋಡುತ್ತಾ ಮೂಕ ಪ್ರೇಕ್ಷಕನಂತೆ ಕೂಡ್ರುವ ಬದಲು ಯಾರಾದರೂ ತನ್ನ ಕೊಲೆ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಕೂಡಾ ಗಾಂಧಿ ಬರೆದಿದ್ದಾನೆ. ಈ ಸಾಲುಗಳನ್ನು ನೋಡಿ, "I can demonstrate the strength of Truth and Non-violance. If I have been sincere in their pursuit, and acted with God as my witness, I shall certainly be granted that kind of death. I have expressed my wish at prayer that, should someone kill me, I should have no anger in my heart against the killer and that I should die with Rama Nama on my lips." ಈ ಪ್ರಪಂಚದಿಂದ ತಾನು ಸರಿಯಬೇಕಾದ ರೀತಿಯ ಕುರಿತು ಇಷ್ಟೊಂದು ನಿಖರವಾಗಿ ಹೇಳಿದ ಅಧ್ಯಾತ್ಮಿ ಮತ್ತೊಬ್ಬನಿರಲಿಕ್ಕಿಲ್ಲ. ಕಾಲ ಇನ್ನು ತನ್ನನ್ನು ಬಹುತೇಕ ಉಳಿಸಿಕೊಳ್ಳಲಿಕ್ಕಿಲ್ಲ ಎಂದುಕೊಂಡಿದ್ದ ಗಾಂಧಿ.

ಜನವರಿ ೨೬, ಗಾಂಧಿ, ಪ್ರಭು ದಯಾಳ್ ವಿದ್ಯಾರ್ಥಿಯೊಂದಿಗೆ ಗ್ರಾಮೀಣ ಭಾರತದ ಭವಿಷ್ಯದ ರೂಪರೇಷೆಗಳನ್ನು ಕುರಿತು ಚರ್ಚಿಸುತ್ತಾರೆ. ಕಾಂಗ್ರೆಸ್ಸಿನ ಎರಡನೆಯ ವರ್ಕಿಂಗ್ ಕಮಿಟಿಯ ಸಭೆ ಕೇವಲ ೨ ದಿನಗಳ ಹಿಂದಷ್ಟೆ ನಡೆದಿದ್ದು, ಅಲ್ಲಿಯೂ ಕೂಡ ಇದನ್ನೇ ಕುರಿತು ವ್ಯಾಪಕವಾಗಿ ಚರ್ಚಿಸಿದ್ದಾನೆ. ಪ್ರಭು ದಯಾಳ್ ವಿದ್ಯಾರ್ಥಿ ನಿಜವಾಗಿಯೂ ಹಳ್ಳಿಗಳ ಬಗ್ಗೆ ಕಾಳಜಿ ಹೊಂದಿದ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿರುವುದರಿಂದ ಗಾಂಧಿ ಅವರಿಂದ ಭಾರತದ ಗ್ರಾಮಗಳ ಪುನರುಜ್ಜೀವನಕ್ಕಾಗಿ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಭಾರತದ ಇಂತಹ ನೂರಾರು ಸಮಸ್ಯೆಗಳನ್ನು ಗಾಂಧಿ ಬಗೆಹರಿಸುವ ಎಲ್ಲ ಭರವಸೆ ಹೊಂದಿದ್ದಾನೆ. ಪ್ರಯತ್ನಿಸಿದಷ್ಟೂ ಒಂದಿಲ್ಲಾ ಒಂದು ರೀತಿಯಲ್ಲಿ ಆತನಿಗೆ ಯಶಸ್ಸು ಸಿಗುತ್ತಿದೆ, ಆದರೆ ಒಂದೇ ಒಂದು ಹೆಜ್ಜೆ ಮುಂದೆ ಹೋದೆ ಎಂದುಕೊಳ್ಳುವುದರಲ್ಲಿ ಹತ್ತು ಹೆಜ್ಜೆ ಹಿಂದೆ ಹಿಂದೆ ಬರುವಂತಹ ಪರಿಸ್ಥಿತಿ ಉಳಿದುಕೊಂಡಿರುವುದು ಮಾತ್ರ ಕೋಮು ಸೌಹಾರ್ದದ ವಿಚಾರದಲ್ಲಿ. ಗಾಂಧಿಯ ಬದುಕಿನ ಕೊನೆಯ ದಿನಗಳ ಅತೀ ಹೆಚ್ಚಿನ ಸಮಯವನ್ನು ನುಂಗಿ ಹಾಕಿದ ಸತ್ಯ ಅದು. ಅವನನ್ನು ನಿರಂತರ ಕಾಡಿದ, ಆತನ ಸಹನೆ ಹಾಗೂ ಮನುಷ್ಯತ್ವದ ಸತ್ವವನ್ನು ಪರೀಕ್ಷಿಸಿದ ಸಂಗತಿ ಅದು. ಕೊನೆಗೆ ಗಾಂಧಿಯ ಜೀವವನ್ನೂ ಬಲಿ ತೆಗೆದುಕೊಂಡು ಆರದೇ ಉಳಿದ ದಳ್ಳುರಿ. ಆದರೆ ಗಾಂಧಿ ಪತಂಗದಂತೆ ಅದರ ಸುತ್ತಲೇ ಸುತ್ತುತ್ತಿದ್ದಾನೆ. ಸುಟ್ಟುಕೊಂಡು ಸಾಯುವುದು

ಸತ್ಯ, ಆದರೆ ಅಂದುಕೊಂಡಿದ್ದನ್ನು ಸಾಧಿಸದೇ ಸಾಯುವುದು ಆತನಿಗೆ ಇಷ್ಟವಿಲ್ಲ. ಜ. ೨೬ರಂದು ಇದಕ್ಕೆ ಸಂಬಂಧಿಸಿದ್ದನ್ನೇ ಮಾತನಾಡುತ್ತಾನೆ ಗಾಂಧಿ.

ದಿನೇ ದಿನೇ ಗಾಂಧಿಯ ಪ್ರಾರ್ಥನಾ ಸಭೆಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲಿ ಯಾವ ಕೋಮಿನವರು ಎಷ್ಟಿದ್ದಾರೆ ಎನ್ನುವುದು ಅಪ್ರಸ್ತುತ. ಇಂದು ಗಾಂಧಿ ಹೇಳುತ್ತಾನೆ, "ಇಂದಿನ ಪ್ರಾರ್ಥನಾ ಸಭೆಯಲ್ಲಿ ಎಷ್ಟು ಜನ ಮುಸ್ಲಿಮರಿದ್ದಾರೆ ನನಗೆ ಮುಖ್ಯವಲ್ಲ, ಆದರೆ ಇಲ್ಲಿ ಇರುವವರಿಗೆಲ್ಲಾ ನಾನು ಹೇಳುವುದಿಷ್ಟೆ, ಪರಸ್ಪರರನ್ನು ಸಹೋದರರಂತೆ ಕಾಣಿರಿ. ಪ್ರಾರ್ಥನೆಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಬರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನೊಂದಿಗೆ ಒಬ್ಬ ಮುಸ್ಲಿಂ ಬಂಧುವನ್ನು ಕರೆದುಕೊಂಡು ಬಂದರೆ ಈ ಪ್ರಪಂಚ ಹಿಂದೆಂದೂ ಕಾಣದ ಒಂದು ಕ್ರಾಂತಿಗೆ ಸಾಕ್ಷಿಯಾಗುತ್ತದೆ.

ನಾಳೆಯಿಂದ ಮೆಹರಾಲಿಯಲ್ಲಿ ಖ್ವಾಜಾ ಸಯ್ಯದ್ ಕುತುಬುದ್ದಿನ್ ಬಕ್ತಿಯಾರ್ ಅವರ ಉರುಸು ಪ್ರಾರಂಭವಾಗಲಿದೆ. ಹೋದ ವರ್ಷ ದಂಗೆಯ ಸಂದರ್ಭದಲ್ಲಿ ನಾಶವಾಗಿದ್ದ ಅವರ ಸಮಾಧಿಯನ್ನು ಈಗ ನವೀಕರಿಸಲಾಗಿದೆ. ಹಿಂದೂಗಳೂ ಅಲ್ಲಿಗೆ ಹೋಗಿ ಪಾಲ್ಗೊಂಡು ಅವರ ಆಶೀರ್ವಾದದಿಂದ ಪುನೀತರಾಗಬೇಕು, ನಾನು ನಿಮ್ಮೊಂದಿಗಿರುತ್ತೇನೆ, ಪ್ರಾರ್ಥನೆಗೆ ಬರುತ್ತೇನೆ.

ಫೆ. ತಿಂಗಳಲ್ಲಿ ಪ್ರಾರ್ಥನಾ ಸಭೆಗಳು ನಡೆಯುವುದಿಲ್ಲ. ೨ನೇ ತಾರೀಖು ನಾನು ವರ್ಧಾಕ್ಕೆ ಹೋಗುತ್ತೇನೆ. ಕನಿಷ್ಠ ಒಂದು ತಿಂಗಳು ಅಲ್ಲಿರುತ್ತೇನೆ ಎಂದು ಹೇಳುವುದು ತಪ್ಪು. ಎಲ್ಲವೂ ನಿಮ್ಮನ್ನೇ ಅವಲಂಭಿಸಿದೆ. ಡಾ. ಬಾಬು ರಾಜೇಂದ್ರರು ನಮ್ಮೊಂದಿಗೆ ಬರುತ್ತಾರೆ. ನೀವು ಆಶೀರ್ವದಿಸಿದರೆ ನನ್ನ ಈ ಪ್ರವಾಸ ಯಶಸ್ವಿ. ನಾನು ಅತ್ತ ಹೊರಟ ಮೇಲೆ ನೆನಪಿರಲಿ, ಮತ್ತೆ ಇತ್ತ ಬಡಿದಾಟ ಶುರುವಿಟ್ಟುಕೊಳ್ಳಬಾರದು. ಭಾರತ ಸರ್ಕಾರ ಭರವಸೆಯಿಂದ ಕಳುಹಿಸಿಕೊಟ್ಟರೆ ವರ್ಧಾದಿಂದ ಬಂದವನೇ ನನ್ನ ಬಂಧುಗಳನ್ನು ಕಾಣಲು ಪಾಕಿಸ್ತಾನಕ್ಕೆ ಹೊರಡಲಿದ್ದೇನೆ." ಎಂದು ತಿಳಿಸುತ್ತಾನೆ ಗಾಂಧಿ.

ಜನವರಿ ೨೭ರಂದು ಗಾಂಧಿಗೆ ಅಸಂಖ್ಯ ಅಭಿನಂದನಾ ಪತ್ರಗಳು. ಉಪವಾಸ ನಿಲ್ಲಿಸಿದ್ದಕ್ಕಾಗಿ, ಘಟಿಸಬಹುದಾದ ಸಾವಿನಿಂದ ಬದುಕಿ ಉಳಿದಿದ್ದಕ್ಕಾಗಿ, ಬಾಂಬ್ ದಾಳಿಯಲ್ಲಿ ಯಾವುದೇ ಅನಾಹುತ ಘಟಿಸದೇ ಇರುವುದಕ್ಕಾಗಿ, ಹಿಂದೂ-ಮುಸ್ಲಿಮರನ್ನು ಒಂದುಗೂಡಿಸಿದ್ದಕ್ಕಾಗಿ, ಹೀಗೆ ಅನೇಕ ಕಾರಣಕ್ಕಾಗಿ ಆತನಿಗೆ ಅಭಿನಂದನಾ ಪತ್ರಗಳು. ಆದರೆ ಗಾಂಧಿಗೆ ಇನ್ನೂ ಸಮಾಧಾನವಿಲ್ಲ. ಸ್ವಾತಂತ್ರ್ಯ ಸಿಕ್ಕು ಕೇವಲ ೪ರಿಂದ ೫ ತಿಂಗಳಷ್ಟೆ ಅಂಬಗಾಲಿಟ್ಟು ಕ್ರಮಿಸಿದ ರಾಷ್ಟ್ರಕ್ಕೆ ಎಷ್ಟೊಂದು ಗೆದ್ದಲುಗಳು, ಮುಷ್ಕರಗಳು, ಹತ್ಯೆ ಮತ್ತು ಹಿಂಸೆಗಳು. ಯಾಕೆ ಇದೆಲ್ಲಾ? ಯಾರ

ವಿರುದ್ಧ ಇದೆಲ್ಲಾ? ಯಾಕೆ ಯಾರೂ ಮನುಷ್ಯ ಎಂದರೇನು ಎನ್ನುವ ಕನಿಷ್ಠ ತಿಳುವಳಿಕೆಗೆ ಹಂಬಲಿಸುತ್ತಿಲ್ಲ? ಇದು ಗಾಂಧಿಯನ್ನು ಕಾಡುತ್ತಿರುವ ಸಂಗತಿ. ಇದೆಲ್ಲವನ್ನಿಟ್ಟುಕೊಂಡು ಅಪನಂಬಿಕೆಯ ಈ ಬೆಂಕಿಯಲ್ಲಿ ನೂರು ವರ್ಷ, ನೂರಾ ಇಪ್ಪತ್ತೈದು ವರ್ಷ, ನೂರಾ ಮೂವತ್ಮೂರು ವರ್ಷ ಎಂದು ಯಾಕೆ ಕನಸು ಕಾಣಬೇಕು?

ಕಾಂಗ್ರೆಸ್ ಜ. ೨೬ನ್ನು ಗಣರಾಜ್ಯದ ದಿನವೆಂದು ಘೋಷಿಸುವ ನಿರ್ಧಾರ ಬಹಳ ಹಿಂದಿನಿಂದ ಮಾಡಿಕೊಂಡಿತ್ತು. ಆದರೆ ಈ ಘೋಷಣೆಯನ್ನು ಯಾರ ಮುಂದೆ ಮಾಡಬೇಕು ಎನ್ನುವುದು ಈಗಿರುವ ಪ್ರಶ್ನೆ. ರಾಷ್ಟ್ರವೆಂದರೇನು? ಪ್ರಜಾಪ್ರಭುತ್ವವೆಂದರೇನು? ಸಂವಿಧಾನವೆಂದರೇನು? ಇವೆಲ್ಲಾ ದೂರವಿರಲಿ, ತಾವು ಯಾರು? ಏತಕ್ಕಾಗಿ ಹುಟ್ಟಿದ್ದೇವೆ? ಏನನ್ನು ಮಾಡಬೇಕಿದೆ ಎನ್ನುವ ಕನಿಷ್ಠ ತಿಳುವಳಿಕೆಯೂ ಇಲ್ಲದ ಜನರ ಮುಂದೆ ಗಣರಾಜ್ಯೋತ್ಸವದ ಅರ್ಥವನ್ನು ವಿವರಿಸುವುದು ಕಷ್ಟಕರ ಎಂದು ಗಾಂಧಿ ಅರಿತಿದ್ದಾನೆ. ಇಲ್ಲಿ ಜನರಿಂದ ಜನನಾಯಕನವರೆಗೆ ಇನ್ನೂ ಕಲಿಯುವ ಹಂತದಲ್ಲಿರುವವರು ಬಹಳಷ್ಟಿದ್ದಾರೆ, ಅಂತೆಯೇ ಜನರಿಗೂ ಮತ್ತು ಕಾಂಗ್ರೆಸ್ ನಾಯಕರಿಗೂ ಮಹತ್ವದ ಸಂದೇಶವನ್ನು ಕೊಟ್ಟು ಜ.೨೭ರ ಈ ದಿನ ಸಂತ ಭಕ್ತಿಯಾರರ ಉರುಸಿಗೆ ಹೋಗುತ್ತಾನೆ. ಮೊದಲನೇ ಸಂದೇಶ ಅಲ್ಲಿ ಸೇರಿದ ಜನರಿಗೆ. "ಮುಷ್ಕರದ ಅರ್ಥ ಗೊತ್ತೇ? ಕಾನೂನನ್ನು ಕೈಗೆ ತೆಗೆದುಕೊಳ್ಳುವುದರ ಕೆಟ್ಟ ಪರಿಣಾಮಗಳು ಗೊತ್ತೆ? ಗೊತ್ತಿಲ್ಲದೆ ಹೋದರೆ ತಿಳಿದುಕೊಳ್ಳಿ. ಇವೆಲ್ಲ ದೌರ್ಬಲ್ಯದ ಸಂಕೇತಗಳು. ಪ್ರತಿಯೊಬ್ಬನೂ ತನ್ನೊಳಗಿನ ಶಕ್ತಿಯನ್ನು ಗೌರವಿಸಬೇಕಿದೆ. ರಸ್ತೆಯ ಮೇಲೆ ದುಡಿಯುವವನಿಗೂ ಶಕ್ತಿ ಇರುತ್ತದೆ. ಆದರೆ ನಿಜವಾದ ಪ್ರಜಾಪ್ರಭುತ್ವದಲ್ಲಿ ಯಾವಾಗ ಬೇಕು ಆವಾಗ, ಎಲ್ಲಿ ಬೇಕೋ ಅಲ್ಲಿ ಅದನ್ನು ಪ್ರದರ್ಶಿಸುವ ಅವಕಾಶವಿಲ್ಲ. ನ್ಯಾಯಕ್ಕಾಗಿ ಹೋರಾಡುವ ಅನೇಕ ನ್ಯಾಯಿಕ ದಾರಿಗಳು ಇವೆ. ಹಿಂಸೆ ಯಾವುದಕ್ಕೂ ದಾರಿಯಲ್ಲ. ಮುಷ್ಕರದಲ್ಲಿ ತೊಡಗಿಕೊಂಡವರನ್ನೂ ಸೇರಿಸಿಕೊಂಡು ಇದು ಬಹಳ ದೊಡ್ಡ ಹಾನಿ, ನೈತಿಕ ಅಧಃಪತನ. ಹೀಗೆ ನೀವೇ ಅಸಂಘಟಿತರಾದರೆ, ಆಲೋಚನಾ ಶಕ್ತಿಯನ್ನು ಕಳೆದುಕೊಂಡರೆ ಭ್ರಷ್ಟಾಚಾರದಂತಹ ಮಹಾ ಪಿಡುಗನ್ನು ಹೊರದೂಡುವುದು ಹೇಗೆ?"

ಈಗಾಗಲೇ ಹೇಳಿದಂತೆ ಇಂದಿನ ಎರಡನೆಯ ಸಂದೇಶ ಕಾಂಗ್ರೆಸ್ ನಾಯಕರಿಗೆ. ಇದನ್ನು ಗಾಂಧಿ ಈ ದಿನ ಬರೆದಿದ್ದು ತನ್ನ 'ಹರಿಜನ' ಪತ್ರಿಕೆಗಾಗಿ. "ನಿಸ್ಸಂಶಯವಾಗಿಯೂ ಕಾಂಗ್ರೆಸ್ ಭಾರತದ ಅತ್ಯಂತ ಹಳೆಯ ಸಂಘಟನೆಗಳಲ್ಲಿ ಒಂದು. ಅನೇಕ ಸಂಕಷ್ಟಗಳನ್ನು ಎದುರಿಸಿ ಒಂದು ರಾಷ್ಟ್ರೀಯ ಸಂಘಟನೆಯಾಗಿ ಬೆಳೆದಿದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ದೊಡ್ಡ ಜವಾಬ್ದಾರಿಯನ್ನು

ನಿಭಾಯಿಸಿದೆ. ಎಲ್ಲಿಯವರೆಗೆ ಭಾರತವಿದೆಯೋ ಅಲ್ಲಿಯವರೆಗೂ ಕಾಂಗ್ರೆಸ್ ಇದ್ದೇ ಇರುತ್ತದೆ.

ರಾಜಕೀಯ ಸ್ವಾತಂತ್ರ್ಯವನ್ನು ತಂದುಕೊಟ್ಟ ಕಾಂಗ್ರೆಸ್ ಜನರಿಗೆ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಯಶಸ್ವಿಯಾಗಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದಷ್ಟು ಸುಲಭವಾಗಿ ಇವುಗಳನ್ನು ಗಳಿಸಲಾಗುವುದಿಲ್ಲ. ಕಾರಣವಿಷ್ಟೆ, ಇವುಗಳಿಗೆ ರಾಜಕಾರಣಕ್ಕಿರುವ ಆಕರ್ಷಣೆ ಇಲ್ಲ. ಸ್ವತಂತ್ರ ಭಾರತಕ್ಕೆ ಬೇಕಾಗುವ ಪ್ರಾಥಮಿಕ ಅರ್ಹತೆಯನ್ನು ಗಳಿಸುವಲ್ಲಿ ಮಾತ್ರ ಕಾಂಗ್ರೆಸ್ ಯಶಸ್ಸು ಪಡೆದಿದೆ. ಸಾಧಿಸಬೇಕಾದ ಮಹತ್ವದ್ದು ಇನ್ನೂ ಮುಂದಿದೆ. ಆದರೆ ಭ್ರಷ್ಟಾಚಾರ ಆಗಲೇ ಕಾಂಗ್ರೆಸ್ಸನ್ನು ತನ್ನ ಕಪಿಮುಷ್ಟಿಗೆ ತೆಗೆದುಕೊಂಡಿದೆ. ಈ ವರ್ಷ ಸದಸ್ಯತ್ವದ ಅಭಿಯಾನವನ್ನು ಪ್ರಾರಂಭಿಸಿ ಒಂದು ಕೋಟಿ ಭಾರತೀಯರನ್ನು ತನ್ನವರು ಎಂದು ಹೇಳಿಕೊಂಡಿದೆ. ಇದರ ಅವಶ್ಯಕತೆ ಇರಲಿಲ್ಲ. ಬರೆಯಲಾಗದ ನಮೂದಿಸಲಾಗದ ಕೋಟಿ-ಕೋಟಿ ಭಾರತೀಯರು ಕಾಂಗ್ರೆಸ್ಸಿನ ಹಿಂದಿದ್ದಾರೆ. ದೇಶದ ಒಳಿತನ್ನು ನಿರೀಕ್ಷಿಸುವ ಕಾಂಗ್ರೆಸ್ ಮೊದಲು ತಾನು ಶುದ್ಧವಾಗಬೇಕು" ಎಂದು 'ಹರಿಜನ' ಕ್ಕೆ ಬರೆದ ಗಾಂಧಿ ಸಂತ ಭಕ್ತಿಯಾರರ ಉರುಸಿನಲ್ಲಿ ಪಾಲ್ಗೊಳ್ಳಲು ಹೋದ.

ಅವನಿಗೆ ಅಲ್ಲಿ ದೊಡ್ಡ ಸ್ವಾಗತ ಕಾದಿತ್ತು. ಎಲ್ಲರೊಂದಿಗೂ ಸೇರಿ ಪ್ರಾರ್ಥನೆ ಸಲ್ಲಿಸಿದ. ಕೇವಲ ಒಬ್ಬ ಭಕ್ತನಾಗಿ ಬಂದಿದ್ದೇನೆ ಎಂದು ತಿಳಿಸಿದ. ಇಲ್ಲಿ ಬಂದವರೆಲ್ಲಾ ಹೃದಯಗಳನ್ನು ಪವಿತ್ರವಾಗಿಸಿಕೊಳ್ಳಿ, ಕೋಮಿನ ಹೆಸರನ್ನು ಬಳಸಿಕೊಂಡು ದುಷ್ಕೃತ್ಯಕ್ಕೆ ಇಳಿಯುವ ಯಾರಿಗೂ ಸಹಾಯ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿ. ದಂಗೆ-ಮುಷ್ಕರಗಳು ಏಳದಂತೆ ರಾಷ್ಟ್ರವನ್ನು ಮುಂದೆ ನಡೆಸಿಕೊಂಡು ಹೋಗುತ್ತೇವೆ ಎಂದು ಹೇಳಿ. ಗೆಳೆಯರಂತೆ, ಸಹೋದರರಂತೆ ಬದುಕುವ ಪವಿತ್ರ ಪಣ ತೊಡಿ, ವೈರಿಯನ್ನು ಭೆಟ್ಟಿಯಾಗಲು ಕೂಡ ಆತ್ಮಶುದ್ಧಿಯೊಂದಿಗೆ ಹೋಗುತ್ತೇವೆ ಎಂದುಕೊಳ್ಳಿ ಎಂದು ಗಾಂಧಿ ತನ್ನ ಸುತ್ತ ಸೇರಿದವರಿಗೆಲ್ಲ ಹೇಳಿ ಹಬ್ಬ ಮಾಡಿದ. ಒಂದು ಕ್ಷಣ ಎಲ್ಲ ಒತ್ತಡಗಳಿಂದ ಹೊರಗುಳಿದು ಸಂತೋಷಪಟ್ಟ. ಗಾಂಧಿ ಇಂದು ತನ್ನೊಂದಿಗೆ ಈ ಹಬ್ಬಕ್ಕೆ ಬ್ರಿಟನ್ನಿನ ಪತ್ರಕರ್ತ ಕಿಂಗ್ಸ್‌ಲೇ ಮಾರ್ಟಿನ್ನರನ್ನು ಕರೆದುಕೊಂಡು ಹೋಗಿದ್ದಾನೆ. ಇದು ಗಾಂಧಿಯ ಬದುಕಿನ ಕೊನೆಯ ಹಬ್ಬ.

ಈ ಮಾರ್ಟಿನ್ ಮತ್ತ್ಯಾರೂ ಅಲ್ಲ, 'ಭಾರತ ತನ್ನ ಸ್ವಾತಂತ್ರ್ಯವನ್ನು ಖಂಡಿತವಾಗಿಯೂ ಅಹಿಂಸೆಯ ಮೂಲಕ ಸಾಧಿಸಿಲ್ಲ, ಅದು ಜನತೆಯ ಆ ಕ್ಷಣದ ಮುಖವಾಡ. ಅದನ್ನು ನಾನು ನಂಬುವುದಿಲ್ಲ ಎಂದು ಗಾಂಧಿಯ ಮುಂದೆ ಸ್ಪಷ್ಟವಾಗಿ ಭಿನ್ನ ರಾಗವೆಳೆದ ಗಾಂಧಿಯ ಪ್ರಾಮಾಣಿಕ ಅನುಯಾಯಿ. ಅವನಿಗೆ ಪ್ರಶ್ನೆ ಗಾಂಧಿಯಲ್ಲ. ಆದರೆ ಗಾಂಧಿ ನಾಡಿನವರು ಎಂದುಕೊಳ್ಳುವ ಜನರು. ಈಗಲೂ

ಗಾಂಧಿಯನ್ನು ಆತ ಇದನ್ನು ಕೇಳಲೆಂದೇ ಬಂದಿದ್ದಾನೆ. ಸಂಶಯ ಬೇಡ, ಅಹಿಂಸೆಯೇ ಶ್ರೇಷ್ಠ ಎಂದು ಹೇಳಿದ ಈ ಗಾಂಧಿ ಇದೇ ಮಾರ್ಟಿನ್‌ನ ಮುಂದೆಯೆ ಹಿಂಸೆಗೆ ಬಲಿಯಾಗುತ್ತಾನೆ. ಭಾರತದ ರಾಜಕಾರಣದಲ್ಲಿ ಇದಕ್ಕಿಂತಲೂ ಕ್ರೂರ ನಾಟಕ ಮತ್ತೊಂದಿಲ್ಲ. ಯಾವುದನ್ನು ಯಾರು ಜೀವನದ ಕೊನೆಯವರೆಗೂ ಅಲ್ಲ ಎಂದು ಹೇಳಿ ನಿರಾಕರಿಸಿದರೋ ಅದೇ ಅವರಿಗೆ ಅಂತಿಮವಾಗುವುದಿದೆಯಲ್ಲ ಅದು ದುರಂತ ನಾಟಕ. ಅದು ಭಯಾನಕ. ಉರುಸ್‌ನಿಂದ ಮರಳಿದ ನಂತರ ಬಿರ್ಲಾಹೌಸ್‌ನಲ್ಲಿ ನಡೆದ ಚರ್ಚೆ ಹೀಗಿದೆ–

ಕಿಂಗ್ಸ್‌ಲೇ ಮಾರ್ಟಿನ್ನನ ಪ್ರಶ್ನೆ: ಭಾರತೀಯರು ಅಹಿಂಸಾವಾದಿಗಳಾಗಿದ್ದರು, ಕಾರಣವಿಷ್ಟೆ! ಬ್ರಿಟಿಷ್ ವಸಾಹತು ರಾಷ್ಟ್ರವಾದ ಅವರ ಬಳಿ ತಮ್ಮದೇ ಆದ ಸೈನಿಕ ವ್ಯವಸ್ಥೆ ಇರಲಿಲ್ಲ. ಇನ್ನೊಂದು ವಿಚಾರ, ಅಹಿಂಸೆ ನಿಜಕ್ಕೂ ಒಂದು ಸಮರ್ಥ ಆಯುಧ ಎನ್ನುವುದಾದರೆ ಅದನ್ನು ಕಾಶ್ಮೀರದ ಬಂಡುಕೋರರ ವಿರುದ್ಧ ಅಥವಾ ಅಡಾಲ್ಫ್ ಹಿಟ್ಲರ್‌ನಂತಹ ವ್ಯಕ್ತಿಯ ವಿರುದ್ಧ ಬಳಸುವುದು ಹೇಗೆ?

ಗಾಂಧಿಯ ಉತ್ತರ: ಅಹಿಂಸೆಯ ಶಕ್ತಿ ಮತ್ತು ಅದರ ಪರಿಣಾಮ ಪ್ರಶ್ನಾತೀತ. ಸೌಥ್ ಆಫ್ರಿಕಾದಲ್ಲಿ ನಾನು ಅದನ್ನು ಸಾಧಿಸಿದ್ದಕ್ಕೆ ನೀವೆಲ್ಲಾ ಸಾಕ್ಷಿಯಾಗಿದ್ದೀರಿ. ಭಾರತದ ವಿಚಾರದಲ್ಲಿಯೂ ಅಷ್ಟೇ ಸ್ಪಷ್ಟ. ಟಾಲಸ್ಟಾಯ್ ಅವರ 'ಐವಾನ್ ದ ಫೂಲ್' ಕಥೆ ನಿಮಗೆ ಗೊತ್ತಿರಬಹುದು. ಹಿಂದೂ ಸನಾತನ ಸಾಹಿತ್ಯದಲ್ಲಿ ಇಂತಹ ಸಾವಿರಾರು ಕಥೆಗಳಿವೆ. ಆದರೆ ನಿಮಗೆ ಈ ಕಥೆಯನ್ನೇ ನೆನಪಿಸುವ ಉದ್ದೇಶ ಇದನ್ನು ನೀವು ಓದಿರಲು ಸಾಧ್ಯವಿದೆ ಎನ್ನುವುದು. ಐವಾನ್ ಅರಸನಾದ, ಅಪಾರವಾಗಿ ಶಕ್ತಿ ಮತ್ತು ಶ್ರೀಮಂತಿಕೆಯನ್ನು ಸಂಪಾದಿಸಿದ. ಗಮನಿಸಬೇಕಾದುದೇನಂದರೆ ಆನಂತರವೂ ಆತ ಅಹಿಂಸಾವಾದಿಯಾಗಿಯೇ ಉಳಿದ. ಅಹಿಂಸಾವಾದಿಯಾಗಿದ್ದ ಈ ದೊರೆ ಹಾಗಿದ್ದರೆ ಆಳ್ವಿಕೆಗೆ ಬೇಕಾಗಿದ್ದ, ರಾಜಕಾರಣಕ್ಕೆ ಬೇಕಾದ ಶಕ್ತಿಯನ್ನು ಎಲ್ಲಿಂದ ಪಡೆದ? ಜನರಿಂದಲೇ ಪಡೆದ. ತನ್ನ ಪ್ರಾಮಾಣಿಕ ಸೇವೆಯಿಂದ ಜನರಿಂದಲೇ ಪಡೆದ. ಇಂತಹ ವ್ಯಕ್ತಿಗೆ ಅಥವಾ ಸರ್ಕಾರಕ್ಕೆ ಅಹಿಂಸೆಯನ್ನೇ ಅನುಸರಿಸುವ, ಒಂದು ಸೈನ್ಯವನ್ನು ಕಟ್ಟುವ ಶಕ್ತಿಯೂ ಇರುತ್ತದೆ. ಆ ಸೈನ್ಯಕ್ಕೆ ಅನ್ಯಾಯದ ವಿರುದ್ಧ ಹೋರಾಡುವ ಆತ್ಮಬಲವೂ ಇರುತ್ತದೆ. ಆತ್ಮಶುದ್ಧಿಯ ಒಬ್ಬ ನಾಯಕ ಅಲ್ಲಿದ್ದರೆ ಸಾಕು.

ಅಂದಹಾಗೆ ಇವತ್ತು ಅವರೊಂದಿಗೆ ಯುನೈಟೆಡ್ ಸ್ಟೇಟ್ಸ್‌ನ ಇನ್ನೊಬ್ಬ ಪತ್ರಕರ್ತ ವಿನ್ಸೆಂಟ್ ಶೀನ್ ಕೂಡ ಇದ್ದಾರೆ. ಈಗಾಗಲೇ ಗಾಂಧಿ ಮತ್ತು ಆತನ ಮಧ್ಯೆ ಸಾಕಷ್ಟು ವರ್ಷಗಳಿಂದ ಪತ್ರವ್ಯವಹಾರ ನಡೆದಿದೆ. ಇಂದು ಶೀನ್ ಕೇಳುತ್ತಿರುವ ಪ್ರಶ್ನೆಯೇ ಭಿನ್ನ. ಆತನ ಪ್ರಶ್ನೆ ಔಷಧಿ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟದ್ದು.

ಶೀನ್ ಪ್ರಶ್ನೆ: ಮಿ. ಗಾಂಧಿ, ನೀವು ಟೈಫೈಡಿನಿಂದ ಬಳಲಿದರೆ ಸಲ್ಫಾ ಡ್ರಗ್ಸ್‌ನ್ನು ಬಳಸುತ್ತೀರೋ ಅಥವಾ ಇಲ್ಲವೋ?

ಗಾಂಧಿ : ನನಗೆ ಗೊತ್ತಿಲ್ಲ. ಸಲ್ಫಾ ನನ್ನ ಆರೋಗ್ಯಕ್ಕಾಗಲಿ, ಮಾನವ ಜನಾಂಗಕ್ಕಾಗಲಿ ಒಳ್ಳೆಯದೋ, ಕೆಟ್ಟದ್ದೋ ನನಗೆ ಗೊತ್ತಿಲ್ಲ. ಅದರ ಪೂರ್ಣ ತಿಳುವಳಿಕೆ ಇಲ್ಲದ ನಾನು ಅದರ ಬಳಕೆಯನ್ನು ವಿರೋಧಿಸುತ್ತೇನೆ. ಮನುಷ್ಯನಿಗೆ ಹಾನಿಯನ್ನು ತರದ, ಆತನ ಮೂಲ ತತ್ವಕ್ಕೆ ಆಚು ತರದ ಯಾವುದೇ ವಿಚಾರ, ಪರಿಹಾರಗಳನ್ನು ಮಾತ್ರ ನಾನು ಗೌರವಿಸುತ್ತೇನೆ.

ಶೀನ್ : ಅಹಿಂಸೆಯ ತತ್ವದ ಮೇಲೆ ರಾಷ್ಟ್ರ ಮತ್ತು ರಾಜಕಾರಣ ಎಂದು ಮಾತನಾಡುವ ನೀವು ಯಾಕೆ ಸರ್ಕಾರದ ಯಾವುದೇ ಜವಾಬ್ದಾರಿಯುತ ಪಾತ್ರದಲ್ಲಿ ಇಲ್ಲ?

ಗಾಂಧಿ : ಒಳ್ಳೆಯವನಾಗಬೇಕು, ಎಂತಹ ಸಂದರ್ಭಗಳಲ್ಲಿಯೂ ಒಳ್ಳೆಯದನ್ನೇ ಮಾಡಬೇಕು ಎನ್ನುವ ವ್ಯಕ್ತಿ ಯಾವುದೇ ಅಧಿಕಾರದಲ್ಲಿ ಇರಬಾರದು. ಆದರೆ ತನ್ನ ಈ ಉದ್ದೇಶವನ್ನು ಪ್ರತಿನಿಧಿಸುವ ವ್ಯಕಿಗಳನ್ನು ಪೂರೈಸುವ ಕೆಲಸವನ್ನು ಆತ ನಿರಂತರವಾಗಿ ಮಾಡುತ್ತಲೇ ಇರಬೇಕು. ಆತನೇ ಅಧಿಕಾರಕ್ಕಿಳಿದರೆ ಅಲ್ಲಿ ನಡೆಯುವ ಭ್ರಷ್ಟಾಚಾರಕ್ಕೆ ಆತನೇ ಬಲಿಯಾಗುವ ಎಲ್ಲ ಸಾಧ್ಯತೆಗಳೂ ಇವೆ. ತಾನು ಕಳುಹಿಸಿದ ವ್ಯಕ್ತಿ ಸಿಲುಕಿಕೊಂಡಾಗ ಅವನನ್ನು ಮರಳಿ ಕರೆಯಿಸಿಕೊಳ್ಳಬಹುದು, ಆದರೆ ಸ್ವಯಂ ಈತನೇ ಸಿಲಿಕಿಕೊಂಡರೆ ಇಡೀ ವ್ಯವಸ್ಥೆ ಸಿಕ್ಕಿಬೀಳುತ್ತದೆ, ಇಡೀ ತತ್ವವೆ ಅರ್ಥಹೀನವಾಗುತ್ತದೆ. ಈ ಕಾರಣಕ್ಕಾಗಿ ನಾನು ಹೊರಗಿದ್ದೇನೆ.

ಶೀನ್ : ನಾನು ಭಗವದ್ಗೀತೆಯನ್ನು ಓದಿದ್ದೇನೆ. ಅದು ತತ್ವಾಧಾರಿತ ಯುದ್ಧವನ್ನು ಬೆಂಬಲಿಸುತ್ತದೆ. ೨ನೇ ಮಹಾಯುದ್ಧವನ್ನು ತತ್ವಾಧಾರಿತ ಯುದ್ಧವೆಂದೇ ಬಿಂಬಿಸಲಾಗಿದೆ. ಆದಾಗ್ಯೂ ಆನಂತರವೂ ಹಿಂಸೆ ಅಳಿಯಲಿಲ್ಲ. ಈ ಕುರಿತು ನಿಮ್ಮ ಅಭಿಪ್ರಾಯವೇನು?

ಗಾಂಧಿ : ಭಾರತದಲ್ಲಿ, ವಿಶೇಷತಃ ಕಾಶ್ಮೀರದಲ್ಲಿ ಇಂದು ಏನು ನಡೆಯುತ್ತಿದೆ ಗಮನಿಸಿ. ಖಂಡಿತವಾಗಿಯೂ ಹಿಂಸೆ ಇದೆ. ಆದರೆ ಮುಂದೊಂದು ದಿನ ಅಹಿಂಸೆಯೇ ಗೆಲ್ಲುತ್ತದೆ. ಅದರ ಪೂರ್ಣ ವಿಶ್ವಾಸ ನನಗಿದೆ. ಗೀತೆಯಲ್ಲಿ ಚರ್ಚಿಸಲಾಗಿರುವ ಯುದ್ಧ ಎಷ್ಟು ಭೌತಿಕವಾಗಿ ಕಾಣಿಸುತ್ತದೆಯೋ ಅದು ಅಷ್ಟೇ ಆಧ್ಯಾತ್ಮಿಕ. ಅಲ್ಲಿ ನಡೆದಿರುವುದು ಒಳಿತು ಮತ್ತು ಕೆಡುಕಿನ ಮಧ್ಯದ ಹೋರಾಟ. ಗೀತೆ ನಿಜವಾದ ಅರ್ಥದಲ್ಲಿ ಹಿಂಸೆಯನ್ನು ಕುರಿತು ಹೇಳುವುದಿಲ್ಲ, ಅಹಿಂಸೆಯನ್ನು ಕುರಿತೂ ಹೇಳುವುದಿಲ್ಲ. ಅದು ಚರ್ಚಿಸುತ್ತಿರುವುದು ಕರ್ಮವನ್ನು ಕುರಿತು. ಯಾವುದೇ ರಾಗ-ದ್ವೇಷಗಳಿಲ್ಲದ, ಲಾಭ ಹಾನಿಗಳ ಲೆಕ್ಕವಿಲ್ಲದ ಕರ್ಮವನ್ನು ಕುರಿತು.

ಚರ್ಚೆ ಹೀಗೆ ಇನ್ನೂ ಮುಂದುವರೆಯಬೇಕಿತ್ತು, ಅದರೆ ಫೆ. ೨ಕ್ಕೆ ವರ್ಧಾಕ್ಕೆ ಹೊಗಲಿರುವ ಗಾಂಧಿ ಮಾಡಿಕೊಳ್ಳಬೇಕಾದ ತಯಾರಿ ಬಹಳಷ್ಟಿತ್ತು. ಬುಧವಾರ ಜ. ೨೮ರ ಈ ಸಾಯಂಕಾಲದ ಪ್ರಾರ್ಥನೆಯಲ್ಲಿ ಮನುಷ್ಯ ಮತ್ತು ದೇವರ ಸಂಬಂಧದ ಕುರಿತು ಮಾತನಾಡಬೇಕಿದ್ದ ಗಾಂಧಿಗೆ ಕೊನೆಗೂ ಅದನ್ನು ಮಾತನಾಡಲಾಗಲೇ ಇಲ್ಲ. ಕಾರಣ, ಪ್ರಾರ್ಥನೆಗೆ ಹೋಗುವ ಮುಂಚೆ ಕಾಶ್ಮೀರದ ಮೀರ್‌ಪುರದಿಂದ ಬಂಡುಕೋರರು ಕೆಲವು ಮಹಿಳೆ ಮತ್ತು ಮಕ್ಕಳನ್ನು ಎತ್ತಿಕೊಂಡು ಹೋಗಿ ಸೆರೆಯಾಳಾಗಿ ಇಟ್ಟುಕೊಂಡಿದ್ದಾರೆ. ಇದು ಗಾಂಧಿಗೆ ಬಹಳ ಬೇಸರ ತರಿಸಿದೆ. ಆತ ಪರಮಾತ್ಮನೆಡೆಗೆ ಹೊರಟಷ್ಟು ಪಾಪಿಗಳ ಅಟ್ಟಹಾಸ ಹೆಚ್ಚಾಗುತ್ತಲೇ ಇದೆ. ಪಾಕಿಸ್ತಾನದ ದುರ್ನೀತಿಗಳು ಕಾಶ್ಮೀರದ ನೆಮ್ಮದಿಯನ್ನು ಕೆಡಿಸುತ್ತಲೇ ಇವೆ. ಹೀಗಾಗಿ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ಹೇಳಿದ, "ನೀವು ಬಂಡುಕೋರರೋ ಅಥವಾ ಪಾಕಿಸ್ತಾನದ ಕುಮ್ಮಕ್ಕಿನಿಂದ ಮಹಿಳೆ ಮತ್ತು ಮಕ್ಕಳನ್ನು ಸೆರೆಯಾಳುಗಳಾಗಿ ಇಟ್ಟುಕೊಳ್ಳುವಂತಹ ಬಾಡಿಗೆ ಬಂಟರೋ, ಯಾರೇ ಆಗಿರಲಿ ಇದು ನೀಚ ಕೃತ್ಯ. ದಯವಿಟ್ಟು ಪಾಕಿಸ್ತಾನದ ಮರ್ಯಾದೆಗಾಗಿ, ದೇವರು ಮತ್ತು ಮನುಷ್ಯತ್ವದ ಮರ್ಯಾದೆಗಾಗಿ ನಿಮ್ಮನ್ನು ಕೈ ಮುಗಿದು ಕೇಳಿಕೊಳ್ಳುತ್ತಿದ್ದೇನೆ, ಅವರನ್ನು ಬಿಟ್ಟು ಬಿಡಿ. ಪ್ರಪಂಚದಲ್ಲಿ ಅತ್ಯಂತ ಸುಂದರವಾದ ಕಾಶ್ಮೀರದ ಕಣಿವೆಯನ್ನು ನರಕವಾಗಿಸಬೇಡಿ, ಅಗ್ನಿಕುಂಡವಾಗಿಸಬೇಡಿ. ನನಗೆ ಇಸ್ಲಾಮಿನ ಬಗ್ಗೆ ಸಾಕಷ್ಟು ಗೊತ್ತಿದೆ. ಅದು ಎಂದೂ, ಎಲ್ಲಿಯೂ ಹೀಗೆ ಮಕ್ಕಳನ್ನು ಮತ್ತು ಮಹಿಳೆಯರನ್ನು ಸೆರೆಯಾಳುಗಳಾಗಿಡುವ ವಿಚಾರವನ್ನು ಕಲಿಸುವುದಿಲ್ಲ. ನಿಮ್ಮಲ್ಲಿ ಸೈತಾನ ಹೊಕ್ಕಿದ್ದಾನೆ. ಅವನನ್ನು ಹೊರಗಟ್ಟಿ. ಇಸ್ಲಾಮಿನ ತತ್ವವನ್ನೇ ಆದರಿಸಿ. ಅಲ್ಲಾನನ್ನು ಸ್ಥಾಪಿಸಿಕೊಳ್ಳಿ, ನೀವು ಮಾಡುತ್ತಿರುವುದು ಎಷ್ಟರಮಟ್ಟಿಗೆ ಯೋಗ್ಯ ಎನ್ನುವುದು ತಿಳಿಯುತ್ತದೆ."

ಗಾಂಧಿಯ ಭೆಟ್ಟಿಗೆ ಬಂದಿದ್ದ ಆರ್.ಆರ್.ದಿವಾಕರ್, ಆಚಾರ್ಯ ಜುಗಲ್ ಕಿಶೋರ್, ಕಾಂಗ್ರೆಸ್ಸಿನ ಉಪ ಕಮೀಟಿಯ ಸದಸ್ಯರು, ಪ್ರಸಾದ್, ನೆಹರೂ, ಅಮೃತ ಕೌರ್, ಕೆಲವು ಮಹತ್ವದ ಚರ್ಚೆಗಳನ್ನು ೨೦ ನಿಮಿಷದ ವ್ಯಾಪ್ತಿಯಲ್ಲಿ ಮುಗಿಸಿ ಹೊರಟು ಹೋದರು. ವಿಪರೀತವಾಗಿ ಬೀಸುವ ಚಳಿ-ಗಾಳಿ, ಸುತ್ತಲೂ ಕತ್ತಲೆ, ನಾಲ್ಕು ಸಾಲುಗಳ ಒಂದು ಪತ್ರವನ್ನು ಬರೆದಿಟ್ಟು ಗಾಂಧಿ ನಿದ್ರೆಗೆ ಹೋದ. ಉರಿಗೆ ತೆರೆಯಿಲ್ಲ. ತೆರೆಯಿಲ್ಲದ ವಸ್ತುವಿಗೆ ವಿಚಾರಕ್ಕೆ ತೆರೆಯೆಳೆಯುತ್ತೇನೆ ಎಂದು ಹೊರಟಿರುವ ಗಾಂಧಿಯ ಈ ಸಾಲುಗಳಿಗೆ ಏನೆನ್ನಬೇಕೋ ತಿಳಿಯುತ್ತಿಲ್ಲ. ಆತ ಬರೆಯುತ್ತಾನೆ, "I am still knocking about in a dark world. I do not intend to stay here for long. Whatever has to be decided within the next four days."

❑



ಆssssssಹ್ or ಹೇ ರಾಮ್?

೨೯ರ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ಮತ್ತೆ ಸ್ವಾತಂತ್ರ್ಯದ ಮಹತ್ವವನ್ನು ಕುರಿತೇ ಹೇಳಿದ. ಸೌಥ್ ಆಫ್ರಿಕಾದಲ್ಲಿ ನಿತ್ಯವೂ ಸ್ವಾತಂತ್ರ್ಯಕ್ಕಾಗಿ ಬಡಿದಾಡುವ ಜನರಿಗೆ ಅದರ ಮಹತ್ವ ಗೊತ್ತು, ಬದುಕಿನ ಸಣ್ಣ ಪುಟ್ಟ ಹಕ್ಕುಗಳಿಗಾಗಿಯೂ ಅವರು ಗೋಗರೆಯಬೇಕಾಗುತ್ತದೆ. ಸರಕಾರದ ಮುಂದೆ ಅಂಗಲಾಚಬೇಕಾಗುತ್ತದೆ. ಒಂದು ದೇಶದಲ್ಲಿ ಅಲ್ಪಸಂಖ್ಯಾತರಾಗಿದ್ದುಕೊಂಡು ಅಸಂಬದ್ಧವಾದುದೆಲ್ಲವನ್ನೂ ಮಾಡಲಾಗದು. ಸಂಯಮದ ದಾರಿಯಲ್ಲಿ ಸಾಗಿಯೇ ಅಂದುಕೊಂಡಿದ್ದನ್ನು ಸಾಧಿಸಬೇಕು. ಬಹುತೇಕ ಈ ಪ್ರಮೇಯಗಳು, ಜವಾಬ್ದಾರಿಗಳು ಇಲ್ಲಿ ನಮಗಿಲ್ಲ ಎಂದು ತಿಳಿದುಕೊಂಡಿರುವುದೇ ಈ ಎಲ್ಲ ಬೇಜಾವಾಬ್ದಾರಿತನಗಳಿಗೆ ಅವಕಾಶ ನೀಡುತ್ತಿದೆ ಎಂದು ಬಹಳ ಕಡಿಮೆ ಹೊತ್ತು ಮಾತನಾಡಿದ ಗಾಂಧಿ ರಾತ್ರಿ ಬಂದು ಗೆಳೆಯ ಶಂಕರನಿಗೆ ಒಂದು ಪತ್ರ ಬರೆದ. ಗೆಳೆಯನ ಪ್ರೀತಿಯ ಮಗಳು ಸುಲೋಚನಾ ತೀರಿಕೊಂಡಿದ್ದಾಳೆ. ಆ ನೋವನ್ನು

ಸಹಿಸಿಕೊಳ್ಳಲಾಗದ ಶಂಕರ ಜೀವನದಲ್ಲಿ ಉತ್ಸಾಹವನ್ನೇ ಕಳೆದುಕೊಂಡಿದ್ದಾನೆ. ಆದರೆ ಗಾಂಧಿಯ ಪ್ರಕಾರ ನಮಗೆ ಅತ್ಯಂತ ಪ್ರಿಯವಾದುದೊಂದು ನಮ್ಮಿಂದ ಕಸಿಯಲ್ಪಟ್ಟಾಗ ನಾವು ನಮ್ಮ ಕರ್ತವ್ಯದಲ್ಲಿ ಹೆಚ್ಚು ಪ್ರಾಮಾಣಿಕವಾಗಬೇಕಾಗುತ್ತದೆ, ಕಾಯಕವನ್ನೇ ಧರ್ಮವಾಗಿಸಿಕೊಳ್ಳಬೇಕಾಗುತ್ತದೆ. ಜ. ೨೯ ಹೀಗೆಯೇ ಹಲ-ಕೆಲವು ಭೆಟ್ಟಿ ಹಾಗೂ ಚರ್ಚೆಗಳು. ಇಂದು ವಿಶೇಷವಾಗಿ ಕಾಂಗ್ರೆಸ್ಸಿಗೆ ಒಂದು ನೀತಿ ಸಂಹಿತೆಯನ್ನು ರೂಪಿಸುವಲ್ಲಿ ಗಾಂಧಿ ಮಗ್ನನಾಗಿದ್ದಾನೆ. ಹಾಗೆಯೆ ಭಾರತದ ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್‌ಗಳ ಸ್ವರೂಪ ಮತ್ತು ಕಾರ್ಯವೈಖರಿ ಹೇಗಿರಬೇಕು? ಅದರ ಸದಸ್ಯರುಗಳಿಗೆ ಯಾವ ಜವಾಬ್ದಾರಿಗಳಿರಬೇಕು ಎನ್ನುವ ನಿಯಮಾವಳಿಗಳನ್ನೂ ಸಿದ್ಧಪಡಿಸುತ್ತಿದ್ದಾನೆ. ಆತನ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ೫ ಜನ ಯುವಕರು ಸದಸ್ಯರಾಗಿರಬೇಕು. ಇಂತಹ ೧೦೦ ಪಂಚಾಯತ್‌ಗಳು ೫೦ ಜನ ಮುಂಚೂಣಿಯ ನಾಯಕರನ್ನು ಆಯ್ಕೆ ಮಾಡಿ ಕಳುಹಿಸಬೇಕು. ಅವರಿಗೆ ಖಾದಿ ದೀಕ್ಷೆ ಇರಬೇಕು. ಅವರೆಲ್ಲರೂ ಸಂಪೂರ್ಣ ಚಟಗಳಿಂದ ಮುಕ್ತರಾಗಿರಬೇಕು, ಅಸ್ಪೃಶ್ಯತೆಯ ವಿರೋಧಿಯಾಗಿರಬೇಕು, ಎಲ್ಲ ಧರ್ಮಗಳ ಬಗೆಗೆ ಗೌರವ ಹೊಂದಿದವರಾಗಿರಬೇಕು. ಹಾಗೂ ಹಳ್ಳಿಗಳನ್ನು ಸ್ವಾವಲಂಬಿಗಳಾಗಿ ಮಾಡುವ ಅದಮ್ಯ ಕನಸನ್ನು ಹೊಂದಿರಬೇಕು. ಇದು ಭಾರತದ ಹಳ್ಳಿಗಳ ಬಗೆಗೆ ಗಾಂಧಿಗಿದ್ದ ಕಾಳಜಿ. ೧೦೭ ಪೌಂಡುಗಳ ೭೯ ವಯಸ್ಸಿನ ಈ ಮನುಷ್ಯ ಕೆಲಸದಲ್ಲಿ ವಿಚಾರದಲ್ಲಿ ಒಂದು ನಿರಂತರ ಯಂತ್ರ. ಆದರೆ ಈಗ ದಣಿದಿದ್ದಾನೆ. ಈ ದಿನ ಗೆಳೆಯನೊಬ್ಬನಿಗೆ ಬರೆದ ಪತ್ರದ ಒಂದೇ ಸಾಲು ಹೀಗಿದೆ, "I am very tired. Yet I must finish this task." ಆರುವ ದೀಪಕ್ಕೆ ಬೆಳಗುವ ಬಯಕೆ ಹೆಚ್ಚು. ಸುಟ್ಟುಕೊಂಡಷ್ಟೂ ಉತ್ಸಾಹ. ಏನೋ ಹಂಚಿಕೊಂಡೆ ಎಂಬ ನೆಮ್ಮದಿ.

ಇಂದು ಸರಿಯಾಗಿ ೯ ಗಂಟೆ ೩೦ ನಿಮಿಷಕ್ಕೆ ಗಾಂಧಿ ಮಲಗಲು ಹೋಗಬೇಕು. ಅದಕ್ಕೂ ಮುಂಚೆ ತನ್ನ ಮೊಮ್ಮಗಳಾದ ಮನು ಗಾಂಧಿಯನ್ನು ಮುಂದೆ ಕೂಡ್ರಿಸಿಕೊಂಡು ಕೊನೆಯ ಬಾರಿಗೆ, ಕವಿಯಾಗಿ, ಉರ್ದು ಸಾಹಿತ್ಯ ಹಿಂದಿಯಷ್ಟೇ ಪ್ರಿಯ ಗಾಂಧಿಗೆ. ಹೀಗಾಗಿ ಉರ್ದು ಕವಿತೆಯ ಸಾಲುಗಳನ್ನು ವಿವರಿಸುತ್ತಾನೆ. ಅವು ಅವನನ್ನೇ ಕುರಿತು ಹೇಳಿದಂತಿರುವ ಸಾಲುಗಳು. ಸಾಲುಗಳ ಅರ್ಥವಿಷ್ಟೆ, 'ಪ್ರಪಂಚದ ಉದ್ಯಾನಗಳಿಗೆ ಪ್ರತಿ ವರ್ಷವೂ ವಸಂತ ಬರುತ್ತದೆ, ಆದರೆ ಕೆಲವೇ ಕೆಲವು ದಿನಗಳಿಗಾಗಿ ಮಾತ್ರ. ಒಂದು ಕ್ಷಣ ಸೃಷ್ಟಿಯ ಈ ವಿಚಿತ್ರ ಆಟವನ್ನು ಕಣ್ತುಂಬಿಸಿಕೊಂಡುಬಿಡು. ಕೇಳಿದರೆ ಮತ್ತೆ ಇಲ್ಲ, ಮಗದೊಮ್ಮೆ..? ಸಾಧ್ಯವೇ ಇಲ್ಲಾ.' ಇದು ಖಂಡಿತವಾಗಿಯೂ ಸತ್ಯ. ಪ್ರಪಂಚದ ಮಾನವತೆಯ ಉದ್ಯಾನವನಕ್ಕೆ ಒಬ್ಬನೇ ಅಪರೂಪದ ಜಾಡಮಾಲಿ, ಆತ ಗಾಂಧಿ. ಒಮ್ಮೆ ಬಂದು ಹೋದವ ಮತ್ತೆ ಬರಲಿಲ್ಲ.

ಪುನರಾವರ್ತನೆ ಕೆಲವು ವಿಚಾರದಲ್ಲಿ ದೇವರಿಗೂ ಸಾಧ್ಯವಾಗಿಲ್ಲ. ಆ ರಚನೆಯ ಹಿಂದಿನ ರಸಾಯನ ಬಹುತೇಕ ದೇವರಿಗೂ ನೆನಪಿಲ್ಲ. ಈಗ ಈ ಪ್ರಪಂಚದಲ್ಲಿ ಎಲ್ಲವೂ ಇದೆ, ಆದರೆ ಒಬ್ಬ ಸಾಮಾನ್ಯ, ನಿಮ್ಮಿಂದ ತೆಗಳಿಸಿಕೊಳ್ಳುವ, ಒಂದಿಲ್ಲಾ ಒಂದು ರೀತಿಯಲ್ಲಿ ನಿಮ್ಮ ಟೀಕೆ, ಸೆಡವು, ಗೌರವ, ಧಿಕ್ಕಾರಗಳಿಗೆ ಈ ಗಾಂಧಿ ಇಲ್ಲ.

ಜನೇವರಿ ೩೦ ಗಾಂಧಿ ಹೊರಡಲೇಬೇಕಾದ ದಿನ, ಈತನನ್ನು ಇನ್ನಿಲ್ಲದಂತೆ ಕಳುಹಿಸಲೇಬೇಕೆಂದು ಎಷ್ಟೊಂದು ತಯ್ಯಾರಿ ಮಾಡಿಕೊಂಡಿದ್ದಾರೆ ಗೋಡ್ಸೆ ಹಾಗೂ ಆತನ ಸ್ನೇಹಿತರು. ಕೊಂಡು ತಂದ ಬಂದೂಕನ್ನು, ಮನಸ್ಸನ್ನು ಎಷ್ಟೊಂದು ಕರಾರುವಾಕ್ಕಾಗಿಸಿಕೊಂಡಿದ್ದಾರೆ. ಈ ಪ್ರಪಂಚಕ್ಕೆ ಎಷ್ಟೆಲ್ಲ ಮಾಡಿದ ಗಾಂಧಿಗೆ ತಾವು ಏನಾದರೂ ಮಾಡಬೇಕೆನ್ನುವ ತೀವ್ರ ಹಂಬಲ ಪಾಪ ಅವರಿಗೆ. ಇತ್ತ ಈ ಇಡೀ ದಿನವೇ ಗಾಂಧಿಗೆ ಕೇವಲ ಒಂದು ಕ್ಷಣ. ಅಂತಿಮ ಕ್ಷಣ, ಆನಂತರ ಆತ ಇತಿಹಾಸದ ಮುಗಿದ ಅಧ್ಯಾಯ! ಇಲ್ಲಾ ಮುಗಿಯದ ಅಧ್ಯಾಯ. ಯಾವುದೋ ಒಂದು. ಅದು ನಿಮ್ಮನ್ನು ನಿರ್ಭರಿಸಿದೆ. ಇಂದು ಆತ ಯಾವುದಕ್ಕೂ ತಡಮಾಡುತ್ತಿಲ್ಲ. ಪ್ರಾರ್ಥನೆಗೆ ಹೋಗುವ ಭಕ್ತನಂತೆಯೋ, ಮದುವೆಗೆ ಹೋಗುವ ವರನಂತೆಯೋ ಇಂದು ಆತ ಸಾವಿನೊಂದಿಗೆ ಹೋಗುವುದಕ್ಕೂ ಸಿದ್ಧವಾಗುತ್ತಿದ್ದಾನೆ. ರಾತ್ರಿ ಕೇವಲ ಮೂರು ಗಂಟೆಗಳ ನಿದ್ರೆ ಮಾಡಿದ ಗಾಂಧಿ ತಾನೊಬ್ಬನೇ ಎದ್ದು ಪತ್ರಗಳಿಗೆ ಉತ್ತರಿಸುವುದರಲ್ಲಿ ತಲ್ಲೀನನಾಗಿದ್ದಾನೆ. ಯಾಕೋ ಮನಸ್ಸಿಗೆ ಸಮಾಧಾನವಿಲ್ಲ, ಆದರೂ ಯಾವ ಕೆಲಸಗಳೂ ನಿಲ್ಲುವಂತಿಲ್ಲವಲ್ಲ. ಆನಂತರ ಗಾಂಧಿಯ ಕೆಲಸಗಳಿಗೆ ಬಂದು ಸೇರಿಕೊಂಡವಳು ಮನು. ಆನಂದ್ ಹಿಂಗೊರಾಣಿ ಮತ್ತು ಗಂಗಿಬೆನ್ ಅವರಿಗೆ ತಾನು ೨ನೆ ತಾರೀಕಿನಂದು ವರ್ಧಾಕ್ಕೆ ಬರಲಿದ್ದು, ಅಲ್ಲಿಯೇ ಬಂದು ತನ್ನನ್ನು ಭೆಟ್ಟಿಯಾಗುವಂತೆ ಬರೆಯಿಸುತ್ತಾನೆ. ಹೀಗೆ ಒಂದೆರಡು ಪತ್ರ ಬರೆಯಿಸುವುದರಲ್ಲಿ ಗಾಂಧಿಗೆ ಆಯಾಸವೆನಿಸುತ್ತದೆ. ಈಗ ಮತ್ತೆ ಒಂದು ಸಣ್ಣ ನಿದ್ರೆಗಿಳಿಯುತ್ತಾನೆ. ಇದು ಆತ ಏಳಲಿರುವ ಕೊನೆಯ ನಿದ್ರೆ, ಇಂದು ಸಾಯಂಕಾಲ ಆತ ಜಾರಲಿರುವುದು ಅಂತಿಮ ನಿದ್ರೆಗೆ.

ನಿದ್ರೆಯಿಂದ ಎದ್ದ ತಕ್ಷಣ, ನೌಖಾಲಿಯಿಂದ ಬಂದಿದ್ದ, ನಿನ್ನೆಯಿಂದ ತನ್ನೊಂದಿಗಿದ್ದ, ಪ್ಯಾರೆಲಾಲ್‌ರನ್ನು ಕರೆದು ಕಾಂಗ್ರೆಸ್ಸಿಗೆ ತಾನು ನೀತಿ–ಸಂಹಿತೆಯನ್ನು ಸಿದ್ಧಪಡಿಸಿದ ವಿಚಾರ, ಗ್ರಾಮ ಪಂಚಾಯತ್ ಕುರಿತು ತಾನು ಕೊಟ್ಟ ಬರಹಗಳನ್ನು ಮತ್ತೊಮ್ಮೆ ಗಮನಹರಿಸುವಂತೆ ಹೇಳುತ್ತಾನೆ. ಮದ್ರಾಸ್ ಪ್ರಾಂತ್ಯದಲ್ಲಿ ಆಗಿರುವ ಆಹಾರ ಸಮಸ್ಯೆ ಮತ್ತು ಫೆ. ೧೫ರಂದು ಪ್ರಕಟವಾಗಲಿರುವ 'ಹರಿಜನ್'ದ ಸಂಚಿಕೆಯ ಬಗೆಗೆ ಚರ್ಚಿಸುತ್ತಾನೆ. ಪೂರ್ವ ಪಾಕಿಸ್ತಾನದಲ್ಲಿ ಹಿಂದೂಗಳನ್ನು ಒಕ್ಕಲೆಬ್ಬಿಸುವ ಹೇಯ ಕೆಲಸ ಈಗಲೂ ನಿರಂತರವಾಗಿ ನಡೆದಿದ್ದು, ಅದರ ವಿರುದ್ಧ

ಹಿಂದೂಗಳು 'ಮಾಡು ಇಲ್ಲವೇ ಮಡಿ' ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು, ಇಲ್ಲದೇ ಹೋದರೆ ಎಲ್ಲವೂ ಅಹಿಂಸೆಯ ವ್ಯಾಪ್ತಿಯಿಂದ ಹೊರಬಂದು ಮತ್ತೆ ಕೋಮು-ಗಲಭೆಗಳು ಎರಡು ರಾಷ್ಟ್ರಗಳನ್ನು ವ್ಯಾಪಿಸಿಕೊಂಡುಬಿಡುತ್ತವೆ ಎನ್ನುತ್ತಾನೆ. ನೌಖಾಲಿಯಲ್ಲಿ ಪ್ಯಾರೆಲಾಲ್ ಮತ್ತು ಅವನ ಅನುಚರರು ಸಾಧಿಸಿದ ವಿಜಯವನ್ನೇ ಪಾಕಿಸ್ತಾನದಲ್ಲಿ ಹಿಂದೂಗಳು ಸಾಧಿಸಬೇಕು ಎನ್ನುವ ಇಂಗಿತವನ್ನು ವ್ಯಕ್ತಪಡಿಸುತ್ತಾನೆ.

ಇಷ್ಟರಲ್ಲಿ ಸೂರ್ಯೋದಯವಾಯಿತು. ನಿಸರ್ಗ ಚಿಕಿತ್ಸೆ, ಮೈಗೆ ಎಣ್ಣೆ ಸವರಿಕೊಳ್ಳುವ ಕೆಲಸ ಮುಗಿಸಿಕೊಂಡೇ ಕುಳಿತಿದ್ದ ಗಾಂಧಿ ಅವಸರದಿಂದ ಸ್ನಾನ ಮುಗಿಸಿದ. ಈಗ ಸಮಯ ೯ ಗಂಟೆ ೩೦ ನಿಮಿಷ. ಬೆಂಗಾಲಿ ಕಲಿಯುವ ಕೆಲಸ ಪ್ರಾರಂಭ. ಸಾವಿನ ಈ ದಿನದವರೆಗೂ ಪ್ರತಿದಿನ ಒಂದು ಗಂಟೆ ಬೆಂಗಾಲಿಯನ್ನು ಬರೆಯುವ, ಓದುವ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದಾನೆ ಗಾಂಧಿ. ನಂತರ ಅರೆಬೇಯಿಸಿದ ಸಸ್ಯಾಹಾರಿ ಮುಂಜಾವಿನ ತಿಂಡಿ. ಮೇಕೆಯ ಹಾಲು, ಜೀರಿಗೆ ಮತ್ತು ನಿಂಬೆಯ ರಸ ಆನಂತರ ಮತ್ತೆ ಕೆಲಸ. ಇಂದು ಮತ್ತೆ ಭಾರತದ ಹಳ್ಳಿಗಳ ಕುರಿತು ಜುಗಲ್ ಕಿಶೋರರೊಂದಿಗೆ ಮಾತುಕತೆ. ಇಷ್ಟರಲ್ಲಿ ದೆಹಲಿಯ ಮುಸ್ಲಿಂ ಬಂಧುಗಳ ಒಂದು ತಂಡ ಬಂದಿದೆ. ಗಾಂಧಿ ಫೆ. ೨ರಂದು ವರ್ಧಾಕ್ಕೆ ಹೋಗುತ್ತಿರುವ ವಿಚಾರ ಅವರಲ್ಲಿ ಆತಂಕವನ್ನು ಹುಟ್ಟಿಸಿದೆ. ಗಾಂಧಿ ಅತ್ತ ಹೋದ ತಕ್ಷಣ ದೆಹಲಿ ಎಲ್ಲಿ ಮೊದಲಿನಂತಾಗಿಬಿಡುತ್ತದೆಯೋ ಎನ್ನುವುದೇ ಅವರ ಚಿಂತೆ. ಗಾಂಧಿ ಈಗ ಮುಗುಳ್ನಕ್ಕು ಕೇಳುತ್ತಾನೆ, ನಾನು ದೇಶದಲ್ಲೇ ಇರಲು ಅಯೋಗ್ಯ, ರಾಜಕಾರಣವನ್ನು ಬಿಟ್ಟು ಹಿಮಾಲಯಕ್ಕೆ ಹೋಗಲಿ ಎಂದು ನಿಮ್ಮಲ್ಲೆ ಯಾರೋ ಅಲ್ಲವೇ ಹಿಂದೊಮ್ಮೆ ಕೂಗಿದ್ದು? ಈಗ ವರ್ಧಾಕ್ಕೆ ಹೊರಟರೆ ಆತಂಕವೇ? ಸುಮ್ಮನೆ ತಮಾಷೆಗೆಂದೆ, ಏನೂ ಆಗುವುದಿಲ್ಲ, ಚಿಂತಿಸಬೇಡಿ. ನೆಮ್ಮದಿಯಾಗಿರಿ. ಎಲ್ಲರಿಗೂ ಒಳಿತಾಗುತ್ತದೆ. ಎಲ್ಲವೂ ಸರಿಯಾಗಿರುತ್ತದೆ. ನೀವು ನಿಮ್ಮ ಕರ್ತವ್ಯಗಳನ್ನು ಮಾಡುತ್ತಿರಿ ಸಾಕು.

ಸಾಯಂಕಾಲದ ೪ ಗಂಟೆ. ಸೂರ್ಯ ಸಣ್ಣಗೆ ಜಾರುತ್ತಿದ್ದಾನೆ. ಈಗಾಗಲೇ ನಿರ್ಧಾರಿತ ಕತ್ತಲೆ ಆಕಾಶವನ್ನು ಆವರಿಸಿಕೊಳ್ಳುತ್ತಿದೆ. ಮನಿಬೆನ್‌ಳೊಂದಿಗೆ ಸರ್ದಾರ್ ಪಟೇಲ್ ಗಾಂಧಿಯ ಆದೇಶದಂತೆ ಆತನನ್ನು ಕಾಣಲು ಬಂದಿದ್ದಾರೆ. ಇತ್ತೀಚಿಗೆ ನೆಹರು ಮತ್ತು ಪಟೇಲರ ಮಧ್ಯದ ಅಂತರ ಹೆಚ್ಚುತ್ತಿದ್ದು, ಅದರ ಮಧ್ಯದ ಲಾಭ ಯಾರಿಗಾಗಬಹುದು? ದೇಶದ ಆಡಳಿತದ ಮೇಲೆ ಯಾವ ಕೆಟ್ಟ ಪರಿಣಾಮಗಳಾಗಬಹುದು? ಅವರಿಬ್ಬರೂ ಎಲ್ಲ ಕಾಲಕ್ಕೂ ಜೊತೆಯಾಗಿ ಸಹೋದರರಂತೆ ಈ ದೇಶವನ್ನು ನಡೆಯಿಸಿಕೊಂಡು ಹೋಗಬೇಕಾದುದರ ಅನಿವಾರ್ಯತೆ ಹೇಗಿದೆ? ಎಲ್ಲವನ್ನೂ ಕೊನೆಯ ಬಾರಿಗೆ ವಿವರಿಸಿ ಹೇಳುತ್ತಾನೆ

ಗಾಂಧಿ. ಇಷ್ಟರಲ್ಲಿ ಸಾಯಂಕಾಲದ ಪ್ರಾರ್ಥನೆಗೆ ಸ್ವಲ್ಪ ತಡವಾಗಿಹೋಯಿತು. ಈ ಮಧ್ಯ ಅನೇಕ ಬಾರಿ ಗಾಂಧಿಯನ್ನು ಪ್ರಾರ್ಥನೆಗೆ ಸರಿಯಾದ ಸಮಯಕ್ಕೆ ಕರೆದುಕೊಂಡು ಹೋಗುವ ಪ್ರಯತ್ನಗಳನ್ನು ಮನು ಮಾಡಿದ್ದಳು. ಆದರೆ ಗಾಂಧಿಗೆ ಪಟೇಲರ ಮುಂದೆ ಇಂದು ಎಷ್ಟು ಮತನಾಡಿದರೂ ಅತನಿಗೆ ಸಮಾಧಾನವಿಲ್ಲ. ಕೊನೆಗೆ ಹೇಳುತ್ತಾನೆ, "Now I must tear myself away!"

ಈಗ ೫ ಗಂಟೆಯ ಸಮಯ ದಾಟುತ್ತಿದೆ. ಅಭಾ ಮತ್ತು ಮನುರ ಹೆಗಲುಗಳ ಮೇಲೆ ಅಂತಿಮವಾಗಿ ಭಾರವಾಗಿ ನಗುತ್ತಾ, ನಗಿಸುತ್ತಾ ಬಿರ್ಲಾ ಹೌಸ್‌ನ ತನ್ನ ನಿತ್ಯದ ಪ್ರಾರ್ಥನಾ ಸ್ಥಳದೆಡೆಗೆ ಗಾಂಧಿ ಹೆಜ್ಜೆಗಳನ್ನು ಹಾಕುತ್ತಾನೆ. ಕೇಳುತ್ತಾಳೆ ಅಭಾ, 'ಸೊಂಟದಲ್ಲಿರುವ ಗಡಿಯಾರವನ್ನು ಗಮನಿಸುವುದೇ ಇಲ್ಲಾ ಎನ್ನುವುದಾದರೆ ಅದನ್ನು ಯಾತಕ್ಕಾಗಿ ನೇತು ಹಾಕಿಕೊಳ್ಳಬೇಕು ಬಾಪು?' ಗಾಂಧಿ ಮುಗಳ್ನಕ್ಕು ಮೊದಲು ತಪ್ಪೊಪ್ಪಿಕೊಂಡು ಮತ್ತೆ ಮರು ಪ್ರಶ್ನೆ ಹಾಕುತ್ತಾನೆ. ಅದನ್ನು ಮೀರಿದ ನಿಮ್ಮಂತಹ ಇಬ್ಬರು ಸಮಯಪರಿಪಾಲಕರು ನನ್ನೊಂದಿಗಿರುವಾಗ ನಾನು ಅದನ್ನೇಕೆ ನೋಡಿಕೊಳ್ಳಬೇಕು? ಇಂದು ೧೦ ನಿಮಿಷ ತಡವಾಗಿದ್ದರೆ ಅದಕ್ಕೆ ಕಾರಣ ನೀವೆ. ರೋಗಿಯ ವೇಳಾಪಟ್ಟಿಯನ್ನು, ಕ್ರಿಯಾವಿಧಿಯನ್ನು ಕರಾರುವಕ್ಕಾಗಿ ಇಡಬೇಕಾದುದು ನರ್ಸ್ ಆದವಳ ಕೆಲಸವಲ್ಲವೇ? ಒಂದು ವೇಳೆ ರೋಗಿ ದೇವರೊಂದಿಗೆ ಮಾತನಾಡುತ್ತಾ ಕುಳಿತಿದ್ದರೂ ಕೂಡಾ ಆಕೆ ತನ್ನ ಸಮಯ ಪರಿಪಾಲನೆಯನ್ನು ಮರೆಯಬಾರದು. ಗಾಂಧಿ ಇಷ್ಟು ಹೇಳುತ್ತಾ ಸ್ವಲ್ಪ ಅವಸರದಿಂದ ವೇದಿಕೆಯೆಡೆಗೆ ಬಂದ. ಮುಖದ ತುಂಬಾ ನಗು, ಮಧ್ಯ ಮಧ್ಯ ಅಲ್ಲಲ್ಲಿ ನಿಂತು ಎರಡೂ ಕೈಗಳನ್ನೆತ್ತಿ ನಮಸ್ಕಾರ. ಪ್ರತಿಯಾಗಿ ಜನರಿಂದಲೂ ಅಲ್ಲಲ್ಲಿ ನಮಸ್ಕಾರ, ಮುಗುಳ್ನಗೆ, ಅಭಿನಂದನೆ ಹಾಗೂ ಅಂತಿಮವಾಗಿ, ಹೊರಟವರ ಆರೋಗ್ಯ ವಿಚಾರ, ಉಭಯಕುಶಲೋಪರಿ ಏನೆಲ್ಲ.

ಇಂದಿನ ಪ್ರಾರ್ಥನೆಗೆ ಕನಿಷ್ಠ ಒಂದು ಸಾವಿರ ಜನ ಸೇರಿದ್ದಾರೆ, ಇಷ್ಟರಲ್ಲಿ ಜನರನ್ನು ಸೀಳಿಕೊಂಡು ಭಯಾನಕ ಅವಸರದಲ್ಲಿರುವ ಮತ್ತು ಬುಶ್‌ಶರ್ಟ್‌ನಲ್ಲಿರುವ ಒಬ್ಬ ೩೭ ವರ್ಷಗಳ ಯುವಕ ಗಾಂಧಿಯ ಮುಂದೆ ನಿಲ್ಲುತ್ತಾನೆ. ಎಲ್ಲರೂ ಗಲಿಬಿಲಿಗೊಳ್ಳುವ ಮುಂಚೆಯೇ ಆತ ಗಾಂಧಿಯನ್ನು ನಮಸ್ಕರಿಸುವುದಕ್ಕೆ ಮನು ಅಡ್ಡಿಯೊಡ್ಡುತ್ತಲೇ, ಆಕೆಯನ್ನು ದೂರ ತಳ್ಳಿ, ಪ್ಯಾಂಟಿನಿಂದ ಬ್ಯಾರೆಟ್ ಪಿಸ್ತೂಲನ್ನು (ನಂ. ೬೦೬೮೨೪) ಹೊರತೆಗೆದು ಮೂರು ಸುತ್ತು ಗುಂಡು ಹಾರಿಸುತ್ತಾನೆ. ಎರಡು ಗಾಂಧಿಯ ಎದೆ ಹೊಕ್ಕರೆ ಒಂದು ಆತನ ಕಿಬ್ಬೊಟ್ಟೆಯನ್ನು ಸೇರುತ್ತದೆ. ಮೊದಲೇ ಉಪವಾಸದಿಂದ ಕೃಶಗೊಂಡಿದ್ದ ಗಾಂಧಿಯ ದೇಹ 'ಆsssssಹ್' ಎನ್ನುವ ಕೊನೆಯ ಶಬ್ದದೊಂದಿಗೆ ನೆಲಕ್ಕುರುಳುತ್ತದೆ. ಆದರೆ

'ಮಹಾತ್ಮ' ಗಾಂಧಿಯವರು ಸಾಯುವಾಗ 'ಹೇ ರಾಮ್' ಎಂದು ಕೈ ಮುಗಿದೇ ತೀರಿಕೊಂಡರೆಂದು ಕೆಲವು ಇತಿಹಾಸಕಾರರಿಂದ ದಾಖಲಾಗುತ್ತದೆ. ಕೊಲೆಯ ಆರೋಪವನ್ನು ಎದುರಿಸುತ್ತ ಕೋರ್ಟಿನ ಕಟಕಟೆಯಲ್ಲಿ ನಿಂತ ಗೋಡ್ಸೆ "ಈ ಕೃತ್ಯ ನನ್ನಿಂದ ಆಗದಿದ್ದರೆ ಚೆನ್ನಾಗಿತ್ತು. ಆದರೆ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ನನ್ನ ಮತ್ತು ಗಾಂಧಿ ನಡುವೆ ಯಾವುದೇ ವೈರತ್ವವಿಲ್ಲ. ನಾನೂ ಗಾಂಧಿ ಮತ್ತು ಸಾವರ್ಕರರ ಆರಾಧಕನೆ. ಆದರೆ ದೇಶದ ಮತೋನ್ಮಾದ ಮಾರ್ಗವೊಂದರ ಪರವಾಗಿ ಗಾಂಧಿ ತೋರಿಸಿದ ಪಕ್ಷಪಾತಕ್ಕಾಗಿ ಅವರ ಹತ್ಯ ಮಾಡಿದ್ದೇನೆ. ಇದು ನನ್ನ ದೇಶದ ಬಗೆಗೆ ನನಗಿರುವ ಹಿತಾಸಕ್ತಿ" ಎಂದು ಹೇಳಿಕೆ ನೀಡುತ್ತಾರೆ?

೭೯ ವರ್ಷ ಭಾರತದ ಉದ್ದಗಲಕ್ಕೂ ಅಲೆದಾಡಿದ ಬಡಕಲು ದೇಹ, ೫ ಗಂಟೆ ೧೭ ನಿಮಿಷಕ್ಕೆ ಮತ್ತೆ ಮರಳುತ್ತದೆ ಮಣ್ಣಿಗೆ. ಆದರೆ ಇಂತಹ ಒಬ್ಬ ವಿಚಿತ್ರ ಮನುಷ್ಯ ಇದ್ದ ಎಂದು ನಂಬಲಾಗುತ್ತಿಲ್ಲ ನಮ್ಮ ಕಣ್ಣಿಗೆ.

ಎಲ್ಲಿ ಪ್ರಾರಂಭವೋ, ಅಲ್ಲಿಯೇ ಅಂತ್ಯ. ಈ ಕ್ಷಣಕ್ಕೆ ಗಾಂಧಿ ಮುಗಿದ ಅಧ್ಯಾಯ, ಈ ಕ್ಷಣದಿಂದಲೇ, ಸಾವಿನ ಆತನ ಕೊನೆಯ ಶಬ್ದದಿಂದಲೇ ಮತ್ತೆ ಆರಂಭವಾಗುತ್ತದೆ ಅಂತೆ-ಕಂತೆ, ಊಹಾಪೋಹ ಮತ್ತೆ ಈ ಮುದುಕನ ಚರ್ಚೆಯ ಹೊಸ ಅಧ್ಯಾಯ. ಅದು ಗಾಂಧಿ : ಮುಗಿಯದ ಅಧ್ಯಾಯ.

ದೃಶ್ಯ – ೧

ಸುತ್ತಲೂ ಕತ್ತಲೆ. ದೀಪ ಉರಿಯುತ್ತದೆ. ಗಾಂಧಿ ಪತ್ರ ಬರೆಯುವುದರಲ್ಲಿ ಮಗ್ನನಾಗಿದ್ದಾನೆ. ಹೊರಗಡೆ ಗಲಾಟೆ. ಪುಸ್ತಕ ಹಿಡಿದುಕೊಂಡು ಕನ್ನಡಕ ಸರಿಪಡಿಸಿಕೊಳ್ಳುತ್ತ ಬಾಬಾ ಸಾಹೇಬ ಕೂಗುತ್ತಿದ್ದಾರೆ.

ಅಂಬೇಡ್ಕರ್ : ನಾನು ಬ್ರಹ್ಮ, ವಿಷ್ಣು, ಮಹೇಶ್ವರರುಗಳನ್ನು ದೇವರೆಂದು ಅಂಗೀಕರಿಸುವುದಿಲ್ಲ, ಅವರನ್ನು ನಾನು ಪೂಜಿಸುವುದಿಲ್ಲ.

ನಾನು ರಾಮ ಮತ್ತು ಕೃಷ್ಣರನ್ನು ದೇವರೆಂದು ಅಂಗೀಕರಿಸುವುದಿಲ್ಲ. ಅವರನ್ನು ನಾನು ಪೂಜಿಸುವುದಿಲ್ಲ.

ನಾನು ಗೌರಿ ಮತ್ತು ಗಣಪತಿಯರನ್ನು ದೇವರೆಂದು ಅಂಗೀಕರಿಸುವುದಿಲ್ಲ. ಅವರನ್ನೂ ನಾನು ಪೂಜಿಸುವುದಿಲ್ಲ.

ನಾನು ದೇವರುಗಳ ಅವತಾರಗಳ ವಿಚಾರ ಸರಣಿಯನ್ನು ನಂಬುವುದಿಲ್ಲ.

ನಾನು ಈಗಿನಿಂದಲೇ ನನ್ನ ಹಳೆಯ ಹಿಂದೂ ಮತಧರ್ಮವನ್ನು ನಿರಾಕರಿಸುತ್ತೇನೆ. ಇದು ಮನುಷ್ಯರ ಮಧ್ಯೆ ಭೇದ ಮಾಡುತ್ತದೆ.

ಗಾಂಧಿ : ಈ ಏರುದನಿ ಅವರ ಆಕ್ರೋಶಕ್ಕೆ ಮಾತ್ರ ಸಾಧ್ಯ. ಬನ್ನಿ, ದಯವಿಟ್ಟು ಒಳಗೆ ಬನ್ನಿ ಬಾಬಾಸಾಹೇಬ್.

ಅಂಬೇಡ್ಕರ್ : ಹೆಜ್ಜೆ–ಹೆಜ್ಜೆಗೂ ನಾನು ಸನಾತನ ಹಿಂದೂ ಎಂದು ಹೇಳಿಕೊಳ್ಳುವ ನಿಮ್ಮ ಎಲ್ಲ ದೇವತೆಗಳ ಬಗೆಗೆ ನನ್ನ ತಿರಸ್ಕಾರದ ನಂತರವೂ ನಾನು ಒಳಗೆ ಬರಬಹುದೇ? ಬರಬಹುದೇ ಬಾಪು?

ಗಾಂಧಿ : (ಮುಗುಳ್ನಗೆ) ಎಂತಹ ಬದುಕಿಗೂ ಒಂದು ನಂಬಿಕೆ ಇರಲೇಬೇಕಲ್ಲಾ ಬಾಬಾ ಸಾಹೇಬ್. ಆ ನಂಬಿಕೆಯ ಸೂತ್ರವನ್ನು (ಸಮೀಪ ಹೋಗಿ, ಹೆಗಲ ಮೇಲೆ ಕೈ ಹಾಕಿ) ನೀವೂ ಪಾಲಿಸುತ್ತಿದ್ದೀರಿ.



ಅಂಬೇಡ್ಕರ್ : (ಸಿಡಿಮಿಡಿಯಿಂದ ದೂರ ಸರಿಯುತ್ತ) ಖಂಡಿತ. ಆ ನಂಬಿಕೆಯನ್ನು ನಂದಿಸಿಕೊಳ್ಳದೆ ಬಂದಿದ್ದಕ್ಕೆ ಅಲ್ಲವೇ ನನಗೆ ಈ ಹೋರಾಟ ಸಾಧ್ಯವಾಗಿದ್ದು? ನಾನು ಬುದ್ಧನನ್ನು ನಂಬುತ್ತೇನೆ. ಬೌದ್ಧ ಮತಕ್ಕೆ ಹಾನಿಯಾಗುವಂತಹ ಯಾವುದನ್ನೂ ನಾನು ಮಾಡುವುದಿಲ್ಲ. ನಾನು ನಿಮ್ಮ ಬ್ರಾಹ್ಮಣರ ಯಾವ ಮತಧರ್ಮ, ಸಂಸ್ಕಾರವನ್ನು ಆಚರಿಸುವುದಿಲ್ಲ. ಬೌದ್ಧ ಮತವೇ ಸದ್ಧರ್ಮ. ನಾನು ಅದನ್ನು ಸಂಪೂರ್ಣವಾಗಿ ನಂಬಿಕೊಂಡಿದ್ದೇನೆ. ಹಿಂದೂಗಳ ಕೈಯಲ್ಲಿ ಸತ್ತುಹೋಗಿದ್ದ ನಾನು ಅದರಿಂದ ಪುನರ್ಜನ್ಮ ಪಡೆಯುತ್ತಿದ್ದೇನೆ.

ಗಾಂಧಿ : ಚಿನ್ನದಂತಹ ಮಾತಾಡಿದಿರಿ ಬಾಬಾಸಾಹೇಬ, ನಾನು ಸನಾತನ ಹಿಂದೂ ಸತ್ಯ, ಹಾಗೆಯೇ, ಆ ಅರ್ಥದಲ್ಲಿಯೇ ನಾನು ಮುಸ್ಲಿಂ, ಪಾರಸಿ, ಸಿಖ್, (ಮುಗುಳ್ನಗುತ್ತಾ) ಸಂಶಯಬೇಡ, ಬೌದ್ಧನು ಆಗಿದ್ದೇನೆ. ನಂಬುತ್ತೀರಾ?

ಅಂಬೇಡ್ಕರ್ : ಆದರೆ, (ಸಿಟ್ಟಿನಿಂದ) ಬುದ್ಧನು ವಿಷ್ಣುವಿನ ಅವತಾರವೆಂದು ನಂಬುವುದಿಲ್ಲ. ಆತ ಮನುಷ್ಯ, ಯಾರ ಅವತಾರವೂ ಅಲ್ಲ. ನನ್ನ ಪಾಲಿಗೆ ಬುದ್ಧನ ಎಂಟು ತತ್ವಗಳೇ ಪರಮ ಸತ್ಯ.

ಗಾಂಧಿ : (ಪ್ರಶ್ನಾರ್ಥಕವಾಗಿ) ನನ್ನ ಧರ್ಮ, ನಿಮ್ಮ ಧರ್ಮ (ಒಂದು ನಿಟ್ಟುಸಿರು) ಹೋಗಲಿ ಬಿಡಿ, ವ್ಯಕ್ತಿಯಾಗಿ ಯಾವುದನ್ನು ಧರ್ಮ ಎಂದುಕೊಂಡಿದ್ದೀರಿ ಬಾಬಾಸಾಹೇಬ್?

ಅಂಬೇಡ್ಕರ್ : ನಾನು ಕಳ್ಳತನ ಮಾಡುವುದಿಲ್ಲ

ನಾನು ಸುಳ್ಳು ಹೇಳುವುದಿಲ್ಲ

ನಾನು ವ್ಯಭಿಚಾರ ಮಾಡುವುದಿಲ್ಲ

ನಾನು ಮದ್ಯಪಾನ ಮಾಡುವುದಿಲ್ಲ

ನಾನು ಎಲ್ಲ ಜೀವಿಗಳ ಬಗೆಗೆ ಅನುಕಂಪ ಉಳ್ಳವನಾಗಿರುತ್ತೇನೆ.

(ಹಿನ್ನೆಲೆಯಲ್ಲಿ ಕಳಬೇಡ, ಕೊಲಬೇಡ ಪದ್ಯ ಸಂಯೋಜನ)

ಗಾಂಧಿ : ಏಳು ದಶಕಗಳ ಈ ಬಾಳಿನಲ್ಲಿ ಈ ಮೂರು ಮಂಗಗಳನ್ನು ಕೂಡಿಸಿಕೊಂಡು ನಾನು ಸಾರುತ್ತಿರುವುದು ಇದನ್ನೇ ಅಲ್ಲವೆ? (ಬಾಬಾಸಾಹೇಬರ ಸಮೀಪ ಹೋಗಿ ಅವರ ಕೈಗಳನ್ನು ತನ್ನ ಕೈಯಲ್ಲಿ ಹಿಡಿದು) ಇಲ್ಲಿ, ನಾವೆಷ್ಟೊಂದು ಹತ್ತಿರವಲ್ಲವೇ? ಇಲ್ಲಿ ನಾವಿಬ್ಬರೇ ಬಾಬಾಸಾಹೇಬ್.

ಅಂಬೇಡ್ಕರ್ : ಬಹುತೇಕ.

ಗಾಂಧಿ : ಹಾಗಿದ್ದರೆ, ನಾವು ವಿರುದ್ಧಮುಖಿಯೆಲ್ಲಿ ಬಾಬಾಸಾಹೇಬ್? ನಮ್ಮ ಕಾಳಜಿಗಳು ಒಂದೇ ಅಲ್ಲವೇ?

ಅಂಬೇಡ್ಕರ್ : ಇಲ್ಲ ಬಾಪು, ಸ್ತ್ರೀ ಅಸ್ತಿತ್ವವನ್ನು ನಿರಾಕರಿಸಿ ಆತ್ಮರತಿಯ ಸಂಕೇತವಾದ ಶ್ರೀರಾಮನನ್ನು ಪೂಜಿಸುವ ನಿಮಗೂ, ನನಗೂ ತುಂಬ ವ್ಯತ್ಯಾಸವಿದೆ.

ಗಾಂಧಿ : ಗೊತ್ತಾಯಿತು ಬಾಬಾಸಾಹೇಬ್, ನನ್ನಲ್ಲಿ ಆತ್ಮರತಿಯ ಆಶೆ ಶುರುವಾಗಿದೆ ಎನ್ನುವುದನ್ನು ನೀವು ಸೂಚ್ಯವಾಗಿ ಹೇಳುತ್ತಿದ್ದೀರಿ. ನನ್ನ ಸುತ್ತಲಿನ ನೆಹರು, ಪಟೇಲ್, ಕೃಪಲಾನಿ, ಕೌರ್‌ರ ಭಜನೆಯನ್ನು ನೋಡಿ 'ಗಾಂಧಿ' ಎಂಬ ಈ ವ್ಯಕ್ತಿಪೂಜೆಗೆ ನಾನೇ ಆಸ್ಪದವಿಟ್ಟಿದ್ದೇನೆ ಎನ್ನುವುದು ನಿಮ್ಮ ಗುಮಾನಿಯಲ್ಲವೇ?

ಅಂಬೇಡ್ಕರ್ : ಅದು ನಿಮ್ಮ ತಿಳುವಳಿಕೆಗೆ ಬಿಟ್ಟಿದ್ದು ಮಿ. ಗಾಂಧಿ. ಜಗತ್ತಿನ ಎಲ್ಲ ಧರ್ಮಗಳ ಮತಿತಾರ್ಥವನ್ನು ಹೇಳುವ ನಿಮಗೆ ಒಬ್ಬ ಸಾಮಾನ್ಯ ಅಂಬೇಡ್ಕರನ ಈ ವಾಕ್ಯ ಅರ್ಥವಾಗಲಿಲ್ಲ ಎನ್ನುವುದಾದರೆ ಅದನ್ನು ಇತಿಹಾಸದ ದುರಂತವೆನ್ನುತ್ತೇನೆ.

ಗಾಂಧಿ : ಬಾಬಾಸಾಹೇಬ್, ಮೀಸಲಾತಿಯ ಕುರಿತು ನಾನು ಉಪವಾಸ ಕುಳಿತಾಗ, ಹಿಡಿ ಶಾಪ ಹಾಕುತ್ತಲೇ ನೀವು ನನಗೆ ಸೋತೆ ಅಂದುಕೊಂಡಿರಲ್ಲ. ನೀವು ಬೌದ್ಧನಾಗಿರದೇ ಹೋದರೆ ನನ್ನನ್ನು ಕೊಚ್ಚಿ ಹಾಕುತ್ತಿದ್ದಿರೇನೋ? (ಸಮೀಪ ಬಂದು, ಅಂಬೇಡ್ಕರನ ಮುಖವನ್ನು ಕೈಯಲ್ಲಿ ಹಿಡಿದು) ಭಾರತ ಭವಿಷ್ಯದಲ್ಲಿ ಬದುಕುಳಿಯುವುದು ನಿಮ್ಮಿಂದ ಮಾತ್ರ, ನಿಮ್ಮ ಚಿಂತನೆಗಳಿಂದ ಮಾತ್ರ. ನನ್ನ ಒತ್ತಡಗಳು ನಿಮಗೆ ಗೊತ್ತಾಗುವುದಿಲ್ಲ ಡಾಕ್ಟ್ರೆ.

ಅಂಬೇಡ್ಕರ್ : ಅದ್ಯಾಕೆ ಹಾಗಂತಿರಾ ಮಹಾತ್ಮಾಜೀ, ರಾಷ್ಟ್ರಪ್ರೇಮ, ಜ್ಞಾನ, ಈ ದೇಶಕ್ಕೊಂದು ಸಂವಿಧಾನ ಈ ವಿಚಾರಗಳಲ್ಲಿ ನೀವು ನನ್ನನ್ನು ನಂಬಿದಷ್ಟು ಇನ್ಯಾರನ್ನೂ ನಂಬಲಿಲ್ಲ. ಏಷ್ಯಾದ ಹಲವು ರಾಷ್ಟ್ರಗಳಿಗೆ ಸಂವಿಧಾನಗಳನ್ನು ರಚಿಸಿಕೊಟ್ಟಿದ್ದ ಐವರ್ ಜೆನ್ನಿಂಗ್ಸ್‌ನನ್ನು ನಿಮ್ಮ ಮಾನಸಪುತ್ರ ನೆಹರು ಭಾರತ ಸಂವಿಧಾನ ರಚನಾ ಕಾರ್ಯಕ್ಕೆ ಸೂಚಿಸುವಾಗ ಅದನ್ನು ಸಾರಾಸಗಟಾಗಿ ಧಿಕ್ಕರಿಸಿ ನನ್ನ ಹೆಸರನ್ನು ಸೂಚಿಸಿದವರು ನೀವೇ ಅಲ್ಲವೇ ಮಹಾತ್ಮಾಜೀ? (ಈಗ ಅಂಬೇಡ್ಕರ್‌ರ ಕೈಗಳು ಗಾಂಧಿಯ ಕೈಯಲ್ಲಿವೆ)

ಗಾಂಧಿ : ಇದೂ ನನ್ನ ಹಿಂದೂ ಪರವಾದ, ಆತ್ಮರತಿಯ, ವ್ಯಕ್ತಿಪೂಜೆಯ ಹಿನ್ನೆಲೆಯಿಂದಲೇ ಹೊರಟಿದ್ದು ಎನ್ನುತ್ತೀರಾ ಡಾಕ್ಟರ್? ನನ್ನ ಪ್ರಾಂಜಲತೆಗೆ ಯಾವ ಅರ್ಥವಿದೆ?

ಅಂಬೇಡ್ಕರ್ : ಅದನ್ನು ನಿಮ್ಮ ಶ್ರೀರಾಮನನ್ನು ಕೇಳಿ ಮಿ.ಮಹಾತ್ಮ (ಅಂಬೇಡ್ಕರ್ ಸಿಡಿಮಿಡಿ) ನಾನು ಹೇಳುವುದಿಷ್ಟೇ, ಎಲ್ಲ ಮಹಾತ್ಮರನ್ನೂ ಮೀರಿ ರಾಷ್ಟ್ರ ದೊಡ್ಡದು, ಭಾರತದಲ್ಲಿ ಭಕ್ತಿ, ಧರ್ಮನಿಷ್ಠೆ ಅಥವಾ ವ್ಯಕ್ತಿಪೂಜೆಗಳು ಆಡಿದಷ್ಟು ಮಹತ್ವದ ಪಾತ್ರ ಇನ್ಯಾವ ದೇಶದ ರಾಜಕೀಯ ರಂಗದಲ್ಲೂ ಆಡಿಲ್ಲ. ಮಿ. ಮಹಾತ್ಮ ನೆನಪಿರಲಿ, ಧರ್ಮಶ್ರದ್ಧೆಯಲ್ಲಿ ಭಕ್ತಿಯೂ ಆತ್ಮದ ಮುಕ್ತಿಗೆ ದಾರಿಯಾಗಿರಬಹುದು, ಆದರೆ ರಾಜಕೀಯದಲ್ಲಿ ಭಕ್ತಿ ಅಥವಾ ವ್ಯಕ್ತಿಪೂಜೆ ಜನರನ್ನು ಹೀನಾವಸ್ಥೆಗಿಳಿಸಿ ಕ್ರಮೇಣ ನಿರಂಕುಶಾಧಿಕಾರಕ್ಕೆ ಎಳೆಯುತ್ತದೆ.

ಗಾಂಧಿ : ನಾನು ಇದರಿಂದ ಭಿನ್ನವಾಗಿಲ್ಲ ಡಾಕ್ಟ್ರೆ, ಈ ದೇಶದಲ್ಲಿ 'ಗಾಂಧಿವಾದ' ಎನ್ನುವುದೊಂದಿಲ್ಲ. ಅದು ಇರುವುದಾದರೆ ಅದರ ಮೊದಲ ಮತ್ತು ಕೊನೆಯ ಅನುಯಾಯಿ ನಾನೊಬ್ಬನೇ. ಆ 'ಸನಾತನ ಹಿಂದೂ' ಎನ್ನುವ ಪದವನ್ನು ಹೊರಗಿಟ್ಟರೆ ನನ್ನೊಂದಿಗೆ ಬರುವವರು ನೀವೊಬ್ಬರೇ.

ಅಂಬೇಡ್ಕರ್ : ಆದರೆ ಶ್ರೀರಾಮ ಎನ್ನುವ ಪದದ ಬೆನ್ನೇರಿ ರಾಷ್ಟ್ರ ರಾಜಕಾರಣವನ್ನು ನಿರ್ಧರಿಸಬಹುದು ಎಂದು ಹೇಳಿದ್ದ ಮಿ. ಮಹಾತ್ಮ ನನ್ನ ವಿರುದ್ಧ ಏನನ್ನು ಮಾಡಲಿಲ್ಲ, ಏನನ್ನು ಮಾಡಿದರು? ಎಂದು ನೆನೆದಾಗ ನನಗೆ ನನಗೆ ನೋವಾಗುತ್ತದೆ. (ಈಗ ಗಾಂಧಿಯ ಪದತಲದಲ್ಲಿ ಅಂಬೇಡ್ಕರ್ ಕುಳಿತಿದ್ದಾರೆ) ಪಾರ್ಸಿಗಳಿಗೆ ಮೀಸಲಾಗಿದ್ದ ಹೋಟೆಲೊಂದರಿಂದ ನಾನು ಹೊರಹಾಕಲ್ಪಟ್ಟಾಗ ಬರಲಾರದ ಮಹಾತ್ಮ, ಕೆರೆಯಲ್ಲಿ ನೀರು ಕುಡಿದೆ ಎನ್ನುವ ಕಾರಣಕ್ಕೇ ಇಡೀ ಕೊಳದ ನೀರನ್ನು ಶುದ್ಧೀಕರಿಸಬೇಕು ಎನ್ನುವ ಆದೇಶಕ್ಕೆ ಸಾಕ್ಷಿಯಾಗುವ ಮಹಾತ್ಮ, ನನ್ನ ಜನಾಂಗವನ್ನು, ನನ್ನ ತಲ್ಲಣ, ಆತಂಕ, ಆಕ್ರೋಶಗಳನ್ನು ಅರ್ಥೈಸಿಕೊಳ್ಳಲಾರ.

ಗಾಂಧಿ : ಹಾಗಂದುಕೊಳ್ಳಬೇಡಿ ಡಾಕ್ಟರ್. ಮೀಸಲಾತಿಯ ನಿಮ್ಮ ಆಲೋಚನೆಗೆ ವಿರುದ್ಧವಾಗಿ ನಾನು ಉಪವಾಸ ಕುಳಿತಿದ್ದು ಸತ್ಯ. ಆದರೆ ಗೊತ್ತಿರಲಿ, ಆ ಮೂಲಕ ಈ ದೇಶದ ಚರಿತ್ರೆಯಲ್ಲಿ ಒಬ್ಬ

ಅಂಬೇಡ್ಕರ್‌ನನ್ನಲ್ಲ, ಸಾವಿರ-ಸಾವಿರ ಅಂಬೇಡ್ಕರ್‌ರನ್ನು ರಕ್ಷಿಸಿಟ್ಟುಕೊಂಡಿದ್ದೇನೆ. ನನಗೆ ಗೊತ್ತು, ನೀವು ಕಾನೂನು ತಜ್ಞರು. ನನ್ನ ವಾಕ್ಯಕ್ಕೂ ಸಾವಿರ ಅರ್ಥ ಕಲ್ಪಿಸಬಲ್ಲಿರಿ. ಅಂದು ದೈಹಿಕವಾಗಿ ದಲಿತರನ್ನು ರಕ್ಷಿಸಿದ್ದೇನೆ, ಇಂದು ವೈಚಾರಿಕವಾಗಿ ಪ್ರಜಾಪ್ರಭುತ್ವವನ್ನು ರಕ್ಷಿಸಿದ್ದೇನೆ ಡಾಕ್ಟರ್. ಆದರೂ ನಾನು ನಿಮ್ಮ ವಿರೋಧಿಯಂತೆ.....

ಅಂಬೇಡ್ಕರ್ : ಹೌದು ಮಹಾತ್ಮಾ, ಅದು ಈ ರಾಷ್ಟ್ರದ ಪಾಲಿಗೆ ಸಾವಿರ ವರ್ಷವೂ ಸತ್ಯ. ನಾನು ನಿಮ್ಮ ವಿರೋಧಿಯಾಗಿ ನಿಲ್ಲುವುದು ನನಗೊಂದು ನಿರ್ಧಾರ ಬೇಕಾಗಿರುವುದರಿಂದ. ಗೊತ್ತಿರಲಿ, ಆ ನಿರ್ಧಾರ ಆದರ್ಶಪ್ರಾಯವಾಗಿರಬೇಕೆಂದು ಕಾಯಲು ನಾನು ಸಿದ್ಧನಿಲ್ಲ. ಪ್ರತಿ ಹಂತದಲ್ಲೂ ನಿಮ್ಮ ಇಚ್ಛೆ, ಒಪ್ಪಿಗೆ, ಗೌರವ ಹಾಗೂ ದೊಡ್ಡಸ್ತಿಕೆಗಳ ಮೇಲೆ ಅವಲಂಬಿತವಾಗಿರುವ ನಿರ್ಧಾರವನ್ನು ನಾನು ಒಪ್ಪುವುದಿಲ್ಲ ಮಹಾತ್ಮ. ಸುತ್ತಲೂ ಠಕ್ಕರನ್ನೇ ಸಾಕಿಕೊಂಡಿರುವ ನಿಮಗೆ ಈ ಜನ್ಮದಲ್ಲಿ ನನ್ನ ಸಾತ್ವಿಕ ಸಿಟ್ಟಿನ ಅರ್ಥ ಗೊತ್ತಾಗುವುದಿಲ್ಲ.

ಗಾಂಧಿ : ಡಾಕ್ಟರ್‌ಜೀ, (ಹತಾಶ ನಗೆಯೊಂದಿಗೆ) ನೀವು ನನಗೆ ಅರ್ಥವಾಗಲಿಲ್ಲ ಎನ್ನುವ ಮಾತು ನನ್ನ ಅರಿವಿನ ದಿನದಿಂದ ಇಂದಿನವರೆಗೂ 'ಹರಿಜನ್ ಕೇ ಲಿಯೆ' ಎಂದು ಪ್ರಾಂಜಲವಾಗಿ ಕೈಯೊಡ್ಡಿ ಹೊರಟ ನನ್ನ ಜೀವಮಾನದ ಹೋರಾಟವನ್ನು ಧಿಕ್ಕರಿಸಿದಂತೆ. ಈ ಬಡಪಾಯಿಯ ಮೇಲೆ ಇಷ್ಟೊಂದು ಅಪನಂಬಿಕೆಯ ಹೊರೆ ಹಾಕಬೇಡಿ ಡಾಕ್ಟರ್.

ಅಂಬೇಡ್ಕರ್ : ಪ್ರಪಂಚದ ಭಾರ ಹೊರುವ ನಿಮಗೆ ನಾನು ಭಾರವಾಗಲು ಸಾಧ್ಯವಿಲ್ಲ. ನನಗಾಗಿ ಈ ದೇಶದಲ್ಲಿ ಕೇಳುವ ಇನ್ಯಾವ ಕಿವಿಗಳೂ ಉಳಿದುಕೊಂಡಿಲ್ಲ. ಪ್ರತಿ ಬಾರಿಯೂ ನನ್ನದು ದುಡುಕಿನ ನಿರ್ಧಾರ ಎಂದು ನಿಮ್ಮ ಜನ ಜರಿದರಲ್ಲ, ನನ್ನ ಯಾವ ಪ್ರಶ್ನೆಗೆ ಉತ್ತರ ಸಿಕ್ಕಿದೆ ಮಹಾತ್ಮ?

ಗಾಂಧಿ : (ವಜ್ರಾಸನದಲ್ಲಿ ಕುಳಿತುಕೊಂಡು, ಕಣ್ಮುಚ್ಚಿ ಧ್ಯಾನಸ್ಥನಾಗುತ್ತಾನೆ)

ಅಂಬೇಡ್ಕರ್ : ಗುಲಾಮರಿಗಿಂತ ಕೀಳಾಗಿ, ಪಶುಗಳಿಗಿಂತ ಕಡೆಯಾಗಿ ನಮ್ಮ ಬದುಕು ಸವೆದಿದೆ ಮಹಾತ್ಮ. ನಮ್ಮ ಭರತ ಖಂಡದ ಐದರಲ್ಲೊಂದು ಭಾಗದಷ್ಟಿರುವ ನಮಗೆ ಹೇಳಿಕೊಳ್ಳಲು ಎದೆ ಭಾರವಾಗಿ ಕಣ್ಣೀರು ಸುರಿಸಲು ಈ ದೇಶದಲ್ಲಿ ಒಬ್ಬ ಮನುಷ್ಯನೂ ಸಿಗಲಿಲ್ಲ ಎನ್ನುವುದು

ಯಾವ ಮಾನವೀಯತೆಗೆ ಸಾಕ್ಷಿ? ಸರಕಾರಗಳು ಬಂದವು, ಹೋದವು, ಅಂದಿಗೂ–ಇಂದಿಗೂ ಯಾವ ವ್ಯತ್ಯಾಸವಿದೆ ನಮ್ಮ ಜೀವನದಲ್ಲಿ? ಬ್ರಿಟಿಷರು ಬರುವ ಮುನ್ನ ಬಾವಿಗಳಲ್ಲಿ ನಮ್ಮ ಜನ ನೀರು ಸೇದುವಂತಿರಲಿಲ್ಲ, ಬ್ರಿಟಿಷ್ ಸರ್ಕಾರ ನನಗೆ ಆ ಹಕ್ಕು ಗಳಿಸಿಕೊಟ್ಟಿತೇನು? ಅವರು ಬರುವ ಮುನ್ನ ಮುಕ್ತವಾಗಿ ದೇವಾಲಯಗಳಿಗೆ ಪ್ರವೇಶಿಸುವಂತಿರಲಿಲ್ಲ, ಆ ಸರ್ಕಾರ ಅದನ್ನೇನಾದರು ನಮಗೆ ದೊರಕಿಸಿಕೊಟ್ಟಿತೇನು? ನೂರೈವತ್ತು ವರ್ಷಗಳಿಂದ ರಾಜ್ಯಭಾರ ಮಾಡಿದ ಅವರೂ ನಮ್ಮ ಕಣ್ಣೀರೊರೆಸಿಲ್ಲ. ನಮ್ಮನ್ನು ಜೀತ, ದಾಸ್ಯ, ಹಸಿವು, ನಗ್ನತೆ, ರಿಕ್ತತೆ, ನೋವುಗಳಿಂದ ಮುಕ್ತರಾಗಿಸಲಿಲ್ಲ. ಇನ್ನು ನಿಮ್ಮಿಂದ ಏನಾದರೂ ಆಗುತ್ತದೆ ಎನ್ನುವುದು ಕನಸಿನ ಮಾತೇ!

ಗಾಂಧಿ : ಈ ಕನಸುಗಳೇ ನಮ್ಮ ನಮ್ಮ ಕೈ ಹಿಡಿದು ನಡೆಸಬೇಕು ಡಾಕ್ಟರ್‌ಜೀ. ಆಕ್ರೋಶ, ಆತ್ಮದ ಧ್ವನಿಗೆ ಕಿವಿಗೊಡುವುದಿಲ್ಲ.

ಅಂಬೇಡ್ಕರ್ : ಕುಳಿತ ನೆಲದ ಮೇಲೆ ಹಕ್ಕಿರುವವನು, ಆತ್ಮ, ಅಧ್ಯಾತ್ಮ, ಪರಮಾತ್ಮ, ಭಜನೆಗಳಲ್ಲಿ ಮೈಮರೆಯಬಹುದು.

ಗಾಂಧಿ : ನೀವು ನಿಂತ ನೆಲವೂ ನಿಮ್ಮದೇ ಡಾಕ್ಟರ್‌ಜೀ. ಈ ರಾಷ್ಟ್ರ ನಿಮ್ಮದು.

ಅಂಬೇಡ್ಕರ್ : ಮಹಾತ್ಮ, ರಾಷ್ಟ್ರ ನಿಮ್ಮದು, ರಾಷ್ಟ್ರ ನಿಮ್ಮದು ಎಂದು ಯಾಕೆ ಸುಳ್ಳಿನಿಂದ ನನ್ನ ಸಹನೆ ಪರೀಕ್ಷಿಸುತ್ತೀರಿ? ನನಗೊಂದು ತಾಯ್ನೆಲವೂ ಇಲ್ಲ ಮಹಾತ್ಮ.

ಗಾಂಧಿ : ಏಕಿಲ್ಲ? ಈ ನೆಲ ನನಗೆಂತೋ ನಿಮಗಂತೆಯೇ ತಾಯ್ನೆಲ. ಚಕ್ರಗೋಷ್ಠಿಯ ವರದಿ ನನ್ನ ಗಮನಕ್ಕೆ ಬಂದಿದೆ. ನೀವಲ್ಲಿ ಮಾಡಿದ ಭಾಷಣ ಓದಿದ್ದೇನೆ. ನಿಮ್ಮ ದೇಶಾಭಿಮಾನ ಅನನ್ಯವಾದದ್ದೆಂದು ನಾನು ತಿಳಿದಿದ್ದೇನೆ.

ಅಂಬೇಡ್ಕರ್ : ನನ್ನ ತಾಯ್ನೆಲವಿದೆಯೇ? ಇಲ್ಲ, ಇಲ್ಲ. ಹಂದಿ ನಾಯಿಗಳಿಗಿಂತ ಕಡೆಯಾಗಿ ಬಾಳು ಸಾಗಿಸುತ್ತಿರುವ, ಕುಡಿಯುವ ನೀರು ಸಿಗದಿರುವ ಈ ನೆಲ ನನ್ನ ತಾಯ್ನೆಲವೇ? ದೇವಾಲಯ ಪ್ರವೇಶಕ್ಕವಕಾಶ ನೀಡದಿರುವ ಅಸಮಾನತೆಯ ಮೂಲಭೂತ ತತ್ವವಾಗಿರುವ ಈ ಧರ್ಮ ನನ್ನ ಧರ್ಮವೇ? ಆತ್ಮ ಗೌರವವುಳ್ಳ ಯಾವ ಅಸ್ಪೃಶ್ಯನೂ ಈ ನಾಡಿನ ಬಗ್ಗೆ ಹೆಮ್ಮೆಪಡುವಂತಿಲ್ಲ. ಕೆಲವರು ನನ್ನನ್ನು

ದೇಶದ್ರೋಹಿಯೆಂದು ಕರೆದರೆ ದುಃಖವಿಲ್ಲ. ನಾನು ದೇಶದ್ರೋಹಿ ಎಂಬುದು ನಿಜವಾದರೆ ಅದಕ್ಕೆ ಈ ದೇಶದ ಜನರೇ ಕಾರಣ. ನನ್ನ ಅಂತಸ್ಸಾಕ್ಷಿಗನುಗುಣವಾಗಿ ದೀನದಲಿತರಿಗೆ, ಅವರ ಮೂಲಕ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದೇನೆ. ಅವರ ಉದ್ಧಾರವಾಗದೆ ದೇಶೋದ್ಧಾರ ಸಾಧ್ಯವಿಲ್ಲ. ಅವರ ಉದ್ಧಾರ ಕಾರ್ಯದಲ್ಲಿ ನಿರತನಾಗಿರುವಾಗ ನನ್ನಿಂದ ದೇಶಕ್ಕೆ ಅಹಿತವುಂಟಾಗುವುದಾದರೂ ಅದು ಪಾಪವಾಗುವುದಿಲ್ಲ. ದೇಶವನ್ನು ಕಡೆಗಣಿಸಬೇಕೆಂಬುದು ನನ್ನ ಉದ್ದೇಶವಲ್ಲ, ಬದಲಿಗೆ ಜನರ ಮಾನವೀಯ ಹಕ್ಕುಗಳನ್ನು ರಕ್ಷಿಸಬೇಕೆಂಬುದು ನನ್ನ ಜೀವನ ಧ್ಯೇಯ.

ಗಾಂಧಿ : ನಿಮ್ಮ ಧ್ಯೇಯನಿಷ್ಠೆಯಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ, ಆದರೆ ಎಲ್ಲಕ್ಕಿಂತ ದೇಶಕಲ್ಯಾಣ ಮಿಗಿಲಲ್ಲವೇ?

ಅಂಬೇಡ್ಕರ್ : ಅಗತ್ಯ. ದೇಹವೆಷ್ಟು ಮುಖ್ಯವೋ, ದೇಹಕ್ಕೆ ಅಂಗವೂ ಅಷ್ಟೇ ಮುಖ್ಯ. ಮುಸ್ಲಿಂ ಮತ್ತು ಸಿಖ್ಖರು ಅಸ್ಪೃಶ್ಯರಿಂದ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮುಂದುವರಿದ್ದಾರೆನ್ನುವುದು ಸುಳ್ಳು? ಕಾಂಗ್ರೆಸ್ಸು ಅವರ ಬೇಡಿಕೆಗಳನ್ನು ಮಾನ್ಯ ಮಾಡಿದೆ. ಚಕ್ರಗೋಷ್ಠಿ ಮುಸ್ಲಿಮರಿಗೆ ರಾಜಕೀಯ ರಕ್ಷಣೆ ನೀಡಬೇಕೆಂದು ಶಿಫಾರಸು ಮಾಡಿದೆ. ಅಂತೆಯೇ ಅದು ಅಸ್ಪೃಶ್ಯರ ಬೇಡಿಕೆಗಳನ್ನೂ ಮನ್ನಿಸಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಗಾಂಧಿ : ಅಸ್ಪೃಶ್ಯರನ್ನು ಹಿಂದೂಗಳಿಂದ ರಾಜಕೀಯವಾಗಿ ಪ್ರತ್ಯೇಕಿಸಬಾರದೆಂಬುದೇ ನನ್ನ ಮತ. ಅದರಿಂದಾಗುವ ದುಷ್ಪರಿಣಾಮಗಳು ಅನೂಹ್ಯ.

ಅಂಬೇಡ್ಕರ್ : (ಮೇಲೇಳುತ್ತಾ) ನಿಮ್ಮ ನಿಷ್ಕಪಟ ಅಭಿಪ್ರಾಯಕ್ಕಾಗಿ ಧನ್ಯವಾದಗಳು. ಅಸ್ಪೃಶ್ಯರ ಸಮಸ್ಯೆ ಬಗ್ಗೆ ನಿಮ್ಮ ನಿಲುವೆಂಬುದೇನೆಂಬುದು ನನಗೆ ಸ್ಪಷ್ಟವಾಗಿದೆ, ನಾನು ಬರುತ್ತೇನೆ.

ಹಿಂದಿನ ‘ಗಾಂಧಿ : ಅಂತಿಮ ದಿನಗಳು’ ಕೃತಿ ಕುರಿತು



ಮಹಾತ್ಮ ಗಾಂಧಿ ಅವರ ಅಂತಿಮ ದಿನಗಳ ಅಧ್ಯಯನ ಮಾಡಿದ ಲೇಖಕ ರಾಜಶೇಖರ ಮಠಪತಿ ಅದನ್ನು ವಿವರವಾಗಿ ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದು ಗಾಂಧಿ ಕೊನೆಯ ದಿನಗಳ ಚಿತ್ರಣವಾದರೂ ಅವರ ತತ್ವಚಿಂತನೆಯನ್ನು, ವ್ಯಕ್ತಿತ್ವವನ್ನು ಅರಿತುಕೊಳ್ಳಲು ಮಾಡಿದ ಪ್ರಯತ್ನವಾಗಿದೆ.

ಗಾಂಧಿ ತಮ್ಮ ಹತ್ಯೆಗೂ ಮುನ್ನ ದೇಶವಿಭಜನೆ, ಕೋಮು ದಂಗೆಯನ್ನು ನೋಡಬೇಕಾಯಿತು. ಇವೆಲ್ಲವೂ ಅವರು ನಂಬಿದ ಆದರ್ಶ, ತತ್ವಕ್ಕೆ ವಿರುದ್ಧವೇ ಆಗಿದ್ದವು. ಇವೆಲ್ಲವುಗಳನ್ನು ಒಳಗೊಂಡು ಗಾಂಧಿ ಅಂತಿಮ ದಿನಗಳ ಚಿತ್ರಣ ಇಲ್ಲಿ ಕೊಡಲಾಗಿದೆ. ಇದು ಅವರ ಅಂತಿಮ ದಿನಗಳ ಚಿತ್ರಣವಾಗಿರುವುದರೊಂದಿಗೆ, ಇತಿಹಾಸದ ಅನನ್ಯ ನೋಟವನ್ನು ಕೊಡುವ ಕೃತಿಯೂ ಹೌದು.

ಈ ಪುಸ್ತಕಕ್ಕೆ ಬರೀ ಗಾಂಧಿಯ ವ್ಯಕ್ತಿತ್ವದ ಚಿತ್ರಣವಲ್ಲದೆ ಬೇರೊಂದು ಉದ್ದೇಶವೂ ಇದೆ. ನಮ್ಮೊಳಗೇ ಗಾಂಧಿಯ ಹುಡುಕಾಟ ಮಾಡುವುದರೊಂದಿಗೆ, ಗಾಂಧಿಯ ತತ್ವವನ್ನು ಇಂದಿನ ಭಾರತದ ಸಂದರ್ಭದಲ್ಲಿ ಹೇಗೆ ಒಳಗೊಳ್ಳಬೇಕು ಎಂಬುದರ ಅನ್ವೇಷಣೆಯೂ ಇದರದಾಗಿದೆ. ಲೇಖಕ ರಾಜಶೇಖರ ಅವರ ಸರಾಗವಾದ, ಕುತೂಹಲ ಹುಟ್ಟಿಸುವಂತೆ ಮಾಡುವ ಬರವಣಿಗೆ ಪುಸ್ತಕದ ಓದಿಗೆ ವೇಗವನ್ನು ಕೊಟ್ಟಿದೆ. ಅದು ಗಾಂಧಿಯನ್ನು ಈಗಿನ ಓದುಗರಿಗೆ ಆಪ್ತವಾಗಿಸುತ್ತದೆ; ಎಂದಿಗಿಂತಲೂ ಇಂದಿಗೆ ಅವರ ಮಹತ್ವವನ್ನು ಹೇಳುತ್ತದೆ. ಬರಹದಲ್ಲಿನ ವಿಮರ್ಶಾತ್ಮಕ ಒಳನೋಟಗಳು ಗಾಂಧಿಯವರನ್ನು ಭಿನ್ನವಾಗಿ ನೋಡುವಲ್ಲಿ ಸಹಾಯಕವಾಗಿವೆ.

೨೪ ಜೂನ್ ೨೦೧೨ **ಪ್ರಜಾವಾಣಿ, ದೈನಿಕ**

ಮಹಾತ್ಮನಾಗಬೇಕೆನ್ನುವ ಮಹಾನ್ ಕನಸು ಕಂಡ ಗಾಂಧಿ ಇತ್ತ ಸಾಮಾನ್ಯನಂತೆ ಸಂಕೀರ್ಣವೂ, ಅತ್ತ ಸಂತನಂತೆ ನಿರಾಳವೂ ಆಗದೆ ಒದ್ದಾಡಿದ. ತನ್ನೊಳಗೊಬ್ಬ ಕರ್ಮಠ ಹಿಂದೂವನ್ನು ಬಚ್ಚಿಟ್ಟುಕೊಂಡು ಮುಸ್ಲಿಮರ ಹಿಂಸೆಗೆ ಹೌಹಾರಿದ. ತನ್ನನ್ನೊಬ್ಬ ಸತ್ಯಸಂಧ, ನಿರ್ಭಯ, ಅಹಿಂಸೆಯ ಆರಾಧಕ ಎಂದು ಹೇಳಿಕೊಂಡೂ ಕಾಶ್ಮೀರದ ವಿಷಯದಲ್ಲಿ ಹಿಂಜರಿದ. ಅಲ್ಲಲ್ಲಿ ಸಮಸ್ಯೆಗಳನ್ನು ಬಗೆಹರಿಸಲಾಗದೆ ಕೈಚೆಲ್ಲಿ, ಸಹಚರರೊಂದಿಗೆ ಸಿಡಿಮಿಡಿಗೊಂಡು ಸುಮ್ಮನಾಗುವ ಈ ಮುದುಕ ನನಗೆ ನಮ್ಮ-ನಿಮ್ಮ ಮನೆಯ ಹತಾಶ ವೃದ್ಧರಿಗಿಂತ ತುಸು ಮೇಲು ಅಷ್ಟೇ...

ಹಾಗಂತ ಬರೆಯುವ ರಾಜಶೇಖರ ಮಠಪತಿ, ತಮ್ಮ ಅಂಕಣಗಳ ಗುಚ್ಛದಲ್ಲಿ ವಿಭಿನ್ನ ಗಾಂಧಿಯೊಬ್ಬನನ್ನು ಎತ್ತಿ ತೋರಿಸುತ್ತಾರೆ. ಆದರೂ, ಗಾಂಧಿಯ ಅವೆಷ್ಟೇ ಅವಗುಣಗಳನ್ನು ಇತಿಹಾಸದ ಅಂತರಾಳದಿಂದ ಹೆಕ್ಕಿ ತೆಗೆದರೂ, ಅವರೊಳಗೆ ಬೇರು ಬಿಟ್ಟಿರುವ ಗಾಂಧಿಯ ಆರಾಧಕನನ್ನು ಮಾತ್ರ ಅವರಿಂದ ಬಚ್ಚಿಡಲು ಸಾಧ್ಯವಾಗಿಲ್ಲ. ಗಾಂಧಿ, ಅಂಬೇಡ್ಕರ್, ವಿವೇಕಾನಂದ ಮುಂತಾದ ಯಾವುದೇ ಐತಿಹಾಸಿಕ ಮಹಾಪುರುಷರ ಬಗ್ಗೆ ಬರೆಯಲು ಹೊರಡುವ ಎಲ್ಲ ಆಧುನಿಕ ಲೇಖಕರ ಸಮಸ್ಯೆಯಿದು.

'ಗಾಂಧಿ : ಅಂತಿಮ ದಿನಗಳು' ಕೃತಿ ಹಲವು ರೀತಿಯಲ್ಲಿ ಗಮನ ಸೆಳೆಯುವಂತಹುದು. ಮಠಪತಿಯವರಿಗೆ ಭಾಷೆ ಒಲಿದಿದೆ. ಹಾಗಾಗಿ ಅವರು ಏನನ್ನು ಬೇಕಾದರೂ ಓದಿಸಿಕೊಳ್ಳುವಂತೆ ಬರೆಯಬಲ್ಲರು. ಆದರೆ, ಗಾಂಧಿ ಪುಸ್ತಕವನ್ನು ಬರೀ 'ಓದಿಸಿಕೊಂಡು ಹೋಗುತ್ತದೆ' ಎಂಬ ಕಾರಣಕ್ಕೆ ಓದುವಂತಿಲ್ಲ. ಅವರ ಉದ್ದೇಶವೂ ಅದಲ್ಲ.

ಗಾಂಧೀಜಿಯ ಆತ್ಮಚರಿತ್ರೆ, ಶಾಲೆ – ಕಾಲೇಜು ಪಠ್ಯದಲ್ಲಿ ಆತನ ಬಗೆಗೆ ದೊರೆತ ಮಾಹಿತಿ, ಕೆಲವೇ ಪ್ರಸಿದ್ಧ ಲೇಖಕರು ಗಾಂಧಿಯನ್ನು ಹೊಗಳಿದ ಹೊತ್ತಿಗೆಗಳು– ಇಷ್ಟಕ್ಕೇ ಗಾಂಧಿಯ ಅಧ್ಯಯನವನ್ನು ನೀವು ಸೀಮಿತಗೊಳಿಸಿಕೊಂಡಿದ್ದರೆ ಮತ್ತು ಅದನ್ನು ವಿಸ್ತರಿಸಿಕೊಳ್ಳುವ ಬಯಕೆ ಹೊಂದಿದ್ದರೆ ಮಠಪತಿಯವರ ಗಾಂಧಿನ್ನೊಮ್ಮೆ ಓದಬೇಕು.

ಮಹಾಬಲ ಸೀತಾಳಭಾವಿ

೨೮ ಜೂನ್ ೨೦೧೨ **ಉದಯವಾಣಿ, ದೈನಿಕ**

ಮಹಾತ್ಮನನ್ನು ಕುರಿತ ಮಂಥನ

ಕಳೆದ ಅರ್ಧ ಶತಮಾನದ ಅವಧಿಯಲ್ಲಿ ಗಾಂಧಿಯ ಜೀವನ, ಸಿದ್ಧಾಂತ, ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ಅವರ ಹಿರಿಮೆ ಕುರಿತು ಬಂದಿರುವ ಬರಹಗಳ ಲೆಕ್ಕವನ್ನಿಡಲು ಸಾಧ್ಯವೇ? ಜೊತೆಗೆ ಅವೆಲ್ಲವನ್ನೂ ಅಭ್ಯಾಸ ಮಾಡುವುದೂ ಅಸಾಧ್ಯ. ಸಾಮಾನ್ಯವಾಗಿ ಇವುಗಳಲ್ಲಿ ವಿಶದೀಕರಿಸಿದ ವಿಷಯ, ವಸ್ತುಗಳ ಜೊತೆ ಗಾಂಧಿಯ ಒಟ್ಟಾರೆ ವ್ಯಕ್ತಿತ್ವದ ಅಸಾಧಾರಣತೆಯನ್ನು ಇನ್ನಷ್ಟು ನ್ಯಾಯಯುತವಾಗಿ ಕೊಂಡಾಡುವುದನ್ನು ಮತ್ತೆ ಮತ್ತೆ ಕಾಣುವಂತಾದರೆ ಆಶ್ಚರ್ಯವಿಲ್ಲ. ಆದರೆ ವೈಯಕ್ತಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಸಂಬಂಧಿಸಿದ ಅವರ ಅಂತರಂಗವನ್ನು ವಸ್ತುನಿಷ್ಠವಾಗಿ ಅಭಿವ್ಯಕ್ತಿಗೊಳಿಸಿದ ಬರಹಗಳು ಹೆಚ್ಚಿಲ್ಲ. ಸರಳವೆನಿಸಿದರೂ ಅತ್ಯಂತ ಸಂಕೀರ್ಣವಾದ ವ್ಯಕ್ತಿತ್ವ ಮತ್ತು ಯಾವಾಗಲೂ ವೈಯಕ್ತಿಕವಾದದ್ದನ್ನು ಪರಿಗಣಿಸದೆ ಸಾರ್ವಜನಿಕಕ್ಕೇ ಅರ್ಪಿಸಿಕೊಂಡ ಗಾಂಧೀಜಿಯ ಕ್ರಿಯಾಶೀಲತೆಯೂ ಇದಕ್ಕೆ ಕಾರಣವಿರಬೇಕು. ಹೀಗಿದ್ದರೂ ಅವರ ಅಂತರಂಗವನ್ನು ಅರಿಯುವ ಪ್ರಯತ್ನಗಳು ನಡೆಯುತ್ತಲೇ ಇವೆ. ಈ ಬಗೆಯ ಪ್ರಯತ್ನಗಳನ್ನು ಅಭ್ಯಸಿಸಿ

ಅಂತಿಮ ದಿನಗಳಲ್ಲಿ ಗಾಂಧಿಯ ವಿಚಾರ, ಅವರ ತುಮುಲ ಮತ್ತು ಒಟ್ಟಾರೆ ಅವರ ಮನಃಸ್ಥಿತಿ ಹೇಗಿತ್ತು ಎನ್ನುವುದನ್ನು ಹಿಡಿದಿಟ್ಟಿರುವ ಪುಸ್ತಕವಿದು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚಿನ ಕೆಲಕಾಲ ಮತ್ತು ನಂತರ ಸಂಭವಿಸಿದ ಹಿಂಸಾಚಾರದ ಬಗ್ಗೆ ಆಯಾ ಪ್ರದೇಶಗಳಾದ ಕಲ್ಕತ್ತ, ನೌಖಾಲಿ ಮುಂತಾದ ಊರುಗಳಿಗೆ ಪ್ರಯಾಣ ಮಾಡಿ ಹಿಂದೂ-ಮುಸ್ಲಿಂ ಸಹಬಾಳ್ವೆಗೆ ಹಂಬಲಿಸುವ ದಿಕ್ಕಿನಲ್ಲಿ ಗಾಂಧಿ ಅಪಾರ ಮಾನಸಿಕ ಹಿಂಸೆಗೆ ಗುರಿಯಾಗುತ್ತಾರೆ. ದೇಶ ವಿಭಜನೆಗೆ ಮುನ್ನವೇ ಧರ್ಮದ ಹೆಸರಿನಲ್ಲಿ ದಳ್ಳುರಿ ಹಬ್ಬುತ್ತಿರುವಾಗ ಗಾಂಧೀಜಿ ಹಲವಾರು ಸಂದರ್ಭಗಳಲ್ಲಿ ಐದು ಕೋಟಿ ಮುಸ್ಲಿಮರಿಂದ ಇಪ್ಪತ್ತೈದು ಕೋಟಿ ಹಿಂದೂಗಳಿಗೆ ಯಾವ ತೊಂದರೆಯೂ ಇಲ್ಲವೆಂದು ನಂಬಿರುತ್ತಾರೆ ಮತ್ತು ಹಾಗೆಂದು ಇತರರಿಗೂ ನಂಬಲು ಆಗ್ರಹಿಸುತ್ತಾರೆ. ದೇಶ ವಿಭಜನೆ ಆಗುವುದಾದರೆ ಅದು ತಮ್ಮ ಮೃತ ಶರೀರದ ಮೇಲೆ ಎಂದು ದೇಶದ ಸಕಲರಿಗೂ ಒಳಿತಾಗುವ ಯಾವ ನಿಲುವು ತಾಳಿದ್ದರೋ ಅದು ತಮ್ಮೆದುರೇ ನೆಲಸಮವಾದುದನ್ನು ಕಂಡು ಕುಸಿದು ಹೋಗುತ್ತಾರೆ. ಧರ್ಮದ ಹೆಸರಿನಲ್ಲಿ ಉಂಟಾದ ಘಟನಾವಳಿಗಳಿಂದ ತಾವು ಲೌಕಿಕ ಬೇರೆಯಲ್ಲ, ಆಧ್ಯಾತ್ಮ ಬೇರೆಯಲ್ಲ ಎಂದೂ, ಬದುಕಿನುದ್ದಕ್ಕೂ ನಡೆದುಕೊಂಡು ಬಂದದ್ದು ಕೇವಲ ಗಾಳಿಗೋಪುರ ಎನಿಸುತ್ತದೆ. ಭಾರತ ಹಾಗೂ ಪಾಕ್‌ನಲ್ಲಿ ಧರ್ಮದ ಹೆಸರಿನಲ್ಲಿ ಜರುಗಿದ ಹಿಂಸೆ, ಹತ್ಯೆ, ಅತ್ಯಾಚಾರಗಳ ಅಬ್ಬರದಲ್ಲಿ ಗಾಂಧಿ ವಾಸ್ತವ ನೆಲೆಯ ನಿವಾರಣೆ ಮತ್ತು ಪರಿಹಾರದ ದಿಕ್ಸೂಚಿಯನ್ನು ಕೊಡಲಾಗದೆ ಹೋಗುತ್ತಾರೆ. ಆಗ ಅವರು ಮೂಕಪ್ರೇಕ್ಷಕನಂತೆ ಪರಿತಪಿಸುವುದನ್ನು ಮತ್ತು ಹತಾಶರಾಗುವುದನ್ನು ಇಲ್ಲಿನ ಕಿಳ ಲೇಖನಗಳಲ್ಲಿ ಕಾಣಬಹುದು.

ಮನೆ-ಮಠ ಕಳೆದುಕೊಂಡಿದ್ದ ಜನರಿಗೆ - ಮುಖ್ಯವಾಗಿ ಹಿಂದೂಗಳಿಗೆ- ದೇವರಲ್ಲಿ ನಂಬಿಕೆಯಿಟ್ಟು ಮುಂದುವರಿಯಲು ಅವರು ಉಪದೇಶಿಸುವುದು ಸಂಕಷ್ಟದಲ್ಲಿರುವವರಿಗೆ ಸೂಕ್ತವೆನಿಸುವುದಿಲ್ಲ. ಇಸ್ಲಾಮಿನಲ್ಲಿ ನಿಜವಾದ ನಂಬಿಕೆ ಇರುವವರು ಹಿಂದೂಗಳಿಗೆ ಯಾವ ತೊಂದರೆ ಕೊಡಲಾರರು ಎನ್ನುವುದೇ ಅವರು ಹಿಂದೂಗಳಿಗೆ ಮತ್ತೆ ಮತ್ತೆ ಹೇಳುತ್ತಿದ್ದ ಹಿತವಚನ. ಹಾಗೆಯೇ ಹಿಂದೂಗಳಿಂದ ಮುಸ್ಲಿಮರು ದಮನಕ್ಕೆ ಒಳಗಾಗಬಾರದೆಂದು ಅವರ ಅಪೇಕ್ಷೆ. ಆದರೆ ಎರಡೂ ಧರ್ಮದವರಲ್ಲಿ ಪರಸ್ಪರ ಕೆಡುಕಿಗೆ ಗುರಿಪಡಿಸುವಂಥವರನ್ನು ನಿಭಾಯಿಸುವುದು ಹೇಗೆ ಎನ್ನುವುದಕ್ಕೆ ಪ್ರಾರ್ಥನೆ ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದು ಅವರು ನಂಬಿರುತ್ತಾರೆ. ದೇಶ ವಿಭಜನೆಯೂ ಸೇರಿದಂತೆ ಇತರ ಕೆಲವು ವಿಚಾರಗಳ ಜೊತೆ ಈ ಅಂಶವನ್ನು ಪರಿಶೀಲಿಸಿದರೆ ಹಿಂದೂ-ಮುಸ್ಲಿಂ, ಒಟ್ಟಾರೆ ಜನ ಸಮುದಾಯದ ಬಗ್ಗೆ ಗಾಂಧೀಜಿ ಪರಿಭಾವಿಸಿಕೊಂಡ ಬಗೆ ಸಮಂಜಸವಾಗಿತ್ತೇ ಎಂದು ಅನುಮಾನಿಸುವುದಕ್ಕೆ ಕಾರಣಗಳಿವೆ. ಹಲವಾರು ಬಾರಿ ಅವರು ಹತಾಶೆಯಿಂದ ಕೈಚೆಲ್ಲಿ ದೈವದ ನೆರವನ್ನು ಕೋರುವುದು ಎಷ್ಟು ಸರಿ ಎನ್ನಿಸಿದರೆ ಆಶ್ಚರ್ಯವಿಲ್ಲ.


ಇವೆಲ್ಲಕ್ಕೆ ಪುಟವಿಟ್ಟ ಗಾಂಧೀಜಿ ಅನುಯಾಯಿಗಳು ಎನ್ನಿಸಿಕೊಂಡಿದ್ದ ನೆಹರು, ಪಟೇಲ್ ಮತ್ತಿತರ ರಾಜಕೀಯ ಪ್ರಮುಖರ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಇದಕ್ಕೂ ಮುಂಚೆ ಆಜಾದ್, ಅಂಬೇಡ್ಕರ್ ಮುಂತಾದವರ ವರ್ಚಸ್ಸು ಕಡಿಮೆಯಾಗಲು ತಮ್ಮ ನಿಲುವಿಗೆ ಒಪ್ಪದ ಗಾಂಧಿಯೇ ಕಾರಣ ಎಂಬ ಭಾವನೆ ಸೀಮಿತ ವಲಯಗಳಲ್ಲಿ ಹಬ್ಬಿರುತ್ತದೆ. ಸ್ವಾತಂತ್ರ್ಯ ದಿನಾಚರಣೆಯನ್ನು ಉಪವಾಸದಿಂದ, ಪ್ರಾರ್ಥನೆಯಿಂದ ಮತ್ತು ಆತ್ಮಾವಲೋಕದಿಂದ ಆಚರಿಸಬೇಕು ಎನ್ನುವ ಅವರ ಅಭಿಲಾಷೆ ಸಂಪೂರ್ಣ ಉಪೇಕ್ಷೆಗೆ ಒಳಗಾಗುತ್ತದೆ. ನಂತರ ಅಧಿಕಾರದ ಚುಕ್ಕಾಣಿ ಹಿಡಿದವರಿಗೆ ಒಟ್ಟಾರೆಯಾಗಿ ಗಾಂಧಿ ಅಪ್ರಸ್ತುತವೆನಿಸುತ್ತಾರೆ.

ಗಾಂಧಿ ಭಗವದ್ಗೀತೆಗೆ ಕೊಟ್ಟ ಮಹತ್ವವನ್ನು ಕುರಾನ್‌ಗೆ ಕೊಟ್ಟರೂ ದೇಶದ ಬಹುತೇಕ ಮುಸ್ಲಿಮರ ನಿಜವಾದ ವಿಶ್ವಾಸಗಳಿಸುವಲ್ಲಿ ವಿಫಲರಾಗುತ್ತಾರೆ. ಹಿಂದೂ-ಮುಸ್ಲಿಮರ ಸಹಬಾಳ್ವೆಗೆ ಜಿನ್ನಾಗಿಂತ ಸುಹ್ರಾವರ್ದಿ ಅವರ ಸಹಕಾರವನ್ನು ನಿರೀಕ್ಷಿಸುತ್ತಾರೆ. ಕಾಶ್ಮೀರದಲ್ಲಿನ ಮುಸ್ಲಿಮರ ಸಮಸ್ಯೆ ಉಂಟಾದಾಗಲೂ ಅಷ್ಟೆ. ಹೀಗೆ ತಾವು ಪೋಷಿಸಿಕೊಂಡು ಬಂದಿದ್ದ ರಾಮರಾಜ್ಯದ ಕನಸು ಶೀಘ್ರ ಗತಿಯಲ್ಲಿ ಕುಸಿಯುತ್ತಿದ್ದರಿಂದಲೋ ಏನೋ ನೂರಿಪ್ಪತ್ತೈದು ವರ್ಷ ಬದುಕುತ್ತೇನೆ ಎಂದು ನಂಬಿದ ಗಾಂಧಿ ಅಮೃತ್ ಕೌರ್‌ಗೆ 'ನನ್ನ ಪಾಲಿಗೆ ವರ್ತಮಾನ ಸಂಕಟಮಯವಾಗಿದೆ. ನಾಳೆ ಹೇಗಿರಬಹುದು ಎನ್ನುವುದೇ ತಿಳಿಯುತ್ತಿಲ್ಲ?' ಎಂದು ಬರೆದು ಭಾರವಾದ ಭಾವದಿಂದ ಸಾವನ್ನು ಅಪೇಕ್ಷಿಸುತ್ತಾರೆ.

ಕೌಟುಂಬಿಕ ವಿಷಯದಲ್ಲೂ ಗಾಂಧಿಯವರು ಕಸ್ತೂರ್ ಬಾ ಅವರನ್ನು ಹೆಚ್ಚೆಂದರೆ ತಮ್ಮ ನೆರಳಿನಂತಿರಲು ಅನುವು ಮಾಡಿಕೊಟ್ಟರಷ್ಟೆ ಅವರ ನಾಲ್ಕು ಮಕ್ಕಳ ವಿಷಯದಲ್ಲೂ ಸಂಬಂಧ ಹಿತಕರವಾಗಿತ್ತೆಂದು ತಿಳಿಯಲು ಕಷ್ಟವೇ. ತಮ್ಮ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ಮತ್ತು ಪತ್ನಿ ಕಸ್ತೂರ್ ಬಾ ಅವರ ಮರಣ ಗಾಂಧಿಯನ್ನು ಕಂಗೆಡಿಸುತ್ತದೆ. ಈ ರೀತಿಯ ಗಾಂಧಿಯ ವಿವಿಧ ಛಾಯೆಯುಳ್ಳ ವಿಶಿಷ್ಟ ಬದುಕನ್ನು ತೆರೆದಿಟ್ಟ ರಾಜಶೇಖರ ಮಠಪತಿ ಅಭಿನಂದನಾರ್ಹರು.

ಎ.ಎಸ್.ಪ್ರಸನ್ನ

೧೯ ಆಗಸ್ಟ್ ೨೦೧೨ **ವಿಜಯ ಕರ್ನಾಟಕ, ದೈನಿಕ**



ಸ್ವಾತಂತ್ರ್ಯ ಹೋರಾಟದ ನೇತಾರನಾಗಿ, ರಾಜಕಾರಣಿಯಾಗಿ ಗಾಂಧಿಯನ್ನು ಚಿತ್ರಿಸಿದ ಅಪಾರ ಸಾಹಿತ್ಯದೊಂದಿಗೆ ಅವರನ್ನು ಧರ್ಮನಿಷ್ಠ, ಸಾತ್ವಿಕ, ಸಂತನಾಗಿ ಕಾಣುವ ಹಲವು ಕೃತಿಗಳಿವೆ. ಎರಡೂ ನೆಲೆಗಳನ್ನು ಸಮನ್ವಯಿಸಿಕೊಳ್ಳುವ ಮಹಾತ್ಮನನ್ನು ಅಪ್ಪಟ ಮಾನವನನ್ನಾಗಿ ಬೆಳೆಸುವ ಕೃತಿ ಮಾತ್ರ ಅಪರೂಪ. ಇಂದಿನ ಚಿಂತನಶೀಲ ಲೇಖಕ ಗಾಂಧಿಯನ್ನು ಹೇಗೆ ನೋಡುತ್ತಾನೆ ಎನ್ನುವುದರ ದೃಷ್ಟಾಂತವಾಗಿಯೂ ಈ ಕೃತಿ ಮಹತ್ವದ್ದು. ಹಲವು ಆಕರಗಳ ನೆರವಿನಿಂದ ಗಾಂಧಿಯ ಅಂತಿಮ ದಿನಗಳನ್ನು ವಿವರವಾಗಿ, ಆಕರ್ಷಕವಾಗಿ ರಾಗಂ ಕಟ್ಟಿಕೊಟ್ಟಿದ್ದಾರೆ.

೧೧ ಜೂನ್ ೨೦೧೨ **ಸಂಯುಕ್ತ ಕರ್ನಾಟಕ, ದೈನಿಕ**

ಸಾಮಾನ್ಯರೊಟ್ಟಿಗೆ ಮಾತ್ರ ಸಹನಡಿಗೆ ಸಾಧ್ಯ

ನಮ್ಮ ಈಗಿನ ಸಮಸ್ಯೆಗಳಿಗೆ ಪರಿಹಾರವೇನು? ಎಂದು ಕೇಳಿದರೆ ಅದಕ್ಕೆ ಗಾಂಧಿವಾದ ಎಂದು ಹೇಳದೆ ಬೇರೆ ಆಯ್ಕೆಗಳು ನಮ್ಮೆದುರಿಗಿಲ್ಲ. ಗಾಂಧಿವಾದ ಎಂದೋ ಮುಗಿದ ಅಧ್ಯಾಯ ಎಂದು ಅದರ ಹತ್ತಿರಕ್ಕೆ ಮತ್ತೆ ಹೋಗುವುದೆಂದರೆ ನಾವು ಹಿಮ್ಮುಖವಾಗಿ ಚಲಿಸುತ್ತಿದ್ದೇವೆಂದು ಕೆಲವರು ಹೇಳಬಹುದು. ಅದು ಖಂಡಿತಾ ಅವರ ತಪ್ಪಲ್ಲ. ನಾವು ಗಾಂಧಿಯನ್ನು, ಗಾಂಧೀವಾದವನ್ನು ಅರ್ಥ ಮಾಡಿಕೊಂಡಿರುವ ರೀತಿಯೇ ಹಾಗಿದೆ.

ಗಾಂಧಿಯನ್ನು ನೋಡುವುದು ಸುಲಭ ಆದರೆ ಅನುಕರಿಸುವುದು ಕಷ್ಟ. ಹಾಗೆ ಅದು ಕಷ್ಟವಾಗಲು ನಾವು ಉಳಿಸಿಕೊಳ್ಳದೇ ಇರುವ ಪ್ರಯೋಗಶೀಲತೆಯೇ ಕಾರಣವಾಗಿದೆ. ಯಾರೋ ಪ್ರಯೋಗಿಸಿ ಯಶಸ್ಸು ಕಂಡದ್ದನ್ನು ನಾವು ಕಲಿಯುತ್ತಿರುವುದರಿಂದ ಕಡೆಯ ಉಸಿರಿರುವವರೆಗೂ ಪ್ರಯೋಗಶೀಲನಾಗಿದ್ದ ಗಾಂಧಿಯ ಸತ್ಯಾನ್ವೇಷಣೆಯ ಹಾದಿ ನಮಗೆಲ್ಲಾ ಪ್ರೇರಕ ಶಕ್ತಿಯಾಗುವುದು ಹೇಗೆ ಸಾಧ್ಯ?

ಈಗಿನ ಸಮಸ್ಯೆಗಳನ್ನು ನೋಡಿದರೆ ಹೊರಗೆ ಬರಲು ದಾರಿ ಯಾವುದಯ್ಯಾ? ಎಂದು ಅವಲತ್ತುಕೊಳ್ಳಬೇಕಾಗಿದೆ. ಅದಕ್ಕೆ ಗಾಂಧಿಯಲ್ಲಿ ಮಾತ್ರ ಮದ್ದಿದೆ ಎಂದು ತಿಳಿಯುವುದಕ್ಕೆ ಆತನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ. ವಿಷಾದವೆಂದರೆ ಗಾಂಧಿ ವಿರುದ್ಧ ಹೋಗುವುದು ಮಾರಕ ಎಂದು ನೆಹರು, ಪಟೇಲ್ ಮುಂತಾದವರಿಗೆ ಅರ್ಥವಾಗಲೇ ಇಲ್ಲ. ಅಷ್ಟು ಹತ್ತಿರದಲ್ಲೇ ಇದ್ದ ಗಾಂಧಿ ಶಿಷ್ಯಂದಿರಲ್ಲಿ ಅಗ್ರಗಣ್ಯರಾದ ಅವರಿಗೇ ಗಾಂಧಿಯನ್ನು ಅರ್ಥ ಮಾಡಿಕೊಳ್ಳುವುದು ಬೇಡವಾಗಿದ್ದಾಗ, ಉಳಿದವರು ಯಾವ ಕಾರಣಕ್ಕೆ ಅರ್ಥ ಮಾಡಿಕೊಳ್ಳಬೇಕು? ಇವೆಲ್ಲಾ ಗಾಂಧಿ ಸತ್ತ ನಂತರ ಉದ್ಭವಿಸಿದ ಸಮಸ್ಯೆಗಳಲ್ಲ. ಆತ ಬದುಕಿದ್ದಾಗಲೇ ಆತನ ಮೌಲ್ಯಗಳು ಮೂಲೆಗುಂಪಾಗಿದ್ದವು. ಗಾಂಧೀಜಿಯನ್ನು ಪ್ರಶ್ನಿಸಬೇಕಾದ ಸಮಯದಲ್ಲಿ ಅತಾರ್ಕಿಕ ಪ್ರಶ್ನೆಗಳನ್ನು ಎತ್ತುವುದರ ಹಿಂದೆ ವಿದ್ರೋಹಿ ಫಲಿತಾಂಶದ ಜಾಣತನವಿದೆ.

ಗಾಂಧಿಯ ಅಂತಿನ ದಿನಗಳ ಅನಿಸಿಕೆಗಳು ಆತನ ಒಟ್ಟಾರೆ ಪ್ರಯತ್ನಗಳ ಸಾರದಂತಿದೆ. ತಾನು ನಡೆಸಿದ ಪ್ರಯೋಗಗಳ ಪರಿಣಾಮವನ್ನು ಗಾಂಧಿ ಕಡೆಯ ದಿನಗಳಲ್ಲಿ ನೋಡಿದ. ನಾನು ಜನರ ಹತ್ತಿರ ತಲುಪಲಾಗಲಿಲ್ಲ ಎಂಬ ನೋವು ಆತನನ್ನು ಕಾಡಿದ್ದರಲ್ಲಿ ಸತ್ಯವಿದೆ. ತನ್ನ ಮಹತ್ವಾಕಾಂಕ್ಷಿ 'ಹರಿಜನ' ಪತ್ರಿಕೆಯನ್ನು ನಿಲ್ಲಿಸುವ ಮಾತನ್ನಾಡುವ ಗಾಂಧಿಯಲ್ಲಿ ವೈಫಲ್ಯದ ಛಾಯೆಯಿತ್ತು. ಸ್ವಾತಂತ್ರ್ಯ ಬರಲು ಒಂದೆರಡು ವರ್ಷಗಳಿದ್ದಾಗಲೇ ಗಾಂಧಿ ಎಂಬ ನಾಯಕನ ಕೈಯಿಂದ ದೇಶ ಸಡಿಲಗೊಂಡು ದಿಕ್ಕಿಲ್ಲದ ಅಮಲಿನ ಕುದುರೆಯಾಗಿತ್ತು. ಗಾಂಧಿ ಬದುಕಿದ ದಿನಗಳಲ್ಲೇ ಸಂಪೂರ್ಣವಾಗಿ ಸೋತ, ಜತೆಗಾರರಿಲ್ಲದ ವಿಫಲತೆಯ ಒಟ್ಟಾರೆ ಮೊತ್ತದಂತೆ ಬದುಕುತ್ತಿದ್ದ. ಮಹಾತ್ಮನಾಗುವ ಅಪಾಯವನ್ನು ಅದು ತಂದೊಡ್ಡುವ ಸಂವಹನ ನಿಷ್ಕ್ರಿಯತೆಯನ್ನು ಮನಗಂಡು ತತ್ತರಿಸಿದ. ಹೀಗೆ ಗಾಂಧಿ ನಮಗೆ ಆಗಲೂ ಅರ್ಥವಾಗಲಿಲ್ಲ. ಈಗಲೂ ಅರ್ಥವಾಗುತ್ತಿಲ್ಲ. ಯಾಕೆಂದರೆ ಗಾಂಧಿ ಹೇಳಿದ ವಿಚಾರಗಳ ವಿರುದ್ಧವಾಗಿ ಬಹುದೂರ ಬಂದ ನಂತರ ಮತ್ತೆ ನಾವು ಗಾಂಧಿಯನ್ನು ಎಲ್ಲಿಂದ ಮುಟ್ಟಬೇಕು? ಎನ್ನುವುದನ್ನೂ ತಿಳಿಯುವುದಕ್ಕೆ ಸಾಧ್ಯವಿಲ್ಲದಂತಾಗಿದ್ದೇವೆ.

ಈ ಕೃತಿಯಲ್ಲಿ ಮಾತ್ರ ರಾಜಶೇಖರ ಮಠಪತಿಯವರ ಅಕ್ಷರಗಳಲ್ಲಿ ಗಾಂಧಿ ನಮಗೆ ಬೇರೆಯದಾಗಿ ಅರ್ಥವಾಗುತ್ತಾ ಹೋಗುತ್ತಾರೆ. ಹಾಗಂತ ನಾನು ಮೊದಲಿನಿಂದ ಹೇಳಿದ ವಿಚಾರಗಳನ್ನು ರಾಗಂರವರು ಹೇಳಿದ್ದಲ್ಲ. ಅವರಿಗೆ ಗಾಂಧಿ ಬಗ್ಗೆ ಬರೆಯುವುದು ಯಾಕೆ ಅನಿವಾರ್ಯವಾಗಿರಬಹುದು ಎಂದು ಯೋಚಿಸಿದಾಗ ಮೂಡಿದ ನನ್ನ ಅನಿಸಿಕೆಗಳು.

ನಮ್ಮ ಅರ್ಥದಲ್ಲಿ ಗಾಂಧಿ ಇಲ್ಲವಾಗಿದ್ದಾನೆ ಅಥವಾ ಇಲ್ಲಿ ಇಲ್ಲದೆ ಬೇರೆಲ್ಲೋ ಬದುಕಿದ್ದಾನೆ. ಆದರೆ ರಾಗಂರವರ ಗಾಂಧಿ ಹಾಗಲ್ಲ. ಅವನು ಮತ್ತೆ ಮತ್ತೆ ಎದುರಾಗುತ್ತಾನೆ. ನಾನು ಮಾಡಿದ್ದು ಸರಿಯಾ? ಎಂದು ನಿವೇದನೆಯಲ್ಲಿ ತೊಡಗುತ್ತಾನೆ. ನೀವು ಹೀಗೆ ಆದರೆ ಹಾಳಾಗಿ ಹೋಗುತ್ತೀರಿ ಎಂದು ಗದರುತ್ತಾನೆ. ಸಂಕಷ್ಟದಲ್ಲಿದ್ದೇನೆ, ಏನಾದರೂ ದಾರಿ ತೋರಿಸಿ ಎಂದು ಮೌನಿಯಾಗುತ್ತಾನೆ. ಸೇವೆಯ ಪ್ರತೀಕವಾದ ಚರಕದ ಸ್ಥಾನವನ್ನು ವಧಾ ಸಂಕೇತವಾದ ಸುದರ್ಶನಚಕ್ರ ಆಕ್ರಮಿಸಿಕೊಂಡಿದ್ದರಲ್ಲಿ ದೇಶ ಮುಂದೆ ನಡೆಯುವ ದಾರಿಯ ಕುರಿತು ತಿಳಿಸುತ್ತದೆ ಎಂದು ಕಳವಳಗೊಳ್ಳುತ್ತಾನೆ. ಮುಖ್ಯವಾಗಿ ಮತ್ತೆ ಮತ್ತೆ ಅಹಿಂಸೆಯ ಬಗ್ಗೆ ಗುಡಿ ಕೈಗಾರಿಕೆಯ ಬಗ್ಗೆ, ಮಾತನಾಡುತ್ತಾನೆ. ರಾಗಂ ಅಕ್ಷರಗಳಲ್ಲಿ ಮಾತ್ರ ಗಾಂಧಿ ನಮ್ಮೊಂದಿಗೆ ಸಂವಾದ ನಡೆಸುತ್ತಾನೆ. ಮುಖ್ಯವಾಗಿ ರಾಗಂರವರ ಮೇಲೆ ಸಿಟ್ಟಿರುವುದಾದರೆ ಅದು ಗಾಂಧಿಯಂತಹ ಗಾಂಧಿಯ ಬಗ್ಗೆ ಮರುಕ ಹುಟ್ಟಿಸುತ್ತಾರಲ್ಲ ಅದಕ್ಕೆ ಗಾಂಧಿ ಒಬ್ಬ ಮನುಷ್ಯ ಹೇಗೆ ಅಂತ ವಿವರಿಸುತ್ತಾರೆ ಎಂಬ ಕಾರಣಕ್ಕೆ. ಈ ಒಂದು ಪ್ಯಾರಾ ಗಮನಿಸಿ.

"ಗಾಂಧಿ ಎಂಬ ಗಾಂಧಿಯೂ ಹೆಂಡತಿಯ ಚಿತೆಗೆ ಬೆಂಕಿಯಿಟ್ಟು ೬ ಗಂಟೆಗಳವರೆಗೂ ಉರಿ ಬಿಸಿಲಿನಲ್ಲಿ ಒಂದು ದೊಣ್ಣೆಯನ್ನು ಊರಿಕೊಂಡು ನಿಂತಿದ್ದನಲ್ಲ ಆಗ ಅವನು

ಮನುಷ್ಯನಾಗಿದ್ದ. ಸ್ಮಶಾನದ ಗಿಡದ ಕೆಳಗೆ ಕುಳಿತು ಪಂಚಭೂತಗಳಲ್ಲಿ ಲೀನವಾಗುತ್ತಿದ್ದ ಕಸ್ತೂರಿ ಬಾಳನ್ನೇ ಎವೆಯಿಕ್ಕದೆ ಗಮನಿಸುತ್ತಿದ್ದನಲ್ಲ ಆಗ ಆತ ಮನುಷ್ಯನಾಗಿದ್ದ. ಬಾ ಇಲ್ಲದೇ ಬದುಕನ್ನು ನಾನು ಊಹಿಸಿಕೊಳ್ಳಲಾರೆ. ಅವಳು ನನ್ನದೇ ಅಂಗವಾಗಿ ಬಿಟ್ಟಿದ್ದಳು. ಅವಳ ಸಾವು ನನ್ನ ಬದುಕಿನಲ್ಲಿ ಶಾಶ್ವತವಾದ ಕಂದಕವನ್ನು ಬಿಟ್ಟುಹೋಗಿದೆ ಎನ್ನುವಾಗ ಗಾಂಧಿ ಮನುಷ್ಯನಾಗಿದ್ದ. ಬಾ ಬಳಸುತ್ತಿದ್ದ ಬಟ್ಟೆ, ಈ ಗಾಂಧಿಗಾಗಿ ಕಾಯುತ್ತಲೇ ನಿದ್ರೆ ಹೋದ ಮೇಜು ಆಗಾಗ ಕೊಡುತ್ತಿದ್ದ ಎಚ್ಚರಿಕೆಗಳು ಗಾಂಧಿಯನ್ನು ಗಾಂಧಿ ಎಂಬ ಮನುಷ್ಯನನ್ನಾಗಿಸಿದ್ದವು. ತಾನೆಂದೋ ಘೋಷಿಸಿಕೊಂಡಿದ್ದ ಬ್ರಹ್ಮಚರ್ಯವನ್ನು ಕಸ್ತೂರಿ ಬಾ ಪೋಷಿಸಿಕೊಂಡು ಬಂದಿರುವುದನ್ನು ನೆನಪಿಸಿಕೊಂಡರೆ ಗಾಂಧಿ ಮನುಷ್ಯನಾಗುತ್ತಿದ್ದ." ಇದು ರಾಗಂ ಶೈಲಿ.

ಯಾವುದೇ ಕಾರಣಕ್ಕೂ ಇಲ್ಲಿ ಒಬ್ಬ ಮಹಾತ್ಮ ನಮಗೆ ಕಾಣಸಿಗುವುದೇ ಇಲ್ಲ. ಗಾಂಧಿಯನ್ನು ಹೇಗೆ ಬೇಕಾದರೂ ಚಿತ್ರಿಸಬಹುದಾದ ಈ ಸಂದರ್ಭದಲ್ಲಿ ಇಂತಹ ನೈಜತೆಯನ್ನು ಕಟ್ಟಿಕೊಡುವ ಮುಖಾಂತರ ನಮ್ಮನ್ನು ಗಾಂಧಿ ಸಮೀಪಕ್ಕೆ ತಂದು ನಿಲ್ಲಿಸುತ್ತಾರೆ ರಾಗಂ. ನಮ್ಮೊಳಗೂ ಒಬ್ಬ ಗಾಂಧಿ ಇರಲು ಸಾಧ್ಯ ಎನ್ನುವುದನ್ನು ತೋರಿಸಿಕೊಡುತ್ತಾರೆ.

ಗಾಂಧಿ ಸಾಮಾನ್ಯರಲ್ಲಿ ಸಾಮಾನ್ಯನಾಗುತ್ತಾನೆ ಮತ್ತು ಇಂತಹ ಸಾಮಾನ್ಯರೊಟ್ಟಿಗೆ ಮಾತ್ರ ಸಹನಡಿಗೆ ಸಾಧ್ಯ!

ಚಲಂ

೦೯-೦೯-೨೦೧೨ **ಜನತಾ ಮಾಧ್ಯಮ**

ರಾಷ್ಟ್ರಪಿತ ಮಹಾತ್ಮಾಗಾಂಧಿಯನ್ನು ಅರಿಯದವರು ನಮ್ಮ ದೇಶದಲ್ಲಷ್ಟೇ ಅಲ್ಲ; ಪ್ರಪಂಚದಲ್ಲೇ ಯಾರೂ ಇಲ್ಲ. ಗತಿಸಿ ಅರವತ್ನಾಲ್ಕು ವರ್ಷ ಕಳೆದರೂ ನಮಗೆ ಗಾಂಧಿಯನ್ನು ಮರೆಯಲಾಗುತ್ತಿಲ್ಲ. ಹಿಂದೆಂದಿಗಿಂತಲೂ ಇಂದು ಹೆಚ್ಚು ಚರ್ಚೆಗೊಳಗಾಗುತ್ತಿರುವ ವ್ಯಕ್ತಿ ಗಾಂಧೀಜಿ. ಸ್ವಾತಂತ್ರ್ಯ ಚಳುವಳಿ, ಅಸ್ಪೃಶ್ಯತಾ ನಿವಾರಣೆಯ ಹರಿಕಾರರಾಗಿ ಅವರು ಸಫಲರಾದದ್ದು ಮತ್ತು ಕೆಲವೊಂದು ಪ್ರಯತ್ನಗಳಲ್ಲಿ ವಿಫಲರಾದದ್ದು ಯಾಕೆ? ಹಿಂದೂ ಮುಸ್ಲಿಂ ದಂಗೆಯನ್ನು ಅಹಿಂಸಾಮೂರ್ತಿಯಾಗಿದ್ದ ಅವರು ಹೇಗೆ ಕಂಡರು? ಶಾಂತಿ ಮಂತ್ರ ಜಪಿಸುತ್ತ ಉಪವಾಸ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡ ಅವರನ್ನು ಅವರ ಅನುಯಾಯಿಗಳು, ನಿಕಟವರ್ತಿಗಳು ಕಂಡ ಬಗೆ ಹೇಗೆ? ಅವರ ಪರ-ವಿರೋಧ ಶಕ್ತಿಗಳ ಪ್ರಮಾಣವೆಷ್ಟು? ಗಾಂಧಿಯ ಒಂದು ಮುಖವನ್ನು ಅನಾವರಣಗೊಳಿಸಿದ ಮತ್ತು ಅವರ ವ್ಯಕ್ತಿತ್ವವನ್ನು ಎತ್ತರಿಸಿದ ಸಾಹಿತ್ಯ ನಮ್ಮಲ್ಲಿ ಸಾಕಷ್ಟಿದೆ. ಅವರು ಎದುರಿಸಿದ ಕೆಲವು ಒತ್ತಡಗಳು, ಬಿಕ್ಕಟ್ಟುಗಳು, ದುಗುಡಗಳು ಹೇಳಿ ಮುಗಿಯದಷ್ಟಿವೆ. ಅವರೇ ತಮ್ಮ

ಆತ್ಮಕಥೆಯಲ್ಲಿ ಸತ್ಯದೊಂದಿಗೆ ನಡೆಸಿದ ಪ್ರಯೋಗಗಳೆಂದು ಎಷ್ಟೋ ಸತ್ಯಗಳನ್ನು ಧಾರೆಧಾರೆಯಾಗಿ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಗಾಂಧಿ ತನ್ನ ಕೆಲವು ಅಚಲ ನಿಲುವಿಗೆ ಬದ್ಧರಾಗಿ ಎಷ್ಟೆಷ್ಟನ್ನೋ ಸಾಧಿಸಿದರು. ಆದರೆ ಕೆಲವೊಂದನ್ನು ಸಾಧಿಸಲಾಗಲಿಲ್ಲ. ಅವರ ಕೊನೆಯ ದಿನಗಳಲ್ಲಿ ಇದು ಅವರನ್ನು ಕಾಡುತ್ತಿತ್ತು. ಗಾಂಧಿ ಹಾಗೆ ಮಾಡಬೇಕಿತ್ತು – ಹೀಗೆ ಮಾಡಬೇಕಿತ್ತು – ಹಾಗೆ ಮಾಡಬಾರದಿತ್ತು ಎಂಬಂತಹ ನಿರ್ದೇಶನಗಳನ್ನು ಏನೂ ಸಾಧಿಸಲಾಗದವರು ಕೊಡುತ್ತಲೇ ಇರುತ್ತಾರೆ. ಗಾಂಧಿಯ ತಲ್ಲಣಗಳೇನಾಗಿದ್ದುವೆಂದು ತಿಳಿಯಬೇಕೆ? ಇಲ್ಲಿ ಓದಿನೋಡಿ.

ಇಂದಿರಾ ಕುಮಾರಿ

ಸೆಪ್ಟೆಂಬರ್ ೨೦೧೨ **ಹೊಸತು, ಮಾಸಿಕ**

ಗಾಂಧಿ ಬದುಕಿಗೊಡ್ಡಿದ ವಾಸ್ತವದ ಅಗ್ನಿದಿವ್ಯ

ತಾನು ಜೀವಂತವಾಗಿದ್ದಾಗಲೇ ಯುಗಪುರುಷ, ಮಹಾತ್ಮಾ, ಮಹಾಮಾನವ ಎಂದೆಲ್ಲ ಕೀರ್ತಿತರಾಗಿ ಜನರ ಪ್ರೀತಿ ಗೌರವಗಳಿಗೆ ಅತ್ಯಂತ ಅರ್ಹವಾಗಿಯೇ ಪಾತ್ರರಾಗಿ, ದಂತ ಕತೆಯಾಗಿಬಿಟ್ಟಿದ್ದ ಗಾಂಧಿ, ಈ ಜಗತ್ತು ಕಂಡ ಒಬ್ಬ ಅತ್ಯಪೂರ್ವ ವ್ಯಕ್ತಿ. ತಾನು ಬದುಕಿದ್ದಷ್ಟು ಕಾಲವೂ, ಪ್ರತಿಕ್ಷಣ ತನ್ನನ್ನು ತಾನು ಪರೀಕ್ಷೆಗೊಳಪಡಿಸಿಕೊಳ್ಳುತ್ತಲೇ ತನ್ನನ್ನು ಸುತ್ತುವರಿದಿದ್ದ ಜನತೆಯ ಸಂಕಷ್ಟಗಳಿಗೆ, ಸಮಸ್ಯೆಗಳಿಗೆ ಅತ್ಯಂತ ತೀವ್ರವಾಗಿ ಸ್ಪಂದಿಸುತ್ತಿದ್ದ ಗಾಂಧಿಯವರ ವ್ಯಕ್ತಿತ್ವ ಮೇಲ್ನೋಟಕ್ಕೆ ತೋರುವಷ್ಟು ಸರಳವಲ್ಲ, ಬದಲಿಗೆ ಅತ್ಯಂತ ಸಂಕೀರ್ಣ. ಆಳವಾದ ಧಾರ್ಮಿಕ ಮನೋಭಾವ, ರಾಜಕೀಯ ಕೌಶಲ್ಯ, ಕಟು ವ್ಯಾವಹಾರಿಕತೆ, ಸಾಮಾಜಿಕ ಸಮಸ್ಯೆಯ ಒಳಹೊಕ್ಕು ಅದನ್ನು ವಿಶ್ಲೇಷಿಸಿ ನೋಡುವ ಸಮಾಜ ವಿಜ್ಞಾನಿಯ ಹರಿತ ಬುದ್ಧಿ, ವೃತ್ತಿನಿರತ ಪತ್ರಕರ್ತನ ನಯ ನಾಜೂಕುಗಳು, ಮಹಾನ್ ಜನ ಸಮುದಾಯವನ್ನು ಮುನ್ನಡೆಸುವ ನಾಯಕತ್ವದ ಕೆಚ್ಚು, ಎಂಥ ಸನ್ನಿವೇಶದಲ್ಲೂ ಮನಸ್ಸಿನ ಸಮತೂಕ ಕಳೆದುಕೊಳ್ಳದ ಸಂಯಮ – ಹೋರಾಟಗಾರನ ಅಸೀಮ ಧೈರ್ಯ, ಸಾಹಸ ಇವೆಲ್ಲವೂ ಮೇಳೈಸಿದ್ದ ಅಪ್ಪಟ ಮನುಷ್ಯ. ಮಗುವಿನ ಮುಗ್ಧತೆಯ ಜೊತೆ ಜೊತೆಗೇ, ತನ್ನ ತತ್ವ ಸಿದ್ಧಾಂತಗಳಿಗೆ, ಕಟ್ಟುಬೀಳುವ ಬದ್ಧತೆ, ಹಠಮಾರಿತನ ಅವರದಾಗಿತ್ತು. ಜನಸಮುದಾಯದ, ನಾಡಿನ ಮಿಡಿತವನ್ನು ಅವರಷ್ಟು ಚೆನ್ನಾಗಿ ತಿಳಿದಿದ್ದವರು ಹೆಚ್ಚಿರಲಿಲ್ಲ. ಅಪ್ಪಟ ಪ್ರೀತಿ ತುಂಬಿದ; ವಂಚನೆ, ಠಕ್ಕುತನ, ಕಾಪಟ್ಯಗಳಿಲ್ಲದ ಪ್ರಾಮಾಣಿಕತೆಯ ಪ್ರತಿಮೂರ್ತಿ ಎನಿಸಿದ ಗಾಂಧಿ, ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ಕಂಡುಕೊಂಡ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಗಳೆಂಬ ಎರಡು ದಿವ್ಯಾಸ್ತ್ರಗಳಿಗೆ, ಭಾರತದ ಸ್ವಾತಂತ್ರ್ಯ ಚಳುವಳಿಯ

ಸುದೀರ್ಘ ಹೋರಾಟವನ್ನು ಪ್ರಯೋಗ ಭೂಮಿಯನ್ನಾಗಿ ಮಾಡಿಕೊಂಡು, ಈ ನಾಡಿನ ಮಣ್ಣಿನ ಮೂರ್ತಿಗಳಲ್ಲಿ ಜೀವಸಂಚಾರವಾಗುವಂತೆ ಮಾಡಿದ್ದು ಈಗ ಇತಿಹಾಸ.

ಇದುವರೆಗೆ ಗಾಂಧಿಯವರನ್ನು ಕುರಿತ ಸಾಹಿತ್ಯ ಬಹುಶಃ ಒಂದು ಭರ್ತಿ ಲಾರಿಗಿಂತಲೂ ಹೆಚ್ಚು ಬಂದಿದೆ. ಎರಿಕ್ ಫ್ರಾಮ್, ರೋಮನ್ ರೋಲಾ ಅವರಂಥ ಖ್ಯಾತಿವಂತರಿಂದ ಹಿಡಿದು ಸಾಮಾನ್ಯ ಲೇಖಕರವರೆಗೆ ಗಾಂಧಿಯವರ ಬದುಕನ್ನು, ಅವರ ವ್ಯಕ್ತಿತ್ವವನ್ನು ಅರ್ಥೈಸುವ, ವಿಶ್ಲೇಷಿಸುವ, ಬೆಲೆಕಟ್ಟುವ ಪ್ರಯತ್ನಗಳು ನಡೆದಿವೆ; ಇಂದಿಗೂ ನಡೆಯುತ್ತಲೇ ಇವೆ. ಇಷ್ಟಾದರೂ ಗಾಂಧಿಯ ವ್ಯಕ್ತಿತ್ವ ಯಾರ ಅಳತೆಗೂ ಅಷ್ಟು ಸುಲಭವಾಗಿ ಸಿಕ್ಕಿಬಿಡುವಂಥದಲ್ಲವೇ ಅಲ್ಲ. ಇಂಥ ಕ್ರಿಯಾಶೀಲವೂ, ಸಂಕೀರ್ಣವೂ ಆದ ಗಾಂಧಿಯವರ ವ್ಯಕ್ತಿತ್ವವನ್ನು ಅದರ ಎಲ್ಲ ನಿಜದಲ್ಲಿ ಹಿಡಿಯಲು ಮಾಡಿದ ಒಂದು ಪ್ರಾಮಾಣಿಕ ಪ್ರಯತ್ನವೇ ರಾಗಂ ಅವರ 'ಗಾಂಧಿ : ಅಂತಿಮ ದಿನಗಳು' ಎಂಬ ಈ ಪುಸ್ತಕ.

ಈ ಸೂರ್ಯಮಂಡಲದ ಕೆಳಗಿನ ಎಲ್ಲ ವಸ್ತು ವಿಚಾರಗಳ ಬಗೆಗೂ ತನ್ನ ಚಿಂತನೆಗಳನ್ನು ಮಾಡಿರುವ, ತನ್ನ ಬದುಕನ್ನೇ 'ಸತ್ಯ'ದ ಪ್ರಯೋಗ ಭೂಮಿ ಎಂದು ತಿಳಿದಿದ್ದ 'ಗಾಂಧಿ' ಎಂಬ ವ್ಯಕ್ತಿ ಭಾವುಕತೆಯ ಸೆಳೆತಕ್ಕೋ ಇಲ್ಲವೆ ಸಿನಿಕನ ವ್ಯಂಗ್ಯಕ್ಕೋ ಬಹು ಸುಲಭವಾಗಿ ಗುರಿಯಾಗಿಬಿಡಬಹುದಾದ ಸನ್ನಿವೇಶದಲ್ಲಿ ಅತ್ಯಂತ ಎಚ್ಚರಿಕೆಯಿಂದ ಆತನ ಕೊನೆಯ ದಿನಗಳ ಸಂದರ್ಭದ ಬದುಕಿನ ಸಂಕಥನದ ಮೂಲಕ, ರಾಜಶೇಖರ ಮಠಪತಿಯವರು ಗಾಂಧಿಯ ವ್ಯಕ್ತಿತ್ವವನ್ನು ಅಗ್ನಿದಿವ್ಯಕ್ಕೆ ಒಡ್ಡುವ ನಿಷ್ಠುರ ಕಾರ್ಯಕ್ಕೆ ಮುಂದಾಗಿದ್ದಾರೆ, ಗಾಂಧಿಯವರ ವ್ಯಕ್ತಿತ್ವವನ್ನಳೆಯಲು ಅಗತ್ಯವಾದ 'ಕಾಲದ ದೂರ'ದ ಅನುಕೂಲ ಮಠಪತಿಯವರಿಗಿದೆ. ಪ್ರಶಂಸೆಗಳ ಮಹಾಪೂರ ಮತ್ತು ಟೀಕಾಸ್ತ್ರಗಳ ಜಡಿಮಳೆ ಎಂಬ ಎರಡೂ ಅಲೆಗಳಿಂದ ಪಾರಾಗಿರುವುದೇ ಮಠಪತಿಯವರ ಬರವಣಿಗೆಯ ವಿಶೇಷತೆ.

ದೇಶ ವಿಭಜನೆಯ ದುರಂತಗಾಥೆಯ ವರ್ಣಪಟ್ಟಿಕೆಯ ಮೂಲಕ ಗಾಂಧಿಯವರ ವ್ಯಕ್ತಿತ್ವವನ್ನು ಹಾಯಿಸಿ ನೋಡುವ ಅರ್ಥಪೂರ್ಣವಾದ ಕಾರ್ಯ ಮಠಪತಿಯವರದು. ನಲವತ್ತೇಳರ ಭಾರತ ವಿಭಜನೆಯ ಹಿಂಸಾಕಾಂಡ ಮಾನವ ಚರಿತ್ರೆಯಲ್ಲೇ ಒಂದು ಕರಾಳ ಅಧ್ಯಾಯ, ಮಾನವನ ಸದ್ ವೃತ್ತಿಗಳನ್ನೆಲ್ಲ ನುಂಗಿ ನೀರ್ಕುಡಿದು, ಅವನೊಳಗಿನ ರಾಕ್ಷಸೀ ಪ್ರವೃತ್ತಿ ಮತ್ತು ಮೃಗೀಯತೆಗಳು ತಮ್ಮೆಲ್ಲ ಅಕರಾಳ ವಿಕರಾಳ ರೂಪದಲ್ಲಿ ವಿಜೃಂಭಿಸಿ ನಿಂತ ಸಂದರ್ಭ ಅದು. ಬದುಕಿನುದ್ದಕ್ಕೂ ತಾನು ಪ್ರತಿಪಾದಿಸುತ್ತ ಬಂದ ಹಿಂದೂ-ಮುಸ್ಲಿಂ ಮತೀಯ ಸೌಹಾರ್ದ, ಅಹಿಂಸೆಗಳು, ತಾನು ನಂಬಿಕೊಂಡು ಬಂದ ಮಾನವೀಯ ಮೌಲ್ಯಗಳು, ನೈತಿಕತೆ ಎಲ್ಲವೂ ನುಚ್ಚುನೂರಾಗಿ, ನಗೆಪಾಟಲಿಗೆ ಈಡಾಗಿ ಅತ್ಯಂತ ದುಃಖಿತ ವ್ಯಕ್ತಿಯಾಗಿ ಗಾಂಧಿ ನಿಂತ ಸಂದರ್ಭ ಅದು. ಅಂದು ಗಾಂಧಿ ಎದುರಿಸಿದ ಇಕ್ಕಟ್ಟುಗಳು, ಅನುಭವಿಸಿದ ನೋವು ನರಳಿಕೆಗಳು ಯಾರ ಊಹೆಗೂ ಮೀರಿದ್ದು. ಕೋಮು ದ್ವೇಷದ ದಳ್ಳುರಿಯನ್ನು ಹತ್ತಿಕ್ಕಲು, ತನ್ನ ಶಕ್ತಿ ಮೀರಿ ಜೀವವನ್ನೇ ಪಣವಿಟ್ಟು ಪ್ರಯತ್ನಿಸಿದಾಗ್ಯೂ

ಹತೋಟಿಗೆ ಬರದಿದ್ದಾಗ, ಗಾಂಧಿಗೆ ತನ್ನ ಬದುಕೇ ಅರ್ಥಹೀನ ಎನ್ನಿಸಿದ ಗಳಿಗೆಗಳನ್ನೆಲ್ಲ ಕಟ್ಟಿಕೊಡುವ ಮೂಲಕ, ಗಾಂಧಿಯನ್ನು ಒಬ್ಬ ನಿಜವಾದ ಮನುಷ್ಯನನ್ನಾಗಿ ನೋಡುವ ಪ್ರಯತ್ನವನ್ನು ಇಲ್ಲಿಯ ಪುಟಪುಟದಲ್ಲೂ ಮಠಪತಿಯವರು ಮಾಡಿದ್ದಾರೆ. "You should copy my virtues, not my errors'' ಎಂದು ಅನೇಕರಿಗೆ ಬರೆದ ಪತ್ರಗಳಲ್ಲಿ ಹೇಳಿದ್ದನ್ನು ದಾಖಲಿಸಿದ್ದಾರೆ. "ಮೂವತ್ತು ವರ್ಷಗಳಿಂದ ನಾವು ನಡೆಯಿಸಿಕೊಂಡು ಬಂದ ಈ ಹಿಂಸೆಯ ವಿರುದ್ಧದ ಹೋರಾಟ ಹೆಸರಿಗೆ ಮಾತ್ರ ಅಹಿಂಸಾತ್ಮಕ ಚಳುವಳಿಯಾಗಿತ್ತು. ನಿಜವಾದ ಅರ್ಥದಲ್ಲಿ ಅದು ನಮ್ಮ ಎದೆಗಳ ಕದಗಳನ್ನು ತೆರೆದೇ ಇಲ್ಲ. ಅಂತೆಯೇ ಅದು ದೇಶ ವಿಭಜನೆ, ಹಿಂದೂ–ಮುಸ್ಲಿಂ ಕೊಲೆಗಳಲ್ಲಿ ಅಭಿವ್ಯಕ್ತಗೊಂಡಿತು" ಎಂಬ ಅವರ ಪತ್ರದ ಸಾಲುಗಳು ಗಾಂಧಿಗೆ ಭ್ರಮನಿರಸನವಾಗಿರುವುದನ್ನು ಕಾಣಿಸುತ್ತದೆ. ಮಠಪತಿಯವರ ಈ ಟಿಪ್ಪಣಿ ಅದನ್ನು ಸರಿಯಾಗಿಯೇ ಬೆಲೆಕಟ್ಟಿದೆ. "ಬದುಕೆಲ್ಲವೂ ಮಹಾತ್ಮನಾಗಬೇಕೆನ್ನುವ ಮಹಾನ್ ಕನಸು ಕಂಡ ಗಾಂಧಿ, ಇತ್ತ ಸಾಮಾನ್ಯನಂತೆ ಸಂಕೀರ್ಣವೂ, ಅತ್ತ ಸಂತನಂತೆ ನಿರಾಳವೂ ಆಗದೆ ಒದ್ದಾಡುವುದನ್ನು ಕಾಣುತ್ತೇವೆ. (ಪುಟ–೨೭)

"ಗಾಂಧಿಯ ಕೊನೆಯ ದಿನಗಳ ಬದುಕು ಉರಿಯ ಚಪ್ಪರದ ಕನಸಷ್ಟೇ" ಎಂಬ ಅವರ ಮಾತು ಕೂಡ ಅವರ ಆಗಿನ ವಾಸ್ತವದ ಚಿತ್ರಣವೇ ಆಗಿದೆ. ಗಾಂಧಿಯ ದ್ವಂದ್ವಗಳನ್ನೆಲ್ಲಾ ಈ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ – ಒಂದೆಡೆ ಆತ, ಮತ್ತೊಂದೆಡೆ ಆತನ ಭಗವದ್ಗೀತೆ; ಒಂದೆಡೆ ಹಿಂದೂಗಳು, ಮತ್ತೊಂದೆಡೆ ಆತನನ್ನು ನಂಬದ ಮುಸ್ಲಿಮರು; ಒಂದೆಡೆ ತಾನೇ ಎಲ್ಲವನ್ನೂ ಬಗೆಹರಿಸಬೇಕೆಂಬ ಹಠ, ಮತ್ತೊಂದೆಡೆ ಕೈಚೆಲ್ಲಿ ದೇವರಿಗೋ ದೈವಕ್ಕೋ ಮೊರೆಹೋಗುವ ಸ್ಥಿತಿ; ಒಂದೆಡೆ ತಾನು ದೇವರನ್ನು ಕಂಡೇಬಿಟ್ಟ ಖುಷಿ, ಮತ್ತೊಂದೆಡೆ ದೇವರೇಕೆ ಹೀಗೆ ಎಂದು ಕೈಚೆಲ್ಲುವ ಗಾಂಧಿ" (ಪುಟ–೭೪). ಈ ಸಂದರ್ಭದಲ್ಲಿ ನೆಹರೂ, ಪಟೇಲ್ ಮುಂತಾದ ತನ್ನ ಶಿಷ್ಯರಿಂದಲೇ ಅವಜ್ಞೆಗೊಳಗಾದ ಭಾವವನ್ನೂ ಅನುಭವಿಸುತ್ತಾರೆ. ಇಷ್ಟಾಗಿಯೂ ಗಾಂಧಿಯ ಅಹಿಂಸಾತತ್ವದ ಪ್ರತೀಕವಾದ ಉಪವಾಸದಿಂದಲೇ ನೌಖಾಲಿ, ಕಲ್ಕತ್ತ, ದೆಹಲಿಗಳಲ್ಲಿ ಮಾರಣಹೋಮ ಹತೋಟಿಗೆ ಬಂದು ಶಾಂತಿ ನೆಲೆಸಲು ಸಾಧ್ಯವಾಗಿ ಮೌಂಟ್‌ಬ್ಯಾಟನ್‌ರಿಂದ One man brigade ಎಂಬ ಪ್ರಶಂಸೆಗೂ ಭಾಜನರಾದರು.

ದೇವರನ್ನು ಲೌಕಿಕ ಬದುಕಿನಿಂದ ಎಂದೂ ಬೇರೆ ಎಂದು ಭಾವಿಸದ ಗಾಂಧಿಯ ದೈವ ಶ್ರದ್ಧೆ, ಆಧ್ಯಾತ್ಮ ಮತ್ತು ಲೌಕಿಕತೆಗಳ ಮಧ್ಯೆ ವ್ಯತ್ಯಾಸದ ಗೆರೆ ಎಳೆದುಕೊಂಡ ನಮಗೆ ಒಂದು ಒಗಟಾಗಿ ಕಂಡರೆ ಆಶ್ಚರ್ಯವಿಲ್ಲ ಎಂಬುದನ್ನು ಮಠಪತಿಯವರು ತಮ್ಮ ಈ ಅಂತಿಮ ದಿನಗಳ ಗಾಥೆಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ.

ಗಾಂಧಿಯವರ ವ್ಯಕ್ತಿತ್ವದ ರಂಧ್ರಗಳನ್ನು, ಬಿರುಕುಗಳನ್ನು ಕಾಣಿಸುವಲ್ಲಿಯೂ ಈ ಬರಹ ಹಿಂದೆ ಬಿದ್ದಿಲ್ಲ. ಆದರೆ ಅದೇ ಸಮಯಕ್ಕೆ ಮಹದೇವ ದೇಸಾಯಿ ಮತ್ತು ಕಸ್ತೂರ್ ಬಾ ಅವರ ಸಾವಿನ ಸಂದರ್ಭಗಳಲ್ಲಿ ಗಾಂಧಿಯವರ ನಡೆಯನ್ನು ದಾಖಲಿಸುವ ಮೂಲಕ ಮನುಷ್ಯ ಸಂಬಂಧಗಳ ಶೋಧದ ಅನಾವರಣ ಕೂಡ ಮಾಡುತ್ತಾರೆ. ಒಂದು ಅನುಮಾನದ ಎಳೆ ಇಟ್ಟುಕೊಂಡೇ ಗಾಂಧಿಯವರ ವ್ಯಕ್ತಿತ್ವದ ಶೋಧನೆಗೆ ತೊಡಗಿಕೊಂಡಿರುವ ರಾಜಶೇಖರ ಮಠಪತಿಯವರ ಈ ಬರಹ ಏಕಕಾಲಕ್ಕೆ ಗಾಂಧಿಯವರನ್ನು ಶೋಧಿಸುವುದು ಹಾಗೂ ಗಾಂಧಿ ತನ್ನನ್ನು ತಾನೆ ಶೋಧಿಸಿಕೊಳ್ಳುತ್ತ ಸಾಗುವುದೂ ಆಗಿರುವ ಕಾರಣದಿಂದಲೇ ಆಪ್ಯಾಯಮಾನವಾಗುತ್ತದೆ.

ಪುಸ್ತಕದ ವಿಷಯ ಗಾಂಧಿಯವರ ಬದುಕಿನ ಕೊನೆಯ ದಿನಗಳಿಗೆ ಸಂಬಂಧಿಸಿದ್ದೇ ಆದರೂ, ಗಾಂಧಿಯವರ ವ್ಯಕ್ತಿತ್ವವನ್ನು ಇಡಿಯಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಸಂಕಷ್ಟ, ಸಮಸ್ಯೆಗಳ ಮಧ್ಯದಲ್ಲೇ ಬೇಯುತ್ತಿದ್ದರೂ ಗಾಂಧಿಯ ದಿನಚರಿಯಲ್ಲಿ ೩.೩೦ಕ್ಕೆ ಏಳುವುದು, ನೂಲು ತೆಗೆಯುವುದು, ಬೆಳಗಿನ ವಾಕಿಂಗ್, ಪತ್ರಗಳಿಗೆ ಉತ್ತರಿಸುವುದು, ಪ್ರಕೃತಿ ಚಿಕಿತ್ಸೆಯ ಭಾಗವಾಗಿ ಮಣ್ಣಿನ ಸ್ನಾನದಲ್ಲಿ ತೊಡಗಿಕೊಂಡಿದ್ದರೂ ಅದರ ಮಧ್ಯದಲ್ಲೇ 'ಹರಿಜನ' ಪತ್ರಿಕೆಗೆ ಲೇಖನ ಹೇಳಿ ಬರೆಸುವುದು, ಮುಖಂಡರೊಂದಿಗೆ ಭೇಟಿ, ಸಂಜೆಯ ಪ್ರಾರ್ಥನಾ ಸಭೆ – ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಎಂದಿನಂತೆ ನಡೆಯುತ್ತಿದ್ದುದು, ನಾವು ನಿರ್ಲಕ್ಷಿಸಬಹುದಾದ ಸಣ್ಣ ಸಂಗತಿಗಳ ಬಗೆಗೂ ಆತ ಅದೆಷ್ಟು ಸಂವೇದನಾಶೀಲರಾಗಿದ್ದರೆಂಬುದಕ್ಕೆ ತನ್ನ ಮೊಮ್ಮಗಳು ಸೀತಾಳಿಗೆ ಪತ್ರ ಬರೆಯುತ್ತಿದ್ದುದು – ತಾನು ಪಾಲಿಸದ; ಪ್ರಯೋಗಕ್ಕೊಳಗಾಗದ ಯಾವ ವಿಚಾರವನ್ನೂ ಇನ್ನೊಬ್ಬರ ಮೇಲೆ ಹೇರಲಿಲ್ಲ ಎಂಬುದನ್ನೆಲ್ಲ ದಾಖಲಿಸುವ ಮೂಲಕ ಗಾಂಧಿಯವರ ವ್ಯಕ್ತಿತ್ವದ ಮಹೊನ್ನತೆಯನ್ನು, ಸಮಗ್ರತೆಯನ್ನು ಮನವರಿಕೆ ಮಾಡಿಕೊಡುವಲ್ಲಿ ರಾಜಶೇಖರ ಮಠಪತಿಯವರ ಪರಿಶ್ರಮವಷ್ಟೇ ಅಲ್ಲ ಅವರ ಬರವಣಿಗೆಯ ಪರಿಣತಿಯೂ ವ್ಯಕ್ತವಾಗಿದೆ.

ಪುಸ್ತಕ ಓದಲು ಕೈಗೆತ್ತಿಕೊಂಡರೆ, ಕೆಳಗಿಡಲು ಮನಸ್ಸೇ ಬಾರದಂತೆ ರೋಚಕವಾಗಿ ಸಾಗುವ ಈ ಬರವಣಿಗೆ, ನಾಟಕದ ದೃಶ್ಯಗಳಂತೆ ಒಂದಾದ ಮೇಲೊಂದು ತೆರೆದುಕೊಳ್ಳುತ್ತಾ ಹೋಗಿ, ಭಾರತ ಇತಿಹಾಸದ ಆ ದುರಂತ ಅಧ್ಯಾಯದ ಜೊತೆಜೊತೆಯಲ್ಲಿ ಮಹಾ ಮಾನವನೊಬ್ಬನ ವ್ಯಕ್ತಿತ್ವದ ಪದರುಗಳನ್ನೂ ಅನಾವರಣಗೊಳಿಸುವಲ್ಲಿ ಸಾರ್ಥಕವಾಗಿದೆ.

ಜುಲೈ ೨೨, ೨೦೧೨

ಆರ್. ಲಕ್ಷ್ಮೀನಾರಾಯಣ
ಈ ಭಾನುವಾರ, ಸಾಪ್ತಾಹಿಕ

‘ಗಾಂಧಿವಾದವನ್ನಲ್ಲ, ಗಾಂಧಿಯನ್ನು ಓದಿ....’ ಎನ್ನುತ್ತಾ ಸರಳ ಮನುಷ್ಯ ಗಾಂಧಿಯಂತಹ ಮಹಾತ್ಮನ ಅಂತಿಮ ದಿನಗಳನ್ನು ಅಕ್ಷರ ರೂಪಕ್ಕಿಳಿಸಿದ್ದಾರೆ ಡಾ.ರಾಜಶೇಖರ ಮಠಪತಿ (ರಾಗಂ).

ಸ್ವಾತಂತ್ರ್ಯ ಹೋರಾಟದ ನೇತಾರನಾಗಿ, ರಾಜಕಾರಣಿಯಾಗಿ, ಗಾಂಧಿಯನ್ನು ಚಿತ್ರಿಸಿದ ಅಪಾರ ಸಾಹಿತ್ಯದೊಂದಿಗೆ, ಅವರನ್ನು ಧರ್ಮನಿಷ್ಠ, ಸಾತ್ವಿಕ, ಸಂತನಾಗಿ ಕಾಣುವ ಹಲವು ಕೃತಿಗಳು ಸಾಹಿತ್ಯದಲ್ಲಿ ದೊರಕುತ್ತವೆ. ಕನ್ನಡದಲ್ಲಿಯೂ ಒಂದಷ್ಟು ಇವೆ. ಆದರೆ ಈ ಎರಡೂ ನೆಲೆಗಳನ್ನು ಸಮನ್ವಯಿಸಿಕೊಳ್ಳುವ ಮಹಾತ್ಮನನ್ನು ಅಪ್ಪಟ ಮಾನವನನ್ನಾಗಿ ಚಿತ್ರಿಸುವ ಕೃತಿಗಳು ಅಪರೂಪ. ಮೊದಲಿನ ಎರಡು ನೆಲೆಗಳು ಬೌದ್ಧಿಕ ಜಿಜ್ಞಾಸೆಯಿಂದ, ಸಿದ್ಧಾಂತಗಳ ಭಿತ್ತಿಯಲ್ಲಿ ರೂಪುಗೊಳ್ಳುತ್ತವೆ. ಅವುಗಳ ಓದು ನಮ್ಮ ಬುದ್ಧಿಯನ್ನು ಪ್ರವೇಶಿಸುತ್ತವೆ, ಅಷ್ಟೇ. ನಮ್ಮ ಗಾಂಧಿಯನ್ನು ನಮ್ಮವನ್ನಾಗಿಸುವುದು, ಹೃದಯವೇ ಮುಖ್ಯವಾದ ಬರವಣಿಗೆ. ಅಂತಹ ಬರವಣಿಗೆ ಡಾ.ರಾಜಶೇಖರ ಮಠಪತಿಯವರದು. ಆದ್ದರಿಂದಲೇ ‘ಗಾಂಧಿ : ಅಂತಿಮ ದಿನಗಳು’ ಕನ್ನಡದ ಮಟ್ಟಿಗೆ ಅತ್ಯಂತ ಮಹತ್ವದ ಕೃತಿ.

‘ಗಾಂಧಿ ಎಂಬ ಬೆಳಕಿನಲ್ಲಿ ಎಷ್ಟೊಂದು ಕತ್ತಲೆ’ ಎಂಬ ಅಧ್ಯಾಯದಲ್ಲಿ ಲೇಖಕರು ಹೀಗೆ ಹೇಳುತ್ತಾರೆ; ‘ವ್ಯಕ್ತಿ ಆರಾಧನೆ, ಎಲ್ಲೋ ನಮ್ಮನ್ನು ಗಾಂಧಿಯಿಂದ ದೂರ ಒಯ್ದು ನಿಲ್ಲಿಸಿಬಿಡುತ್ತದೆ. ಪ್ರಪಂಚದ ಎಲ್ಲಾ ಸಾಮಾಜಿಕ ಸುಧಾರಕರು ಈ ಕಾರಣಕ್ಕಾಗಿಯೇ ಅಲ್ಲವೇ ದೇವರಾಗಿರುವುದು? ನಮ್ಮ ಗಾಂಧಿ ಅವನ ಆಶಯಕ್ಕೂ ವಿರುದ್ಧವಾಗಿ ಮಹಾತ್ಮನಾಗುವುದು ಅವನ ಆರಾಧಕರಿಂದಲೇ. ಇರುವ ಒಬ್ಬ ಗಾಂಧಿಗೆ ಕೋಟಿ ಕೋಟಿ ಗಾಂಧಿಗಳನ್ನು ಕಲ್ಪಿಸಿಕೊಂಡು, ತಮ್ಮ ಹೃದಯಗಳಲ್ಲಿ ಇಟ್ಟುಕೊಂಡು ಪೂಜಿಸಿದರಲ್ಲಾ ಇದನ್ನು ಏನೆನ್ನಬೇಕು? ಈ ಕಾಲದ ಅಂತರದಲ್ಲಿ ಕುಳಿತುಕೊಂಡು ನಾವೀಗ ಪ್ರಶ್ನಿಸಿಕೊಳ್ಳಬೇಕಿದೆ. ಗಾಂಧಿ ಒಬ್ಬ ಮನುಷ್ಯ ತಾನೇ? ಆದರೆ ಎಲ್ಲಾ ಆರೋಪ ಅಪವಾದಗಳಿಂದ ಹೊರತಾದ ಗಾಂಧಿ ನಮ್ಮವನಾಗಲು ಸಾಧ್ಯವೇ? ದೇವರನ್ನೂ ತಮ್ಮ ಅಳತೆಯ ಲೆಕ್ಕಾಚಾರದಲ್ಲಿ ನೋಡುವ ಮನುಷ್ಯನಿಗೆ ಗಾಂಧಿಯ ಈ ಪರಿಯ ಆರಾಧನೆ ಸರಿ ಕಾಣಿಸಲಿಲ್ಲವೇನೋ? ಏನೇ ಇರಲಿ, ಗಾಂಧಿ ಎಂಬ ಈ ಬೆಳಕಿನಲ್ಲಿ ಎಷ್ಟೊಂದು ಕತ್ತಲೆಯಿದೆ. ಇಪ್ಪತ್ತು ಲಕ್ಷ ಹಿಂದೂಗಳ ಮಾರಣಹೋಮಕ್ಕೆ ಈ ಗಾಂಧಿಯೇ ಕಾರಣ ಎನ್ನುವ ನಾಥೂರಾಮ ಗೋಡ್ಸೆಯ ಅಪವಾದಕ್ಕೆ ಯಾವ ಮನ್ನಣೆಯಿದೆ?’ –ಹೀಗೆ ಲೇಖಕರು ಗಾಂಧಿಯನ್ನು ದೇವರಿಗಿಂತಲೂ ಹಿರಿಮೆಯಲ್ಲಿ ಬಿಂಬಿತವಾಗುವುದನ್ನು ಪ್ರಶ್ನಿಸುತ್ತಾರೆ. ‘ಮಹಾತ್ಮ’ ಗಾಂಧಿಯನ್ನು ಸರಳ ಗಾಂಧಿಯನ್ನಾಗಿ ನೋಡಲಿಚ್ಚಿಸುವ ಲೇಖಕರ ಮನೋಗುಣ, ತಾತ್ವಿಕ ವಿವರಣೆ ಇಷ್ಟವಾಗುತ್ತದೆ.

ಕೃತಿಯ ಮುನ್ನುಡಿಯಲ್ಲಿ ವಿಮರ್ಶಕ ಜಿ.ಎಸ್.ಆಮೂರ ಹೀಗೆ ಹೇಳುತ್ತಾರೆ: ‘ಇತಿಹಾಸದಲ್ಲಿ ಗಾಂಧಿಯ ಹೆಸರು ರಾಷ್ಟ್ರಪಿತನೆಂದೇ ದಾಖಲಾಗಿದೆ. ಆದರೆ ಅವನು ತನ್ನ

ಕೊನೆಯ ದಿನಗಳನ್ನು ದುಃಖದಲ್ಲಿಯೇ ಕಳೆದ. ಬದುಕಿನುದ್ದಕ್ಕೂ ಅವನು ನಂಬಿಕೊಂಡು ಬಂದಿದ್ದ ಆದರ್ಶಗಳು ತನ್ನೆದುರೇ ನಷ್ಟವಾಗುತ್ತಿದ್ದುದನ್ನು ನೋಡುವ ದೌರ್ಭಾಗ್ಯ ಅವನದಾಯಿತು. ಅವನ ಕಣ್ಣೆದುರೇ ದೇಶದ ವಿಭಜನೆಯಾಯಿತು. ತನ್ನ ಸರ್ವಸ್ವವನ್ನೂ ಪಣಕ್ಕಿಟ್ಟು ಸಾಧಿಸಲು ಹೋರಾಡಿದ ಹಿಂದೂ-ಮುಸ್ಲಿಂ ಐಕ್ಯತೆ ಕನಸಿನಂತೆ ಕರಗಿಹೋಯಿತು. ಅಹಿಂಸೆಯಲ್ಲೇ ಸತ್ಯವನ್ನು ಕಂಡ ದಾರ್ಶನಿಕನನ್ನು, ಹಿಂದೆಂದೂ ನೋಡದ ಹಿಂಸೆಯ ಕೃತ್ಯಗಳು ಕಂಗೆಡಿಸಿದವು. ಕಲ್ಕತ್ತಾ, ನೌಖಾಲಿ, ದೆಹಲಿ.... ಹೀಗೆ ಅಲೆಮಾರಿಯಾಗಿ ಜನರಿಗೆ ಸಾಂತ್ವನ ತರಲು ಗಾಂಧಿ ಹೋರಾಡಬೇಕಾಯಿತು. 'ಬಾಪೂ' ಎಂಬ ಹೆಸರಿನಿಂದ ಜನಮಾನಸದಲ್ಲಿ ನೆಲೆಯೂರಿದವ ಈಗ ಏಕಾಕಿಯಾದ. ಈ ದುರಂತ ನಾಟಕವನ್ನು ದೃಶ್ಯ, ದೃಶ್ಯವಾಗಿ ನಮ್ಮೆದುರು ರಾಗಂ ತೆರೆದಿಟ್ಟಿದ್ದಾರೆ.'

-ಹೀಗೆ ಗಾಂಧಿಯನ್ನು ಮತ್ತೊಂದು ಮಗ್ಗುಲಿನಲ್ಲಿ ನೋಡುವ ರಾಜಶೇಖರ ಮಠಪತಿ, ಮಹಾತ್ಮನ ಒಡಲಾಳದ ದುರಂತದ ಸಾಲುಗಳನ್ನು, ಅವರ ಅಂತಿಮ ದಿನಗಳ ಸೋಲುಗಳನ್ನು ಅಕ್ಷರರೂಪಕ್ಕಿಳಿಸಿದ್ದಾರೆ. ನಮಗೆ ನಿಜ ಅರ್ಥದಲ್ಲಿ ಬೇಕಿರುವುದು ಗಾಂಧಿವಾದವಲ್ಲ, ನಾವು ಒಳಹೊಕ್ಕು ತಿಳಿಯಬೇಕಾದ್ದು, ಅರಿಯಬೇಕಾದ್ದು ಸರಳ ಗಾಂಧಿಯನ್ನು ಎನ್ನುವ ಲೇಖಕರ ಮನೋಗುಣ ಆಪ್ತವಾಗುತ್ತದೆ. ಗಾಂಧಿ ಕುರಿತಂತೆ ಕನ್ನಡದಲ್ಲಿ ಈವರೆಗೆ ಬಂದು ಹೋದ ಹಲವು ಕೃತಿಗಳಿಗಿಂತ ಈ ಕೃತಿ ಹೆಚ್ಚು ಗಮನಸೆಳೆಯುತ್ತದೆ. ನಿಜ ಗಾಂಧಿಯನ್ನು ಕನ್ನಡ ಓದುಗರಿಗೆ ಚಿತ್ರಿಸಿಕೊಡುವಲ್ಲಿ ರಾಜಶೇಖರ ಮಠಪತಿ ಅವರ ಶ್ರಮ ಇಲ್ಲಿ ವ್ಯರ್ಥವಾಗಿಲ್ಲ.

ಆಗಸ್ಟ್ –೨೦೧೨ **ಕರವೇ ನಲ್ನುಡಿ**

'ಗಾಂಧಿ' ವರ್ಸಸ್ 'ಗಾಂಧಿ'

ಯಾವುದೇ ಒಂದು ಕೃತಿಯನ್ನು ಸಮಗ್ರವಾಗಿ ಓದದೇ ಸುಮ್ಮನೆ ಕಣ್ಣಾಡಿಸಿ ಅದನ್ನು ಕುರಿತು ಚರ್ಚಿಸುವುದು ತುಂಬಾ ಅಸಮಂಜಸವಾದ ಕ್ರಿಯೆ. ಬದಲಾಗಿ ನಾವದನ್ನು ಪ್ರಜ್ಞಾಪೂರ್ವಕವಾಗಿ ಓದಿ ಕೃತಿ ಕುರಿತು ಹೇಳಿದಾಗ ಮಾತ್ರ ಅದರೊಳಗಿನ ಸತ್ವವನ್ನು ಗಟ್ಟಿಯಾಗಿ ಇನ್ನೊಬ್ಬರಿಗೆ ಕಟ್ಟಿಕೊಡಲು ಸಾಧ್ಯ.

ತಲೆಮಾರುಗಳ ಲೆಕ್ಕದಲ್ಲಿ ನಾನು ರಾಜಶೇಖರ ಮಠಪತಿಯವರನ್ನು ಗಾಂಧಿ ಸಂತತಿಯ 'ಮರಿಮಗ' ಎಂದುಕೊಂಡೇ ಈ ಚರ್ಚೆಯನ್ನು ಪ್ರಾರಂಭಿಸುತ್ತೇನೆ. ಯಾಕೆಂದರೆ ಸ್ವತಃ ಮಠಪತಿಯವರೇ ತಮ್ಮ ಕೃತಿಯ ಮೊದಲಿಗೆ 'ನಾನು ಗಾಂಧಿಯ ಮರಿಮಗನ ತಲೆಮಾರಿನವನು' ಎಂದುಕೊಂಡೇ ಚರ್ಚೆಯನ್ನು ಪ್ರಾರಂಭಿಸುತ್ತಾರೆ. ನಾನು ಈ ಸಂಬಂಧಗಳ ಕುರಿತು ಚರ್ಚೆಯ ಕೊನೆಯಲ್ಲಿ ಪ್ರಸ್ತಾಪಿಸುತ್ತೇನೆ.

ಈವರೆಗೆ ಗಾಂಧಿಯ ಕುರಿತು, ಗಾಂಧಿಯ ಬದುಕನ್ನು ಕುರಿತು, ಬರಹಗಳ ಕುರಿತು, ಗಾಂಧಿಯ ವ್ಯಕ್ತಿತ್ವ ಮತ್ತು ಹೋರಾಟಗಳ ಕುರಿತು ಬಂದ ಸಾಕಷ್ಟು ಪುಸ್ತಕಗಳಲ್ಲಿ ಮಠಪತಿಯವರ 'ಗಾಂಧಿ : ಅಂತಿಮ ದಿನಗಳು' ಭಿನ್ನ. ಇದುವರೆಗೆ ಯಾವ ಪ್ರಮಾಣದಲ್ಲಿ ಗಾಂಧಿ ಕುರಿತು ಸಾಹಿತ್ಯ ಬಂದಿದೆಯೆಂದರೆ ವರ್ತಮಾನದ ನಮ್ಮ ಎಲ್ಲ ಚರ್ಚೆಗಳೂ ಹಳತು ಎನ್ನುವಷ್ಟು; ಹೊಸದಾಗಿ ಚರ್ಚೆ ಮಾಡಲು ಇನ್ನೇನಾದರೂ ಉಳಿದಿದೆಯೇ? ಎನ್ನುವುದು ದೊಡ್ಡ ಪ್ರಶ್ನೆ. ಇತಿಹಾಸ, ವರ್ತಮಾನದುದ್ದಕ್ಕೂ ಗಾಂಧಿ ಕುರಿತ ಮಾತುಗಳು, ಪುರಾಣ, ಕಥೆಗಳು ಸಾಕು ಸಾಕೆನ್ನುವಷ್ಟು ಜನಜನಿತವಾಗಿವೆ. ಈ ಎಲ್ಲದರ ಮಧ್ಯೆ ಹೊಸದಾಗಿ ಕೃತಿಕಾರ ಮತ್ತೆ ಯಾಕೆ ಈ ಗಾಂಧಿಯನ್ನು ಕೈಗೆತ್ತಿಕೊಂಡಿದ್ದಾನೆ ಎನ್ನುವುದು ಕುತೂಹಲದ ಸಂಗತಿಯಷ್ಟೇ ಅಲ್ಲ, ಅತ್ಯಂತ ಸವಾಲಿನ ಕೆಲಸವೂ ಕೂಡ ಹಾಗೂ ಸಮಕಾಲೀನ ಜಗತ್ತಿಗೆ ಈ ಗಾಂಧಿಯನ್ನು ಮತ್ತೆ ಹೇಗೆ ಬೆಸೆಯಬಹುದು ಎನ್ನುವ ಸಾಧ್ಯತೆಗೂ ಈ ಕೃತಿಯಲ್ಲಿ ಉತ್ತರ ದೊರೆಯುತ್ತದೆ.

ಈ ಕೃತಿಯನ್ನು ಇಡಿಯಾಗಿ ಓದಿದಾಗ ನನಗನಿಸಿದ್ದು ಮಠಪತಿಯವರು ಗಾಂಧಿಯನ್ನು ಗಾಂಧಿಯಾಗಿಯೇ ನೋಡಿದುದರ ಪ್ರಾಮಾಣಿಕ ಅಭಿವ್ಯಕ್ತಿ ಇದಾಗಿದೆ ಎನ್ನುವುದು. ಇದುವರೆಗೆ ಹಲವಾರು ಜನ ಗಾಂಧಿಯ ಬಗ್ಗೆ ಬರೆದ ಜೀವನ ಚರಿತ್ರೆಗಳಿಂದ ಹಿಡಿದು, ಗಾಂಧಿ ಕುರಿತು ಹಲವಾರು ರೂಪಗಳಲ್ಲಿ ಬಂದ ಪುಸ್ತಕಗಳಲ್ಲಿ ಗಾಂಧಿಯನ್ನು ಒಬ್ಬ ಮಹಾತ್ಮನನ್ನಾಗಿ, ರಾಷ್ಟ್ರಪಿತನನ್ನಾಗಿ ನೋಡಿದ ಕೃತಿಗಳೇ ಹೆಚ್ಚು. ಅಲ್ಲಲ್ಲಿ ಎಲ್ಲೋ ಕೆಲವು ಅಂಬೇಡ್ಕರ್, ಗೋಪಾಲ್ ಗೋಡ್ಸೆರಂಥವರು ಗಾಂಧಿಯ ಬಗೆಗೆ ವಿರೋಧಿ ನೆಲೆಗಟ್ಟಿನ ಮೇಲೆ ಬರೆದ ಪುಸ್ತಕಗಳೂ ಇವೆ.

ಆದರೆ ಕಾಲಾಂತರದಲ್ಲಿ ಗಾಂಧಿವಾದಿಗಳು ಗಾಂಧಿಯನ್ನು ಮನುಷ್ಯರಿಂದ ಬೇರ್ಪಡಿಸಿ ದೇವರನ್ನಾಗಿಯೇ ಮಾಡಿಬಿಟ್ಟರೇನೋ ಎನಿಸುವಂಥ ಸಾಹಿತ್ಯ ನಮಗೆ ಭಯ ಹುಟ್ಟಿಸುವಷ್ಟು ಪ್ರಮಾಣದಲ್ಲಿ ಪ್ರಕಟವಾಯಿತು. ಇದು ಗಾಂಧಿಗಷ್ಟೇ ಅಲ್ಲ, ಎಲ್ಲ ಮಹಾನ್ ವ್ಯಕ್ತಿಗಳ ಬದುಕಿನ ದುರ್ದೈವವೂ ಸಹ.

ನವೋದಯದ ನಂತರದ ಸಂದರ್ಭಗಳಲ್ಲಿ ನಮ್ಮ ವೈಚಾರಿಕತೆಯಲ್ಲಿ ದೊಡ್ಡ ಬದಲಾವಣೆಯಾಗುತ್ತಾ ಬಂತು. ಗಾಂಧಿ ವರ್ಸಸ್ ಗಾಂಧಿ ಎನ್ನುವ ವಿಭಿನ್ನ ಆಲೋಚನೆಯೊಂದು ತಲೆಯೆತ್ತಿತು. ಇಂದಿರಾಗಾಂಧಿ, ರಾಜೀವ್‌ಗಾಂಧಿ, ಸೋನಿಯಾ ಗಾಂಧಿಯ ರಾಜಕೀಯ ಸಂದರ್ಭಗಳಲ್ಲಿ ಚಂಪಾ ಅವರ 'ಗಾಂಧಿ ಸ್ಮರಣೆ' ಹೊರಬಂದು, ದಲಿತ ಬಂಡಾಯ ಚಳುವಳಿಗೆ ನಾಂದಿ ಹಾಡಿತು. ಕನ್ನಡದಲ್ಲಿ ೭೮ನೇ ಇಸ್ವಿಯಲ್ಲಿ ಬಂಡಾಯ ಸಾಹಿತ್ಯದ ಉಗಮವಾಗಿದ್ದು ೭೫ರ ಹೊತ್ತಿಗಾಗಲೇ ಚಂಪಾ ಅವರ 'ಗಾಂಧಿ ಸ್ಮರಣೆ' ಬಂದಾಗಿತ್ತು.

ಗಾಂಧಿ ವರ್ಸಸ್ ಗಾಂಧಿ ಎಂದರೆ ಮಹಾರಾಷ್ಟ್ರದ ನೆಲೆಯಲ್ಲಿ ಮಹಾತ್ಮ ಗಾಂಧಿ ಮತ್ತು ಆತನ ಮಗ ಹರಿಲಾಲ್ ಗಾಂಧಿ ಎನ್ನುವಂತಹ ಚಿತ್ರಣವಿದೆ. ವಿಚಿತ್ರವೆಂದರೆ ಗಾಂಧಿ ತತ್ವ, ವ್ಯಕ್ತಿ, ವಿಚಾರಗಳನ್ನು ವಿರೋಧಿಸುವ ಬಹಳಷ್ಟು ಸಾಹಿತ್ಯ ಮಹಾರಾಷ್ಟ್ರದಿಂದಲೇ ಬಂತು. ಆದರೆ, ಸದ್ಯದ ಒಂದು ಬೆಳವಣಿಗೆ, ನಿಜವಾಗಿಯೂ ಗಾಂಧಿ ವರ್ಸಸ್ ಗಾಂಧಿಯೆಂದರೆ, ಗಾಂಧಿಗೆ ವಿರುದ್ಧವಾಗಿ ಗಾಂಧಿವಾದ. ಗಾಂಧಿಗೆ ವಿರುದ್ಧವಾಗಿ ಗಾಂಧಿಯನ್ನೇ ನೋಡುವ ಸಂದರ್ಭ ಸೃಷ್ಟಿಯಾಗುತ್ತಿದೆ. ಇದಕ್ಕೆ ಜ್ವಲಂತ ಸಾಕ್ಷಿ ಮಠಪತಿಯವರ 'ಗಾಂಧಿ : ಅಂತಿಮ ದಿನಗಳು'. ಇದಕ್ಕೆ ಪೂರಕವೆನ್ನುವಂತೆ ತೆಲುಗಿನಲ್ಲಿ ಪತ್ರಕರ್ತ ಶಾಸ್ತ್ರಿಯವರು ಬರೆದ 'ಮನಮಹಾತ್ಮುಡು'.

ಗಾಂಧಿ ವರ್ಸಸ್ ಗಾಂಧಿಯೆಂದರೆ ಸ್ವತಃ ಗಾಂಧಿಯೇ. ಹರಿಲಾಲ್ ಅಥವಾ ಮತ್ತೊಬ್ಬ ಗಾಂಧಿಯಲ್ಲ. ಗಾಂಧಿ ವರ್ಸಸ್ ಗಾಂಧಿಯಾಗಿ ಮಠಪತಿಯವರು ಗಾಂಧಿಯನ್ನು ಎದುರು ಬದುರು ನಿಲ್ಲಿಸಿದ್ದಾರೆ. ಲೇಖಕ ತನ್ನೊಳಗೆಲ್ಲೊ ಬಂಡೆದ್ದುದನ್ನು ಅವರ ಬರವಣಿಗೆಯ ಧಾಟಿಯಲ್ಲಿ ಸ್ಪಷ್ಟವಾಗಿ ನೋಡಬಹುದು. ಇತಿಹಾಸದ ವ್ಯಕ್ತಿ ಗಾಂಧಿಯನ್ನು ಆತನ ಕಾಲಘಟ್ಟದ ಸಂಘರ್ಷಗಳೊಂದಿಗೆ ಮುಖಾಮುಖಿಯಾಗಿಸಿ ಮತ್ತೆ ಮನುಷ್ಯ ನೆಲೆಯಲ್ಲಿ ಶೋಧಿಸುವ ಪ್ರಯತ್ನವನ್ನು ತಮ್ಮ ಕೃತಿಯಲ್ಲಿ ಮಠಪತಿಯವರು ಮಾಡುತ್ತಾರೆ. ಪ್ರೊ.ಜಿ.ಎಸ್.ಆಮೂರರು ಹೇಳುವಂತೆ ಇದು ಗಾಂಧಿ ಬದುಕನ್ನು ದೃಶ್ಯಾತ್ಮಕವಾಗಿ ಹಿಡಿದಿಡುವ ಪ್ರಯತ್ನ. ಕನ್ನಡ ಸಾಹಿತ್ಯದ ಹಿರಿಯ ವಿಮರ್ಶಕರಲ್ಲೊಬ್ಬರಾದ ಪ್ರೊ.ಜಿ.ಎಸ್.ಆಮೂರರು ಈ ಕೃತಿಗೆ ಮುನ್ನುಡಿ ಬರೆದಿದ್ದು, ಅವರು ಈ ಪುಸ್ತಕವನ್ನು ಅಧ್ಯಾಯ ಸ್ವರೂಪಿ ಎನ್ನುವ ಬದಲಾಗಿ 'ದೃಶ್ಯ ಸಂಯೋಜನೆ' ಎಂದಿದ್ದಾರೆ. ಹೀಗಾಗಿ ೩೨ ಅಪರೂಪದ ದೃಶ್ಯಗಳನ್ನು ನಾವಿಲ್ಲಿ ನೋಡಬಹುದು.

ಪುಟ ೬೨ರಲ್ಲಿ ಲೇಖಕ ಮಠಪತಿ ಹೇಳುತ್ತಾರೆ, 'ಇದು ಗಾಂಧಿಯ ದುರ್ದೈವವೆನ್ನಬೇಕೆ? ಬದುಕಿನ ಸಂಧ್ಯಾಕಾಲವನ್ನೆಲ್ಲಾ ಜೀವನದುದ್ದಕ್ಕೂ ತಾನು ಪ್ರತಿಪಾದಿಸಿದ ಮೌಲ್ಯಗಳ ವಿರುದ್ಧ ಸಾಗಿಹೋಗಬೇಕಾದುದು ಅವನ ಪಾಲಿನ ದುರಂತ ನಾಟಕವೆನ್ನಬೇಕೆ? ಯಾವ ಬಿರ್ಲಾ ಯುದ್ಧ ಸಾಮಗ್ರಿಗಳನ್ನು ಪೂರೈಸಿದನೋ ಆತನ ಅರಮನೆಯ ಗಿಳಿಯಾಗಬೇಕಾಯಿತು ಗಾಂಧಿ. ಯಾವ ಸುಹ್ರಾವರ್ದಿ ಹಿಂದೂಗಳ ಮಾರಣ ಹೋಮವನ್ನೇ ಮಾಡಿದನೊ ಆತ ಬುರ್ರಾಬಜಾರ್‌ನಿಂದ ಒಂದು ಕೋಟಿ ಪರಿಹಾರ ಧನ ಎತ್ತಿಕೊಡುವಾಗ ಕೈಚಾಚಬೇಕಾಯಿತು ಗಾಂಧಿ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾಕ್ಕೆ ರಾಷ್ಟ್ರದ ಎಲ್ಲಾ ಹಿರಿಯರನ್ನು ಬದಿಗೊತ್ತಿ ಕೇವಲ ಹದಿನೆಂಟು ವರ್ಷದ ಹುಡುಗಿ ವಿಜಯಲಕ್ಷ್ಮಿ ಪಂಡಿತ್ ರಾಜಧೂತಳಾಗಿ ಆಯ್ಕೆಯಾಗುವಾಗ ನೆಹರು ಕುಟುಂಬದ ಋಣಭಾರಕ್ಕೆ ಭಾಗಿದ ಗಾಂಧಿ ಬಾಯಿ ಮುಚ್ಚಿಕೊಂಡಿರಬೇಕಾಯಿತು. ಯಾವ ಐಷಾರಾಮಿ ಬದುಕು, ಕುಡಿತ, ಧೂಮಪಾನವನ್ನು ಆತ ನಿಷೇಧಿಸಿದ್ದನೋ ಅವುಗಳ ಮಹಾನ್

ಆರಾಧಕನಾಗಿದ್ದ ಜಿನ್ನಾನೊಂದಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಚರ್ಚಿಸಬೇಕಾಯಿತು. ಇದೆಲ್ಲವೂ ಗಾಂಧಿ ಹಾಕಿಕೊಂಡ ಮಹಾತ್ಮ ಎನ್ನುವ ಮುಖವಾಡದ ಪ್ರತಿಫಲ ಎಂದು ಯುವಕರು ಹೀಗಳೆಯುವಷ್ಟು ಗಾಂಧಿ ಬದುಕಿರುವಾಗಲೇ ದ್ವಂದ್ವಕ್ಕೆ ಎಡೆಯಾಗಬೇಕಾಯಿತು.'

ಗಾಂಧಿಯನ್ನು ಬರೀ ಗಾಂಧಿಯನ್ನಾಗಿ ನೋಡಿ, ನಮ್ಮ ನಿಮ್ಮ ಹಾಗಿರುವ ಒಬ್ಬ ಸಾಮಾನ್ಯನನ್ನಾಗಿ ನೋಡಿ, 'ಗಾಂಧಿವಾದವನ್ನಲ್ಲ, ಗಾಂಧಿಯನ್ನು ಓದಿ', ಎನ್ನುವಂತಹ ಅದ್ಭುತ ಒಳನೋಟಗಳನ್ನು ಲೇಖಕರು ಅಲ್ಲಲ್ಲಿ ಕೊಟ್ಟಿದ್ದಾರೆ. ಈ ಪುಸ್ತಕದಲ್ಲಿನ ಒಂದೊಂದು ದೃಶ್ಯವೂ ಒಂದೊಂದು ಘಟಕವಾಗಿ ನಮ್ಮ ಕಣ್ಮುಂದೆ ನಿಲ್ಲುತ್ತವೆ. ಉದಾ: 'ಮಹಾದೇವನನ್ನು ಮರೆತ ಗಾಂಧಿ', 'ಬಾಣಲೆಯ ಪಕ್ಕ ನಿರಾಯುಧ ಬಾಣಸಿಗ', 'ಗಾಳಿಗಿಟ್ಟ ಸೊಡರು ಗಾಂಧಿ, 'ಲಡಕೆ ಲೇಂಗೆ ಪಾಕಿಸ್ತಾನ' ಹೀಗೆ ಅನೇಕ. ಪತ್ರಿಕೆಗಾಗಿಯೇ ಬರೆದಿರಲಿ, ಕೃತಿಯಾಗಿಯೇ ಕೊಟ್ಟಿರಲಿ, ಓದು ಬಲ್ಲ ಎಲ್ಲ ಸಾಮಾನ್ಯರು ಒಪ್ಪಿಕೊಳ್ಳುವ, ಓದಿಸಿಕೊಂಡು ಹೋಗುವ ಶೈಲಿ ಮಠಪತಿಯವರದಾಗಿದೆ. ಅವರ ಬರಹದಲ್ಲಿ ಸೂಕ್ಷ್ಮ ಸಂವೇದನೆಗಳ ಜೊತೆಗೆ ಕಥಾನಕ ಶೈಲಿ ಮತ್ತು ಭಾಷೆ ಮೈಗೂಡಿವೆ. ಅದಕ್ಕೆ ಪುಟ ೨೩೮ ಈ ಸಾಲುಗಳೇ ಸಾಕ್ಷಿ. 'ಸ್ವಾತಂತ್ರ್ಯ ಸಂದರ್ಭ ಎನ್ನುವುದು ಸಮಸ್ಯೆಗಳ ಭಾರತ. ಉಡುವ ಬಟ್ಟೆಯಿಂದ ಉಣ್ಣುವ ಊಟದವರೆಗೆ, ನಡೆವ ನೆಲದಿಂದ ನುಡಿವ ಭಾಷೆಯವರೆಗೆ ಎಲ್ಲವೂ ಸಮಸ್ಯೆಗಳೇ. ಅಂದಹಾಗೆ ಇನ್ನು ಕೆಲವೇ ದಿನಗಳಲ್ಲಿ ಹುಟ್ಟಲಿರುವ ಭಾರತ ಎಂಬ ಸ್ವತಂತ್ರ ದೇಶದಲ್ಲಿ ಯಾವುದು ಜನಸಂಪರ್ಕದ ಭಾಷೆಯಾಗಿರಬೇಕು ಎನ್ನುವುದು ಕೂಡ ಗಾಂಧಿಯ ಮುಂದಿದ್ದ ಅತಿ ದೊಡ್ಡ ಪ್ರಶ್ನೆ. ಅದಕ್ಕೆ ಅವನು ಕಂಡುಕೊಂಡ ಉತ್ತರ ಹಿಂದೂಸ್ತಾನಿ. ಹಿಂದಿ ಮತ್ತು ಉರ್ದುವಿನಿಂದ ಮೈದಾಳಿದ ಹಿಂದೂಸ್ತಾನಿ. ಸಂಸ್ಕೃತದಿಂದ ಪ್ರಭಾವಿತವಾದ ಹಿಂದಿಯನ್ನಾಗಲಿ ಅಥವಾ ಬರೀ ಪರ್ಷಿಯನ್ ಉರ್ದುವಿನಿಂದ ಪ್ರಭಾವಿತನಾದ ಹಿಂದಿಯನ್ನಾಗಲಿ ಗಾಂಧಿ ಸಮರ್ಥಿಸಲಿಲ್ಲ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ತನ್ನ ಕೊನೆಯ ದಿನಗಳ ಈ ಅವಧಿಯಲ್ಲಿ ಗಾಂಧಿ ದೇಶದುದ್ದಕ್ಕೂ ಮರ ನೆಡುವ ಅಭಿಯಾನ ಹಮ್ಮಿಕೊಳ್ಳಬೇಕೆಂದಿದ್ದ ಹಾಗೂ ಆ ಕುರಿತು ಹರಿಜನ ಪತ್ರಿಕೆಯಲ್ಲಿ ಚರ್ಚಿಸಿಯೂ ಇದ್ದ.' ಇದು ಇಡೀ ಪುಸ್ತಕದ ತಿರುಳು ಎನ್ನಬಹುದು.

ಗಾಂಧಿ ಬದುಕಿದ ಕಾಲಘಟ್ಟ ಹೇಗಿತ್ತು ಎನ್ನುವುದನ್ನು ಆ ಸಂದರ್ಭದ ಪತ್ರಿಕೆಗಳು, ಭಾಷಣಗಳು, ಗಾಂಧಿ ಇತರರಿಗೆ ಬರೆದ ಪತ್ರಗಳು, ಇವೆಲ್ಲವುಗಳಿಂದ ಎತ್ತಿಕೊಂಡ ವಿಪುಲವಾದ ಉಲ್ಲೇಖಗಳನ್ನು ಬಳಸಿಕೊಂಡು ಮಠಪತಿಯವರು ಸ್ವಾತಂತ್ರ್ಯ ಸಂದರ್ಭದ ಭಾರತವನ್ನು ಕಟ್ಟಿಕೊಟ್ಟಿದ್ದಾರೆ. ಒಂದರ್ಥದಲ್ಲಿ ಕನ್ನಡದಲ್ಲಿ ಈ ತರಹದ ಪ್ರಯೋಗಶೀಲ ಬರಹ ಬಂದಿಲ್ಲ.

ಉದಾಹರಣೆಗೆ ಕುವೆಂಪು ಅವರ ಕುರಿತು ಬರೆಯಲು ಹೊರಡುವುದಾದರೆ ಅವರೊಂದಿಗಿನ ನೇರ ಮುಖಾಮುಖಿ ಹೋಗಲಿ, ಅವರ ಪತ್ರಗಳು, ಪತ್ರಿಕಾ ಬರಹಗಳು, ಲೇಖನಗಳು, ಅವರ ಭಾಷಣಗಳು ಇದ್ಯಾವುದರ ಉಲ್ಲೇಖಗಳನ್ನು ನಮ್ಮ ಅನೇಕ ಬರಹಗಾರರ ಬರಹಗಳಲ್ಲಿ ಕಾಣಸಿಗುವುದಿಲ್ಲ. ಆದರೆ 'ಗಾಂಧಿ : ಅಂತಿಮ ದಿನಗಳು' ಕೃತಿಯಲ್ಲಿ ಲೇಖಕರು ಇದನ್ನು ಸಾಧಿಸಿದ್ದಾರೆನ್ನುವುದು ಹೆಮ್ಮೆಯ ಸಂಗತಿ. ಇಡೀ ಕೃತಿಯುದ್ದಕ್ಕೂ ಎದ್ದು ಕಾಣುವ ಇನ್ನೊಂದು ಅಂಶವೆಂದರೆ ಮಠಪತಿ ಗಾಂಧಿಯವರನ್ನು ಮಹಾತ್ಮ, ರಾಷ್ಟ್ರಪಿತ ಎಂಬ ಬಿರುದು- ಬಾವಲಿಗಳಿಂದ ಹೊರತುಪಡಿಸಿ ಏಕವಚನದಲ್ಲಿ ಅಜ್ಜ, ಮುತ್ತಜ್ಜನನ್ನು ಕುರಿತು ಬರೆದಂತಿರುವ ಅವರ ರಚನಾ ಶೈಲಿ ಕೃತಿಯನ್ನು ಮತ್ತಷ್ಟು ಆತ್ಮೀಯವಾಗಿಸುತ್ತದೆ. ಅದಕ್ಕೆ ಉದಾಹರಣೆ ಈ ಸಾಲುಗಳು. 'ಆದರೆ ಇಲ್ಲೊಂದು ಕ್ಷಣ ಆಲೋಚಿಸಬಹುದಾದ್ದೂ ಇದೆ. ಯಾಕೆ ಹೀಗೆ ಈ ಗಾಂಧಿ? ಅವನೇನೂ ಶತಮಾನಗಳಿಂದ ದಾಸ್ಯಕ್ಕೊಳಗಾದ ಜನಾಂಗದಿಂದ ಬಂದವನೂ ಅಲ್ಲ, ಬಡತನ ಆತನಿಗೆ ಗೊತ್ತೂ ಇಲ್ಲ. ಸಂಸ್ಥಾನ ಒಂದರ ಪ್ರಧಾನಿಯ ಹಿನ್ನೆಲೆಯಿಂದ ಬಂದಿರುವಾತ. ವಿದೇಶದಲ್ಲಿ ಶಿಕ್ಷಣ ಪಡೆದ ಇವನಿಗೆ ಸಂಸಾರ ಮಾಡಿಕೊಂಡು ಸುಖವಾಗಿ ಬಾಳುವ ಎಲ್ಲ ಅವಕಾಶಗಳು ಇದ್ದವಲ್ಲವೆ? ಆದರೂ ಈತ ಯಾಕೆ ಹೀಗೆ? ವಿದೇಶದಿಂದ ಭಾರತಕ್ಕೆ ಮರಳುತ್ತಲೇ ಆತನ ಸಹೋದರ ಎಷ್ಟೆಲ್ಲ ಶ್ರೀಮಂತಿಕೆಯನ್ನು ಗಳಿಸಿಯಾಗಿತ್ತು. ಉಂಡುಟ್ಟು ಇಲ್ಲೇ ಇರಬಹುದಾಗಿತ್ತಲ್ಲ? ವಕೀಲಿಕೆಗಾಗಿ ಸೌಥ್ ಆಫ್ರಿಕಾಗೆ ಹೋಗಬೇಕಾಗಿತ್ತೇ? ಇಂದು ನಮ್ಮ ಅದೆಷ್ಟೋ ಯುವಕ-ಯುವತಿಯರಿಗೆ ಅಮೇರಿಕಾ, ಕೆನಡಾಗಳು ಆಕರ್ಷಿಸುವಂತೆ ಗಾಂಧಿಗೆ ಇನ್ನಾವ ದೇಶವೂ ಕಾಣಲಿಲ್ಲವೆ? ಸರಿ, ಸೌಥ್ ಆಫ್ರಿಕಾದಲ್ಲೂ ಅಷ್ಟೆ, ಅವನು ಐಷಾರಾಮಿಯಾಗಿ ಇರಬಹುದಿತ್ತು ಅಲ್ಲವೆ? ವಕೀಲನಾಗಿ, ಸಾಮಾಜಿಕ ವ್ಯಕ್ತಿಯಾಗಿ ಗಾಂಧಿ ಅಲ್ಲಿ ಸಾಧಿಸಿದ ಹಿರಿಮೆ ಪ್ರಶ್ನಾತೀತವಾಗಿತ್ತು. ಆದರೆ? ಗಾಂಧಿ ಎಂಬ ಈ ಅನಿಶ್ಚಿತ ಮನಸ್ಸು ಮತ್ತೆ ಭಾರತಕ್ಕೆ ಬಂದು ನಾಯಿ ಬಾಲದ ನಾಯಕರ ಮುಂದೆ, ಹಿಂದು-ಮುಸ್ಲಿಮರ ಮುಂದೆ ಗೋಗರೆಯುವ ಬಾಳು ಆಯ್ದುಕೊಳ್ಳಬೇಕಿತ್ತೆ? ಇದೆಲ್ಲ ಆತನಿಗಿದ್ದ ತೆವಲು ಎನ್ನುವವರನ್ನು, ಅಯ್ಯೋ ಆತ 'ಮಹಾತ್ಮ' ಜಿಡಿ ಎಂದು ಒಂದಕ್ಷರದ ಸೂತಕ ಕಳೆದುಕೊಳ್ಳುವವರನ್ನು ನಾನು ಅದೆಷ್ಟೋ ನೋಡಿದ್ದೇನೆ.'

ಬಹುತೇಕ ರಾಗಂ ಹೊರತು ಯಾರೂ ಇದುವರೆಗೆ ಈ ತರಹದ ಪ್ರಶ್ನೆಗಳನ್ನು ಗಾಂಧಿಯ ವಿಚಾರದಲ್ಲಿ ಮಾಡಿಯೇ ಇಲ್ಲ. ಗಾಂಧಿಯ ಬಗ್ಗೆ ಬಂದ ಅದೆಷ್ಟೋ ಪುಸ್ತಕಗಳಲ್ಲಿ ಇಂತಹ ಪ್ರಶ್ನೆಗಳು ಲೇಖಕರನ್ನು ಕಾಡಿದಂತಿಲ್ಲ. ಆದರೆ ಮಠಪತಿ ಈ ಕೆಲಸವನ್ನು ಮಾಡಿದ್ದಾರೆ. 'ಗಾಂಧಿ : ಅಂತಿಮ ದಿನಗಳು' ಎಂದ ತಕ್ಷಣ ಅದು ಗಾಂಧಿಯ ಕೊನೆಯ ದಿನಗಳ ಚಿತ್ರಣ ಅನ್ನಿಸಿದರೂ ಈ ಕೃತಿಯಲ್ಲಿ ಆ ಕೊನೆಯ ದಿನಗಳನ್ನೇ ಧ್ವನಿಪೂರ್ಣವಾಗಿ ಹಿಡಿದಿಡುವ ಪ್ರಯತ್ನ ಆಗಿದೆ. ಇದು ಗಾಂಧಿಯ ಅಷ್ಟೇ ಅಲ್ಲ, ಗಾಂಧಿಯುಗದ ಕೊನೆಯ ದಿನಗಳು. ಲೇಖಕ ಮಠಪತಿ ಇಲ್ಲಿ ಗಾಂಧಿಯ ಬದುಕನ್ನು ಇತಿಹಾಸದ ಇಸ್ವಿಗಳ ಲೆಕ್ಕಾಚಾರದಲ್ಲಿ, ಅಂದರೆ ೧೯೪೭-೪೮ ಎಂದು ಮಾತನಾಡುವುದಿಲ್ಲ.

ಬದಲಾಗಿ ಗಾಂಧಿ ಸೃಷ್ಟಿಸಿದ ಯುಗ ಗಾಂಧಿಯೊಂದಿಗೆ ಕೊನೆಯಾಗುತ್ತಿದೆಯೇ ಅನ್ನುವಂತಹ ಪ್ರಶ್ನೆ ಎತ್ತುತ್ತಾರೆ. ಉದಾಹರಣೆಗೆ ಪುಟ ೭೩೮ರ ಈ ಉಲ್ಲೇಖವನ್ನು ನೋಡಬಹುದು. 'ಚಂದ್ರಶೇಖರ ಆಜಾದ್, ಭಗತ್‌ಸಿಂಗ್, ನೇತಾಜಿ ಸುಭಾಷ್ ಚಂದ್ರಬೋಸ್, ಡಾ.ಭೀಮ್‌ರಾವ್ ಅಂಬೇಡ್ಕರ್ ಹೀಗೆ ಮುಂತಾದ ನಾಯಕರು ಮೂಲೆಗುಂಪಾದುದು ಗಾಂಧಿಯಿಂದಲೇ, ಗಾಂಧಿಗಿರಿಯಿಂದಲೇ ಎನ್ನುವುದೊಂದು ಸಾಮಾನ್ಯ ವಿಮರ್ಶೆ. ಗಾಂಧಿಯನ್ನು ಪರಿಸ್ಥಿತಿಯ ಕೈಗೊಂಬೆಯಾಗಿ ನೋಡದ ಅನೇಕರ ಪಾಲಿಗೆ ಈ ಗಾಂಧಿ ಒಬ್ಬ ಖಳನಾಯಕನೇ. ಪ್ರತಿರೋಧ ಒಡ್ಡಬೇಕಾದ ಎಲ್ಲಾ ಸಂದರ್ಭಗಳಲ್ಲಿಯೂ ಓಡಿ ಪ್ರಾರ್ಥನೆಗೆ ಹೋದ ಈತ ಒಬ್ಬ ಮಹಾ ಆಷಾಢಭೂತಿ ಮುದುಕ. ಆದರೆ ಇದೆಲ್ಲ ಸತ್ಯವೇ? ನೇತಾಜಿಯ ಆಕಸ್ಮಿಕ ನಿಧನದ ನಂತರ ಅನಾಥ ಪ್ರಜ್ಞೆಯನ್ನು ಅನುಭವಿಸುತ್ತಿದ್ದ 'ಆಜಾದ್ ಹಿಂದ್ ಫೌಜ್'ಗೆ ಯಾವ ಪರಿಹಾರ ಸೂತ್ರ ಗಾಂಧಿಯ ಬಳಿಯಲ್ಲಿ ಇತ್ತು? ಪುಸ್ತಕದಲ್ಲಿ ಇದೊಂದು ಅದ್ಭುತ ಒಳನೋಟ.

ಕೃತಿಯ ೮೮ನೇ ಪುಟದಲ್ಲಿ ಗಾಂಧಿಯ ಬಗ್ಗೆ, ಆತನ ಉಪವಾಸದ ಬಗ್ಗೆ ರಜನೀಶ ಎತ್ತುವ ಪ್ರಶ್ನೆಗಳು, ಅದನ್ನು ಮಠಪತಿಯವರು ಅನಾವರಣಗೊಳಿಸಿದ ರೀತಿ ಎಂತವರ ಗಮನವನ್ನೂ ಸೆಳೆಯುತ್ತದೆ, 'ವಾಸ್ತವದ ಅರಿವಿಲ್ಲದೆ ಬಲಾತ್ಕಾರದೊತ್ತಡದಲ್ಲಿ ಸತ್ಯಾಗ್ರಹ, ಅಹಿಂಸೆಗಳನ್ನು ಬಳಸಿದ ಗಾಂಧೀಜಿ ಯಾವ ಪುರುಷಾರ್ಥ ಸಾಧನೆಗಾಗಿ ಈ ರೀತಿ ತೊಡಗಿಸಿಕೊಂಡಿದ್ದಾರೆನ್ನುವುದು ರಜನೀಶ ಒಡ್ಡುವ ಬಹುದೊಡ್ಡ ಪ್ರಶ್ನೆ. ಅತಿಸುಂದರಿಯಾದ ಯುವತಿಯ ಮನೆಯ ಮುಂದೆ, ಅತಿ ಕುರೂಪಿಯೂ, ಮುದಿಯನೂ ಆದ ವ್ಯಕ್ತಿಯೊಬ್ಬ "ನೀನಿಲ್ಲದೆ ನನ್ನ ಬದುಕು ಅಪೂರ್ಣ, ನೀನು ನನ್ನನ್ನು ಮದುವೆಯಾಗು, ಇಲ್ಲದಿದ್ದರೆ ನಾನು ಉಪವಾಸ ಸತ್ಯಾಗ್ರಹ ಮಾಡುತ್ತೇನೆ" ಎಂದು ಚಾಪೆ ಹಾಸಿ ಮಲಗಿಯೇ ಬಿಡುತ್ತಾನೆ. ಹಾಗಂಥ ಮದುವೆ ಮಾಡಿಕೊಳ್ಳಲಾದೀತೇ? ಇದು ಹಿಂಸೆಯ ಇನ್ನೊಂದು ರೂಪ ಎನ್ನದೆ ಮತ್ತೇನೆನ್ನಲಾದೀತು? ಇಂತಹ ವೇಳೆಯಲ್ಲಿ ಸಮಸ್ಯೆಗೆ ಸಿಲುಕುವ ಸುಂದರಿಯ ತಂದೆಗೆ, ನನ್ನ ಬಳಿ ಒಂದು ಉಪಾಯ ಇದೆ. ನಿರಶನ ಹೂಡಿದ ಮುದಿ ಕುರೂಪಿಯಷ್ಟೇ ಅಸಹ್ಯಳಾದ ವೇಶ್ಯೆಯೊಬ್ಬಳ ಕೈಯಲ್ಲಿ ಚಾಪೆ ಕೊಟ್ಟು "ನೀನಿಲ್ಲದೆ ನನ್ನ ಬಾಳೂ ಅಪೂರ್ಣ. ನೀನು ನನ್ನನ್ನು ಮದುವೆಯಾಗು. ಇಲ್ಲದೆ ಹೋದರೆ ನಾನು ನಿರಶನ ಹೂಡುತ್ತೇನೆ ಎಂದು ಹೇಳಿಸಿಬಿಡಿ, ಮರುದಿನ ಆ ಕುರೂಪಿ ಮನುಷ್ಯ ತನ್ನ ಚಾಪೆಯೊಂದಿಗೆ ನಾಪತ್ತೆಯಾಗುತ್ತಾನೆ' ಎನ್ನುತ್ತಾರೆ ರಜನೀಶ.

ಗಾಂಧಿಯ ಸತ್ಯಾಗ್ರಹದಷ್ಟೇ ದೊಡ್ಡ ಪ್ರಶ್ನೆ ಆತನ ಬ್ರಹ್ಮಚರ್ಯ. ಆ ಕುರಿತು ಗಾಂಧಿಯ ಮೊಮ್ಮಗ ಬರೆದ ಪುಸ್ತಕದಲ್ಲಿ ಹಾಗೂ ತೆಲುಗಿನ 'ಮನ ಮಹಾತ್ಮುಡು'ಗಳಲ್ಲಿ ಚರ್ಚೆಯಾಗಿದ್ದು ಈ ವಿಚಾರಗಳನ್ನು ಮಠಪತಿಯವರು ತಮ್ಮ ಇದೇ ಕೃತಿಯ ಮುಂಬರುವ ೨ನೇ ಭಾಗದಲ್ಲಿ ಮಾಡಿದರೆ ಗಾಂಧಿ ಕುರಿತಾದ ಅವರ ಬರಹ ಒಂದು ಹಂತದ

ಪೂರ್ಣತೆಯನ್ನು ಸಾಧಿಸುತ್ತದೆ ಎನ್ನುವುದು ನನ್ನ ಸಲಹೆ. ಇದು ಗಾಂಧಿಯ ತೇಜೋವಧೆಗಾಗಿ ಸೇರಿಸಿಕೊಳ್ಳಬೇಕಾದ ವಿಚಾರವಲ್ಲ, ಬದಲಾಗಿ ಗಾಂಧಿಯನ್ನು ಒಬ್ಬ ಸಾಮಾನ್ಯ ಮನುಷ್ಯನನ್ನಾಗಿ ನೋಡುವ ಅವರ ಪ್ರಯತ್ನಕ್ಕೆ ಪೂರಕ ಎನ್ನುವುದು ನನ್ನ ಸ್ಪಷ್ಟನೆ.

ಒಟ್ಟಾರೆ, ಗಾಂಧಿ : ಅಂತಿಮ ದಿನಗಳಲ್ಲಿ ಏನಾಗಿದ್ದ, ಆತನ ಸ್ಥಿತಿ ಏನಾಗಿತ್ತು ಎನ್ನುವುದನ್ನು ಮಠಪತಿಯವರು ಹೀಗೆ ವಿವರಿಸುತ್ತಾರೆ, 'ಹೀಗಿತ್ತು ಆತನ ಕೊನೆಯ ದಿನಗಳ ಮನಸ್ಥಿತಿ. ಒಂದೆಡೆ ಆತ, ಮತ್ತೊಂದೆಡೆ ಆತನ ಭಗವದ್ಗೀತೆ; ಒಂದೆಡೆ ಹಿಂದೂಗಳು, ಮತ್ತೊಂದೆಡೆ ಆತನನ್ನು ನಂಬದ ಮುಸ್ಲಿಂರು; ಒಂದೆಡೆ ತಾನೇ ಎಲ್ಲವನ್ನು ಬಗೆಹರಿಸಬೇಕೆಂಬ ಹಠ, ಮತ್ತೊಂದೆಡೆ ಕೈಚೆಲ್ಲಿ ದೇವರಿಗೋ ದೈವಕ್ಕೋ ಮೊರೆಹೋಗುವ ಸ್ಥಿತಿ; ಒಂದೆಡೆ ತಾನು ದೇವರನ್ನು ಕಂಡೇ ಬಿಟ್ಟ ಎಂಬ ಖುಷಿ, ಮತ್ತೊಂದೆಡೆ ದೇವರೇಕೆ ಹೀಗೆ ಎಂದು ಹೇಳುವುದು ಕಷ್ಟ ಎಂದು ಜನರ ಮುಂದೆ ಕೈ ಚೆಲ್ಲುವ ಗಾಂಧಿ. ಒಬ್ಬ ಪ್ರಶ್ನಾತೀತ ನಾಯಕನಲ್ಲಿ ಅದೆಷ್ಟು ಪ್ರಶ್ನೆಗಳು.'

ಇಂತಹ ಗಂಭೀರ ಪ್ರಶ್ನೆಗಳೊಂದಿಗೆ ಅನೇಕ ಮಹತ್ವದ ಗಾಂಧಿ ವಿಚಾರ, ವಿಷಯಗಳನ್ನು ಕುರಿತು ಓದುಗರ ಗಮನವನ್ನು ಸೆಳೆಯುವ ಕೆಲಸವನ್ನು ಮಠಪತಿಯವರು ಇಲ್ಲಿ ಮಾಡಿದ್ದಾರೆ. ಇಂತಹ ಘಟನೆಗಳ ಮೂಲಕ ಗಾಂಧಿ ಭಿನ್ನವಾಗಿ ನಿಲ್ಲುವುದಕ್ಕೆ ಸಾಕ್ಷಿಗಳನ್ನು ಒದಗಿಸಿದ್ದಾರೆ. ಉದಾಹರಣೆಗೆ ಪುಟ ೪೧ರ ಈ ಪುಟ್ಟ ಘಟನೆಯನ್ನು ಓದಿ, 'ಆಗಸ್ಟ್ ೮ರ ಮುಂಜಾವು ಗಾಂಧಿ ತನ್ನ ಹಿಂಬಾಲಕರೊಂದಿಗೆ ಲಾಹೋರದಿಂದ ಪಾಟ್ನಾಕ್ಕೆ ಹೊರಟರು. ಅದು ಮುಂಗಾರು ಮಳೆಯ ಕಾಲ. ಪ್ಯಾಸೆಂಜರ್ ಟ್ರೇನ್‌ನ ಮೂರನೇ ದರ್ಜೆಯ ಕಂಪಾರ್ಟ್‌ಮೆಂಟ್‌ಗಳೆಲ್ಲ ನೀರು ಸೇರಿ ಗಾಂಧಿ ಕುಳಿತ ಭೋಗಿಯನ್ನೆಲ್ಲ ಆವರಿಸಿತು. ಈ ವಿಷಯ ತಿಳಿಯುತ್ತಲೇ ರೈಲನ್ನು ಒಂದು ಕ್ಷಣ ನಿಲ್ಲಿಸಿ, ಅಧಿಕಾರಿಯೊಬ್ಬ ಓಡಿ ಬಂದು, ಕ್ಷಮೆಯಾಚಿಸಿ ಗಾಂಧಿಗೆ ಬೋಗಿ ಬದಲಾಯಿಸಿ, ಒಳ್ಳೆಯ ಬೋಗಿಗೆ ಬರಲು ಕೋರಿಕೊಂಡ. ನಗುತ್ತ ಗಾಂಧಿ ಕೇಳಿದ–

'ಅನಂತರ ಈ ಬೋಗಿಯ ಗತಿ ಏನು?'

'ಬೇರೆ ಪ್ರಯಾಣಿಕರಿಗೆ ಒದಗಿಸುತ್ತೇವೆ.'

'ಈ ಬೋಗಿ ಅನ್ಯ ಪ್ರಯಾಣಿಕರಿಗೆ ಸೂಕ್ತ ಎಂದು ನೀನು ಭಾವಿಸುವುದಾದರೆ ನನಗೇ ಇರಲಿ ಬಿಡು. ನಾನೂ ಸಾಮಾನ್ಯ ಭಾರತೀಯನೇ ತಾನೆ?'

'ಹಾಗಲ್ಲ ಬಾಪು, ತಮ್ಮ ಆರೋಗ್ಯ ಸರಿಯಾಗಿಲ್ಲ.'

'ತಪ್ಪು, ಇದು ತಪ್ಪು. ಒಬ್ಬ ಅಧಿಕಾರಿಯಾಗಿ ಎಂದೂ ಪ್ರಯಾಣಿಕರ ಮಧ್ಯೆ ಬೇಧ ಎಣಿಸಬೇಡ. ಲಂಚ ತಿನ್ನಬೇಡ.'

ಗಾಂಧಿಯ ಬಗೆಗೆ ಸಾವಿರಾರು ಪುಸ್ತಕಗಳು ಬಂದಿವೆ. ಆದರೆ ಇಂತಹ ಒಳನೋಟಗಳನ್ನು ಹೊಂದಿದ ಪುಸ್ತಕ ಅಪರೂಪವೆನ್ನಬೇಕು. ಇನ್ನೊಂದು ಪ್ರಮುಖವಾದ ವಿಶೇಷತೆ ಮತಪತಿಯವರ ಬರಹದ ಶೈಲಿ, ನಾಟಕಕಾರನೊಬ್ಬ ಅವರೊಳಗೆ ಇಲ್ಲದ ಹೊರತು ಇಂತಹ ಬರಹ ಅಸಾಧ್ಯ. ರಂಗದ ಎಲ್ಲ ಸೂಕ್ಷ್ಮತೆಗಳನ್ನು ಸಮೀಕರಿಸಿಕೊಂಡ ಅವರ ಶೈಲಿ, ನಮ್ಮನ್ನು ಕಾಡುವುದು ಈ ಕಾರಣಕ್ಕಾಗಿಯೇ. ಗಾಂಧಿ ನಮ್ಮ ನೆನಪಿನ ಅವಿಭಾಜ್ಯ ಅಂಗವಾಗಿ ಉಳಿಯುವುದು ಈ ಕಾರಣಕ್ಕಾಗಿಯೇ ಎಂದು ಬೇರೆ ಹೇಳಬೇಕಿಲ್ಲ.

ಆಗಸ್ಟ್ ೨೦೧೨ **ಪುಸ್ತಕಮನೆ ಹರಿಹರಪ್ರಿಯ**

"ಸಿಹಿಗಾಳಿ", ಮಾಸಿಕ

ಮಹಾತ್ಮಾ ಗಾಂಧಿಯವರ ಅಂತಿಮ ದಿನಗಳ ಬಗ್ಗೆ ಪತ್ರಿಕೆಗೆ ಬರೆದ ಅಂಕಣಗಳು ಸಂಕಲನವಾಗಿ ಈ ಕೃತಿ ಹೊರಬಂದಿದೆ. ಹಲವು ರೀತಿಯಲ್ಲಿ ಕ್ಷೋಭೆಗಳಿಗೆ ತುತ್ತಾಗಿರುವ ಈಚಿನ ದಿನಗಳಲ್ಲಿ ಗಾಂಧಿಯನ್ನು ಜನರು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತಿದ್ದಾರೆ. ಆಧುನಿಕ ಯಂತ್ರ-ತಂತ್ರಜ್ಞಾನಗಳ ಬದುಕಿನ ನಡುವೆ ಗಾಂಧಿಯ 'ಹಿಂದ್ ಸ್ವರಾಜ್' ಕೃತಿಯ ನೆನಪಾಗುತ್ತದೆ. ಸಮಾಜವು ಜಾತಿ-ಮತಗಳ ಆಧಾರದಲ್ಲಿ ವಿಘಟಿತವಾಗುತ್ತಿರುವುದನ್ನು ಕಾಣುತ್ತೇವೆ. ಸ್ವಾತಂತ್ರ್ಯ ಲಭಿಸಿದ ಹೊಸತರಲ್ಲಿ ದೇಶವಿಭಜನೆಯ ನಂತರದ ಕೋಮುದ್ವೇಷದ ದಳ್ಳುರಿ ಗಾಂಧಿಯಂತಹ ಗಾಂಧಿಯನ್ನು ಅಸಹಾಯಕನನ್ನಾಗಿ ಮಾಡಿದ ಬಗೆ ಈಗ ಮತ್ತೆ ನೆನಪಾಗುತ್ತದೆ. ಅಂತಹ ಗಾಂಧಿಯ ಅಂತಿಮ ದಿನಗಳ ಬದುಕು ಹಾಗೂ ಚಿಂತನೆಯ ಬಗ್ಗೆ ಸರಳವಾದ ನಿರೂಪಣೆಯೊಂದಿಗೆ ಈ ಕೃತಿ ಹೊರಬಂದಿದೆ.

ಏಪ್ರಿಲ್-ಜೂನ್ ೨೦೧೨ **ಚಿಂತನ ಬಯಲು**

ಗಾಂಧಿ : ತುರ್ತು ಮತ್ತು ಅನಿವಾರ್ಯ

ನಾವು ಬದುಕುತ್ತಿರುವ ಇಂದಿನ ಸಮಾಜ ದಾರಿ ತಪ್ಪುವ ಹಂತ ತಲುಪಿದೆ. ನಡೆವ ದಾರಿ ನಿಚ್ಚಳವಾಗಿಲ್ಲ. ದಾರಿ ಯಾವುದಯ್ಯ ಎನ್ನುವ ಸ್ಥಿತಿ. ನೀತಿ ಸಿದ್ಧಾಂತಗಳು ಬಿರುಗಾಳಿಗೆ ಸಿಕ್ಕು ನಲುಗುತ್ತಿವೆ. ಮಸೀದಿಯಿಂದ ಹೊರಡುವ 'ಅಲ್ಲಾಹ್ ಓ ಅಕ್ಬರ್' ಎಂದು ಆಲಾಪ ಬಡಿದೆಚ್ಚರಿಸಿ ಕರ್ತವ್ಯದ ಹಾದಿ ತೋರುವಂತೆ ದಾರಿ ತೋರುವ ದೀಪವೊಂದು ಬೇಕಿದೆ. ಬದುಕು ಕತ್ತಲು. ನಿಜಕ್ಕೂ ಕಲ್ಲು ಕರಗೋ ಸಮಯ!

ಇಂತಹ ಹೊತ್ತಿನಲ್ಲಿ ನಮಗೆ ನಮ್ಮನ್ನು ಸರಿ ದಾರಿಯಲ್ಲಿ ನಡೆಸಬಲ್ಲ ನಾಯಕ ಬೇಕೆನಿಸಿದರೆ ಅದು ಸುಳ್ಳಲ್ಲ. ಕಾಕತಾಳೀಯವಲ್ಲ. ಗಾಂಧಿಯಂತಹ ದೇಶ ಕಟ್ಟಿದ ನಾಯಕರು ನೆನಪಾಗುತ್ತಾರೆ.

ಭೌತಿಕವಾಗಿ ಭೂತದ ಕಾಲಗರ್ಭದಲ್ಲಿ ಗತಿಸಿರುವ ಗಾಂಧಿ ವರ್ತಮಾನದಲ್ಲೂ ತನ್ನ ಅನುಪಸ್ಥಿತಿಯನ್ನು ಕಾಡುವಂತೆ ಮಾಡಿರುವುದು ಅವನಲ್ಲಿದ್ದ ಸಮಾಜಮುಖಿ ನೀತಿ ಸಿದ್ಧಾಂತ ಎಂಬುದು ಸತ್ಯ. ಆದರೆ ಗಾಂಧಿ ದೇವರಲ್ಲ, ಹುಲುಮಾನವ. ತಪ್ಪು ಮಾಡಿ, ಅದನ್ನು ಸರಿ ಮಾಡಿಕೊಂಡು ಇದು ಬದ್ಧತೆಯ 'ಬುದ್ಧಮಾರ್ಗ' ಎಂದು ತೋರಿಸಿದವ. ಹಾಗೇ ಮಹಾತ್ಮನಾದವ.

ಗಾಂಧಿ ಸದಾ ಚರ್ಚೆಗೆ ಒಳಗಾಗುವ ವ್ಯಕ್ತಿ. ಕಾಲನ ಪರೀಕ್ಷೆಗೆ ಒಳಗಾಗುವ ವ್ಯಕ್ತಿತ್ವ ಗಾಂಧಿಯ ತತ್ವ ಒಪ್ಪುವ ಮನಸ್ಸುಗಳು ಅವರ ಸರಳತೆ, ಸತ್ಯ, ನಿಷ್ಠೆ, ದೇಶಕ್ಕಾಗಿ ಮಾಡಿದ ಸೇವೆ ಮುಂದುಮಾಡಿದರೆ, ತಿರಸ್ಕರಿಸುವ ಮನಗಳು ದೇಶದೊಳಗಿನ ಐಕ್ಯತೆಯನ್ನು ಸಾಧಿಸುವಲ್ಲಿ, ಆಂತರಿಕ ಅಸಮತೋಲನ ಹೋಗಲಾಡಿಸುವಲ್ಲಿ ಮಾಡಬಹುದಾಗಿದ್ದ ಸಂದರ್ಭದಲ್ಲಿಯೂ ತನ್ನ ಕರ್ತವ್ಯ ಮರೆಯಲಿಲ್ಲ ಎಂಬುದು. ಹೀಗೆ ಗಾಂಧಿಯ ಬದುಕೇ ತೆರೆದ ಪುಸ್ತಕ. ವಿಮರ್ಶೆಗೆ ಸದಾ ತೆರೆದುಕೊಂಡಿದೆ.

ತೀರಾ ಇತ್ತೀಚಿನ ಬೆಳವಣಿಗೆ ನೋಡಿ: ಸಾಮಾಜಿಕ ಅನಿಷ್ಟ, ಅನೀತಿ, ಅಧರ್ಮ ಮತ್ತು ಸಮಾಜ ವಿರೋಧಿ ನಿಲುವುಗಳ ವಿರುದ್ಧ ಸಮಾಜದಲ್ಲಿ ಒಂದು ದನಿ ಏಳುತ್ತದೆ. ಅದು ಗಟ್ಟಿಯಾಗಿ ನೆಲೆಯೂರಿ ಒಟ್ಟು ಧ್ವನಿಯಾಗಿ ರೂಪುಗೊಳ್ಳುವ ಹೊತ್ತಿಗೆ ದನಿ ಎತ್ತಿ ಮುನ್ನಡೆವ ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ ತೇಜೋವಧೆ, ಅವನ ನಿಷ್ಠೆ ಕುರಿತ ಸಂಶಯ, ನಿಯತ್ತಿನ ಬಗ್ಗೆಯೇ ಪ್ರಶ್ನೆ ಏಳುತ್ತದೆ. ದನಿಗೆ ದನಿ ಕೂಡಿ, ಒಂದು ಸಮೂಹ ಒಟ್ಟುಗೂಡಿ, ಹೋರಾಟವಾಗಿ ಒಂದು ತಾತ್ವಿಕ ಹಂತ ತಲುಪುವ ಮುಂಚೆಯೇ ಹೋರಾಟದ ಗರ್ಭಪಾತವಾಗುತ್ತದೆ. ಆದರೆ ಗಾಂಧಿ ಬದುಕಿದ್ದ ಕಾಲ ಘಟ್ಟದಲ್ಲಿ ಹಾಗಿರಲಿಲ್ಲ. ಹಿಡಿದ ಕೆಲಸ ಮಾಡುವಲ್ಲಿ ಬೆಂಬಲ ಇರುತ್ತಿತ್ತು. ಉಳಿದದ್ದು ಅನಂತರದ ಮಾತು. ಹಾಗಾಗಿಯೇ ಗಾಂಧಿಕಾಲ ಮತ್ತು ಗಾಂಧಿ ಒಮ್ಮೆಲೆ ಮರುಕಳಿಸುತ್ತದೆ.

ಗಾಂಧಿಯೇ ತನ್ನ ಕುರಿತು ಮೈ ಎಕ್ಸ್‌ಪರಿಮೆಂಟ್ ವಿಥ್ ಟ್ರುಥ್‌ನಲ್ಲಿ ಎಲ್ಲವನ್ನು ಹೇಳಿದ್ದಾರೆ. ಆದರೆ ಗಾಂಧಿ ಕಾಲನ ಪರೀಕ್ಷೆಗೆ ಸದಾ ಒಳಗಾಗುವ ವ್ಯಕ್ತಿ. ಸತ್ತ ಎಷ್ಟೋ ದಿನಗಳ ಅನಂತರವೂ ಗಾಂಧಿಯ 'ಪೋಸ್ಟ್ ಮಾರ್ಟಂ' ನಡೆಯುತ್ತದೆ: ಕೃತಿಗಳ ಮೂಲಕ. ಗಾಂಧಿ ವ್ಯಕ್ತಿತ್ವದ ಕುರಿತ ಕೃತಿಗಳು ಹಲವು. ಹೊಸ ಸೇರ್ಪಡೆ ಡಾ.ರಾಜಶೇಖರ ಮಠಪತಿ (ರಾಗಂ) ಅವರ 'ಗಾಂಧಿ ಅಂತಿಮ ದಿನಗಳು' ಕೃತಿ. ಈಗಾಗಲೇ ಈ ಭಾನುವಾರ ವಾರಪತ್ರಿಕೆಯಲ್ಲಿ ಪ್ರತೀವಾರ ಅಂಕಣವಾಗಿ ಧಾರವಾಹಿಯ ರೂಪದಲ್ಲಿ ಪ್ರಕಟವಾಗಿರುವ ಲೇಖನಗಳ ಸಂಕಲನ. ಚರ್ಚಿತವಾಗುತ್ತಲೇ ಇರುವ ಗಾಂಧಿಯ ಕುರಿತು ಏನಿರಬಹುದು ಎನ್ನುವ ಆಸಕ್ತಿ ಕೆರಳಿಸುವ ಪುಸ್ತಕದ ಶೀರ್ಷಿಕೆ ಅದನ್ನು ಕೊನೆಯವರೆಗೂ ಉಳಿಸಿಕೊಳ್ಳುತ್ತದೆ. ಒಳಪುಟಗಳಲ್ಲಿನ ಒಂದೊಂದು ಬಿಡಿ ಅಧ್ಯಾಯದ ಶೀರ್ಷಿಕೆಗಳು ಸೆಳೆಯುತ್ತವೆ.

ಗಾಂಧಿಯೆಡೆಗೆ ಸಾಮಾನ್ಯ ವ್ಯಕ್ತಿಗೆ ಇರುವ ಕುತೂಹಲದಂತಹ ಕುತೂಹಲವನ್ನು ಇಟ್ಟುಕೊಂಡೇ ಬರೆಯಲು ತೊಡಗಿರುವ ಲೇಖಕ ರಾಗಂ ಅದನ್ನು ಅಂತ್ಯದವರೆಗೂ ಹಾಗೆ ಕಾಪಿಟ್ಟುಕೊಂಡಿದ್ದಾರೆ. ಪ್ರತೀ ಅಧ್ಯಾಯವೂ ಕುತೂಹಲವನ್ನು ಕಾಯ್ದುಕೊಂಡು ಓದಿಸಿಕೊಳ್ಳುತ್ತದೆ. ಕೇವಲ ಓದಿಸಿಕೊಂಡ ಮಾತ್ರಕ್ಕೆ ಅದು ಉಲ್ಲೇಖಾರ್ಹವಲ್ಲ. ಅದರಲ್ಲಿ ಗಾಂಧಿ ಕುರಿತು ತಮ್ಮದೇ ಆದ ಗೊಂದಲಗಳನ್ನು, ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ವಿಮರ್ಶೆಗೆ ಹಚ್ಚುತ್ತಾರೆ. ಬೇರೆ ಬೇರೆ ವ್ಯಕ್ತಿಗಳು ಗಾಂಧಿಯನ್ನು ಭಿನ್ನವಾಗಿ ಹೇಗೆಲ್ಲಾ ಜರಡಿಯಲ್ಲಿ ಹಿಡಿದಿದ್ದಾರೆ ಎಂಬುದನ್ನು ತಮ್ಮದೇ ನೇರ ಮಾತುಗಳಲ್ಲಿ ದಾಖಲಿಸಿದ್ದಾರೆ. ಕಥನ ಶೈಲಿಯ ಬರವಣಿಗೆ ಮನಸ್ಸಿಗೆ ನಾಟುವಂತೆ ಸಾಗುತ್ತದೆ. ವಿಷಯದ ಕುತೂಹಲಕ್ಕೆ ಕೊಕ್ಕೆಯಂತಲ್ಲ. ಹರಿವ ನೀರಂತೆ ಸಲೀಸು.

ನಮಗೆಲ್ಲ ಈಗಾಗಲೇ ತಿಳಿದಿರುವ 'ಸತ್ಯಕಥೆ'ಯನ್ನು ಮತ್ತೆ ಹೇಳುವಾಗ ಅದರೊಳಗೆ ವಿಶೇಷ ಏನಾದರೂ ಇರಬೇಕು. ಅದನ್ನು ಕಥನ ಶೈಲಿಯಲ್ಲಿ ಸಾಧಿಸಿದ್ದಾರೆ ಲೇಖಕರು. 'ಕೊನೆಯ ದಿನಗಳು' ಎನ್ನುತ್ತಲೇ ಗಾಂಧಿಯ ಇಡೀ ಜೀವನಗಾಥೆಯ ಪುನರ್ನೋಟಕ್ಕೆ ಅನುವು ಮಾಡಿಕೊಡುತ್ತದೆ. ಇಂತದನ್ನು ಮುಚ್ಚಿಟ್ಟು ಇಂತದನ್ನು ಬಿಚ್ಚಿಡಬೇಕು ಎನ್ನುವ ಗೋಜಿಗೆ ಹೋಗದೆ ಚಸ್ಮಾರಹಿತ ನೋಟದಲ್ಲಿ ಕೃತಿ ಹೆಣೆದಿರುವ ರೀತಿಯ ಹಿಂದೆ ಹಲವಾರು ಕೃತಿಗಳು ಹೆಗಲು ಕೊಟ್ಟಿವೆ. "ಮಾಗಿದ ಮನಸ್ಸೊಂದು ಕ್ರಿಯಾಶೀಲವಾಗಿದ್ದ ರೀತಿಯನ್ನು ತಿಳಿಯುವುದಷ್ಟೇ ನನ್ನ ಬರಹದ ಕುತೂಹಲ ಮತ್ತು ಗುರಿ ಎಂದು ವಿನಮ್ರವಾಗಿ ಹೇಳುವ ಲೇಖಕರು "ಗಾಂಧಿ ಓದಿದ್ದು ಕಡಿಮೆ. ಆದರೆ ಅರ್ಥೈಸಿಕೊಂಡದ್ದು ಹೆಚ್ಚು. ಮತ್ತೊಂದಷ್ಟು ಓದಿದ್ದರೂ ಅದು ಅವನ ಆಗಾಗಿನ ಅವಶ್ಯಕತೆಗಳ ಹಿನ್ನೆಲೆಯಲ್ಲಿ. ಹಾಗೆಯೇ ಓದಿದ್ದೆಲ್ಲವನ್ನು ಆತ ಹಂಚಿಯೂ ಬಿಟ್ಟ. ಬರಹದ ವಿಚಾರದಲ್ಲೂ ಅಷ್ಟೇ. ಕಾಲಾತೀತವಾಗಿ ಹಲವು ತಲೆಮಾರುಗಳಿಂದ ಬರಹದ ಒರೆಗೆ ತುತ್ತಾದ ಗಾಂಧಿ ಸಾಹಿತ್ಯ ಬರೆಯಲಿಲ್ಲ. ಆದರೆ ಆತ ಬರೆದದ್ದೆಲ್ಲವೂ ಸಾಹಿತ್ಯವಾಯಿತು. ಮೆಲುಕು ಹಾಕಬೇಕಾದರೆ ಸಾಹಿತ್ಯವಾಯಿತು. ಬಹುತೇಕ ಗಾಂಧಿಯಷ್ಟು ಕಡಿಮೆ ಓದಿದ ರಾಜಕೀಯ ನೇತಾರರು ವಿರಳ. ಹಾಗೆಯೇ ಗಾಂಧಿ ಅಂತ ಮನುಷ್ಯ ಕೂಡ ಎಂದು ಹೇಳುತ್ತಾ ಭಿನ್ನವಾಗುತ್ತಾರೆ. ಇಲ್ಲಿ ರೋಚಕತೆ ಹುಡುಕುವ ಬದಲು ಪ್ರಜ್ಞೆಯ, ಸಿದ್ಧಾಂತದ ಬದ್ಧತೆಯ ಕುರಿತಂತೆ ಹೆಚ್ಚು ಬಾಯಾಗುತ್ತಾರೆ.

ಸಾಂಸ್ಕೃತಿಕ ಲೋಕದಲ್ಲಿ, ಅದರಲ್ಲೂ ವಿಶೇಷವಾಗಿ ಸಿನೆಮಾ, ಬರಹ ಇಂತಹ ಮಾಧ್ಯಮಗಳಲ್ಲಿ ಸಮಾಜಮುಖಿ ನಾಯಕರಾದ ಬುದ್ಧ, ಬಸವ, ಅಂಬೇಡ್ಕರ್‌ರ ಜೀವನ ದರ್ಶನ ಪುನರ್ಮುಖಾಮುಖಿಯ ಪ್ರಯೋಗಗಳ ಮಹಾಪೂರವೇ ಆಗುತ್ತಿರುವುದು ಈ ದಿನಮಾನದ ವಿಶಿಷ್ಟ ಪದರು. ಇತಿಹಾಸವನ್ನು ಪುನರ್ನವೀಕರಣ ಮಾಡುತ್ತ ವರ್ತಮಾನದ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವ ಪ್ರಕ್ರಿಯೆ. ಹಾಗೆಯೇ, ಗಾಂಧಿಯ ಪ್ರಭಾವಲಯದಲ್ಲಿಯೇ

ಬೆಳೆದು ಅನಂತರ ಗಾಂಧಿತತ್ವವನ್ನು ವಿನಯವಾಗಿ ಒಪ್ಪಿಕೊಳ್ಳುತ್ತಲೇ ನಯವಾಗಿ ವಿರೋಧಿ ನೆಲೆಯಲ್ಲಿ ನೋಡಿದ ಓಶೋ ಮತ್ತು ಖ್ವಾಜಾ ಅಹಮದ್ ಅಬ್ಬಾಸ್‌ರಂತಹ ಇಬ್ಬರು ವ್ಯಕ್ತಿಗಳ ಒಳ ತೋಟಗಳನ್ನು ಕಟ್ಟಿಕೊಡುತ್ತಾರೆ ರಾಗಂ.

ಸ್ವಾತಂತ್ರ್ಯ ಹೋರಾಟದ ನೇತಾರನಾಗಿ, ರಾಜಕಾರಣಿಯಾಗಿ, ಗಾಂಧಿಯನ್ನು ಚಿತ್ರಿಸಿದ ಸಾಹಿತ್ಯದೊಂದಿಗೆ, ಅವರನ್ನು ಧರ್ಮನಿಷ್ಠ, ಸಾತ್ವಿಕ, ಸಂತನಾಗಿ ಕಾಣುವ ಹಲವು ಕೃತಿಗಳು ಸಾಹಿತ್ಯದಲ್ಲಿ ದೊರಕುತ್ತವೆ. ಕನ್ನಡದಲ್ಲಿಯೂ ಒಂದಷ್ಟು ಇವೆ. ಆದರೆ, ಈ ಎರಡು ನೆಲೆಗಳನ್ನು ಸಮನ್ವಯಿಸಿಕೊಳ್ಳುವ ಮಹಾತ್ಮನನ್ನು ಅಪ್ಪಟ ಮಾನವನನ್ನಾಗಿ ಚಿತ್ರಿಸಿರುವ ಕೃತಿಗಳು ಅಪರೂಪ. ಮೊದಲಿನ ಎರಡು ನೆಲೆಗಳು ಬೌದ್ಧಿಕ ಜಿಜ್ಞಾಸೆಯಿಂದ, ಸಿದ್ಧಾಂತಗಳ ಭಿತ್ತಿಯಲ್ಲಿ ರೂಪುಗೊಳ್ಳುತ್ತವೆ. ಅವುಗಳ ಓದು ನಮ್ಮ ಬುದ್ಧಿಯನ್ನು ಪ್ರವೇಶಿಸುತ್ತವೆ ಅಷ್ಟೇ. ಅಂತಹ ಗಾಂಧಿಯನ್ನು ನಮ್ಮವನನ್ನಾಗಿಸುವುದು ಹೃದಯವೇ ಮುಖ್ಯವಾದ ಬರೆವಣಿಗೆ. ಅಂತಹ ಬರೆವಣಿಗೆ ರಾಗಂ ಅವರದು ಎನ್ನುತ್ತಾರೆ ಮುನ್ನುಡಿ ಬರೆದಿರುವ ನಾಟಕಕಾರ ಎಚ್.ಎಸ್.ಉಮೇಶ. ಈ ಸಾಲುಗಳು ಲೇಖಕರು ವೈಚಾರಿಕ ವಿಷಯ ವಸ್ತುವನ್ನು ಮನಮುಟ್ಟುವಂತೆ ಹೇಳುವಲ್ಲಿ ಇರುವ ಸವಾಲನ್ನು ಸಮಾನವಾಗಿ ಸಾಧಿಸಿರುವ ಕುರಿತು ಪುಷ್ಟೀಕರಿಸುತ್ತವೆ.

ಪುಸ್ತಕದ ಹೂರಣವನ್ನು ಲೇಖಕ, ವಿಮರ್ಶಕ ಜಿ.ಎಸ್.ಆಮೂರ ಹೀಗೆ ಕಡೆದಿದ್ದಾರೆ. ಅವರ ಈ ಮಾತುಗಳು ಇಡೀ ಪುಸ್ತಕದ ತಿರುಳು ಎನ್ನಲಡ್ಡಿಯಿಲ್ಲ: ಇತಿಹಾಸದಲ್ಲಿ ಗಾಂಧಿಯ ಹೆಸರು ರಾಷ್ಟ್ರಪಿತನೆಂದೇ ದಾಖಲಾಗಿದೆ. ಆದರೆ, ಅವನು ತನ್ನ ಕೊನೆಯ ದಿನಗಳನ್ನು ದುಃಖದಲ್ಲಿಯೇ ಕಳೆದ. ಬದುಕಿನುದ್ದಕ್ಕೂ ಅವನು ನಂಬಿಕೊಂಡು ಬಂದಿದ್ದ ಆದರ್ಶಗಳು ತನ್ನೆದುರಿಗೇ ನಷ್ಟವಾಗುತ್ತಿದ್ದುದನ್ನು ನೋಡುವ ದೌರ್ಭಾಗ್ಯ ಅವನದಾಯಿತು. ಅವನ ಕಣ್ಣೆದುರಿಗೇ ದೇಶದ ವಿಭಜನೆಯಾಯಿತು. ತನ್ನ ಸರ್ವಸ್ವವನ್ನು ಪಣಕ್ಕಿಟ್ಟು ಸಾಧಿಸಲು ಹೋರಾಡಿದ ಹಿಂದು–ಮುಸ್ಲಿಂ ಐಕ್ಯ ಕನಸಿನಂತೆ ಕರಗಿ ಹೋಯಿತು. ಅಹಿಂಸೆಯಲ್ಲಿಯೇ ಸತ್ಯವನ್ನು ಕಂಡ ದಾರ್ಶನಿಕನನ್ನು, ಹಿಂದೆಂದೂ ನೋಡದ ಹಿಂಸೆಯ ಕೃತ್ಯಗಳು ಕಂಗೆಡಿಸಿದವು. ಬಾಪು ಎಂಬ ಹೆಸರಿನಿಂದ ಜನಮಾನಸದಲ್ಲಿ ನೆಲೆಯೂರಿದವ ಈಗ ಏಕಾಕಿಯಾದ. ಇದೊಂದು ದುರಂತ ನಾಟಕವಲ್ಲದೆ ಮತ್ತೇನು? ಗಾಂಧಿಯನ್ನು ಕುರಿತ ಅವರ ಮಾತುಗಳಲ್ಲಿ ಗುಲಗಂಜಿ ಗಾತ್ರದಷ್ಟೂ ಸಂಶಯವಿಲ್ಲ.

ಗಾಂಧಿಯ ಮತ್ತೆ ಮತ್ತೆ ಓದಿಗೆ ರಾಗಂ ಹಾತೊರೆಯುವಂತೆ ಮಾಡಿದ್ದಾರೆ.

ಜುಲೈ–ಸೆಪ್ಟೆಂಬರ್ **ಗೋವಿಂದರಾಜ ಲಕ್ಷ್ಮೀಪುರ**

ಅರುಹು–ಕುರುಹು, ತ್ರೈಮಾಸಿಕ

ಡಾ.ರಾಜಶೇಖರ ಮಠಪತಿ (ರಾಗಂ) ರವರ 'ಗಾಂಧಿ : ಅಂತಿಮ ದಿನಗಳು' ಓದಲು ಶುರುಮಾಡಿದೆ. ಓದು ಸಾಗಿದಂತೆ ನನ್ನಲ್ಲಿ ಒಂದು ಹೊಸಬಗೆಯ ಸಂಚಲನೆ, ಜೊತೆಯಲ್ಲಿ ವಿಸ್ಮಯ ಮೂಡುತ್ತಿದ್ದವು. ಏಕೆಂದರೆ ನಾನು ಇಲ್ಲಿಯ ತನಕ ಕಣ್ಣಾಡಿಸಿದ ಗಾಂಧಿ ಮತ್ತು ಗಾಂಧಿವಾದ ಕುರಿತು ಬರೆದಿದ್ದ ಯಾವ ಪುಸ್ತಕವೂ ನನ್ನಲ್ಲಿ ಇಂತಹ ಪುಳಕ ಮತ್ತು ಹೊಸ ಭಾವನೆ ಮೂಡಿಸಿರಲಿಲ್ಲ. ಇದು ಹೊಗಳಿಕೆ, ಉತ್ಪ್ರೇಕ್ಷೆ ಅಲ್ಲ. ನನ್ನ ಸ್ಪಷ್ಟ ಅಭಿಪ್ರಾಯ. ಇದೊಂದು ಅಪರೂಪದ ರಚನೆ. ನನ್ನ ದೃಷ್ಟಿಯಲ್ಲಿ ಗಾಂಧಿ ಮತ್ತು ಗಾಂಧಿವಾದ ಕುರಿತು ಬರೆದ ಬಹು ಲೇಖಕರು ಆತನನ್ನು ಮಹಾತ್ಮ ಎಂಬ ಮನೋಧೋರಣೆಯಲ್ಲಿ ಬರೆದಿದ್ದಾರೆ. ಯಾರು ಆರಾಧನೆ, ಪೂಜ್ಯತೆ ಮತ್ತು ದಿವ್ಯತೆಯ ಗುಂಗಿನಲ್ಲಿ ಬರೆಯುತ್ತಾರೊ ಅವರ ಲೇಖನಿಯಿಂದ ಸಂಪೂರ್ಣವಾಗಿ ನಿಜ ಸ್ಥಿತಿ ದಾಖಲಾಗುವುದಿಲ್ಲ. ಗಾಂಧಿ ದೇವರ ಪ್ರತಿರೂಪ ಎಂಬ ಉನ್ಮಾದ ಮನಸ್ಥಿತಿಯಲ್ಲಿ ವಾಸ್ತವತೆ ದೂರ ಸರಿಯುತ್ತದೆ. ಆದರೆ ಈ ಪುಸ್ತಕ ಬರೆದಿರುವ 'ರಾಗಂ' ಅಂಥ ಗುಂಗಿನಿಂದ ಹೊರಬಂದು, ಮೊದಲು ಗಾಂಧಿಯನ್ನು ಮನುಷ್ಯನನ್ನಾಗಿ ಕಂಡು, ಅನಂತರದಲ್ಲಿ ಆತನ ಸಾಧನೆಗಳ ಹಿನ್ನೆಲೆಯಲ್ಲಿ ಮಹಾತ್ಮನಾಗಿ ಸಾಗುವುದನ್ನು ದಾಖಲಿಸಿದ್ದಾರೆ.

ಬುದ್ಧ, ಬಸವ, ಅಂಬೇಡ್ಕರ್ ಇತ್ಯಾದಿ ಸಾಧಕರಂತೆ ಗಾಂಧಿ ಕೂಡ ಒಬ್ಬ ಮನುಷ್ಯ. ಮನುಷ್ಯ ಸಹಜವಾದ ಎಲ್ಲಾ ಸಂವೇದನೆಗಳು ಆತನಲ್ಲಿ ಇದ್ದವು ಎಂಬ ಧೋರಣೆಯಿಂದ ಬರವಣಿಗೆ ಸಾಗಿದೆ. ಆದುದರಿಂದ ಈ ಕೃತಿಯಲ್ಲಿ ಸಹಜಸ್ಥಿತಿ ವಸ್ತುನಿಷ್ಠವಾಗಿ ಅನಾವರಣಗೊಂಡಿದೆ. ಬಹಳ ಲೇಖಕರು ಗಾಂಧಿ ಮತ್ತು ಗಾಂಧಿವಾದವನ್ನು ಹಿಗ್ಗಿಸುವ, ಕುಗ್ಗಿಸುವ ಒಂದು ರಬ್ಬರ್ ಪಟ್ಟಿಯಂತೆ ಮಾಡಿಕೊಂಡಿದ್ದಾರೆ. ಆತನನ್ನು ಅವತಾರ ಪುರುಷ ಎನ್ನುವಷ್ಟರಮಟ್ಟಿಗೆ ಬಿಂಬಿಸುತ್ತಾರೆ. ಅವರ ಕೃತಿಗಳು ಓದುಗರನ್ನು ಅಸಹಜ, ಅನಪೇಕ್ಷಿತ, ಉನ್ಮಾದ, ಉದ್ವೇಗದ ಅಲೆಯ ಮೇಲೆ ನೂಕಲು ಪ್ರಯತ್ನಿಸುತ್ತವೆ. ಆದರೆ ಈ ಕೃತಿಯ ರಚನಾಕಾರ ಅಂತಹ ಅಸಹಜ ಸನ್ನಿವೇಶಗಳನ್ನು, ಉದ್ಗಾರಗಳನ್ನು ಬಳಸದೆ ಸಾಗುತ್ತಾರೆ. ಆದುದರಿಂದ ಇದು ವಿಭಿನ್ನ ಶೈಲಿಯ, ವಿಭಿನ್ನ ಧಾಟಿಯ ಪುಸ್ತಕ. ಒಬ್ಬಿಬ್ಬರು ವಿಚಾರವಂತರನ್ನು ಹೊರತುಪಡಿಸಿ ಮಿಕ್ಕೆಲ್ಲರೂ ಗಾಂಧಿ ಮತ್ತು ಗಾಂಧಿವಾದದ ಬಗ್ಗೆ ಅಸಂಖ್ಯಾತ ಗುಣವಾಚಕಗಳಿಂದ, ಭಕ್ತಿ ಪರವಶರಾದ ಬಹುವಚನ ಸಂಬೋಧನೆಗಳಿಂದ ತಮ್ಮ ಪುಸ್ತಕದ ಹಾಳೆಗಳನ್ನು ತುಂಬಿದ್ದಾರೆ. ಆದರೆ ಈ ಲೇಖಕ ಗಾಂಧಿಯನ್ನು ಒಬ್ಬ ಮನುಷ್ಯನನ್ನಾಗಿ ಕಂಡು ಆತನನ್ನು ಏಕವಚನದಲ್ಲೇ ಸಂಬೋಧಿಸುತ್ತಾ ಸಾಗುತ್ತಾರೆ! ಇದು ಈ ಕೃತಿಯ ಹೆಗ್ಗಳಿಕೆ, ವಿಶೇಷ. ಇದು ಭಟ್ಟಂಗಿಗಳ ಬರವಣಿಗೆಯಂತಲ್ಲ. ವಿನೂತನ ದಾರಿ. ಗಾಂಧಿಯ ಮಾನವೀಯ ಮೌಲ್ಯಕ್ಕೆ ಬೆಲೆಕೊಡುವ ವಿವರಣೆ ಸಮರ್ಥವಾಗಿದ್ದರೂ ಗಾಂಧಿ ಬದಲಾದ ಪರಿಸ್ಥಿತಿಯಲ್ಲಿ ಸಾಮಾನ್ಯ ಮನುಷ್ಯನಂತೆ ಮರುಗುವುದನ್ನು ತಿಳಿಸಿದ್ದಾರೆ. ಇದು ಮೆಚ್ಚತಕ್ಕ ವಿಚಾರ. ಅಂತ್ಯಕಾಲದಲ್ಲಿ ಯಾವ ರೀತಿ ತಾವು ನಂಬಿದ್ದ ನಂಬಿಕೆಗಳು ನಿಷ್ಕ್ರಿಯವಾದಾಗ ಜನ ಜರ್ಜರಿತರಾಗುತ್ತಾರೆ, ಹತಾಶರಾಗುತ್ತಾರೆ ಎಂಬುದನ್ನು

ವಿಶದಪಡಿಸುತ್ತಾ, ಗಾಂಧಿ ಕೂಡ ಇದರಿಂದ ಹೊರತಾಗಿರಲಿಲ್ಲ ಎನ್ನುವುದು ಇಲ್ಲಿ ವಾಸ್ತವ ಸಂಗತಿ. ಇದರಿಂದಾಗಿ ಕೃತಿ ಓದುಗರ ಮನಸೆಳೆಯುತ್ತದೆ.

'ಇಸಂ'ಗಳು ಸಾರ್ವಕಾಲಿಕ ಸತ್ಯಗಳಾಗಿ ಉಳಿಯುವುದಿಲ್ಲ. ಅವು ಬದಲಾಗುವ ಜಾಗತಿಕ ಸನ್ನಿವೇಶಗಳಲ್ಲಿ ಶಕ್ತಿಹೀನವಾಗುತ್ತವೆ. ಇದು ಐತಿಹಾಸಿಕ ಸತ್ಯ. ಈಗ ಅನೇಕ 'ವಾದ'ಗಳು ಕಳಾಹೀನವಾಗುತ್ತಿವೆ, ಅಪ್ರಸ್ತುತವಾಗುತ್ತಿವೆ. ಅಂತಹ ದುಃಸ್ಥಿತಿ ಗಾಂಧಿವಾದವನ್ನೂ ಬಿಟ್ಟಿಲ್ಲ. ಗಾಂಧಿವಾದದ ಮೂಲಮಂತ್ರಗಳಾದ ಅಹಿಂಸೆ, ಸತ್ಯ, ಶಾಂತಿ ಆತ ಬದುಕಿದ್ದಾಗಲೇ ಅಪ್ರಸ್ತುತವಾದದ್ದು ಗಾಂಧಿಗೂ ಸಹ ಮನದಟ್ಟಾಯ್ತು. ಸ್ವಾತಂತ್ರ್ಯೋದಯ ಮತ್ತು ದೇಶ ವಿಭಜನೆಯ ಸಂದರ್ಭಗಳಲ್ಲಿ ಗಾಂಧಿವಾದದ ಅಹಿಂಸೆ, ಸತ್ಯ, ಶಾಂತಿ, ಮಾನವೀಯತೆಗಳು ಅಸತ್ಯ, ಹಿಂಸೆಯ, ಆಕ್ರಮಣಗಳಿಂದ ಸಂಪೂರ್ಣ ಸೋತು ಸುಣ್ಣವಾದವು. ಮೌಲ್ಯಗಳ ಮಗ್ಗುಲು ಮುರಿದವು. ಇವನ್ನು ಗಾಂಧಿ ಕಣ್ಣಾರೆ ಕಂಡು ಕಂಗಾಲಾದ ಸ್ಥಿತಿಯನ್ನು ಈ ಕೃತಿ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಗಾಂಧಿ ಹತಾಶೆಯಿಂದ ಪರಿತಪಿಸಿ, "೧೨೫ ವರ್ಷ ಬದುಕುವ ಆಸೆಯನ್ನು ಬಿಟ್ಟು, ಈ ದುಃಸ್ಥಿತಿ ನೋಡಲಾರೆ, ದೇವರೆ ನನ್ನನ್ನು ಬೇಗ ಕರೆದಿಕೋ" ಎಂದು ಕಣ್ಣೀರಿಡುವುದು ಆತನ ವಾದದ ಸೋಲಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಅದಲ್ಲದೆ ಆ ಸಂದಿಗ್ಧ ಕಾಲದಲ್ಲಿ ರಾಜಕೀಯ ಭಟ್ಟಂಗಿಗಳ ವರ್ತನೆ ಗಾಂಧಿಗೆ ಅರ್ಥವಾಗುತ್ತದೆ. ಗಾಂಧಿವಾದವನ್ನಲ್ಲದೆ ಗಾಂಧಿಯನ್ನೇ ಮೂಲೆಗೆ ತಳ್ಳುತ್ತಾರೆ. ಗಾಂಧಿ ಒಬ್ಬಂಟಿಗನಾಗುತ್ತಾನೆ. ಗಾಂಧಿಯ ಗುಂಡಿಗೆಗೆ ಗೂಡ್ಸೆ ಗುಂಡಿಕ್ಕಿದ ನಿಜ. ಆದರೆ ಅದಕ್ಕೆ ಮೊದಲೇ ಗಾಂಧಿ ಸುತ್ತ ಇದ್ದ ರಾಜಕೀಯ ಧುರೀಣರು, ಗಾಂಧಿವಾದಕ್ಕೆ ಗುಂಡಿಟ್ಟಿದ್ದರು. ಇವೆಲ್ಲವನ್ನು ಲೇಖಕ ಬಹು ಸಮರ್ಥವಾಗಿ, ತಾರ್ಕಿಕವಾಗಿ ಸಂಶೋಧನಾತ್ಮಕ ನೆಲೆಯಲ್ಲಿ ದೃಢಪಡಿಸಿದ್ದಾರೆ. ಆದುದರಿಂದ ಇಂತಹ ವಿಮರ್ಶಾತ್ಮಕ ಪುಸ್ತಕ ಬರೆದ 'ರಾಗಂ' ಅಭಿನಂದನಾರ್ಹರು.

ಮಂಡ್ಯ **ಕೆ.ಮಾಯಿಗೌಡ**
೧೪/೧೦/೨೦೧೨

ವೃತ್ತಿಯಲ್ಲಿ ಎಂಜಿನಿಯರನಾದ ನಾನು ಮೂರು ದಶಕಗಳಿಂದ ಪರಿಸರ ಸ್ನೇಹಿ ಸೋಲಾರ್ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ, ಸಂಶೋಧನೆಗೈಯುವದು, ಓದುವುದು, ಬರೆಯುವುದು ಹಾಗೂ ಉಪನ್ಯಾಸ ಮಾಡುವುದು –ಹೀಗೇ ನಡೆದುಕೊಂಡು ಬಂದ ವಾಡಿಕೆ. ಆಧುನೀಕರಣದ ಕುರಿತು ಹೇಳುವಾಗ ಮಾಕ್ಸಿಮ್ ಗಾರ್ಕಿ ಹಾಗೂ ಮಹಾತ್ಮ ಗಾಂಧಿ ಆಡಿದ ಮಾತುಗಳನ್ನು ಪ್ರಸ್ತಾಪಿಸದೇ ನಾನು ಉಪನ್ಯಾಸ ಶುರು ಮಾಡಿದ್ದು ಬಹಳ ಕಮ್ಮೀ ಎಂದೇ ಹೇಳಬೇಕು "We are taught to fly in the air like birds and to swim in the water like fishes, but we do not know how to live like man

on the earth" ಎಂಬ ಗಾರ್ಕಿಯ ಮಾತುಗಳನ್ನು ಪ್ರಸ್ತಾಪಿಸುತ್ತ, ಗಾಂಧೀಜಿಯ ಇನ್ನೂ ಮಾರ್ಮಿಕವಾದ ಮಾತುಗಳನ್ನು ನೆನಪು ಮಾಡುತ್ತ ಮಾತಾಡುತ್ತೇನೆ. 'Wild life is decreasing in the forests but they are increasing in the cities' ಎಂದು ಆಧುನಿಕ ಮಾನವನ ದುರ್ಮಾರ್ಗಗಳ ಬಗ್ಗೆ ತೀಕ್ಷ್ಣವಾಗಿ, ಅಷ್ಟೇ ಕಠೋರವಾಗಿಯಲ್ಲದೇ ಹಾಸ್ಯದ ಲೇಪನ ಹಚ್ಚಿ ಹೇಳಿದ್ದ ಗಾಂಧೀಜಿಯ ಈ ಮಾತು ನನ್ನ ಮಾತುಗಾರಿಕೆಯ, ಉಪನ್ಯಾಸಗಳ ಅಂಗವಾಗಿ ಬಿಟ್ಟಿದೆ ಎನ್ನಲೇಬೇಕು. ಇಂತಹ ಗಾಂಧೀಜಿ ಕುರಿತು ಜಗತ್ತು ಕಂಡ ಇನ್ನೊಬ್ಬ ಮಹೋನ್ನತ ದಾರ್ಶನಿಕ ಐನ್‌ಸ್ಟೀನ್, ಮಹಾತ್ಮ ಗಾಂಧಿ ಬಗ್ಗೆ ಆಡಿದ ಮಾತುಗಳು ಗಾಂಧೀಜಿಯ ಅನುಪಮ ವ್ಯಕ್ತಿತ್ವವನ್ನು ಎತ್ತಿತೋರಿಸುತ್ತವೆ: 'Generations to come will scarce to believe that such a one as this walked the earth in flesh and blood'. ಇಷ್ಟು ಹೇಳುವುದಕ್ಕೆ ಕಾರಣವಿದೆ. ಚಿಕ್ಕಂದಿನಿಂದಲೂ ನನಗೆ ಆದರ್ಶಪ್ರಾಯವಾದ ಗಾಂಧಿ ಕುರಿತು ನಾನು ಓದಿದ್ದು ಎಳ್ಳಷ್ಟೆನ್ನಬಹುದು. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಗಾಂಧೀಜಿಯ ಆತ್ಮಕಥೆ "My experiment with truth" ಕೊಂಡದ್ದು ಮಾತ್ರ ನೆನಪಿದೆ. ನಾಲ್ಕೈದು ಪುಟಗಳನ್ನು ತಿರುವಿ ಹಾಕಿದ್ದು ಬಿಟ್ಟರೆ, ನಾನು ಗಾಂಧೀಜಿ ಕುರಿತು ದೀರ್ಘವಾಗಿ ಓದಲೇ ಇಲ್ಲ. ಇದರ ಬಗ್ಗೆ ಅರಿವಿನಿಂದಿರುವೆನಾದರೂ, ವಿಷಾದವಿಲ್ಲ. ಬುದ್ಧ-ಏಸುವಿನ ಸಾಲಿನಲ್ಲಿ ನಿಲ್ಲಬಹುದಾದ ನಮ್ಮ ಗಾಂಧೀಜಿಯ ಬಗ್ಗೆ ಓದುವುದಾಗದ್ದು ಅಗೌರವವೆಂಬ ವಿಚಾರವೂ ತಲೆಯಲ್ಲಿ ಸುಳಿದಿತ್ತು.

ಇತ್ತೀಚೆಗೆ ಗೆಳೆಯ 'ರಾಗಂ' ಅವರ 'ಗಾಂಧಿ-ಅಂತಿಮ ದಿನಗಳು' ಕೃತಿ ಕೈ ಸೇರಿದಾಗ ಮುಖಪುಟವೇ ಹಲವಾರು ವಿಸ್ಮಯಗಳ ಬಗ್ಗೆ ಹೇಳಿದಂತಿತ್ತು. ಕುತೂಹಲ ಕೆರಳಿ ಓದಲಾರಂಭಿಸಿದೆ - ಒಂದು ಕ್ಷಣವೂ ಬಿಡದೇ ಓದತೊಡಗಿದೆ. ದಿನನಿತ್ಯ ನನ್ನ ಕಂಪನಿಯ ವಿದ್ಯಮಾನಗಳನ್ನು ಕಡೆಗಣಿಸುವಷ್ಟರ ಮಟ್ಟಿಗೆ ರಾಗಂ ಅವರ 'ಗಾಂಧಿ' ನನ್ನ ತಲೆಯನ್ನು ಹೊಕ್ಕಂತಿತ್ತು. ಒಮ್ಮೆ ನನ್ನ ಹೆಂಡತಿ ಅಂದ ಮಾತು ಇದಕ್ಕೆ ಪೂರಕವೆನಿಸಬಹುದೇನೋ. 'ಏನ್ರೀ ಗಾಂಧೀಜಿಯ ಮೇಲೆ ರಿಸರ್ಚ್ ಮಾಡ್ತಾ ಇರೋ ಹಾಗೆ ಕಾಣ್ತದೆ, ಮಾಡ್ರಿ.. ಒಳ್ಳೇದೇ....' ಎಂದು ನಗುತ್ತ ಅನುಮೋದಿಸಿದ್ದಳು!


ಹೌದು, ರಾಗಂ ಅವರ 'ಗಾಂಧೀ' ಓದಿ ಮುಗಿಸಿದಾಗ ನನಗೆ ನಾನೇ ಅಂದುಕೊಂಡದ್ದು ಹೀಗೆ, ಈ 'ಗಾಂಧಿ' ಓದದೇ ಇದ್ದಿದ್ದರೆ ಬಹುಶಃ ನಾನು ಗಾಂಧೀಜಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೇ ಹೋಗುತ್ತಿದ್ದೆ. ರಾಗಂ ಅವರ ಅನೇಕ ಗುಣಗಳಲ್ಲಿ ಮನ ಮುಟ್ಟುವ- ಮನ ತಟ್ಟುವ ಹಾಗೆ ಬರೆಯುವ ಶೈಲಿಯು ಒಂದು. ಇತಿಹಾಸದ ಹಿನ್ನೆಲೆಯಲ್ಲಿ ಬರೆಯ ಹೊರಟಾಗ ಅದೊಂದು ಇತಿಹಾಸದ ಪುಸ್ತಕವಾಗಿ ಹೊರಹೊಮ್ಮುವ ಸಾಧ್ಯತೆಗಳೇ ಹೆಚ್ಚು. ಬದಲಾಗಿ ರಾಗಂ ಅವರ ಸೂಕ್ಷ್ಮಜ್ಞೆಯ ಬಲದಿಂದ 'ಗಾಂಧಿ' ಬರಹವು ಒಂದು ಅದ್ಭುತ ಕೃತಿಯಾಗಿ ದಾಖಲಾಗಿದೆ. ಮಹಾತ್ಮನೋರ್ವನಲ್ಲಿ

ಮನುಷ್ಯನನ್ನು ಕಾಣುವುದು ಸಾಮಾನ್ಯ ಮನುಷ್ಯನಿಗೆ ಕಷ್ಟದ ಕೆಲಸ. ಆದರೆ ರಾಗಂರಂತಹ ಸೂಕ್ಷ್ಮಗ್ರಾಹಿ, ಸೃಜನಶೀಲ ಸಾಹಿತಿಗೆ ಮಾತ್ರ ಅದು ಸಾಧ್ಯ. ಗಾಂಧಿಯಲ್ಲಿ ಮಹಾತ್ಮನನ್ನೂ, ಮಹಾತ್ಮನಲ್ಲಿ ಮನುಷ್ಯನನ್ನೂ, ಎಲ್ಲಕ್ಕೂ ಮಿಗಿಲಾಗಿ ಸಂಕೀರ್ಣ ಹಾಗೂ ಕ್ಲಿಷ್ಟಮಯವಾದ ಗಾಂಧಿ ಕುರಿತು ಎತ್ತುವ ಪ್ರಶ್ನೆಗಳೇ ರಾಗಂ ಅವರ ಸೂಕ್ಷ್ಮಜ್ಞತೆಗೆ ಸಾಕ್ಷಿಯಾಗಿದೆ. 'ವ್ಯಕ್ತಿ ಆರಾಧನೆ, ಎಲ್ಲೋ ನಮ್ಮನ್ನು ಗಾಂಧಿಯಿಂದ ದೂರ ಒಯ್ದು ನಿಲ್ಲಿಸಿಬಿಡುತ್ತದೆ. ಪ್ರಪಂಚದ ಎಲ್ಲ ಸಾಮಾಜಿಕ ಸುಧಾರಕರು ಈ ಕಾರಣಕ್ಕಾಗಿಯೇ ಅಲ್ಲವೇ ದೇವರಾಗಿರುವುದು" (ಪುಟ-೨೯) ಎಂಬ ಪ್ರಶ್ನೆ ಹಾಕುತ್ತ ರಾಗಂ ಬುದ್ಧ-ಬಸವಣ್ಣ ಎಂಬ ಸಾಮಾಜಿಕ ಸುಧಾರಕರಿಗೆ ಒದಗಿದ ಸ್ಥಿತಿ ಗಾಂಧಿಗೂ ಒದಗಬಹುದೆಂಬ ಕಳಕಳಿಯಲ್ಲಿ ಬರೆಯುತ್ತ 'ಗಾಂಧಿ' ಕೃತಿಗೆ ಮೆರಗು ತರುತ್ತಾರೆ. ರಾಗಂ ಎತ್ತುವ ಇನ್ನೊಂದು ಪ್ರಶ್ನೆಯ ಮಗ್ಗುಲು ನೋಡಿ; "ನೂರಾರು ವರ್ಷಗಳಿಂದ ಸಂಪಾದಿಸಿದ ಆಸ್ತಿಯನ್ನು, ಭೂಮಿ ಬಂಧುಗಳನ್ನು ಬಿಟ್ಟು, ಹಿಂದೂಗಳೇ ಪಾಕಿಸ್ತಾನವನ್ನು ಬಿಟ್ಟು ಬನ್ನಿ ಎನ್ನುವ ನಿಮ್ಮ ಕರೆಯಲ್ಲಿ ಯಾವ ಕಾಳಜಿಯಿದೆ ಗಾಂಧಿಯವರೆ?...." ಹೀಗೆ ಕೃತಿಯ ತುಂಬ ತುಂಬಾ ಆತ್ಮೀಯತೆಯಿಂದ ಗಹನ ಪ್ರಶ್ನೆಗಳನ್ನು ಎತ್ತುತ್ತಾ ಗಾಂಧೀಜಿಯ ಸತ್ಯಾನ್ವೇಷಣೆಯ ಹಾದಿಯಲ್ಲೋರ್ವ ಸಹಚರನಂತೆ ರಾಗಂ 'ಗಾಂಧಿ'ಗೆ ನ್ಯಾಯ ದೊರಕಿಸಿದ್ದಾರೆ.

'ಬಾಣಲೆ ಪಕ್ಕ ನಿರಾಯುಧ ಬಾಣಸಿಗ' ಎಂಬ ಭಾಗದಲ್ಲಿಯಂತೂ ಎಂತವರ ಕರುಳು ಕೂಡ ಕಲುಕುವಂತೆ ಗಾಂಧಿ ತನ್ನ ಹೆಂಡತಿಯ ಚಿತೆಗೆ ಬೆಂಕಿಯಿಡುವ ಸಂದರ್ಭದಲ್ಲಿ ರಾಗಂ ವಿವರಿಸುತ್ತಾರೆ: 'ಮಹಾತ್ಮ'ನೋರ್ವ ಹೇಗೆ ತನ್ನ ಸುದೀರ್ಘ ಬಾಳ ಸಂಗಾತಿಯ ಅಗಲಿಕೆಯಲ್ಲಿ ಗಳಗಳನೇ ಅತ್ತು ಬಿಟ್ಟಾಗ '...ಗಾಂಧಿ ಮನುಷ್ಯನಾಗಿದ್ದ' ಎಂದು ಹೇಳುವ ಪರಿ ರಾಗಂ ಅವರ ಕವಿಹೃದಯವನ್ನು ಬಿಂಬಿಸುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದರಿಂದ ಗಾಂಧಿ ನಮಗೆ 'ರಾಷ್ಟ್ರಪಿತ'ನಾದ ಎಂದರೆ ಅದು ಗಾಂಧೀಜಿಗೆ ಅಪಚಾರವೆಸಗಿದಂತಾದೀತು. ರಾಗಂ ಅವರು ಇಲ್ಲಿ ಸಹಾಯಕ್ಕೆ ಬರುತ್ತಾರೆ. 'ಭಾರತದ ಬೀದಿ ಬೀದಿಗಳಲ್ಲಿ ಜಾತಿ-ಧರ್ಮದ ಹೆಸರಿನಲ್ಲಿ ಕೊಲೆಯಾಗುತ್ತಿದ್ದ, ಅತ್ಯಾಚಾರಕ್ಕೊಳಗಾಗುತ್ತಿದ್ದ ಮಹಿಳೆಯರನ್ನು, ಮಕ್ಕಳನ್ನು ನೋಡಿ ಗಾಂಧಿ ಶಬ್ದಶಃ ನಲುಗಿ ಹೋಗಿದ್ದ. ತನ್ನ ಕಣ್ಣೆದುರೆ ಅವಸಾನಕ್ಕೊಳಗಾಗುವ ಮನೆತನವನ್ನು ನೋಡಿ ಮಮ್ಮಲ ಮರುಗಿದ ಕುಟುಂಬದ ಯಜಮಾನನಂತಾಗಿತ್ತು ಗಾಂಧಿಯ ಕೊನೆಯ ದಿನಗಳ ಸ್ಥಿತಿ....? ಹೀಗೆ ಓದುಗರ ಹೃದಯ ವಿಷಾದದಿಂದ ಮಡುಗಟ್ಟುವಂತೆ ಬರೆಯುತ್ತಾ ಗಾಂಧಿಯ ಅಗಾಧ ವೈಶಾಲ್ಯತೆಯನ್ನು ತೆರೆದಿಡುತ್ತಾರೆ.

ಗಾಂಧೀಜಿ ಘನತೆಯ ಗುಣಗಾನ ಮಾಡುತ್ತ ರಾಗಂ ಬರೆಯುವ ರೀತಿಯೇ ಅಪ್ಯಾಯಮಾನವಾದದ್ದು. ಈ ಕಾರಣಕ್ಕೇ ಅವರು ಓದುಗನಿಗೆ ಗಾಂಧೀಯಷ್ಟೇ ಗಹನವಾಗಿ ಕಂಡುಬಿಡುತ್ತಾರೆ. ರಾಗಂ ಅವರು ತಮ್ಮನ್ನು ಅದೆಷ್ಟು ತೀಕ್ಷ್ಣವಾಗಿ ತಮ್ಮ ಬರಹದಲ್ಲಿ



ಅರ್ಪಿಸಿಕೊಳ್ಳುತ್ತಾರೆ ಎಂಬುದಕ್ಕೆ ೧೪ನೇ ಪುಟದಲ್ಲಿಯ ಈ ತುಣುಕು ನೋಡಿ: "ಗಾಂಧಿಯ ಮರಿಮಗನಂತೆ ಕುಳಿತುಕೊಂಡು ಆತನ ಈ ಸಾಲುಗಳನ್ನು ಓದುವಾಗ ನನಗಿದು ಪವಾಡವೆನಿಸುತ್ತಿಲ್ಲ. ಸಾವಿರ ವರ್ಷಗಳೇನೂ ಬದುಕದ ಗಾಂಧಿ ಬರುವ ಸಾವಿರ ವರ್ಷಗಳ ಚರ್ಚೆಗೆ ಗ್ರಾಸವಾಗುವಂತೆ ಸಾಗಿ ಬಂದ ದಾರಿಯನ್ನು ಗಮನಿಸುತ್ತಿದ್ದೇನಷ್ಟೇ. ತಾವು ನಡೆಯುವ ರಸ್ತೆಯಲ್ಲಿ ಬಿದ್ದ ಒಂದು ಸಣ್ಣಕಲ್ಲನ್ನೂ ಎತ್ತಿಹಾಕದ ಪಂಡಿತರೊಂದಿಗೆ, ಚಿಂತಕರೊಂದಿಗೆ, ಸೇರಿಕೊಂಡು ನಾನೂ ಅದೆಷ್ಟೋ ಬಾರಿ ಈ ಗಾಂಧಿ ಎನ್ನುವ ಗಾಂಧಿಯ ಗುಣಾವಗುಣಗಳ ಪಟ್ಟಿಯನ್ನು ಇಟ್ಟಿರಬಹುದೇನೋ. ಚರಂಡಿ ಪಕ್ಕ ಶೆರೆಯ ಅಮಲಿನಲ್ಲಿ ಬಿದ್ದ ಕುಡುಕನೂ ಗಾಂಧಿಯ ಕುರಿತು ಮಾತನಾಡುತ್ತಾನೆ ಬಿಡಿ. ಅದೇ ನಮ್ಮ ಗಾಂಧಿಯ ವಿಶೇಷತೆ. ಇಂತಹ ಹತ್ತು ಹಲವು ಉದಾಹರಣೆಗಳು 'ಗಾಂಧಿ..' ಪುಸ್ತಕದ ಪ್ರತಿಯೊಂದು ಪುಟದಲ್ಲೂ ಓದುಗ ಕಾಣಬಹುದಾಗಿದೆ. ಹೀಗೆ ವಿನಮ್ರವಾಗಿ, ಪ್ರತಿ ಓದುಗನ ಹೃದಯವೇ ಆಗಿ ಬರೆವ ರಾಗಂ ಕನ್ನಡ ಸಾಹಿತ್ಯ ಕಂಡ ಅದ್ಭುತ ಸಾಹಿತಿ ಎಂಬುದರಲ್ಲಿ ಎರಡು ಮಾತಿಲ್ಲ.

ಹೀಗಿರುವಾಗ ನನಗೊಮ್ಮೊಮ್ಮೆ ರಾಗಂ ಅವರ ಬಗ್ಗೆ ಹುಟ್ಟಿಕೊಂಡ ಗುಮಾನಿಯ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳದಿರಲು ನನಗೆ ಸಾಧ್ಯವಾಗುತ್ತಿಲ್ಲ: 'ಗಾಂಧಿಯ ಬಗ್ಗೆ ಇಷ್ಟೊಂದು ತೀವ್ರವಾಗಿ ಬರೆಯಬಲ್ಲ ರಾಗಂ ಆಳದಾಳದಲ್ಲಿ ಓರ್ವ 'ಅಭಿನವ ಗಾಂಧಿ' ಆಗಿರಬಹುದೇ?' ಅದಕ್ಕೇ ನನಗನ್ನಿಸುತ್ತದೆ: ಈ ಕೃತಿಯ ಟೈಟಲ್ ರಾಗಂ V/s ಗಾಂಧಿ' ಎಂದಿದ್ದರೂ ಅತಿಶಯೋಕ್ತಿಯಾಗುತ್ತಿರಲಿಲ್ಲವೇನೊ!

ಈ ಕೃತಿಯ ಇನ್ನೊಂದು ವಿಶೇಷ ಮಗ್ಗುಲಿನ ಬಗ್ಗೆ ಹೇಳಲೇಬೇಕು. ಅಲ್ಲಲ್ಲಿ ಮೂಡಿಬಂದ ರಾಗಂ ಅವರ ತಿಳಿಹಾಸ್ಯ ಪುಸ್ತಕದ ಒರತೆಯನ್ನು ಹೆಚ್ಚಿಸಿದೆ. ಸ್ವಾತಂತ್ರ್ಯ ದೊರಕುವ ಸಂದರ್ಭದಲ್ಲಿಯೇ ಗಾಂಧಿಗೆರಗಿದ ಟೀಕೆಗಳು ಗಾಂಧಿ ತಾನು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಭಯಂಕರವಾಗಿದ್ದವು ಎಂದು ಬರೆಯುತ್ತ ಗಾಂಧಿಗೊದಗಿದ್ದ ಹಲವಾರು ಒತ್ತಡಗಳ ಬಗ್ಗೆ ವಿವರಿಸುವಾಗ ರಾಗಂ ಅವರು 'ಅಯ್ಯೋ, ಗೋಡ್ಸೆಯ ಗುಂಡೂ ಇವುಗಳಷ್ಟು ಭೀಕರವಾಗಿರಲಿಲ್ಲ ಬಿಡಿ!' ಎಂದು ಪನ್ ಮಾಡುತ್ತಾರೆ; ಓದುಗನ ಮೂಗಿಗೆ ನಶೀ ಪುಡಿ ಏರಿಸುತ್ತಾರೆ! ರಾಗಂ ಅವರು ಓರ್ವ ಇತಿಹಾಸಕಾರನಾಗಿ, ಸಹೃದಯಿ ಕವಿಯಾಗಿ, ಸಂಶೋಧಕನಾಗಿ ಬರೆದ ಈ 'ಗಾಂಧಿ' ಕೃತಿ ನನಗಂತೂ ಒಂದು ಮೇರು ಕೃತಿಯಾಗಿ ಕಾಣಿಸುತ್ತದೆ. ರಾಗಂಗೀಗ ೪೨ ವರುಷ. ಅವರು ರಚಿಸಿದ ಸಾಹಿತ್ಯಿಕ ಕೃತಿಗಳು ೪೭! ಗುಣ.....ದಲ್ಲಿ ಮಾತ್ರವಲ್ಲದೇ ಸಂಖ್ಯೆಯಲ್ಲೂ ಮುನ್ನಡೆ ಸಾಧಿಸಿದ ರಾಗಂ ಅವರನ್ನು ಕನ್ನಡ ಓದುಗರ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರ ನೂರನೇ ಕೃತಿಗಾಗಿ ಕಾಯುತ್ತ ನಮ್ಮ ಗಾಂಧಿ ಅಜ್ಜನ ಸಂಪೂರ್ಣ ಪರಿಚಯಕ್ಕಾಗಿ ಅವರನ್ನು ವಂದಿಸುತ್ತ ವಿರಮಿಸುವೆ.

ಬೇಗಂ ಪೇಟ್, ಹೈದರಾಬಾದ್ – 560016
ಆಂಧ್ರಪ್ರದೇಶ.

ಧರ್ಮದಾಸ ಬಾರ್ಕಿ

ಆದರಣೀಯ ಶ್ರೀ ರಾಜಶೇಖರ ಮಠಪತಿ (ರಾಗಂ) ಅವರಿಗೆ

ಶಿವಶರಣು.

ಸಹೃದಯರೇ,

ಮಗನಂತೆ ಮೆಚ್ಚಿ ಪ್ರೀತಿ ಧಾರೆ ಎರೆದ ಹಿರಿಯ ಪಂಜಾಬಿ ನಾಟಕಕಾರ, ಸಹೃದಯಿ ಆತ್ಮಜಿತ್ ಸಿಂಗ್ ಇವರ ಸ್ಮರಣೆಯೊಂದಿಗೆ ಬರೆಯಲಾದ ತಮ್ಮ ಕೃತಿ ಆಕರ್ಷಕ ಮುಖಪುಟ ವಿನ್ಯಾಸ ಮತ್ತು ಅಂದವಾದ ಮುದ್ರಣದೊಂದಿಗೆ ಸುಂದರವಾಗಿ ಮೂಡಿಬಂದಿದೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಎಲ್ಲ ಚಳುವಳಿ, ಸತ್ಯಾಗ್ರಹ, ಬೃಹತ್ ಜಾಗೃತಿ ಸಮಾರಂಭಗಳು, ಜನಜಾಗೃತಿಗೊಳಿಸಿದ ವಿಷಯಗಳೊಂದಿಗೆ ಈ ಕೃತಿ ಮೌಲಿಕವಾಗಿ ಮೂಡಿಬಂದಿದೆ. ರಾಷ್ಟ್ರಪಿತನ ವಿಷಯದಲ್ಲಿ ಇಂತಹ ಕೃತಿಗಳ ಅವಶ್ಯಕತೆ ಇತ್ತು. ಈ ದಿಸೆಯಲ್ಲಿ ನೀವು ಅಭಿನಂದನಾರ್ಹರು.

ಇತಿ ಶರಣು

೧೫-೦೭-೨೦೧೨ **ಶ್ರೀ ಜಗದ್ಗುರು ತೋಂಟದಾರ್ಯರು**

ಮೋಹನದಾಸ ಕರಮಚಂದ ಗಾಂಧಿ ಕುರಿತು ಅಸಂಖ್ಯಾತ ಕೃತಿಗಳು ಪ್ರಕಟವಾಗಿವೆ; ಕನ್ನಡದಲ್ಲಿ ಅಪಾರ ಗ್ರಂಥಗಳು ರಚನೆಯಾಗಿರುವವು. ಡಾ। ರಾಜಶೇಖರ ಮಠಪತಿ ಅವರ 'ಗಾಂಧಿ : ಅಂತಿಮ ದಿನಗಳು' ವಿಭಿನ್ನವಾದ ಅಪರೂಪದ ಕೃತಿ. ಇದು ಸ್ವಾತಂತ್ರ್ಯ ಬಂದ ಸನ್ನಿವೇಶದಲ್ಲಿ ದೇಶ ಎದುರಿಸಿದ ವಿಭಜನೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಆಗ ಗಾಂಧೀಜಿ ಅನುಭವಿಸಿದ ಮಾನವ ಸಹಜ ನೋವುಗಳು, ತಲ್ಲಣಗಳು, ಸಂಕಷ್ಟಗಳಿಗೆ ಸಂಬಂಧಿಸಿದ ವಿವರಗಳು ಸಾಮಾನ್ಯ ಜನರಿಗೆ ಮತ್ತು ಓದುಗರಿಗೆ ಅಷ್ಟಾಗಿ ತಿಳಿಯದು. ಆ ಕೊರತೆಯನ್ನು ನೀಗಿಸುವ ದಿಸೆಯಲ್ಲಿ ಅವುಗಳನ್ನೆಲ್ಲ ಜಾಣ್ಮೆಯಿಂದ ಹೆಣೆದು ಒಂದು ಸೊಗಸಾದ ಪುಸ್ತಕವನ್ನು ಮಠಪತಿ ನೀಡಿದ್ದಾರೆ. ಇದು ಗಾಂಧಿ ಸಾಹಿತ್ಯಕ್ಕೇ ದೊಡ್ಡ ಕೊಡುಗೆಯಾಗಿದೆ.

ಸಾಧಾರಣವಾಗಿ ಗಾಂಧೀಜಿಯನ್ನು ಮಹಾತ್ಮನನ್ನಾಗಿ ಭಾವಿಸಿ ಬರೆದವರೂ ಉಂಟು; ಇದಕ್ಕೆ ವಿರುದ್ಧವಾದ ಧೋರಣೆ ತಾಳಿರುವ ಬರಹಗಳೂ ಸಾಕಷ್ಟು ಇವೆ. ಆದರೆ ಇವೆರಡು ಅತಿರೇಕಗಳಿಂದ ಬಿಡಿಸಿಕೊಂಡು ಗಾಂಧಿಯ ಸಾಹಸಮಯ ಬದುಕಿನ ಎಲ್ಲ ಮಗ್ಗುಲುಗಳನ್ನು, ಸರಳತೆ, ಸಂಕೀರ್ಣತೆಗಳನ್ನು ಮನಗಾಣಿಸುವಲ್ಲಿ ಮಠಪತಿ ಅವರು ಗಳಿಸಿರುವ ಯಶಸ್ಸು ವಿಸ್ಮಯಕರವಾದುದು. ಅವರದು ಹೃದ್ಯ ವಸ್ತುನಿಷ್ಠತೆ, ರುಚಿಕಟ್ಟಾದ ಅವರ ಕನ್ನಡ ಶೈಲಿ ಚೇತೋಹಾರಿಯಾಗಿದೆ.

೩೧-೦೮-೨೦೧೨ **ಪ್ರೊ ಕೆ.ಎಸ್.ಭಗವಾನ್**

ಗಾಂಧಿ ಅಂತಿಮ ದಿನಗಳು : ಅಚ್ಚರಿ ಮತ್ತು ಆತಂಕ

ಗಾಂಧಿಯಂತಹ ಗಾಂಧಿ ಕೂಡ ದಿಕ್ಕುಗಾಣದಂತೆ ಇತಿಹಾಸದ ನಾಗಾಲೋಟದಲ್ಲಿ ಒಂದು ಕ್ಷಣ ಅವಕ್ಕಾಗಿ ಗಕ್ಕನೆ ನಿಲ್ಲುತ್ತಾನೆ ಎಂಬ ಸೂಕ್ಷ್ಮವನ್ನು ಉಲ್ಲೇಖಿಸುತ್ತಾ, 'ನಮ್ಮೊಳಗಿನ ಮನುಷ್ಯ ಈತ' ಎಂದು ಸಾರುವ ರಾಜಶೇಖರ ಮಠಪತಿಯವರು ಈ ಕೃತಿಯಲ್ಲಿ ಚಾರಿತ್ರಿಕ ದಾಖಲೆಗಳ ಆಧಾರಗಳೊಂದಿಗೆ ಗಾಂಧಿಯ ವ್ಯಕ್ತಿತ್ವದಲ್ಲಿ ತಮ್ಮದೇ ಚಿಕಿತ್ಸಕ ನೋಟ ಬೀರಿರುವುದನು. ಕಾಣಬಹುದಾಗಿದೆ. ಇಂತಹ ಒಂದು ಕೃತಿ ಗಾಂಧಿ ಕುರಿತು ಈ ಮೊದಲು ಬಂದಿಲ್ಲವೆಂದೇ ಹೇಳಬೇಕು.

ಒಬ್ಬ ಮಹಾತ್ಮನೆನಸಿಕೊಂಡವನನ್ನು 'ಸಾಮಾನ್ಯ'ನೆಂದು ತಿಳಿದು ಓದುವುದು ಏಕಕಾಲಕ್ಕೆ ಅಚ್ಚರಿ ಮತ್ತು ಆತಂಕ ಹುಟ್ಟಿಸುತ್ತವೆ. 'ಗಾಂಧಿ: ಅಂತಿಮ ದಿನಗಳ'ನ್ನು ಓದುತ್ತಲೇ ಸಾಮಾನ್ಯನ ಪಾಡಿನ ಹೊಸ ಅನುಭವವನ್ನೂ ಕಟ್ಟಿಕೊಡುವ ಈ ಪುಸ್ತಕದಲ್ಲಿ ಗಾಂಧಿಯ ಮನಸ್ಸು ಅನಾವರಣಗೊಳ್ಳುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದಕ್ಕಿದ ಸಾಂದರ್ಭಿಕ ವಿಜೃಂಭಣೆಯ ನಡುವೆಯೂ ಅನಾಥನಂತೆ ಕಾಣುವ ಗಾಂಧಿ, ವಿಭಜನೆಯ ಭೀಕರ ಪ್ರಶ್ನೆಗಳ ಮುಂದೆ ಜನ ವ್ಯಕ್ತಪಡಿಸುವ ದಿಗ್ಭ್ರಮೆಗಳಿಗೂ ವಸ್ತುವಾಗುತ್ತಾನೆ. ಇನ್ನು ಕೆಲವೊಮ್ಮೆ ಅಪಘಾತಕ್ಕೀಡಾದ ವ್ಯಕ್ತಿ ಸಹನೀಯ ಗುಣಗಳೊಂದಿಗೆ ಎಲ್ಲ ನೋವನ್ನೂ ಉಂಡು ಅಸಹಾಯಕನಾಗಿ ಹಾಸಿಗೆಯಲ್ಲಿ ಮಲಗಿರುವವನಂತೆ ಗಾಂಧಿ ಗೋಚರಿಸುತ್ತಾನೆ.

'ಗಾಂಧಿ : ಅಂತಿಮ ದಿನಗಳು' ಪುಸ್ತಕ ಕೈಗೆತ್ತಿಕೊಂಡಾಗ ನಮ್ಮದೇ ಒಳಲಹರಿಗಳನ್ನು ಮನದಲ್ಲಿಟ್ಟುಕೊಂಡು ಓದಲು ತೊಡಗುವ ಓದುಗನಿಗೆ ತತ್‌ಕ್ಷಣಕ್ಕೆ ಕ್ಲೀಷೆ ಎನಿಸಿಬಿಡುವ ಈ ಪುಸ್ತಕ ಗಾಂಧಿಯ ಅಂತರಂಗದ ಹೊಸ ಹೊಳಹುಗಳನ್ನು ವಿಶಿಷ್ಟ ರೀತಿಯಲ್ಲಿ ತೆರೆದಿಡುತ್ತಾ ತನ್ನ ಮೊದಲಿನ ಅಭಿಪ್ರಾಯದಿಂದ ಓದುಗ ಹೊರಬರುವಂತಾಗುತ್ತದೆ ಮತ್ತು ಮಠಪತಿಯವರ ಗಾಂಧಿ ನಮ್ಮನ್ನು ಕಾಡಲಾರಂಭಿಸುತ್ತದೆ. ಲೇಖಕರು ಅಲ್ಲಲ್ಲಿ ಉಲ್ಲೇಖಿಸಿರುವ ಗಾಂಧಿಯ ನೇರ ಅಭಿಪ್ರಾಯಗಳನ್ನು ಸೀಳುತ್ತ ಸಂಕ್ಷಿಪ್ತ ಸ್ಥಿತಿಗತಿಯನ್ನು ಗಂಭೀರವಾಗಿ ಕಥನಿಸಿರುವುದನ್ನು ಕಾಣಬಹುದಾಗಿದೆ.

ಗಾಂಧಿಯ ಬಗೆಗಿನ ಇದುವರೆಗಿನ ವ್ಯಾಖ್ಯಾನಗಳನ್ನು ಶ್ರದ್ಧೆಯಿಂದ ಓದಿದ ಮನಸ್ಸುಗಳಿಗೆ ವಿರಾಮದ ಚಹಾ ಸೇವನೆಯಂತೆ ಒದಗುವ ಈ ಪುಸ್ತಕ ವರ್ತಮಾನದ ಭ್ರಷ್ಟ ವ್ಯವಸ್ಥೆಯ ನಡುವೆಯೂ ಗಾಂಧಿಯ ಸುಳಿದಾಟಗಳನ್ನು ಮತ್ತೆ ಮತ್ತೆ ಜೀವಂತಗೊಳಿಸುತ್ತಾ ಹೋಗುವಲ್ಲಿ ಯಶಸ್ವಿಯಾಗಿದೆ. ಈ ಎಲ್ಲ ವ್ಯವಸ್ಥೆಯ ನಿಗೂಢತೆಯ ನಡುವೆ ಮಿಂಚಿನ ಸೆಳಕು ಹಾಯುವಂತೆ ಈ ಗಾಂಧಿ ಸುಳಿದು ನಮ್ಮ ದಿಗಿಲು, ಈರ್ಷ್ಯೆ ಮತ್ತು ತಲ್ಲಣಗಳಿಗೆ ಮುಲಾಮು ಸವರುತ್ತಾನೆ.

ಹಲವು ಹಳವಂಡಗಳ ಸಮಾಜದ ನಡುವೆಯೇ ಬೇಕು-ಬೇಡವೆನ್ನುವ ಮನಸ್ಸುಗಳಲ್ಲಿ ಹಾದು ಹೋಗುವ ಗಾಂಧಿಯೆಂಬ ವ್ಯಕ್ತಿಯ ಒಳಗಿನ ತುಮುಲಗಳನ್ನು ತನ್ನದೇ ಆತ್ಮೀಯ ಶೈಲಿಯಲ್ಲಿ ಹಿಡಿದಿಡಲು ಯತ್ನಿಸಿರುವ ರಾಜಶೇಖರ ಮಠಪತಿಯವರ ಬರಹ ವ್ಯಾಮೋಹರಹಿತವಾಗಿದೆ. ಗಾಂಧಿಯ ಒಳಗಿನ ಹಿಂಸೆಯೂ ಅಹಿಂಸೆಯ ಸ್ವರೂಪ ಪಡೆದುಕೊಂಡು ಅನಾವರಣಗೊಂಡ ಉತ್ಕಟ ಸ್ಥಿತಿಯ ನಡುವೆಯೇ ಕೊನೆಯ ದಿನಗಳ ಆತನ ತುಮುಲಗಳು ಸೂಕ್ಷ್ಮಗ್ರಾಹಿಯಾದ ಓದುಗನನ್ನು ಕಾಡತೊಡಗುತ್ತವೆ. ಒಬ್ಬ ಸಾಮಾನ್ಯನಂತೆಯೇ ತೋರಿ ಬರುವ ಗಾಂಧಿಯನ್ನು ನಿರ್ಭಾವುಕತೆಯಿಂದ ನೋಡುತ್ತಲೇ, ನನ್ನವನೆನ್ನುತ್ತಲೇ, ದೂರ ತಳ್ಳುತ್ತಲೇ ಆತನ ನಡವಳಿಕೆಯಲ್ಲಿನ ರಾಗ-ದ್ವೇಷರಹಿತ ಭಾವನೆಯನ್ನು ಢಾಳಾಗಿಸುವ ಮಠಪತಿಯವರ ಪ್ರಯತ್ನ ಶ್ಲಾಘನೀಯ.

ಈ ಯುಗದಲ್ಲಿ ಮತ್ತು ಚಾರಿತ್ರಿಕ ಘಟ್ಟದಲ್ಲಿ ಉತ್ತುಂಗ ಸ್ಥಾನ ಪಡೆದಿರುವ 'ಗಾಂಧಿ : ಅಂತಿಮ ದಿನಗಳು' ಈಗ ನಾವು ಬದುಕುತ್ತಿರುವ ಸಮಾಜದ ವರ್ತಮಾನದ ದಿನಗಳಂತೆಯೆ ಭಾಸವಾಗುತ್ತವೆ. ವೈರುಧ್ಯಗಳ ನಡುವೆ ಅಸಹಾಯಕನಂತೆ ಗೋಚರಿಸುತ್ತಲೇ ತನ್ನ ಧ್ಯಾನದಿಂದ ಯಾವ ಪಟ್ಟನ್ನು ಬಿಟ್ಟುಕೊಡದ ಹಠವಾದಿಯಾಗಿಯೂ ನಿಲ್ಲುವ ಗಾಂಧಿ ತನ್ನ ಕೊನೆಯ ದಿನಗಳನ್ನು ಕಳೆದ ರೀತಿಯಿಂದಾಗಿ ನಮ್ಮವನಾಗುತ್ತಾನೆ.

ತಮ್ಮ ಬದುಕಿನ ಅಂತಿಮ ಕ್ಷಣಗಳಲ್ಲಿ, ಧಿಗ್ಗನೆ ತಮ್ಮ ತತ್ವಗಳಿಗೇ ತಿರುಗಿ ನಿಲ್ಲುವ ಹಲವು ಮಹಾಪುರುಷರಿಗಿಂತ ಸಾಮಾನ್ಯನಂತೆ ಕಾಣುವ ನಮ್ಮ ಈ ಗಾಂಧಿಯನ್ನು ಮಠಪತಿಯವರು ತಥಾಕಥಿತ ತೀವ್ರ ವಿಮರ್ಶೆಗೆ ಒಳಪಡಿಸದೆ ಮಾನವೀಯವಾಗಿ ಓದುತ್ತ, ಬರಹದುದ್ದಕ್ಕೂ ಎಲ್ಲಿಯೂ ಓದುಗನ ಮೇಲೆ ತಮ್ಮ ಅಭಿಪ್ರಾಯ ಹೇರದೆ ಸುಮ್ಮನಾಗುವ ಅವರ ತಂತ್ರವೂ ಕೂಡ ಈ ಪುಸ್ತಕದ ಪ್ಲಸ್ ಪಾಯಿಂಟ್. ಇಂತಹ ಗಾಂಧಿಯನ್ನು ನೀವು ಓದಲೇಬೇಕು. ಯಾಕೆಂದರೆ ಈತ ನಿಮ್ಮ ಇದುವರೆಗಿನ ಗಾಂಧಿಯಲ್ಲ.

ಪ್ರೊ. ರವಿಶಂಕರ

(ಮಾಜಿ ಕ.ಸಾ.ಪ ತಾಲೂಕ ಅಧ್ಯಕ್ಷರು)
ಗುಂಡ್ಲುಪೇಟೆ

ಮತ್ತೆ 'ಭಾನುವಾರ' ಸಾಪ್ತಾಹಿಕದಲ್ಲಿ ಡಾ॥ ರಾಜಶೇಖರ ಮಠಪತಿ (ರಾಗಂ) ಅವರ 'ಗಾಂಧಿ : ಮುಗಿಯದ ಅಧ್ಯಾಯ' ಆರಂಭವಾಗಿರುವುದು ಖುಷಿಯ ಸಂಗತಿ.

ಗಾಂಧಿಯೆಂಬ ಸಂತನ ಬಾಳು ಬಹಳ ಸಂಕೀರ್ಣವಾದುದು. ಆತನ ನಡೆ-ನುಡಿ ಬಾಹ್ಯಕ್ಕೆ ಕಾಣುವುದಕ್ಕಿಂತಲೂ ಭಿನ್ನವಾಗಿ ಆಂತರ್ಯದಲ್ಲಿ ಹುದುಗಿರುವಂತದ್ದು. ಆತನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದೆಂದರೆ ಆತನ ತಲ್ಲಣಗಳಿಗೆ ನಾವು ಎದೆಯೊಡ್ಡುವುದೇ ಆಗಿದೆ.

ಮಠಪತಿಯವರು ಗಾಂಧಿಯನ್ನು ಖಂಡಿರಿಸುವ ರೀತಿ ಅನಾದೃಶ್ಯ. ಈ ಲೇಖನದ ಮೂಲಕ ಗಾಂಧಿ ನಮ್ಮಂಥವರಿಗೆ ಹೊಸದಾಗಿ ಕಾಣುತ್ತಿದ್ದಾರೆ ಎಂದು ಅನಿಸಿದರೆ, ಬರಹದ ಓಘ ಅಷ್ಟು ಸತ್ವಯುತವಾಗಿದೆ ಎಂದೇ ಅರ್ಥ.

ಓದುಗರ ಓಲೆ — **ನಿರ್ಮಲಾದೇವಿ**

'ಭಾನುವಾರ' — **ಬೆಳಗಾವಿ**

೦೨/೧೨/೧೨

ರಾಗಂ ಅವರು ಬರೆದ "ಗಾಂಧಿ : ಅಂತಿಮ ದಿನಗಳು" ಕನ್ನಡ ಸಾರಸ್ವತ ಲೋಕದ ಒಂದು ಗಂಭೀರ ಕೃತಿ. ಈ ಗಾಂಧಿ ಎಂಬ ಕಥಾನಕದ ಒಂದು ಭಾಗವಾಗಿ ಮಠಪತಿ ಓದುಗರನ್ನು ಒಳಮಾಡಿಕೊಳ್ಳುವ ರೀತಿಯೇ ವಿನೂತನ. ಇತಿಹಾಸದ ಇಂತಹ ಸಂಕೀರ್ಣ ಪಾತ್ರಗಳ ಅನಾವರಣವನ್ನು ಅತ್ಯಂತ ಸಮರ್ಥ ಮತ್ತು ಸಂವೇದನಾಶೀಲ ಬರಹಗಾರ ಮಾತ್ರ ಯಶಸ್ವಿಯಾಗಿ ನಿಭಾಯಿಸಬಲ್ಲ. ಅದು ಮಠಪತಿಯವರಿಗೆ ಇಲ್ಲಿ ಸಾಧ್ಯವಾಗಿದೆ. ಒಂದು ಸಂಕೇತವಾಗಿ ಮತ್ತೆ ಮತ್ತೆ ನನ್ನನ್ನು ಕಾಡಿದ ಎರಡು ಪಾತ್ರಗಳೇ ಬಸವಣ್ಣ ಮತ್ತು ಗಾಂಧಿ. ಗಾಂಧಿಯ ಅನೇಕ ಸಿದ್ಧಾಂತಗಳೊಂದಿಗೆ ನನ್ನ ಸಹಮತವಿಲ್ಲ. ಹಾಗೆ ನೋಡಿದರೆ ಈ ದೇಶದ ಅನೇಕ ಸಂದರ್ಭಗಳಿಗೆ ಅಂಬೇಡ್ಕರ್ ಹೆಚ್ಚು ಪ್ರಸ್ತುತ. ಆದರೆ ಗಾಂಧಿ ನಮ್ಮ ಚರಿತ್ರೆಯ ಅನಿವಾರ್ಯ. ಇಂತಹ ಒಂದು ಪಾತ್ರವನ್ನು ರಾಜಶೇಖರ ಮಠಪತಿ ಎಂಬ ಒಬ್ಬ ವ್ಯಕ್ತಿ, ಒಂದು ಸಂವೇದನಾಶೀಲ ಶಕ್ತಿ ಎಷ್ಟೊಂದು ನೂತನವಾಗಿ ಕಟ್ಟಿಕೊಟ್ಟಿದ್ದಾರೆ ಎನ್ನುವುದೇ ಅಭಿನಂದನೀಯ ವಿಚಾರ. 'ಗಾಂಧಿ : ಅಂತಿಮ ದಿನಗಳು' ಮೊದಲ ಭಾಗ ಪ್ರಕಟವಾಗಿದ್ದು ಇದರ ಎರಡನೆಯ ಭಾಗಕ್ಕಾಗಿ ನಾನು ಎದುರು ನೋಡುತ್ತಿದ್ದೇನೆ'

೦೩/೦೬/೨೦೧೨ — **– ಚಂಪಾ**

ಬೆಂಗಳೂರು

ಸಾಮಾನ್ಯವಾಗಿ ಗಾಂಧಿಯನ್ನು, ಗಾಂಧಿವಾದವನ್ನು ತಮ್ಮ ಹರೆಯದಲ್ಲಿ ಅನುಮಾನಿಸುತ್ತಿದ್ದ ಬಹುಮಂದಿ ಬುದ್ಧಿಜೀವಿಗಳು(ಎಲ್ಲರೂ ಅಲ್ಲ) ಮುಪ್ಪಿನಲ್ಲಿ ಅಪ್ಪಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೆ ನಿಮಗೇನು ಅಷ್ಟೊಂದು ವಯಸ್ಸಾಗಿಲ್ಲ. ಗಾಂಧಿ ಮತ್ತು ಗಾಂಧಿವಾದದ ವಿರೋಧಿಗಳು ಈ ಕೃತಿಯನ್ನು ಓದಿದ ನಂತರ ಖಂಡಿತ ತಮ್ಮ ಅಭಿಪ್ರಾಯಗಳ ಬಗ್ಗೆ ಮರು ಅವಲೋಕನ ಮಾಡಿಕೊಳ್ಳುತ್ತಾರೇನೋ.... ಗಾಂಧಿ ಈ ದೇಶವನ್ನು ಅರ್ಥಮಾಡಿಕೊಳ್ಳುವುದಕ್ಕೆ ಜೀವನ ಪರ್ಯಂತ ಹೆಣಗಾಡಿದರು. ಅದರಂತೆ ಗಾಂಧಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಈಗಲೂ ಈ ದೇಶದ ಜನ ಹೆಣಗಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಿಮ್ಮ ಈ ಕೃತಿ ತಣ್ಣಗೆ ಗಾಂಧಿಯೊಳಗಿನ 'ಮನುಷ್ಯ'ನನ್ನು ಮುಟ್ಟಲು

ಪ್ರಯತ್ನಿಸುತ್ತಿದೆ. ಈ ನಿಮ್ಮ ಪ್ರಯತ್ನ ಒಂದು ಸಣ್ಣ ಹನಿಯಾಗಿರಬಹುದು. ಜೊತೆಗೆ ಗಾಂಧಿಗೆ ಸಮಕಾಲೀನರ(ಅಂಬೇಡ್ಕರ್, ಸುಭಾಷ್‌ಚಂದ್ರ ಬೋಸ್, ನೆಹರೂ, ಜಿನ್ನಾ ಮುಂತಾದ) ಜೊತೆ ಇದ್ದ ಅನುಸಂಧಾನಗಳು–ವಾಗ್ವಾದಗಳು–ಸಂಕಷ್ಟಗಳು ಈ ಬಗ್ಗೆ ಮತ್ತಷ್ಟು ನಿಮ್ಮ ಮುಂದಿನ ಬರವಣಿಗೆಯಲ್ಲಿ ನಿರೀಕ್ಷಿಸುತ್ತೇನೆ.

ತುಮಕೂರು ವಿಶ್ವವಿದ್ಯಾಲಯ **–ಡಾ.ನಾಗಭೂಷಣ**

ಇತಿಹಾಸದಲ್ಲಿ ಗಾಂಧಿಯ ಹೆಸರು ರಾಷ್ಟ್ರಪಿತನೆಂದೇ ದಾಖಲಾಗಿದೆ. ಆದರೆ ಅವನು ತನ್ನ ಕೊನೆಯ ದಿನಗಳನ್ನು ದುಃಖದಲ್ಲಿಯೇ ಕಳೆದ. ಬದುಕಿನುದ್ದಕ್ಕೂ ಅವನು ನಂಬಿಕೊಂಡು ಬಂದಿದ್ದ ಆದರ್ಶಗಳು ತನ್ನೆದುರಿಗೇ ನಷ್ಟವಾಗುತ್ತಿದ್ದುದ್ದನ್ನು ನೋಡುವ ದೌರ್ಭಾಗ್ಯ ಅವನದಾಯಿತು. ಅವನ ಕಣ್ಣೆದುರೇ ದೇಶದ ವಿಭಜನೆಯಾಯಿತು. ತನ್ನ ಸರ್ವಸ್ವವನ್ನೂ ಪಣಕ್ಕಿಟ್ಟು ಸಾಧಿಸಲು ಹೋರಾಡಿದ ಹಿಂದೂ–ಮುಸ್ಲಿಂ ಐಕ್ಯತೆಯು ಕನಸಿನಂತೆ ಕರಗಿಹೋಯಿತು. ಅಹಿಂಸೆಯಲ್ಲಿಯೇ ಸತ್ಯವನ್ನು ಕಂಡ ದಾರ್ಶನಿಕನನ್ನು, ಹಿಂದೆಂದೂ ನೋಡದ ಹಿಂಸೆಯ ಕೃತ್ಯಗಳು ಕಂಗೆಡಿಸಿದವು. ಕಲ್ಕತ್ತಾ, ನೌಖಾಲಿ, ದೆಹಲಿ... ಹೀಗೆ ಅಲೆಮಾರಿಯಾಗಿ ಜನರಿಗೆ ಸಾಂತ್ವನ ತರಲು ಗಾಂಧಿ ಹೋರಾಡಬೇಕಾಯಿತು. 'ಬಾಪೂ' ಎಂಬ ಹೆಸರಿನಿಂದ ಜನಮಾನಸದಲ್ಲಿ ನೆಲೆಯೂರಿದವ ಈಗ ಏಕಾಕಿಯಾದ. ಇದೊಂದು 'ದುರಂತ ನಾಟಕ'ವಲ್ಲದೇ ಮತ್ತಿನ್ನೇನು? ಮಠಪತಿಯವರು ಈ ದುರಂತ ನಾಟಕವನ್ನು ದೃಶ್ಯ, ದೃಶ್ಯವಾಗಿ ನಮ್ಮೆದುರು ತೆರೆದಿಟ್ಟಿದ್ದಾರೆ.

ರಾಜಶೇಖರ ಮಠಪತಿಯವರದು ವಿಶಿಷ್ಟ ಪ್ರತಿಭೆ. ಮೂಲತಃ ಸಾಹಿತ್ಯದ ಅಭ್ಯಾಸಿಯಾದರೂ ಅವರಿಗೆ ಸಂಸ್ಕೃತಿಯ ಎಲ್ಲ ಕ್ಷೇತ್ರಗಳಲ್ಲಿಯೂ ಆಸಕ್ತಿಯಿದೆ, ಮುಕ್ತವಾದ ಸಂವೇದನೆಯಿದೆ, ವಿವೇಚನಾಪೂರ್ಣ ದೃಷ್ಟಿಯಿದೆ, ಆಕರ್ಷಕ ಶೈಲಿಯಿದೆ, ತಮಗನಿಸಿದ್ದನ್ನು ಸ್ಪಷ್ಟವಾಗಿ ಹೇಳುವ ಧೈರ್ಯವಿದೆ. ಈ ಪುಸ್ತಕದ ಹಿಂದಿನ ಸಿದ್ಧತೆ, ಚಿಂತನೆ, ಜರೂರುಗಳನ್ನು ಯಾರೂ ಗುರುತಿಸಬಹುದು. ತರುಣರಾದ ಮಠಪತಿ ಅವರಿಂದ ಬಹಳಷ್ಟನ್ನು ಅಪೇಕ್ಷಿಸುವವರಲ್ಲಿ ನಾನೂ ಒಬ್ಬ.

ಧಾರವಾಡ **ಜಿ.ಎಸ್.ಆಮೂರ**

ನವೆಂಬರ್೨೧–೧೧–೨೦೧೧

ಪ್ರಿಯ 'ರಾಗಂ' ಮಠಪತಿಯವರಿಗೆ

'ಗಾಂಧಿ: ಅಂತಿಮ ದಿನಗಳು' ಪುಸ್ತಕದ ಓದು ಬಹಳ ಖುಷಿಯಾಯಿತು. ಈ ಪುಸ್ತಕ ಓದಿ ಪ್ರಯೋಜನ ಪಡೆಯುತ್ತೇವೆ– ನಾನು ಮತ್ತು ನನ್ನ ವಿಧ್ಯಾರ್ಥಿಗಳು. 'ಗಾಂಧಿ : ಅಂತಿಮ ದಿನಗಳು' ಬಗ್ಗೆ ಬಾಗಲಕೋಟೆ ಭಾಗದಲ್ಲಿ ಅನೇಕ ರಿವಾಯತಗಳನ್ನು ಕೇಳಿರುವೆ. Wonderful.

ಹೊಸಪೇಟೆ **ರಹಮತ್ ತರಿಕೆರೆ**

೧೬/೧೨/೨೦೧೨

೧೨ ನೆಯ ಶತಮಾನದ ಬಸವಣ್ಣನಂತೆ ಕಳೆದ ಶತಮಾನದಿಂದಲೂ ನಮ್ಮನ್ನು ಮತ್ತೆ ಮತ್ತೆ ಕಾಡುತ್ತಿರುವ ಮನುಷ್ಯ ಗಾಂಧಿ. ಬಸವಣ್ಣನಂತೆಯೇ ತನ್ನೆದುರಿಗೇ ತಾನು ಪ್ರೇರಣೆ ನೀಡಿದ ಕ್ರಾಂತಿಯೊಂದು ವಿಫಲವಾದದ್ದನ್ನು ನೋಡಿದವನು. ತಾನು ಪ್ರತಿಪಾದಿಸಿದ ಅಹಿಂಸೆಯ ತತ್ವ ಬುಡಮೇಲಾಗಿ ದಾರಣ ಹಿಂಸೆ ತಾಂಡವವಾಡಿದ್ದನ್ನು ಅನುಭವಿಸಿದವನು. ಆತನ ಕೊನೆಯ ದಿನಗಳ ಅಂತರಂಗದ ತಳಮಳವನ್ನು ನನ್ನ ತರುಣ ಮಿತ್ರ ರಾಜಶೇಖರ ಮಠಪತಿಯವರು ಆಪ್ತ ಶೈಲಿಯಲ್ಲಿ ಈ "ಗಾಂಧಿ: ಮುಗಿಯದ ಅಧ್ಯಾಯ"ದಲ್ಲಿ ಚಿತ್ರಿಸಿದ್ದಾರೆ. ಗಾಂಧಿಯ ಜೀವನದ ವಿವರಗಳನ್ನು ಹಲವಾರು ಮೂಲಗಳಿಂದ ಸಂಗ್ರಹಿಸಿದ್ದರೂ, ಅವುಗಳನ್ನು ನಿರೂಪಿಸುವ ರೀತಿಯಲ್ಲಿ ಮಠಪತಿಯವರದೇ ಆದ ಒಂದು ವಿಶಿಷ್ಟ ದೃಷ್ಟಿಕೋನವಿರುವುದು ಈ ಕೃತಿಯ ಹೆಗ್ಗಳಿಕೆ. ಗಾಂಧಿಯೊಂದಿಗೆ ಒಂದಾಗುತ್ತಾ, ಆತನ ಗೊಂದಲ, ಅಸಹಾಯಕತೆ, ಹೊಯ್ದಾಟಗಳನ್ನು ಸ್ವಂತದವೆಂಬಂತೆ ಅವರು ಅನುಭವಿಸಿ ಬರೆದಿದ್ದಾರೆ. ಹಾಗೆಯೇ, ಅವನಿಂದ ಬೇರೆಯಾಗುತ್ತಾ ಅವನ ದೌರ್ಬಲ್ಯಗಳನ್ನೂ ಕೂಡ ಕಾಣಿಸಿದ್ದಾರೆ. ಜೀವನ ಚರಿತ್ರೆಯಾದರೂ ಒಂದು ಆತ್ಮಕಥೆಯಂತೆ, ಕಾದಂಬರಿಯಂತೆ ಈ ಕೃತಿ ಓದಿಸಿಕೊಳ್ಳುತ್ತದೆ. ಗಾಂಧಿಯನ್ನು ಕುರಿತು ಹಲವಾರು ಗ್ರಂಥಗಳು ರಚನೆಯಾಗಿದ್ದರೂ ಮಠಪತಿಯವರ ಈ ಕೃತಿ ತನ್ನದೇ ಆದ ವೈಶಿಷ್ಟ್ಯ ಪಡೆದುಕೊಂಡಿದೆ. ಗಾಂಧಿಯ ಸಂಕೀರ್ಣ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇದೊಂದು ಅನಿವಾರ್ಯದ ಓದು. ಇಂಥ ಕೃತಿಯನ್ನು ಕೊಟ್ಟುದಕ್ಕಾಗಿ ಮಠಪತಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಗಿರಡ್ಡಿ ಗೋವಿಂದರಾಜ

ಗ್ರಂಥಸೂಚಿ

1. The Argumentative Indian - Amartya Sen, Penguin Books
2. Truth is God - M.K.Gandhi, Navajivan Publishing House
3. Be Oceanic - Osho, Diamond Pocket Books
4. Mahatma Gandhi - V.Ramamurthy, Kasturi & Sons Ltd
5. ಗಾಂಧಿ ಹಂತಕ ಗಾಂಧಿಯೆ – ಡಾ.ಕೆ.ವಿ.ಸೀತಾರಾಮಯ್ಯ, ಸಾಧನ ಪ್ರಕಾಶನ, ಬೆಂಗಳೂರು
6. Gandhi's Outstanding Leadership - Paskel Alen Nazarath
7. ನಾನೇಕೆ ಗಾಂಧೀಜಿಯವರ ಹತ್ಯೆ ಮಾಡಿದೆ – ಗೋಪಾಲ ಗೋಡ್ಸೆ, ಅಮೃತಹಳ್ಳಿ, ಬೆಂಗಳೂರು
8. ಮಹಾತ್ಮ – ಡಾ.ಆರ್.ಎಲ್.ಅನಂತರಾಮಯ್ಯ – ಗಾಂಧಿ ಭವನ, ಮೈಸೂರು
9. ನಡುರಾತ್ರಿಯಲ್ಲಿ ಸ್ವಾತಂತ್ರ್ಯ – ಎಚ್.ಆರ್.ಚಂದ್ರವದನ ರಾವ್, ಸಂವಹನ, ಮೈಸೂರು
10. ಗಾಂಧೀಜಿ – ಎಸ್.ಸೇತೂರಾವ್ – ನವಜೀವನ ಟ್ರಸ್ಟ್, ಅಹಮದಾಬಾದ
11. ವಿಮೋಚನೆಯ ಸಮರದಲ್ಲಿ – ಮೇಜರ್ ಜಯಪಾಲ್‌ಸಿಂಗ್ – ಕ್ರಿಯಾ ಪ್ರಕಾಶನ, ಬೆಂಗಳೂರು
12. Rabindranath Tagore - Krishna Kripalani - UBS, Bangalore
13. Adolf Hitler's Main Camp, Vasan Publications, Bangalore
14. The Constitution of India - Dr.M.V.Pylee, KLJP, Bangalore

15. Quotations in History - Palmer - Roopa Publications, New Delhi
16. Rabindranath Tagore - Maple Press - Noida
17. Women Who Inspired the World - Murali Krishna. Environmental Protection Society, Kakinada
18. ಕಸ್ತೂರ ಬಾ– ಡಿ.ಎಸ್. ಚೌಗಲೆ
19. ಭಕ್ತಿ ದರ್ಶನ – ವಿನೋಬಾ, ಕನ್ನಡಾನುವಾದ ಶ್ರೀ ಸಿದ್ಧರಾಮ ಸ್ವಾಮಿಗಳು, ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ, ಶಿವಬಸವನಗರ, ಬೆಳಗಾವಿ.
20. ಅನನ್ಯತೆ – ಪ್ರೊ. ಕೆ.ಎಸ್.ಭಗವಾನ್, ಮಹಿಮ ಪ್ರಕಾಶನ, ಮ.ನಂ–10 ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು.
21. ಸಂದೇಹಿ ಮುಸ್ಲಿಂನ ಯಾತ್ರೆಗಳು – ಜಿಯಾವುದ್ದೀನ್ ಸರ್ದಾರ್, ಕನ್ನಡಕ್ಕೆ–ಮಾಧವ ಚಿಪ್ಪಳಿ, ಅಕ್ಷರ ಪ್ರಕಾಶನ, ಹೆಗ್ಗೋಡು.
22. ಒಂದು ಜೀವನ ಸಾಲದು – ಕುಲದೀಪ ನೈಯ್ಯರ್, ಕನ್ನಡಕ್ಕೆ–ಆರ್.ಪೂರ್ಣಿಮಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
23. ಪರ್ಷಿಯನ್ ಕವಿತೆಗಳು – ಡಾ.ವಿಜಯಾ ಸುಬ್ಬರಾಜ್, ಶುಭದ ಪ್ರಕಾಶನ, ಬೆಂಗಳೂರು.
24. ಕಾಮಕೂಪ – ಅಲೆಗ್ಸಾಂಡರ್ ಕುಪ್ರಿನ್, ಕನ್ನಡಕ್ಕೆ–ಟಿ.ಡಿ.ರಾಜಣ್ಣ, ದೇಸಿ ಪುಸ್ತಕ, ವಿಜಯನಗರ, ಬೆಂಗಳೂರು.
25. ಅಭಿವ್ಯಕ್ತಿ ಮತ್ತು ಅರ್ಥವಿನ್ಯಾಸ – ಡಾ.ಗುರುಪಾದ ಮರಿಗುದ್ದಿ, ಸಚಿನ್ ಪಬ್ಲಿಷರ್ಸ್, ಹಂಪಿನಗರ, ಬೆಂಗಳೂರು.
26. ಹುಚ್ಚುತನವೇ ಅನುಗ್ರಹ – ನೀಷೆ, ಕನ್ನಡಕ್ಕೆ–ಟಿ.ಎಸ್.ವಾಸುದೇವಮೂರ್ತಿ, ಅಹರ್ನಿಶಿ, ಶಿವಮೊಗ್ಗ.
27. ದೇವರ ಗೊಡವೆ ಕೂಡ ನನಗೆ ಬೇಡ – ಮಿರ್ಜಾಗಾಲಿಬ್, ಸಂಪಾದಕ–ನ.ರವಿಕುಮಾರ, ಅಭಿನವ, ಬೆಂಗಳೂರು.
28. ನಿಜಗುಣ – ಎಸ್.ಆರ್.ವಿಜಯಶಂಕರ, ಕ್ರೈಸ್ಟ್ ಯೂನಿವರ್ಸಿಟಿ, ಕನ್ನಡ ಸಂಘ, ಬೆಂಗಳೂರು .



ರಾಗಂ ಸಾಹಿತ್ಯ

ಕಾವ್ಯ : ಅರ್ಪಣೆ (೧೯೯೧), ಎರಡು ದಡಗಳ ನಡುವೆ (೨೦೦೦), ಶಿವಬಸವಾಂಜಲಿ (೧೯೯೫), ಒಂದಿಷ್ಟು ಕರುಣೆ ಮತ್ತಷ್ಟು ನೀರು (೨೦೦೫) ಸಂತನ ಸ್ವಗತಗಳು (೨೦೦೮) Songs of a Saint (೨೦೦೫) ನಿಶಾಗಾನ (೨೦೦೯)

ಕತೆ : ಅಳಲು (೧೯೯೩)

ವಿಬಂಧ : ನನ್ನೊಳಗಿನ ನಾನು (೨೦೦೭) ಶಬ್ದ ಸೂತಕದಿಂದ (೨೦೦೯) ವಿಬಂಧ (೨೦೦೯) ಬೇಷರತ್ (೨೦೦೯) ಪ್ರಚಲಿತ ಕನ್ನಡ ಕಾವ್ಯ (೨೦೧೧) ಶತಮಾನ ಕಂಡ ಸಾಹಿತಿ–ಜಿ.ಬಿ.ಜೋಶಿ (೨೦೧೦) ಓಶೋ ಎಂಬ ವಿದ್ರೋಹಿಯ ಕಥೆ (೨೦೧೦) ಕನ್ನಡಕ್ಕೊಂದು ಕನ್ನಡಿ (೨೦೧೧)

ಅಂಕಣ : ಓಶೋಃ ನ ಭೂತೋ ನ ಭವಿಷ್ಯತಿ (೨೦೦೬) ಫಕೀರನ ಫಿಲ್ಮೀ ದುನಿಯಾ (೨೦೦೮) ಗಾಂಧಿ: ಅಂತಿಮ ದಿನಗಳು (೨೦೧೨) ಪರ್ದೇಸಿಯ ಫಿಲ್ಮಿ ಪಯಣ (೨೦೧೧) ಗಾಂಧಿ ಮುಗಿಯದ ಅಧ್ಯಾಯ (೨೦೧೩)


ನಾಟಕ : ಗಾಂಧಿ ಮತ್ತು ಗೂಂಡಾ (೨೦೦೨) ಚಲ್ಲಾಟದ ಚದುರೆಯರು ಮತ್ತು ಇತರ ನಾಟಕಗಳು (೨೦೦೮)

ಸಂಪಾದನೆ : ಹೆಜ್ಜೇನು (೨೦೦೨) ಚಂಪಾಯಣ (೨೦೧೦) ಭಾಷೆ ಪರಿಭಾಷೆ (೨೦೦೯) ಕನ್ನಡ ಶಾಸನಗಳು ಮತ್ತು ಶಾಸ್ತ್ರೀಯತೆ (೨೦೦೯) ಸ್ಮೃತಿಸೌರಭ (೨೦೧೦) ಜಿ.ಬಿ.ಸಜ್ಜನರ ಕನ್ನಡ ಲೇಖನಗಳು (೨೦೧೧) ಬಿ.ಎಸ್.ನವಾತಿ ಅವರ 'ಗಂಡನ ಗೆದ್ದ ಗರತಿ' (೨೦೧೧) ಕನ್ನಡ ಕರ್ನಾಟಕ ಅಂದು ಇಂದು (೨೦೧೧)

ಭಾಷಾಂತರ: ಜಗತ್ಪ್ರಸಿದ್ಧ ಭಾಷಣಗಳು (೨೦೧೦) ಲೋಕವಿಖ್ಯಾತರ ನುಡಿಮುತ್ತುಗಳು (೨೦೦೯), ನೊಬೆಲ್ ಪ್ರಶಸ್ತಿ ವಿಜೇತರ ಭಾಷಣಗಳು (೨೦೧೦), ವಿಶ್ವಶ್ರೇಷ್ಠ ಮಹಿಳೆಯರ ಭಾಷಣಗಳು(೨೦೧೦), ಪ್ರಪಂಚದ ಶ್ರೇಷ್ಠ ತತ್ವಜ್ಞಾನಿಗಳ ಭಾಷಣಗಳು (೨೦೧೦), ವಿಶ್ವವಿಖ್ಯಾತ ರಾಜಕಾರಣಿಗಳ ಭಾಷಣಗಳು (೨೦೧೦), ವಿಶ್ವಮಾನ್ಯ ಸಾಹಿತಿಗಳ ಭಾಷಣಗಳು (೨೦೧೦), ಜಗತ್ತಿನ ಆಯ್ದ ಮಹಾತ್ಮರ ಭಾಷಣಗಳು (೨೦೧೦), ಮಹಾನ್ ಯೋಧರ ಮಹಾನ್ ಭಾಷಣಗಳು (೨೦೧೦) ಬದುಕು ಬದಲಿಸುವ ಮಾತುಗಳು (೨೦೧೨) ನಿಮ್ಮ ಬದುಕಿಗೆ ಗಾಂಧಿಸೂತ್ರ (೨೦೧೨)

ಸಂಶೋಧನೆ: Abbas an Island (2006)
Translation theories of East and West (2008) AKKA (2004)

ಪ್ರಶಸ್ತಿ ಪತ್ರ



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ , ಕುಮಾರ ಪಾರ್ಕ್ ಪೂರ್ವ ಬೆಂಗಳೂರು-1

ಜಯಶ್ರೀ ಟ್ರಸ್ಟ್ ದತ್ತಿ ಪುರಸ್ಕಾರ

ಪ್ರಶಸ್ತಿ ಪತ್ರ

ಗಾಂಧೀ ಸಾಹಿತ್ಯ ಹಾಗೂ
ಗಾಂಧೀ ತತ್ವ ಪ್ರಸಾರಣ
ದೃಷ್ಟಿಯಿಂದ ಉತ್ತಮ ಸಾಹಿತ್ಯ
ಕೃತಿಗೆ ನೀಡಲಾಗುವ
ಜಯಶ್ರೀ ದತ್ತಿ ಪುರಸ್ಕಾರವನ್ನು
2011-12 ನೇ ಸಾಲಿಗೆ
ಡಾ: ರಾಜಶೇಖರ ಮಠಪತಿ
(ರಾಗಂ) ವಿರಚಿತ ಗ್ರಂಥ
"ಗಾಂಧೀ ಅಂತಿಮ ದಿನಗಳು"
ಕೃತಿಗೆ ನೀಡಲಾಗಿದೆ

ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕಾರ್ಯದರ್ಶಿ
ರ್ನಾಟಕ ಗಾಂಧಿಸ್ಮಾರಕ ನಿಧಿ(ರಿ)



ಗಾಂಧಿಯ ಬದುಕನ್ನು ನಿರೂಪಿಸುವ ರೀತಿಯಲ್ಲಿ ಮಠಪತಿಯವರದೇ ಆದ ಒಂದು ವಿಶಿಷ್ಟ ದೃಷ್ಟಿಕೋನವಿರುವುದು ಈ ಕೃತಿಯ ಹೆಗ್ಗಳಿಕೆ. ಗಾಂಧಿಯೊಂದಿಗೆ ಒಂದಾಗುತ್ತಾ, ಆತನ ಗೊಂದಲ, ಅಸಹಾಯಕತೆ, ಹೊಯ್ದಾಟಗಳನ್ನು ಸ್ವಂತದವೆಂಬಂತೆ ಅವರು ಅನುಭವಿಸಿ ಬರೆದಿದ್ದಾರೆ. ಹಾಗೆಯೇ, ಅವನಿಂದ ಬೇರೆಯಾಗುತ್ತಾ ಅವನ ದೌರ್ಬಲ್ಯಗಳನ್ನೂ ಕೂಡ ಕಾಣಿಸಿದ್ದಾರೆ. ಜೀವನ ಚರಿತ್ರೆಯಾದರೂ ಒಂದು ಆತ್ಮಕಥೆಯಂತೆ, ಕಾದಂಬರಿಯಂತೆ ಈ ಕೃತಿ ಓದಿಸಿಕೊಳ್ಳುತ್ತದೆ. ಗಾಂಧಿಯನ್ನು ಕುರಿತು ಹಲವಾರು ಗ್ರಂಥಗಳು ರಚನೆಯಾಗಿದ್ದರೂ ಮಠಪತಿಯವರ ಈ ಕೃತಿ ತನ್ನದೇ ಆದ ವೈಶಿಷ್ಟ್ಯ ಪಡೆದುಕೊಂಡಿದೆ. ಗಾಂಧಿಯ ಸಂಕೀರ್ಣ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಇದೊಂದು ಅನಿವಾರ್ಯದ ಓದು. ಇಂಥ ಕೃತಿಯನ್ನು ಕೊಟ್ಟುದಕ್ಕಾಗಿ ಮಠಪತಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಗಿರಡ್ಡಿ ಗೋವಿಂದರಾಜ

ಕಣ್ವ ಪ್ರಕಾಶನ

ISBN : 978-93-81065-53-2

9 789381 065532